UNIVERSAL
LIBRARY
OU_198160
UNIVERSAL
LIBRARY

KATHA SANGRA

SELECTIONS OF

KANARESE PROSE

VOL. I.

COMPILED BY THE LATE

REV. DANIEL SANDERSON

ಕಥಾಸಂಗ್ರಹ

ಅಂದರೆ

ಪಂಚತಂತ್ರ ಶಿವಪುರಾಣ ಮಹಾಭಾರತಾದಿ ಗ್ರಂಥಗಳಿಂದ
ಸಂಗ್ರಹಿಸಿದ ಕಥೆಗಳು

MYSORE
inted at the Wesleyan Mission Press for the Press Publishing Society
1921.

Re. 1-8-0] *COPYRIGHT RESERVED* [ಕ್ರಯ· ರೂ. ೧-೮-೦

CONTENTS

ವಿಷಯ ಸೂಚಕ ಪತ್ರ

ಗ ನೆಯ ಭಾಗ

ಪಂಚತಂತ್ರಾದಿ ಗ್ರಂಥಗಳಿಂದ ಸಂಗ್ರಹಿಸಿದ ಕಥೆಗಳು

ಕಥೆ		ಪುಟ
1	The Blind Man and His Torch	
೧	ಕುರುಡನು ದೀವಟಿಗೆಯನ್ನು ಹಿಡಿದುಕೊಂಡು ಬಂದುದು . . .	1
2	The Tiger and the Man	
೨	ಹುಲಿಯೂ ಮನುಷ್ಯನೂ .	2
3	The Mussalman and His Wife	
೩	ತುರುಕನೂ ಅವನ ಹೆಂಡತಿಯೂ . . .	2
4	The Cuckoo and the Ass	
೪	ಕೋಗಿಲೆಯೂ ಕತ್ತೆಯೂ . .	3
5	The Mantri Appaji and the Seventeen Elephants	
೫	ಮಂತ್ರಿ ಅಪ್ಪಾಜಿಯು ವರ್ತಕನ ಮೂರು ಮಂದಿ ಮಕ್ಕಳಿಗೆ ಹದಿನೇಳು ಆನೆಗಳನ್ನು ಪಾಲುಮಾಡಿದುದು	3
6	The Miserly Merchant and the Doctor	
೬	ಲೋಭಿಯಾದ ಕೋಮಟಿಗನೂ ವೈದ್ಯನೂ . . .	4
7	The Greedy Jackal	
	ನರಿಯು ಲೋಭ ಬುದ್ಧಿಯಿಂದ ಸತ್ತುದು . ..	5
	The Brahman, Son, and Grandfather	
	ತಂದೆಯ ಮಗನು ಮತ್ತು ಅಜ್ಜನು	6

9. THE JAMEDAR AND THE THIEF
೯. ಜಮೇದಾರನಿಗೆ ಕಳ್ಳನು ಮೋಸಮಾಡಿದುದು ....

10 THE SNAKE-CHARMER, SNAKE, AND RAT
೧೦. ಹಾವಾಡಿಗನೂ ಹಾವೂ ಇಲಿಯೂ ....

11 THE DOVES, FOWLER, FALCON, AND SNAKE
೧೧. ಪಾರಿವಾಣದ ಹಕ್ಕಿಯೂ ಬೇಡನೂ ಗಿಡಗನೂ ಹಾವೂ ....

12 THE UNCORRECTED SON
೧೨. ತಂದೆ ಶಿಕ್ಷಿಸದ ಮಗ ....

13 THE IMAGINARY DEMON
೧೩. ಅಡಗೂಲಜ್ಜಿಯು ಘಂಟಾಕರ್ಣನನ್ನು ಓಡಿಸಿದುದು .. ....

14 THE BRAHMAN AND THE OPPRESSIVE KOTWAL
೧೪. ಬ್ರಾಹ್ಮಣನೂ ಕೊತ್ತವಾಲನೂ .. . .

15 THE KING, MANTRI, AND MILK-CHEAT
೧೫. ದೊರೆಯೂ ಮಂತ್ರಿಯೂ ಹಾಲು ತುಂಬದೆ ನೀರು ತುಂಬಿದವರೂ ....

16 THE MERCHANT, BRAHMAN, AND LOST PURSE
೧೬. ಕೋಮಟಿ ಬ್ರಾಹ್ಮಣ ಇವರ ಗಂಟುವ್ಯಾಜ್ಯವು .. ....

17 THE VAIN JACKAL
೧೭ ಹೆಮ್ಮೆ ಬಂದ ನರಿಯು . . ....

18 SIVAPPANAIK AND THE JANGAMA
೧೮. ಶಿವಪ್ಪನಾಯಕನು ಜಟ್ಟಿಗಳಿಂದ ಜಂಗಮನನ್ನು ಶಿಕ್ಷಿಸಿದುದು .. ....

19 SIVAPPANAIK CUTS OFF THE JANGAMA'S FEET
೧೯. ಶಿವಪ್ಪನಾಯಕನು ಜಂಗಮನ ಪಾದಗಳನ್ನು ಕತ್ತರಿಸಿದುದು .. ..

20 THE LARK AND THE ELEPHANT
೨೦. ಟಿಟ್ಟಿಭವೂ ಆನೆಯೂ .. ..

21. THE TWO MERCHANTS
೨೧. ಇಬ್ಬರು ವರ್ತಕರು .. ..

ಕಥೆ

22. THE EVIL OF BAD COMPANY
೨೨. ದುಸ್ಸಹವಾಸ ದೋಷ 19

23 TENNALARAMAKRISHNA AND THE KING'S KITTEN
೨೩. ತೆನ್ನಾಲರಾಮಕೃಷ್ಣನೂ ಅರಸಿನ ಬೆಕ್ಕಿನಮರಿಯೂ 20

24 TENNALARAMAKRISHNA AND THE KING'S COLT
೨೪. ತೆನ್ನಾಲರಾಮಕೃಷ್ಣನೂ ರಾಯನ ಕುದುರೆಯ ಮರಿಯೂ .. . 21

25 THE LARK AND THE MYNA
೨೫. ಟಿಟ್ಟಿಭವೂ ಗೊರವಂಕವೂ 22

26 THE ASCETIC AND HIS HYPOCRITICAL DISCIPLE
೨೬. ಸನ್ಯಾಸಿಯೂ ಅವನ ಕಪಟಶಿಷ್ಯನೂ 23

27 THE SICK MUSALMAN AND HIS LAZY SERVANT
೨೭. ತುರುಕನೂ ಅವನ ಸೋಮಾರಿಯಾದ ಸೇವಕನೂ . . . 26

28 THE REDDI AND THE BRAHMAN
೨೮. ರಡ್ಡಿಯೂ ಬ್ರಾಹ್ಮಣನೂ 27

29 THE MERCHANTS AND THEIR CAT
೨೯. ವರ್ತಕರೂ ಅವರ ಬೆಕ್ಕೂ 28

30 THE SWANS AND THE TURTLE
೩೦. ಹಂಸಗಳೂ ಕೂರ್ಮವೂ 30

31. THE CROW, THE DEER, AND THE JACKAL
೩೧. ಕಾಗೆಯೂ ಹುಲ್ಲೆಯೂ ನರಿಯೂ. 31

32 THE SHOPKEEPER'S SON AND THE JEWEL
೩೨. ಕೋಮಟಿಗನ ಮಗನಿಗೆ ರತ್ನ ಸಿಕ್ಕಿದುದು . 33

33 THE COCOANUT AND MANGO TREES
. ತೆಂಗಿನಮರವೂ ಮಾವಿನಮರವೂ 34

THE STORY OF MAHARAJA
ಮಹಾರಾಜನ ಚರಿತ್ರೆಯು 35

ಪುಟ

35 ...AE RICE AND THE HUSKS
೩೫. ಅಕ್ಕಿಗಳೂ ಹೊಟ್ಟುಗಳೂ . . . 36

36 THE BEES AND THE FROGS
೩೬. ತುಂಬಿಗಳೂ ಕಪ್ಪೆಗಳೂ 37

37 SHIBICHAKRAVARTI
೩೭. ಶಿಬಿಚಕ್ರವರ್ತಿಯು .. . 38

38 THE MERCHANT AND THE IDOL
೩೮ ಕೋಮಟಿಗನೂ ವಿನಾಯಕನೂ 39

39 THE MUSALMAN TRICKED BY A MERCHANT
೩೯. ಕೋಮಟಿಗನು ತುರುಕನನ್ನು ವಂಚಿಸಿದುದು 40

40 THE IMPOVERISHED RYOT AND THE IDOL
೪೦ ಬಡತನಬಂದ ಶೂದ್ರನೂ ವಿಗ್ರಹವೂ 42

41 THE STINGY MERCHANT MADE LIBERAL
೪೧ ಲೋಭಿಯಾದ ವರ್ತಕನಿಗೆ ಉದಾರಗುಣ ಉಂಟಾದುದು 44

42 THE STORY OF PEDDA BHATTA
೪೨. ಪೆದ್ದಭಟ್ಟನು 45

43 MARVADE RAMANNA, THE BRAHMAN, AND THE MERCHANT
೪೩. ಮರ್ವಾದೆ ರಾಮಣ್ಣನು ಬ್ರಾಹ್ಮಣವರ್ತಕರ ನ್ಯಾಜ್ಯವನ್ನು ತೀರಿಸಿದುದು 48

44 KING SUDARSHANA AND HIS SONS
೪೪ ಸುದರ್ಶನನೆಂಬ ರಾಜನೂ ಆತನ ಕುಮಾರರೂ 53

45 TALES OF ANIMALS
೪೫. ಪ್ರಾಣಿಗಳ ವಿಷಯದಲ್ಲಿ ಕಥೋಪಕಥೆಗಳು 58

46 A PRINCE WINS A PRINCESS BY DISPLAYS OF SKILL
೪೬. ರಾಜಕುಮಾರನು ವಿದ್ಯೆಗಳನ್ನು ಪರೀಕ್ಷೆಕೊಟ್ಟು ಅರಸನ ಮಗಳನ್ನು ಮದುವೆ
ಯಾದುದು ....

47 CHANDRAPRAKRAMI AND HARIDATTA

೨ ನೆಯ ಭಾಗ

ಶಿವಪುರಾಣದಿಂದ ಸಂಗ್ರಹಿಸಿದ ಕಥೆಗಳು

ಕಥೆ		ಪುಟ
1	The Reward of Worshipping Shiva	
೧.	ನಿಯಮದಿಂದ ಶಿವಪೂಜೆ ಮಾಡಿದುದರ ಫಲ	95
2	The Reward of Worshipping the Followers of Shiva	
೨	ಶಿವಭಕ್ತರ ಪೂಜಾಫಲ	99
3	The Reward of Giving up Life to Atone for Offences against the Followers of Shiva	
೩	ತಿಳಿಯದೆ ಶಿವಭಕ್ತರಿಗೆ ದ್ರೋಹಮಾಡಿ ತನ್ನ ಪ್ರಾಣವನ್ನು ಬಿಟ್ಟ ಧರ್ಮಕೇತನನು	102
4	The Merit of Giving Food	
೪	ಅನ್ನದಾನದ ಪುಣ್ಯ	106

೩ ನೆಯ ಭಾಗ

ಮಹಾಭಾರತದಿಂದ ಸಂಗ್ರಹಿಸಿದ ಕಥೆಗಳು

1	The Churning of the Sea of Milk	
೧.	ಸಮುದ್ರಮಥನವು . . .	113
2	Garuda Conquers the Gods and Carries off the Ambrosia	
೨	ಗರುಡನು ದೇವತೆಗಳನ್ನು ಜಯಿಸಿ ಅಮೃತಕಲಶವನ್ನು ತಂದುದು	117
3	The Story of Dushyanta	
೩	ದುಷ್ಯಂತೋಪಾಖ್ಯಾನ	124
4	Kalinga's Policy	
೪.	ಕಳಿಂಗನ ನೀತಿ	138
5	Duryodhana Attempts the Destruction of the Pandus the Escape	
	ದುರ್ಯೋಧನನು ಪಾಂಡವರನ್ನು ನಾಶಪಡಿಸುವುದಕ್ಕೆ ಪ್ರಯತ್ನಮಾಡಲು ಅವರು ತಪ್ಪಿಸಿಕೊಂಡು ಹೋದುದು	144

ಪುಟ

6. THE DEMON HIDIMBA SLAIN BY BHIMA
೬. ಹಿಡಿಂಬ ವಧೆ 148

7. BHIMA SLAYS THE DEMON BAKA
೭. ಬಕಾಸುರ ಸಂಹಾರ 153

8. THE MARRIAGE OF DROUPADI TO THE FIVE PANDU PRINCES
೮. ದ್ರೌಪದಿಯ ಸ್ವಯಂವರ 169

9. DHARMARAJA'S RAJASUYA SACRIFICE
೯. ಧರ್ಮರಾಜನು ಮಾಡಿದ ರಾಜಸೂಯಯಾಗವು 184

10. THE ROMANCE OF NALA AND DAMAYANTI
೧೦. ನಳನೂ ದಮಯಂತಿಯೂ 200

ಕಥಾಸಂಗ್ರಹ

೧ನೆಯ ಭಾಗ

ಪಂಚತಂತ್ರಾದಿ ಗ್ರಂಥಗಳಿಂದ ಸಂಗ್ರಹಿಸಿದ ಕಥೆಗಳು

1. THE BLIND MAN AND HIS TORCH.

೧. ಕುರುಡನು ದೀವಟಿಗೆಯನ್ನು ಹಿಡಿದುಕೊಂಡು ಬಂದುದು.

ಒಂದು ಊರಿನಲ್ಲಿದ್ದ ಒಬ್ಬ ಕುರುಡನು ರಾತ್ರಿವೇಳೆಯಲ್ಲಿ ನೀರು ತುಂಬಿದ ಗಡಿಗೆಯನ್ನು ತಲೆಯ ಮೇಲೆ ಹೊತ್ತುಕೊಂಡು ಒಂದು ದೀವಟಿಗೆಯನ್ನು ಹಚ್ಚಿಸಿ ಕೈಯ್ಯಲ್ಲಿ ಹಿಡಿದುಕೊಂಡು ಬರುತ್ತಾ ಇದ್ದನು. ಅವನಿಗೆ ಎದುರಾಗಿ ಬರುವ ಒಬ್ಬ ಮನುಷ್ಯನು—ಈ ಮುದುಕನಿಗೆ ಕುರುಡತನವು ಅಲ್ಲದೆ ಹುಚ್ಚುತನವೂ ಇರುವ ಹಾಗೆ ಕಾಣುತ್ತದೆ. ಒಳ್ಳೆಯದು, ಮಾತಾಡಿಸಿ ನೋಡೋಣ ಎಂದು—ಏನಯ್ಯಾ, ಹಳೆಯ ಮನುಷ್ಯನೇ! ನಿನಗೆ ರಾತ್ರಿ ಹಗಲೂ ಸಹ ಒಂದೇ. ಹೀಗಿರುವಲ್ಲಿ ಈ ದೀವಟಿಗೆಯನ್ನು ಕೈಯ್ಯಲ್ಲಿ ಹಿಡಿದುಕೊಂಡು ಬರುವುದರಿಂದ ನಿನಗೆ ಪ್ರಯೋಜನವೇನು? ಎಂದು ಕೇಳಿದನು. ಅದಕ್ಕೆ ಆ ಮುದುಕನು—ಅಯ್ಯಾ, ಕೇಳುವ ಮನುಷ್ಯನೇ! ಇದರಿಂದ ನನಗೆ ಆಗುವ ಪ್ರಯೋಜನವು ನಿನ್ನ ಬುದ್ಧಿಗೆ ತೋರದಿರುವುದರಿಂದ ನಿನ್ನ ಬುದ್ಧಿ ಬಹಳ ದಪ್ಪವು ಎಂದು ಎಣಿಸುತ್ತೇನೆ. ಆದರೂ ಹೇಳುವೆನು; ಕೇಳು! ದೀವಟಿಗೆಯನ್ನು ಈ ರಾತ್ರಿವೇಳೆಯಲ್ಲಿ ನಾನು ಹಚ್ಚಿಕೊಂಡು ಬಾರದೆ ಇದ್ದರೆ ನನಗೆ ಎದುರಾಗಿ ಬರುವ ಜನರಾಗಲಿ ದನಕರುಗಳಾಗಲಿ ಕಾಣದೆ ನನ್ನ ಮೈ ಮೇಲೆ ಬಿದ್ದರೆ ನಾನು ಗಡಿಗೆಯನ್ನು ಎತ್ತಿಹಾಕಿಕೊಂಡು ಬೀಳುವೆನಲ್ಲವೋ? ಬಿದ್ದರೆ ನನ್ನ ಮೈ ಗಾಯವಾಗುವುದಲ್ಲದೆ ಕಷ್ಟಪಟ್ಟು ಹೊತ್ತುಕೊಂಡು ಊರೂ ಹೋಗಿ ಕ್ರಯ ಕೊಟ್ಟು ತಂದ ಗಡಿಗೆಯೂ ಹೋಗುವುದಲ್ಲವೋ?

ನಾನು ದೀವಿಟಿಗೆಯನ್ನು ಹೊತ್ತಿಸಿಕೊಂಡು ಬಂದುದರಿಂದ ಜನರೂ ದನಕರುಗಳೂ ನನ್ನ ಮೇಲೆ ಬೀಳಲಾರವು; ನನಗೆ ಒಂದು ಅನರ್ಥವೂ ಉಂಟಾಗಲಾರದು ಇದೆಲ್ಲಾ ನನಗೆ ಪ್ರಯೋಜನವಲ್ಲವೇ? ಇದು ಅಲ್ಲದೆ ಹಾವು ಚೇಳು ಮುಂತಾದುವುಗಳು ನಾನು ಹೋಗುವ ದಾರಿಯನ್ನು ಬಿಟ್ಟು ತೊಲಗಿ ಹೋಗುವುವು ಎಂದು ಹೇಳಿದ ಮಾತನ್ನು ಕೇಳಿದ ಮನುಷ್ಯನು ಆ ಕುರುಡನ ವಿವೇಕಕ್ಕೆ ಒಪ್ಪಿಕೊಂಡು ಹೊರಟುಹೋದನು.

---

2. THE TIGER AND THE MAN.

೨. ಹುಲಿಯೂ ಮನುಷ್ಯನೂ.

ಒಂದು ಊರಿನಲ್ಲಿ ಒಂದು ಹುಲಿಯೂ ಒಬ್ಬ ಮನುಷ್ಯನೂ ಸ್ನೇಹಿತರಾಗಿದ್ದರು. ಅವರು ಒಂದು ದಿನ ಮಾರ್ಗವಶದಿಂದ ಒಂದು ಮಸೀತಿಗೆ ಹೋದರು. ಆ ಮಸೀತಿಯಲ್ಲಿರುವ ಒಂದು ಚಿತ್ರಪಟದಲ್ಲಿ ಒಬ್ಬ ಮನುಷ್ಯನು ಒಂದು ಹುಲಿಯ ಮೇಲೆ ಏರಿಕೊಂಡು ಅದನ್ನು ಕಠಾರಿಯಿಂದ ತಿವಿಯುತ್ತಾ ಇರುವ ಆಕಾರವು ಬರೆಯಲ್ಪಟ್ಟಿದ್ದಿತು ಅದನ್ನು ಆ ಮನುಷ್ಯನು ನೋಡಿ—ಅಯ್ಯಾ, ಹುಲಿರಾಯನೇ! ನೋಡು; ಈ ಮನುಷ್ಯನು ಎಷ್ಟು ಗಟ್ಟಿಗನು! ಇಂಥಾ ಕ್ರೂರವಾದ ಹುಲಿಯ ಮೇಲೆ ತಾನು ಹತ್ತಿಕೊಂಡು, ಅದನ್ನು ಕಠಾರಿಯಿಂದ ಇರಿಯುತ್ತಾನೆ ಎಂದು ಹೇಳಲು; ಅದಕ್ಕೆ ಆ ಹುಲಿಯು—ಈ ಚಿತ್ರವನ್ನು ಮನುಷ್ಯನು ಬರೆದು ಇದ್ದಾನೆ. ಹುಲಿಯು ಎಂದಿಗೂ ಹೀಗೆ ಬರೆಯಲಾರದು ಎಂದು ಹೇಳಿದುದರಿಂದ ಅವನು ನಾಚಿಕೊಂಡು ಸುಮ್ಮನಾದನು

---

3. THE MUSSALMAN AND HIS WIFE.

೩. ತುರುಕನೂ ಅವನ ಹೆಂಡತಿಯೂ.

ಒಂದು ಹಳ್ಳಿಯಲ್ಲಿ ಒಬ್ಬ ತುರುಕನು ಸಂಸಾರವನ್ನು ಮಾಡಿಕೊಂಡು ಇದ್ದನು. ಹೀಗಿರುವಲ್ಲಿ ಆತನು ಒಂದು ದಿವಸ ಸಾಯಂಕಾಲವಾದ ಮೇಲೆ ಪೇಟೆಗೆ ಹೋಗಬೇಕೆಂದು ಹೊರಟು ಅರ್ಧಮಾರ್ಗವನ್ನು ಬಂದು ಅಲ್ಲಿ ಧಟ್ಟನೆ ನಿಂತುಕೊಂಡು—ಅಯ್ಯೋ! ಮೋಸಹೋದೆನು. ನನ್ನ ಹೆಂಡತಿಯು ನಾನು ಬರುವ ತನಕ ಮನೆಯ ದೀಪವನ್ನು ನಂದಿಸದೆ ಉರಿಸಿ ಎಣ್ಣೆಯನ್ನು ಹಾಳುಮಾಡುತ್ತಾಳೋ? ಹೇಗೋ? ನಾನು ಬರುವಾಗ ಹೇಳಿ ಬರಲಿಲ್ಲವಲ್ಲಾ ಎಂದು ಯೋಚಿಸಿ ತಿರಿಗಿ ಮನೆಗೆ ಬರುವ ಹೊತ್ತಿಗೆ ಅವನ ಹೆಂಡತಿಯು ಮನೆಯ ಬಾಗಿಲನ್ನು ಹಾಕಿಕೊಂಡು ಮಲಗಿದ್ದಳು. ಈ ತುರುಕನು ಬಾಗಿಲಲ್ಲಿ ನಿಂತು—ಏನೇ! ಏನೇ! ದೀಪ ನಂದಿಸಿದೆಯೋ? ಇಲ್ಲವೋ? ಎಂದು ಕೇಳಲು ಅದಕ್ಕೆ ಆಕೆಯು—ನಾನ ನಂದಿಸದೆ ಇದ್ದೇನು? ನಾನು ಹೆಡ್ಡಳಲ್ಲ. ನನ್ನ ತಂದೆತಾಯಿಗಳು ನನಗೆ

ಬುದ್ಧಿ ಕಲಿಸಿದ್ದಾರೆ. ನೀನು ನನ್ನ ಸ್ವಭಾವವನ್ನು ತಿಳಿಯದೆ ಕ
ಹೋಗಿ ಹಿಂದಿರುಗಿ ಬಂದು ಜೋಡನ್ನು ವ್ಯರ್ಥವಾಗಿ ಸಮೆಯಿಸಿಬಿಟ್ಟಿಯಲ್ಲಾ ಎಂದು ಹೇಳಲು ಆದಕ್ಕೆ ಇವನು ಹೆಂಡತಿಯನ್ನು ಕುರಿತು–ಶಾಬಾಸು! ನೀನು ಬಹು ಬುದ್ಧಿವಂತಳು ನೀನು ಯೋಚನೆ ಮಾಡಬೇಡ: ಹಿಂತಿರುಗಿ ಬರುವಾಗ್ಗೆ ಸಮೆಯುತ್ತದೆ ಎಂದು ಜೋಡನ್ನು ಕಂಕುಳಲ್ಲಿ ಇಟ್ಟುಕೊಂಡು ಬಂದಿದ್ದೇನೆಂದು ಸಮಾಧಾನ ಪಡಿಸಿ ತಿರುಗಿ ಪೇಟೆಗೆ ಹೋದನು.

---

4. THE CUCKOO AND THE ASS.

೪. ಕೋಗಿಲೆಯೂ ಕತ್ತೆಯೂ.

ಒಂದಾನೊಂದು ಅರಣ್ಯದಲ್ಲಿರುವ ನೂರಾರು ಕೋಗಿಲೆಗಳು ಒಂದು ಮಾವಿನ ಮರದ ಮೇಲೆ ವಾಸಮಾಡಿಕೊಂಡು ಇದ್ದುವು. ಹೀಗಿರುವಲ್ಲಿ ಒಂದು ಕೋಗಿಲೆಯು ಮೇವಿಗೋಸ್ಕರ ಅಲ್ಲಲ್ಲಿ ತಿರುಗುತ್ತಾ ಇರುವಲ್ಲಿ ಒಂದು ಕಾಗೆಯು ಅದನ್ನು ಕಂಡು ಜಾತಿದ್ವೇಷದಿಂದ ಅಟ್ಟಿಕೊಂಡು ಒರಲು ಕೋಗಿಲೆ ಹೆದರಿ ಹಾರಿಬಂದು ಒಂದು ಹಳ್ಳಿಯಲ್ಲಿರುವ ಒಬ್ಬ ಅಗಸನ ಕೊಟ್ಟಿಗೆಯನ್ನು ಹೊಕ್ಕಿತು ಆಗ ಅಲ್ಲಿ ಕಟ್ಟಿದ್ದ ಕತ್ತೆಯು ಈ ಕೋಗಿಲೆಯನ್ನು ನೋಡಿ—ಛೇ! ಛೇ! ನೀನು ನನ್ನ ಹತ್ತಿರಕ್ಕೆ ಬರಬೇಡ; ಅತ್ತಹೋಗು! ನೀನು ಜನ್ಮಾರಭ್ಯ ಒಬ್ಬರಿಗಾದರೂ ಒಂದು ಸಹಾಯವನ್ನೂ ಮಾಡಿದವನಲ್ಲ. ನಾನು ನನ್ನ ಶಕ್ತಿ ತಗ್ಗುವವರೆಗೂ ಪರರಿಗೆ ಸಹಾಯವನ್ನೇ ಮಾಡಿಕೊಂಡಿದ್ದೇನೆಂದು ಹೇಳಲು ಕೋಗಿಲೆಯು ಕತ್ತೆಯನ್ನು ಕುರಿತು–ನೀನು ಪರರಿಗೆ ಎಷ್ಟು ಸಹಾಯ ಮಾಡಿದರೂ ಕ್ರೂರವಾದ ವಾಕ್ಕುಳ್ಳವನಾದುದರಿಂದ ನಿನ್ನನ್ನು ಎಲ್ಲರೂ ನಿಂದಿಸುತ್ತಾರೆ. ನಾನು ಯಾರಿಗೂ ಉಪಕಾರಮಾಡದೇ ಇದ್ದರೂ ಮಧುರವಾದ ವಾಕ್ಕುಳ್ಳವನಾದುದರಿಂದ ನನ್ನನ್ನು ಎಲ್ಲರೂ ಹೊಗಳುತ್ತಾರೆಂದು ಉತ್ತರವನ್ನು ಕೊಟ್ಟು ಹಾರಿಹೋಗಿ ತನ್ನ ಗುಂಪನ್ನು ಸೇರಿಕೊಂಡಿತು.

---

5. THE MANTRI APPAJI AND THE SEVENTEEN ELEPHANTS.

೫. ಮಂತ್ರಿ ಅಪ್ಪಾಜಿಯು ವರ್ತಕನ ಮೂರು ಮಂದಿ ಮಕ್ಕಳಿಗೆ ಹದಿನೇಳು ಆನೆಗಳನ್ನು ಪಾಲುಮಾಡಿದುದು.

ವಿಜಯನಗರದಲ್ಲಿ ಮಣಿಕಾರನೆಂಬ ಒಬ್ಬ ವರ್ತಕನಿದ್ದನು. ಆತನಿಗೆ ಮೂರು ಂದಿ ಗಂಡುಮಕ್ಕಳು ಇದ್ದರು. ಆತನು ಸಾಯುವ ಕಾಲದಲ್ಲಿ ತನ್ನ ಮೂರು ಮಕ್ಕಳನ್ನೂ ಕರೆದು—ನಾನು ಹದಿನೇಳು ಆನೆಗಳನ್ನು ಸಂಪಾದಿಸಿದ್ದೇನೆ. ಹಳ ಲಕ್ಷಣಗಳುಳ್ಳ ಆನೆಗಳು. ಇವುಗಳನ್ನು ಯಾರಿಗೂ ಕ್ರಯಕ್ಕೆ ಮಾರ

ಎನ್ನು ನಡುಕಲ ಮಗನೂ ಒಂಭತ್ತರಲ್ಲಿ ಒಂದು ಭಾಗವನ್ನು ಕಿರಿಯ ಮಗನೂ ತೆಗೆದುಕೊಂಡು ಜೆನ್ನಾಗಿ ಆರೈಕೆ ಮಾಡಿಕೊಂಡು ಬನ್ನಿರಿ; ಮಿಕ್ಕ ಒಡವೆ ವಸ್ತು ಧನ, ಧಾನ್ಯ ಪಂಚಲೋಹ ಪಶ್ವಾದಿಗಳನ್ನು ಮೂವರೂ ಸಮಭಾಗವಾಗಿ ಹಂಚಿಕೊಳ್ಳಿರಿ ಎಂದು ಹೇಳಿ, ಸತ್ತುಹೋದನು. ತರುವಾಯ ಮೂರು ಮಂದಿ ಮಕ್ಕಳೂ ಆತನಿಗೆ ಉತ್ತರಕ್ರಿಯಾದಿಗಳನ್ನು ಮಾಡಿ ತಂದೆ ಸಂಪಾದಿಸಿದ್ದ ಸಕಲ ಆಸ್ತಿಯನ್ನೂ ಮೂರು ಪಾಲು ಮಾಡಿ ಒಬ್ಬರೊಬ್ಬರು ಒಂದೊಂದು ಪಾಲು ತೆಗೆದುಕೊಂಡು ಆನೆಗಳನ್ನು ತಂದೆ ಹೇಳಿದ್ದ ಪ್ರಕಾರ ಭಾಗಗಳನ್ನು ಮಾಡಿ ತೆಗೆದುಕೊಳ್ಳುವುದಕ್ಕೆ ತಮಗೆ ತಿಳಿಯದೆ ಈ ವಿಷಯವನ್ನು ಯಾರಲ್ಲಿ ಹೋಗಿ ಹೇಳಿಕೊಂಡರೂ ಪ್ರತಿಯೊಬ್ಬರೂ–ನಮ್ಮಿಂದ ಆಗದು ಎಂದು ಹೇಳಿಬಿಟ್ಟುದರಿಂದ ಇವರು ಬಹಳ ವ್ಯಸನ ಪಡುವವರಾಗಿ ಆನೆಗೊಂದಿ ಸಂಸ್ಥಾನದ ರಾಯರ ಅಪ್ಪಾಜಿ ಎಂಬ ಮಂತ್ರಿಯ ಬಳಿಗೆ ಹೋಗಿ ಹೇಳಿಕೊಳ್ಳಲು ಆತನು ಒಂದು ಗಳಿಗೆ ಆಲೋಚಿಸಿ ಈ ಮೂವರನ್ನೂ ಕುರಿತು–ನಿಮ್ಮ ತಂದೆ ಹೇಳಿದ ಪ್ರಕಾರವೇ ಆನೆಗಳನ್ನು ಭಾಗಮಾಡಿ ಕೊಡುತ್ತೇನೆಂದು ಹೇಳಿ ತಾನು ಒಂದು ಆನೆಯ ಮೇಲೆ ಕುಳಿತುಕೊಂಡು ವಿಜಯನಗರಕ್ಕೆ ಬಂದು—ನಿಮ್ಮ ಹದಿನೇಳು ಆನೆಗಳಜೊತೆಗೆ ನನ್ನದೊಂದು ಆನೆಯನ್ನು ಸೇರಿಸಿಕೊಂಡು ನಿಮ್ಮ ತಂದೆ ಹೇಳಿದಮೇರೆಗೆ ನಿಮ್ಮ ನಿಮ್ಮ ಭಾಗಕ್ಕೆ ಬಂದ ಆನೆಗಳನ್ನು ತೆಗೆದುಕೊಂಡು ಹೋಗಿರಿ ಎಂದು ಹೇಳಲು ಆನೆಗಳು ಮತ್ತೂ ಹೆಚ್ಚಾದುವು ಎಂದು ಸಂತೋಷಪಟ್ಟುಕೊಂಡು ಹಿರಿಯಮಗನು ಒಂಭತ್ತು ಆನೆಗಳನ್ನೂ ನಡುಕಲವನು ಆರು ಆನೆಗಳನ್ನೂ ಕಿರಿಯವನು ಎರಡು ಆನೆಗಳನನ್ನೂ ತೆಗೆದುಕೊಂಡು ಹೋದರು. ಆ ಮೇಲೆ ರಾಯರ ಅಪ್ಪಾಜಿಯು ತಾನು ಕೊಟ್ಟು ಇದ್ದ ಆನೆ ಉಳಿದುದರಿಂದ ಅದರ ಮೇಲೆ ಹತ್ತಿಕೊಂಡು ಅಲ್ಲಿಂದ ಹೊರಟು ಬಂದು ಆನೆಗೊಂದಿ ಸಂಸ್ಥಾನವನ್ನು ಸೇರಿದನು.

---

6. THE MISERLY MERCHANT AND THE DOCTOR.

೬. ಲೋಭಿಯಾದ ಕೋಮಟಿಗನೂ ವೈದ್ಯನೂ.

ಒಂದು ಊರಿನಲ್ಲಿ ಲೋಭಿಯಾದ ಒಬ್ಬ ಕೋಮಟಿಗನು ಇದ್ದನು. ಅವನಿಗೆ ಒಂದು ದಿವಸದ ಪ್ರಾತಃಕಾಲದಲ್ಲಿ ಹೊಟ್ಟೆಯ ಬೇನೆಯು ಬಹಳವಾದುದರಿಂದ ಒಬ್ಬ ವೈದ್ಯನ ಬಳಿಗೆ ಹೋಗಿ–ಅಯ್ಯಾ, ಪಂಡಿತರೇ ! ನಾನು ಹೊಟ್ಟೆಬೇನೆಯಿಂದ ಸಾಯುತ್ತೇನೆ ನನಗೆ ಏನಾದರೂ ಔಷಧವನ್ನು ಕೊಡಿಸಬೇಕೆಂದು ಬಹಳವಾಗಿ ಕೇಳಿಕೊಂಡನು. ಅದಕ್ಕೆ ಆ ವೈದ್ಯನು–ನಿನ್ನೆಯ ರಾತ್ರಿಯಲ್ಲಿ ಏನು ತಿಂದೆ ? ಎಂದು ಕೇಳಲು ಸೀದ ರೊಟ್ಟಿಯನ್ನು ತಿಂದೆನು ಎಂದು ಹೇಳಿದನು. ಆಗ ವೈದ್ಯನು ತನ್ನ ಬೆರಳಿಗೆ ನವನ್ನು ಹಚ್ಚಿಕೊಂಡು, ಆ ಕೋಮಟಿಗನ ಕಣ್ಣುಗಳಿಗೆ ಹಾಕುವುದಕ್ಕೆ ಕೋಮಟಿಗನು–ಪಂಡಿತರೇ ! ನಿಮ್ಮ ಬಳಿಯಲ್ಲಿ ನಾನು ಕಣ್ಣುಬೇನೆ ಎಂದು

ಳ್ಳಲಿಲ್ಲ ; ಹೊಟ್ಟೆಬೇನೆ ಎಂದು ಹೇಳಿಕೊಂಡುದಕ್ಕೆ ಹೊಟ್ಟೆಗೆ ಔಷಧಂ
ಕಣ್ಣುಗಳಿಗೆ ಔಷಧವನ್ನು ಹಾಕುವುದಕ್ಕೆ ಬರುತ್ತೀರಿ. ಇದೇನಾಶ್ಚರ್ಯ ? ಎಂ... ಕೇಳಿ
ದನು. ಅದಕ್ಕೆ ಆ ಪಂಡಿತನು–ನಿನಗೆ ಜೆನ್ನಾಗಿ ಕಣ್ಣು ಕಾಣಿಸುತ್ತಾ ಇದ್ದ ಪಕ್ಷದಲ್ಲಿ
ನಿನ್ನೆಯ ರಾತ್ರಿಯಲ್ಲಿ ಸೀದ ರೊಟ್ಟಿಯನ್ನು ತಿನ್ನುತ್ತಾ ಇರಲಿಲ್ಲ. ಅದುದರಿಂದ ನಿನ್ನ
ಕಣ್ಣುಗಳಿಗೆ ಪರೆ ಮುಚ್ಚಿಕೊಂಡಿದೆ. ಅದು ಪರಿಹಾರವಾಗುವಂತೆ ಚಿಕಿತ್ಸೆಯನ್ನು
ಮಾಡಿದರೆ ಪದಾರ್ಥಗಳನ್ನು ಜೆನ್ನಾಗಿ ನೋಡಿ ತಿನ್ನುವಿ. ಆ ಮೇಲೆ ಹೊಟ್ಟೆಬೇನೆ
ಬರಲಾರದು ಎಂದು ಹೇಳಿದನು. ಆಗ ಕೋಮಟಿಗನು ನಾಚಿಕೊಂಡು ಮನೆಗೆ
ಹೋದನು.

---

7. THE GREEDY JACKAL.

೭. ನರಿಯು ಲೋಭ ಬುದ್ಧಿಯಿಂದ ಸತ್ತುದು.

ಗೊಂಡಾರಣ್ಯದಲ್ಲಿ ಭೈರವನೆಂಬ ಒಬ್ಬ ಬೇಡನು ಇರುವನು. ಅವನು ಒಂದು
ದಿವಸ ಬೇಟೆಯನ್ನು ಆಡುವಾಗ ಒಂದು ಹುಲ್ಲೇಕರುವನ್ನು ಹೊಡೆದನು. ಅದನ್ನು
ತೆಗೆದುಕೊಂಡು ಮಾರ್ಗದಲ್ಲಿ ಬರುತ್ತಾ ಒಂದು ದೊಡ್ಡ ಕಾಡುಹಂದಿಯನ್ನು
ಕಂಡು ಕೈಯ್ಯಲ್ಲಿದ್ದ ಸತ್ತ ಹುಲ್ಲೆಯನ್ನು ಕೆಳಗೆ ಇಟ್ಟು ಬಿಲ್ಲಿಗೆ ಅಂಬನ್ನೇರಿಸಿ ಹಂದಿ
ಯನ್ನು ಹೊಡೆದನು. ಅದು ಆ ಪೆಟ್ಟನ್ನು ಹೊಂದಿ ಕೋಪದಿಂದ ವೇಗವಾಗಿ ಓಡಿ
ಬಂದು ಈ ಬೇಡನ ಮೇಲೆ ಬಿದ್ದಿತು. ಆಗ ಮೊನೆಯಾದ ಅದರ ಕೋರೆದಾಡೆಗಳ
ಇರಿತದಿಂದ ಬೇಡನ ಹೊಟ್ಟೆಯು ಸೀಳಿಹೋಗಿ ಅವನು ಕೆಳಗೆ ಬಿದ್ದು ಸತ್ತನು. ಈ
ಹಂದಿ ಬೇಡ ಇವರಿಬ್ಬರ ಹೊಡೆದಾಟದಲ್ಲಿ ಆಕಸ್ಮಾತ್ತು ಸಿಕ್ಕಿದ ಒಂದು ಹಾವು ಕೂಡಾ
ಸತ್ತುಹೋಯಿತು. ಆ ಸಂದರ್ಭದಲ್ಲಿ ದೀರ್ಘರಾವನೆಂಬ ಒಂದು ಗುಳ್ಳೆನರಿಯು ಅಶ
ನಾರ್ಥಿಯಾಗಿ ಬರುತ್ತಾ ಬಿದ್ದಿರುವ ಈ ಶವಗಳನ್ನು ಕಂಡು—ಆಹಾ ! ನನಗೆ ಆರು
ತಿಂಗಳಾಹಾರವು ಸಿಕ್ಕಿತು. ಈ ಹಾವಿನಿಂದ ಒಂದು ದಿವಸದ ಆಹಾರವು; ಈ ಹುಲ್ಲೇ
ಕರುವಿನಿಂದ ಒಂದು ತಿಂಗಳಿನ ಆಹಾರವು ; ಈ ಹಂದಿಯಿಂದ ಎರಡು ತಿಂಗಳಹಾ
ರವು ! ಈ ಮನುಷ್ಯನಿಂದ ಮೂರು ತಿಂಗಳಾಹಾರವು ಆಗುತ್ತದೆ. ಈ ದಿನದ ಮಟ್ಟಿಗೆ
ಈ ಬಿಲ್ಲಿನ ನರದ ಹೆದೆಯನ್ನು ಕತ್ತರಿಸಿ ತಿಂದು ಕಾಲಕ್ಷೇಪವನ್ನು ಮಾಡುತ್ತೇನೆ.
ನಾಳೆಯ ದಿವಸದಿಂದ ಹಾವು ಹುಲ್ಲೆ ಹಂದಿ ಮನುಷ್ಯ ಇವರನ್ನು ಪಾಜ್ರವಾಗಿ
ತಿನ್ನುವೆನೆಂದು ನಿಶ್ಚಯಿಸಿ ಬಿಲ್ಲಿನ ಹೆದೆಯನ್ನು ಕಡಿಯಲು ಅದು ಕಿತ್ತುಹೋದುದ
ರಿಂದ ಬಿಲ್ಲಿನ ಕೊಪ್ಪು ಸಿಡಿದುಬಂದು ಕೊರಳಿಗೆ ಬಡಿಯಲು ನರಿಯು ಸತ್ತುಹೋ
ಯಿತು. ಈ ರೀತಿಯಿಂದ ದೇವರು ಕೊಟ್ಟಂಥಾ ಕಾಲದಲ್ಲಿ ಹೆಡ್ಡರು ಲೋಭಬುದ್ಧಿ
ಯಿಂದ ಉಣ್ಣದೆ ಉಡದೆ ಕೊಡದೆ ದ್ರವ್ಯವನ್ನು ಕೂಡಿಸಿ ಹೂಣಿಟ್ಟು
ಸಾವರು.

THE BRAHMAN, SON, AND GRANDFATHER.

೮. ತಂದೆಯು ಮಗನು ಮತ್ತು ಅಜ್ಜನು.

ಒಂದು ಊರಿನಲ್ಲಿ ಒಬ್ಬ ಬ್ರಾಹ್ಮಣನು ಇದ್ದನು. ಆತನಿಗೆ ಬಹಳ ಮುದುಕನಾದ ತಂದೆಯೂ ಒಬ್ಬ ಚಿಕ್ಕಮಗನೂ ಇದ್ದರು. ಈ ಬ್ರಾಹ್ಮಣನು ಪ್ರತಿದಿನದಲ್ಲಿಯೂ ಅನ್ನ ಸಾರು ಕಾಯಿಪಲ್ಯ ಮುಂತಾದುದನ್ನು ಮಾಡಿ ಮಗನಿಗೆ ಬಡಿಸಿ ತಾನೂ ಬಡಿಸಿಕೊಂಡು ಉಂಡಮೇಲೆ ಆ ಅನ್ನದಿಂದ ಬಸಿದ ಗಂಜಿಯನ್ನು ಒಂದು ಬಕ್ಕರೆಗೆ ಹಾಕಿ ಆ ಮುದುಕನಾದ ತಂದೆಗೆ ಕುಡಿಸುತ್ತಾ ಇದ್ದನು ಇದನ್ನು ಆ ಚಿಕ್ಕ ಹುಡುಗನು ಕಂಡು—ಅಯ್ಯೋ! ಮುದುಕನಾದ ಅಜ್ಜಯ್ಯನಿಗೆ ಬುದ್ಧಿ ಇಲ್ಲದ ಈ ನನ್ನ ತಂದೆಯು ಹೀಗೆ ಮಾಡುತ್ತಾನಲ್ಲಾ! ಈ ದುಷ್ಕೃತ್ಯವನ್ನು ತಪ್ಪಿಸುವುದು ಹೇಗೆ? ಎಂದು ಯೋಚಿಸಿ ಒಂದು ದಿವಸ ಆ ಗಂಜೀ ಹಾಕುತ್ತಿದ್ದ ಬಕ್ಕರೆಯನ್ನು ತಂದೆ ಕಾಣದಂತೆ ಒಂದು ಕಡೆಯಲ್ಲಿ ಬಚ್ಚಿಟ್ಟನು. ಬ್ರಾಹ್ಮಣನು ಎಂದಿನಂತೆ ತಾನು ಮಗನು ಸಹ ಉಂಡಮೇಲೆ ತಂದೆಗೆ ಗಂಜಿಯನ್ನು ಕುಡಿಸುವುದಕ್ಕೆ ಬಕ್ಕರೆಯನ್ನು ಇಟ್ಟ ಬಳಿಯಲ್ಲಿ ನೋಡಿದನು. ಅದು ಅಲ್ಲಿ ಇಲ್ಲದುದರಿಂದ ಅವನು—ಬಕ್ಕರೆಯನ್ನು ಎಲ್ಲಿ ಹಾಳುಮಾಡಿದೆ? ಎಂದು ಮುದುಕನಾದ ತಂದೆಯನ್ನು ಬೈದು ಹೊಡೆಯುತ್ತಾ ಇರುವಲ್ಲಿ ಈ ಚಿಕ್ಕ ಹುಡುಗನು—ಅಪ್ಪಾ! ಅಪ್ಪಾ! ಅಜ್ಜಯ್ಯನನ್ನು ಏಕೆ ಬೈಯುತ್ತೀ? ಎಂದು ಕೇಳಲು—ನೋಡು, ಹುಡುಗನೇ! ಮುಂದಣ ಯೋಚನೆ ಇಲ್ಲದ ಇವನು ಗಂಜಿಯ ಬಕ್ಕರೆಯನ್ನು ಎಲ್ಲಿಯೋ ಹಾಳುಮಾಡಿದನು. ಮತ್ತೊಂದು ಬಕ್ಕರೆಯನ್ನು ಎಲ್ಲಿಂದ ತರಲಿ? ಎಂದು ಹೇಳಿದನು. ಆಗ ಆ ಹುಡುಗನು—ಆ ಬಕ್ಕರೆಯನ್ನು ಅಜ್ಜಯ್ಯನು ಹಾಳುಮಾಡಲಿಲ್ಲ. ನೀನು ಮುದುಕನಾದಾಗ್ಗೆ ನಿನಗೆ ಗಂಜಿಯನ್ನು ಎರೆಯುವುದಕ್ಕೆ ನಾನು ಬೇರೆ ಬಕ್ಕರೆಯನ್ನು ಎಲ್ಲಿಂದ ತರಲಿ? ಎಂದು ನಾನೇ ಅದನ್ನು ಬಚ್ಚಿಟ್ಟಿದ್ದೇನೆಂದು ಹೇಳಲು ಆ ಮಾತನ್ನು ಕೇಳಿದ ಮಾತ್ರದಿಂದಲೇ ಬ್ರಾಹ್ಮಣನಿಗೆ ಬುದ್ಧಿಯುಂಟಾಗಿ ತಂದೆಯನ್ನು ಆ ದಿನ ಮೊದಲು ಚೆನ್ನಾಗಿ ಆರೈಕೆ ಮಾಡಿದನು.

---

9. THE JAMEDAR AND THE THIEF.

೯. ಜಮೇದಾರನಿಗೆ ಕಳ್ಳನು ಮೋಸಮಾಡಿದುದು.

ಒಂದು ಪಟ್ಟಣದಲ್ಲಿ ಒಬ್ಬ ಜಮೇದಾರನು ಇಪ್ಪತ್ತು ಕುದುರೆಗಳನ್ನು ಸಾಕಿ ಕಟ್ಟಿಕೊಂಡಿದ್ದನು. ಆ ಕುದುರೆಗಳನ್ನು ಕದಿಯಬೇಕು ಎಂದು ಒಬ್ಬ ಕಳ್ಳನು ಬಹಳ ದಿವಸದಿಂದ ಸಾಧಿಸಿಕೊಂಡೇ ಇದ್ದನು. ಒಂದು ದಿವಸ ಅರ್ಧರಾತ್ರಿಯಲ್ಲಿ ಆ ಕಳ್ಳ ಬಂದು ಕುದುರೆಯ ಆಗಾಡಿ ಪಿಚಾಡಿಯ ಹಗ್ಗಗಳನ್ನು ಕೊಯ್ಯುತ್ತಾ ಇದ ಆ ಜಮೇದಾರನ ಕಡೆಯ ಆಳುಗಳು ಕಂಡು ಹಿಡಿದು ಹಿಂಗಟ್ಟು ಕಟ್ಟಿ ತಮ್ಮ ಧಣಿಯ ಬಳಿಗೆ ಕರೆದುಕೊಂಡು ಹೋಗಿ—ಈ ಕಳ್ಳನು ಕುದುರೆಯ

ಯುತ್ತಾ ಇದ್ದನು. ಇದೋ! ಹಿಡಿದು ತಂದು ಇದ್ದೇವೆ ಎಂದು
ಜಮೇದಾರನು ಈ ಕಳ್ಳನನ್ನು ನೋಡಿ—ಎಲೋ, ಕಳ್ಳನೇ! ನಿನಗೆ ಬರುವ
ವಿದ್ಯೆಯನ್ನು ನನಗೆ ಕಲಿಸಿಕೊಟ್ಟರೆ ನಿನ್ನನ್ನು ಬಿಟ್ಟುಬಿಡುತ್ತೇನೆ. ಇಲ್ಲದಿದ್ದರೆ ಬೇಡೀ
ಹಾಕಿಸುತ್ತೇನೆ ಎಂದು ಹೇಳಿದನು. ಆದಕ್ಕೆ ಆ ಕಳ್ಳನು—ಸ್ವಾಮಿ, ಜಮೇದಾರರೇ!
ಅದು ಎಷ್ಟರ ಕೆಲಸ? ನಾಳೆನ ಪ್ರಾತಃಕಾಲಕ್ಕೆ ಅದನ್ನು ತಮಗೆ ಕಲಿಸಿಕೊಡುತ್ತೇನೆ
ಎಂದು ಹೇಳಲು ಜಮೇದಾರನು ಬಹಳ ಸಂತೋಷಪಟ್ಟು—ಈ ಕಳ್ಳನಿಗೆ ಊಟ
ಉಪಚಾರಗಳನ್ನು ಮಾಡಿಸಿ ರಾತ್ರಿಯೆಲ್ಲಾ ಪಹರೆಯಲ್ಲಿ ಇಟ್ಟುಕೊಂಡು ಇದ್ದು ಬೆಳ
ಗಾಗುತ್ತಲೇ ಕರೆದುತನ್ನಿರಿ ಎಂದು ಆಳುಗಳಿಗೆ ಅಪ್ಪಣೆ ಕೊಡಲು ಅವರು ಅದೇ ಪ್ರಕಾರ
ಮಾಡಿದರು. ಆಗ ಆ ಕಳ್ಳನನ್ನು ಕುರಿತು—ಎಲ್ಲಿ? ಕಳ್ಳತನವನ್ನು ಕಲಿಸು ಎಂದು
ಕೇಳಲು ಕಳ್ಳನು ಆ ಕುದುರೆಗಳಲ್ಲಿ ಒಂದು ಒಳ್ಳೆಯ ಕುದುರೆಗೆ ಜೀನು ಕಟ್ಟಿಸಿ
ತಾನು ಅದರ ಮೇಲೆ ಹತ್ತಿಕೊಂಡು—ಅಯ್ಯಾ, ಜಮೇದಾರರೇ! ನೋಡಿ; ಹೀಗೆಯೇ
ಕಳ್ಳತನವನ್ನು ಮಾಡುವುದು ಎಂದು ನಾಗಾಲು ಓಟವನ್ನು ಓಡಿಸಿಕೊಂಡು ಹೋದನು.
ಜಮೇದಾರನು ಎಷ್ಟು ಜನರನ್ನು ಬೆನ್ನಟ್ಟಿ ಓಡಿಸಿದಾಗ್ಗೂ ಕಳ್ಳನು ಅವರಿಗೆ ಸಿಕ್ಕದೆ
ಹೋದುದರಿಂದ ಮೋಸವಾಯಿತು ಎಂದು ಬಹಳ ಪಶ್ಚಾತ್ತಾಪವನ್ನು ಹೊಂದಿದನು.

10. THE SNAKE-CHARMER, SNAKE AND RAT.

೧೦ ಹಾವಾಡಿಗನೂ ಹಾವೂ ಇಲಿಯೂ.

ಒಬ್ಬ ಹಾವಾಡಿಗನು ಆಡ್ಡೀಕಟ್ಟಿ ಅದರಲ್ಲಿ ಹಾವುಗಳ ಬುಟ್ಟಿಗಳನ್ನು ಇರಿಸಿ
ಅದನ್ನು ಹೊತ್ತುಕೊಂಡು ಒಂದು ಊರಿಗೆ ಹೋಗಿ ಹಾವುಗಳನ್ನು ಆಡಿಸಿ ದವಸ
ಧಾನ್ಯ ದುಡ್ಡು ಕಾಸುಗಳನ್ನು ಸಂಪಾದಿಸಿಕೊಂಡು ಬರಬೇಕೆಂದು ಹೊರಟು ಬರುವ
ದಾರಿಯಲ್ಲಿ ಒಂದು ನಾಗರಹಾವು ಇವನು ಕಾಣುವಂತೆ ಹುತ್ತವನ್ನು ಹೊಕ್ಕುದರಿಂದ
ಈ ಹಾವಾಡಿಗನು ಆ ಹುತ್ತವನ್ನು ಅಗಿದು ಅದನ್ನು ಹಿಡಿದು ಒಂದು ಪುಟ್ಟಿಯಲ್ಲಿ
ಇಟ್ಟು ಮುಚ್ಚಳವನ್ನು ಹಾಕಿ ಪೂರ್ವದಂತೆ ಹೋಗಿ ಮತ್ತೊಂದು ಊರಿನ ಒಂದು
ಗುಡಿಯಲ್ಲಿ ಇಳಿದುಕೊಂಡನು ಮಾರನೆಯದಿವಸ ಆ ಹಾವಾಡಿಗನಿಗೆ ಮಾರ್ಗಾ
ಯಾಸದಿಂದ ಚಳಿಯೂ ಜ್ವರವೂ ಬಂದು ಎರಡು ಮೂರು ದಿವಸ ಅಲ್ಲಿಯೇ ಬಿದ್ದು
ಕೊಂಡು ಇದ್ದನು. ಹೊಸದಾಗಿ ಹಿಡಿದಹಾವು ಬುಟ್ಟಿಯಲ್ಲಿ ಸಿಕ್ಕಿಕೊಂಡು—ಅಯ್ಯೋ,
ದೇವರೇ! ಇಂಥಾ ಸಂಕಟವನ್ನು ಕೊಟ್ಟಿಯಾ? ಮೂರು ದಿವಸದಿಂದ ಆಹಾರವಿಲ್ಲದೆ
ಸಾಯುವ ದುರವಸ್ಥೆಯು ಬಂದಿತಲ್ಲಾ! ಇನ್ನೇನು ಗತಿ? ಎಂದು ಯೋಚಿಸುತ್ತಿರುವ
ವೇಳೆಯಲ್ಲಿಯೇ ಆ ಗುಡಿಯ ಬಿಲದಲ್ಲಿ ಇದ್ದ ಒಂದು ಇಲಿಯು ರಾತ್ರಿಯಾದುದರಿಂದ
ಹೊರಗೆ ಬಂದು ಈ ಬುಟ್ಟಿಯನ್ನು ನೋಡಿ—ಓಹೋ! ಈ ದಿನ ನನಗೆ ಒಳ್ಳೆಯ
ರ ದೊರಕಿತು. ಈ ಬುಟ್ಟಿಯಲ್ಲಿ ಯಾವುದೋ ಒಂದು ವಿಧವಾದ ಧಾನ್ಯವು
ರುವುದು ಇದಕ್ಕೆ ತೂತುಮಾಡಿ ಒಳಹೊಕ್ಕು ಧಾನ್ಯವನ್ನು ತಿಂದು ಜೀವಿ
ಂದು ಆಲೋಚಿಸಿ ಆ ಪ್ರಕಾರವೇ ಮಾಡಿ ಒಳಹೊಕ್ಕಿತು. ತತ್‌ಕ್ಷಣದಲ್ಲಿಯೇ

ಸುತ್ತಾ ಇದ್ದ ಹಾವು—ದೇವರು ನನಗೆ ಆಹಾರವನ್ನು ಕೊಟ್ಟನು ಎಂದು ...ಎಂದ ಆ ಇಲಿಯನ್ನು ಹಿಡಿದು ನುಂಗಿ ಹೊಟ್ಟೆಯನ್ನು ತುಂಬಿಸಿಕೊಂಡು ಆ ಇಲಿ ಕೊರೆದು ಇದ್ದ ಕನ್ನದಿಂದಲೇ ಹೊರಟು ಬಂದು ಒಂದು ಹುತ್ತವನ್ನು ಸೇರಿಕೊಂಡಿತು.

---

11. THE DOVES, FOWLER, FALCON, AND SNAKE.

೧೧. ಪಾರಿವಾಣದ ಹಕ್ಕಿಯೂ ಬೇಡನೂ ಗಿಡಗನೂ ಹಾವೂ.

ಒಂದಾನೊಂದು ಅರಣ್ಯದಲ್ಲಿ ಒಂದು ಅರಳಿಯ ಮರವಿತ್ತು. ಅದರ ಮೇಲೆ ಒಂದು ಗಂಡು ಪಾರಿವಾಣದ ಹಕ್ಕಿಯೂ ಒಂದು ಹೆಣ್ಣು ಪಾರಿವಾಣದ ಹಕ್ಕಿಯೂ ಸ್ನೇಹವಾಗಿ ಬಹಳ ದಿವಸದಿಂದ ವಾಸಮಾಡಿಕೊಂಡಿದ್ದುವು. ಹೀಗಿರುವಲ್ಲಿ ಒಂದು ದಿವಸ ಹೆಣ್ಣುಹಕ್ಕಿಯು ಗಂಡುಹಕ್ಕಿಯನ್ನು ಕುರಿತು—ಎಲೈ ನಾಥನೇ! ಈಗ ನಮ್ಮಿಬ್ಬರಿಗೂ ಸಾಯುವ ಕಾಲವು ಬಂದು ಇದೆ. ಅದು ಹೇಗೆಂಬೆಯಾ? ಇದೋ! ನೋಡು; ಈ ಮರದ ಕೆಳಗೆ ಒಬ್ಬ ಬೇಡನು ಬಿಲ್ಲಿಗೆ ಹೆದೆಯನ್ನು ಏರಿಸಿ ಅದರಲ್ಲಿ ಅಂಬನ್ನು ತೊಡಿಸಿ ನಮ್ಮಿಬ್ಬರನ್ನೂ ಹೊಡೆಯುವುದಕ್ಕೆ ಎಡದ ಮಂಡಿಯನ್ನು ಭೂಮಿಯಲ್ಲಿ ಊರಿ ಗುರಿಯನ್ನು ಕಟ್ಟುತ್ತಿದ್ದಾನೆ. ಇದನ್ನು ತಪ್ಪಿಸಿಕೊಳ್ಳುವುದ ಕ್ಕಾಗಿ ಮೇಲಕ್ಕೆ ಹಾರಿದರೆ ಹಾರಿದ ಕ್ಷಣದಲ್ಲಿಯೇ ನಮ್ಮಿಬ್ಬರನ್ನೂ ಕಚ್ಚಿ ತಿಂದು ಬಿಡಬೇಕೆಂದು ಒಂದು ಗಿಡಗವು ಮರದ ಮೇಲೆ ಮಂಡಲಾಕಾರವಾಗಿ ಸುತ್ತುತ್ತಾ ಇದೆ. ಇಂಥಾ ಆಪತ್ತಿನಲ್ಲಿ ನಾವು ಬದುಕುವುದು ಹೇಗೆ? ಎಂದು ದುಃಖಿಸುತ್ತಾ ಅದಕ್ಕೆ ಹೇಳಲು ಗಂಡುಹಕ್ಕಿಯು—ಎಲೈ, ಪ್ರಿಯೇ! ಏಕೆ ಯೋಜನೆಮಾಡು ತ್ತೀಯೇ? ದೇವರ ದಯೆಯಿದ್ದರೆ ಬೆಟ್ಟದಹಾಗೆ ಬಂದ ಆಪತ್ತುಗಳು ಮಂಜಿನ ಹಾಗೆ ಹಾರಿ ಹೋಗುವುವು; ಈ ಅಸಾಧ್ಯಕಾರ್ಯಕ್ಕೆ ನಾವು ವ್ಯಸನಪಟ್ಟರೆ ಪ್ರಯೋಜನವೇನು? ದೇವರು ಮಾಡಿದುದಾಗಲಿ; ಧೈರ್ಯದಿಂದ ಇರು ಎಂದು ಹೇಳು ತ್ತಾ ಇರುವ ಸಮಯದಲ್ಲಿ ಒಂದು ನಾಗರಹಾವು ಬಂದು ಮರದ ಕೆಳಗೆ ಇರುವ ಬೇಡನ ಕಾಲಿನ ಹಿಮ್ಮಡಿಯನ್ನು ಕಚ್ಚಿತು. ಅದರ ವಿಷವೇರಿ ಈ ಬೇಡನು ತಬ್ಬಿ ಬ್ಬಾಗಿ ಬಾಣವನ್ನು ಬಿಟ್ಟನು. ಆ ಬಾಣವು ಗುರಿತಪ್ಪಿ ಹೋಗಿ ಇವುಗಳನ್ನು ತಿನ್ನ ಬೇಕೆಂದು ಮೇಲೆ ಸುತ್ತುತ್ತಾ ಇದ್ದ ಗಿಡಗನಿಗೆ ತಗುಲಲು ಅದು ಸತ್ತು ಕೆಳಗೆ ಬಿದ್ದಿತು. ಹಾವಿನ ವಿಷವು ತಲೆಗೇರಿ ಈ ಬೇಡನೂ ಸತ್ತುಬಿದ್ದನು ದೇವರ ದಯೆ ಯಿಂದ ಎರಡು ಗಂಡಗಳೂ ತಪ್ಪಿ ಎರಡು ಪಾರಿವಾಣದ ಹಕ್ಕಿಗಳೂ ಬದುಕಿ ಕೊಂಡುವು.

---

12. THE UNCORRECTED SON.

೧೨. ತಂದೆ ಶಿಕ್ಷಿಸದ ಮಗ.

ಲೀಲಾವತಿ ಎಂಬ ಪಟ್ಟಣದಲ್ಲಿ ಪೆದ್ದಭಟ್ಟನೆಂಬ ಜೋಯಿಸನು ಇದ್ದನು. ಅವನಿಗೆ ನಾಲ್ಕು ವರುಷದ ಒಬ್ಬ ಮಗನಿದ್ದನು. ಮತ್ತೊಂದು ಗ್ರಾಮದಲ್ಲಿರುವ ತನ ನೆಂಟರ ಮನೆಯಲ್ಲಿ ನಡೆಯುವ ವಿವಾಹಕಾರ್ಯಕ್ಕಾಗಿ ಹೆಂಡತಿಯನ್ನೂ ಮಗನನ್ನೂ ಕರೆದುಕೊಂಡು ಹೋಗಿ ಪ್ರಸ್ತವನ್ನು ಬೆಳೆಸಿಕೊಂಡು ತಿರುಗಿ ಪಟ್ಟಣಕ್ಕೆ ಬರುವಾಗ ಮಗನನ್ನು ತನ್ನ ಹೆಗಲಿನ ಮೇಲೆ ಕುಳ್ಳಿರಿಸಿಕೊಂಡು ಬರುತ್ತಾ ಇದ್ದನು. ಆ ದಾರಿಯಲ್ಲಿಯೇ ಕೆಲವರು ಆ ಪಟ್ಟಣದ ಸಂತೆಯಲ್ಲಿ ಮಾರುವುದಕ್ಕಾಗಿ ಗೂಡೆಯಲ್ಲಿ ಬಾಳೆಯ ಹಣ್ಣುಗಳನ್ನು ತುಂಬಿ ಹೊತ್ತುಕೊಂಡು ಹೋಗುತ್ತಾ ಇದ್ದರು. ಈ ಜೋಯಿಸನ ಹೆಗಲಿನ ಮೇಲೆ ಕುಳಿತಿದ್ದ ಹುಡುಗನ ಕೈಗೆ ಮುಂದೆ ಹೋಗುವವನ ಬಾಳೆಯ ಹಣ್ಣಿನ ಗೂಡೆಯು ಎಟಕಿದುದರಿಂದ ಒಂದು ಚಿಪ್ಪು ಬಾಳೆಯ ಹಣ್ಣನ್ನು ತೆಗೆದುಕೊಂಡು ತಾನು ಹೊದೆದಿದ್ದ ಒಲ್ಲಿಯ ಒಳಗೆ ಅದನ್ನು ಬಚ್ಚಿಟ್ಟುಕೊಂಡಿದ್ದು ಜೋಯಿಸನು ಮನೆಗೆ ಹೋಗಿ ಮಗನನ್ನು ಇಳಿಸಿದಾಗ—ಅಪ್ಪಾ, ಇದೋ! ಬಾಳೆಯ ಹಣ್ಣು! ಇದನ್ನು ಸಂತೆಗೆ ಹೋಗುವವರ ಗೂಡೆಯಿಂದ ತೆಗೆದುಕೊಂಡು ಬಚ್ಚಿಟ್ಟುಕೊಂಡಿದ್ದೆನು ಎಂದು ತೋರಿಸಲು ತಂದೆಯು—ಶಾಬಾಸು, ಹುಡುಗಾ! ಎಂದು ತಬ್ಬಿಕೊಂಡು ಮುದ್ದಾಡಿದನು. ಆ ಹುಡುಗನು—ತಂದೆ ಸಂತೋಷಪಟ್ಟನು; ಇದು ಒಳ್ಳೆಯ ಕೆಲಸ ಎಂದು ಎಣಿಸಿ ಅಂದಿನಿಂದ ನೆರೆಹೊರೆಯವರ ಮನೆಗಳಲ್ಲಿ ಸಿಕ್ಕಿದ ಪದಾರ್ಥಗಳನ್ನು ಕದ್ದುಕೊಂಡು ಒರುತ್ತಾ ಇದ್ದು ವ್ಯಾಯಸ್ಥನಾದಮೇಲೆ ಒಂದು ದಿನ ದೊರೆಯ ಅರಮನೆಗೆ ನುಗ್ಗಿ ವಜ್ರಪಡಿಯ ನಗಗಳನ್ನು ಕದ್ದುಕೊಂಡು ಬರುವಲ್ಲಿ ಕಾವಲಿನವರು ಅವನನ್ನು ಒಡವೆಸಹಿತ ಹಿಡಿತಂದು ಅರಸಿಗೆ ಒಪ್ಪಿಸಿದರು. ಅರಸನು—ಸಂಕೋಲೆಹಾಕಿ, ಇವನನ್ನು ಸೆರೆಯಲ್ಲಿ ಇಡಿ ಎಂದು ಅಪ್ಪಣೆ ಕೊಟ್ಟನು. ಆಗ ಈ ಹುಡುಗನು—ನನಗೆ ಸಂಕೋಲೆಹಾಕ ಕೂಡದು; ನಮ್ಮಪ್ಪನಿಗೆ ಹಾಕಬೇಕು ಎನಲು ಅರಸನು—ನೀನು ಕದ್ದರೆ ನಿಮ್ಮಪ್ಪನಿಗೆ ಏಕೆ ಹಾಕಬೇಕೆಂದು ಕೇಳಿದನು. ಅದಕ್ಕೆ—ನಾನು ಚಿಕ್ಕವನಾಗಿರುವಾಗ ಬಾಳೆಯ ಹಣ್ಣನ್ನು ಕದ್ದು ನನ್ನ ತಂದೆಗೆ ತೋರಿಸಿದೆನು; ಅವನು ಹೊಗಳಿ ನನ್ನನ್ನು ತಬ್ಬಿಕೊಂಡು ಮುದ್ದಾಡಿದುದರಿಂದ ಇದು ಒಳ್ಳೆಯ ಕೆಲಸವೆಂದು ತಿಳಿದು ನಾನು ಹೀಗೆ ಕದಿಯುತ್ತಾ ಬಂದೆನು. ಇಂಥಾ ಕೆಲಸವನ್ನು ಏಕೆ ಮಾಡಿದೆ? ಎಂದು ಆ ದಿವಸವೇ ಆತನು ಬೈದು ಎರಡು ಪೆಟ್ಟು ಹೊಡೆದು ಇದ್ದಲ್ಲಿ ನಾನು ಯಾವಾಗಲೂ ಕದಿಯುತ್ತಿರಲಿಲ್ಲ. ಆದುದರಿಂದ ಈ ತಪ್ಪು ನಮ್ಮ ತಂದೆಯದು. ಆತನಿಗೆ ಶಿಕ್ಷೆಮಾಡ[illegible]ಕೆಂದು ಹೇಳಿದೆನೆನಲು ಅರಸು ಆ ಹುಡುಗನ ಮಾತಿಗೆ ಮೆಚ್ಚಿ ಅವನ ತಂದೆಯನ್ನು ಅವನಿಗೆ ಹುಡುಗನು ಹೇಳಿದ ಮಾತನ್ನು ಹೇಳಿ ಹೀಯಾಳಿಸಿ ವಿವೇಕವನ್ನು [illegible]ಸಿ ಹುಡುಗನನ್ನು ಅವನ ವಶಕ್ಕೆ ಕೊಟ್ಟು ಕಳುಹಿಸಿದನು. ಆದುದರಿಂದ

ಕಂದೆತ್ತಾಯಿಗಳು ತಮ್ಮ ಮಕ್ಕಳು ಕೆಟ್ಟ ಕೆಲಸವನ್ನು ಮಾಡಿದರೆ ಅವರನ್ನು ಚಿಕ್ಕಂದಿದಲೇ ಶಿಕ್ಷಿಸುತ್ತಾ ಬರಬೇಕು.

---

13. THE IMAGINARY DEMON.

೧೩. ಅಡುಗೂಲಜ್ಜಿಯು ಘಂಟಾಕರ್ಣನನ್ನು ಓಡಿಸಿದುದು.

ನಿದ್ಯಾನಗರದಲ್ಲಿ ವೇದಸಿಂಧು ಎಂಬ ಒಬ್ಬ ಅರಸು ಇರುವನು ಆ ಪಟ್ಟಣದ ಪ್ರಜೆಗಳು ಅಲ್ಲಿ ಒಂದು ಪ್ರದೇಶದಲ್ಲಿ ಘಂಟಾಕರ್ಣನೆಂಬ ಒಬ್ಬ ಬ್ರಹ್ಮರಾಕ್ಷಸನು ಇದ್ದುಕೊಂಡು ಜನರನ್ನು ಬಾಧಿಸುತ್ತಾನೆಂಬ ವರ್ತಮಾನವನ್ನು ಗತಾನುಗತಿಕವಾಗಿ ಕೇಳಿ ಹೆದರಿಕೊಂಡಿದ್ದರು. ಅಲ್ಲದೆ ಈ ಸುದ್ದಿಯು ಅರಸಿಗೂ ತಿಳಿದಿತ್ತು. ಹೀಗಿರುವಲ್ಲಿ ಆ ಪಟ್ಟಣದ ಸಮೀಪದಲ್ಲಿರುವ ಕಾಡಿನಲ್ಲಿ ಒಂದು ಹುಲಿಯು ಒಬ್ಬ ಕಳ್ಳನನ್ನು ಕೊಂದುಹಾಕಿತು. ಆ ಕಳ್ಳನ ಬಳಿಯಲ್ಲಿ ಒಂದು ಘಂಟೆ ಇದ್ದಿತು. ಅದನ್ನು ಒಂದು ಕೋತಿಯು ಎತ್ತಿಕೊಂಡು ಮನಸ್ಸು ಬಂದಹಾಗೆ ಬಾರಿಸುತ್ತಾ ಇದ್ದಿತು. ಆ ಘಂಟೆಯ ಶಬ್ದವನ್ನು ಕೇಳಿ ಹುಲಿ ಕೊಂದ ಮನುಷ್ಯನನ್ನು ನೋಡಿ—ಘಂಟಾಕರ್ಣನು ಘಂಟೆಯನ್ನು ಬಾರಿಸುತ್ತಾ, ಪಟ್ಟಣದ ಸಮೀಪಕ್ಕೆ ಬಂದು ಮನುಷ್ಯರನ್ನು ತಿನ್ನುತ್ತಾನೆಂದು ದಿಗಿಲು ಬಿದ್ದು ಆ ಪಟ್ಟಣದವರೆಲ್ಲರೂ ಊರನ್ನು ಬಿಟ್ಟು ದೂರವಾಗಿ ಹೋಗಬೇಕೆಂದು ಎಣಿಸಿಕೊಂಡು ಇದ್ದರು ಈ ಸುದ್ದಿಯನ್ನು ರಾಜನು ಕೇಳಿ ತುಂಬಾ ಚಿಂತೆಯನ್ನು ಮಾಡುತ್ತಾ ಇದ್ದನು. ಆಗ ಸೌದೆಯ ನಿಮಿತ್ತವಾಗಿ ನಿತ್ಯವೂ ಕಾಡಿಗೆ ಹೋಗುತ್ತಿದ್ದ ಆ ಪಟ್ಟಣದ ಅಡುಗೂಲಜ್ಜಿಯು ಈ ಮರ್ಮವನ್ನು ಕಂಡಿದ್ದವಳಾದಕಾರಣ ಅವಳು ಅರಸಿನ ಬಳಿಗೆ ಬಂದು—ಸ್ವಾಮಿ! ತಾವು ನನಗೆ ಬಹಳ ದ್ರವ್ಯವನ್ನು ಕೊಟ್ಟರೆ ನಾನು ಕಾಡಿಗೆ ಹೋಗಿ ಆ ಘಂಟಾಕರ್ಣನನ್ನು ನಮ್ಮ ದೇಶದಿಂದ ದೂರಕ್ಕೆ ಹೊರಡಿಸಿಬಿಟ್ಟು ಬರುತ್ತೇನೆ ಎನಲು ಆ ಅರಸು ಸಂತೋಷದಿಂದ ಅವಳಿಗೆ ಬಹಳ ಹಣವನ್ನು ಕೊಟ್ಟನು. ಆಕೆಯು ಆ ಹಣವನ್ನೆಲ್ಲಾ ಮನೆಯಲ್ಲಿ ಹೂಣಿಟ್ಟು ಸ್ವಲ್ಪ ಅನ್ನವನ್ನೂ ಕಜ್ಜಾಯಗಳನ್ನೂ ಮಾಡಿ ತೆಗೆದುಕೊಂಡು ಕಾಡಿಗೆ ಹೋಗಿ ಅಲ್ಲಿ ಒಂದು ಸ್ಥಳದಲ್ಲಿ ಇಡಲು ಆ ಕೋತಿ ಬಂದು ಘಂಟೆಯನ್ನು ಬಿಟ್ಟು ಅನ್ನವನ್ನೂ ಕಜ್ಜಾಯಗಳನ್ನೂ ತಿನ್ನುತ್ತಾ ಇದ್ದಿತು. ಆ ಸಮಯದಲ್ಲಿ ಈ ಅಡುಗೂಲಜ್ಜಿಯು ಘಂಟೆಯನ್ನು ತೆಗೆದುಕೊಂಡು ಬಂದು ತನ್ನ ಮನೆಯಲ್ಲಿಟ್ಟು ಅರಸಿನ ಬಳಿಗೆ ಬಂದು—ಬಹು ಶ್ರಮದಿಂದ ಘಂಟಾಕರ್ಣನನ್ನು ಓಡಿಸಿ ಬಂದೆನೆಂದು ಹೇಳಿದಳು. ಆಮೇಲೆ ಊರಿನ ಜನರೆಲ್ಲರೂ ಘಂಟೆಯ ಶಬ್ದವನ್ನು ಕೇಳದಿರುವುದರಿಂದ ಸಂತೋಷಪಟ್ಟು ಆ ಅಡುಗೂಲಜ್ಜಿಯನ್ನು ಮಹಾತ್ಮಳೆಂದು ಭಾವಿಸಿ ಬಹಳವಾಗಿ ಪೂಜಿಸುತ್ತಾ ಬಂದರು. ಆದುದರಿಂದ ಬುದ್ಧಿವಂತರಾದವರು ಸಮಯವರಿತು ಉಪಾಯಗಳನ್ನು ಮಾಡಿ ಜೀವಿಸುವರು.

---

14. THE BRAHMAN AND OPPRESSING KOTWAL.

೧೪. ಬ್ರಾಹ್ಮಣನೂ ಕೊತ್ತವಾಲನೂ.

ಒಬ್ಬ ಬ್ರಾಹ್ಮಣನು ತನಗೆ ಯಾರೋ ಒಬ್ಬನು ಕೊಟ್ಟ ಆರಬೀ ದೇಶದ ಟಾಕಣದ ಮೇಲೆ ಹತ್ತಿಕೊಂಡು ಒಂದು ಪಟ್ಟಣದ ಕೋಮಟಿಗರ ಬೀದಿಯಲ್ಲಿ ಬರುತ್ತಾ ಇರಲು ಆ ಊರಿನ ಕೊತ್ತವಾಲನು—ಈ ಟಾಕಣ ಬಹು ಒಳ್ಳೆಯದು; ಹೇಡಿಯ ಕೈಗೆ ಚಂದ್ರಾಯುಧ ಸಿಕ್ಕಿದಹಾಗೆ ಈ ಬಡ ಹಾರವನಿಗೆ ಇಂಥಾ ಉತ್ತಮವಾದ ಕುದುರೆ ಎಲ್ಲಿ ದೊರಕಿತೋ? ಇದನ್ನು ಅಪಹರಿಸಬೇಕೆಂದು ಮನಸ್ಸಿನಲ್ಲಿ ಎಣಿಸಿ ಓಡುತ್ತಾ ಬಂದು ಬ್ರಾಹ್ಮಣನನ್ನು ಕುದುರೆಯ ಮೇಲಿನಿಂದ ಎಳೆದುಹಾಕಿ ತಾನು ಅದರ ಮೇಲೆ ಹತ್ತಿಕೊಂಡು ತನ್ನ ಮನೆಗೆ ಹೋದನು. ಈ ಬ್ರಾಹ್ಮಣನು ಅಳುತ್ತಾ ಕರೆಯುತ್ತಾ ಆ ಊರಿನ ದೊರೆಯ ಸಭೆಗೆ ಹೋಗಿ ದೂರುಹೇಳಿಕೊಂಡನು. ಆಗ ದೊರೆಯು ಬಿಲ್ಲೆಯವರನ್ನು ಕಳುಹಿಸಿ ಕೊತ್ತವಾಲನನ್ನು ಕರಿಸಿ ವಿಚಾರಿಸುವಲ್ಲಿ—ಈ ಬಡಹಾರವ ಎಲ್ಲಿ? ಇಂಥಾ ಜಾತಿ ಟಾಕಣವೆಲ್ಲಿ? ಇವನದು ಎಂದಿಗೆ ಆದೀತು? ಇದು ನನ್ನದು ಎಂದು ಕೊತ್ತವಾಲನು ಹೇಳಿದನು ಆದಕ್ಕೆ ಆ ಬ್ರಾಹ್ಮಣನು—ಈ ಕುದುರೆಯು ನನ್ನದು ಎಂಬುವುದನ್ನು ಈ ಊರಿನ ಕೋಮಟಿಗರೆಲ್ಲಾ ಚೆನ್ನಾಗಿ ಬಲ್ಲರು. ದಣಿಯವರು ಅವರನ್ನು ಕರಿಸಿ ವಿಚಾರಿಸಬಹುದು ಎಂದು ಅರಿಕೆ ಮಾಡಿದನು. ಆಗ ದೊರೆಯು ಆಳುಗಳನ್ನು ಕಳುಹಿಸಿ ಕೋಮಟಿಗರನ್ನು ಕರಿಸಲು ಕೋಮಟಿಗರೆಲ್ಲಾ ಗುಂಪುಕೂಡಿ—ಇದೇನಪ್ಪಾ! ಹೀಕುಲಾಟ ಬಂದಿತು ಎಂದು ಯೋಚಿಸುತ್ತಾ ಚಾವಡಿಗೆ ಒಂದು ದೊರೆಗೆ ಕೈ ಮುಗಿದು ಕೂತುಕೊಂಡರು. ಆಗ ಈ ಕುದುರೆ ಯಾರದು? ನೀವು ಬಲ್ಲಿರಾ? ಎಂದು ಅರಸನು ಕೇಳಲು ಆ ಕೋಮಟಿಗರಲ್ಲಿ ಒಬ್ಬ ಮುದುಕನು ಎದ್ದು ಆ ಕುದುರೆಯ ಬಳಿಗೆ ಹೋಗಿ ಅದರ ಮುಂದು ಗಡೆಯನ್ನೆಲ್ಲಾ ಚೆನ್ನಾಗಿನೋಡಿ ಆ ಮೇಲೆ ಅದರ ಹಿಂದುಗಡೆಯನ್ನೂ ನೋಡಿ ಅರಸಿನ ಬಳಿಗೆ ಬಂದು ಕೈಮುಗಿದು—ಸ್ವಾಮಿ! ಈ ಟಾಕಣವು ಮುಂದೆ ಬ್ರಾಹ್ಮಣನದಾಗಿಯೂ ಹಿಂದೆ ಕೊತ್ತವಾಲನದಾಗಿಯೂ ಇದೆ. ಸರ್ವಜ್ಞರಾದ ದೊರೆಗಳ ಚಿತ್ತಕ್ಕೆ ತೋರಿದ ಪ್ರಕಾರ ಮಾಡಿಸಬಹುದು ಎಂದು ಹೇಳಿದನು. ಆ ಮೇಲೆ ಉಳಿದವರೆಲ್ಲರೂ ಹಾಗೆಯೇ ಹೇಳಲು ಇವರು ಕೊತ್ತವಾಲನಿಗೆ ಅಂಜಿ ಹೀಗೆ ಮಾತಾಡುತ್ತಾರೆ ಎಂದು ದೊರೆಯು ನಕ್ಕು ಇದು ಬ್ರಾಹ್ಮಣನದೇ ಎಂದು ನಿಶ್ಚಯಿಸಿ ಕುದುರೆಯನ್ನು ಅವನಿಗೆ ಕೊಡಿಸಿ ಕಳುಹಿಸಿ ಕೊತ್ತವಾಲನಿಗೆ ಶಿಕ್ಷೆಯನ್ನು ಮಾಡಿಸಿದನು.

---

15. THE KING, MANTRI, AND MILK-CHEAT.

೧೫. ದೊರೆಯೂ ಮಂತ್ರಿಯೂ ಹಾಲು ತುಂಬದೆ ನೀರು ತುಂಬಿದವರೂ.

ಮಧುರಾಪುರಿಯಲ್ಲಿ ವಿವೇಕಚಿಂತಾಮಣಿ ಎಂಬ ಅರಸು ಬುದ್ಧಿಸಾಗರನೆಂಬ ಪ್ರಧಾನನೊಡನೆ ರಾಜ್ಯಭಾರವನ್ನು ಮಾಡಿಕೊಂಡು ಇದ್ದನು. ಹೀಗಿರುವಲ್ಲಿ ಅರಸು

ಒಂದು ಕಾರ್ಯವನ್ನು ಆಲೋಚಿಸಿ ಅದನ್ನು ಹೀಗೆ ಮಾಡಬೇಕೆಂದು ತನ್ನ ಮನದ ಲ್ಲಿಯೇ ನಿಶ್ಚಯಿಸಿ ಈ ಕಾರ್ಯಕ್ಕೆ ನಮ್ಮ ಮಂತ್ರಿಯು ಏನು ಹೇಳುತ್ತಾನೋ? ನೋಡೋಣ ಎಂದು ಅಮಾತ್ಯನನ್ನು ಕರಿಸಿ ಅಂತರಂಗದಲ್ಲಿ ಕುಳಿತು ಆ ಕಾರ್ಯವನ್ನು ಅವನಿಗೆ ಹೇಳಿ ಇದಕ್ಕೆ ಹೇಗೆ ಮಾಡಬೇಕೆಂದು ಕೇಳಲು ಅರಸು ತನ್ನ ಮನಸ್ಸಿನಲ್ಲಿ ನಿಶ್ಚಯಿಸಿಕೊಂಡಿದ್ದ ಪ್ರಕಾರವೇ ಪ್ರಧಾನನೂ ಹೇಳಿದನು ಅದಕ್ಕೆ ಅರಸು—ಏನ ಯ್ಯಾ, ಮಂತ್ರಿಯೇ! ನನ್ನ ಮನಸ್ಸಿನಲ್ಲಿ ನಿಶ್ಚಯಿಸಿದ್ದ ಪ್ರಕಾರವೇ ನೀನು ಹೇಗೆ ಹೇಳಿದೆ? ಎನ್ನಲು ಮಂತ್ರಿಯು—ಸ್ವಾಮಿಾ! ಬುದ್ಧಿವಂತರ ಆಲೋಜನೆಗಳೆಲ್ಲಾ ಒಂದೇ ಪ್ರಕಾರವಾಗಿರುವುವು ಅಂದನು. ಅದಕ್ಕೆ ಅರಸನು—ಈ ಅರ್ಧರಾತ್ರಿಯಲ್ಲಿ ನೀನು ಹೊರಗೆ ಹೋಗದೆ ನನ್ನ ಬಳಿಯಲ್ಲಿಯೇ ಇದ್ದುಕೊಂಡು ಅದಕ್ಕೆ ನಿದರ್ಶನ ವನ್ನು ತೋರಿಸು ಎನ್ನಲು ಆ ಕ್ಷಣವೇ ಮಂತ್ರಿಯು ಬುದ್ಧಿವಂತರಾದ ಇಪ್ಪತ್ತು ಜನರನ್ನು ದೊರೆಯ ಬಳಿಗೆ ಕರಿಸಿ ದೊರೆಯ ಮುಂದುಗಡೆಯಲ್ಲಿಯೇ ಅವರನ್ನು ಕುರಿತು–ನೀವು ಒಬ್ಬರೊಬ್ಬರಾಗಿ ಈ ಕತ್ತಲೆಯ ಮನೆಯಲ್ಲಿರುವ ಗಾರೆಯ ಗುಂಡಿಗೆ ಒಂದೊಂದು ಹರವಿ ಹಾಲನ್ನು ಸುರಿದು ಅದನ್ನು ತುಂಬಿಸಿ ನಮ್ಮ ಬಳಿಗೆ ಬಂದು ಹೇಳಬೇಕೆಂದು ಅಪ್ಪಣೆ ಕೊಡಲು ಎರಡು ಗಳಿಗೆಯಲ್ಲಿ ಅವರೆಲ್ಲಾ ಅಪ್ಪಣೆಯ ಪ್ರಕಾರವೇ ಆ ತೊಟ್ಟಿಯನ್ನು ತುಂಬಿಸಿ ದೊರೆಯ ಬಳಿಗೆ ಬಂದು ಅಪ್ಪಣೆ ಆದಂತೆ ತೊಟ್ಟಿಯನ್ನು ಹಾಲಿನಿಂದ ತುಂಬಿಸಿ ಇದ್ದೇವೆ ಎಂದು ಹೇಳಲು ಅವರನ್ನೆಲ್ಲಾ ಜೇರೆ ಜೇರೆ ಪಹರೆಯಲ್ಲಿ ಇಡಿಸಿ ದೊರೆಯು ಪ್ರಧಾನನೊಡನೆ ದೀವಟಿಗೆಯನ್ನು ಹಿಡಿಸಿಕೊಂಡು ಆ ಗಾರೆಯ ಗುಂಡಿಯ ಬಳಿಗೆ ಬಂದು ನೋಡುವಾಗ ಅದರಲ್ಲಿ ಬರಿಯ ನೀರೇ ತುಂಬಿತ್ತು. ಮಂತ್ರಿಯು ಆ ಇಪ್ಪತ್ತು ಜನರೊಳಗೆ ಒಬ್ಬನನ್ನು ಕರಿಸಿ—ನೀನು ಅಪ್ಪಣೆಯ ಪ್ರಕಾರ ಒಂದು ಹರವಿ ಹಾಲು ತಂದು ಸುರಿದೆಯೋ? ಇಲ್ಲವೋ? ಸುಳ್ಳನ್ನು ಹೇಳಿದರೆ ಶಿಕ್ಷೆಯಾದೀತು; ನಿಜವನ್ನು ಹೇಳಿದರೆ ಮನ್ನಿಸುವೆವು ಎಂದು ಕೇಳಲು—ಸ್ವಾಮಿಾ! ನಾನು ಹಾಲನ್ನು ತಂದು ಸುರಿಯಲಿಲ್ಲ; ನೀರನ್ನು ತಂದು ಸುರಿದೆನು ಎಂದನು ಅದಕ್ಕೆ ಮಂತ್ರಿಯು—ದೊರೆಗಳ ಅಪ್ಪಣೆಯ ಮೇರೆ ಹಾಲನ್ನು ತಂದು ಸುರಿಯದೆ ನೀರನ್ನು ತಂದು ಸುರಿಯುವುದಕ್ಕೆ ಕಾರಣವೇನೆಂದು ಕೇಳಲು ಅವನು—ಈ ಅರ್ಧರಾತ್ರಿಯಲ್ಲಿ ಹಾಲನ್ನು ತರುವುದಕ್ಕೆ ಅನುಕೂಲಿಸದೆ ಹತ್ತೊಂಭತ್ತು ಹರವಿ ಹಾಲಿನೊಳಗೆ ಒಂದು ಹರವಿ ನೀರು ಬೆರೆದರೆ ಭೇದವಿಲ್ಲದಂತೆ ಕೂಡಿ ಹೋಗತ್ತದೆ ಎಂದು ಎಣಿಸಿ ನೀರನ್ನು ತಂದು ಸುರಿದೆನು ಅಂದನು. ತರುವಾಯ ಇವನನ್ನು ಬೇರೆ ಇರಿಸಿ ಉಳಿದವರನ್ನು ಒಬ್ಬೊಬ್ಬರನ್ನಾಗಿ ಕರಿಸಿ ವಿಚಾರಿಸುವಲ್ಲಿ ಎಲ್ಲರೂ ಮೊದಲಿನವನು ಹೇಳಿದ ಹಾಗೆಯೇ ಹೇಳಿದರು. ಆಗ ದೊರೆಯು ಇದಕ್ಕಾಗಿ ಸಂತೋಷಪಟ್ಟು ಮಂತ್ರಿಗೂ ಆ ಇಪ್ಪತ್ತು ಜನಕ್ಕೂ ಬಹುಮಾನವನ್ನು ಮಾಡಿ ಕಳುಹಿಸಿದನು.

———

16. THE MERCHANT, BRAHMAN, AND LOST PURSE.

೧೬. ಕೋಮಟಿ ಬ್ರಾಹ್ಮಣ ಇವರ ಗಂಟು ವ್ಯಾಜ್ಯವು.

ವಿಜಯನಗರದಲ್ಲಿ ಘಾತಕಸೆಟ್ಟಿ ಎಂಬ ಒಬ್ಬ ಕೋಮಟಿಗನಿದ್ದನು. ಆತನು ವ್ಯಾಪಾರಕ್ಕಾಗಿ ನೂರು ವರಹಗಳನ್ನು ಗಂಟು ಕಟ್ಟಿಕೊಂಡು ತನ್ನೂರಿಂದ ಹೊರಟು ಸ್ವಲ್ಪ ದೂರ ಪ್ರಯಾಣವನ್ನು ಮಾಡಿ ಹೀಗೆ ಹೋಗುತ್ತಾ ಇರಲು ಒಂದು ದಿನ ದಾರಿಯಲ್ಲಿ ಸಿಕ್ಕಿದ ಸತ್ಯಶೀಲನೆಂಬ ಒಬ್ರು ಬ್ರಾಹ್ಮಣನೊಡನೆ ಅಕಾರಣವಾಗಿ ಜಗಳವಾಡಿಕೊಂಡು ಸಮೀಪದಲ್ಲಿ ಇರುವ ಪಟ್ಟಣಕ್ಕೆ ಹೋಗಿ ಅಲ್ಲಿನ ದೊರೆಯ ಮುಂಗಡೆಯಲ್ಲಿ ತನ್ನ ನೂರು ವರಹದ ಗಂಟನ್ನು ಇಟ್ಟು ಹೇಳಿಕೊಂಡುದು ಏನಂದರೆ—ಸ್ವಾಮಿ! ನನ್ನ ಊರಿಂದ ವ್ಯಾಪಾರಕ್ಕೋಸ್ಕರ ಇನ್ನೂರು ವರಹಗಳನ್ನು ಗಂಟು ಕಟ್ಟಿ ತೆಗೆದುಕೊಂಡು ಹೊರಟು ಈ ಊರಿಗೆ ಒಂದು ಹರದಾರಿಯಲ್ಲಿರುವ ನದಿಯ ಬಳಿಗೆ ಬಂದು—ಅಲ್ಲಿ ಸ್ನಾನವನ್ನು ಮಾಡಿ ಬುತ್ತಿಯ ಅನ್ನವನ್ನು ತಿಂದು ರಾತ್ರಿಗೆ ಪಟ್ಟಣಕ್ಕೆ ಹೋಗಿ ಇಳಿದುಕೊಳ್ಳಬೇಕು ಎಂದು ಯೋಚಿಸಿ ಗಂಟನ್ನು ನದಿಯ ಮರಳಿನ ಮೇಲೆ ಇರಿಸಿ ಅದರ ಮೇಲೆ ನನ್ನ ಜೊಗೆ ರುಮಾಲು ಹಸಿಬೆಯ ಚೀಲ ಇವುಗಳನ್ನು ಇರಿಸಿ ಹೊಳೆಯಲ್ಲಿ ಸ್ನಾನವನ್ನು ಮಾಡಿ ಬುತ್ತಿಯ ಅನ್ನವನ್ನು ಉಂಡು ಸಾಮಾನುಗಳನ್ನೆಲ್ಲಾ ತೆಗೆದುಕೊಂಡು ನನ್ನ ಗಂಟನ್ನು ಮಾತ್ರ ಅಲ್ಲಿಯೇ ಮರೆತು ಅರ್ಧ ಮೈಲಿ ದೂರ ಬಂದು ನೆನಸಿಕೊಂಡು ತಿರುಗಿ ಹೊಳೆಯ ಬಳಿಗೆ ಓಡಿಹೋಗುತ್ತಾ ಇರುವಾಗ ದಾರಿಯಲ್ಲಿ ಮೋಸಗಾರನಾದ ಈ ಹಾರುವನು ನನ್ನ ಎದುರಿಗೆ ಸಿಕ್ಕಿದನು ನಾನು ಈತನನ್ನು ಕುರಿತು—ನೀವು ಹೊಳೆಯಲ್ಲಿ ಇಳಿದು ಬಂದಿರಾ? ನಿಮಗೆ ಒಂದು ಗಂಟು ಸಿಕ್ಕಿತೇ? ಅದು ಸಿಕ್ಕಿ ಇದ್ದರೆ ಕೊಡಿ; ಕೊಟ್ಟರೆ ನಿಮಗೆ ಹತ್ತು ವರಹಗಳನ್ನು ಕೊಡುತ್ತೇನೆಂದು ಒಹಳ ದೀನವಾಗಿ ಕೇಳಿದುದಕ್ಕೆ ನನ್ನ ಇನ್ನೂರುವರಹದ ಗಂಟನ್ನು ಕೊಡದೆ ಇದೋ! ಈ ನೂರು ವರಹದ ಗಂಟು ಕೊಟ್ಟು ಇದ್ದಾನೆ ಎಂದು ಹೇಳಲು ಅರಸು ಆ ಬ್ರಾಹ್ಮಣನನ್ನು ಕುರಿತು—ಈ ವಿಚಾರವೇನೆಂದು ಕೇಳಲು ನಾನು ಆ ಹೊಳೆಯಲ್ಲಿ ಸ್ನಾನಕ್ಕೆ ಇಳಿದಾಗ ಮರಳಿನಲ್ಲಿ ಈ ಗಂಟು ಸಿಕ್ಕಿತು. ಯಾರು ಮರೆತು ಹೋದರೋ? ಎಷ್ಟು ವ್ಯಸನಪಡುವರೋ? ಎಂದು ಇದನ್ನು ಬಿಚ್ಚಿನೋಡದೆಯೇ ನಾನು ತೆಗೆದುಕೊಂಡು ಬರುತ್ತಿರುವ ದಾರಿಯಲ್ಲಿ ಈ ವರ್ತಕನು ಅಳುತ್ತಾ ಕರೆಯುತ್ತಾ ಓಡಿಬಂದು ಕೇಳಿದುದರಿಂದ ಇದು ಇವನದೇ ಎಂದು ನಿಶ್ಚಯಿಸಿ ಆ ಗಂಟನ್ನು ಇವನಿಗೇ ಕೊಟ್ಟುಬಿಟ್ಟೆನು ಅಂದನು. ಆ ಮೇಲೆ ಅರಸು ಒಂದು ಗಳಿಗೆಯ ವರೆಗೂ ಯೋಚಿಸಿ ಕೋಮಟಿಗನನ್ನು ಕುರಿತು—ಈ ನೂರು ವರಹದ ಗಂಟು ನಿನ್ನದಲ್ಲವೋ? ಎಂದು ಕೇಳಲು ಅವನು ಅದಕ್ಕೆ—ಸ್ವಾಮಿ! ಇದಲ್ಲ; ನನ್ನದು ಇನ್ನೂರು ವರಹದ ಗಂಟು ಎಂದು ಹೇಳಿದನು. ಆಗ ಅರಸು ಕೊತ್ತವಾಲನನ್ನು ಕರಿಸಿ—ಈ ಕೋಮಟಿಗನು ಇನ್ನೂರು ವರಹದ ಗಂಟನ್ನು ಹೊಳೆಯಲ್ಲಿ ಮರೆತು ಬಂದು ಇದ್ದಾನೆ. ಅದು ಯಾರಿಗೆ ಸಿಕ್ಕಿತೆಂದು ಕೊಟ್ಟರೆ ಅವರಿಗೆ ಇನಾಮು ಕೊಡಿಸುತ್ತೇವೆ ಎಂದು ಸಾರಿಸುವ ಹಾಗೆ

ಅಪ್ಪಣೆ ಕೊಟ್ಟು ಕಳುಹಿಸಲು ಅವನು ಅದೇ ಪ್ರಕಾರ ಮಾಡಿದನು. ಅರಸು ಬ್ರಾಹ್ಮಣನನ್ನು ಕರೆದು ಈ ಗಂಟು ಇವನದಲ್ಲವಂತೆ; ನಿನ್ನ ಪುಣ್ಯದಿಂದ ಇದು ನಿನಗೆ ಸಿಕ್ಕಿತು; ನೀನೇ ತೆಗೆದುಕೊಂಡು ಹೋಗು ಎಂದು ಅದನ್ನು ಅವನಿಗೆ ಕೊಟ್ಟು ಕಳುಹಿಸಿ ಆಮೇಲೆ ಆ ಕೋಮಟಿಗನಿಗೆ—ನಿನ್ನ ಗಂಟು ಸಿಕ್ಕುವ ವರೆಗೂ ನೀನು ಈ ಪಟ್ಟಣದಲ್ಲಿಯೇ ಕಾದು ಇರಬೇಕೆಂದು ಹೇಳಿ ಕಳುಹಿಸಿದನು. ಆಗ ಕೋಮಟಿಗನು—ಕೆಟ್ಟೆನಲ್ಲಾ! ಇನ್ನೇನುಗತಿ? ಎಂದು ಬ್ರಾಹ್ಮಣನ ಬಳಿಗೆ ಬಂದು ಅಡ್ಡಬಿದ್ದು ಅವನಿಗೆ ಇಪ್ಪತ್ತು ವರಹಗಳನ್ನು ಕೊಟ್ಟು ತನ್ನ ಗಂಟನ್ನು ತೆಗೆದುಕೊಂಡು ಹೋದನು.

---

17. THE VAIN JACKAL.

೧೭. ಹೆಮ್ಮೆಬಂದ ನರಿಯು.

ಜಂಬೂವನದಲ್ಲಿ ಶೀಘ್ರಬುದ್ಧಿ ಎಂಬ ಒಂದು ನರಿಯು ಆಹಾರಾರ್ಥವಾಗಿ ಸಂಚರಿಸುತ್ತಾ ಸಂಜೆಯ ವೇಳೆಯಲ್ಲಿ ನೀಲಿಯನ್ನು ಮಾಡುವ ಒಬ್ಬ ಸಾಹುಕಾರನ ನೀಲಿಯ ಕಾರುಖಾನೆಯೊಳಗೆ ಹೊಕ್ಕು ಅಲ್ಲಿರುವ ನೀಲಿಯ ಗುಡಾಣದಲ್ಲಿ ಬಿದ್ದು ಮೇಲಕ್ಕೆ ಏಳುವುದಕ್ಕೆ ಚೈತನ್ಯವಿಲ್ಲದೆ ಬೆಳಿಗ್ಗೆ ಸಾಹುಕಾರನು ಅಲ್ಲಿಗೆ ಬರುವ ಹೊತ್ತಿನಲ್ಲಿ ಹೊಟ್ಟೆಯನ್ನು ಉಬ್ಬಿಸಿಕೊಂಡು ಹಲ್ಲುಗಳನ್ನು ಕಿರಿದುಕೊಂಡು, ಸತ್ತ ಹಾಗೆ ಕಾಣಿಸಿಕೊಂಡು ಬಿದ್ದಿತ್ತು. ಅದನ್ನು ಸಾಹುಕಾರನು ನೋಡಿ ತನ್ನ ಆಳುಗಳಿಂದ ದೂರಕ್ಕೆ ಎತ್ತಿ ಹಾಕಿಸಿದನು ತರುವಾಯ ಅದು ತನ್ನ ಮೈ ಬಳಿವು ಬಣ್ಣವು ಹೋಗಿ ನೀಲಿಯ ಬಣ್ಣವಾಗಿರುವುದನ್ನು ನೋಡಿ ಇದರಿಂದ ಒಂದು ಯುಕ್ತಿಯನ್ನು ಮಾಡಿ ಎಲ್ಲಾ ಮೃಗಗಳಿಂದಲೂ ಪ್ರತಿಷ್ಠೆಯನ್ನು ಹೊಂದಬೇಕೆಂದೆಣಿಸಿ ನರಿಗಳ ಗುಂಪನ್ನು ಸೇರಿ ಅವುಗಳನ್ನು ಕುರಿತು—ಎಲೈ ನರಿಗಳಿರಾ! ಇನ್ನು ಮೇಲೆ ನೀವು ನನ್ನನ್ನು ಮೊದಲಿನಂತೆ ತಿಳಿಯಬೇಡಿರಿ. ನಿನ್ನೆಯ ರಾತ್ರಿಯಲ್ಲಿ ಈ ವನದೇವತೆಯು ನನ್ನಲ್ಲಿ ದಯೆಯುಳ್ಳವಳಾಗಿ ಸಮಸ್ತವನೌಷಧಿರಸಗಳಿಂದ ತನ್ನ ಕೈಯಿಂದಲೇ ನನಗೆ ಈ ವನರಾಜ್ಯಕ್ಕೆ ಪಟ್ಟಾಭಿಷೇಕವನ್ನು ಮಾಡಿದುದರಿಂದ ಇದೋ ನೋಡಿರಿ! ನನ್ನ ಮೈಯೆಲ್ಲಾ ನೀಲಿಯ ಬಣ್ಣವಾಗಿದೆ; ಇನ್ನುಮೇಲೆ ನೀವೆಲ್ಲರೂ ನನ್ನನ್ನು ಅರಸನೆಂದು ಓಲೈಸಿರಿ ಎಂದು ಹೇಳಲು ಆ ನರಿಗಳೆಲ್ಲಾ ತಮ್ಮ ಜಾತಿಯವನು ಅರಸನಾದರೆ ತಮಗೂ ಒಳ್ಳೆಯದೆಂದು ಎಣಿಸಿ ಹಾಗೆಯೇ ಮಾಡುತ್ತಾ ಇದ್ದುವು. ಕೆಲವು ದಿನಗಳ ಮೇಲೆ ಈ ಸುದ್ದಿಯನ್ನು ಕೇಳಿ ಹುಲಿ ಸಿಂಹ ಮುಂತಾದ ಸರ್ವಮೃಗಗಳೂ ಈ ನರಿಯ ಬಳಿಗೆ ಬಂದು ಇದನ್ನು ನೋಡಿ ಇದು ವಿಜಾತೀಯ ಮೃಗವು; ಇದಕ್ಕೆ ವನದೇವತೆಯು ಪಟ್ಟಾಭಿಷೇಕವನ್ನು ಮಾಡಿರಬಹುದೆಂದು ನಿಶ್ಚಯಿಸಿ ಅವುಗಳೂ ಈ ನರಿಯನ್ನು ಓಲೈಸುತ್ತಾ ಬಂದುವು. ಆಗ ಈ ನರಿಯು ತನ್ನನ್ನು ಅನ್ಯಜಾತಿಯ ದೊಡ್ಡ ದೊಡ್ಡ ಮೃಗಗಳೆಲ್ಲಾ ಓಲೈಸುತ್ತವೆ ಎಂಬ ಗರ್ವದಿಂದ ತನ್ನ ಜಾತಿಯ ನರಿಗಳನ್ನು ತಿರಸ್ಕರಿಸುತ್ತಾ ಬಂದಿತು. ಅದನ್ನು ನೋಡಿ ನರಿಗಳೆಲ್ಲಾ ಯೆ

ಮಾಡುತ್ತಾ ಇರುವಲ್ಲಿ ಒಂದು ಮುದಿನರಿಯು ಅವುಗಳನ್ನು ಕುರಿತು ಹೇಳಿದುದೇ ನಂದರೆ—ಲೋಕದಲ್ಲಿ ಯಾವ ಅರಸು ಸ್ವಂತಜನರಲ್ಲಿ ವಿರೋಧವನ್ನು ಬೆಳಸುವನೋ ತನಗಿಂತ ಬಲಿಷ್ಠನಲ್ಲಿ ಜಗಳವನ್ನು ಮಾಡುವನೋ ಮತ್ತು ರಾಜನೀತಿಗೆ ತಕ್ಕುದಲ್ಲದ ಕೆಲಸವನ್ನು ಮಾಡುವನೋ ಅಂಧವನಿಗೆ ಬೇಗ ಕೇಡು ಉಂಟಾಗುವುದು. ಇದು ಸಿದ್ಧವು. ಆದುದರಿಂದ ಇದರ ಹೆಮ್ಮೆಯನ್ನು ಮುರಿಯಬೇಕು. ನೀವೆಲ್ಲರೂ ಸಂಜೆಯ ವೇಳೆಯಲ್ಲಿ ಒಂದು ಕಡೆ ಗುಂಪು ಕೂಡಿ ಗಟ್ಟಿಯಾಗಿ ಬೊಗುಳಿರಿ ಎನ್ನಲು ಅವುಗಳು ಅದೇ ಪ್ರಕಾರವಾಗಿ ಬೊಗುಳಿದುವು. ಆಗ ಈ ನರಿಯೂ ಕೂಡಾ ಜಾತಿಸ್ವಭಾವದಿಂದ ಕೂಗಲು ಅಲ್ಲಿದ್ದ ಹುಲಿಯು—ಇದು ನರಿ ಎಂದು ಅರಿತು ಅದನ್ನು ಕೊಂದುಬಿಟ್ಟಿತು. ಆದಕಾರಣ ಸ್ವಜನರನ್ನು ತಿರಸ್ಕರಿಸುವುದರಿಂದ ಯಾರಿಗೂ ಒಳ್ಳೆಯದಾಗಲಾರದು.

---

18. SIVAPPANAIK AND THE JANGAMA.

೧೮. ಶಿವಪ್ಪನಾಯಿಕನು ಜಟ್ಟಿಗಳಿಂದ ಜಂಗಮನನ್ನು ತಿಕ್ಕಿಸಿದುದು.

ನಗರದ ಸಂಸ್ಥಾನದ ಶಿವಪ್ಪನಾಯಕನು ಚಾವಡಿಯಲ್ಲಿ ಕುಳಿತು ಆಡಳಿತವನ್ನು ಮಾಡುತ್ತಿರುವಾಗ ಪ್ರತಿದಿನದಲ್ಲಿಯೂ ಬೆಬ್ಬ ಜಂಗಮಯ್ಯನು ಬಂದು—ನಾವು ಕೈಲಾಸದಿಂದ ಬಂದೆವು ಅಲ್ಲಿ ಪಟ್ಟಿಯ ಮಂಚದ ಮೇಲೆ ಪಾರ್ವತಿಯೂ ಪರಮೇಶ್ವರನೂ ಪವಡಿಸಿದ್ದರು ವಿಷ್ಣುವು ಪರಮೇಶ್ವರನ ಕಾಲನ್ನು ಒತ್ತುತ್ತಿದ್ದನು; ಲಕ್ಷ್ಮಿಯು ಪಾರ್ವತಿಯಮ್ಮನವರ ಕಾಲೊತ್ತುತ್ತಿದ್ದಳು ಎಂದು ಹೇಳುತ್ತಾ ಇದ್ದನು. ಅರಸು ಇದನ್ನು ಸಹಿಸಲಾರದೆ ಒಂದು ದಿವಸ ಇಬ್ಬರು ಜಟ್ಟಿಗಳಿಗೆ ಗುಟ್ಟಾಗಿ ಕೆಲವು ಯುಕ್ತಿಗಳನ್ನು ಹೇಳಿಕೊಟ್ಟು ಅವರನ್ನು ಚಾವಡಿಯ ಅಟ್ಟದ ಮೇಲೆ ಕೂರಿಸಿದ್ದನು. ಆ ದಿವಸ ಆ ಜಂಗಮಯ್ಯನು ಬಂದು ಮೊದಲಿನಂತೆಯೇ ಹೇಳುತ್ತಿರುವಲ್ಲಿ ಮೈಮೊಗಗಳಿಗೆಲ್ಲಾ ನಾಮಗಳನ್ನು ಬರೆದುಕೊಂಡು ಕಂಠದಲ್ಲಿ ತುಲಸಿಯ ದಂಡೆಯನ್ನು ಹಾಕಿಕೊಂಡಿರುವ ಇಬ್ಬರು ಜಟ್ಟಿಗಳು ಅಟ್ಟದಿಂದ ಚಾವಡಿಗೆ ದುಮುಕಲು ಅರಸು ಎದ್ದು ಕೈಮುಗಿದು—ಸ್ವಾಮಿಗಳೇ! ಎಲ್ಲಿಂದ ಬಿಜಮಾಡಿದಿರಿ? ಎಂದು ಕೇಳಿದನು. ಅದಕ್ಕೆ ಅವರು—ನಾವು ವೈಕುಂಠದಿಂದ ಬಂದೆವು. ಅಲ್ಲಿ ಮಹಾವಿಷ್ಣುವೂ ಲಕ್ಷ್ಮೀದೇವಿಯೂ ಆದಿಶೇಷನ ಮೇಲೆ ಮಲಗಿದ್ದರು. ಶಿವನು ಮಹಾವಿಷ್ಣುವಿನ ಕಾಲುಗಳನ್ನೂ ಪಾರ್ವತಿಯು ಮಹಾಲಕ್ಷ್ಮೀದೇವಿಯರ ಕಾಲುಗಳನ್ನೂ ಒತ್ತುತ್ತಿದ್ದರು ಅಂದ ಕೂಡಲೇ ಆ ಒಡೆಯರಯ್ಯನು—ಇವರು ತುಂಟರು. ಸುಳ್ಳು ಹೇಳುತ್ತಾರೆ. ಎಲೋ, ಶಿವಗಾ! ಇವರನ್ನು ಚೆನ್ನಾಗಿ ದಂಡಿಸು ಅಂದನು. ಆಗ—ನಮ್ಮನ್ನು ತುಂಟರು ಅನ್ನುತ್ತೀಯಾ? ಎಂದು ಆ ಇಬ್ಬರು ಜಟ್ಟಿಗಳೂ ಬಂದು ಈ ಜಂಗಮನನ್ನು ಹಿಡುಕೊಂಡು ಗುದ್ದಿ ಗುದ್ದಿ ಹಿಂಸಿಸುತ್ತಾ ಇರಲು ಜಂಗಮಯ್ಯನು—ಲಾ, ಶಿವಗಾ! ಈ ವೈಕುಂಠದವರು ನಮ್ಮನ್ನು ಸಾಯುವಂತೆ ಬಡಿಯುತ್ತಾರಲ್ಲೋ! ನೀನು ನೋಡಿ ಕಂಡು ಸುಮ್ಮನೇ ಇದ್ದೀಯಾ? ಬಂದು ಬಿಡಿಸೋ!

ಎಂದು ಕೂಗುತ್ತಿರಲು ಶಿವಪ್ಪನಾಯಕನು—ಬುದ್ಧೀ! ಕೈಲಾಸದವರುಂಟು ವೈಕುಂಠದವರುಂಟು; ನಾನೇನು ಮಾಡಲಿ? ಅಂದನು. ಆಗ ಜಟ್ಟಿಗಳು ಆ ಜಂಗಮನನ್ನು ಗುದ್ದಿ ನೆಲಕ್ಕೆ ಕೆಡವಿ ಅರಸಿನ ಸಂಜ್ಞೆಯಿಂದ ಅವನನ್ನು ಬಿಟ್ಟುಬಿಟ್ಟರು. ಆ ದಿವಸಾರಭ್ಯ ಆ ಜಂಗಮಯ್ಯನು ಅಂಥಾ ಮಾತಾಡುವುದನ್ನು ಬಿಟ್ಟುಬಿಟ್ಟನು.

---

19. SHIVAPPANAIK CUTS OFF THE JANGAMA'S FEET.

೧೯. ಶಿವಪ್ಪನಾಯಕನು ಜಂಗಮನ ಪಾದಗಳನ್ನು ಕತ್ತರಿಸಿದುದು.

ನಗರ ಸಂಸ್ಥಾನದಲ್ಲಿ ಶಿವಪ್ಪನಾಯಕನೆಂಬ ಅರಸು ರಾಜ್ಯಭಾರವನ್ನು ಮಾಡಿಕೊಂಡು ಪಕ್ಷಪಾತವಿಲ್ಲದೆ ನ್ಯಾಯಾನ್ಯಾಯಗಳನ್ನು ವಿಚಾರಿಸಿ ಶಿಕ್ಷೆರಕ್ಷೆಗಳನ್ನು ಮಾಡುತ್ತಾ ಬಹಳ ಧರ್ಮಿಷ್ಠನಾಗಿದ್ದನು. ಅವನು ಶಿವಭಕ್ತನಾದುದರಿಂದ ಅವನ ದೇಶದಲ್ಲಿರುವ ಜಂಗಮರು ಅರಸು ನಮ್ಮ ಶಿಷ್ಯನಾಗಿದ್ದಾನೆಂಬ ಹೆಮ್ಮೆಯಿಂದ ಬ್ರಾಹ್ಮಣಾದಿ ಇತರ ಜಾತಿಯವರಿಗೆ ಅನ್ಯಾಯವಾಗಿ ಅವಮಾನ ಮಾಡುತ್ತಾ ಬಂದರು ಶಿವಪ್ಪನಾಯಕನು ಈ ದೂರನ್ನು ಬಹಳವಾಗಿ ಕೇಳಿ ಈ ಜಂಗಮರುಗಳ ಪುಂಡನ್ನು ನಿಲ್ಲಿಸಬೇಕೆಂದು ಮೊದಲೇ ಯೋಚಿಸಿಕೊಂಡು ಇದ್ದನು. ಹೀಗಿರುವಲ್ಲಿ ಒಂದು ದಿವಸ ದೇಶಾಂತರಿಯಾದ ಒಬ್ಬ ಬ್ರಾಹ್ಮಣನು ಅರಸಿನ ಬಳಿಗೆ ಬಂದು—ಅಯ್ಯಾ, ಅರಸನೇ! ಈ ಊರ ಹೊರಗಿನ ನಿನ್ನ ಪೂದೋಟದಲ್ಲಿ ಒಂದು ಕೊಳವು ತಿಳಿನೀರುಗಳಿಂದ ಕೂಡಿ ಮನಸ್ಸಿಗೆ ಪ್ರಶಸ್ತವಾಗಿದ್ದುದರಿಂದ ಅಲ್ಲಿ ಸ್ನಾನವನ್ನು ಮಾಡಿ ಸಾಲಗ್ರಾಮಪೂಜೆಯನ್ನು ಮಾಡುತ್ತಾ ಇದ್ದೆನು. ಆಲ್ಲಿಗೆ ಒಬ್ಬ ಜಂಗಮಯ್ಯನು ಬಂದು ನನ್ನ ಸಾಲಗ್ರಾಮಪೆಟ್ಟಿಗೆಗಳನ್ನು ಎತ್ತಿ ಬಾವಿಗೆ ಒಗೆದು ನನ್ನನ್ನು ಕಾಲಿನಿಂದ ಒದ್ದು ಕೆಡವಿದನು ಎಂದು ಹೇಳಿದುದನ್ನು ಕೇಳಿ ಶಿವಪ್ಪನಾಯಕನು ಬಹಳ ವ್ಯಸನಪಟ್ಟು ಆ ಬ್ರಾಹ್ಮಣನಿಗೆ ಧನಕನಕವಸ್ತ್ರಾಭರಣಗಳಿಂದ ಸನ್ಮಾನವನ್ನು ಮಾಡಿ ಅವನನ್ನು ಸಮಾಧಾನಪಡಿಸಿ ಕಳುಹಿಸಿಬಿಟ್ಟನು. ಆ ಬಳಿಕ ಒದ್ದ ಜಂಗಮಯ್ಯನು ಅರಸಿಗೆ ಮುಖ್ಯ ಗುರುವಾಗಿದ್ದುದರಿಂದ ತಾನು ಮಾಡಿದ ಕೆಲಸವನ್ನು ಹೇಳಿದರೆ ಸಂತೋಷಪಡುವನೆಂದು ಯೋಚಿಸಿಕೊಂಡು ಚಾವಡಿಗೆ ಬರಲು ಅರಸು ಎದ್ದು ಅಯ್ಯನ ಕಾಲಿಗೆ ಶರಣು ಮಾಡಿ ದೊಡ್ಡ ಗದ್ದುಗೆಯ ಮೇಲೆ ಆತನನ್ನು ಕೂರಿಸಿ ಮತ್ತೇನು ಬಿಜಮಾಡಿದ ಕಾರ್ಯ? ಎಂದು ಕೇಳಿದನು. ಆಗ ಜಂಗಮಯ್ಯನು—ಕೇಳೋ, ಶಿವಗಾ! ಈ ದಿನ ಮಧ್ಯಾಹ್ನದಲ್ಲಿ ಒಬ್ಬ ಹಾರುವ ಪರವಾದಿಯು ಬಂದು ನಮ್ಮ ಮಜ್ಜನದ ಬಾವಿಯನ್ನು ಮುಟ್ಟಿ ಅಶುಚಿಮಾಡಿ ಅದರ ಪಾವಟಿಗೆಯ ಮೇಲೆ ಕುಳಿತುಕೊಂಡು ಕರಿಯ ದುಂಡು ಕಲ್ಲುಗಳನ್ನು ಸಾಲಾಗಿ ಇಟ್ಟು ತುಲಸಿಯ ಸೊಪ್ಪಿನಿಂದ ಪೂಜಿಸುತ್ತಾ ಇರುವ ಸಮಯದಲ್ಲಿ ನಾವು ಹೋಗಿ ಆ ಕಲ್ಲುಗಳನ್ನೆಲ್ಲಾ ಬಾವಿಗೆ ಹಾಕಿ ಆ ಹಾರುವ ಪರವಾದಿಯನ್ನು ಜುಟ್ಟು ಹಿಡಿದು ಕೆಡವಿ ಎರಡು ಪಾದಗಳಿಂದಲೂ ಜೆನ್ನಾಗಿ ಪಾಲಿಸಿ ಆ ಮೇಲೆ ನಮ್ಮ ಜಳಕದ ಬಾವಿಯ ನೀರುಗಳನ್ನು ಹಾರುವ ಪರವಾದಿ

ಮುಟ್ಟಿ ಅಶುಚಿ ಮಾಡಿದ್ದ ಕಾರಣ ಆ ಹಳೆಯ ನೀರುಗಳನ್ನೆಲ್ಲಾ ಯಾತದಿಂದ ಮೇಲಕ್ಕೆ ಎತ್ತಿ ಸುರಿಸಿ ಹೊಸದಾಗಿ ಬಂದ ನೀರಿಗೆ ಸಂಪ್ರೋಕ್ಷಣೆಯನ್ನು ಮಾಡಿ ಶುದ್ಧಿ ಮಾಡಿದೆವು ಎಂದು ಹೇಳಿದನು. ಆಗ ಶಿವಪ್ಪನಾಯಕನು—ಬುದ್ಧೀ ಬುದ್ಧೀ! ಬಹಳ ಒಳ್ಳೆಯ ಕೆಲಸವನ್ನು ಮಾಡಿದಿರಿ! ಆದರೆ ಹಾರುವ ಪರವಾದಿಯನ್ನು ಮುಟ್ಟಿ ಅಶುಚಿಯಾದ ತಮ್ಮ ಪಾದಗಳಿಗೆ ತಮ್ಮ ಶಿಷ್ಯನಾದ ನಾನು ಶರಣುಮಾಡಿದರೆ ಕೆಟ್ಟು ಹೋಗುವೆನೆಲ್ಲವೋ? ಎಂದು ಹೇಳಿ ತನ್ನ ಕೈಯ್ಯಲ್ಲಿ ಇದ್ದ ಕತ್ತಿಯಿಂದ ಆ ಜಂಗಮಯ್ಯನ ಎರಡು ಹೆಜ್ಜೆಗಳನ್ನೂ ಕತ್ತರಿಸಿಬಿಟ್ಟನು. ಆಗ ಜಂಗಮರೆಲ್ಲಾ ಆ ಸುದ್ದಿಯನ್ನು ಕೇಳಿ ಭಯಸ್ಥರಾಗಿ ಹೆಮ್ಮೆ ಮುರಿದು ನ್ಯಾಯದಿಂದ ನಡೆದುಕೊಳ್ಳುತ್ತಾ ಬಂದರು.

---

20. THE LARK AND THE ELEPHANT.

೨೦. ಟಿಟ್ಟಿಭವೂ ಆನೆಯೂ.

ಕಾರ್ಮುಕವೆಂಬ ನದಲ್ಲಿ ವಿನಾಡಿಕವೆಂಬ ಟಿಟ್ಟಿಭವು ನೆಲದಲ್ಲಿ ಗೂಡು ಮಾಡಿಕೊಂಡು ಆ ಗೂಡಿನಲ್ಲಿ ತತ್ತಿಗಳನ್ನು ಇಟ್ಟುಕೊಂಡು ಸುಖದಿಂದ ಇರಲು ಒಂದು ದಿನ ಆ ಮಾರ್ಗವಾಗಿ ಮದಿಸಿದ ಒಂದು ಆನೆಯು ಹೋಗುತ್ತಾ ಆ ತತ್ತಿಗಳನ್ನು ತುಳಿಯಿತು. ಆಗ ಟಿಟ್ಟಿಭನು ಅತಿದುಃಖದಿಂದ ಆ ಮದದಾನೆಯ ಬಳಿಗೆ ಹೋಗಿ—ಎಲೋ ಗಜರಾಜಾ! ನೀನು ಈ ಪ್ರಕಾರವಾಗಿ ನನ್ನ ತತ್ತಿಗಳನ್ನು ತುಳಿಯಬಹುದೋ? ಎನಲು ಆ ಗಜವು—ನಾನು ತಿಳಿಯದೆ ನಿನ್ನ ತತ್ತಿಗಳನ್ನು ತುಳಿದೆನು. ಇನ್ನು ಮೇಲೆ ಈ ಪ್ರಕಾರವಾಗಿ ನಿನಗೆ ದ್ರೋಹವನ್ನು ಮಾಡುವುದಿಲ್ಲ ಎಂದು ನಂಬಿಕೆಯನ್ನು ಕೊಟ್ಟು ಅದನ್ನು ಕಳುಹಿಸಿತು. ಆ ಟಿಟ್ಟಿಭನು ಕೆಲವು ದಿನಗಳ ತರುವಾಯ ಪುನಃ ತತ್ತಿಗಳನ್ನು ಇಟ್ಟಿರಲು ಆ ಗಜವು ಅದೇ ಮಾರ್ಗದಲ್ಲಿ ಬರುತ್ತಾ ಕೊಟ್ಟನಂಬಿಕೆಯನ್ನು ಮರೆತು ಬಿಟ್ಟು ತಿರಿಗಿ ಅದರ ತತ್ತಿಗಳನ್ನು ತುಳಿಯಿತು. ಆಗ ಟಿಟ್ಟಿಭನು—ಈ ಆನೆಯಿಂದ ನನ್ನ ಸಂತತಿಯು ಅಭಿವೃದ್ಧಿಯಾಗುವುದಿಲ್ಲ ಎಂದು ಭಾವಿಸಿ ಮಹಾಕೋಪದಿಂದ—ಪೂರ್ವದಲ್ಲಿ ಕಾಗೆಯು ಸರ್ಪವನ್ನು ಕೊಲ್ಲಿಸಿದ ಪ್ರಕಾರ ಈ ಆನೆಯನ್ನು ಕೊಲ್ಲಿಸಬೇಕೆಂದು ಯೋಚಿಸಿ ತನ್ನ ಸ್ನೇಹಿತನಾದ ಮಂಡೂಕನ ಬಳಿಗೆ ಬಂದು ಅವನಿಗೆ ಈ ವಿವರವನ್ನು ಹೇಳಲು ಆ ಮಂಡೂಕವು ತನ್ನ ಸ್ನೇಹಿತರಾದ ವಾಯಸಮಕ್ಷಿಕಗಳನ್ನು ಕರಿಸಿಕೊಂಡು ಆಲೋಚನೆಯನ್ನು ಮಾಡಿ ಆಮೇಲೆ ಟಿಟ್ಟಿಭನೊಡನೆ ಕೂಡಿ ತಂತ್ರಯುಕ್ತನೆಂಬ ಜಂಬುಕರಾಜನ ಬಳಿಗೆ ಬಂದು ಅವನಿಗೆ ವಂದನೆಯನ್ನು ಮಾಡಿ ಟಿಟ್ಟಿಭದ ಗತಿಯನ್ನು ಹೇಳಿ—ಇದಕ್ಕೆ ತಕ್ಕ ಯೋಚನೆ ಯಾವುದು? ಎಂದು ಕೇಳಿತು. ಆ ಜಂಬುಕವು ಒಂದು ಕುಹಕವನ್ನು ನೆನೆದು ವಾಯಸವನ್ನು ನೋಡಿ—ನೀನು ಹೋಗಿ ಆನೆಯ ಮೇಲೆ ಕುಳಿತುಕೊಂಡು ಅದರ ಶರೀರದ ತೀಟೆ ಹೋಗುವಹಾಗೆ ಕಾಲಿನಿಂದ ತುರಿಸುತ್ತಾ ನರ ಎರಡು ಕಣ್ಣುಗಳನ್ನೂ ತೆಗೆದು ಬಾ ಎಂದು ಹೇಳಲು ಅದು—ಒಳ್ಳೆಯದೆಂದು ುದೋನ್ಮತ್ತವಾಗಿರುವ ಆ ಆನೆಯಸಮೀಪಕ್ಕೆ ಅತಿವೇಗದಿಂದ ಬಂದು ಅದರ

ಮೇಲೆ ಕುಳಿತು ಶರೀರವನ್ನು ತುರಿಸುತ್ತಾ ಇರಲು ಆ ಗಜವು ಶರೀರವನ್ನು ತಿಳಿಯದೆ ಪರವಶತೆಯಿಂದ ಇರುವ ವೇಳೆಯಲ್ಲಿ ಅದರ ಎರಡು ಕಣ್ಣುಗಳನ್ನು ತಿವಿದು ಬಂದಿತು. ಆಗ ಮಕ್ಷಿಕನನ್ನು ಕರೆದು—ನಿನ್ನ ಸಮೂಹದ ಕೂಡ ಹೋಗಿ ಅದರ ಶರೀರದ ರಕ್ತವನ್ನೆಲ್ಲಾ ಕುಡಿ ಎಂದು ಹೇಳಿ ಕಳುಹಿಸಲು ಅದು ಹಾಗೆಯೇ ಮಾಡಿತು. ಆ ಮೇಲೆ ಕಪ್ಪೆಯನ್ನು ಕರೆದು—ನೀನು ಹಾಳುಬಾವಿಯಲ್ಲಿ ನಿನ್ನ ಸಮೂಹದೊಡನೆ ಕೋಲಾಹಲಧ್ವನಿಯನ್ನು ಮಾಡಿಕೊಂಡು ಇರು ಎಂದು ಹೇಳಿ ಕಳುಹಿಸಿ ತಾನು ತನ್ನ ಕುಲಕೋಟಿಯನ್ನು ಕರೆದುಕೊಂಡು ಹೋಗಿ ಸಿದ್ಧವಾಗಿ ಕಾದು ಇರಲು ಆ ಮದಗಜವು ಕಣ್ಣುಕಾಣದೆ ಸೊಣದ ಕಾಟಗಳಿಂದ ತೊಳಲಿಬಳಲಿ ದಾವರಗೊಂಡು ಕಪ್ಪೆಯ ಧ್ವನಿಯನ್ನು ಕೇಳಿ ಇದು ಉದಕವಿರುವ ಸ್ಥಳವೆಂದು ನೆನಸಿ ಬಂದು ಆ ಹಾಳುಬಾವಿಯಲ್ಲಿ ಬೀಳಲು ಆಗ ಆ ಜಂಬುಕಗಳು ಕಟ್ಟಿಗೆ ಸೊಪ್ಪು ಕಲ್ಲು ಮುಳ್ಳುಗಳನ್ನು ತಂದು ಅದರಲ್ಲಿ ಹಾಕಿ ಬೆಂಕಿಯನ್ನು ಹತ್ತಿಸಲು ಆನೆಯು ಅಲ್ಲೇ ಮೃತವಾಯಿತು.

---

21. THE TWO MERCHANTS.

೨೧. ಇಬ್ಬರು ವರ್ತಕರು.

ಶಯ್ಯಾವತಿ ಎಂಬ ಪಟ್ಟಣದಲ್ಲಿ ವಿವೇಕದರ್ಪಣನೆಂಬ ವರ್ತಕನು ಇದ್ದನು. ಅವನು ಕಬ್ಬಿಣದ ಪಾಳುಗಳನ್ನು ಹೇರುಗಳಲ್ಲಿ ತುಂಬಿಕೊಂಡು ಕಳಾವತಿ ಎಂಬ ಪಟ್ಟಣಕ್ಕೆ ಹೋಗಿ ವಿಚಾರಿಸಲು ಅಲ್ಲಿ ಕಬ್ಬಿಣವು ಬಹಳ ಅಗ್ಗವಾಗಿದ್ದಿತು; ಈಗ ಮಾರಿದರೆ ಮೂಲಧನವೇ ಮುಣಿಗೀತು ಎಂದು ಯೋಚಿಸಿ ಆ ಕಬ್ಬಿಣದ ಹೇರುಗಳನ್ನು ಅದೇ ಪಟ್ಟಣದಲ್ಲಿರುವ ಕ್ರೂರವರ್ಮನೆಂಬ ವರ್ತಕನ ಮನೆಯಲ್ಲಿ ಹಾಕಿ ಆ ಸ್ಥಳಕ್ಕೆ ಬಾಡಿಗೆಯನ್ನು ನಿರ್ಣಯಮಾಡಿ ಅದನ್ನು ಅವನಿಗೆ ಕೊಟ್ಟು ತಿರಿಗಿ ತನ್ನ ಪಟ್ಟಣಕ್ಕೆ ಹೋದನು. ಹೀಗೆ ಕೆಲವು ದಿವಸಗಳು ಕಳೆದ ಮೇಲೆ ಕಬ್ಬಿಣವು ತಗ್ಗಾಗಿ ಗಿರಾಕಿಗಳು ಬಹಳವಾಗಿ ಬರಲು ಈ ಕ್ರೂರವರ್ಮನು ಆ ಕಬ್ಬಿಣವನ್ನು ಮಾರಿ ಹಣವನ್ನು ಇಟ್ಟುಕೊಂಡು ಏನೂ ಅರಿಯದವನ ಹಾಗೆ ಇದ್ದನು. ಕೆಲವು ದಿನಗಳ ಮೇಲೆ ಆ ವಿವೇಕದರ್ಪಣನು ಬಂದು ಇಟ್ಟಿದ್ದ ಕಡೆಯಲ್ಲಿ ತನ್ನ ಕಬ್ಬಿಣವನ್ನು ಕಾಣದೆ ಕ್ರೂರವರ್ಮನ ಬಳಿಗೆ ಬಂದು—ನನ್ನ ಕಬ್ಬಿಣವೇನಾಯಿತೆಂದು ಕೇಳಿದನು. ಅದಕ್ಕೆ ಆ ವರ್ತಕನು—ನೀನು ಹೋಗಿ ಬಹಳ ದಿವಸಗಳಾದ ಕಾರಣ ಉತ್ಪಾತವಾದ ಇಲಿಗಳು ಬಂದು ಕಬ್ಬಿಣವೆಲ್ಲವನ್ನೂ ತಿಂದು ಹೋದವು ಎನ್ನಲು ಆ ವಿವೇಕದರ್ಪಣನು ಅವನ ಸಂಗಡ ವ್ಯವಹಾರವನ್ನಾಡದೆ—ಅದು ನನಗೆ ಲಭ್ಯವಿಲ್ಲದಕಾರಣ ಹೋಯಿತೆಂದು ಹೇಳಿ ಅವನಲ್ಲಿ ಮತ್ತೂ ಹೆಚ್ಚಾಗಿ ಸ್ನೇಹವನ್ನು ಬಳಸಿಕೊಂಡು ಇದ್ದು ಒಂದಾನೊಂದು ದಿನ ಆ ವರ್ತಕನ ಮಗನನ್ನು ತನ್ನ ಸಂಗಡ ಕರೆದುಕೊಂಡು ಹೋಗಿ ಅವನಿಗೆ ಆಪ್ತನಾದ ಒಬ್ಬ ವರ್ತಕನ ಮನೆಯಲ್ಲಿ ಆ ಹುಡುಗನನ್ನು ಇರಿಸಿ ಸಾಯಂಕಾಲದ ವೇಳೆಯಲ್ಲಿ ಬಳಲುತ್ತಾ ಒಬ್ಬನೇ ಈ ವರ್ತಕನ ಮನೆಗೆ ಬಂದನು.

ವರ್ಮನು ವಿವೇಕದರ್ಪಣನನ್ನು ನೋಡಿ—ಚಿಕ್ಕವನು ಎಲ್ಲಿ? ಎಂದು ಕೇಳಲು ಆ ವರ್ತಕನು ಖಿನ್ನನಾಗಿ —ಅಯ್ಯಾ, ಕ್ರೂರವರ್ಮನೇ! ನಾನು ಮಾಡಿದ ಕಾರ್ಯವನ್ನು ಏನೆಂದು ಹೇಳಲಿ! ನಾನು ನಿನ್ನ ಹುಡುಗನನ್ನು ಕರೆದುಕೊಂಡು ತಟಾಕದ ತಡಿಯಲ್ಲಿ ಕುಳ್ಳಿರಿಸಿ ತಟಾಕದೊಳಗೆ ಮುಖಮಜ್ಜನವನ್ನು ಮಾಡುತ್ತಿರಲು ಒಂದು ಉತ್ಪಾತವಾದ ಹದ್ದು ಬಂದು ನಿನ್ನ ಸುಕುಮಾರನನ್ನು ಎತ್ತಿಕೊಂಡು ಹೋಯಿತು ಅಂದನು. ಕ್ರೂರವರ್ಮನು ಕೇಳಿ ಆಗ್ರಹಪಟ್ಟು ಆ ವರ್ತಕನ ಸೆರಗನ್ನು ಹಿಡಿದು ಎಳೆದುಕೊಂಡು ಹೋಗಿ ಅಧಿಕಾರಿಗಳ ಮುಂದೆ ನಿಲ್ಲಿಸಲು ಸಭೆಯವರು ವಿವೇಕದರ್ಪಣನನ್ನು ನೋಡಿ—ನಿನ್ನ ನ್ಯಾಯವೇನೆಂದು ಕೇಳಲು ಅವನು—ಸ್ವಾಮಿ! ನಾನು ಈ ವರ್ತಕನ ಮಗನನ್ನು ಕರೆದುಕೊಂಡು ಹೋಗಿ ಕೆರೆಯ ತಡಿಯಲ್ಲಿ ಕುಳ್ಳಿರಿಸಿ ಮುಖಮಜ್ಜನವನ್ನು ಮಾಡಿಕೊಳ್ಳುತ್ತಿರುವ ಸಮಯದಲ್ಲಿ ಒಂದು ಉತ್ಪಾತವಾದ ಹದ್ದು ಬಂದು ಆ ಹುಡುಗನನ್ನು ಎತ್ತಿಕೊಂಡು ಹೋಯಿತು ಎನ್ನಲು ಆ ಸಭೆಯವರೆಲ್ಲರೂ ವರ್ತಕನನ್ನು ಜರಿದು—ಮನುಷ್ಯರನ್ನು ಹದ್ದು ಎತ್ತಿಕೊಂಡು ಹೋಗುವುದುಂಟೇ? ಎಂದು ಕೇಳಲು ಅವನು—ಎಲೈ ಧರ್ಮಾತ್ಮರುಗಳಿರಾ! ಮನುಷ್ಯರನ್ನು ಹದ್ದು ಎತ್ತಿಕೊಂಡು ಹೋಗುವುದುಂಟೇ? ಎಂದು ಕೇಳಿದಿರಾ? ಇಲಿಗಳು ಕಬ್ಬಿಣವನ್ನು ತಿನ್ನುವುದುಂಟೋ? ವಿಚಾರಿಸಿರಿ ಎನ್ನಲು ಅವನ ಉಪಾಯಕ್ಕೆ ಮೆಚ್ಚಿ ಸಭೆಯವರು ವಿಚಾರದಿಂದ ಕ್ರೂರವರ್ಮನನ್ನು ದಂಡಿಸಿ ಆ ಕಬ್ಬಿಣವನ್ನು ಮಾರಿದ ಹಣವನ್ನೂ ಅವರೆಗೆ ಆದ ಬಡ್ಡಿಯನ್ನೂ ವಿವೇಕದರ್ಪಣನಿಗೆ ಕೊಡಿಸಿ ಹುಡುಗನನ್ನು ಕರತರಿಸಿ ಕ್ರೂರವರ್ಮನ ವಶಕ್ಕೆ ಕೊಡಿಸಿ ಇಬ್ಬರನ್ನೂ ಕಳುಹಿಸಿಬಿಟ್ಟರು.

---

22. THE EVIL OF BAD COMPANY.

೨೨. ದುಸ್ಸಹವಾಸ ದೋಷ.

ಬ್ರಹ್ಮಪುರವೆಂಬ ಅಗ್ರಹಾರದಲ್ಲಿರುವ ಪುಣ್ಯಶೀಲನೆಂಬ ಬ್ರಾಹ್ಮಣನ ಬಳಿಯಲ್ಲಿ ಒಂದು ಆಕಳು ಇದ್ದಿತು. ಅದು ಬಹಳ ಸಾಧುವಾಗಿ ಹಾಲು ಕೊಟ್ಟುಕೊಂಡು ಇರುವುದು. ಅದೇ ಊರಿನಲ್ಲಿ ದುರ್ಣಯನೆಂಬ ತಳವಾರನ ಮನೆಯಲ್ಲಿ ಇರುವ ಒಂದು ಆಕಳು ರಾತ್ರಿಕಾಲವೆಲ್ಲಾ ಕಳ್ಳಮೇವನ್ನು ಮೇದು ಪ್ರಾತಃಕಾಲಕ್ಕೆ ಸರಿಯಾಗಿ ಬಂದು ಮನೆಯನ್ನು ಸೇರುವುದು. ಹೀಗಿರುವಲ್ಲಿ ಒಂದಾನೊಂದು ದಿವಸ ಈ ಎರಡು ಆಕಳುಗಳೂ ಆಡವಿಯಲ್ಲಿ ಮೇಯುತ್ತಾ ಇರುವಾಗ ಕಳ್ಳ ಹಸುವು ಆ ಸಾಧುವಾದ ಆಕಳನ್ನು ನೋಡಿ—ನೀನು ಬಡವಾಗಿರುವುದಕ್ಕೆ ಕಾರಣವೇನು? ಎನ್ನಲು ಅದಕ್ಕೆ ಆ ಹಸುವು—ನನ್ನ ಒಡೆಯನು ದರಿದ್ರನಾದ ಕಾರಣ ಮನೆಯಲ್ಲಿ ನನಗೆ ಸಾಕಾಗುವಷ್ಟು ಹುಲ್ಲು ಇಲ್ಲದಿರುವುದೇ ಈ ಪ್ರಕಾರ ಕೃಶವಾಗುವುದಕ್ಕೆ ಕಾರಣವು ಎಂದು ಹೇಳಿತು. ಆಗ ಆ ದುಷ್ಟಗೋವು—ಈ ದಿವಸ ನೀನು ನನ್ನ ಬಳಿಯಲ್ಲಿ ಇದ್ದರೆ ನಿನಗೆ ಸವನ್ನು ಪೂರ್ಣವಾಗಿ ಕೊಡಿಸುವೆನು ಎಂದು ಹೇಳಲು ಅದು ಆ ಮಾತನ್ನು

ನಂಬಿ ಆ ರಾತ್ರಿಯಲ್ಲಿ ತನ್ನ ಮನೆಗೆ ಹೋಗದೆ ಈ ದುಷ್ಟಗೋವಿನ ಸಂಗಡಲೇ ಇದ್ದಿತು. ಆ ಎರಡು ಗೋವುಗಳು ಕತ್ತಲೆಯಾದ ತರುವಾಯ ಅರಮನೆಯ ಗದ್ದೆಯನ್ನು ಹೊಕ್ಕು ಹುಲ್ಲನ್ನು ಮೇಯುತ್ತಾ ಇದ್ದುವು ದುಷ್ಟ ಆಕಳು ಶೀಘ್ರವಾಗಿ ಕಬಳವನ್ನು ತೆಗೆದುಕೊಳ್ಳುತ್ತಾ ಕಾವಲವರನ್ನು ಕಂಡು ಜೊತೆಯ ಹಸುವಿಗೆ ಹೇಳದೆ ಓಡಿ ಹೋಯಿತು. ಈ ಸಾಧುವಾದ ಆಕಳು ಬಹು ದಿವಸಕ್ಕೆ ಪೂರ್ಣವಾದ ಗ್ರಾಸ ದೊರಕಿತೆಂಬ ಸಂತೋಷದಿಂದ ನಿಧಾನವಾಗಿ ಮೇಯುತ್ತಿರಲು ಆ ಆಕಳನ್ನು ನೋಡಿ ಕಾವಲವರು ಹೊಂಚಿಕೊಂಡು ಸಮೀಪಕ್ಕೆ ಬಂದು ದೊಣ್ಣೆಗಳಿಂದ ಹೊಡೆದು ಚಾವಡಿಗೆ ಹಿಡಿದು ತಂದು ಆ ವಿಪ್ರನನ್ನು ಕರಿಸಿ ಬಹಳ ದಿನಗಳಿಂದ ಅರಮನೆಯ ಗದ್ದೆಯನ್ನು ಮೇದುದಕ್ಕೆ ಅಪರಾಧವನ್ನು ಕೊಡಬೇಕೆಂದು ಬಹಳವಾಗಿ ಬಾಧೆಪಡಿಸಿ ಅವನಿಂದ ಅಪರಾಧವನ್ನು ತೆಗೆದುಕೊಂಡು ಆಕಳನ್ನು ಅವನ ವಶಕ್ಕೆ ಕೊಟ್ಟು ಭಯವಿರುವ ಹಾಗೆ ಹೇಳಿ ಕಳುಹಿಸಿದರು. ಆ ವಿಪ್ರನು ಮನೆಗೆ ಬಂದು ಮಹಾಕೋಪದಿಂದ ಆಕಳನ್ನು ಹೊಡೆದು ಕೊರಳಿಗೆ ದಂಡಿಯನ್ನು ಕಟ್ಟಿ ಮಂದೆಗೆ ಬಿಡಲು ಆ ಮಂದೆಯಲ್ಲಿದ್ದ ದುಷ್ಟಗೋವು ಇದನ್ನು ನೋಡಿ ಕೊರಳಿಗೆ ದಂಡಿಯು ಬರುವುದಕ್ಕೆ ಕಾರಣವೇನೆಂದು ಕೇಳಲು ಆ ಸಾಧುವಾದ ಹಸುವು—ನಿನ್ನ ಸಹವಾಸವೇ ಹೀಗಾಗುವುದಕ್ಕೆ ಕಾರಣವೆಂದು ಹೇಳಿ ಅದರ ಜೊತೆಯನ್ನು ಬಿಟ್ಟುಬಿಟ್ಟಿತು. ಅದಕಾರಣ ದುರ್ಜನರ ಸಹವಾಸವನ್ನು ಮಾಡಿದರೆ ಸಜ್ಜನರಿಗೆ ಕೇಡು ಬರುವುದು.

---

23. TENNALARAMAKRISHNA AND THE KING'S KITTEN.

೨೩. ತೆನ್ನಾಲರಾಮಕೃಷ್ಣನೂ ಅರಸಿನ ಬೆಕ್ಕಿನ ಮರಿಯೂ.

ಅಚ್ಯುತರಾಯನು ಒಂದು ದಿವಸ ತಮ್ಮೂರಿನ ಪ್ರತಿಮನೆಯವರಿಗೂ ಒಂದೊಂದು ಬೆಕ್ಕಿನ ಮರಿಯನ್ನೂ ಒಂದೊಂದು ಆಕಳನ್ನೂ ಕೊಟ್ಟು—ಈ ಆಕಳಿನ ಹಾಲನ್ನು ಬೆಕ್ಕಿಗೆ ಹಾಕಿ ಚನ್ನಾಗಿ ಸಾಕಿ ನಾವು ಹೇಳಿ ಕಳುಹಿಸಿದಾಗ ಅವುಗಳನ್ನು ತೆಗೆದುಕೊಂಡು ಬರಬೇಕು ಎಂದು ಆಜ್ಞಾಪಿಸಿದನು. ಆಗ ತೆನ್ನಾಲರಾಮಕೃಷ್ಣನು ತಾನೂ ಒಂದು ಬೆಕ್ಕನ್ನೂ ಆಕಳನ್ನೂ ತೆಗೆದುಕೊಂಡು ಹೋಗಿ ಆಕಳಿನ ಹಾಲನ್ನು ಉಕ್ಕುವ ಹಾಗೆ ಕಾಯಿಸಿ ಬೆಕ್ಕಿನ ಮರಿಯ ಮುಂದೆ ಇಟ್ಟನು. ಅದು ಹಾಲನ್ನು ಕುಡಿಯುವುದಕ್ಕೆ ಬಾಯಿ ಹಾಕಿದುದರಿಂದ ಅದರ ತುಟಿಯು ಗಾಯವಾಗುವಂತೆ ಸುಡಲು ಆ ದಿವಸ ಮೊದಲ್ಗೊಂಡು ಆ ಬೆಕ್ಕಿನ ಮರಿಯು ಹಾಲನ್ನು ಕಂಡಕೂಡಲೆ ಹೆದರಿ ದೂರಕ್ಕೆ ಓಡಿ ಹೋಗುತ್ತಾ ಇತ್ತು. ಇಲ್ಲಿ ಹೀಗಿರಲು ಮಿಕ್ಕ ಜನರೆಲ್ಲರೂ ಕ್ರಮವಾಗಿ ಹಾಲು ಹಾಕಿ ಅವುಗಳನ್ನು ಸಾಕುತ್ತಾ ಬಂದರು. ತರುವಾಯ ಆರು ತಿಂಗಳುಗಳಾದ ಮೇಲೆ ರಾಯರು—ಬೆಕ್ಕಿನ ಮರಿಗಳನ್ನು ತೆಗೆದುಕೊಂಡು ಬರಬೇಕೆಂದು ಎಲ್ಲರಿಗೂ ಹೇಳಿ ಕಳುಹಿಸಲು ಆಗ ಎಲ್ಲರೂ ತೆಗೆದುಕೊಂಡು ಬಂದರು. ರಾಯರು ಎಲ್ಲಾ ಬೆಕ್ಕುಗಳೂ ಪುಷ್ಟಿಯಾಗಿರುವುದನ್ನೂ ರಾಮಕೃಷ್ಣನ ಬೆಕ್ಕು ಮಾತ್ರ ಬ

ಗಿರುವುದನ್ನೂ ನೋಡಿ ರಾಮಕೃಷ್ಣನನ್ನು ಕುರಿತು—ಈ ಬೆಕ್ಕಿನ ಮರಿಯು ಇದೇಕೆ ಹೀಗೆ ಬಡವಾಗಿದೆ? ಎಂದು ಕೇಳಲು ಅವನು—ಸ್ವಾಮಿ! ಈ ಮರಿಯು ಹಾಲನ್ನು ಕಂಡರೆ ಕುಡಿಯದೆ ಓಡಿ ಹೋಗುತ್ತದೆ. ಆದುದರಿಂದ ಕಡಮೆ ಬೆಕ್ಕುಗಳ ಹಾಗೆ ಪುಷ್ಟಿಯಾಗಿಲ್ಲವೆಂದು ಹೇಳಲು ರಾಯನು ಅವನ ಮಾತನ್ನು ನಂಬದೆ ಹಾಲನ್ನು ತರಿಸಿ ಇರಿಸಲು ಅದು ಅದನ್ನು ಕಂಡ ಒಡನೆ ಓಡಿಹೋಗುತ್ತಿರಲು ಅದರ ತುಟಿಯು ಸುಟ್ಟು ಇರುವ ಗುರುತನ್ನು ಕಂಡು—ಬಿಸಿ ತಗುಲಿದ ಬೆಕ್ಕು ಒಲೆಯ ಬಳಿಯನ್ನು ಸೇರದು ಎಂಬ ಗಾದೆಗೆ ಸರಿಯಾಗಿದೆ ಎಂದು ಹೇಳಿ ರಾಮಕೃಷ್ಣನ ಕುಚೇಷ್ಟೆಗೆ ನಕ್ಕು ಅವನನ್ನು ಕಳುಹಿಸಿಬಿಟ್ಟನು.

---

24. TENNALARAMAKRISHNA AND THE KING'S COLT.

೨೪. ತೆನ್ನಾಲರಾಮಕೃಷ್ಣನೂ ರಾಯನ ಕುದುರೆಯ ಮರಿಯೂ.

ಗೌಡ ದೇಶದಲ್ಲಿ ಅಜ್ಯುತರಾಯನೆಂಬ ಒಬ್ಬ ಅರಸನು ಇದ್ದನು. ಆ ರಾಯನು ಒಂದು ದಿವಸ ಕೆಲವು ಕುದುರೆಯ ಮರಿಗಳನ್ನು ತರಿಸಿ ತನ್ನ ಪಟ್ಟಣದೊಳಗೆ ಇದ್ದ ಜನರೆಲ್ಲರನ್ನೂ ಕರಿಸಿ ಒಬ್ಬೊಬ್ಬರಿಗೆ ಒಂದೊಂದು ಕುದುರೆಯ ಮರಿಯನ್ನು ಕೊಟ್ಟು ಅವುಗಳನ್ನು ಸಾಕುವುದಕ್ಕೆ ತಾನು ತಿಂಗಳಿಗೆ ಪ್ರತಿಯೊಬ್ಬರಿಗೂ ಮೂರು ಮೂರು ವರಹಗಳನ್ನು ಕೊಡುವುದಾಗಿ ಹೇಳಿ—ಇದರ ಸಹಾಯದಿಂದ ತ್ವರೆಯಾಗಿ ದೊಡ್ಡವುಗಳಾಗುವ ಹಾಗೆ ಜನ್ನಾಗಿ ಸಾಕಿ ಅವುಗಳನ್ನು ನನ್ನ ಬಳಿಗೆ ತೆಗೆದುಕೊಂಡು ಬನ್ನಿರಿ ಎಂದು ಆಜ್ಞಾಪಿಸಿ ಎಲ್ಲರನ್ನೂ ಕಳುಹಿಸಿದನು. ಅದೇ ಮೇರೆಗೆ ಅವರೆಲ್ಲರೂ ಆ ಮರಿಗಳನ್ನು ಬಹಳ ಜೆನ್ನಾಗಿ ಪೋಷಿಸಿಕೊಂಡು ಬರುತ್ತಾ ಇದ್ದರು. ತೆನ್ನಾಲರಾಮಕೃಷ್ಣನು ಮಾತ್ರ ತನ್ನ ಮನೆಯ ಅಂಗಳದಲ್ಲಿ ಕುದುರೆ ಮರಿಯನ್ನು ನಿಲ್ಲಿಸಿ ಅದರ ಸುತ್ತಲೂ ಗೋಡೆಯನ್ನು ಹಾಕಿ ಆ ಗೋಡೆಯ ಒಂದು ಪಕ್ಕದಲ್ಲಿ ಒಂದು ದ್ವಾರವನ್ನು ಮಾಡಿ ಒಳಗೆ ಅದರ ಮೂತಿಯ ಎದುರಿಗೆ ಒಂದು ಹಳ್ಳವನ್ನು ಮಾಡಿ ಬೆಳಗಿನ ಹೊತ್ತು ಒಂದು ಹಿಡಿ ಹುಲ್ಲನ್ನು ಆ ದ್ವಾರದಿಂದಲೇ ಕೊಟ್ಟು ಅದೇ ದ್ವಾರದಿಂದ ಆ ಹಳ್ಳದಲ್ಲಿ ಕುಡಿಯುವುದಕ್ಕೆ ಸ್ವಲ್ಪ ನೀರನ್ನು ಬಿಡುತ್ತಾ ಸಾಯಂಕಾಲದಲ್ಲಿಯೂ ಅದೇ ಮೇರೆಗೆ ಮಾಡುತ್ತಾ ಬಂದನು. ಈ ಪ್ರಕಾರ ಮೂರು ಸಂವತ್ಸರಗಳಾದ ತರುವಾಯ ರಾಯನು ಕುದುರೆಯ ಮರಿಗಳನ್ನು ತೆಗೆದುಕೊಂಡು ಬರಬೇಕೆಂದು ಎಲ್ಲರಿಗೂ ಆಜ್ಞಾಪಿಸಲು ಅದೇ ಮೇರೆಗೆ ಜನರೆಲ್ಲರೂ ತೆಗೆದುಕೊಂಡು ಬಂದರು. ಅವರು ತಂದ ಮರಿಗಳೆಲ್ಲವೂ ರಕ್ತಮಾಂಸ ಕೂಡಿ ಮೈಬಂದು ಹೊಳೆಯುತ್ತಿದ್ದುವು. ಹೀಗೆ ಇರುವ ಮರಿಗಳನ್ನು ರಾಯನು ನೋಡಿ ಸಂತೋಷಪಟ್ಟು ತೆನ್ನಾಲರಾಮಕೃಷ್ಣನು ಮಾತ್ರ ಇನ್ನೂ ಕುದುರೆಯ ಮರಿಯನ್ನು ತರಲಿಲ್ಲವೆಂಬುದನ್ನು ತಿಳಿದು ಅವನನ್ನು ಕರಿಸಿ—ನೀನು ಕುದುರೆಯ ಮರಿಯನ್ನು ಇನ್ನೂ ಯಾಕೆ ತೆಗೆದುಕೊಂಡು ಬರಲಿಲ್ಲವೆಂದು ಕೇಳಲು ರಾಮಕೃಷ್ಣನು—ನನ್ನ ಪೋಷಣೆಯಲ್ಲಿ ಇರುವ ಕುದುರೆಯ ಮರಿಯನ್ನು

ನಾನು ತರಲಾರೆನು. ನಿಮ್ಮ ಬಳಿಯಲ್ಲಿರುವ ಸೇವಕರಲ್ಲಿ ಒಬ್ಬನನ್ನು ಕಳುಹಿಸಿದರೆ ಅವನು ಅದನ್ನು ತೆಗೆದುಕೊಂಡು ಬರುವನೆಂದು ಹೇಳಿದನು. ಅದೇ ಮೇರೆಗೆ ರಾಯನು ತನ್ನ ಭೃತ್ಯರಲ್ಲಿ ಹಳಬನೂ ಗಟ್ಟಿಗನೂ ಆದ ಒಬ್ಬ ಸೇವಕನನ್ನು ಕರಿಸಿ ಅವನನ್ನು ರಾಮಕೃಷ್ಣನ ಸಂಗಡ ಕಳುಹಿಸಿದನು. ಆ ರಾವುತನಿಗೆ ಒಂದೂ ಮುಕ್ಕಾಲು ಮೊಳ ಉದ್ದವಾದ ಗಡ್ಡವಿರುವುದು. ರಾಮಕೃಷ್ಣನು ಅವನನ್ನು ತನ್ನ ಸಂಗಡ ಕರೆದುಕೊಂಡು ಹೋಗಿ—ಆ ದ್ವಾರದಿಂದ ಕುದುರೆಯನ್ನು ನೋಡೆಂದು ಹೇಳಿದನು. ಆಗ ಅವನು ಅದೇ ಪ್ರಕಾರವಾಗಿ ಕನ್ನದಲ್ಲಿ ಬೊಗ್ಗಿ ನೋಡಲು ಆ ಕುದುರೆಯು ಅವನ ಗಡ್ಡವನ್ನು ಕಂಡು ಎಂದಿನ ಹಾಗೆ ಹುಲ್ಲು ಕೊಡುತ್ತಾನೆಂದು ತಿಳಿದು ಅವನ ಗಡ್ಡವನ್ನು ಬಲವಾಗಿ ಹಿಡಿದುಕೊಂಡು ಎಳೆಯುವುದಕ್ಕೆ ಆರಂಭಿಸಿತು. ಆಗ ಆ ರಾವುತನು—ಅಯ್ಯೋ ದೇವರೇ ! ಎಂದು ಕೂಗಿಕೊಂಡು ಅಳುತ್ತಿದ್ದನು. ಆಮೇಲೆ ರಾಮಕೃಷ್ಣನು ತ್ವರೆಯಾಗಿ ರಾಯನ ಬಳಿಗೆ ಹೋಗಿ ಸೇವಕನಿಗೆ ಸಂಭವಿಸಿದ ಕಷ್ಟವನ್ನು ಹೇಳಲು ರಾಯನು ಆಪ್ತಾಜಿಯನ್ನು ಸಂಗಡ ಕರೆದುಕೊಂಡು ಒಂದು ಕುದುರೆಯನ್ನು ಹೊರಗೆ ತೆಗೆಸಿ ಅದು ಬಡವಾಗಿರುವುದನ್ನು ನೋಡಿ—ಯಾಕೆ ಕುದುರೆಯು ದುರ್ಬಲವಾಗಿದೆ? ಎಂದು ಕೇಳಲು ಅದಕ್ಕೆ ರಾಮಕೃಷ್ಣನು—ಅಯ್ಯಾ ! ನಾನು ಈ ಪ್ರಕಾರವಾಗಿ ಇಟ್ಟಿರುವಾಗಲೇ ರಾವುತನ ಗಡ್ಡವನ್ನು ಹಿಡಿದುಕೊಂಡಿತು. ಇನ್ನೂ ಚೆನ್ನಾಗಿ ಪೋಷಿಸಿದ್ದರೆ ಇನ್ನೇನು ಮಾಡುತ್ತಾ ಇತ್ತೋ ಎಂದು ಹೇಳಲು ರಾಯನು ಅವನ ಕುಚೇಷ್ಟೆಗೆ ನಕ್ಕು ಆರಮನೆಗೆ ಹೋದನು.

---

25. THE LARK AND THE MYNA.

೨೫. ಟಿಟ್ಟಿಭವೂ ಗೊರವಂಕವೂ.

ಜಂಪಕಾರಣ್ಯದಲ್ಲಿ ಒಂದು ಆಲದ ಮರವು ಇರುವುದು. ಅದರಲ್ಲಿ ಒಂದು ಟಿಟ್ಟಿಭಪಕ್ಷಿಯು ಬಹಳ ದಿವಸಗಳಿಂದ ಗೂಡು ಕಟ್ಟಿಕೊಂಡು ಇದ್ದಿತು. ಒಂದು ದಿನ ಆ ಟಿಟ್ಟಿಭವು ಆಹಾರಾರ್ಥವಾಗಿ ಹೊರಗೆ ಹೋಗಿರಲು ಶಕಟನೆಂಬ ಒಂದು ಗೊರವಂಕನು ಬಂದು ಆ ಟಿಟ್ಟಿಭನ ಗೂಡನ್ನು ಸೇರಿಕೊಂಡಿತು. ಆ ಮೇಲೆ ಈ ಟಿಟ್ಟಿಭನು ಬಂದು ತನ್ನ ಗೂಡನ್ನು ಸೇರಿಕೊಂಡಿರುವ ಗೊರವಂಕನನ್ನು ನೋಡಿ—ನನ್ನ ಗೂಡಿನಲ್ಲಿ ನೀನು ಇರುವುದಕ್ಕೆ ಕಾರಣವೇನು? ಎನ್ನಲು ಗೊರವಂಕನು—ಈ ಗೂಡು ನಮ್ಮ ತಂದೆಯ ಕಾಲದಿಂದಲೂ ನನ್ನದಾಗಿರುವಲ್ಲಿ ನೀನು ನನ್ನದು ಎಂಬುವುದು ಬಹಳ ಚೆನ್ನಾಗಿದೆ! ನಿನಗೆ ವಿವೇಕವಿಲ್ಲವೆಂದು ಟಿಟ್ಟಿಭನನ್ನು ಗದರಿಸಲು ಆ ಟಿಟ್ಟಿಭವು ಆಗ್ರಹ ಪಟ್ಟು—ನಿನಗೆ ವಿವೇಕವಿಲ್ಲ. ನೀನು ಇಂಥಾ ದುರಾಚಾರವನ್ನು ಮಾಡಿದುದರಿಂದ ನಿನಗೆ ತಕ್ಕ ಬುದ್ಧಿಯನ್ನು ಕಲಿಸುವೆನೆಂದು ಹೇಳಿತು. ಹೀಗೆ ಒಬ್ಬರಿಗೊಬ್ಬರಿಗೆ ರೋಷಾವೇಶಗಳು ಹುಟ್ಟಿ ಕೆಟ್ಟ ಮಾತುಗಳನ್ನು ಆಡಿಕೊಂಡು ತಮ್ಮ ಕುಲದವರ ಬಳಿಗೆ ಬಂದು ಈ ನ್ಯಾಯವನ್ನು ಅವರಲ್ಲಿ ಹೇಳಿಕೊಳ್ಳ

ಆ ಪಕ್ಷಿಗಳು ಕೇಳಿ—ನಾವು ಪಕ್ಷಿಗಳು ; ನಮಗೆ ಮನೆ ಅಂದರೆ ಏನು ? ಆಡವಿಯಲ್ಲಿದ್ದ ಫಲಗಳನ್ನು ತಿಂದುಕೊಂಡು ವಸತಿಯಾದ ಸ್ಥಳದಲ್ಲಿ ನಿದ್ರೆ ಮಾಡಿಕೊಂಡು ಇರಬೇಕಲ್ಲದೆ ಈ ಕಲಹದಿಂದ ಏನು ಪ್ರಯೋಜನವೆಂದು ಎಷ್ಟು ಪ್ರಕಾರವಾಗಿ ತಿಳಿಯ ಹೇಳಿದರೂ ಕೇಳದೆ ರಾಜಾಸ್ಥಾನಕ್ಕೆ ಹೋಗುವೆವೆಂದು ಗರ್ವದಿಂದ ಅಮರಾವತಿ ಎಂಬ ಪಟ್ಟಣವನ್ನಾಳುವ ಬಾಹುಬಲನೆಂಬ ರಾಯನ ಬಳಿಗಾಗಿ ಹೊರಟುವು. ಇದಕ್ಕಿಂತ ಮುಂಚೆ ಆ ರಾಯನು ತನ್ನ ರಾಜ್ಯದಲ್ಲಿ ಇರುವ ವೈದ್ಯರನ್ನು ಕರಿಸಿ ತನ್ನ ಶರೀರವು ಪುಷ್ಟಿಯಾಗುವುದಕ್ಕೆ ಏನನ್ನು ಭಕ್ಷಿಸಬೇಕೆಂದು ಕೇಳಲು ಆ ವೈದ್ಯರು—ಓ ರಾಯನೇ ! ತುಪ್ಪದಿಂದ ಬುದ್ಧಿಯೂ ಹಾಲಿನಿಂದ ಆಯುಷ್ಯವೂ ಶಾಕಗಳಿಂದ ರೋಗವೂ ಮಾಂಸದಿಂದ ಮಾಂಸವೂ ವೃದ್ಧಿಯನ್ನು ಹೊಂದುವುವು ಎಂದು ಶಾಸ್ತ್ರವಿರುವುದರಿಂದ ನೀನು ಹಗಲು ಭೋಜನದಲ್ಲಿ ಮೃಗಮಾಂಸವನ್ನೂ ರಾತ್ರಿ ಭೋಜನದಲ್ಲಿ ಪಕ್ಷಿಮಾಂಸವನ್ನೂ ಭಕ್ಷಿಸೆಂದು ಹೇಳಲು ರಾಯನು ಬೇಟೆಗಾರರನ್ನು ಕರಿಸಿ ನಿತ್ಯವೂ ಮೃಗಗಳನ್ನೂ ಪಕ್ಷಿಗಳನ್ನೂ ತಂದು ಕೊಡುವ ಹಾಗೆ ಅವರಿಗೆ ಕಟ್ಟಳೆಯನ್ನು ಮಾಡಲು ಅವರು ಅದೇ ಮೇರೆಗೆ ತಂದು ಕೊಡುತ್ತಾ ಇದ್ದರು. ಹೀಗಿರುವಲ್ಲಿ ಒಂದು ದಿನ ಬೇಟೆಗಾರರಿಗೆ ಪಕ್ಷಿಗಳು ಎಲ್ಲಿಯೂ ಸಿಕ್ಕದೆ ಇರಲು ಸಾಯಂಕಾಲದ ಪರ್ಯಂತರವೂ ತಿರುಗಿಕೊಂಡು ಕಡೆಗೆ ಒಂದು ಜೇನುಹಳೆಯನ್ನು ಕೈಯಲ್ಲಿ ಹಿಡಿದುಕೊಂಡು ರಾಯನ ಸಮ್ಮುಖಕ್ಕೆ ಒಂದು—ಸ್ವಾಮಿ ! ಎಷ್ಟು ಪ್ರಯಾಸಪಟ್ಟಾಗ್ಗೂ ಈ ದಿನ ಪಕ್ಷಿಗಳು ದೊರೆಯದೆ ಹೋದವೆಂದು ಬಿನ್ನಹವನ್ನು ಮಾಡಲು ಆ ರಾಯನು ಬೇಟೆಗಾರರ ಮೇಲೆ ಕೋಪವನ್ನು ಮಾಡುತ್ತಾ ಇರುವ ಸಮಯದಲ್ಲಿ ಈ ಟಿಟ್ಟಿಭ ಶಕಟಗಳು ಬರುವುದನ್ನು ಕಂಡು ಊಳಿಗದವರು ಬಂದು ರಾಯನಿಗೆ ಬಿನ್ನಹವನ್ನು ಮಾಡಲು ಅಲ್ಲಿದ್ದ ಬೇಟೆಗಾರರೊಳಗೆ ಒಬ್ಬನು ಆ ಎರಡು ಪಕ್ಷಿಗಳನ್ನೂ ಹೊಡೆದು ಅರಮನೆಯಲ್ಲಿರುವ ಅಡಿಗೆಯವರಿಗೆ ಕೊಟ್ಟುಬಿಟ್ಟನು. ಆದುದರಿಂದ ವಿವಾದವನ್ನು ಮಾಡಿಕೊಂಡು ರಾಜಾಸ್ಥಾನಗಳಿಗೆ ಹೋದವರು ಈ ಪ್ರಕಾರ ಕೆಟ್ಟುಹೋಗುವರು.

---

26. THE ASCETIC AND HIS HYPOCRITICAL DISCIPLE.

೨೬ ಸನ್ಯಾಸಿಯೂ ಅವನ ಕಪಟಶಿಷ್ಯನೂ.

ಕಾವೇರೀತೀರದಲ್ಲಿ ಧರ್ಮಪುರವೆಂಬ ಒಂದು ಅಗ್ರಹಾರವು ಇರುವುದು. ಅಲ್ಲಿ ವೇದಶರ್ಮನೆಂಬ ಯತೀಶ್ವರನು ಮಠದಲ್ಲಿ ವಾಸಮಾಡಿಕೊಂಡು ಭಿಕ್ಷಾನ್ನದಿಂದಲೇ ಜೀವಿಸುತ್ತಾ ಬಹುಕಾಲದಿಂದ ಅನೇಕ ದ್ರವ್ಯವನ್ನು ಸಂಪಾದಿಸಿ ಅವುಗಳನ್ನು ಇಡುವುದು ಎಲ್ಲಿ ? ಎಂದು ಯೋಚಿಸಿದನು. ತಾನು ಉಣ್ಣದೆಯೂ ಉಡದೆಯೂ ದಾನ ಧರ್ಮಗಳನ್ನು ಮಾಡದೆಯೂ ಕೂಡಿಸಿದ ದ್ರವ್ಯಗಳೆಲ್ಲಾ ಅರಸುಗಳಿಂದಾಗಲಿ ಬೆಂಕಿಯಿಂದಾಗಲಿ ಹೂಳಿಟ್ಟ ಸ್ಥಳದಲ್ಲಾಗಲಿ ನಾಶನವಾಗಿ ಹೋಗುವುವು ಎಂದು ನೀತಿ ಇರುವುದರಿಂದ ಈ ದ್ರವ್ಯಕ್ಕೆ ಯಾವ ರೀತಿಯಿಂದಲೂ ಲಯವಿಲ್ಲದ ಹಾಗೆ ಮಾಡಬೇಕೆಂದು

ನೆನಸಿ ಆ ದ್ರವ್ಯವೆಲ್ಲವನ್ನೂ ತನ್ನ ಕಂಥೆಯಲ್ಲಿ ಹುದುಗಿಸಿ ಬೊಂತೆಯನ್ನು ಹೊಲಿದು ಅದನ್ನು ಯಾವಾಗಲೂ ಮೈ ಮೇಲೆ ಹೊದಿದುಕೊಂಡು ನಿಂತ ಕೆಲವು ದ್ರವ್ಯವನ್ನು ತನ್ನ ಟೊಳ್ಳಾದ ದಂಡ ಕೋಲಿನಲ್ಲಿ ತುಂಬಿ ಅದನ್ನು ತನ್ನ ಕೈಯಲ್ಲಿ ಹಿಡಿದುಕೊಂಡು ದಿವಾರಾತ್ರಿಗಳಲ್ಲಿಯೂ ಎಚ್ಚರಿಕೆ ತಪ್ಪದೆ ನೋಡಿಕೊಂಡು ಇದ್ದನು. ಹೀಗಿರಲು ಆಷಾಢಭೂತಿ ಎಂಬ ಒಬ್ಬ ಬ್ರಾಹ್ಮಣನು ಈ ರಹಸ್ಯವನ್ನು ಹೇಗೋ ತಿಳಿದು ಆ ದ್ರವ್ಯವನ್ನು ತಾನು ಹೇಗಾದರೂ ಅಪಹರಿಸಬೇಕೆಂದು ಯೋಚಿಸಿ ಶಿಷ್ಯವೇಷವನ್ನು ಹಾಕಿಕೊಂಡು ಆ ಸನ್ಯಾಸಿಯ ಬಳಿಗೆ ಬಂದು ಭಯಭಕ್ತಿಯಿಂದ ಅವನಿಗೆ ಸಾಷ್ಟಾಂಗ ನಮಸ್ಕಾರಗಳನ್ನು ಮಾಡಿ ಎದ್ದು ಕೈಮುಗಿದು ನಿಂತು ಅತಿವಿನಯದಿಂದ—ಸ್ವಾಮಿ! ಲೋಕದಲ್ಲಿ ತಾನು ಗಳಿಸಿದ ಒಡವೆ ಮನೆಯಲ್ಲೇ ಇರುವುದು. ತನ್ನ ಪುತ್ರಮಿತ್ರಕಳತ್ರಾದಿ ಬಾಂಧವರು ಸ್ಮಶಾನದ ಪರಿಯಂತರವೂ ಬಂದು ಹಿಂದಿರುಗುವರು. ತಾನು ಮಾಡಿದ ಪಾಪಪುಣ್ಯಗಳೆರಡು ಮಾತ್ರ ತನ್ನ ಸಂಗಡಲೇ ಬರುವವು. ಮತ್ತು ಐಶ್ವರ್ಯವು ನೀರಿನ ಗುಳ್ಳೆಯ ಹಾಗೆ ತೋರಿ ಅಡಗುವುದು. ಯೌವನವು ಅಸ್ಥಿರವಾದುದು. ಆಯುಷ್ಯವು ಶರತ್ಕಾಲದ ಮೇಘದೋಪಾದಿಯಲ್ಲಿ ಗಳಿಗೆಗಳಿಗೆಗೂ ನಾಶವಾಗಿ ಹೋಗುವುದು. ಪ್ರಾಣಿಗಳಿಗೆ ಮುದಿತನವು ಸಮಯವನ್ನು ನೋಡಿ ಹಿಡಿಯುವ ಹುಲಿಯಂತಿರುವುದು. ಮತ್ತು ರೋಗಗಳು ಶತ್ರುಗಳ ಹಾಗೆ ತಮಗೆ ಅನುಕೂಲ ಕಾಲವನ್ನು ನಿರೀಕ್ಷಿಸಿಕೊಂಡು ಇವೆ. ಆಯುಷ್ಯವು ಒಡೆದ ಗಡಿಗೆಯಲ್ಲಿ ತುಂಬಿ ಇಟ್ಟ ನೀರಿನ ಹಾಗೆ ಕಡಮೆಯಾಗುತ್ತಾ ಇರುವುದು. ಆದುದರಿಂದ ತಮ್ಮಂಥಾ ಸತ್ಪುರುಷರ ಸೇವೆಯನ್ನು ಮಾಡಿ ಕೃತಾರ್ಥನಾಗಬೇಕೆಂದು ಬಂದೆನು. ನನ್ನನ್ನು ಶಿಷ್ಯನನ್ನಾಗಿ ಅಂಗೀಕರಿಸಬೇಕೆಂದು ನಾನಾವಿಧವಾದ ತತ್ವವಾಕ್ಯಗಳನ್ನು ಹೇಳಿ ಬಹುವಿಧವಾಗಿ ಪ್ರಾರ್ಥಿಸಲು ಆ ಯತೀಶ್ವರನು—ಇವನು ಶಿಷ್ಯವೃತ್ತಿಗೆ ಯೋಗ್ಯನೆಂದು ಸಮ್ಮತಿಪಟ್ಟು ಅವನನ್ನು ಕುರಿತು—ನೀನು ನನ್ನ ಬಳಿಯಲ್ಲಿ ಇರು ಎಂದು ಹೇಳಿದನು. ಆಗ ಆ ಆಷಾಢಭೂತಿಯು ಅತಿವಿನಯಭಯಭಕ್ತಿಯುಕ್ತನಾಗಿ ಈ ಯತೀಶ್ವರನ ಇಂಗಿತವನ್ನು ತಿಳಿದು ಕಾಲಕಾಲಕ್ಕೆ ಸರಿಯಾಗಿ ಸೇವೆಯನ್ನು ಮಾಡಿಕೊಂಡು ಅವನ ವಿಶ್ವಾಸಕ್ಕೆ ಪಾತ್ರನಾಗಿ ಇದ್ದನು. ಹೀಗಿರುವಲ್ಲಿ ಒಂದಾನೊಂದು ದಿವಸ ಅಲ್ಲಿಗೆ ಸಮೀಪದಲ್ಲಿ ಇರುವ ಅಗ್ರಹಾರದಿಂದ ಒಬ್ಬ ಬ್ರಾಹ್ಮಣನು ಬಂದು ಈ ಸನ್ಯಾಸಿಯನ್ನು ತನ್ನ ಮನೆಗೆ ಭಿಕ್ಷಕ್ಕೆ ಬರಬೇಕೆಂದು ಕರೆಯಲು ಆ ಯತೀಶ್ವರನು ಒಪ್ಪಿಕೊಂಡು ಆಷಾಢಭೂತಿ ಎಂಬ ತನ್ನ ಶಿಷ್ಯನನ್ನು ಸಂಗಡ ಕರೆದುಕೊಂಡು ಆ ಅಗ್ರಹಾರದ ಬ್ರಾಹ್ಮಣನ ಮನೆಗೆ ಹೋಗಲು ಆಗ ಬ್ರಾಹ್ಮಣನು ಅತಿವಿನಯದಿಂದ ಮುನಿಯನ್ನು ಸತ್ಕರಿಸಿ ಊರಲ್ಲೆಲ್ಲಾ ಭಿಕ್ಷವನ್ನು ಮಾಡಿಸಿದನು. ಯತಿಯು ಆ ರಾತ್ರಿಯಲ್ಲಿ ಅಲ್ಲಿಯೇ ಇದ್ದು ಬೆಳಗಾದ ಮೇಲೆ ತನ್ನ ನಿವಾಸವಾದ ಮಠಕ್ಕೆ ಹೊರಡುವ ಸಮಯದಲ್ಲಿ ಆಷಾಢಭೂತಿಯು ಆ ಬ್ರಾಹ್ಮಣನ ಮನೆಯ ಒಂದು ಕಾಚಿಪುಳ್ಳಿಯನ್ನು ತನ್ನ ತಲೆಯಲ್ಲಿ ಸಿಕ್ಕಿಸಿಕೊಂಡು ಯತೀಶ್ವರನ ಸಂಗಡ ಸ್ವಲ್ಪ ದೂರ ಬಂದು ತನ್ನ ಶಿಖೆಯಲ್ಲಿ ಇದ್ದ ತೃಣವನ್ನು ಕೈಗೆ ತೆಗೆದುಕೊಂಡು ಸನ್ಯಾ

ಸಿಗೆ ವಂದನೆಯನ್ನು ಮಾಡಿ—ಎಲೈ ಗುರುನಾಥನೆ! ನಾನು ಮಹಾ ಪಾಪಕ್ಕೆ ಒಳ ಗಾದೆನು. ಯಾಕಂದರೆ ಆ ಗೃಹಸ್ಥನ ಮನೆಯಲ್ಲಿ ಭೋಜನವನ್ನು ಮಾಡಿಕೊಂಡು ಮರಕ್ಕೆ ಹೊರಡುವ ವೇಳೆಯಲ್ಲಿ ಆತನ ಮನೆಯ ತೃಣವು ಹೇಗೋ ನನ್ನ ಶಿಖೆಗೆ ತಗಲಿ ಬಂದಿತು; ಈ ಪಾಪವನ್ನು ನಾನು ಯಾವ ರೀತಿಯಿಂದ ಕಳೆದುಕೊಳ್ಳಲಿ? ಎಂದು ದುಃಖಿಸಲು ಆ ಯತೀಶ್ವರನು ಕೇಳಿ ಆಶ್ಚರ್ಯಪಟ್ಟು—ತೃಣದಿಂದ ಬರುವ ಪಾತಕ ವೇನು? ಆದರೂ ಇದು ಅಜ್ಞಾನಕೃತವು. ಇದಕ್ಕೆ ದೋಷವಿಲ್ಲವೆಂದನು. ಅದಕ್ಕೆ ಆಷಾಢಭೂತಿಯು—ಸ್ವಾಮಿ! ಪ್ರಾಜ್ಞರು ವಿಷವನ್ನು ವಿಷವೆಂದು ಹೇಳುವುದಿಲ್ಲ. ಆದರೆ ಪರರ ಒಡವೆಯೇ ವಿಷವೆಂದು ಹೇಳುತ್ತಾರೆ. ಯಾಕಂದರೆ ವಿಷವು ಒಬ್ಬ ನನ್ನು ಕೊಲುತ್ತದೆ. ಪರರ ಸೊತ್ತು ಪುತ್ರಪೌತ್ರರನ್ನೂ ಸಹ ಕೊಲ್ಲುತ್ತದೆ ಎಂದು ನೀತಿ ಉಂಟು. ಆದಕಾರಣ ಸ್ವಪ್ನದಲ್ಲಿಯಾದರೂ ಪರರ ಒಡವೆಗೆ ಆಶೆಮಾಡಬಾರದು ಎಂದು ಹೇಳಿ ಈ ತೃಣವನ್ನು ಆ ಬ್ರಾಹ್ಮಣನ ಮನೆಗೆ ಸೇರಿಸಿ ಬರುತ್ತೇನೆ ಎಂದು ಗುರು ವಿನ ಅಪ್ಪಣೆಯನ್ನು ತೆಗೆದುಕೊಂಡು ಸ್ವಲ್ಪದೂರ ಹಿಂದಕ್ಕೆ ಬಂದು ಒಂದು ಮರದ ಕೆಳಗೆ ಸ್ವಲ್ಪ ಹೊತ್ತು ಕೂತು ಇದ್ದು ಬಾವಿಯಲ್ಲಿ ಸ್ನಾನಮಾಡಿಕೊಂಡು ಹೋಗಿ ಯತೀಶ್ವರನಿಗೆ ವಂದನೆಯನ್ನು ಮಾಡಿ ನಿಲ್ಲಲು ಆ ಸನ್ಯಾಸಿಯು ಆಷಾಢಭೂತಿಯ ಮನೋನಿಶ್ಚಯಕ್ಕೆ ಮೆಚ್ಚಿ ಅವನಲ್ಲಿ ಅತಿ ಪ್ರೀತಿಯುಳ್ಳವನಾಗಿ ಇದ್ದನು.

ಹೀಗೆಯೇ ಕೆಲವು ದಿನಗಳಾದ ಮೇಲೆ ಆ ಯತೀಶ್ವರನು ಗಂಗಾಸ್ನಾನ ಮಾಡ ಬೇಕೆಂದು ಕಾಶೀಯಾತ್ರೆಗೆ ಹೊರಟು ನಾನಾ ಜನಪದಗಳನ್ನು ದಾಟಿ ಮಾರ್ಗವಶ ದಿಂದ ಗೊಂಡಾರಣ್ಯದಲ್ಲಿ ಒರುತ್ತಾ ಅಲ್ಲಿ ತಾನು ಶೌಚಕ್ಕೆ ಹೋಗಬೇಕಾಯಿತಾದು ದರಿಂದ ಹೊದೆದಿದ್ದ ಬೊಂತೆಯನ್ನೂ ಯೋಗದಂಡವನ್ನೂ ಆಷಾಢಭೂತಿಯ ಕೈಗೆ ಕೊಟ್ಟು ಅವನನ್ನು ಒಂದು ಮರದ ಕೆಳಗೆ ಕೂತಿರ ಹೇಳಿ ಸ್ವಲ್ಪ ದೂರ ಹೋಗಿ ಒಹಿರ್ಭೂಮಿಗೆ ಕುಳಿತುಕೊಂಡನು. ಅಲ್ಲಿ ಎರಡು ಟಗರುಗಳು ರಾಗದ್ವೇಷದಿಂದ ಪೋಟ್ಲಾಡಿ ತಲೆಗಳು ಒಡೆದು ರಕ್ತ ಸುರಿಯುತ್ತಾ ಇರುವುದನ್ನು ಕಂಡು ಬುದ್ಧಿ ಇಲ್ಲದ ಒಂದು ಜಂಬುಕವು ಆ ಟಗರುಗಳ ತಲೆಯಿಂದ ಬೀಳುವ ರಕ್ತವನ್ನು ಪಾನ ಮಾಡಬೇಕೆಂಬ ಆಶೆಯಿಂದ ಆ ಎರಡು ಟಗರುಗಳ ನಡುವೆ ಬಂದು ನಿಂತಿತು. ಆಗ ಟಗರುಗಳೆರಡು ಹಿಂದಕ್ಕೆ ಹೋಗಿ ಅತಿ ರೋಷದಿಂದ ಮುಂದಕ್ಕೆ ಬಂದು ತಾಕಲು ಆ ಜಂಬುಕವು ನಡುವೆ ಸಿಕ್ಕಿ ಮೃತವಾಯಿತು. ಈ ಯತೀಶ್ವರನು ಆ ವಿನೋದವನ್ನು ನೋಡಿಕೊಂಡು ಬರುವುದಕ್ಕೆ ಆಲಸ್ಯವನ್ನು ಮಾಡಲು ಆಷಾಢಭೂತಿಯು ಆ ವಸ್ತು ಗಳನ್ನು ತೆಗೆದುಕೊಂಡು ಮಾರ್ಗವನ್ನು ಬಿಟ್ಟು ಅರಣ್ಯಮಾರ್ಗದಲ್ಲಿ ಹೊರಟು ತನ್ನ ನಿವಾಸವನ್ನು ಕುರಿತು ಹೋದನು. ಇತ್ತಲೀ ಯತೀಶ್ವರನು ಶೌಚವಾದ ತರುವಾಯ ಕಾಲು ತೊಳೆದುಕೊಂಡು ನದಿಯಲ್ಲಿ ಸ್ನಾನವನ್ನು ಮಾಡಿ ಆಷಾಢಭೂತಿಯನ್ನು ಕುಳ್ಳಿ ರಿಸಿದ್ದ ಮರದ ಕೆಳಕ್ಕೆ ಬಂದು ಅಲ್ಲಿ ಅವನನ್ನು ಕಾಣದೆ ನಾಲ್ಕು ದಿಕ್ಕುಗಳನ್ನೂ ನೋಡಿ ಕೂಗಿ ಅಲ್ಲಲ್ಲಿ ಹುಡುಕಿದರೂ ಅವನು ಇಲ್ಲದುದರಿಂದ ತನ್ನೊಳಗೆ ತಾನೇ ಹೀಗೆ ಹೇಳಿಕೊಂಡನು ಏನಂದರೆ—ದ್ರವ್ಯವನ್ನು ಸಂಪಾದಿಸುವಾಗಲೂ ಅದನ್ನು

ರಕ್ಷಿಸುವಾಗಲೂ ಅದು ನಾಶವಾದರೂ ಅದು ವ್ಯಯವಾದರೂ ಒಂದೊಂದು ವಿಧವಾದ ದುಃಖವಿರುವುದು. ಆದುದರಿಂದ ದ್ರವ್ಯವು ದುಃಖಕ್ಕೆ ಕಾರಣವಾದುದು ಎಂದು ನಾನಾಪ್ರಕಾರವಾಗಿ ಪ್ರಲಾಪಿಸಿ ಸಂಕಟಪಡುತ್ತಾ ಹೊರಟುಹೋದನು.

---

27. THE SICK MUSSULMAN AND HIS LAZY SERVANT.

೨೭. ತುರುಕನೂ ಅವನ ಸೋಮಾರಿಯಾದ ಸೇವಕನೂ.

ಮಳಲೀ ಪಟ್ಟಣದಲ್ಲಿ ಒಬ್ಬ ತುರುಕನು ಇದ್ದನು. ಅತನ ಬಳಿಯಲ್ಲಿ ಒಬ್ಬ ಒಕ್ಕಲಿಗನು ಸಂಬಳಕ್ಕೆ ಇರುವನು. ಒಂದಾಸೊಂದು ದಿವಸ ಆ ತುರುಕನಿಗೆ ಬಹಳ ವಾಗಿ ಜಳಿಯೂ ಜ್ವರವೂ ಬಂದು ರಾತ್ರಿಯವರೆಗೂ ಕಡಮೆಯಾಗದೆ ಇತ್ತು. ಆದುದರಿಂದ ತುರುಕನು ಬಹಳ ಸಂಕಟಪಡುತ್ತಾ ತಲೆಬಾಗಲಿನ ಬಳಿಯಲ್ಲಿ ಮಲಗಿ ಕೊಂಡು ಇದ್ದ ತನ್ನ ಒಂಟನನ್ನು ಕೂಗಿ—ಎಲೋ ಸೇವಕನೆ! ನಾನು ಸಂಕಟವನ್ನು ತಾಳಲಾರೆನು. ಆದುದರಿಂದ ನೀನು ಚಿಕ್ಕಪೇಟೆಯಲ್ಲಿ ಇರುವ ವೈದ್ಯನ ಹತ್ತಿರಕ್ಕೆ ಈಗಲೇ ಹೋಗಿ ಅವನಿಗೆ ನನ್ನ ದೇಹಸ್ಥಿತಿಯನ್ನು ತಿಳಿಸಿ ಅವನನ್ನು ಇಲ್ಲಿಗೆ ಕರೆದು ಕೊಂಡು ಬಾ ಎಂದು ಹೇಳಲು ಆ ಸೋಮಾರಿಯಾದ ಆಳು—ಈತನು ನನ್ನ ನಿದ್ರೆಯನ್ನು ಕೆಡಿಸುತ್ತಾನಲ್ಲಾ! ಎಂದು ಅಂದುಕೊಂಡು ತನ್ನ ತಲೆಯ ಮೇಲಣ ಮುಸುಕನ್ನು ತೆಗೆಯದೆ—ಬುದ್ಧೀ! ಇಷ್ಟು ಹೊತ್ತಿನಲ್ಲಿ ಪಂಡಿತನು ಮನೆಯಲ್ಲಿ ಇರುತ್ತಾನೋ? ಇಲ್ಲವೋ? ಎಂದು ಹೇಳಿದನು. ಅದಕ್ಕೆ ಆ ತುರುಕನು—ವೈದ್ಯನು ನಿಶ್ಚಯವಾಗಿ ಈಗ ಮನೆಯಲ್ಲಿಯೇ ಇರುತ್ತಾನೆ. ಹೋಗಿ ಬಾ ಅನ್ನಲು ಅದಕ್ಕೆ ಆಳು—ಸ್ವಾಮಿ! ನಾನು ಹೋದರೂ ಅವನಿಗೆ ಇಲ್ಲಿಗೆ ಬರುವುದಕ್ಕೆ ಕೂಡುವುದೋ? ಇಲ್ಲವೋ? ಎಂದು ಹೇಳಿದನು. ತುರುಕನು—ಒಂದು ವೇಳೆ ಅವನಿಗೆ ಇಲ್ಲಿ ಬರುವುದಕ್ಕೆ ಸಮಯ ಸಿಕ್ಕದೆ ಹೋದರೆ ಔಷಧವನ್ನು ಖಂಡಿತವಾಗಿ ಕೊಡುತ್ತಾನೆ. ತೆಗೆದು ಕೊಂಡು ಬಾ ಎನ್ನಲು ಬಂಟನು—ಒಡೆಯನೇ! ಆ ವೈದ್ಯನ ಬಳಿಯಲ್ಲಿ ತಮ್ಮ ದೇಹದ ರೋಗಕ್ಕೆ ತಕ್ಕ ಔಷಧವು ಮಾಡಲ್ಪಟ್ಟು ಇದೆಯೋ? ಇಲ್ಲವೋ? ಎಂದು ಹೇಳಿದನು. ತಿರಿಗಿ ಆ ತುರುಕನು—ಎಲೋ ಭೃತ್ಯನೇ! ಅವನಲ್ಲಿ ಸಿದ್ಧವಾದ ಔಷಧವು ಬೇಕಾದಷ್ಟು ಇದೆ. ಬೇಗ ಹೋಗಿ ತೆಗೆದುಕೊಂದು ಬಾ ಎಂದು ಹೇಳಿದುದಕ್ಕೆ ಭೃತ್ಯನು—ಯಜಮಾನನೆ! ಒಂದು ವೇಳೆ ಅವನು ಔಷಧವನ್ನು ಕೊಡುವನೋ? ಇಲ್ಲವೋ? ಅನ್ನಲು ಮ್ಲೇಚ್ಛನು ಅವನ ಮಾತಿಗೆ ಅಸಹ್ಯಪಟ್ಟು ಕೊಂಡು—ಎಲೋ! ಅವನು ಖಂಡಿತವಾಗಿ ಔಷಧವನ್ನು ಕೊಡುತ್ತಾನೆ. ಬೇಗ ಹೋಗಿ ತೆಗೆದುಕೊಂಡು ಬಾ; ಹೋಗು ಅನ್ನಲು ಇವನು—ಸ್ವಾಮಿ! ನಾನು ಹೋಗಿ ಔಷಧವನ್ನು ತರುತ್ತೇನೆ. ಆದರೆ ಅದರಿಂದ ನಿಮಗೆ ಗುಣವಾಗುತ್ತದೋ? ಇಲ್ಲವೋ? ತಿಳಿಯದು ಅಂದನು. ಆ ತುರುಕನು ಬಹಳ ಕೋಪ ಮಾಡಿ—ಎಲೋ ಸೋಮಾರಿಯೇ! ಹೇಗಾದರೂ ಆಗಲಿ; ನೀನು ಹೋಗಿ ಬಾ ಅನ್ನಲು

ಈ ಸೇವಕನು ಇದು ಎಲ್ಲಿಯ ತಂಟೆ ಬಂದಿತಪ್ಪಾ ಎಂದು ಗೊಣಗುಟ್ಟುತ್ತಾ— ದೊರೆಯೇ! ಲೋಕದಲ್ಲಿ ಮನುಷ್ಯನಾಗಿ ಹುಟ್ಟಿದವನು ಯಾವಾಗಲಾದರೂ ಒಂದು ದಿವಸ ಸಾಯಲೇ ಬೇಕು. ಹೀಗಿರುವಲ್ಲಿ ತಾವು ಯಾಕೆ ಇಷ್ಟು ತೊಂದರೆಯನ್ನು ಅನುಭವಿಸಬೇಕು?ಎಂದು ಮುಚ್ಚಿದ ಮುಸುಕಿನಲ್ಲಿಯೇ ಉತ್ತರವನ್ನು ಹೇಳುತ್ತಾ ಬಂದನು. ಆಗ ಆ ತುರುಕನು ಇವನ ಮಾತುಗಳನ್ನು ಕೇಳಿ ನಕ್ಕು ಸುಮ್ಮನೆ ಮಲಗಿಕೊಂಡನು.

---

28. THE REDDI AND THE BRAHMAN.

೨೮. ರಡ್ಡಿಯೂ ಬ್ರಾಹ್ಮಣನೂ.

ತೆಲುಗಾಣ್ಯದಲ್ಲಿ ಚನ್ನಾರಡ್ಡಿ ಎಂಬ ಗೌಡನು ನೂರಾರು ಆಳುಗಳನ್ನು ಇಟ್ಟುಕೊಂಡು ಅನೇಕವಾದ ಉಳುವ ಎತ್ತುಗಳನ್ನೂ ಹೇರುವ ಎತ್ತುಗಳನ್ನೂ ಕಟ್ಟಿಕೊಂಡು ವ್ಯವಹಾರವನ್ನೂ ಹೇರಾಟವನ್ನೂ ಮಾಡಿಕೊಂಡು ನೂರಿನ್ನೂರು ಗುಳಿಗಳಲ್ಲಿ ಧಾನ್ಯಗಳನ್ನು ತುಂಬಿಕೊಂಡು ಸರಿಯವರಲ್ಲಿ ಬಲು ಹೆಸರುವಾಸಿಯುಳ್ಳವನಾಗಿ ಇದ್ದನು. ಇವನ ದಳಸರವನ್ನು ಒಬ್ಬ ಬಡವನಾದ ಬ್ರಾಹ್ಮಣನು ಕಂಡು ಇವನನ್ನು ಆಶ್ರಯಿಸಿದರೆ ತನಗೆ ಏನಾದರೂ ಪ್ರಯೋಜನವಾಗಿ ಆದರಿಂದ ತನ್ನ ಬಡತನ ಇಂಗೀತು ಎಂದು ನಾಲ್ಕಾರು ವರುಷಗಳಿಂದ ಆಶ್ರಯವನ್ನು ಮಾಡಿಕೊಂಡು ಇದ್ದಾಗ್ಗೂ ಅವನು ಒಂದು ಕಾಸಾಗಲಿ ಒಂದು ಕಾಳು ದವಸವಾಗಲಿ ಕೊಡಲಿಲ್ಲ. ಹೀಗಿರುವಲ್ಲಿ ಆ ರಡ್ಡಿಯು ಒಂದು ಹೊಸ ಮನೆಯನ್ನು ಕಟ್ಟಿಸಬೇಕೆಂದು ಜೆಲುವಾದ ಸ್ಥಳದಲ್ಲಿ ಸಮವಾಗಿ ನೆಲಗಟ್ಟು ಮಾಡಿಸಿ ಗಜ ಅಗಲ ಗಜಮಟ್ಟಕ್ಕೆ ತಳಾದಿಯನ್ನು ತೆಗೆಸಿ ಅದನ್ನು ಪಡಿಗುಂಡುಗಳಿಂದ ತುಂಬಿಸಿ ಎರಡು ಗಜ ಉದ್ದಕ್ಕೆ ಇಟ್ಟಿಗೆ ಗಾರೆಗಳಿಂದ ಗೋಡೆಯನ್ನು ಹಾಕಿಸಿ ಇದ್ದನು. ಒಂದು ದಿವಸ ಸಾಯಂಕಾಲದ ವೇಳೆಯಲ್ಲಿ ಒಂದು ಬಿಳಿಯ ನಾಯಿ ಒಂದು ಒಂದು ಗೋಡೆಯಿಂದ ಮತ್ತೊಂದು ಗೋಡೆಗೆ ಹಾರಿ ಮತ್ತೊಂದು ಸಾರಿಯೂ ಅದೇ ಪ್ರಕಾರ ಹಾರಿ ಓಡಿ ಹೋಯಿತು. ಅದನ್ನು ರಡ್ಡಿಯು ಕಂಡು ಹೊಸ ಗೋಡೆಯ ಮೇಲೆ ನಾಯಿ ಹಾರಿ ಹೋಯಿತಲ್ಲಾ! ಇದರಿಂದ ತನಗೇನಾದರೂ ಕೇಡು ಬಂದೀತೋ ಏನೋ ಎಂದು ಕೊರಗುತ್ತಾ ರಾತ್ರಿಯಲ್ಲಿ ತನ್ನ ರಡ್ಡಿಸಾನಿಯ ಸಂಗಡ ಈ ಸಂಗತಿಯನ್ನು ಹೇಳಲು ಆಕೆಯು— ತಮ್ಮನ್ನು ಕಾದುಕೊಂಡಿರುವ ಹಾರವಯ್ಯನ ಸಂಗಡ ಹೇಳಿರಿ ಅಂದಳು. ಹೊತ್ತಾರೆ ಈ ಬ್ರಾಹ್ಮಣನು ಕಟ್ಲೆಯ ಪ್ರಕಾರವಾಗಿ ರಡ್ಡಿಯನ್ನು ಕಂಡು ಆಶೀರ್ವಾದವನ್ನು ಮಾಡಿ ಮಂತ್ರಾಕ್ಷತೆಯನ್ನು ಕೊಡಲು ರಡ್ಡಿಯು ಅವನಿಗೆ ನಾಯಿ ಗೋಡೆಯ ದಾಟಿದುದನ್ನು ಹೇಳಿದನು. ಆಗ ಬ್ರಾಹ್ಮಣನು—ಈ ಲೋಭಿಯಿಂದ ಹಣವನ್ನು ಎಳೆಯುವುದಕ್ಕೆ ಇದೇ ಸಮಯವೆಂದು ತನ್ನ ಮನಸ್ಸಿನಲ್ಲಿ ಎಣಿಸಿ ಬೇಗ ಮನೆಗೆ ಹೋಗಿ ಒಂದು ಪುಸ್ತಕವನ್ನು ತಂದು ಅವನ ಮುಂದೆ ಎರಡುಗಳಿಗೆ ಹುಡುಕಿದ ಹಾಗೆ ಮಾಡಿ ಗೋಡೆಯನ್ನು ಬಿಳಿಯ ನಾಯಿಯು ಮೊದಲು ಒಂದು ಸಾರಿ ಹಾರಿ

ಪುನಃ ಹಾರಿದುದರಿಂದ ರಡ್ಡಿಯೂ ರಡ್ಡಿಸಾನಿಯೂ ಈ ಇಬ್ಬರೂ ಬುಡಸಹಿತ ನಾಶನ ವಾಗುತ್ತಾರೆ ಎಂದು ಓದಿ—ಇದು ಬಹು ಕೆಟ್ಟ ಶಕುನ ಎಂದನು. ಆಗ ರಡ್ಡಿಯು ಕಣ್ಣಿನಲ್ಲಿ ನೀರನ್ನು ಬಿಡುತ್ತಾ—ಇದಕ್ಕೆ ಏನು ಮಾಡಬೇಕೆಂದು ತುಂಬಾ ಅಂಗಲಾ ಚಿಕೊಂಡು ಕೇಳಲು ಆಗ ಬ್ರಾಹ್ಮಣನು—ನೀವು ಇದಕ್ಕೆ ಹೆದರಬೇಡಿರಿ; ನಾನು ಇದಕ್ಕೆ ಶಾಂತಿಯನ್ನು ಮಾಡುತ್ತೇನೆಂದು ಹೇಳಿ ಆ ಹೊಸ ಮನೆಯ ಗೋಡೆಯ ಒಳಗೆ ಆಳುದ್ದ ಗುಂಡಿಯನ್ನು ತೆಗಿಸಿ ಅಲ್ಲಿ ಸಾರಿಸಿ ರಂಗೋಲೆಯನ್ನು ಇಕ್ಕಿಸಿ ನೂರು ಹೊರೆ ಮುತ್ತುಗದ ಕಡ್ಡಿಯನ್ನೂ ನೂರು ಗಡಿಗೆ ತುಪ್ಪವನ್ನೂ ನೂರು ವರಹ ವನ್ನೂ ನೂರು ಕರೆಯುವ ಹಸುಗಳನ್ನೂ ತರಿಸಿಕೊಂಡು ರಡ್ಡಿಯನ್ನೂ ರಡ್ಡಿಸಾನಿ ಯನ್ನೂ ಆ ಕುಂಡದ ಮುಂದೆ ಒಂದು ಹಸೆಯ ಮಣೆಯ ಮೇಲೆ ಕೂರಿಸಿ ಬನ್ನಿಯ ಮರದ ಕೊರಡನ್ನು ಕಡಿದು ಅದರಲ್ಲಿ ಹುಟ್ಟಿದ ಬೆಂಕಿಯ ಕಿಡಿಗೆ ಬೆರಣಿಯ ಪುಡಿ ಯನ್ನು ಹಾಕಿ ಹತ್ತಿಸಿ ಗುಂಡಿಯಲ್ಲಿ ಇಟ್ಟು ಸೌದೆಯನ್ನು ಹಾಕಿ ಉರಿಯಿಸಿ ಅದ ರೊಳಗೆ ಒಂದು ಹೊರೆ ಮುತ್ತುಗದ ಕಡ್ಡಿಯನ್ನೂ ಒಂದು ಹರವಿಯ ತುಪ್ಪವನ್ನೂ ಬಾಯಿಯಲ್ಲಿ ಏನೇನೋ ಹೇಳುತ್ತಾ ಹಾಕುತ್ತಾ ಹೊರೆಯ ಕಟ್ಟಿಗೆಯೂ ಹರವಿಯ ತುಪ್ಪವೂ ಮುಗಿದ ಮೇಲೆ ಒಂದು ಕರೆಯುವ ಹಸುವನ್ನೂ ಒಂದು ವರಹವನ್ನೂ ರಡ್ಡಿಯಿಂದ ಧಾರೆ ಎರಸಿ ತಾನು ತೆಗೆದುಕೊಳ್ಳುತ್ತಿದ್ದನು. ಈ ವರ್ತಮಾನವನ್ನು ಮತ್ತೊಬ್ಬ ದಾರಿಗಾರನು ಕೇಳಿ ಅಲ್ಲಿಗೆ ಬಂದುದರಿಂದ ಮೊದಲಿನ ಬ್ರಾಹ್ಮಣನು ಅವನನ್ನು ಕಂಡು ಇವನು ನನ್ನ ಗುಟ್ಟನ್ನು ಏನಾದರೂ ಹೊರಪಡಿಸುವನೋ ಏನೋ ಎಂಬ ಸಂದೇಹದಿಂದ ತುಪ್ಪವನ್ನು ಹಾಕಿ ಹೋಮಮಾಡುವಾಗ್ಗೆ—ನಿನಗರ್ಥಂ ನನ ಗರ್ಥಂ ಸ್ವಾಹಾ! ಎಂದು ಮಂತ್ರವನ್ನು ಹೇಳುವ ಹಾಗೆ ಹೇಳಿ ಹೋಮವನ್ನು ಮಾಡುತ್ತಿದ್ದುದರಿಂದ ಬಂದ ಬ್ರಾಹ್ಮಣನು ಆ ಸನ್ನೆಯನ್ನು ತಿಳಿದು ಸುಮ್ಮನಿದ್ದನು. ಆಗ ಆ ಬ್ರಾಹ್ಮಣನು ತುಪ್ಪವನ್ನೆಲ್ಲಾ ಹೋಮ ಮಾಡಿ ಆ ನೂರ ಹೈನಾಕಳುಗ ಳನ್ನೂ ನೂರು ವರಹಗಳನ್ನೂ ತೆಗೆದುಕೊಂಡು ಹೊರಗೆ ಹೋಗಿ ಇಬ್ಬರೂ ಹಂಚಿ ಕೊಂಡು ತಮ್ಮ ಊರಿಗೆ ಹೋದರು.

---

29. THE MERCHANTS AND THEIR CAT.

೨೯. ವರ್ತಕರೂ ಅವರ ಬೆಕ್ಕೂ.

ಧಾರವಾಡ ದೇಶದಲ್ಲಿ ನಾಲ್ಕು ಜನ ವರ್ತಕರು ಪಾಲಿನ ವ್ಯಾಪಾರಕ್ಕಾಗಿ ಅರಳೆಯನ್ನು ಬಹಳವಾಗಿ ಕೊಂಡು ನಗಗಳನ್ನು ಕಟ್ಟಿಸಿ ಅವುಗಳನ್ನು ಬಾಡಿಗೆ ಎತ್ತುಗಳ ಮೇಲೆ ಹೇರಿಸಿಕೊಂಡು ಒಂದು ಪಟ್ಟಣಕ್ಕೆ ಬಂದು—ಈ ಪಟ್ಟಣವು ಬಹಳ ಬಸ್ತಿಯಾಗಿದೆ; ಇಲ್ಲಿ ಮಾರಿಕೊಂಡು ನಮ್ಮ ದೇಶಕ್ಕೆ ಹೋಗೋಣ ಎಂದು ಒಂದು ಬಾಡಿಗೆಯ ಮನೆಯನ್ನು ಮಾಡಿಕೊಂಡು ಅಲ್ಲಿ ತಮ್ಮ ಅರಳೆಯ ನಗಗಳ ನ್ನೆಲ್ಲಾ ಒಟ್ಟಿ ಅಲ್ಲಿಯೇ ಒಂದು ಕಡೆಯಲ್ಲಿ ಅಡಿಗೆ ಊಟಗಳನ್ನು ಮಾಡಿಕೊಂಡಿ

ದ್ದರು. ಹೀಗಿರುವಲ್ಲಿ ಆ ಅರಳೆಯ ನಗಗಳಿಗೆ ಇಲಿಗಳು ಬಿದ್ದು ಕತ್ತರಿಸಿ ಕೆಡಿಸುತ್ತಾ ಬಂದುದರಿಂದ ನಾಲ್ಕು ಜನವೂ ಕೂಡಿ ಒಟ್ಟಿನಲ್ಲಿ ಒಂದು ಬೆಕ್ಕಿನ ಮರಿಯನ್ನು ಕ್ರಯಕ್ಕೆ ತಂದು ಒಬ್ಬರೊಬ್ಬರು ಆ ಬೆಕ್ಕಿನ ಮರಿಯ ಒಂದೊಂದು ಕಾಲನ್ನು ಹಂಚಿಕೊಂಡು ತಮ್ಮ ತಮ್ಮ ಪಾಲಿನ ಕಾಲಿಗೆ ಗೆಜ್ಜೆ ಮುಂತಾದುದನ್ನು ಕಟ್ಟಿ ಚೆನ್ನಾಗಿ ಪರಾಂಬರಿಕೆಯನ್ನು ತೆಗೆದುಕೊಳ್ಳುತ್ತಾ ಪ್ರೀತಿಯಿಂದ ಆರೈಕೆಯನ್ನು ಮಾಡುತ್ತಾ ಬಂದರು. ಕೆಲವು ದಿವಸಗಳ ಮೇಲೆ ಅದರ ಒಂದು ಕಾಲಿನಲ್ಲಿ ಕೆಟ್ಟ ಹುಣ್ಣು ಎದ್ದುದರಿಂದ ನಾಲ್ಕು ಕಾಲುಗಳನ್ನೂ ಊರಿ ನಡೆಯುವುದಕ್ಕೆ ಆಗದೆ ಮೂರೇ ಕಾಲುಗಳಲ್ಲಿ ನಡೆಯುತ್ತಾ ಇತ್ತು. ಆ ಕಾಲಿನ ಯಜಮಾನನು ಹುಣ್ಣು ವಾಸಿಯಾಗುವುದಕ್ಕೋಸ್ಕರ ಅದಕ್ಕೆ ಎಣ್ಣೆಯ ಬಟ್ಟೆಯನ್ನು ಸುತ್ತಿದನು. ಈ ವರ್ತಕರೆಲ್ಲಾ ವ್ಯಾಪಾರಕ್ಕೆ ಹೋಗಿದ್ದ ವೇಳೆಯಲ್ಲಿ ಈ ಬೆಕ್ಕು ಹೋಗಿ ಒಲೆಯ ಮುಂದೆ ಕೂತಿತ್ತು. ಆಗ ಒಲೆಯಲ್ಲಿ ಇದ್ದ ಬೆಂಕಿಯ ಕಿಡಿಯು ಹುಣ್ಣಿನ ಕಾಲಿಗೆ ಸುತ್ತಿದ್ದ ಎಣ್ಣೆಯ ಬಟ್ಟೆಯ ಮೇಲೆ ಬಿದ್ದು ಹತ್ತಿಕೊಂಡು ಉರಿಯುತ್ತಾ ಇದ್ದುದರಿಂದ ಆ ಬೆಕ್ಕು ಗಾಬರಿಯಾಗಿ ಅಲ್ಲಿಂದ ಮೂರು ಕಾಲಿನಲ್ಲಿಯೇ ಓಡಿ ಬಂದು ಅರಳೆಯ ನಗಗಳ ಮೇಲೆ ಓಡಾಡುತ್ತಾ ಇದ್ದುದರಿಂದ ಇದನ್ನು ಅವರ ಕಡೆಯ ಆಳು ಕಂಡು ಬೆಕ್ಕನ್ನು ಕೆಳಗೆ ತೆಗೆದು ಅದರ ಕಾಲಿನ ಎಣ್ಣೆಯ ಬಟ್ಟೆಯನ್ನು ಬಿಚ್ಚಿಬಿಟ್ಟನು. ಅಷ್ಟು ಹೊತ್ತಿಗೆ ಸಾವಿರಾರು ರೂಪಾಯಿಯ ಅರಳೆ ಸುಟ್ಟುಹೋಯಿತು. ಆ ಬಳಿಕ ವರ್ತಕರು ಮನೆಗೆ ಬಂದು ಈ ಸುದ್ದಿಯನ್ನು ಕೇಳಿ ಹುಣ್ಣಾದ ಕಾಲಿನ ಯಜಮಾನನನ್ನು ಕುರಿತು ಮಿಕ್ಕ ಮೂರು ಮಂದಿ ವರ್ತಕರು—ಅಯ್ಯಾ! ನಿನ್ನ ಪಾಲಿನ ಕಾಲಿಗೆ ನೀನು ಎಣ್ಣೆಯ ಬಟ್ಟೆ ಸುತ್ತಿದುದರಿಂದ ಅರಳೆಯು ಸುಟ್ಟುಹೋಯಿತು. ಈ ನಷ್ಟದಲ್ಲಿ ನಿನ್ನ ಪಾಲಿನದು ಹೋಗಲಾಗಿ ನಮ್ಮ ಮೂವರ ಪಾಲಿನ ನಷ್ಟವನ್ನೂ ನೀನು ನಮಗೆ ಕೊಡಬೇಕೆಂದು ಹೇಳಲು ಅದಕ್ಕೆ ಅವನು ಒಪ್ಪದಿರಲು ಆಗ ಅವನನ್ನು ಕರೆದುಕೊಂಡು ಆ ಪಟ್ಟಣದ ನ್ಯಾಯಾಧಿಪತಿಯ ಬಳಿಗೆ ಹೋಗಿ ತಮ್ಮ ವ್ಯಾಜ್ಯದ ಸಂಗತಿಯನ್ನು ಹೇಳಿಕೊಂಡರು. ಆ ನ್ಯಾಯಾಧಿಪತಿಯು ಅದನ್ನು ಕೇಳಿ—ಎಲೈ ವರ್ತಕರೇ! ಇದು ಈತನ ತಪ್ಪಲ್ಲ; ತನ್ನ ಪಾಲಿನ ಕಾಲು ವಾಸಿಯಾಗುವುದಕ್ಕಾಗಿ ಅವನು ಎಣ್ಣೆಯ ಬಟ್ಟೆಯನ್ನು ಸುತ್ತಿದನಲ್ಲದೆ ಬೇರೆಯಲ್ಲವು. ಆದಕಾರಣ ಈ ನಷ್ಟವು ನಿಮಗೆ ದೈವ ಗತಿಯಿಂದ ಆದುದಾಗಿದೆ. ಅದನ್ನು ನೀವು ಎಲ್ಲರೂ ಸಮಭಾಗಿಗಳಾಗಿ ಅನುಭವಿಸಬೇಕೆಂದು ಎಷ್ಟು ಬಂಡಂಬಡಿಸಿ ಹೇಳಿದಾಗ್ಗೂ ಆ ಮೂರು ಜನರೂ ಕೇಳದೆ ಹೋದುದರಿಂದ ನ್ಯಾಯಾಧಿಪತಿಯು—ಈ ನಷ್ಟವು ನಿಮ್ಮ ಮೂರು ಜನದ ಪಾಲಿನ ಕಾಲುಗಳಿಂದಲೇ ಉಂಟಾಗಿದೆ. ಅವನ ಪಾಲಿನ ಕಾಲಿನಿಂದ ಉಂಟಾದುದಲ್ಲ. ಯಾಕಂದರೆ ನಿಮ್ಮ ಪಾಲಿನ ಕಾಲುಗಳ ಸಹಾಯವಿಲ್ಲದಿದ್ದರೆ ಅವನ ಪಾಲಿನ ಒಂದು ಕಾಲಿನಿಂದಲೇ ಅದಕ್ಕೆ ಅರಳೆಯ ನಗಗಳ ಮೇಲೆ ಹೋಗುವುದಕ್ಕೆ ಆಸ್ಪದವಿರುತ್ತಿರಲಿಲ್ಲ. ಅದು ನಿಮ್ಮ ಪಾಲಿನ ಕಾಲುಗಳ ಸಹಾಯದಿಂದಲೇ ಹೋಗಿ ಅರಳೆಯನ್ನು ಸುಟ್ಟಿತು ಆದಕಾರಣ ಆತನ ಪಾಲಿನ ನಷ್ಟವನ್ನು ನೀವು ಮೂರು ಜನವೂ ಹಂಚಿಕೊಂಡು ಆತನಿಗೆ ಕೊಡಬೇಕೆಂದು ತೀರ್ಪುಮಾಡಿ ಕಳುಹಿಸಿಕೊಟ್ಟನು.

30. THE SWANS AND THE TURTLE.

೩೦. ಹಂಸಗಳೂ ಕೂರ್ಮವೂ

ಪುಷ್ಕರದ್ವೀಪದಲ್ಲಿ ಕುಮುದಾಕರವೆಂಬ ಒಂದು ಸರಸ್ಸಿರುವುದು. ಎರಡು ಹಂಸಪಕ್ಷಿಗಳು ಕಮಲಗಳ ದಂಟಿನ ಆಹಾರಕ್ಕೋಸ್ಕರ ಮಾನಸಸರಸ್ಸಿನಿಂದ ಬಂದು ಅದರಲ್ಲಿ ಇದ್ದುವು. ಆ ಸರಸ್ಸಿನಲ್ಲಿ ಬಹುಕಾಲದಿಂದ ವಾಸಮಾಡಿಕೊಂಡಿದ್ದ ಒಂದು ಆಮೆಯು ಆ ಹಂಸಗಳೊಡನೆ ಸ್ನೇಹವನ್ನು ಮಾಡಿಕೊಂಡು ಇತ್ತು. ಹೀಗಿರುವಲ್ಲಿ ಮಾಗೆಯ ಕಾಲ ಬಂದುದರಿಂದ ಆ ಹಂಸಪಕ್ಷಿಗಳಿಗೆ ತಾವರೆಯ ದಂಟಿನ ಆಹಾರವು ತಪ್ಪಲು ಆಗ ಅವುಗಳಿಗೆ ತಿರಿಗಿ ಮಾನಸಸರಸ್ಸಿಗೆ ಹೋಗಬೇಕೆಂದು ಯತ್ನವುಂಟಾಗಲು ಈ ಆಮೆಯು ಆ ಹಂಸಗಳನ್ನು ಕುರಿತು—ಎಲೈ ಅಣ್ಣಗಳಿರಾ! ನೀವು ಇಲ್ಲಿಗೆ ಬಂದುದರಿಂದ ನಿಮ್ಮ ಸ್ನೇಹವು ದೊರಕಿ ಇಂದಿನವರೆಗೂ ನಿಮ್ಮೊಡನೆ ನಾನು ಬಹು ಸುಖದಿಂದ ಇದ್ದೆನು. ಈಗ ತಿರಿಗಿ ನೀವು ನಿಮ್ಮ ಸ್ಥಳಕ್ಕೆ ಹೊರಟು ಹೋಗುವವರಾದರೆ ನಿಮ್ಮನ್ನು ಬಿಟ್ಟು ನಾನು ಇರಲಾರೆನು. ನೀವು ದಯಮಾಡಿ ನನ್ನನ್ನೂ ನಿಮ್ಮ ಸಂಗಡ ಕರಕೊಂಡು ಹೋಗಿ ಆ ಮಾನಸಸರಸ್ಸಿನಲ್ಲಿ ಬಿಟ್ಟರೆ ನಿಮ್ಮೊಡನೆ ಸುಖವಾಗಿರುವೆನು ಎಂದು ಹೇಳಿತು. ಆಗ ಹಂಸಪಕ್ಷಿಗಳು—ಏನಯ್ಯಾ ಸ್ನೇಹಿತನೇ! ಇದೆಂಥಾ ಹುಚ್ಚುಮಾತಾಡಿದೆ? ಬಹು ದೂರವಾದ ಮಾನಸಸರಸ್ಸು ಎಲ್ಲಿ? ನೀರಿನಲ್ಲಿ ಓಡಾಡುವ ನೀನೆಲ್ಲಿ? ಆಕಾಶದಲ್ಲಿ ಬಹು ವೇಗದಿಂದ ಹಾರಿ ಹೋಗುವ ನಾವು ನಿನ್ನನ್ನು ಕರ ಕೊಂಡು ಹೋಗುವುದು ಹೇಗೆ? ಇಂಥಾ ದುರ್ಘಟವಾದ ಕೆಲಸವು ನಮ್ಮಿಂದ ಹೇಗೆ ಆದೀತು? ಎಂದು ಹೇಳಿದುವು. ಅದಕ್ಕೆ ಆಮೆಯು—ಎಲೈ ಅಣ್ಣಗಳಿರಾ! ಇದೇನು ಹೀಗೆ ಹೇಳುತ್ತೀರಿ? ಘಟ್ಟಿಗರಾದವರಿಗೆ ಯಾವ ಕೆಲಸ ತಾನೇ ಅಸಾಧ್ಯ? ಉದ್ಯೋಗಿಯಾದವನಿಗೆ ಯಾವ ದೇಶತಾನೇ ದೂರ? ವಿದ್ಯಾವಂತನಿಗೆ ಯಾವುದು ತಾನೇ ಪರದೇಶ? ಒಳ್ಳೆಯ ಮಾತಾಡುವವನಿಗೆ ಯಾರು ತಾನೇ ಹಗೆಗಳು? ಎಂದು ನೀತಿ ಉಂಟು ಆದುದರಿಂದ ನೀವು ಒಂದು ಕೋಲನ್ನು ತೆಗೆದುಕೊಂಡು ಅದರ ಒಂದೊಂದು ತುದಿಯನ್ನು ಒಬ್ಬೊಬ್ಬರು ಕೊಕ್ಕಿನಿಂದ ಕಚ್ಚಿಕೊಂಡರೆ ನಾನು ಆ ಕೋಲಿನ ಮಧ್ಯಭಾಗವನ್ನು ಬಾಯಿಯಿಂದ ಗಟ್ಟಿಯಾಗಿ ಕಚ್ಚಿಕೊಳ್ಳುತ್ತೇನೆ. ಆ ಮೇಲೆ ನೀವು ಎಷ್ಟು ಜಾರುಕಾಗಿಯಾದರೂ ಆಕಾಶದಲ್ಲಿ ಹಾರಿ ಹೋಗಬಹುದು ಎಂದು ಹೇಳಿತು. ಅದಕ್ಕೆ ಆ ಹಂಸಪಕ್ಷಿಗಳು—ಈ ಉಪಾಯ ಸರಿ; ಆದರೆ ಸ್ಥಳವನ್ನು ಮುಟ್ಟುವ ವರೆಗೂ ನೀನು ಬಾಯಿ ಬಿಡದೆ ಇರಬೇಕು. ಈ ಮಧ್ಯದಲ್ಲಿ ಬಿಟ್ಟರೆ ಕೆಳಗೆ ಬಿದ್ದು ನುಚ್ಚುನುರಿಯಾಗಿ ಹೋಗುವಿ ಎಂದು ಹೇಳಿ ಅವುಗಳು ಅದೇ ಪ್ರಕಾರ ಮಾಡಿದುವು. ಹೀಗೆ ಆಕಾಶಮಾರ್ಗದಲ್ಲಿ ಹೋಗುವಾಗ್ಗೆ ಒಂದು ಸ್ಥಳದಲ್ಲಿ ದನಗಳನ್ನು ಮೇಯಿಸುತ್ತಾ ಇದ್ದ ಹುಡುಗರು ಅದನ್ನು ನೋಡಿ—ಎಲಾ ನೋಡಿರೋ! ಇದೇನಾ ಶ್ಚರ್ಯ? ಒಂದು ಕೋಲಿನ ತುದಿಗಳನ್ನು ಎರಡು ಹಂಸಗಳು ಕಚ್ಚಿಕೊಂಡು ಹಾರಿ ಹೋಗುತ್ತವೆ. ಅದರ ಮಧ್ಯಭಾಗವನ್ನು ಆಮೆಯು ಕಚ್ಚಿಕೊಂಡು ಹೋಗುತ್ತದೆ. ನಾವು ಇದನ್ನು ನೋಡುತ್ತಾ ಇದರ ಕೆಳಗೇ ಹೋಗೋಣ. ದೇವರ ದಯದಿಂದ

ಆ ಆಮೆಯು ನಡುವೆ ಏನಾದರೂ ಬಾಯಿ ಬಿಟ್ಟರೆ ಕೆಳಗೆ ಬಿದ್ದು ಸತ್ತುಹೋಗುತ್ತದೆ. ನಾವೆಲ್ಲರೂ ಇದನ್ನು ಸುಟ್ಟುಕೊಂಡು ತಿನ್ನಬಹುದು ಎಂದು ಒಬ್ಬರಿಗೊಬ್ಬರು ಮಾತಾಡಿಕೊಳ್ಳುವುದನ್ನು ಆ ಆಮೆಯು ಕೇಳಿ—ಬಾಯಿ ಬಿಡುವುದಕ್ಕೆ ನಾನು ಹುಚ್ಚನಲ್ಲ ಎಂದು ಪ್ರತ್ಯುತ್ತರವನ್ನು ಕೊಡುವುದಕ್ಕೆ ಬಾಯಿ ತೆರೆದು ಕೆಳಗೆ ಬಿದ್ದು ಸತ್ತುಹೋದುದರಿಂದ ದನಕಾಯುವ ಹುಡುಗರು ಅದನ್ನು ಸುಟ್ಟು ತಿಂದುಬಿಟ್ಟರು. ಹಂಸಗಳು—ಈ ಆಮೆಯ ಬುದ್ಧಿಹೀನತೆಗೆ ವ್ಯಸನಪಟ್ಟು ಕೋಲನ್ನು ಬಿಟ್ಟು ಮಾನಸ ಸರಸ್ಸಿಗೆ ಹೊರಟುಹೋದವು.

---

31. THE CROW, THE DEER, AND THE JACKAL.

೩೧. ಕಾಗೆಯೂ ಹುಲ್ಲೆಯೂ ನರಿಯೂ.

ಮಗಧದೇಶದಲ್ಲಿರುವ ಜಂಘಕವತೀ ಎಂಬ ಅರಣ್ಯದಲ್ಲಿ ಸಂಪಿಗೆಯ ಮರದ ಮೇಲೆ ಸುಬುದ್ಧಿ ಎಂಬ ಒಂದು ಕಾಗೆಯು ವಾಸವನ್ನು ಮಾಡಿಕೊಂಡಿತ್ತು. ಅದರ ಸಂಗಡ ಸಾಧುಬುದ್ಧಿ ಎಂಬ ಒಂದು ಹುಲ್ಲೆಯು ಬಹು ಕಾಲದಿಂದ ಸ್ನೇಹವನ್ನು ಬಳಸಿಕೊಂಡು ಹಗಲೆಲ್ಲಾ ತನ್ನ ಹೊಟ್ಟೆಯ ಪಾಡಿಗೆ ತಿರುಗುತ್ತಾ ರಾತ್ರಿ ವೇಳೆಯಲ್ಲಿ ಆ ಕಾಗೆ ಇರುವ ಸಂಪಿಗೆಯ ಮರದ ಕೆಳಗೆ ಬಂದು ಸೇರಿ ಆ ಕಾಗೆಯೊಡನೆ ಸುಖ ಸಲ್ಲಾಪಗಳನ್ನು ಮಾಡಿಕೊಂಡು ಇರುತ್ತಾ ಇತ್ತು. ಹೀಗಿರುವಲ್ಲಿ ಒಂದು ದಿವಸ ಈ ಹುಲ್ಲೆಯು ಮೇಘಗೋಸ್ಕರ ಅರಣ್ಯದಲ್ಲಿ ತಿರುಗುತ್ತಾ ಇರಲು ದುರುಳಬುದ್ಧಿ ಎಂಬ ಒಂದು ಗುಳ್ಳೆಯನರಿಯು ಇವನ್ನು ಕಂಡು—ಆಹಾ! ಈ ಹುಲ್ಲೆಯು ಬಹಳ ಕೊಬ್ಬಿದ ಮೈಯ್ಯುಳ್ಳದ್ದಾಗಿ ಇದೆ ಸುಖದಿಂದ ಇದರ ಮಾಂಸಖಂಡಗಳನ್ನು ನಾನು ತಿನ್ನಬೇಕಾದರೆ ಇದಕ್ಕೇನು ಉಪಾಯವನ್ನು ಮಾಡಬೇಕೆಂದು ಒಂದು ಗಳಿಗೆ ಯೋಚಿಸಿ—ಒಳ್ಳೆಯದು! ಇದರ ಕೂಡ ಸ್ನೇಹವನ್ನು ಬಳಸಿ ನೋಡುವೆನೆಂದು ಅದರ ಬಳಿಗೆ ಬಂದು—ಆಯ್ಯಾ ಮಿತ್ರನೇ! ನಾನು ನೆಂಟರಿಷ್ಟರಿಲ್ಲದೆ ಪರದೇಶಿಯಾಗಿ ಈ ಕಾಡಿನಲ್ಲಿ ಏಕಾಂಗಿಯಾಗಿ ತಿರುಗುತ್ತಾ ಇದ್ದೆನು. ಈ ಹೊತ್ತು ನನ್ನ ಪುಣ್ಯದಿಂದ ನಿನ್ನನ್ನು ಕಂಡು ಬಹಳ ಸಂತುಷ್ಟನಾದೆನು. ಈ ದಿನ ಮೊದಲುಗೊಂಡು ನಾನು ನಿನ್ನ ದಾಸನಾಗಿ ನಿನ್ನೊಡನೆ ತಿರುಗಿಕೊಂಡಿರುವೆನೆಂದು ಬಹಳ ದೈನ್ಯವಾಗಿ ಹೇಳಿಕೊಂಡುದರಿಂದ ಹುಲ್ಲೆಯು—ಹಾಗಾಗಲಿ ಎಂದು ಒಪ್ಪಿ ಅದನ್ನು ಕರೆದುಕೊಂಡು ಸಂಜೆಯ ವೇಳೆಯಲ್ಲಿ ಸಂಪಿಗೆಯ ಮರದ ಬಳಿಗೆ ಬಂದಿತು. ಆಗ ಕಾಗೆಯು ಹುಲ್ಲೆಯನ್ನು ನೋಡಿ—ಇದಾರು? ಮತ್ತೊಬ್ಬ ಹೊಸಬ ಬಂದಿರುವನು ಎಂದು ಕೇಳಲು ಇದು ದುರುಳಬುದ್ಧಿ ಎಂಬ ನರಿಯು. ನಮ್ಮೊಡನೆ ಸ್ನೇಹವನ್ನು ಬಯಸಿ ಬಂದು ಇದೆ ಎಂದು ಹುಲ್ಲೆಯು ಹೇಳಿತು. ಅದಕ್ಕಾಕಾಗೆಯು—ಗುರುತು ಪರಿಚಿತಿ ಇಲ್ಲದವರೊಡನೆ ಸ್ನೇಹ ಬಳಸುವುದು ನ್ಯಾಯವಲ್ಲ ಎನಲು ಅದಕ್ಕೆ ಆ ನರಿಯು—ಮುಂಚಿತವಾಗಿಯೇ ಹೇಗೆ ಗುರುತು ಪರಿಚಿತಿ ಆದೀತು? ನೀನು ಈ ಹುಲ್ಲೆಯ ಸ್ನೇಹ

ವನ್ನು ಮಾಡುವುದಕ್ಕಿಂತ ಮೊದಲು ನಿನಗೂ ಇದಕ್ಕೂ ಗುರುತು ಪರಿಚಿತಿ ಇತ್ತೋ ? ಇರಲಿಲ್ಲವು ; ಇದು ಈಚೆಗೆ ಆಯಿತು. ಹಾಗೆಯೇ ಇನ್ನು ಮೇಲೆ ನನ್ನ ಗುರುತು ಪರಿಚಿತಿ ಆತುಗ್ತದೆ. ನೀವು ದಯಮಾಡಿ ನನ್ನನ್ನು ನಿಮ್ಮ ಸ್ನೇಹಿತನನ್ನಾಗಿ ನಿಮ್ಮಲ್ಲಿ ಸೇರಿಸಿ ಕೊಳ್ಳಬೇಕೆಂದು ಕಾಗೆಯನ್ನು ಬೇಡಿಕೊಂಡಿತು. ಆ ಕಾಗೆಯು ಅರ್ಧಾಂಗೀಕಾರವಾಗಿ ಒಪ್ಪಲು ಮೂರೂ ಸ್ನೇಹದಿಂದಿದ್ದುವು. ಹೀಗಿರುವಲ್ಲಿ ಮತ್ತೊಂದು ದಿವಸ ಕಾಡಿನಲ್ಲಿ ಈ ನರಿಯು ಹುಲ್ಲೆಯನ್ನು ನೋಡಿ—ಅಯ್ಯಾ ಸ್ನೇಹಿತನೇ ! ಸಮೀಪದಲ್ಲಿ ಒಂದು ಗದ್ದೆಯು ಹೊಂಬಣ್ಣವಾದ ಭತ್ತದ ತೆನೆಗಳಿಂದ ಕೂಡಿ ಇದೆ. ನೋಡು ! ಬಾ ಎಂದು ಕರಕೊಂಡು ಹೋಗಿ ತೋರಿಸಿತು. ಹುಲ್ಲೆಯು ಬಹು ಸಂತೋಷದಿಂದ ಪ್ರತಿದಿನದಲ್ಲಿಯೂ ಹೋಗಿ ಮೇಯುತ್ತಾ ಇತ್ತು. ಆ ಗದ್ದೆಯ ಒಡೆಯನು ಅದನ್ನು ಕಂಡು ಮಿಕ ಬಂದು ಮೇಯಿದು ಹೋಗುತ್ತದೆಂದು ತಿಳಿದು ಒಂದು ದಿನ ಗದ್ದೆಯ ಸುತ್ತಲೂ ಬಲೆಯನ್ನು ಒಡ್ಡಿ ಮನೆಗೆ ಹೋಗಿದ್ದನು. ಅದನ್ನು ಕಾಣದೆ ಹುಲ್ಲೆಯು ಯಥಾಪ್ರಕಾರ ಮೇಯುವುದಕ್ಕೆ ಹಾರಿ ಹೋಗುವಾಗ ಬಲೆಯಲ್ಲಿ ಸಿಕ್ಕಿಬಿದ್ದಿತು. ಆಗ ಅದು ಸಮೀಪದಲ್ಲಿರುವ ನರಿಯನ್ನು ನೋಡಿ—ಅಯ್ಯಾ ಗೆಳೆಯನೇ ! ಈಗ ಈ ಬಲೆಯನ್ನು ಕಡಿದು ನನ್ನನ್ನು ಹೊರಡಿಸಿಕೊಂಡು ಹೋಗು ಎನ್ನಲು ನರಿಯು ತನ್ನ ಮನಸ್ಸಿನಲ್ಲಿ—ನಾನು ಮಾಡಿದ ತಂತ್ರವು ಈಗ ನೆರವೇರಿತು ಎಂದು ಸಂತೋಷ ಪಟ್ಟು ಹುಲ್ಲೆಯನ್ನು ಕುರಿತು—ಅಯ್ಯಾ ಮಿತ್ರನೇ ! ಈ ಬಲೆಯು ದನದ ನರಗಳಿಂದ ಮಾಡಿ ಇದೆ. ಇದನ್ನು ಕಡಿದರೆ ನನ್ನ ಹಲ್ಲುಗಳು ಉಳಿಯುವುವೇ ? ಆದರೂ ಚಿಂತೆ ಇಲ್ಲ ; ನಿನಗೋಸ್ಕರ ಕಡಿಯುವಣ ಎಂದರೆ ಈ ಸೋಮವಾರದ ದಿವಸ ಅಶುಚಿಯಾದ ನರವನ್ನು ಬಾಯಿಯಿಂದ ಹೇಗೆ ಮುಟ್ಟಲಿ ? ನಾಳೆ ಹೊತ್ತಾರೆ ನೋಡುವಣ ಎನ್ನಲು ಹುಲ್ಲೆಯು—ಇದು ಮೋಸಗಾರನೆಂದು ನೆನಸಿ ಸುಮ್ಮನಾಯಿತು. ಅಲ್ಲಿ ಸಂಜೆಯ ವೇಳೆಗೆ ಕಾಗೆಯು ತನ್ನ ಮಿತ್ರನಾದ ಹುಲ್ಲೆಯೂ ಆ ನರಿಯೂ ಬಾರದಿರಲು ವ್ಯಸನದಿಂದ ನಿದ್ರೆಯನ್ನು ಮಾಡದೆ ಮುಂಜಾನೆ ಎದ್ದು ಹುಡುಕುತ್ತಾ ಒಂದು ಬಲೆಯಲ್ಲಿ ಸಿಕ್ಕಿರುವ ಸ್ನೇಹಿತನನ್ನು ಕಂಡು—ಇದೇನು ? ಎಂದು ಕೇಳಲು ಸ್ನೇಹಿತನಾದ ನಿನ್ನ ಮಾತನ್ನು ಕೇಳದೆ ಹೋದುದಕ್ಕೆ ಇದು ಪ್ರಾಯಶ್ಚಿತ್ತವೆಂದಿತು. ಆ ದುರುಳನೆಲ್ಲಿ ? ಅನ್ನಲು—ಅದೋ ! ನನ್ನ ಮಾಂಸವನ್ನು ತಿನ್ನುವುದಕ್ಕೆ ಅಲ್ಲಿ ಕಾದು ಕೊಂಡು ಕೂತಿದೆ ಎಂದಿತು. ಅಷ್ಟರಲ್ಲಿ ಕಾಗೆಯು ಆ ಗದ್ದೆಯವನು ಕೈಯ್ಯಲ್ಲಿ ದೊಣ್ಣೆ ಹಿಡಿದುಕೊಂಡು ಬರುವುದನ್ನು ಕಂಡು—ಅದೋ! ನಿನ್ನನ್ನು ಕೊಲ್ಲುವುದಕ್ಕೆ ಗದ್ದೆಯವನು ಬರುತ್ತಾನೆ. ನೀನು ನಾಲ್ಕು ಕಾಲುಗಳನ್ನೂ ಬೀರಿಕೊಂಡು ಉಸಿರನ್ನು ಕಟ್ಟಿ ಹೊಟ್ಟೆಯನ್ನು ಉಬ್ಬರಿಸಿಕೊಂಡು ಕಣ್ಣುಗಳನ್ನು ಮುಚ್ಚಿಕೊಂಡು ಬಿದ್ದುಕೋ ; ನಾನು ನಿನ್ನ ಕಣ್ಣನ್ನು ಕುಕ್ಕುವವನ ಹಾಗೆ ನಿನ್ನ ಮೇಲೆ ಕೂತಿರುವೆನು. ನಾನು ಯಾವಾಗ ಕೂಗಿಕೊಂಡು ಮೇಲಕ್ಕೆ ಹಾರುತ್ತೇನೋ ಆಗ ನಿನ್ನ ಸರ್ವಶಕ್ತಿಯನ್ನೆಲ್ಲಾ ಉಪಯೋಗಿಸಿ ಹಾರಿಹೋಗು ಎಂದು ಹೇಳಿ ಆ ರೀತಿ ಮಾಡಿಸಿ ತಾನು ಅದರ ಮೇಲೆ ಕೂತಿತ್ತು ಆಗ ಗದ್ದೆಯ ಒಡೆಯನು ಬಂದು ಹುಲ್ಲೆಯ ಇರುವಿಕೆಯನ್ನು ನೋಡಿ

ಇದು ತನ್ನಷ್ಟಕ್ಕೆ ತಾನೇ ಸತ್ತಿದೆ ಎಂದು ಎಣಿಸಿ ಬಲೆಯನ್ನು ಬಿಚ್ಚಿ ಇಟ್ಟು ಹುಲ್ಲೆಯನ್ನು ತೆಗೆದುಕೊಳ್ಳುವುದಕ್ಕೆ ಬರುತ್ತಿರಲು ಕಾಗೆಯು ಕೂಗಿಕೊಂಡು ಹಾರಿ ಹೋಯಿತು. ಸಂಗಡಲೇ ಹುಲ್ಲೆಯೂ ಹಾರುತ್ತಿರಲಾಗಿ ಗದ್ದೆಯವನು ಕಂಡು ದೊಣ್ಣೆಯನ್ನು ಎಸೆಯಲು ಅದು ಹುಲ್ಲೆಗೆ ತಗುಲದೆ ಕೂತಿದ್ದ ನರಿಗೆ ತಗುಲಿ ನರಿಯು ಸತ್ತುಹೋಯಿತು. ಆದುದರಿಂದ ಒಬ್ಬರಿಗೆ ಮೋಸವನ್ನು ಮಾಡಬೇಕೆಂದೆಣಿಸಿದವರನ್ನು ದೇವರು ಕೆಡಿಸುವನು.

---

32. THE SHOPKEEPER'S SON AND THE JEWEL.

೩೨. ಕೋಮಟಿಗನ ಮಗನಿಗೆ ರತ್ನ ಸಿಕ್ಕಿದುದು.

ಅಳಕವತೀ ಎಂಬ ಪಟ್ಟಣದಲ್ಲಿ ಅಳಕಶೇಖರನೆಂಬ ಅರಸು ಇದ್ದನು. ಆ ನಗರದಲ್ಲಿ ಚಿನ್ನಸೆಟ್ಟಿ ಎಂಬ ಕೋಮಟಿಗನು ಚಿಲ್ಲರೆಯ ಅಂಗಡಿಯನ್ನು ಹಾಕಿಕೊಂಡ ವ್ಯಾಪಾರವನ್ನು ಮಾಡಿಕೊಂಡು ಇದ್ದನು. ಅವನು ಒಂದಾನೊಂದು ದಿವಸ ತನ್ನ ಮಗನಾದ ಯೆಂಗಶೆಟ್ಟಿ ಎಂಬವನನ್ನು ಕರೆದು —ಅಂಗಡಿಯಲ್ಲಿ ಚವುಳುವ್ವು ಇಲ್ಲ. ಉಪ್ಪಾರರ ಮೋಳೆಗೆ ಹೋಗಿ ಚವುಳುಪ್ಪನ್ನು ತೆಗೆದುಕೊಂಡು ಬಾ ಎಂದು ಒಂದು ರೂಪಾಯಿಯನ್ನು ಕೊಟ್ಟು ಕಳುಹಿಸಿದನು. ಈ ಯೆಂಗಶೆಟ್ಟಿಯು ಪಕ್ಕಾಸೇರನ್ನೂ ಕುಕ್ಕೆಯನ್ನೂ ತೆಗೆದುಕೊಂಡು ಉಪ್ಪಾರರ ಮೋಳೆಗೆ ಹೋಗಿ ಚವುಳುಪ್ಪನ್ನು ಅಗ್ಗವಾಗಿ ಕ್ರಯಮಾಡಿ ತೆಗೆದುಕೊಂಡು ಬರುತ್ತಾ ಪಟ್ಟಣದ ಬೀದಿಯಲ್ಲಿ ಉಪ್ಪಿನ ಕುಕ್ಕೆಯನ್ನು ಎತ್ತಿ ಹಾಕಿಕೊಂಡು ಬಿದ್ದು ಅಳುತ್ತಾ ಆ ಉಪ್ಪನ್ನು ಮಣ್ಣಿನೊಡನೆ ಬಾಚಿ ಬಾಚಿ ಕುಕ್ಕೆಗೆ ತುಂಬಿಕೊಳ್ಳುತ್ತಾ ಇದ್ದನು. ಬರುವ ಹೋಗುವ ಜನರಲ್ಲಿ ಇವನ ಗುರುತು ಕಂಡವರು ಇದನ್ನು ನೋಡಿ ಅವನ ಅಪ್ಪನ ಬಳಿಗೆ ಹೋಗಿ—ನಿನ್ನ ಮಗನು ರಾಜಬೀದಿಯಲ್ಲಿ ಉಪ್ಪಿನ ಮಂಕರಿಯನ್ನು ಎತ್ತಿ ಹಾಕಿಕೊಂಡು ಬಿದ್ದು ಅಳುತ್ತಾ ತಿರಿಗಿ ಮಣ್ಣಿನಲ್ಲಿ ಬೆರೆದ ಉಪ್ಪನ್ನು ಕುಕ್ಕೆಗೆ ತುಂಬುತ್ತಲಿದ್ದಾನೆ ಅನ್ನಲು ಆ ಕೋಮಟಿಗನು—ನನ್ನ ಮಗ ಬಹು ಜಾಣನು ; ಏನೋ ಲಾಭವನ್ನು ಕಂಡು ಹೀಗೆ ಮಾಡಿದ್ದಾನೆಂದು ಮನಸ್ಸಿನಲ್ಲಿ ಸಂತೋಷವನ್ನು ಹೊಂದಿ ಹೇಳಿದವನ ಸಂಗಡ—ನಷ್ಟ ಕಾಲ! ಏನುಮಾಡಬೇಕು ? ಎಂದು ವ್ಯಸನವನ್ನು ನಟಿಸಿ ಕಳುಹಿಸಿಬಿಟ್ಟನು. ಆ ಮೇಲೆ ಮಣ್ಣು ಬೆರೆದ ಉಪ್ಪನ್ನು ಹೊತ್ತುಕೊಂಡು ಅಳುತ್ತಾ ಬರುವ ಮಗನ ಕುಕ್ಕೆಯನ್ನು ಇಳಿಸಿಕೊಂಡು ತಲೆಬಾಗಿಲನ್ನು ಹಾಕಿ ತಾನೂ ಮಗನೂ ಸಹ ಆ ಉಪ್ಪನ್ನು ಕೇರಿ ನೋಡುವಲ್ಲಿ ಅದರೊಳಗೆ ಲಕ್ಷಾಂತರವರಹ ಬಾಳುವ ರತ್ನ ಸಿಕ್ಕಿದುದರಿಂದ ಅದನ್ನು ಮಾರಿ ಅದರಿಂದ ದ್ವೀಪಾಂತರಗಳ ವ್ಯಾಪಾರವನ್ನು ಮಾಡುತ್ತಾ ದೊಡ್ಡ ಸಾಹುಕಾರರು ಅನ್ನಿಸಿಕೊಂಡು ಜೆನ್ನಾಗಿ ಬದುಕಿದರು.

---

33. THE COCOANUT AND MANGO TREES.

೩೩. ತೆಂಗಿನ ಮರವೂ ಮಾವಿನ ಮರವೂ.

ಮಧುವನದಲ್ಲಿ ಚೆನ್ನಾಗಿ ಬೆಳೆದು ಉದ್ದವಾದ ಗರಿಗಳಿಂದಲೂ ಬಿಳಿಯ ಚಾಮರದೋಪಾದಿಯಲ್ಲಿ ಇರುವ ಹೊಂಬಾಳೆಗಳಿಂದಲೂ ಹರಳುಗಾಯಿಗಳಿಂದಲೂ ಕುರುಬೆಗಳಿಂದಲೂ ಎಳೆನೀರುಗಳಿಂದಲೂ ಮೋತೆಗಾಯಿಗಳಿಂದಲೂ ತಳಲುಗಾಯಿಗಳಿಂದಲೂ ಒಪ್ಪುತ್ತಿರುವ ತೆಂಗಿನ ಮರವು ತನ್ನ ಬಳಿಯಲ್ಲಿ ತನಗೆ ಸರಿಯಾಗಿ ಬೆಳೆದಿರುವ ಸೀ ಮಾವಿನ ಮರವನ್ನು ನೋಡಿ—ಎಲೋ ಹೆಮ್ಮೆಗಾರನೇ! ನಾನೂ ಒಬ್ಬ ದೊಡ್ಡ ಮನುಷ್ಯನೆಂದು ನನಗೆ ಸರಿಯಾಗಿ ನನ್ನ ಬಳಿಯಲ್ಲಿ ನೀನು ನಿಲ್ಲಬಹುದೇ? ನಿನ್ನ ಫಲವು ಹೊರಗೆ ಮಧುರವಾಗಿದ್ದಾಗ್ಯೂ ಒಳಗೆ ಬಹಳ ಕಠಿಣವಾಗಿದೆ. ಅದು ದರಿಂದ ನಿನ್ನನ್ನು ಬರುವ ಹೋಗುವ ಜನರೆಲ್ಲಾ ಕಲ್ಲಿನಿಂದಲೂ ದೊಣ್ಣೆಗಳಿಂದಲೂ ಹೊಡೆಯುತ್ತಾರೆ. ಇದರ ಮೇಲೂ ನೀನು ವರುಷಕ್ಕೆ ಒಂದೆರಡು ತಿಂಗಳು ಮಾತ್ರ ಜನರಿಗೆ ಉಪಕಾರಿಯಾಗಿದ್ದೀ. ನಾನಾದರೋ ಮುನ್ನೂರು ಅರವತ್ತು ದಿವಸವೂ ಜನರಿಗೆ ಉಪಕಾರವನ್ನು ಮಾಡುತ್ತೇನೆ ಸಿಪ್ಪೆ ಎಂಬ ಚರ್ಮದಿಂದ ಮುಚ್ಚಲ್ಪಟ್ಟುದಾಗಿಯೂ ಕರಟವೆಂಬ ಬ್ರಹ್ಮಕಪಾಲದಿಂದ ಕೂಡಿದುದಾಗಿಯೂ ಸ್ಫಟಿಕದಂತೆ ಬಿಳುಪಾಗಿಯೂ ಮಧುರೋದಕವನ್ನು ಧರಿಸಿದುದಾಗಿಯೂ ಗಣಪತಿಗೆ ಸಂತೋಷಕರವಾಗಿಯೂ ಮೂರು ಕಣ್ಣುಗಳು ಉಳ್ಳುದಾಗಿಯೂ ಎತ್ತಿನ ಮೇಲೆ ಸಂಚಾರಮಾಡುವುದಾಗಿಯೂ ಇರುವ ನನ್ನ ಫಲವನ್ನು ಸಾಕ್ಷಾತ್ ಶಿವನೆಂದು ಎಲ್ಲರೂ ಸೇವಿಸುತ್ತಾರೆ ಎನಲು ಮಾವಿನ ಮರವು ತೆಂಗಿನ ಮರವನ್ನು ಕುರಿತು—ಛೀ! ಛೀ! ನೀನು ಯಾವ ದೊಡ್ಡ ಮನುಷ್ಯ? ದೊಡ್ಡವರು ನಿನ್ನಂತೆ ಮತ್ತೊಬ್ಬರನ್ನು ನಿಂದಿಸುವರೇ? ತಮ್ಮನ್ನು ತಾವು ಹೊಗಳಿಕೊಳ್ಳುವರೇ? ನನ್ನ ಫಲದಲ್ಲಿ ಒಳಗೆ ಕಾಠಿಣ್ಯವಿದ್ದರೆ ನಿನ್ನಲ್ಲಿ ಹೊರಗೆ ಕಾಠಿಣ್ಯವದೆ. ಆದರೆ ನನ್ನ ಕಾಠಿಣ್ಯದಲ್ಲಿ ಪ್ರಯೋಜನವಿರುವುದರಿಂದ ಅದನ್ನು ಜನರು ಕುಣಿಯಲ್ಲಿ ನೆಟ್ಟು ನೀರು ಹೊಯ್ದು ಲಾಲಿಸುತ್ತಾರೆ. ನಿನ್ನ ಕಾಠಿಣ್ಯವು ವ್ಯರ್ಥವಾದುದರಿಂದ ಬೆಂಕಿಯಲ್ಲಿ ಹಾಕಿ ಸುಟ್ಟುಬಿಡುತ್ತಾರೆ. ಶ್ರಮಪಟ್ಟು ಬಂದವರನ್ನು ಸದಾಕಾಲವೂ ನನ್ನ ನೆರಳಿನಿಂದ ಸೌಖ್ಯಪಡಿಸುತ್ತೇನೆ. ನೀನು ಮಟ್ಟಿಯನ್ನು ಕೆಡವಿ ಪ್ರಾಣವನ್ನು ಕೊಲ್ಲುವವನಾದುದರಿಂದ ಒಬ್ಬರೂ ನಿನ್ನ ನೆರಳನ್ನು ಸೇರುವುದಿಲ್ಲ. ಮನ್ಮಥನು ನನ್ನ ಹೂವೆಂಬ ಬಾಣವನ್ನು ಶಿವನೆದೆಗೆ ಎಸೆಯಲು ಶಿವನು ಸೋತು ಅರೆವೆಣ್ಮೈಯ್ಯಾದನು. ನನ್ನ ಹಣ್ಣೇ ಶಿವನೆಂದು ಹೆಮ್ಮೆಯನ್ನು ಕೊಚ್ಚಿಕೊಳ್ಳುತ್ತೀ. ಲೋಕದಲ್ಲಿ ಸರ್ವಗುಣಹೀನವಾದ ವಸ್ತುವೂ ಇಲ್ಲ; ಸರ್ವಗುಣಸಂಪನ್ನವಾದ ವಸ್ತುವೂ ಇಲ್ಲವೆನಲು ತೆಂಗಿನ ಮರವು ನಾಚಿಕೊಂಡು ಸುಮ್ಮನಾಯಿತು.

---

34. THE STORY OF A MAHARAJA.

೩೪. ಮಹಾರಾಜನ ಚರಿತ್ರೆಯು.

ಮಲೆನಾಡಿನಲ್ಲಿ ರಾಜಮಹೇಂದ್ರವೆಂಬ ಒಂದು ಪಟ್ಟಣವು ಇರುವುದು. ಆ ಪಟ್ಟಣದಲ್ಲಿ ಮಹಾರಾಜನೆಂಬ ಅರಸು ಇರುವನು. ಅವನು ಪ್ರತಿನಿತ್ಯದಲ್ಲಿಯೂ ಬೇಟೆಯನ್ನು ಆಡಿ ಯಾವುದಾದರೂ ಒಂದು ಮೃಗದ ಮಾಂಸವನ್ನು ತನ್ನ ಅಡಿಗೆಯ ಮನೆಗೆ ತಂದುಕೊಡುವಂತೆ ಬೇಟೆಗಾರರಿಗೆ ಕಟ್ಟಳೆಯನ್ನು ಮಾಡಿಸಿ ಇದ್ದುದರಿಂದ ಅವರು ಅದೇ ನೇರೆಗೆ ತಂದುಕೊಡುತ್ತಾ ಇದ್ದರು. ಅರಸು ಅದನ್ನು ಬಾಣಸಿಗನ ಕೈಯಿಂದ ಅಡಿಗೆಮಾಡಿಸಿ ತಿನ್ನುತ್ತಾ ಇದ್ದನು. ಹೀಗಿರುವಲ್ಲಿ ಒಂದು ದಿವಸ ಸೋನೆಯ ಮಳೆಯು ಜಡಿ ಹಿಡಿದು ಹೊರಗೆ ಕಾಲನ್ನು ಇಡುವುದಕ್ಕೆ ಅವಕಾಶವಿಲ್ಲದಹಾಗಾದುದರಿಂದ ಆ ಬೇಟೆಗಾರರು ಹತ್ತು ವರುಷದ ವಯಸ್ಸುಳ್ಳ ಯಾವನೋ ಒಬ್ಬ ಹುಡುಗನನ್ನು ಕೊಂದುಹಾಕಿ ಅವನ ಮಾಂಸವನ್ನು ಅರಸಿನ ಅಡಿಗೆಯ ಮನೆಗೆ ಕೊಟ್ಟರು. ಅಡಿಗೆಯವನು ಪಾಕವನ್ನು ಮಾಡಿ ಅರಸಿಗೆ ಬಡಿಸಲು ಅರಸು ಅದನ್ನು ತಿಂದು—ಈ ದಿನದ ಮಾಂಸವು ಒಹಳ ರುಚಿಯಾಗಿದೆ; ನಿತ್ಯದಲ್ಲಿಯೂ ಈ ದಿವಸ ತಂದ ಮೃಗದ ಮಾಂಸವನ್ನೇ ತಂದುಕೊಡಿರಿ ಎಂದು ಬೇಟೆಗಾರರಿಗೆ ಕಟ್ಟುಮಾಡಲು ಆ ಬೇಟೆಗಾರರು—ಸ್ವಾಮಿ! ಅಭಯವಾದರೆ ನಡೆದ ವಿವರವನ್ನು ಅರಿಕೆಮಾಡುತ್ತೇವೆ ಅಂದರು. ಅರಸು—ಹೆದರಬೇಡಿರಿ ಹೇಳಿರಿ ಅನ್ನಲು ಬೇಡರು—ಸ್ವಾಮಿ! ನೆನ್ನೇ ಹಿಡಿದ ಜಡಿಯು ಬಿಡದೆ ಸುರಿಯುತ್ತಾ ಇದ್ದುದರಿಂದ ಹೊರಗೆ ಹೋಗುವುದಕ್ಕೆ ಪಾಲುಮಾರಿ ಹತ್ತು ವರುಷದ ಒಬ್ಬ ಹುಡುಗನನ್ನು ಕೊಂದು ಅವನ ಮಾಂಸವನ್ನು ತಂದುಕೊಟ್ಟೆವು ಅಂದರು. ಅರಸು ಬೇಟೆಯವರಿಗೆ ಹೋಗಿರಿ ಎಂದು ಹೇಳಿ ಗುಟ್ಟಾಗಿ ಅಡಿಗೆಯವನನ್ನು ಕರೆದು—ಇನ್ನುಮೇಲೆ ದಿನವಹಿಯಲ್ಲೂ ನನ್ನ ಅಡಿಗೆಯ ಮನೆಗೆ ಯಾವ ಹುಡುಗನು ನಿಂಬೆಯ ಹಣ್ಣಿನ ಹೋಳನ್ನು ತಂದುಕೊಡುತ್ತಾನೋ ಅವನು ಯಾರೇ ಆಗಲಿ ಅವನನ್ನು ಇರಿದು ಮಾಂಸವನ್ನು ತೆಗೆದು ಪಾಕಮಾಡಿ ನಮಗೆ ಬಡಿಸುತ್ತಾ ಬಾ ಎಂದು ಕಟ್ಟುಮಾಡಿ ತಾನು ನಿತ್ಯದಲ್ಲೂ ಯಾರಾದರೂ ಒಬ್ಬ ಹುಡುಗನನ್ನು ತನ್ನ ಬಳಿಗೆ ಕರೆದು ಅವನ ಕೈಯಲ್ಲಿ ಒಂದು ನಿಂಬೆಯ ಹಣ್ಣಿನ ಹೋಳನ್ನು ಕೊಟ್ಟು—ನಮ್ಮ ಅಡಿಗೆಯವನಿಗೆ ಇದನ್ನು ತೆಗೆದುಕೊಂಡು ಹೋಗಿ ಕೊಟ್ಟು ಬಾ ಎಂದು ಕಳುಹಿಸುತ್ತಾ ಇರಲು ಅಡಿಗೆಯವನು ಅವನನ್ನು ಇರಿದು ಅವನ ಮಾಂಸದಿಂದ ಪಾಕವನ್ನು ಮಾಡಿ ಅರಸಿಗೆ ಬಡಿಸುತ್ತಾ ಬಂದನು. ಹೀಗೆ ಕೆಲವು ದಿವಸ ನಡೆಯುತ್ತಾ ಇರುವಲ್ಲಿ ಒಂದು ದಿವಸ ಈ ಅರಸಿನ ಮಗನೂ ಮತ್ತೊಬ್ಬ ಹುಡುಗನೂ ಲಗ್ಗೆಯ ಚಂಡನ್ನು ಆಡುತ್ತಾ ಇದ್ದರು. ಅರಸು ಅವರನ್ನು ನೋಡಿ ತನ್ನ ಮಗನ ಜೊತೆಯಲ್ಲಿ ಆಡುವ ಹುಡುಗನನ್ನು ಕರೆದು—ಈ ನಿಂಬೆಯ ಹಣ್ಣಿನ ಹೋಳನ್ನು ನಮ್ಮ ಅಡಿಗೆಯ ಮನೆಗೆ ಕೊಟ್ಟು ಬಾ ಎಂದು ಹೇಳಿ ಕೊಡಲು ಅವನು ಅಡಿಗೆಯ ಮನೆಗೆ ಹೋಗದೆ ತನ್ನ ಜೊತೆಗಾರನಾದ ಈ ಅರಸಿನ ಹುಡುಗನ ಬಳಿಗೆ ಬಂದು ಅರಸು ಹೇಳಿದ ಮಾತನ್ನು ಹೇಳಿದನು. ಅರಸುಮಗನು ಕೇಳಿ—ನೀನು ಚಂಡನ್ನೂ ಲಗ್ಗೆಯನ್ನೂ ಕಾದು

ಕೊಂಡು ಇರು; ನಾನು ಕೊಟ್ಟು ಬರುತ್ತೇನೆಂದು ಅವನ ಕೈಯಲ್ಲಿದ್ದ ನಿಂಬೆಯ ಹೋಳನ್ನು ತಾನು ತೆಗೆದುಕೊಂಡು ಅಡಿಗೆಯ ಮನೆಗೆ ಹೋಗಿ ಅಡಿಗೆಯವನ ಕೈಯಲ್ಲಿ ಕೊಡಲು ಅವನು ಮನಸ್ಸಿನಲ್ಲಿ ವ್ಯಸನಪಟ್ಟು ರಾಜಾಜ್ಞೆಯನ್ನು ಮೀರಲಾರದೆ ಅವನನ್ನು ಕಠಾರಿಯಿಂದ ಇರಿದು ಅವನ ಮಾಂಸದಿಂದ ಅಡಿಗೆಯನ್ನು ಮಾಡಿ ಅರಸಿಗೆ ಬಡಿಸಿದನು. ಅರಸು ಅದರಲ್ಲಿ ಒಂದು ಗುಕ್ಕನ್ನಾದರೂ ತಿನ್ನುವುದಕ್ಕೆ ಆಗದೆ ಬಹಳ ಹೊಲಸಾಗಿ ತಿಳಿದು ಅಡಿಗೆಯವನನ್ನು ಕೇಳಲು ಅವನು ನಡೆದ ಸ್ಥಿತಿಯನ್ನು ಹೇಳಿದನು. ಅರಸು ದುಃಖಪಟ್ಟು ನಾನು ಮಾಡಿದ ಪಾಪವೇ ನನಗೆ ಬಂದಿತೆಂದು ಕುದುರೆಯನ್ನೇರಿ ಒಂದು ದೊಡ್ಡ ಕಲ್ಲಿನ ಮೇಲೆ ಹತ್ತಿ ಅದನ್ನು ಅಲ್ಲಿಂದ ಹಾರಿಸಿ ಕೆಳಗೆ ಬಿದ್ದು ಸತ್ತು ಹೋದನು. ಆ ದೊಡ್ಡ ಕಲ್ಲಿಗೆ ಮಗನಕೊಂದ ಮಾರಾಯನದುರ್ಗವೆಂದು ಈಗಲೂ ಹೆಸರಿದೆ.

---

35. THE RICE AND THE HUSKS.

೩೫. ಅಕ್ಕಿಗಳೂ ಹೊಟ್ಟುಗಳೂ.

ಮಧುರವತಿ ಎಂಬ ಪಟ್ಟಣದಲ್ಲಿರುವ ಕೊಟ್ಟಗೇರಿಯಲ್ಲಿ ಒಬ್ಬ ಕೊಟ್ಟಗಾರನ ಮನೆಯೊಳಗೆ ಕೊಟ್ಟದ ಭತ್ತವನ್ನು ತಂದು ಕುಟ್ಟಿ ಕೇರಿ ಹೊಟ್ಟುಗಳನ್ನು ತಿಪ್ಪೆಗೆ ಹಾಕುತ್ತಾ ಚೆನ್ನಾಗಿ ತೊಳಸಿದ ಅಕ್ಕಿಗಳನ್ನು ಕೊಮ್ಮೆಗಳಲ್ಲಿಯೂ ಕಡಿಕೆಗಳಲ್ಲಿಯೂ ಓಡೆಗಳಲ್ಲಿಯೂ ಅಳಗೆಗಳಲ್ಲಿಯೂ ಗೂಡೆಗಳಲ್ಲಿಯೂ ತುಂಬುತ್ತಾ ಇದ್ದರು. ಅಕ್ಕಿಗಳು ಹೊಟ್ಟುಗಳನ್ನು ನೋಡಿ—ಎಲೈ ಹೊಟ್ಟುಗಳಿರಾ! ನೀವೂ ನಾವೂ ಆಗ ಒಬ್ಬನ ಲ್ಲಿಯೇ ಹುಟ್ಟಿ ಪರಸ್ಪರ ಸಂಬಂಧದಿಂದ ನಾವಿಬ್ಬರೂ ಈ ವರೆಗೂ ಜೊತೆಯಲ್ಲೇ ಇದ್ದೆವು. ನಮ್ಮ ಸಂಬಂಧ ತಪ್ಪಿ ನೀವು ಲಘುಗಳಾದುದರಿಂದ ಈಗ ನಿಮ್ಮನ್ನು ದೂರ ವಾಗಿ ತೆಗೆದುಕೊಂಡು ಹೋಗಿ ಮನೆಯ ಹೊರಗಿರುವ ತಿಪ್ಪೆಗೆ ಸುರಿಯುತ್ತಾರೆ. ನಮ್ಮನ್ನಾದರೋ ಒಳಗೆ ಇಟ್ಟು ಪೂಜಿಸುತ್ತಾರೆ. ಆದಕಾರಣ ಲೋಕದಲ್ಲಿ ಘನವಂತ ರಿಗೆ ಮರ್ಯಾದೆ ಆಗುತ್ತದೆ; ನೀಚರಿಗೆ ಅವಮಾನವಾಗುತ್ತದೆ ಎಂದು ಹಾಸ್ಯವನ್ನು ಮಾಡಿದುವು ಆಗ ಹೊಟ್ಟುಗಳು—ಎಲೈ ಅಕ್ಕಿಗಳಿರಾ! ನಿಮ್ಮ ಉತ್ಪತ್ತಿಯು ಯಾರಿಂದಾಯಿತು? ಈ ವರೆಗೂ ನಿಮ್ಮ ಬೆಳಸು ಯಾರಿಂದಾಯಿತು? ನಿಮ್ಮ ಕಾಪಾ ಡುವಿಕೆಯು ಯಾರಿಂದಾಯಿತು? ಇದನ್ನೆಲ್ಲಾ ಚೆನ್ನಾಗಿ ತಿಳಿದು ನೋಡದೆ ನಿಮ್ಮ ನೆಂಟರಾದ ನಮ್ಮನ್ನು ಹೀಗೆ ಹೀಯಾಳಿಸಿ ನುಡಿಯುವುದು ಯಾವ ನಡತೆ? ನಾವು ನಿಮ್ಮೊಡನೆ ಇಲ್ಲದೇ ಇದ್ದರೆ ನೀವು ಹುಟ್ಟಿ ವೃದ್ಧಿ ಹೊಂದಲಾರಿರಿ. ತಿಪ್ಪೆಗೆ ಹಾಕಿದ ನಮ್ಮಿಂದಲೇ ನೀವು ಚೆನ್ನಾಗಿ ಬೆಳೆದಿರಿ. ಈ ವರೆಗೂ ನಮ್ಮ ಜೊತೆಯಲ್ಲಿ ಇದ್ದುದ ರಿಂದಲೇ ನೀವು ಸೌಖ್ಯವಾಗಿದ್ದಿರಿ. ಇನ್ನು ಮೇಲೆ ನಿಮಗೆ ಉಂಟಾಗುವ ಕಷ್ಟವನ್ನು ಕೇಳಿರಿ: ಜನರು ಮಡಕೆಯಲ್ಲಿಯೋ ತಪ್ಪಲೆಯಲ್ಲಿಯೋ ನೀರನ್ನು ಕುದಿಸಿ ಕುದಿಯುವ ಆ ನೀರಿನಲ್ಲಿ ನಿಮ್ಮನ್ನು ಸುರಿದು ಜೀಯಿಸಿ ನುಂಗಿಬಿಡುವರು. ಒಂದು

ವೇಳೆ ಹಾಗಾಗದೆ ನಿಂತಲ್ಲಿ ನಿಮ್ಮನ್ನು ಹುಳುಗಳು ತಿಂದು ಹುಡಿಮಾಡಿ ಹಾಳುಮಾಡುವುವು. ಆದುದರಿಂದ ಬುದ್ಧಿವಂತರಾದವರು ತಾವು ದೊಡ್ಡವರೆಂದು ಬಡವರಾದ ಸ್ವಜನಗಳನ್ನು ತಿರಸ್ಕರಿಸದೆ ಅವರೊಡನೆಯೇ ಇದ್ದು ವೃದ್ಧಿಯನ್ನು ಹೊಂದುವರು. ಬುದ್ಧಿಯಿಲ್ಲದವರು ನಿಮ್ಮಂತೆ ಸ್ವಜನಗಳನ್ನು ಬಿಟ್ಟು ಕ್ಷಯಿಸಿ ಹೋಗುವರು ಎಂದು ಪ್ರತ್ಯುತ್ತರವನ್ನು ಕೊಟ್ಟುದರಿಂದ ಅಕ್ಕಿಗಳು ಅವುಗಳ ಮಾತನ್ನು ಕೇಳಿ ಇದೆಲ್ಲಾ ಯುಕ್ತವೆಂದು ಎಣಿಸಿ ಬಹಳ ವ್ಯಸನಪಟ್ಟುವು.

---

36. THE BEES AND THE FROGS.

೩೬. ತುಂಬಿಗಳೂ ಕಪ್ಪೆಗಳೂ.

ಜಂಪಕವನದಲ್ಲಿ ಪದ್ಮಾಕರವೆಂಬ ಒಂದು ದೊಡ್ಡ ಕೆರೆಯು ಯಾವಾಗಲೂ ವಿಶೇಷವಾದ ಜಲದಿಂದ ಕೂಡಿ ಇತ್ತು. ಅದರಲ್ಲಿ ಕೆಂದಾವರೆಗಳೂ ಬಿಳಿದಾವರೆಗಳೂ ಕನ್ನೈದಿಲೆಗಳೂ ಇವೇ ಮೊದಲಾದ ಅನೇಕ ವಿಧವಾದ ಹೂವುಗಳು ಬೆಳೆದು ಬಂಡುಗಳಿಂದ ತುಂಬಿ ಬಹಳ ಸೊಂಪಾಗಿದ್ದುವು. ಮತ್ತೊಂದು ಕಾಡಿನಲ್ಲಿ ಇದ್ದ ತುಂಬಿಗಳ ಹಿಂಡು ಆ ಕೆರೆಗೆ ಬಂದು ಆ ಹೂವುಗಳಲ್ಲಿ ಕುಳಿತು ಮಕರಂದವನ್ನು ಸವಿಯುತ್ತಾ ಇದ್ದುವು. ಆ ಹೂವುಗಳ ಬುಡದ ಕೆಸರಿನಲ್ಲಿರುವ ಕಪ್ಪೆಗಳು ಈ ಆರಡಿಗಳ ತಂಡವನ್ನು ನೋಡಿ ಎಲೈ ಪರದೇಶಿಗಳಿರಾ! ನಿಮ್ಮ ದೇಶದಲ್ಲಿ ನಿಮಗೆ ತಿನ್ನುವುದಕ್ಕೆ ಗತಿ ಇಲ್ಲದೆ ನಮ್ಮ ದೇಶಕ್ಕೆ ಬಂದು ಹೊಟ್ಟೆಯನ್ನು ಹೊರಕೊಳ್ಳುತ್ತೀರಾ? ಎಂದು ಕೇಳಿದುದಕ್ಕೆ ಆ ಬಂಡುಣಿಗಳು ಈ ಮಂಡೂಕಗಳನ್ನು ಕುರಿತು—ಎಲೈ ಮೂಢರುಗಳಿರಾ! ನಿಮಗೆ ಸ್ವಲ್ಪವಾದರೂ ಬುದ್ಧಿ ಇಲ್ಲದ ಕಾರಣ ನಿಮ್ಮ ದೇಶದಲ್ಲಿರುವ ಒಳ್ಳೆಯ ವಸ್ತುಗಳ ಗುಣಗಳನ್ನು ತಿಳಿಯದೆ ಕೆಸರನ್ನು ತಿಂದು ಹೊಟ್ಟೆಯನ್ನು ಹೊರೆಯುತ್ತಾ ವಟವಟಾ ಎಂದು ಒರಲಿಕೊಳ್ಳುತ್ತೀರಿ. ನಾವು ನಿಮ್ಮ ಅವಿವೇಕವನ್ನೂ ನಿಮ್ಮ ದೇಶದ ವಸ್ತುವಿನ ಗುಣವನ್ನೂ ತಿಳಿದವರಾದುದರಿಂದ ಪರದೇಶದಿಂದ ಬಂದು ನಿಮ್ಮ ದೇಶವನ್ನು ಆಕ್ರಮಿಸಿಕೊಂಡು ನಿಮ್ಮ ದೇಶದಲ್ಲಿರುವ ಜೆಲುವಾದ ವಸ್ತುಗಳನ್ನು ಅನುಭವಿಸಿ ಕೇಳುವವರ ಕಿವಿಗೆ ಇನಿದಾಗುವ ಹಾಗೆ ಸಂತೋಷದಿಂದ ಸಂಗೀತವನ್ನು ಹಾಡುತ್ತೇವೆ. ಹೀಗೆಯೇ ಬುದ್ಧಿವಂತರಾದ ಅನ್ಯದೇಶಸ್ಥರು ಅಪ್ರಬುದ್ಧರ ದೇಶಗಳನ್ನು ಸ್ವಾಧೀನಮಾಡಿಕೊಂಡು ಸುಖಪಡುತ್ತಾರೆ. ಸ್ವದೇಶಸ್ಥರು ಅವರು ತಿಂದು ಮಿಕ್ಕ ವಸ್ತುವಿನಿಂದ ಉದರಭರಣವನ್ನು ಮಾಡಿಕೊಂಡು ಕಷ್ಟಪಡುತ್ತಾರೆ. ನೀವು ಹಿಂದೆ ದೇವರಿಗೆ ಜೆನ್ನಾಗಿ ಪ್ರಾರ್ಥನೆಯನ್ನು ಮಾಡದೆ ಹೋದುದರಿಂದ ನಿಮಗೆ ಇಂಥಾ ಕಷ್ಟ ಸಂಭವಿಸಿತು. ನಾವು ಏಕಮನಸ್ಸಿನಿಂದ ದೇವರನ್ನು ಜೆನ್ನಾಗಿ ಪ್ರಾರ್ಥಿಸಿದುದರಿಂದ ಅನ್ಯದೇಶದಲ್ಲಿಯೂ ನಮಗೆ ದೇವರು ಹೀಗೆ ಸೌಖ್ಯವನ್ನು ಕೊಟ್ಟು ಇದ್ದಾನೆ; ಮುಂದೆಯೂ ಕೊಡುವನು ಅಂದುವು. ಕಪ್ಪೆಗಳು ಕೇಳಿ ಸುಮ್ಮನಾದುವು.

---

37. SHIBICHAKRAVARTI.

೩೭. ಶಿಬಿಚಕ್ರವರ್ತಿಯು.

ಪೂರ್ವದಲ್ಲಿ ಮಹಾ ಸತ್ಯವಂತನಾದ ಶಿಬಿಚಕ್ರವರ್ತಿ ಎಂಬ ಒಬ್ಬ ಅರಸನಿದ್ದನು. ಆತ ಸತ್ಯವನ್ನು ಪರೀಕ್ಷಿಸಬೇಕೆಂದು ಇಂದ್ರನೂ ಅಗ್ನಿಯೂ ಆಲೋಚಿಸಿ ಇಂದ್ರನು ಡೇಗೆಯ ಹಕ್ಕಿಯಾದನು; ಅಗ್ನಿಯು ಕಪೋತಪಕ್ಷಿಯಾದನು. ಅವರು ಈ ಮೇರೆಗೆ ರೂಪಗಳನ್ನು ಧರಿಸಿದ ಮೇಲೆ ಆ ಡೇಗೆಯು ಆ ಕಪೋತವನ್ನು ಹಿಡಿದು ಭಕ್ಷಿಸುವುದಕ್ಕೆ ಅದರ ಬೆನ್ನು ಹತ್ತಿ ಅಟ್ಟಿಕೊಂಡು ಒರಲು ಆ ಕಪೋತವು ಪ್ರಾಣಭೀತಿಯಿಂದಲೋ ಎಂಬಂತೆ ಓಡುತ್ತಾ ಓಡುತ್ತಾ ಶಿಬಿಚಕ್ರವರ್ತಿಯ ಬಳಿಗೆ ಬಂದು ಆ ರಾಯನನ್ನು ಕುರಿತು—ಓ ಸತ್ಯಸಂಧನೇ! ಪ್ರಾಣಭೀತಿಯಿಂದ ನಾನು ನಿನ್ನ ಮರೆಯನ್ನು ಹೊಕ್ಕು ಇದ್ದೇನೆ; ನನ್ನನ್ನು ಕೈಬಿಡದೆ ರಕ್ಷಿಸಯ್ಯಾ! ಎಂದು ಹೇಳುತ್ತಾ ಅವನ ಬೆನ್ನಿನ ಮರೆಯಲ್ಲಿ ನಿಂತಿತು. ಆಗ ಅವನು—ಎಲೈ ಕಪೋತವೇ! ಅಂಜಬೇಡ. ನಿನ್ನ ಪ್ರಾಣಕ್ಕೆ ಬದಲಾಗಿ ನನ್ನ ಪ್ರಾಣವನ್ನಾದರೂ ಕೊಟ್ಟು ನಿನ್ನನ್ನು ಸಂರಕ್ಷಿಸುವೆನೇ ಹೊರತು ಶರಣಾಗತನಾದ ನಿನ್ನನ್ನು ಬಿಟ್ಟುಕೊಡುವುದಿಲ್ಲವೆಂದು ಅಭಯವನ್ನು ಕೊಟ್ಟು ಮಾತಾಡುತ್ತಿದ್ದ ಅರಸಿನ ಎದುರಿಗೆ ತೀಕ್ಷ್ಣವಾದ ಮೂತಿಯುಳ್ಳ ಡೇಗೆಯು ಬಂದು ಕೂತುಕೊಂಡು—ಎಲೈ ಸತ್ಯವಂತನಾದ ರಾಯನೇ! ನನಗೆ ಆಹಾರಾರ್ಥವಾಗಿ ದೇವರು ನಿರ್ಮಾಣವನ್ನು ಮಾಡಿದ ಈ ಕಪೋತಪಕ್ಷಿಯು ನಿನ್ನ ಹಿಂದೆ ಕೂತುಕೊಂಡು ಇರುವುದು. ನೀನು ಪ್ರಭುವಾದ ಕಾರಣ ನಿನ್ನ ಮಾತಿಲ್ಲದೆ ನಾನು ಅದನ್ನು ಹಿಡಿದುಕೊಳ್ಳಕೂಡದು. ಇದು ಧರ್ಮವೆಂದು ತಿಳಿದು ನಿನಗೆ ಹೇಳಿ ಇದ್ದೇನೆ. ಆದುದರಿಂದ ಧರ್ಮಾತ್ಮನೇ! ನನ್ನ ಆಹಾರವನ್ನು ನನಗೆ ದಯಮಾಡಿ ಕೊಟ್ಟು ಕೀರ್ತಿಯನ್ನು ಸಂಪಾದಿಸಯ್ಯಾ! ಎಂದು ಹೇಳಲು ಅರಸನು ಶ್ಯೇನಪಕ್ಷಿಯ ವಾಕ್ಯವನ್ನು ಕೇಳಿ ಆಶ್ಚರ್ಯದಿಂದ ನಕ್ಕು—ಎಲೈ ಪಕ್ಷಿಶ್ರೇಷ್ಠನೇ! ನೀನು ಮಹಾ ಪರಾಕ್ರಮಶಾಲಿಯಾಗಿ ಸಕಲ ಪಕ್ಷಿಗಳನ್ನೂ ಹಿಂಸಿಸಿ ತಿನ್ನುವುದು ನಿನಗೆ ಧರ್ಮವೇ ಸರಿ ಆದಾಗ್ಯೂ ಇದು ನನ್ನ ಬೆನ್ನಿನ ಮರೆಬೀಳುವುದಕ್ಕೆ ಮುಂಚಿತವಾಗಿಯೇ ನೀನಿದನ್ನು ಹಿಡಿದು ಭಕ್ಷಿಸಿ ಇದ್ದರೆ ನಿರ್ವಿವಾದವಾಗಿತ್ತು. ಈಗ ನನ್ನ ಮರೆಬಿದ್ದು ನನ್ನನ್ನು ರಕ್ಷಿಸೈ! ಎಂದು ಮೊರೆ ಇಡುವ ಈ ಸಾಧು ಕಪೋತವನ್ನು ನಿನಗೆ ಒಪ್ಪಿಸಿ ಕೊಲ್ಲಿಸಿದರೆ ನಾನು ಯಾವ ಲೋಕದಲ್ಲಿ ಏನಾಗಿ ಬಾಧೆಪಡಲಿ? ಮತ್ತು ಮರೆಹೊಕ್ಕವರನ್ನು ಕಾಯದೆ ಬಿಟ್ಟರೆ ಅರಸುಗಳಿಗೆ ಅದಕ್ಕಿಂತಲೂ ಬೇರೊಂದು ಹಾನಿಯಾದ ಕೆಲಸ ಎಲ್ಲಿಯೂ ಇಲ್ಲ. ನೀನು ಬೇರೆ ಆಹಾರವನ್ನು ಹುಡುಕಿಕೊಂಡು ಈ ಪಕ್ಷಿಯನ್ನು ಬಿಡು. ಇಲ್ಲವಾಯಿತೇ? ನಿನ್ನ ಆಹಾರಕ್ಕೆ ತಕ್ಕ ಹಾಗೆ ಮಾಂಸವನ್ನು ತರಿಸಿ ಕೊಡುವೆನು; ಅದನ್ನು ಭಕ್ಷಿಸಿ ಸುಖದಿಂದ ಹೋಗು ಎಂದು ಹೇಳಿದನು. ಹಾಗೆ ಹೇಳಿದ ಚಕ್ರವರ್ತಿಯನ್ನು ಕುರಿತು ಶ್ಯೇನನಿಂತೆಂದಿತು—ಅಯ್ಯಾ, ಭೂಪಾಲತಿಲಕನೇ! ನಿನ್ನ ಮಾತು ಸತ್ಯವೇ ಸರಿ. ಆದರೂ ನನಗೆ ದೈವದತ್ತವಾದ ಈ ಕಪೋತದ ಮಾಂಸಕ್ಕಿಂತಲೂ ಇನ್ನು ಬೇರೆ ಮೃಗಪಕ್ಷಿಗಳ ಮಾಂಸಗಳು ರುಚಿಯಾಗಿರವು. ನನಗೆ ಅವು

ಬೇಡವೇ ಬೇಡ. ನೀನು ಅಷ್ಟು ದಯಾಳುತ್ವವನ್ನು ವಹಿಸಿ ನನ್ನ ಆಹಾರವಾದ ಈ ಕಪೋತವನ್ನು ರಕ್ಷಿಸಬೇಕೆಂದು ಮನಸ್ಸುಮಾಡಿದರೆ ದಿವ್ಯಭೋಜನದಿಂದ ಬೆಳೆದ ನಿನ್ನ ಶರೀರಮಾಂಸವನ್ನು ಈ ಕಪೋತದ ತೂಕಕ್ಕೆ ಸರಿಯಾಗಿ ಕೊಡು. ಅದನ್ನು ನಾನು ಭುಂಜಿಸಿ ಈ ಕಪೋತವನ್ನು ಬಿಟ್ಟು ಹೋಗುತ್ತೇನೆಂದು ಹೇಳಲು ಮಹಾ ದಯಾಳುವಾದ ಆ ಶಿಬಿಚಕ್ರವರ್ತಿಯು ಪರಮಸಂತೋಷವನ್ನು ಹೊಂದಿ—ಎಲೈ ಶ್ಯೇನ ಪಕ್ಷಿಯೇ! ಹಾಗೆಯೇ ಆಗಲಿ; ನನ್ನ ಮಾಂಸವನ್ನೇ ಕೊಡುತ್ತೇನೆಂದು ಹೇಳಿ ಮಹಾ ತೀಕ್ಷ್ಣವಾದ ಅಲಗುಳ್ಳ ಖಡ್ಗದಿಂದ ತನ್ನ ಕೋಮಲವಾದ ಅಂಗದ ಮಾಂಸವನ್ನು ಖಂಡಖಂಡವಾಗಿ ಕೊಯಿದು ಕೊಯಿದು ಒಂದು ತ್ರಾಸಿನ ಒಂದು ಪಕ್ಕದಲ್ಲಿ ಕಪೋತವನ್ನು ಇಟ್ಟು ಇನ್ನೊಂದು ಕಡೆಯಲ್ಲಿ ಅದಕ್ಕೆ ಸರಿತೂಕವಾಗಿ ಹಾಕುತ್ತಾ ಹಾಕುತ್ತಾ ಇದ್ದರೂ ಆ ಕಪೋತಕ್ಕೆ ಸರಿಯಾಗಿ ಮಾಂಸವು ತೂಗಲಾರದೆ ಹೋಯಿತು. ಆಗಲಾರಾಯನು ಅತಿಶಾಂತತ್ವವನ್ನು ತಾಳಿ ಸತ್ಯವನ್ನು ಈಡೇರಿಸಬೇಕೆಂದು ತನ್ನ ಶಿರಸ್ಸನ್ನು ಖಂಡಿಸಿಕೊಡುವುದಕ್ಕೆ ಕಂಠ ಪ್ರದೇಶಕ್ಕೆ ಖಡ್ಗವನ್ನು ಚಾಚಿದನು. ಆಗಲಾ ಇಂದ್ರಾಗ್ನಿಗಳಿಬ್ಬರೂ ಶ್ಯೇನಕಪೋತ ರೂಪಗಳನ್ನು ಬಿಟ್ಟು ನಿಜರೂಪಗಳಿಂದ ಅರಸಿನ ಎದುರಿಗೆ ನಿಂತು ಅವನ ಕೈಯಲ್ಲಿ ಇದ್ದ ಖಡ್ಗವನ್ನು ಅಡ್ಡಗಿಸಿ ಹಿಡಿದು ಇಂತೆಂದರು—ಓ ಸತ್ಯಪ್ರತಿಜ್ಞೆಯುಳ್ಳ ಚಕ್ರವರ್ತಿಯೇ! ನಿನ್ನ ಅಸಾಧಾರಣವಾದ ಸತ್ಯಸಂಧತೆಗೆ ಮೆಚ್ಚಿದೆವು. ನಾವು ಇಂದ್ರಾಗ್ನಿಗಳು ನಿನ್ನ ಸತ್ಯಗುಣವನ್ನು ಪರೀಕ್ಷೆಮಾಡಬೇಕೆಂಬ ಧರ್ದಿಂದ ಬಂದು ಅದನ್ನು ಸಾಂಗವಾಗಿ ಪರೀಕ್ಷಿಸಿದೆವು. ದೃಢವಾದ ನಿನ್ನ ಸತ್ಯಕ್ಕೆ ಮೆಚ್ಚಿದೆವು ಎಂದು ಹೇಳಿ ತಮ್ಮ ಲೋಕಕ್ಕೆ ಹೊರಟು ಹೋದರು.

---

38. THE MERCHANT AND THE IDOL.

೩೮. ಕೋಮಟಿಗನೂ ವಿನಾಯಕನೂ.

ಬೆಳವಾಡಿ ಎಂಬ ಗ್ರಾಮದಲ್ಲಿ ರಾಮಶೆಟ್ಟಿ ಎಂಬ ಒಬ್ಬ ಕೋಮಟಿಗನು ಇದ್ದನು. ಆತನು ತನ್ನ ಗ್ರಾಮಕ್ಕೆ ಸಮೀಪವಾಗಿರುವ ಊರಿನಲ್ಲಿ ಪ್ರತಿಸೋಮವಾರವೂ ತಪ್ಪದೆ ನಡೆಯುವ ಸಂತೆಗೆ ಹೋಗಿ ತೆಂಗಿನಕಾಯಿ ಬಾಳೆಯಹಣ್ಣು ಹುರಿಗಡಲೆ ಕೊಬರಿ ಬುರುಗು ಅಡಕೆ ಎಲೆ ಮುಂತಾದ ಚಿಲ್ಲರೆಯ ಸಾಮಾನುಗಳನ್ನು ಲಾಭಕ್ಕೆ ಮಾರಿ ಆ ಲಾಭದ ಹಣದಿಂದ ಕಷ್ಟಪಟ್ಟು ಜೀವನವನ್ನು ಮಾಡುತ್ತಾ ಇದ್ದನು. ಅವನ ನೆರೆಯವನಾದ ಸಂಜೀವಶೆಟ್ಟಿ ಎಂಬುವನು ಇವನ ಹಾಗೆಯೇ ಚಿಲ್ಲರೆ ವ್ಯಾಪಾರಗಳನ್ನು ಮಾಡುತ್ತಾ ಇದ್ದರೂ ಬಹು ಲಾಭವನ್ನು ಸಂಪಾದಿಸಿಕೊಂಡು ಸುಖವಾಗಿ ಇದ್ದನು. ರಾಮಶೆಟ್ಟಿಯು ಒಂದು ದಿವಸ ತನ್ನ ನೆರೆಯವನಾದ ಸಂಜೀವಶೆಟ್ಟಿಯ ಸಂಗಡ ವ್ಯಾಪಾರಗಳ ವಿಷಯವಾಗಿ ಮಾತಾಡುತ್ತಾ ಇದ್ದು ಅವನನ್ನು ಕುರಿತು—ಎಲೈ ಸೆಟ್ಟಿಯೇ! ನಾವಿಬ್ಬರೂ ಒಂದೇ ಸಮವಾದ ಬಂಡವಾಳವನ್ನು ಇಟ್ಟುಕೊಂಡು ಒಂದೇ ವಿಧವಾದ ವ್ಯಾಪಾರವನ್ನು ಮಾಡುತ್ತೇವೆ. ಆದರೆ ನಿನಗೆ ಬಹಳ ಲಾಭ ಬರು

ತ್ತದೆ; ನನಗೆ ಮಾತ್ರ ಸ್ವಲ್ಪ ಲಾಭ ಬರುತ್ತದೆ. ಇದಕ್ಕೆ ಏನು ಕಾರಣವೆಂದು ಕೇಳಲು ಆ ಸಂಜೀವಶೆಟ್ಟಿಯು—ಎಲೈ ಸೆಟ್ಟಿಯೇ! ನಾವು ವ್ಯಾಪಾರಕ್ಕೆ ಹೋಗುವಂಥ ಸೋಮವಾರ ಸಂತೆಯಾಗುವ ಊರುಬಾಗಲಿನ ಹತ್ತಿರದಲ್ಲಿ ಒಂದು ವಿನಾಯಕನ ಗುಡಿಯು ಇದೆಯಷ್ಟೆ. ಆ ವಿನಾಯಕನು ಬಹು ಸತ್ಯವುಳ್ಳ ದೇವರು. ನಾನು ಸಂತೆಗೆ ಹೋಗುವಾಗಲೆಲ್ಲಾ ಆ ಗುಡಿಗೆ ಹೋಗಿ ವಿನಾಯಕನಿಗೆ ನಮಸ್ಕರಿಸಿ—ಎಲೈ ಗಣಪತಿಯೇ! ಈ ದಿವಸ ನನಗೆ ಬಹಳ ಲಾಭವು ಬಂದರೆ ಅದರ ನಾಲ್ಕರಲ್ಲಿ ಒಂದು ಪಾಲನ್ನು ನಿನಗೆ ಒಪ್ಪಿಸುತ್ತೇನೆ ಎಂದು ಬೇಡಿಕೊಂಡು ವ್ಯಾಪಾರಕ್ಕೆ ಆರಂಭಿಸಿದ ಮೇಲೆ ಹಾಗೆಯೇ ಬಂದ ಹೆಚ್ಚು ಲಾಭದಲ್ಲಿ ನಾಲ್ಕರೊಳಗೆ ಒಂದು ಪಾಲನ್ನು ಆ ಗಣಪತಿಗೆ ಒಪ್ಪಿಸುತ್ತಾ ಬರುತ್ತೇನೆ. ಆದುದರಿಂದ ನನಗೆ ಬಹು ಲಾಭ ಬರುತ್ತದೆ ಎಂದು ಹೇಳಲು ರಾಮಶೆಟ್ಟಿಯು ತಾನೂ ಹಾಗೆಯೇ ಮಾಡಬೇಕೆಂದು ಯೋಚಿಸಿ ಸಂತೆಗೆ ಹೋದಾಗ ಮೊದಲು ಆ ದೇವರ ಗುಡಿಗೆ ಹೋಗಿ ವಿನಾಯಕನಿಗೆ ಅಡ್ಡ ಬಿದ್ದು—ಸ್ವಾಮಿಾ! ನಾನು ಈಗ ಸಂತೆಯ ವ್ಯಾಪಾರಕ್ಕೆ ಹೋಗುತ್ತೇನೆ; ನನಗೆ ಈ ದಿವಸ ಹೆಚ್ಚಾದ ಲಾಭವು ಬಂದರೆ ಸತ್ಯವಾಗಿ ನಿನ್ನ ಪಾದಕ್ಕೆ ಒಂದು ಗೋಣಿಯ ಹಣ್ಣನ್ನೂ ಒಂದು ಗೋಣಿಯ ಕಾಯಿಯನ್ನೂ ಒಪ್ಪಿಸುತ್ತೇನೆಂದು ಹರಕೆಯನ್ನು ಮಾಡಿಕೊಂಡು ಸಂತೆಗೆ ಹೋಗಿ ವ್ಯಾಪಾರವನ್ನು ಮಾಡಲು ಆ ದಿನ ಪೂರ್ವಕ್ಕಿಂತಲೂ ಹೆಚ್ಚಾಗಿ ಲಾಭ ಬಂದುದರಿಂದ ಬಹಳ ಸಂತೋಷಪಟ್ಟುಕೊಂಡು ಸಾಯಂಕಾಲವಾದ ಮೇಲೆ ನನ್ನ ಊರಿಗೆ ಹಿಂದಿರುಗಿ ಹೋಗಬೇಕೆಂದು ಹೊರಟು ವಿನಾಯಕನ ಗುಡಿಯ ಬಳಿಗೆ ಬಂದು ತಾನು ಮಾಡಿದ ಹರಕೆಯನ್ನು ಜ್ಞಾಪಕಮಾಡಿಕೊಂಡು—ಅನ್ಯಾಯವಾಗಿ ಈ ದೇವರಿಗೆ ಒಂದು ಗೋಣಿಯ ಕಾಯಿಯನ್ನೂ ಒಂದು ಗೋಣಿಯ ಹಣ್ಣನ್ನೂ ಕೊಡಬೇಕಲ್ಲಾ! ಎಂದು ಯೋಚಿಸಿ ಅಲ್ಲಿ ಸಾಲುಮರಗಳಲ್ಲಿ ಒಂದು ಗೋಣಿಮರವನ್ನು ಕಂಡು ಆ ಮರವನ್ನು ಹತ್ತಿ ಒಂದು ಹಣ್ಣನ್ನೂ ಒಂದು ಕಾಯಿಯನ್ನೂ ಕಿತ್ತುಕೊಂಡು ವಿನಾಯಕನ ಗುಡಿಯ ಒಳಗಡೆಗೆ ಹೋಗಿ ದೇವರಿಗೆ ಸಾಷ್ಟಾಂಗನಮಸ್ಕಾರವನ್ನು ಮಾಡಿ—ಸ್ವಾಮಿಾ! ನನ್ನ ಹರಕೆಯಪ್ರಕಾರ ಒಂದು ಗೋಣಿಯ ಹಣ್ಣನ್ನೂ ಒಂದು ಗೋಣಿಯ ಕಾಯಿಯನ್ನೂ ನಿನಗೆ ಒಪ್ಪಿಸಿದ್ದೇನೆ! ದಯಮಾಡಿ ತೆಗೆದುಕೊಳ್ಳಬೇಕೆಂದು ತಾನು ತಂದಿದ್ದ ಕಾಯಿ ಹಣ್ಣುಗಳನ್ನು ಆ ದೇವರ ಪಾದದ ಮೇಲೆ ಇಟ್ಟು ತನ್ನ ಊರಿಗೆ ಹೊರಟು ಬಂದನು.

---

39. THE MUSALMAN TRICKED BY A MERCHANT.

೩೯. ಕೋಮಟಿಗನು ತುರುಕನನ್ನು ವಂಚಿಸಿದುದು.

ಸೋಮಪುರವೆಂಬ ಅಗ್ರಹಾರದಲ್ಲಿ ಚಂದ್ರಭಟ್ಟನೆಂಬ ಒಬ್ಬ ಬ್ರಾಹ್ಮಣನು ಇದ್ದನು. ಆತನು ಜಾತಿಮರ್ಯಾದೆಯನ್ನು ಅತಿಕ್ರಮಿಸಿ ನಡೆಯದೆ ಯಾಚನೆಯಿಂದ ಜೀವನವನ್ನು ಮಾಡಿಕೊಂಡು ಇರುತ್ತಾ ಒಂದು ದಿವಸ ಧಾರಾಪಟ್ಟಣದ ಅರಸು

ಬ್ರಾಹ್ಮಣನಿಗೆ ಬಹು ದ್ರವ್ಯವನ್ನು ದಕ್ಷಿಣೆಯಾಗಿ ಕೊಡುತ್ತಾನೆಂಬ ವಾರ್ತೆಯನ್ನು ಕೇಳಿ ಅವನ ಬಳಿಯಲ್ಲಿ ಏನಾದರೂ ಸಂಭಾವನೆಯನ್ನು ತಾನೂ ತೆಗೆದುಕೊಂಡು ಬರಬೇಕೆಂದು ಆಲೋಚಿಸಿ ಒಬ್ಬನೇ ಹೊರಟು ಆ ಧಾರಾಪಟ್ಟಣದ ಹೊರಗಿರುವ ಉದ್ಯಾನವನವನ್ನು ಸೇರಿ ಅಲ್ಲಿ ನಿರ್ಮಲೋದಕದಿಂದ ಶೋಭಿತವಾಗಿಯೂ ನಾನಾವಿಧ ಜಲಪಕ್ಷಿಗಳ ಮಧುರಾಲಾಪಗಳಿಂದ ಮನೋಹರವಾಗಿಯೂ ವಿಕಾಸಮಾನಗಳಾದ ಕೆಂದಾವರೆ ಬಿಳಿದಾವರೆ ಕನ್ನೈದಿಲೆ ಮೊದಲಾದ ಪುಷ್ಪಗಳಿಂದ ರಮಣೀಯವಾಗಿಯೂ ಇರುವ ಒಂದು ಸರಸ್ಸನ್ನು ಕಂಡು ತಾನೂ ಮಾರ್ಗಶ್ರಮವುಳ್ಳವನಾದುದರಿಂದ ಅದರ ಪರಿಹಾರಾರ್ಥವಾಗಿ ಈ ತಣ್ಣೀರಲ್ಲಿ ಸ್ನಾನವನ್ನು ಮಾಡಿ ಬುತ್ತಿಯನ್ನುಂಡು ಸ್ವಲ್ಪ ವಿಶ್ರಮಿಸಿಕೊಂಡಿದ್ದು ಅನಂತರ ಪುರಪ್ರವೇಶವನ್ನು ಮಾಡೋಣ ಎಂದು ಅಂದುಕೊಂಡು ಆ ಕೊಳದಲ್ಲಿ ಇಳಿದು ಮುಖಪ್ರಕ್ಷಾಳನವನ್ನು ಮಾಡಿ ತದನಂತರ ಸ್ನಾನವನ್ನು ತೀರಿಸಿ ದೇವರ ಪೂಜೆಗೆ ತೊಳಸಿಯು ಇಲ್ಲವಲ್ಲಾ ಎಂದು ಅಲ್ಲಲ್ಲಿ ತೊಳಸಿಯನ್ನು ಹುಡುಕುತ್ತಾ ಆ ಉದ್ಯಾನವನದ ಸಮೀಪದಲ್ಲಿ ಇರುವ ಒಂದು ತುರುಕರ ಮಸೀತಿಯ ಹತ್ತಿರದಲ್ಲಿ ತಮ್ಮಷ್ಟಕ್ಕೆ ತಾವೇ ಹುಟ್ಟಿರುವ ಕೆಲವು ತೊಳಸಿಯ ಗಿಡಗಳನ್ನು ನೋಡಿ ತಾನು ತಂದಿದ್ದ ತಂಬಿಗೆಯ ನೀರನ್ನು ಆ ಗಿಡಗಳಿಗೆ ಹೊಯಿದು ಅವುಗಳ ಬುಡದ ಮಣ್ಣಿನ ನೀರನ್ನು ತನ್ನ ತಲೆಯಮೇಲೆ ಹಾಕಿಕೊಂಡು ಆ ತೊಳಸಿಯ ಗಿಡಗಳಿಗೆ ಪ್ರದಕ್ಷಿಣನಮಸ್ಕಾರಗಳನ್ನು ಮಾಡಿ ಕೈಮುಗಿದು ಅನಂತರ ದಳದಳವಾಗಿ ಕೊಯ್ಯುತ್ತಿರಲು ಇದನ್ನೆಲ್ಲಾ ನೋಡುತ್ತಾ ಇದ್ದ ಆ ಮಸೀತಿಯ ಒಬ್ಬ ತುರುಕನು ಈ ಬ್ರಾಹ್ಮಣನ ಬಳಿಗೆ ಬಂದು—ಎಲೋ ಬ್ರಾಹ್ಮಣನೇ! ನೀನು ಹುಚ್ಚನೋ? ಇದೇನು? ಈ ಗಿಡಕ್ಕೆ ನಮಸ್ಕಾರವನ್ನು ಮಾಡುತ್ತೀ! ಎಂದು ಕೇಳಲು ಬ್ರಾಹ್ಮಣನು ಆ ಮ್ಲೇಚ್ಛನನ್ನು ಕುರಿತು—ಅಯ್ಯಾ ಸಾಬರೇ! ಇದು ಸಾಧಾರಣವಾದ ಗಿಡವಲ್ಲ; ಇದು ನಮ್ಮ ದೇವರು. ಆದುದರಿಂದ ಇದಕ್ಕೆ ವಂದನೆಯನ್ನು ಮಾಡುತ್ತೇನೆ ಎನಲು ಆ ತುರುಕನು—ಎಲೋ ಹಾರವ! ಇದು ನಿನ್ನ ದೇವರೋ? ಇದರ ಕೈಯಲ್ಲಿ ಏನು ಆದೀತು? ಇದಕ್ಕೆ ನನ್ನ ಮೈಕೂದಲನ್ನು ನಾಶಮಾಡುವುದಕ್ಕೂ ಶಕ್ತಿ ಸಾಲದು ಎಂದು ಹೇಳಿ ಆ ತೊಳಸಿಯ ಗಿಡವನ್ನು ತನ್ನ ಕಾಲು ಜೋಡಿನಿಂದ ಹೊಡೆದು ಬೇರು ಸಹಿತ ಕಿತ್ತು ಅದನ್ನು ತನ್ನ ಮೈಮೇಲೆಲ್ಲಾ ಉಜ್ಜಿ ಹೊಸಕಿ ಕೆಳಕ್ಕೆ ಹಾಕಿ ಆ ದ್ವಿಜನನ್ನು ಕುರಿತು—ನಿನ್ನ ದೇವರ ಶಕ್ತಿಯನ್ನು ನೋಡಿದೆಯಾ? ಎಂದು ಹಾಸ್ಯವನ್ನು ಮಾಡುತ್ತಾ ಹೊರಟುಹೋದನು. ಆಗ ಆ ಊರಿನ ಸಮೀಪದಲ್ಲಿರುವ ಹಳ್ಳಿಗೆ ವ್ಯಾಪಾರವನ್ನು ಮಾಡುವುದಕ್ಕೋಸ್ಕರ ಮಸೀತಿಯ ಹತ್ತಿರವೇ ಹೋಗುತ್ತಾ ಇದ್ದ ಒಬ್ಬ ಕೋಮಟಿ ಸೆಟ್ಟಿಯು ಆ ತುರುಕನು ಮಾಡಿದ ಕಾರ್ಯಗಳನ್ನೆಲ್ಲಾ ಚೆನ್ನಾಗಿ ನೋಡಿ ಈ ಮ್ಲೇಚ್ಛನನ್ನು ಮೋಸಗೊಳಿಸಬೇಕೆಂದು ಎಣಿಸಿ ಅವನು ನೋಡುವ ಹಾಗೆಯೇ ತನ್ನ ಹೆಗಲಿನ ಮೇಲೆ ಇದ್ದ ಹಸಿಬೆಯ ಚೀಲವನ್ನು ಒಂದು ಮರದ ಬುಡದಲ್ಲಿ ಇಟ್ಟು ಅಲ್ಲಿ ಪೊದೆಯಾಗಿ ಬೆಳೆದು ಇರುವ ಒಂದು ತುರುಜನದ ಗಿಡಕ್ಕೆ ಸುಮ್ಮನೆ ಪ್ರದಕ್ಷಿಣೆಯನ್ನು ಮಾಡಿ ನಮಸ್ಕಾ

ರವನ್ನು ಮಾಡುತ್ತಾ ಇದ್ದನು. ಇದನ್ನು ನೋಡುತ್ತಾ ಇದ್ದ ಅದೇ ತುರುಕನು—ಇವನಿಗೂ ಆ ಹಾರವನಿಗೆ ಹಿಡಿದ ಹುಚ್ಚು ಹಿಡಿದು ಇದೆ ಎಂದು ಅಂದುಕೊಂಡು ಆ ಸೆಟ್ಟಿಯ ಬಳಿಗೆ ಬಂದು—ಎಲೋ ಕೋಮಟೀ! ಇದೇನು? ಈ ಗಿಡಕ್ಕೆ ಪ್ರದಕ್ಷಿಣನಮಸ್ಕಾರಗಳನ್ನು ಮಾಡುತ್ತೀ! ಎಂದು ಕೇಳಲು ಆ ವರ್ತಕನು—ಅಯ್ಯಾ, ಸಾಹೇಬರೇ! ಇದು ನಮ್ಮ ಮನೆಯ ದೇವರು ಬಹಳ ಕ್ರೂರವಾದುದು. ಇದನ್ನು ಪೂರ್ಣ ಭಕ್ತಿಯಿಂದ ಪೂಜಿಸಬೇಕು ಎಂದು ಹೇಳಲು ಆ ತುರುಕನು—ಛೀ! ಛೀ! ನೀವೆಲ್ಲರೂ ಬುದ್ಧಿಹೀನರು! ಈ ಎಲೆಯಲ್ಲಿ ಏನು ಸತ್ಯವಿದೆ? ಎಂದು ಆ ಕೋಮಟಿಯನ್ನು ಧಿಕ್ಕರಿಸಿ ಗರ್ವದಿಂದ ಆ ಗಿಡವನ್ನು ಬೇರುಸಹಿತ ಕಿತ್ತು ಅದರ ಎಲೆಗಳನ್ನು ತನ್ನ ಕಾಲುಗಳಿಗೆ ಉಜ್ಜಿಕೊಂಡು ಬಿಸಾಟುಬಿಟ್ಟನು. ಕೂಡಲೇ ಅವನಿಗೆ ಬಹಳ ನವೆಯೂ ಉರಿಯೂ ಉಂಟಾಗಿ ಬಹಳ ಶ್ರಮಪಡುತ್ತಾ ಆ ಕೋಮಟಿಯನ್ನು ನೋಡಿ—ಸೆಟ್ಟರೇ! ನಿಮ್ಮ ಮಾತು ಸತ್ಯ. ನಿಮ್ಮ ದೇವರು ಬಹಳ ಕ್ರೂರವಾದುದು. ಈಗ ನನ್ನ ಮೈಯೆಲ್ಲಾ ನವೆಯಾಗುತ್ತದೆ, ಉರಿಯು ಬಲವಾಗಿದೆ. ಇದಕ್ಕೆ ಏನು ಮಾಡಬೇಕೆಂದು ಬಹು ದೈನ್ಯದಿಂದ ಬೇಡಿಕೊಳ್ಳಲು ಆ ಕೋಮಟಿಯು—ಸಾಹೇಬರೇ! ನಾನೇನು ಮಾಡಲಿ? ನೀವು ನಮ್ಮ ದೇವರಿಗೆ ಅಪರಾಧವನ್ನು ಮಾಡಿದುದರಿಂದ ನೀವೇ ಆ ದೇವರಿಗೆ—ನನ್ನಿಂದ ತಪ್ಪಾಯಿತೆಂದು ಬೇಡಿಕೊಂಡು ಏನಾದರೂ ನಿನ್ನ ಪಾದಕ್ಕೆ ಒಪ್ಪಿಸುತ್ತೇನೆಂದು ತಪ್ಪುಗಾಣಿಕೆಯನ್ನು ನನ್ನ ವಶಕ್ಕೆ ಕೊಟ್ಟರೆ ನಾನು ದೇವರನ್ನು ಬೇಡಿಕೊಂಡು ನಿಮ್ಮ ಬಾಧೆಯನ್ನು ವಾಸಿಮಾಡುತ್ತೇನೆಂದು ಹೇಳಲು ಆ ತುರುಕನು—ಇಷ್ಟು ಮಟ್ಟಿಗಾದರೆ ಸಾಕೆಂದು ತನ್ನ ಜೇಬಿನಲ್ಲಿ ಇದ್ದ ಹತ್ತು ವರಹಗಳನ್ನು ತಪ್ಪುಗಾಣಿಕೆಯಾಗಿ ತೆಗೆದುಕೊಳ್ಳಿರಿ ಎಂದು ಕೋಮಟಿಗೆ ಕೊಡಲು ಅದನ್ನು ಅವನು ತೆಗದುಕೊಂಡು ಸ್ವಲ್ಪ ಕಾಲ ಧ್ಯಾನಿಸಿ ದೇವರಪ್ಪಣೆಯಾಯಿತೆಂದು ಹೋಗಿ ಒಂದು ದುಡ್ಡಿಗೆ ಹರಳೆಣ್ಣೆಯನ್ನು ತಂದು ಆ ತುರುಕನ ಮೈಗೆಲ್ಲಾ ಸವರಿ ಚೆನ್ನಾಗಿ ನೀವಿದನು ಸ್ವಲ್ಪ ಹೊತ್ತಿನ ಮೇಲೆ ನವೆಯೂ ಉರಿಯೂ ನಿಂತುಹೋದುವು ಆಗ ಅವರಿಬ್ಬರೂ ತಮ್ಮ ತಮ್ಮ ದಾರಿಯನ್ನು ಹಿಡಿದುಕೊಂಡು ಹೊರಟುಹೋದರು.

---

40. THE IMPOVERISHED RYOT AND THE IDOL.

೪೦. ಬಡತನಬಂದ ಶೂದ್ರನೂ ವಿಗ್ರಹವೂ.

ರಾಮನಾಥಪುರವೆಂಬ ಒಂದು ಗ್ರಾಮದಲ್ಲಿ ಹನುಮೇಗೌಡನೆಂಬ ಒಬ್ಬ ಒಕ್ಕಲಿಗನು ಇದ್ದನು. ಅವನು ಬಹು ದರಿದ್ರನಾಗಿದ್ದು ಕಡೆಗೆ ಎಲ್ಲಿಯೋ ಹೇಗೋ ಕಷ್ಟಪಟ್ಟು ಒಂದೇರು ಎತ್ತನ್ನು ಹೊಂದಿಸಿಕೊಂಡು ಆ ಊರ ಪಾರುಪತ್ಯಗಾರನ ಬಳಿಗೆ ಹೋಗಿ ನಾಲ್ಕು ವರಹದ ಕಂದಾಯದ ಹೊಲವನ್ನು ಮಾಡಿಕೊಂಡು ಆರೇಳು ಉಳ ಉತ್ತು ರಾಗಿ ಚೆಲ್ಲಿ ಹದವನ್ನು ಕಂಡು ಕಾಲವರಿತು ಹರತೆಬೇಸಾ

ಯಗಳನ್ನು ಮಾಡಿ ಕಳೆಗಳನ್ನು ಕಿತ್ತು ಚೆನ್ನಾಗಿ ಕಷ್ಟಮಾಡಿದನು. ದೇವರ ದಯೆ ಯಿಂದ ಕಾಲಕಾಲಗಳಲ್ಲಿ ಹದವಾದ ಮಳೆಗಳು ನಡೆಸಿ ಪೈರು ಚೆನ್ನಾಗಿ ಬೆಳೆದು ತೆನೆಗಳಾಗಿ ಹಾಲುದುಂಬಿ ಕಾಸಕ್ಕಿಯಾಗಿ ಕುಯ್ಲಿಗೆ ಬಂದುದನ್ನು ನೋಡಿ ಕೊಯ್ದು ಅರಿಯನ್ನು ಹಾಕಿ ಆರಿಸಿ ಬಳ್ಳಗುಡ್ಡೆಗಳನ್ನು ಹಾಕಿದ್ದು ತಿರಿಗಿ ಕಿತ್ತು ದೊಡ್ಡ ಮೆದೆಯನ್ನು ಹಾಕಿ ಬೇಸಿಗೆಕಾಲದಲ್ಲಿ ಕಣವನ್ನು ಮಾಡಿ ಮೇಟಿಯ ಮರವನ್ನು ನಿಲ್ಲಿಸಿ ಅದರ ಸುತ್ತಲು ಮೆದೆಯ ಹುಲ್ಲನ್ನು ಕಿತ್ತು ಒದರಿ ಒಡ್ಡನ್ನು ಹಾಕಿ ಎತ್ತುಗಳಿಂದ ತುಳಿಸಿ ಮೆರೆಗೋಲನ್ನು ತೆಗೆದುಕೊಂಡು ಅದರಿಂದ ಒಕ್ಕಿದ ಹುಲ್ಲುಗಳನ್ನು ಒದರುತ್ತ ಕಾಳು ಬೇರೆ ಹುಲ್ಲು ಬೇರೆ ಮಾಡಿ ಕಾಳಿನ ರಾಸಿಯನ್ನು ತೂರಿ ಕೇರಿ ಎಂದಿಗಿಂತ ಹುಲುಸಾಗಿರುವ ಕಾಳುಗಳಲ್ಲಿ ತನ್ನ ಮನೆಯ ಒಗತನಕ್ಕೆ ತಕ್ಕಷ್ಟನ್ನು ಮೇಲೆ ಇಟ್ಟುಕೊಂಡು ಮಿಕ್ಕ ಕಾಳುಗಳನ್ನು ಗುಳಿಗಳಲ್ಲಿ ತುಂಬಿದ್ದು ಮಾರು ಬಂದಾಗ ಮಾರಿ ದಿವಾಣದ ಕಂದಾಯವನ್ನು ಕಟ್ಟಿ ಮಿಕ್ಕ ಹಣದಲ್ಲಿ ನಾಲ್ಕು ಏರು ಎತ್ತುಗಳನ್ನು ಕೊಂಡು ಇನ್ನೂ ನಾಲ್ಕು ಜೀತದಾಳುಗಳನ್ನು ಇಟ್ಟು ಕೊಂಡು ಮತ್ತು ಐವತ್ತು ವರಹಾ ಕಂದಾಯದ ಹೊಲ ಗದ್ದೆಗಳನ್ನು ಮಾಡಿ ಕೊಂಡು ದೊಡ್ಡ ರೈತನಾಗಿ ವರುಷವರುಷಕ್ಕೆ ಆರಂಭವನ್ನು ಬಲಪಡಿಸುತ್ತಾ ನೂರಾರು ಉಳುವ ಎತ್ತುಗನ್ನೂ ನೂರಾರು ಹೇರಾಟದ ಎತ್ತುಗಳನ್ನೂ ಸಂಪಾದಿಸಿ ಹತ್ತು ಇಪ್ಪತ್ತು ವರುಷದ ತನಕ ಹೀಗೆ ದೇವರ ದಯೆಯಿಂದ ವೃದ್ಧಿಯಲ್ಲಿ ಬಂದು ಸುಖದಿಂದ ಇದ್ದನು. ಆ ಮೇಲೆ ಆ ದೇಶಕ್ಕೆ ಮಳೆಯಾಗದೆ ಬೆಳೆಯು ನಿಂತುಹೋ ದುದರಿಂದ ಹುಲ್ಲು ಸೊಪ್ಪು ನೀರುಗಳಿಲ್ಲದೆ ದನಗಳಿಗೆ ರೋಗಗಳು ಬಂದು ಕೆಲವು ಸತ್ತು ಹೋದುವು. ಮಿಕ್ಕವೂ ಹೀಗೆ ಸಾಯುತ್ತವಲ್ಲಾ ಎಂಬ ದುಃಖದಿಂದ ದನಗಳ ನ್ನೆಲ್ಲಾ ಮಾರಿ ಸರಕಾರದ ಕಂದಾಯದ ಹಣವನ್ನು ಆ ವರುಷಕ್ಕೆ ಕಟ್ಟಿಬಿಟ್ಟು ಹೀಗೆ ಮೂರು ನಾಲ್ಕು ವರುಷದ ತನಕ ಮಳೆಬೆಳೆಗಳು ಚೆನ್ನಾಗಿ ಆಗದೆ ಉಳುವು ದಕ್ಕೆ ಎತ್ತೂ ಆಳೂ ಇಲ್ಲದೆ ಅರಮನೆಯ ಕಂದಾಯಕ್ಕೆ ಮನೆಯಲ್ಲಿದ್ದ ಒಡವೆ ವಸ್ತುಗಳನ್ನೂ ಪಾತ್ರೆಪದಾರ್ಥಗಳನ್ನೂ ಬಟ್ಟೆ ಮೊದಲಾದವುಗಳನ್ನೂ ದವಸಧಾನ್ಯ ಗಳನ್ನೂ ಮಾರಿ ಪಾಳುಕಂದಾಯ ಕಟ್ಟಿ ತಿನ್ನುವುದಕ್ಕೆ ಹಿಟ್ಟು ಸಹ ಇಲ್ಲದೆ ಬಹಳ ಕಷ್ಟಪಟ್ಟುಕೊಂಡು ಇದ್ದನು ತಿರಿಗಿ ಮಾರನೆಯ ವರುಷ ಕಂದಾಯಕ್ಕೆ ಅರ ಮನೆಯ ಕುಳುವಾಡಿಯು ಕೋಲು ಹಾಕಿಕೊಂಡು ಬಂದು ಇವನ ಮನೆಗೆಮುದ್ರೆ ಹಾಕಿ ಬಹಳ ವರಾತು ಮಾಡಿದುದರಿಂದ ರೈತನು ಕಂದಾಯವನ್ನು ಕೊಡುವುದಕ್ಕೆ ಗತಿ ಇಲ್ಲದೆ ಒಂದು ದಿನ ರಾತ್ರಿವೇಳೆಯಲ್ಲಿ ಕಳುವಿನಿಂದ ತಪ್ಪಿಸಿಕೊಂಡು ಓಡಿ ಹೋಗುತ್ತಾ ಇರುವಲ್ಲಿ ಅರಮನೆಯ ಚಕ್ರನು ಕಂಡು ಬೆನ್ನಟ್ಟಿ ಬರುತ್ತಾ ಇದ್ದನು. ಅದನ್ನು ಇವನು ಕಂಡು ಅವನಿಗೆ ಕಾಣಿಸಿಕೊಳ್ಳದ ಹಾಗೆ ಓಡಿಹೋಗುತ್ತಾ ಇದ್ದು ದಾರಿಯಲ್ಲಿ ಒಂದು ಬಸ್ತಿಯ ಗುಡಿಯು ಇದ್ದುದರಿಂದ ಆದರೊಳಕ್ಕೆ ಹೊಕ್ಕು ಅಲ್ಲಿದ್ದ ವಿಗ್ರಹದ ಹಿಂದುಗಡೆಯಲ್ಲಿ ಔತುಕೊಂಡನು. ಚಕ್ರನು ರೈತನನ್ನು ಕಾಣದೆ ಹಿಂತಿರುಗಿ ಹೋದನು. ಆ ಮೇಲೆ ಬೆಳಕು ಹರಿಯಲು ರೈತನು ಮುಂದಕ್ಕೆ ಬಂದು

ಆ ವಿಗ್ರಹದ ಇರುವಿಕೆಯನ್ನು ನೋಡಿ ಇದಿರು ನಿಂತು ಬಿಕ್ಕಿ ಬಿಕ್ಕಿ ಅಳುತ್ತಾ ಇರುವಲ್ಲಿ ಆ ವಿಗ್ರಹದ ಪೂಜಾರಿಯು ಬಂದು——ಯಾಕೆ ಅಳುತ್ತಿಯೋ? ಎಂದು ಕೇಳಿದುದಕ್ಕೆ——ಮತ್ತಾವುದಕ್ಕೂ ಇಲ್ಲವಪ್ಪಾ! ನಾನು ಹತ್ತು ವರುಷ ಆರಂಭವನ್ನು ಮಾಡಿದುದಕ್ಕೆ ಸ್ವಲ್ಪ ಬಟ್ಟೆಯಾದರೂ ಉಳಿದಿದೆ. ಈ ಪಾಪಿಯು ಎಷ್ಟು ವರುಷಗಳು ಆರಂಭವನ್ನು ಮಾಡಿರಬಹುದೋ? ಒಂದು ಬೊಂತೆಗೂ ಗತಿ ಇಲ್ಲದೆ ಬೆತ್ತಲೆ ನಿಂತಿದ್ದಾನಲ್ಲಾ ಎಂದು ದುಃಖ ಬಂತಪ್ಪಾ! ಎಂದು ಹೇಳಿ ಮತ್ತೊಂದು ದೇಶಕ್ಕೆ ಹೋಗಿ ಕೂಲಿನಾಲಿ ಮಾಡಿಕೊಂಡು ಜೀವಿಸಿಕೊಂಡಿದ್ದನು.

---

41. THE STINGY MERCHANT MADE LIBERAL.

೪೧. ಲೋಭಿಯಾದ ವರ್ತಕನಿಗೆ ಉದಾರಗುಣ ಉಂಟಾದುದು.

ರತ್ನವತಿ ಎಂಬ ಪಟ್ಟಣದಲ್ಲಿ ಮಾಣಿಕಸೆಟ್ಟಿ ಎಂಬ ಒಬ್ಬ ವರ್ತಕನು ಹಡಗಿನ ವ್ಯಾಪಾರಗಳನ್ನು ಮಾಡಿ ಅನೇಕ ದ್ರವ್ಯಗಳನ್ನು ಸಂಪಾದಿಸಿ ಲೋಭಿಯಾದುದರಿಂದ ಒಬ್ಬರಿಗಾದರೂ ಒಂದು ಕಾಸನ್ನೂ ಕೊಡದೆ ಬಹು ಧನವಂತನಾಗಿ ಇದ್ದನು. ಆಗ ಇವನು ಮಹಾಧನಿಕನೆಂದು ತಿಳಿದು ದೇಶಾಂತರದಿಂದ ಬಂದ ಒಬ್ಬ ಯಾಚಕನು ಇವನನ್ನು ನಾಲ್ಕಾರು ವರುಷಗಳವರೆಗೂ ಆಶ್ರಯವನ್ನು ಮಾಡಿದಾಗ್ಯೂ ಒಂದು ಕಾಸನ್ನೂ ಕೊಡದೆ ಹೋದುದರಿಂದ ಮನಸ್ಸಿನಲ್ಲಿ——ಇವನನ್ನು ಕಾದುದು ವ್ಯರ್ಥವಾಯಿತಲ್ಲಾ! ಎಂದು ಚಿಂತಿಸುತ್ತಾ ಇದ್ದನು. ಆಗ ವರ್ಷಾಕಾಲವು ಬಂದು ಕಾಳಮೇಘಗಳು ಆಕಾಶವನ್ನು ತುಂಬಿದುವು. ಆ ವೇಳೆಯಲ್ಲಿ ಕೆಲವು ಜನ ಭಿಕ್ಷುಕರು ಭಿಕ್ಷಾಪಾತ್ರೆಯನ್ನು ಹಿಡುಕೊಂಡು ಈ ವರ್ತಕನ ಬಳಿಗೆ ಬಂದು——ನೀನು ಕೊಡದೆ ನಮ್ಮ ಹಾಗೆ ಆಗಬೇಡ. ಕೊಟ್ಟು ನಿನ್ನ ಹಾಗೆ ಆಗು ಎಂದು ಹೇಳಿದರು. ಆಗ ಈ ವರ್ತಕನು ಅವರು ಹೇಳಿದ ಮಾತನ್ನು ಕೇಳಿ ತನ್ನ ಮನಸ್ಸಿನಲ್ಲಿ——ಈ ಮಾತಿನ ಅಭಿಪ್ರಾಯವೇನಂದರೆ ಯಾವನು ದಾನಧರ್ಮಗಳನ್ನು ಮಾಡುತ್ತಾನೋ ಅವನು ಮತ್ತೊಂದು ಜನ್ಮದಲ್ಲಿ ಐಶ್ವರ್ಯವಂತನಾಗುವನು. ಮಾಡದವನು ಭಿಕ್ಷುಕನಾಗಿ ಹುಟ್ಟುವನೆಂದಾಯಿತು. ಆದರೆ ಹಣವನ್ನು ಗಳಿಸಿದವನು ನಿತ್ಯವೂ ವೆಚ್ಚವನ್ನು ಮಾಡುತ್ತಾ ಬಂದರೆ ಕೆಲವು ದಿವಸದಲ್ಲಿ ಹಣವೆಲ್ಲ ಮುಗಿದು ಬಡವನಾಗುವನು ಎಂದು ಯೋಚಿಸುತ್ತಿದ್ದನು. ಆಗ ಮೊದಲಿಂದಲೂ ಕಾದಿದ್ದ ಬ್ರಾಹ್ಮಣನು ವರ್ತಕನ ಭಾವವನ್ನು ತಿಳಿದು ಆಕಾಶದಲ್ಲಿರುವ ಮೇಘವನ್ನು ಕುರಿತು——ಎಲೈ ಮೇಘವೇ! ಒಂದು ಸಂವತ್ಸರಾರಭ್ಯ ನಿನ್ನನ್ನೇ ನಿರೀಕ್ಷಿಸಿಕೊಂಡು ಬಾಯಾರಿಕೆಯಿಂದ ಕಂಗೆಟ್ಟಿರುವ ಈ ಚಾತಕಪಕ್ಷಿಯ ಮರಿಯ ಬಾಯಿಯಲ್ಲಿ ತಾತ್ಸಾರ ಮಾಡದೆ ಬೇಗ ನಿನ್ನ ಮುಂಗಾರು ಹನಿಗಳನ್ನು ಕೆಡಹು. ಯಾಕಂದರೆ ಗಾಳಿಯು ಮತ್ತೊಂದು ಪ್ರಕಾರ ತಿರುಗಿ ಬೀಸಿದುದೇ ಆದರೆ ಆಗ ನೀನು ಎಲ್ಲಿ? ನಿನ್ನ ನೀರುಗಳೆಲ್ಲಿ? ಚಾತಕಪಕ್ಷಿ ಬಂದು ಕಾಯುವುದೆಲ್ಲಿ? ಎಂದು ಹೇಳಿದನು. ಆ ಮಾತನ್ನೂ

ವರ್ತಕನು ಕೇಳಿ ಈ ಮಾತಿಗೆ—ದೇವರು ಕೊಟ್ಟಾಗಲೇ ದಾನಧರ್ಮಗಳನ್ನು ಮಾಡ ಬೇಕು. ಈ ಐಶ್ವರ್ಯವು ದೇವರ ದಯೆ ತಪ್ಪಿದರೆ ಹೋಗುವುದು. ಆಗ ನಿನ್ನ ಬಳಿಗೆ ಒಬ್ಬ ಬೇಡುವವನಾದರೂ ಬಾರನು ಎಂಬರ್ಥವಾಯಿತು ಎಂದು ಯೋಚಿಸಿ ತಾನು ಸಂಪಾದಿಸಿರುವ ದ್ರವ್ಯಗಳನ್ನು ನಾಲ್ಕು ಪಾಲು ಮಾಡಿ ಒಂದು ಪಾಲನ್ನು ವ್ಯಾಪಾರಕ್ಕಾಗಿ ಮಕ್ಕಳ ವಶಕ್ಕೆ ಕೊಟ್ಟು ಒಂದು ಪಾಲನ್ನು ಸಂಚಿತವಾಗಿ ಇಟ್ಟು ಮತ್ತೊಂದು ಪಾಲನ್ನು ಗೃಹಕೃತ್ಯದ ವ್ಯಯಕ್ಕೆ ಇಟ್ಟುಕೊಂಡು ನಾಲ್ಕನೆಯ ಪಾಲನ್ನು ದಾನಧರ್ಮಗಳಿಗೆಂದು ತೆಗೆದು ಬಂದ ಭಿಕ್ಷುಕರಿಗೂ ಕಾದಿದ್ದ ಬ್ರಾಹ್ಮಣನಿಗೂ ಉಚಿತವರಿತು ಕೊಟ್ಟು ಮುಂದೆ ಬಂದವರಿಗೂ ಯೋಗ್ಯತೆಯರಿತು ಕೊಡುತ್ತಾ ಕೀರ್ತಿಯನ್ನು ಹೊಂದಿ ಸುಖವಾಗಿದ್ದನು.

———

42. THE STORY OF PEDDA BHATTA.

೪೨. ಪೆದ್ದಭಟ್ಟನು.

ಉತ್ತರ ದೇಶದಲ್ಲಿ ದೇವಪುರವೆಂಬ ಒಂದು ಅಗ್ರಹಾರದಲ್ಲಿರುವ ದೇವಶರ್ಮನೆಂಬ ಬ್ರಾಹ್ಮಣನು ಸಕಲವೇದಶಾಸ್ತ್ರಾದಿಗಳ ಅಧ್ಯಯನವನ್ನು ಮಾಡಿ ವಿದ್ವಾಂಸನಾಗಿ ಅರಸುಗಳ ಸಭೆಗೆ ಹೋಗಿ ಪ್ರಸಂಗವನ್ನು ಮಾಡಿ ಜಯಪತ್ರಿಕೆಯನ್ನು ಪಡೆದು ಅರಸುಗಳಿಂದ ಬಹುಮಾನವಾಗಿ ಧನಕನಕವಸ್ತ್ರಾಭರಣಗಳನ್ನು ಹೊಂದಿ ಧನಿಕನಾಗಿ ತನ್ನ ಸಮಾನರಾದ ಬಂಧುಗಳಲ್ಲಿ ಕನ್ಯಕೆಯನ್ನು ಮದುವೆಯಾಗಿ ಗೃಹಸ್ಥಾಶ್ರಮಕ್ಕೆ ಸೇರಿ ಬಂದ ಅತಿಥಿ ಅಭ್ಯಾಗತರಿಗೆ ಅನ್ನೋದಕಗಳನ್ನು ಕೊಟ್ಟು ಮನ್ನಿಸುತ್ತಾ ಘನವಿದ್ವಾಂಸನೆಂದು ಮಂದಿಗಳಲ್ಲಿ ಹೆಸರನ್ನು ಹೊಂದಿ ಸುಖವಾಗಿದ್ದನು. ಹೀಗಿರುವಲ್ಲಿ ಆ ಬ್ರಾಹ್ಮಣಿಯು ದೇವರ ದಯೆಯಿಂದ ಬಸುರಾಗಿ ಶುಭಲಗ್ನ ಶುಭತಾರೆಯಲ್ಲಿ ಗಂಡುಮಗನನ್ನು ಬೆಸಲಾದಳು. ಆ ದೇವಶರ್ಮನು ಸಂತುಷ್ಟನಾಗಿ ಹುಟ್ಟಿದ ಕೂಸಿಗೆ ಜಾತಕರ್ಮವನ್ನು ಮಾಡಿ ಹನ್ನೆರಡನೆಯ ದಿವಸದಲ್ಲಿ ಮಲ್ಲಿನಾಥನೆಂದು ನಾಮಕರಣವನ್ನು ಮಾಡಿ ಶಿಶುವು ಬೆಳೆದ ಹಾಗೆ ಆಯಾಕಾಲದಲ್ಲಿ ಚೌಲೋಪನಯನಾದಿ ಕರ್ಮಗಳನ್ನು ನೆರವೇರಿಸಿ ವೇದಶಾಸ್ತ್ರಾಭ್ಯಾಸಕ್ಕಾಗಿ ಗುರುಗಳ ಬಳಿಗೆ ಕಳುಹಿಸಿದನು. ಆ ಮಲ್ಲಿನಾಥನೆಂಬ ಮಗನು ಗುರುಗಳು ಹೇಳಿದ ಹಾಗೆ ಓದಿ ಬರೆಯದೆ ವೇದಶಾಸ್ತ್ರಗಳನ್ನು ಕಲಿಯದೆ ಯಾವಾಗಲೂ ಕೆಟ್ಟ ಹುಡುಗರ ಸಂಗಡ ಜೆಂಡು ಬುಗುರಿಯನ್ನಾಡುತ್ತಾ ಶುದ್ಧಶುಂಠಕಾಯನಾದನು. ಅಂಥಾ ಹೆಡ್ಡ ಹುಡುಗನಿಗೂ ಕೂಡ ದೊಡ್ಡ ವಿದ್ವಾಂಸನ ಮಗನೆಂದು ಮತ್ತೊಬ್ಬ ಪೂರ್ಣವಿದ್ವಾಂಸನು ತನ್ನ ಮಗಳನ್ನು ಕೊಟ್ಟು ಮದುವೆ ಮಾಡಿದನು. ಕೆಲವು ದಿವಸದ ಮೇಲೆ ಆ ಹೆಣ್ಣುಮಗಳು ದೊಡ್ಡವಳಾದುದರಿಂದ ಆ ಹುಡುಗಿಯ ತಂದೆಯು ಹುಡುಗನ ತಂದೆಯ ಹೆಸರಿಗೆ—ನಿಮ್ಮ ಮಗನನ್ನು ಕಳುಹಿಸಿದರೆ ಶೋಭನಪ್ರಸ್ತವನ್ನು ಬೆಳಸಿ ದಂಪತಿಗಳನ್ನು ತಮ್ಮ ಬಳಿಗೆ ಕಳುಹಿಸಿಕೊಡುತ್ತೇನೆಂದು ಲಗ್ನಪತ್ರಿಕೆಯನ್ನು ಬರೆದು ಲಕ್ಕೋಟಿಗೆ ಅರಸಿನ ಕುಂಕುಮಗಳನ್ನು

ಹಚ್ಚಿಸಿ ಅದನ್ನು ಅದರಲ್ಲಿಟ್ಟು ಕಳುಹಿಸಿದನು. ಆಗ ಮಲ್ಲಿನಾಥನ ತಂದೆಯು ಬೀಗನು ಬರೆದ ಲಗ್ನಪತ್ರಿಕೆಯನ್ನು ಓದಿಕೊಂಡು ತನ್ನ ಮಗನ ಹೆಡ್ಡತನವನ್ನು ನೋಡಿ ಬಹಳ ಚಿಂತಾಕ್ರಾಂತನಾಗಿ ಮಗನನ್ನು ಹತ್ತಿರಕ್ಕೆ ಕರೆದು—ಅಪ್ಪಾ, ಮಗನೇ ! ನೀನು ನನ್ನ ಹೊಟ್ಟೆಯಲ್ಲಿ ಹುಟ್ಟಿದೆಯಾದುದರಿಂದ ನಿನ್ನನ್ನು ಒಳ್ಳೆಯ ವಿದ್ವಾಂಸರ ಮಗಳು ಮದುವೆಯಾಗಿದ್ದಾಳೆ. ನಿನ್ನ ಭಾವಮೈದಂದಿರು ಸಕಲ ಶಾಸ್ತ್ರಗಳಲ್ಲಿಯೂ ನಿಪುಣರಾಗಿದ್ದಾರೆ. ಈಗ ಶೋಭನಪ್ರಸ್ತಕ್ಕೆ ನಿನ್ನನ್ನು ಸಿಮ್ಮ ಮಾವ ಕರಿಸಿದ್ದಾನೆ. ನೀನು ನಿರಕ್ಷರಕುಕ್ಷಿಯಾಗಿದ್ದೀ. ನೀನು ಮಾವನ ಮನೆಗೆ ಹೋದಾಗ ನಿನ್ನ ಭಾವಮೈದಂದಿರು ಏನಾದರೂ ಪುಸ್ತಕಗಳನ್ನು ತೋರಿಸಿದರೆ ನೋಡುವವನ ಹಾಗೆ ಕೆಲವು ಓಲೆಗಳನ್ನು ಮಗುಚಿಹಾಕಿ ನೋಡಿ—ಸಂಪೂರ್ಣವಾಗಿದೆಯೇ ? ಎಂದು ಇಷ್ಟುಮಾತ್ರ ಕೇಳು ಕಂಡೆಯಾ ? ಎಂದು ಜೆನ್ನಾಗಿ ಹೇಳಿ ಮಾವನ ಮನೆಗೆ ಪ್ರಯಾಣಮಾಡಿ ಕಳುಹಿದನು. ಮಾವನೂ ಅತ್ತೆಯೂ ರೂಪಿನಲ್ಲಿ ಜೆಲುವನಾಗಿ ಯೌವನಸ್ಥನಾಗಿರುವ ಅಳಿಯನನ್ನು ನೋಡಿ ಬಹಳ ಸಂತೋಷಪಟ್ಟು ಶುಭಮುಹೂರ್ತದಲ್ಲಿ ಶೋಭನಪ್ರಸ್ತವನ್ನು ಬೆಳಸಿಕೊಟ್ಟು ಅಳಿಯನನ್ನು ಬಹಳ ಬಹುಮಾನದಿಂದ ಆದರಿಸಿಕೊಂಡು ಇದ್ದರು. ಒಂದು ದಿವಸ ಇವನ ಭಾವಮೈದಂದಿರು ತಮ್ಮ ಮನೆಯ ಪುಸ್ತಕಗಳನ್ನು ಬಿಸಲಿಗೆ ಹಾಕುತ್ತಾ ಒಂದು ಪುಸ್ತಕವನ್ನು ತೆಗೆದು ಅವನ ಕೈಗೆ ಕೊಡಲು ಸ್ವಲ್ಪ ಹೊತ್ತು ನೋಡಿದವನ ಹಾಗೆ ಮಾಡಿ—ಸಂಪೂರ್ಣವಾಗಿದೆಯೇ ? ಎಂದು ಕೇಳಿ ಕೊಟ್ಟುಬಿಟ್ಟನು. ಹೀಗೆಯೇ ಯಾವ ಪುಸ್ತಕವನ್ನು ಕೈಯಲ್ಲಿ ಕೊಟ್ಟರೂ—ಸಂಪೂರ್ಣವಾಗಿದೆಯೇ ಎಂದು ಕೇಳಿ ಕೊಡುತ್ತಾ ಬಂದಕಾರಣ ಒಬ್ಬ ಕುಜೋದ್ಯಗಾರನಾದ ಭಾವಮೈದನು ಒಂದು ಅಲೇಖವನ್ನು ತೆಗೆದು ಇವನ ಕೈಯಲ್ಲಿ ಕೊಡಲು ಅದನ್ನೂ ತೆಗೆದುಕೊಂಡು ಕೆಲವು ಓಲೆಗಳನ್ನು ಮಗುಚಿಹಾಕಿ ನೋಡಿ—ಸಂಪೂರ್ಣವಾಗಿದೆಯೇ ? ಎಂದು ಕೇಳಿದನು. ಆಗ ಆ ಭಾವಮೈದಂದಿರೆಲ್ಲಾ ಒಬ್ಬರ ಮುಖವನ್ನೊಬ್ಬರು ನೋಡಿ ನಕ್ಕು—ಇವನು ಶುದ್ಧಬ್ರಹ್ಮನೆಂದು ನಿಶ್ಚಯಿಸಿ ಒನಕೆಯು ಚಿಗುರಿದಾಗ್ಗೆ ಇವನಿಗೆ ವಿದ್ಯೆಯು ಬರುವುದು ಎಂದು ಹಾಸ್ಯಮಾಡಿದರು. ಅದನ್ನು ಜಾಣೆಯಾದ ಇವನ ಹೆಂಡತಿಯು ನೋಡಿ ಬಹಳ ನಾಚಿಕೊಂಡು ಏಕಾಂತದಲ್ಲಿ ಗಂಡನೊಡನೆ—ಮಾವನ ಮನೆಯಲ್ಲಿ ಎಷ್ಟು ದಿವಸವಿರಬೇಕು ? ನಮ್ಮೂರಿಗೆ ಹೋಗೋಣ ಎಂದಳು. ಈ ಮಲ್ಲಿನಾಥನು ಅತ್ತೆಮಾವಂದಿರ ಅಪ್ಪಣೆಯನ್ನು ತೆಗೆದುಕೊಂಡು ಹೆಂಡತಿಯನ್ನು ಕರಕೊಂಡು ತನ್ನ ಊರಿಗೆ ಬರುವ ದಾರಿಯಲ್ಲಿ ಕಾಡಿನೊಳಗೆ ಜೆನ್ನಾಗಿ ಹೂಬಿಟ್ಟಿರುವ ಮುತ್ತುಗದ ಮರವನ್ನು ಹೆಂಡತಿಗೆ ತೋರಿಸಿ—ಎಲೇ, ಎಲೇ, ನೋಡೇ : ಈ ಮುತ್ತುಗದ ಹೂಗಳು ಎಷ್ಟು ಜೆನ್ನಾಗಿವೆ ! ಎನಲು ಆಕೆಯು—ನೀನು ರೂಪಯೌವನಸಂಪನ್ನನಾಗಿದ್ದಾಗ್ಗೂ ವಿದ್ಯಾಹೀನನಾಗಿರುವುದರಿಂದ ಹೇಗೆ ಶೋಭಿಸುವುದಿಲ್ಲವೋ ಹಾಗೆಯೇ ಈ ಮುತ್ತುಗದ ಹೂವುಗಳು ಕಣ್ಣಿಗೆ ಬಹು ರಮ್ಯವಾಗಿ ಕಂಡಾಗ್ಗೂ ಸುವಾಸನೆ ಇಲ್ಲದೆ ಇರುವುದರಿಂದ ಶೋಭಿಸದೆ ಇರುವುವು ಎಂದು ಹೇಳಿದಳು. ಆಗ ಮಲ್ಲಿನಾಥನು ಹೆಂಡತಿಯ ಮಾತನ್ನು ಕೇಳಿ ಬಹುವಾಗಿ ನಾಚಿಕೊಂಡು—ಛೀ ! ಛೀ ! ನನ್ನ ಜನ್ಮವು ವ್ಯರ್ಥವು !

ಹೇಗಾದರೂ ವಿದ್ಯೆಯನ್ನು ಕಲಿಯಬೇಕೆಂದು ಮನಸ್ಸಿನಲ್ಲಿ ಛಲಹುಟ್ಟಿ ತಿರಿಗಿ ಹೆಂಡತಿಯನ್ನು ಕರಕೊಂಡು ಮಾವನ ಮನೆಗೆ ಬಂದು ಆಕೆಯನ್ನು ಅಲ್ಲಿಯೇ ಬಿಟ್ಟು ತಾನು ವಿದ್ಯೆಯನ್ನು ಕಲಿಯುವ ಉದ್ದೇಶದಿಂದ ಕಾಶೀ ಪಟ್ಟಣಕ್ಕೆ ಹೋಗಿ ಅಲ್ಲಿ ಒಬ್ಬ ವಿದ್ವಾಂಸನನ್ನು ಕಂಡು ಆತನಿಗೆ ಅಡ್ಡಬಿದ್ದು——ಸ್ವಾಮಿ ಗುರುಗಳೇ! ನಾನು ಶುದ್ಧ ಮೂಢನು! ನನಗೆ ಒಂದಕ್ಷರವಾದರೂ ಬರುವುದಿಲ್ಲ. ನನ್ನ ಮೇಲೆ ಕನಿಕರವಿಟ್ಟು ಅಕ್ಷರಾಭ್ಯಾಸವು ಮೊದಲಾಗಿ ಕಲಿಸಿಕೊಟ್ಟು ನನ್ನನ್ನು ವಿದ್ವಾಂಸನನ್ನಾಗಿ ಮಾಡಬೇಕೆಂದು ವಿನಯದಿಂದ ಬೇಡಿಕೊಂಡನು. ಆಗ ಗುರುವು——ಒಳ್ಳೆಯದೆಂದು ಹೇಳಿ ಇವನ ಬುದ್ಧಿಕುಶಲತ್ವವನ್ನು ಪರೀಕ್ಷಿಸಿ ನೋಡಿ ಕಡೆಗೆ ಅವನಿಗೆ ಊರಬಾಗಿಲ ಬಳಿಯಲ್ಲಿ ಗುಂಡಿಯ ಓನಾಮವನ್ನು ಬರೆದುಕೊಟ್ಟು——ಮನೆಯಲ್ಲಿ ಎರಡು ಹೊತ್ತೂ ಉಂಡುಕೊಂಡು ಇದನ್ನು ತಿದ್ದಿ ಕಲಿತುಕೋ ಎಂದು ಆಪ್ಪಣೆ ಕೊಟ್ಟು ತನ್ನ ಹೆಂಡತಿಯೊಡನೆ——ಆ ಶಿಷ್ಯನಿಗೆ ನಿತ್ಯದಲ್ಲಿಯೂ ಬೇವಿನೆಣ್ಣೆಯಲ್ಲಿ ಅನ್ನವನ್ನು ಕಲಿಸಿ ಹಾಕು. ಯಾವ ದಿನ ಕಹಿಯಾಗಿದೆ ಎಂದು ಹೇಳುತ್ತಾನೋ ಆಗ ನನಗೆ ಹೇಳು ಅಂದನು. ಮಲ್ಲಿನಾಥನು ಊರಬಾಗಿಲ ಬಳೆಯಲ್ಲಿ ಆ ಗುಂಡಿಯ ಓನಾಮವನ್ನು ತದೇಕಧ್ಯಾನದಿಂದ ಬರೆಯುತ್ತಾ ಇದ್ದನು ಆ ಮಾರ್ಗವಾಗಿ ಬರುವ ಹೋಗುವ ಜನಗಳು——ಇವನಿಗೇನು ಮಾರಿಯು ಹಿಡಿದಿದೆಯೋ? ಇಪ್ಪತ್ತು ವರುಷದ ಮುದಿಗೋಣನಾಗಿದ್ದಾನೆ. ಈಗ ಗುಂಡಿಯ ಓನಾಮವನ್ನು ತಿದ್ದುತ್ತಾನೆಂದು ಬೈದುಕೊಂಡು ತಿರುಗಿದಾಗ್ಗೂ ಆ ಮಾತೊಂದೂ ಇವನಿಗೆ ಕೇಳಿಸದೆ ಜನರನ್ನು ಕಣ್ಣೆತ್ತಿನೋಡದೆ ಗುರುವಿನ ಮನೆಯಲ್ಲಿ ಹಾಕಿದ ಬೇವಿನ ಎಣ್ಣೆಯ ಅನ್ನವನ್ನು ಕಹಿ ಸಿಹಿ ಎಂದು ಹೇಳದೆ ತಿಂದುಕೊಂಡು ಹಗಲಿರುಳು ತನ್ನ ವಿದ್ಯಾಭ್ಯಾಸದಲ್ಲಿಯೇ ಆಸಕ್ತನಾಗಿದ್ದು ಕೆಲವು ದಿವಸದಲ್ಲಿ ಅಕ್ಷರಗಳನ್ನೂ ಹೀಗೆಯೇ ನಾಲ್ಕಾರು ವರುಷದಲ್ಲಿ ಸಾಹಿತ್ಯ ತರ್ಕ ವ್ಯಾಕರಣ ಮಿಮಾಂಸೆ ಜ್ಯೋತಿಷ ವೇದ ವೇದಾಂತವೇ ಮೊದಲಾದ ಸಕಲ ವಿದ್ಯೆಗಳನ್ನೂ ಕಲಿತು ಸಂಪೂರ್ಣ ವಿದ್ವಾಂಸನಾಗಿ ಒಂದು ದಿವಸ ಗುರುಪತ್ನಿಯು ಇಕ್ಕಿದ ಅನ್ನವನ್ನು ಉಂಡು ಆಕೆಯನ್ನು ಕುರಿತು——ಅಮ್ಮಾ! ಅನ್ನವು ನಿತ್ಯಗಟ್ಟಿಯ ಹಾಗಿಲ್ಲ. ಈ ದಿವಸ ಏತಕ್ಕೋ ಕಹಿಯಾಗಿದೆ ಎಂದು ಹೇಳಲು ಗುರುಪತ್ನಿಯು——ಅಪ್ಪಾ! ಕಹಿಯಾಗಿದ್ದರೆ ಆ ಅನ್ನವನ್ನು ಬಿಡು ಎಂದು ಹೇಳಿ ಬೇರೆ ಅನ್ನವನ್ನೂ ಸಾರು ತುಪ್ಪ ಮಜ್ಜಿಗೆ ಮುಂತಾದುದನ್ನೂ ಬಡಿಸಿ ಜೆನ್ನಾಗಿ ಊಟವನ್ನು ಮಾಡಿಸಿ ಈ ವಿವರವನ್ನು ತನ್ನ ಗಂಡನಿಗೆ ಹೇಳಿದಳು. ಆತನು ಈ ಮಲ್ಲಿನಾಥನನ್ನು ಕರೆದು——ಅಯ್ಯಾ! ನೀನು ಸಕಲ ವಿದ್ಯಾಪಾರಂಗತನಾದೆ. ಇನ್ನು ಮೇಲೆ ನಿನ್ನ ತಂದೆತಾಯಿಗಳ ಬಳಿಗೆ ಹೋಗು ಎಂದು ಆಪ್ಪಣೆಯನ್ನು ಕೊಟ್ಟುದರಿಂದ ಗುರುವಿಗೂ ಗುರುಪತ್ನಿಗೂ ವಂದಿಸಿ ಅಲ್ಲಿಂದ ಹೊರಟು ಕಾಶೀರಾಜನ ಸಭೆಯಲ್ಲಿ ವಿದ್ವಾಂಸರೊಡನೆ ಪ್ರಸಂಗವನ್ನು ಮಾಡಿ ಸರ್ವವಿದ್ವಾಂಸರನ್ನೂ ಜಯಿಸಿದುದರಿಂದ ಅಲ್ಲಿ ಈತನಿಗೆ ಪೆದ್ದಭಟ್ಟನೆಂದು ಹೆಸರನ್ನು ಕೊಟ್ಟರು. ಕಾಶೀರಾಜನು ಈತನಿಗೆ ಕನಕಾಭಿಷೇಕವನ್ನು ಮಾಡಿ ಬೇಕಾದಷ್ಟು ಕನಕಾಭರಣವಸ್ತ್ರಾದಿಗಳನ್ನು ಕೊಟ್ಟು ಪಾಲಕಿಯಲ್ಲಿ ಕೂರಿಸಿ ಬೆಂಗಾವಲಿಗೆ ಕೆಲವು ಸೇನೆಯನ್ನು ಕೊಟ್ಟು

ಕಳುಹಿಸಿದನು. ಪೆದ್ದಭಟ್ಟನು ಅಲ್ಲಿಂದ ಗುರುವಿನ ಬಳಿಗೆ ಬಂದು ಗುರುದಕ್ಷಿಣೆಯನ್ನು ಕೊಟ್ಟು ಅಲ್ಲಿಂದ ಹೊರಟು ತನ್ನ ಮಾವನ ಮನೆಗೆ ಬಂದು ಭಾವಮೈದಂದಿರನ್ನೆಲ್ಲಾ ವಿದ್ಯಾಪ್ರಸಂಗದಲ್ಲಿ ಜಯಿಸಿ ಹೆಂಡತಿಯನ್ನು ಕರೆದುಕೊಂಡು ತನ್ನ ಊರಿಗೆ ಬಂದು ತಂದೆತಾಯಿಗಳಿಗೆ ವಂದನೆಯನ್ನು ಮಾಡಿ ನಡೆದ ವೃತ್ತಾಂತವನ್ನು ಸಾಂಗವಾಗಿ ಹೇಳಲು ತಂದೆಯು—ಈ ದಿವಸ ನನಗೆ ಮಗನು ಹುಟ್ಟಿದನೆಂದು ಅವನನ್ನು ತಬ್ಬಿ ಕೊಂಡು ಮುದ್ದಾಡಿದನು. ಆ ಮೇಲೆ ಸರ್ವರೂ ಸಂತೋಷವಾಗಿದ್ದರು.

---

43. MARYADE RAMANNA, THE BRAHMAN, AND THE MERCHANT

೪೩. ಮರ್ಯಾದೆ ರಾಮಣ್ಣನು ಬ್ರಾಹ್ಮಣವರ್ತಕರ ವ್ಯಾಜ್ಯವನ್ನು ತೀರಿಸಿದುದು.

ಉತ್ತರದೇಶದಲ್ಲಿ ಶೋಭಾವತಿ ಎಂಬ ಪಟ್ಟಣವಿರುವುದು. ಆ ಪಟ್ಟಣದಲ್ಲಿ ಸುಶೀಲನೆಂಬ ಬ್ರಾಹ್ಮಣನು ಸರ್ವತಂತ್ರಗಳಲ್ಲಿಯೂ ಬಹು ನಿಪುಣನಾಗಿ ಇರುವನು. ಈತನಿಗೆ ಬಾಲ್ಯಸ್ನೇಹಿತನಾದ ಪ್ರಜ್ಞಾಶಾಲಿ ಎಂಬ ಒಬ್ಬ ವೈಶ್ಯಸ್ನೇಹಿತನಿದ್ದನು. ಈ ಉಭಯರೂ ಬಾಲ್ಯದಾರಭ್ಯ ಬಹಳ ಮೈತ್ರಿಯಿಂದ ಸಕಲಕಾರ್ಯಗಳಲ್ಲಿಯೂ ಒಬ್ಬರಿಗೊಬ್ಬರು ಸಹಯೋಗಕ್ಷೇಮಿಗಳಾಗಿ ಇದ್ದರು. ಆದರೆ ಆ ಬ್ರಾಹ್ಮಣನ ಯೋಗ್ಯತೆಯನ್ನೂ ವರ್ತಕನ ವ್ಯಾಪಾರದ ಕುಶಲತೆಯನ್ನೂ ಅಲ್ಲಿ ವಿಚಾರಿಸುವವರಿಲ್ಲದೆ ಈ ಉಭಯರೂ ಬಹಳ ದರಿದ್ರರಾಗಿ ಜೀವನಕ್ಕೆ ಮಾರ್ಗವಿಲ್ಲದೆ ಒಂದು ದಿವಸ ಆಲೋಚನೆಯನ್ನು ಮಾಡಿದರು. ಏನಂದರೆ—ನಾವು ಈ ಸ್ಥಳದಲ್ಲಿ ಎಷ್ಟು ದಿವಸವಿದ್ದರೂ ನಮ್ಮ ಕಷ್ಟ ಪರಿಹಾರವಾಗಿ ಸೌಖ್ಯ ಉಂಟಾಗುವುದಿಲ್ಲ. ಸಾಯಲಾರದ ಬಡತನಕ್ಕೆ ಪಲಾಯನವೇ ನಿಕ್ಷೇಪ ಎಂಬ ಗಾದೆಯಂತೆ ದೇಶಾಂತರಕ್ಕೆ ಹೋಗಿ ಅಲ್ಲಿ ಪ್ರಬಲವಾದ ಆಶ್ರಯವನ್ನು ಹೊಂದಿ ಅದರಿಂದ ನಾವು ಮುಂದಕ್ಕೆ ಬರಬೇಕು. ನಮ್ಮ ಉಭಯರಲ್ಲಿ ನನಗೆ ಕೂಡಿಬಂದರೆ ನಾನು ನಿನಗೆ ಸಹಾಯವನ್ನು ಮಾಡಬೇಕು. ನಿನಗೆ ಕೂಡಿಬಂದು ನನಗೆ ಯಾವದೂ ಅನುಕೂಲಿಸದೇ ಹೋದರೆ ನೀನು ನನಗೆ ಪಾಲು ಕೊಟ್ಟು ಸಹಾಯ ಮಾಡಬೇಕು ಎಂದು ಪ್ರಥಮದಲ್ಲಿಯೇ ನಿಶ್ಚಯಮಾಡಿಕೊಂಡು ತಮ್ಮ ಸ್ಥಳವನ್ನು ಬಿಟ್ಟು ದೂರದೇಶಕ್ಕೆ ಹೋಗಿ ಆಯಾ ದೇಶಗಳ ಅರಸುಗಳನ್ನೆಲ್ಲಾ ಪರೀಕ್ಷೆ ಮಾಡಿ ಕಂಡು ಕೇಳಿಕೊಂಡರೂ ಎಲ್ಲಿಯೂ ತಕ್ಕ ಆಶ್ರಯವು ಸಿಕ್ಕದೆ ಕಡೆಗೆ ಒಂದು ದೊಡ್ಡ ಪಟ್ಟಣದಲ್ಲಿರುವ ಒಬ್ಬ ಅಡುಗೂಳಜ್ಜಿಯ ಮನೆಯಲ್ಲಿ ಹೋಗಿ ಇಳುಕೊಂಡರು. ಆ ಮೇಲೆ ಆ ಪಟ್ಟಣವನ್ನಾಳುವ ಮಹಾರಾಜಾ ಛತ್ರಪತಿ ಎಂಬುವನ ಬೇಟಿಮಾಡಿಕೊಳ್ಳುವಲ್ಲಿ ಆ ರಾಯನು ಈ ಸುಶೀಲನೆಂಬುವನ ವಿದ್ಯಾವೈದುಷ್ಯಕ್ಕೆ ಮೆಚ್ಚಿದವನಾಗಿ ಅವನಿಗೆ ದೊಡ್ಡ ಸಂಬಳವನ್ನು ಮಾಡಿಸಿಕೊಟ್ಟು ಆತನನ್ನು ತನ್ನ ಸಮುಖದಲ್ಲಿಯೇ ಇಟ್ಟುಕೊಂಡನು. ಈತನ ಜೊತೆಯಲ್ಲಿ ಇದ್ದ ವರ್ತಕನಿಗೆ ವ್ಯಾಪಾರ ವಿಷಯದಲ್ಲಿ ಅನು

ಕೂಲವಿಲ್ಲದೆ ಹೋದುದರಿಂದ ಸುಮ್ಮನೆ ಆ ಪಟ್ಟಣದಲ್ಲೇ ಇದ್ದುಕೊಂಡು ಇದ್ದನು. ಪೂರ್ವದಲ್ಲಿ ಬ್ರಾಹ್ಮಣನೂ ವರ್ತಕನೂ ಸಹನಿಷ್ಕರ್ಷೆಯನ್ನು ಮಾಡಿಕೊಂಡು ಇದ್ದಪ್ರಕಾರ ಒಬ್ಬರಿಗೊಬ್ಬರು ಸಹ ಯೋಗಕ್ಷೇಮಿಗಳಾಗಿ ಹತ್ತು ಹದಿನೈದು ವರುಷಗಳ ವರೆಗೂ ಆ ಪಟ್ಟಣದಲ್ಲೇ ಇದ್ದರು. ಆ ಬ್ರಾಹ್ಮಣನು ದಿನೇ ದಿನೇ ಒಹಳ ಪ್ರಬಲನಾಗಿ ಮಹದೈಶ್ವರ್ಯವಂತನಾಗಿರುವಲ್ಲಿ ತಮ್ಮ ಸ್ಥಳಕ್ಕೆ ಹೋಗಬೇಕೆಂಬ ಚಿಂತೆಯುಂಟಾಗಿ ತನ್ನ ಮಿತ್ರನಾದ ವರ್ತಕನ ಸಂಗಡ—ನಾವು ಬಂದು ಬಹಳ ದಿವಸವಾಯಿತು. ಮನೆಯ ಕಡೆ ಏನಾಯಿತೋ? ನಮ್ಮ ಜನಗಳು ಏನಾದರೋ? ಹೇಗೆ ಇದ್ದಾರೋ? ನೋಡಿ ತಿಳಿಯದೆ ನಾವು ಉಭಯರೂ ಇಲ್ಲೇ ಇದ್ದು ಬಿಡುವುದು ಯುಕ್ತವಲ್ಲ. ಆದ ಕಾರಣ ನೀನು ಹೋಗಿ ಎಲ್ಲವನ್ನೂ ವಿಚಾರಿಸಿಕೊಂಡು ಬರಬೇಕೆಂದು ಹೇಳಿದವನಾಗಿ ಆ ವರ್ತಕನಿಗೆ ಹತ್ತುಸಾವಿರ ವರಹಗಳನ್ನೂ ತನ್ನ ಮನೆಗೆ ಹತ್ತುಸಾವಿರ ವರಹಗಳನ್ನೂ ಅಧಿಕಕ್ರಯವುಳ್ಳ ಒಂದು ದಿವ್ಯವಾದ ರತ್ನವನ್ನೂ ಕೊಟ್ಟು ಅವನನ್ನು ತನ್ನ ಸ್ಥಳಕ್ಕೆ ಕಳುಹಿಸಿಕೊಟ್ಟನು. ವರ್ತಕನು ಅದೇ ಪ್ರಕಾರ ತನ್ನ ಸ್ನೇಹಿತನಾದ ಬ್ರಾಹ್ಮಣನಿಂದ ದ್ರವ್ಯರತ್ನಗಳನ್ನು ತೆಗೆದುಕೊಂಡು ಅಪ್ಪಣೆಯನ್ನು ಪಡೆದು ತನ್ನ ಊರಿಗೆ ಬಂದನು. ಅಷ್ಟರಲ್ಲಿ ಆ ಬ್ರಾಹ್ಮಣನ ಹೆಂಡತಿಯ ಸಂಗತಿ ಏನಂದರೆ—ಮನೆಯೆಲ್ಲಾ ಪೋಲಾಗಿ ಹೋಗಿ ಒಂದು ಕಡೆಯಲ್ಲಿ ಸ್ವಲ್ಪ ತಗುಲಿಕೊಂಡಿದ್ದ ಒಂದೆರಡು ಅಂಕಣದಲ್ಲಿ ಮಾತ್ರ ವಾಸವನ್ನು ಮಾಡಿಕೊಂಡು ಅನ್ನವಸ್ತ್ರಕ್ಕೆ ಮಾರ್ಗವಿಲ್ಲದೆ, ಬಹಳ ಕೃಶಳಾಗಿ ನೆಲಹತ್ತಿ ಬಿದ್ದಿದ್ದಳು. ತನ್ನ ಗಂಡನ ಸಂಗಡ ಹೋದ ಆ ವರ್ತಕನು ಮಹಾಸಂಪತ್ತಿನಿಂದ ಬಂದ ನೆಂಬುವದನ್ನೂ ತನ್ನ ಗಂಡನು ಬರಲಿಲ್ಲವೆಂಬುದನ್ನೂ ಕೇಳಿ, ತನ್ನ ಗಂಡನು ಯಾಕೆ ಬರಲಿಲ್ಲವೋ? ಏನು ಗತಿಯಾದನೋ? ಎಂಬ ಭೀತಿಯಿಂದ ಈ ವರ್ತಕನ ಮನೆಯ ಬಳಿಗೆ ಬಂದು, ಬಾಗಿಲಲ್ಲಿ ನಿಂತುಕೊಂಡು ಅಲ್ಲಿರುವವರೊಡನೆ ತಾನು ಬಂದು ಇದ್ದೇನೆಂದು ತಿಳಿಸಿರಿ ಎಂದು ಹೇಳಿ ಕಳುಹಿಸಿದಳು. ಬಾಗಿಲುಕಾಯುವ ಜನಗಳು ಹೋಗಿ ಈ ಸಂಗತಿಯನ್ನು ವರ್ತಕನಿಗೆ ಹೇಳಿದುದಕ್ಕೆ—ಅವಳು ಯಾರು? ನಮ್ಮಲ್ಲಿ ಏನು ಕೆಲಸ? ತಳ್ಳಿಬಿಡಿ ಎಂಬುದಾಗಿ ಹೇಳಿದನು. ವರ್ತಕನ ಆಳುಗಳು ಅದೇ ಪ್ರಕಾರ ಆ ಹೆಂಗಸನ್ನು ನೂಕಿಬಿಟ್ಟರು. ಆಗ ಆಕೆಯು—ಅಯ್ಯೋ, ದೇವರೇ! ಹೀಗಾಯಿತೇ? ಎಂದು ದುಃಖಿತಳಾಗಿ ಮನೆಗೆ ಹೊರಟು ಹೋಗಿ ಉಸ್ಸೆಂದು ನಿಟ್ಟುಸಿರನ್ನು ಬಿಟ್ಟು ತನ್ನ ಮನೆಯಲ್ಲಿ ಬಿದ್ದುಕೊಂಡು ಜೀವನಕ್ಕೆ ಮಾರ್ಗವಿಲ್ಲದೆ ಕಷ್ಟಪಟ್ಟುಕೊಂಡು ಇರುತ್ತಾ ಇದ್ದಳು. ಈಕೆಯು ಈ ರೀತಿಯಲ್ಲಿ ಇರುವಲ್ಲಿ ಮತ್ತೆ ಕೆಲವು ದಿವಸದ ಮೇಲೆ ಆ ಬ್ರಾಹ್ಮಣನಿಗೆ ತನ್ನ ಸ್ಥಳ ಮನೆ ಇವುಗಳನ್ನು ನೋಡಬೇಕೆಂದು ಮನಸ್ಸಾಗಿ ಈ ವಿಷಯವನ್ನು ಆ ಮಹಾರಾಜನಿಗೆ ತಿಳಿಸಿ ಹೊರಟು ತನ್ನ ಸ್ಥಳಕ್ಕೆ ಬಂದು ಶಿಥಿಲವಾಗಿರುವ ಮನೆಯಲ್ಲಿ ನೆಲಹತ್ತಿ ಬಿದ್ದಿರುವ ತನ್ನ ಹೆಂಡತಿಯನ್ನು ನೋಡಿ ವ್ಯಸನದಿಂದ—ಇಂಥಾ ವರ್ತಕನು ಇಲ್ಲಿಗೆ ಬಂದಾಗ ನಿನಗೇನೂ ಕೊಡಲಿಲ್ಲವೇ? ಎಂಬುದಾಗಿ ಕೇಳಿದುದಕ್ಕೆ ಏನೂ ಕೊಡಲಿಲ್ಲ; ಕೊಟ್ಟು ಇದ್ದರೆ ನಾನು ಇಂಥಾ ಶ್ರಮದಿಂದ ಇರುವೆನೇ? ಎಂದು ಹೇಳಿದಳು. ಇಷ್ಟರಲ್ಲಿ ಆ ಬ್ರಾಹ್ಮಣನು ಬಂದ ಸಮಾಚಾರ

ರವನ್ನು ವರ್ತಕನು ಕೇಳಿ ಬಂದು ಬಹಳ ಭಯ ಭಕ್ತಿಯಿಂದ ವಿಧೇಯನಾಗಿ ವಂದನೆಯನ್ನು ಮಾಡಿ ನಿಂತುಕೊಳ್ಳಲು ಆ ಬ್ರಾಹ್ಮಣನು—ಏನೋ, ಗೃಹಸ್ಥಾ ! ನಾನು ನಿನ್ನ ಕೈಯ್ಯಲ್ಲಿ ಕೊಟ್ಟು ಕಳುಹಿಸಿದ ಹಣವನ್ನೂ ರತ್ನವನ್ನೂ ನೀನು ನಮ್ಮ ಮನೆಗೆ ಕೊಡದೆ ಇರಬಹುದೇ ? ಎಂದು ಕೇಳಿದುದಕ್ಕೆ—ಅಯ್ಯೋ ! ನಾನು ಎಂದಿಗಾದರೂ ಅಂಥಾ ದ್ರೋಹವನ್ನು ಮಾಡುವೆನೇ ? ತಮ್ಮ ಒಡವೆಯನ್ನು ತಮಗೆ ಕೊಡುವುದಕ್ಕೆ ಅಡ್ಡಿಯುಂಟೇ ? ಎಂದು ಹೇಳಿದನು. ಆದಕ್ಕಾಬ್ರಾಹ್ಮಣನು ಈ ಸಂಗತಿಯೇನು ಎಂದು ಹೆಂಡತಿಯನ್ನು ಕೇಳಿದನು. ಆಕೆಯು—ಹಾಗೆ ಇವನು ಕೊಟ್ಟು ಇದ್ದರೆ ನಾನು ಹೀಗೆ ಯಾಕೆ ಇದ್ದೆನು. ಎಷ್ಟು ಮಾತ್ರವೂ ಕೊಡಲೂ ಇಲ್ಲ ; ನಾನು ತೆಗೆದುಕೊಳ್ಳಲೂ ಇಲ್ಲ ಎಂದು ಹೇಳಿದಳು. ಆದಕ್ಕೆ ಆ ಬ್ರಾಹ್ಮಣನು ಸಮೀಪದಲ್ಲಿದ್ದ ವರ್ತಕನನ್ನು ನೋಡಿ— ಆಕೆ ಏನು ಹೇಳುತ್ತಾಳೆ ? ಕೇಳೆಂದು ಮೂದಲಿಸಿದನು. ಆದಕ್ಕೆ ಆ ವರ್ತಕನು—ಅಯ್ಯಾ ! ನಾನು ಎಷ್ಟುಮಾತ್ರವೂ ಸುಳ್ಳು ಹೇಳುವವನಲ್ಲ. ತಾವು ಕೊಟ್ಟ ಹಣವನ್ನೂ ರತ್ನವನ್ನೂ ನಾನು ಅಮ್ಮನವರಿಗೆ ಈ ನಾಲ್ಕು ಜನಗಳ ಕೈಯ್ಯಲ್ಲಿ ಕೊಟ್ಟು ಕಳುಹಿಸಿದೆನು. ಇವರೇ ತಂದುಕೊಟ್ಟಿದ್ದಾರೆ. ಇವರನ್ನು ಕೇಳಬಹುದೆಂದು ಮೊದಲೇ ಹೇಳಿಕೊಟ್ಟು ಇದ್ದ ತನ್ನ ಸಂಬಳಗಾರರನ್ನು ತೋರಿಸಿದನು. ಅವರನ್ನು ಕೇಳುವಲ್ಲಿ—ನಾವೇ ತೆಗೆದುಕೊಂಡು ಬಂದು ಕೊಟ್ಟೆವು ಎಂದು ಹೇಳಿದರು. ಅನಂತರ ಈ ವರ್ತಕನು ಹೇಳಿದುದೇನಂದರೆ—ಅಮ್ಮನವರು ಎಲ್ಲವನ್ನೂ ತವರುಮನೆಗೆ ಸಾಗಿಸಿಬಿಟ್ಟು ನನ್ನನ್ನು ಈ ಮೇರೆಗೆ ದೌರ್ಜನ್ಯಕ್ಕೆ ಗುರಿಮಾಡುತ್ತಾರೆ. ನಾನು ಎಂದಿಗಾದರೂ ತಮಗೆ ದ್ರೋಹವನ್ನು ಮಾಡುತ್ತೇನೆಯೇ ? ಬಾಲ್ಯಾರಭ್ಯ ನನ್ನ ನಡತೆ ತಮಗೆ ತಿಳಿದೇ ಇದೆ ಎಂದು ಹೇಳಿದನು. ಈ ಬ್ರಾಹ್ಮಣನು—ವರ್ತಕನು ಬಹಳ ದಿವಸದಿಂದ ತನಗೆ ಸ್ನೇಹಿತನು. ಇವನು ಎಂದಿಗೂ ಇಂಥಾ ವಂಚನೆಯನ್ನು ನಡೆಸತಕ್ಕವನಲ್ಲ. ಇದು ಹೆಂಗಸಿನ ಮೋಸಗತಿಯೇ ಸರಿ ಎಂದು ಬಹಳ ಕೋಪದಿಂದ— ಈ ವಿವಾದವು ಇಲ್ಲಿ ಬಗೆಹರಿಯುವುದಿಲ್ಲವೆಂದು ಯೋಚಿಸಿ ದೇಶದಲ್ಲೆಲ್ಲಾ ಪ್ರಸಿದ್ಧನಾಗಿ ಅನೇಕ ವಿವಾದಗಳನ್ನು ತೀರಿಸುವ ನ್ಯಾಯಾಧಿಪತಿಯ ಬಳಿಗೆ ವರ್ತಕನನ್ನೂ ಅವನ ಕಡೆಯ ಸಾಕ್ಷಿಗಳಾಗಿ ಇರುವ ಆಳುಗಳನ್ನೂ ಸಂಗಡ ಕರೆದುಕೊಂಡು ಇನ್ನೂ ಬೇಕಾದ ಕೆಲವು ಸ್ನೇಹಿತರನ್ನೂ ತನ್ನೊಡನೆ ಪ್ರಯಾಣಮಾಡಿಸಿಕೊಂಡು ಕೆಲವು ಕೆಲವರು ಪಾಲಕಿಯ ಮೇಲೆಯೂ ಕುದುರೆಗಳ ಮೇಲೆಯೂ ರಥಗಳ ಮೇಲೆಯೂ ಕೂತುಕೊಂಡು ಬಹಳ ಕೃಶಳಾಗಿ ಇರುವ ಹೆಂಡತಿಯನ್ನು ತನ್ನ ಮುಂದೆ ತಳ್ಳಿಸಿಕೊಂಡು ಆ ನ್ಯಾಯಾಧಿಪತಿಯ ಬಳಿಗೆ ಹೋಗಿ ತಮ್ಮ ವೃತ್ತಾಂತವನ್ನೆಲ್ಲ ತಿಳಿಸಿದನು. ಆಗ ಇಂಥಾ ಅನೇಕ ವಿವಾದಗಳು ಬಂದಿದ್ದುದರಿಂದ ಅವುಗಳ ಪರಿಶೀಲನೆಯಲ್ಲಿಯೇ ಇರುವ ನ್ಯಾಯಾಧಿಪತಿಗೆ ಇವನ ವಿವಾದವನ್ನು ವಿಚಾರಿಸುವುದಕ್ಕೆ ಸಮಯವಿಲ್ಲದಿರಲು ಅಲ್ಲಿ ಆ ಬ್ರಾಹ್ಮಣನು ತಮ್ಮ ನ್ಯಾಯವನ್ನು ಜಾಗ್ರತೆಯಾಗಿ ಬಗೆಹರಿಸಿ ಕೊಡಬೇಕೆಂದು ಆ ನ್ಯಾಯಾಧಿಪತಿಗೆ ಬಹಳವಾಗಿ ಹೇಳಿಕೊಂಡುದರಿಂದ ಆತನು ಸಮ್ಮತಿಸಿ ಇದನ್ನೆಲ್ಲಾ ವಿಚಾರಿಸಿ ನಾಲ್ಕುಮಂದಿ ಸಾಕ್ಷಿಗಳು

ಎಂದಿಗೂ ಸುಳ್ಳು ಹೇಳಲಾರರೆಂದು ಎಣಿಸಿ ವರ್ತಕನು ಹಣವನ್ನೂ ರತ್ನವನ್ನೂ ಹೆಂಗ ಸಿಗೆ ಕೊಟ್ಟಿರುವುದು ನಿಶ್ಚಯವೆಂದು ತೀರ್ಮಾಮಾಡಿದನು. ತರುವಾಯ ಬ್ರಾಹ್ಮಣನಿಗೆ ಮೊದಲೇ ಹೆಂಡತಿಯ ಮೇಲೆ ಸಂಶಯವಿದ್ದಿತು ಅದಕ್ಕೆ ಅನುಸಾರವಾಗಿ ಈ ನ್ಯಾಯಾ ಧಿಪತಿಯು ಮಾಡಿದ ತೀರ್ಪಿನಿಂದ ಅಕೆಯ ಮೇಲೆ ಮತ್ತಷ್ಟು ಆಗ್ರಹ ಉಂಟಾಗಿ ತಾವೆಲ್ಲರೂ ವಾಹನಗಳ ಮೇಲೆ ಕುಳಿತುಕೊಂಡು ಆ ಹೆಂಗಸನ್ನು ಆಳಿನ ಕೈಯ್ಯಿಂದ ಎಳೆಸಿಕೊಂಡು ಊರಿಗೆ ಹೊರಟು ಬರುತ್ತಾ ಇರುವಲ್ಲಿ ಮಧ್ಯಮಾರ್ಗದಲ್ಲಿರುವ ಒಂದು ಮಹತ್ತಾದ ಅರಣ್ಯದಲ್ಲಿ ಇನ್ನೂರು ಮುನ್ನೂರು ಜನ ದನಗಳನ್ನು ಕಾಯುವ ಹುಡು ಗರು ದನಗಳನ್ನು ಬಿಟ್ಟುಕೊಂಡು ಅವರಲ್ಲಿ ರಾಮಣ್ಣನೆಂಬ ಒಬ್ಬನು ಅರಸನೆಂತಲೂ ಕೆಲವರು ಮಂತ್ರಿಪ್ರಧಾನಿಗಳೆಂತಲೂ ಕೆಲವರು ಸೇನಾಪತಿಗಳೆಂತಲೂ ಇನ್ನು ಕೆಲವರು ಕಾಲ್ಬಲಗಳೆಂತಲೂ ಈ ರೀತಿಯಾಗಿ ವಿಭಾಗಿಸಿ ವಿನೋದವಾಗಿ ಆಟವಾಡಿಕೊಂಡು ಇದ್ದರು. ಆ ಅರಸಾಗಿ ಇರುವ ಹುಡುಗನು ಆ ಮಾರ್ಗವಾಗಿ ಬರುವ ಈ ಬ್ರಾಹ್ಮಣ ಮುಂತಾದವರನ್ನೂ ರೋದನವನ್ನು ಮಾಡಿಕೊಂಡು ಹೋಗುವ ಹೆಂಗುಸನ್ನೂ ನೋಡಿ ಅವರೆಲ್ಲರನ್ನೂ ತಳ್ಳಿಕೊಂಡು ಬನ್ನಿರಿ ಎಂಬದಾಗಿ ತನ್ನ ಕಡೆಯ ಪರಿವಾರಕ್ಕೆ ಹೇಳಲು ಅದೇ ಪ್ರಕಾರ ಅವರು ಹೋಗಿ ಅವರನ್ನು ಹಿಡಿದು ತಂದು ನಿಲ್ಲಿಸಿದರು. ಅರಸನಾಗಿದ್ದ ಹುಡುಗನು ಆ ಜನಗಳನ್ನು ನೋಡಿ—ನೀವು ಯಾರು ? ಎಲ್ಲಿಂದ ಬಂದಿರಿ ? ಎಲ್ಲಿಗೆ ಹೋಗುತ್ತೀರಿ ? ನಿಮ್ಮ ಸಂಗತಿ ಏನು ? ಎಂದು ಕೇಳಿದನು. ಅದಕ್ಕಾಬ್ರಾಹ್ಮಣನು—ನೀವು ದನಗಳನ್ನು ಕಾಯುವ ಹುಡುಗರು ; ನಿಮಗೆ ನಮ್ಮ ಗೊಡವೆ ಏಕೆ ? ನೀವು ಈ ಸಂಗತಿಯನ್ನು ಕೇಳುವುದರಿಂದ ಪ್ರಯೋಜನವೇನು ? ನಾವು ಹೇಳಿ ಫಲವೇನು ? ಎಂದು ಹೇಳಿದನು. ಆಹಾ ! ಹಾಗೋ ? ನಾವು ದನಗಳನ್ನು ಕಾಯುವ ಹುಡುಗರೇ ಆಗಲಿ ! ಎಲಾ ! ಯಾರೋ ? ನೀವೆಲ್ಲರೂ ಜನಕ್ಕೆ ಒಂದೊಂದು ದೊಣ್ಣೆಯನ್ನು ತೆಗೆ ದುಕೊಂಡು ಬನ್ನಿರಿ ಎಂದು ಆಜ್ಞೆಯನ್ನು ಮಾಡಿದನು. ಅದಕ್ಕೆ ಅವರೆಲ್ಲರೂ ದೊಣ್ಣೆ ಗಳನ್ನು ತೆಗೆದುಕೊಂಡು ಬಂದು—ಸ್ವಾಮಿ ! ಬುದ್ಧೀ ! ಎಂದು ಎದುರಲ್ಲಿ ನಿಲ್ಲಲು ಇವರೆಲ್ಲರನ್ನೂ ಸಾಲಿಗೆ ನಿಲ್ಲಿಸಿ ತಲೆಗಳನ್ನು ಹೊಡೆದುಬಿಡಿರಿ ಎಂದು ಆಪ್ಪಣೆಯನ್ನು ಕೊಟ್ಟನು. ಆಗ ಅವರು ತಮ್ಮ ಕಡೆಯ ಜನರೆಲ್ಲರೂ ಒಟ್ಟು ನಲ್ವತ್ತು ಐವತ್ತು ಮಂದಿ ಮಾತ್ರ ಇರುವರು. ಈ ದನಗಳನ್ನು ಕಾಯುವ ಹುಡುಗರಾದರೋ ಇನ್ನೂರು ಮುನ್ನೂರು ಜನರು. ತಾವು ಅನ್ಯಾಯವಾಗಿ ಸಾಯುವ ಹೊತ್ತು ಬಂದಿತಲ್ಲಾ ! ಎಂದು ಬಹಳ ಭಯಪಟ್ಟು—ಅಪ್ಪಾ ! ನಮ್ಮ ವೃತ್ತಾಂತವನ್ನೆಲ್ಲಾ ಹೇಳುತ್ತೇವೆ ; ನಮ್ಮನ್ನು ಪ್ರಾಣದಿಂದ ಬಿಟ್ಟರೆ ಸಾಕು ಎಂದು ಆದಿಯಿಂದ ನಡೆದ ಸಂಗತಿಗಳನ್ನು ಸರಿಯಾಗಿ ಹೇಳಿದರು. ಆ ಅರಸೂ ಮಂತ್ರಿಪ್ರಧಾನಿಗಳೂ ಆ ಸಂಗತಿಗಳನ್ನು ಚೆನ್ನಾಗಿ ಕೇಳಿ ಅವರೆಲ್ಲರನ್ನೂ ಬೇರೆ ಬೇರೆ ದೂರವಾಗಿ ಒಂದೊಂದು ಮರದ ಬುಡದಲ್ಲಿ ಒಬ್ಬೊ ಬ್ಬರನ್ನು ನಿಲ್ಲಿಸಿ ಒಂದು ತೆಂಗಿನಕಾಯಷ್ಟು ಎರೆಯ ಮಣ್ಣನ್ನು ತರಿಸಿ ಅದನ್ನು ತನ್ನಲ್ಲಿ ಮುಚ್ಚಿಟ್ಟುಕೊಂಡು ಮೊದಲು ಆ ಸುಶೀಲನೆಂಬ ಬ್ರಾಹ್ಮಣನನ್ನು ಕರಿಸಿ—ನೀನು ಕೊಟ್ಟ ರತ್ನವು ಎಷ್ಟುಗಾತ್ರವಿದ್ದಿತು ? ಈ ಮಣ್ಣಿನಿಂದ ಉಂಡೆಯನ್ನು ಮಾಡಿ

ಹಾಕು ಎಂದು ಸ್ವಲ್ಪ ಮಣ್ಣನ್ನು ಅವನ ಮುಂದೆ ಹಾಕಿದನು. ಅವನು ಸ್ವಲ್ಪವೂ ವ್ಯತ್ಯಾಸವಿಲ್ಲದಂತೆ ಆ ರತ್ನದ ಗಾತ್ರಕ್ಕೆ ಸರಿಯಾಗಿ ಉಂಡೆಯನ್ನು ಮಾಡಿ ಹಾಕಿದನು. ಅನಂತರ ಅವನನ್ನು ದೂರವಾಗಿ ಕಳುಹಿಸಿಬಿಟ್ಟು ವರ್ತಕನನ್ನು ಕರಿಸಿ ಅವನನ್ನು ಕುರಿತು—ಉಂಡೆಯನ್ನು ಮಾಡಿ ಹಾಕು ಎಂದು ಹೇಳಿದುದಕ್ಕೆ ಅವನು ಆ ರತ್ನವನ್ನು ನೋಡಿದ್ದವನಾದುದರಿಂದ ಅವನೂ ಅದೇ ಪ್ರಮಾಣವಾಗಿ ಮಾಡಿ ಹಾಕಿದನು. ಇವನನ್ನೂ ದೂರವಾಗಿ ಕಳುಹಿಸಿ ಆ ಸಾಕ್ಷಿಗಳಲ್ಲಿ ಮುಂದಾಗಿ ಒಬ್ಬನನ್ನು ಕರಿಸಿ—ನೀನು ನೋಡಿದ ರತ್ನವು ಬಹಳ ಬೆಲೆಯುಳ್ಳದು ಎಂದು ಹೇಳುವೆಯಲ್ಲಾ ಅದು ಎಷ್ಟು ಗಾತ್ರವಿದ್ದಿತು ಎಂದು ಕೇಳಿ ಗಾಬರಿ ಮಾಡಿದುದಕ್ಕೆ ಅವನು ಒಂದು ದೊಡ್ಡ ನಿಂಬೆಯ ಕಾಯಿಯ ಗಾತ್ರ ಉಂಡೆಯನ್ನು ಮಾಡಿ ಇಟ್ಟನು. ಆತರು ವಾಯ ಅವನನ್ನು ಬಹಳ ದೂರವಾಗಿ ಕಳುಹಿಸಿಬಿಟ್ಟು ನಿಂತ ಮೂರು ಜನಗಳನ್ನು ಕರಿಸಿ ಬೇರೆ ಬೇರೆ ಯುಕ್ತಿ ಚಮತ್ಕಾರಗಳಿಂದ ಕೇಳುವಾಗ್ಗೆ ಒಬ್ಬೊಬ್ಬರು ಒಂದೊಂದು ವಿಧವಾಗಿ ಹೇಳಿ ಬಹಳ ಹೆಚ್ಚುಕಡಮೆಯಾಗಿ ಉಂಡೆಗಳನ್ನು ಮಾಡಿ ಹಾಕಿದರು. ಆ ಮೇಲೆ ಅವರೆಲ್ಲರನ್ನೂ ಕಳುಹಿಸಿಬಿಟ್ಟು ನೋಡಲು ಆ ಉಂಡೆಗಳೊಳಗೆ ಬ್ರಾಹ್ಮಣ ವರ್ತಕ ಇವರಿಬ್ಬರೂ ಮಾಡಿದ ಉಂಡೆಗಳೆರಡೂ ಒಂದೇ ಸಮನಾಗಿಯೂ ಸಾಕ್ಷಿಗಳಲ್ಲಿ ಒಬ್ಬ ಮಾಡಿದುದು ದೊಡ್ಡದಾಗಿಯೂ ಇನ್ನೊಬ್ಬ ಮಾಡಿದುದು ಚಿಕ್ಕದಾಗಿಯೂ ಇರುವುದನ್ನು ನೋಡಿ ತನ್ನ ಮನಸ್ಸಿನಲ್ಲಿ ಆಲೋಚನೆ ಮಾಡಿ ಸಾಕ್ಷಿಗಳು ಆ ರತ್ನವನ್ನು ನೋಡಿದ್ದುದೂ ಕೊಟ್ಟಿದ್ದುದೂ ಸುಳ್ಳು ಎಂಬದಾಗಿ ನಿರ್ಣಯಿಸಿ ಸಾಕ್ಷಿಗಳಲ್ಲಿ ಒಬ್ಬನನ್ನು ಕರಿಸಿ ಅವನು ಹತ್ತಿರಕ್ಕೆ ಬಂದ ಮಾತ್ರದಲ್ಲೇ ಸೇವಕರನ್ನು ನೋಡಿ—ಎಲಾ! ಅವನಾರೋ? ಆ ದೊಣ್ಣೆಯಿಂದ ಇವನ ತಲೆಯನ್ನು ಒಡೆದುಹಾಕು ಎಂದು ಭಯವನ್ನು ಹುಟ್ಟಿಸಿ—ಬ್ರಾಹ್ಮಣ ವರ್ತಕ ಇವರು ಮಾಡಿದ ಉಂಡೆಗಳು ಲೇಶವ್ಯತ್ಯಾಸವಿಲ್ಲದೆ ಎರಡೂ ಒಂದೇ ಸಮನಾಗಿ ಇವೆ. ನೀವು ಮಾಡಿದ ಉಂಡೆಗಳು ಒಂದಕ್ಕೊಂದು ಭೇದವಾಗಿ ಇವೆ. ಇದರ ನಿಜಸ್ಥಿತಿಯನ್ನು ವಂಚಿಸದೆ ಹೇಳು ಎನಲು ಅವನು ಭಯದಿಂದ—ನಾನು ಹೇಳಿದುದೂ ನನ್ನ ಜೊತೆಯ ಸಾಕ್ಷಿಗಳು ಹೇಳಿದುದೂ ಸುಳ್ಳು. ವರ್ತಕನಲ್ಲಿ ನಾನು ಸಂಬಳಕ್ಕೆ ಇರುವುದರಿಂದ ಅವನ ಹೇಳಿಕೆಯ ಮೇಲೆ ನಾನು ಸುಳ್ಳು ನುಡಿದಿರುವುದುಂಟೆಂದು ಹೇಳಲು ಕಡಮೆ ಮೂರು ಜನಗಳನ್ನೂ ಕರಿಸಿ ಪೂರಾ ಭಯಪಡಿಸಿ ಕೇಳುವಾಗ್ಗೆ ಅವರೂ ಅವನಂತೆಯೇ ಹೇಳಿಬಿಟ್ಟರು. ಆ ಮೇಲೆ ವರ್ತಕನನ್ನು ಕರಿಸಿ ಮಣ್ಣಿನ ಉಂಡೆಗಳನ್ನೆಲ್ಲಾ ತೋರಿಸಿ ಆ ವಿವರವನ್ನೆಲ್ಲಾ ಹೇಳಿ ಸಾಕ್ಷಿಗಳನ್ನು ಸಮಕ್ಷದಲ್ಲಿ ನಿಲ್ಲಿಸಿ ಹೇಳಿಸಿದುದರ ಮೇಲೆ ಅವನು ಒಪ್ಪಿಕೊಂಡು ತನ್ನ ಟೊಂಕದಲ್ಲಿ ಇದ್ದ ರತ್ನವನ್ನು ಬಿಚ್ಚಿ ಮುಂದಿಟ್ಟನು. ಅನಂತರ ಬ್ರಾಹ್ಮಣನನ್ನು ಕರಿಸಿಕೊಂಡು ಅವರೆಲ್ಲರ ಎದುರಿಗೆ ಈ ಬ್ರಾಹ್ಮಣವರ್ತಕರಿಬ್ಬರು ಮಾಡಿರುವ ಉಂಡೆಗಳಿಗೆ ಸರಿಯಾಗಿರುವ ರತ್ನವನ್ನು ತೋರಿಸಿ, ವರ್ತಕನ ನೇಲೆ ತಪ್ಪು ಹೊರಿಸಿ, ಬ್ರಾಹ್ಮಣನ ಹೆಂಡತಿಯನ್ನು ಕರಿಸಿ ಬ್ರಾಹ್ಮಣನ ವಶವನ್ನು ಮಾಡಿದನು. ಇವರೆಲ್ಲರೂ ಬಹಳ

ಸಂತೋಷಪಟ್ಟವರಾಗಿ ಈ ದನಗಳನ್ನು ಕಾಯುವ ಹುಡುಗರ ಬುದ್ಧಿಗೆ ಆಶ್ಚರ್ಯ ಪಟ್ಟುಕೊಂಡು ಹೋದರು. ಅಂದಿನಿಂದ ಆ ಹುಡುಗನು ಮರ್ಯಾದೆ ರಾಮಣ್ಣನೆಂಬ ಹೆಸರಿನಿಂದ ಪ್ರಸಿದ್ಧನಾದನು.

---

44. KING SUDARSHANA AND HIS SONS

೪೪. ಸುದರ್ಶನನೆಂಬ ರಾಜನೂ ಆತನ ಕುಮಾರರೂ.

ಪಾಟಲೀಪುರವೆಂಬ ಪಟ್ಟಣದಲ್ಲಿ ಸುದರ್ಶನನೆಂಬ ರಾಯನು ಅಮರಶಕ್ತಿ ಎಂಬ ಪ್ರಧಾನನೊಡನೆ ರಾಜ್ಯಪರಿಪಾಲನೆಯನ್ನು ಮಾಡಿಕೊಂಡು ಇರುತ್ತಿದ್ದನು ಬಂಧು ಜನರಲ್ಲಿ ದಾಕ್ಷಿಣ್ಯವೂ ಸೇವಕಜನರಲ್ಲಿ ದಯೆಯೂ ಸ್ತ್ರೀಜನರಲ್ಲಿ ಧೂರ್ತತ್ವವೂ ದುರ್ಜನರಲ್ಲಿ ಕೋಪವೂ ಸಜ್ಜನರಲ್ಲಿ ಪ್ರೀತಿಯೂ ನೃಪಜನರಲ್ಲಿ ನಯವೂ ಗುರುಜನಗಳಲ್ಲಿ ಕ್ಷಮೆಯೂ ವಿದ್ವಾಂಸರಲ್ಲಿ ತ್ಯಾಗವೂ ಶತ್ರುಗಳಲ್ಲಿ ಪರಾಕ್ರಮವೂ ಇವುಗಳು ಯಾವ ಪುರುಷನಲ್ಲಿ ಇವೆಯೋ ಅವನೇ ಸಕಲ ಲೋಕವ್ಯಾಪಾರಗಳನ್ನೂ ತಿಳಿದು ಜನರನ್ನು ಪರಿಪಾಲಿಸುವನು. ಮತ್ತು ಯಾವ ಅರಸಿಗಾದರೂ ಯಾವ ಮನುಷ್ಯನಿಗಾದರೂ ಮೊದಲು ಧರ್ಮದಲ್ಲಿ ಚಿಂತೆ ಇರಬೇಕು. ಅರಸನು ತನ್ನ ಆಪ್ತಪ್ರಧಾನರ ಸ್ವಭಾವ ಗುಣಗಳನ್ನು ತಿಳಿಯಬೇಕು. ಸಮಯಕ್ಕೆ ತಕ್ಕ ಹಾಗೆ ಕೋಪವನ್ನೂ ದಯೆಯನ್ನೂ ತೋರಿಸಬೇಕು, ಆತ್ಮಸಂರಕ್ಷಣೆಯಲ್ಲಿ ಅತಿಜಾಗರೂಕನಾಗಿರಬೇಕು. ರಣಾಗ್ರದಲ್ಲಿ ಈ ಶರೀರವು ತನ್ನದಲ್ಲವೆಂಬ ಧೈರ್ಯವುಳ್ಳವನಾಗಿರಬೇಕು. ಇಂಥಾ ಗುಣಾತಿಶಯಗಳುಳ್ಳವನೇ ರಾಜಶ್ರೇಷ್ಠನೆನಿಸಿಕೊಳ್ಳುವನು. ಮತ್ತು ಸತ್ಪಾತ್ರವನ್ನು ತಿಳಿದು ದಾನವನ್ನು ಮಾಡಬೇಕು. ಪರರ ಗುಣದೋಷಗಳನ್ನು ತಿಳಿದು, ರಕ್ಷಿಸುವವನಾಗಿರಬೇಕು. ಸೇವಕರೇ ಮೊದಲಾದ ಸಮಸ್ತ ಪ್ರಾಣಿಗಳನ್ನೂ ತನ್ನ ಹಾಗೆಯೇ ನೋಡಿಕೊಳ್ಳಬೇಕು. ಪರರ ಮನೋಭಾವಗಳನ್ನು ತಿಳಿಯಬೇಕು ರಣದಲ್ಲಿ ವೈರಿಗಳನ್ನು ಜಯಿಸಬೇಕು.

ಈ ಸುದರ್ಶನರಾಜನು ಹೀಗಿರುವ ನೀತಿಶಾಸ್ತ್ರೋಕ್ತವಾದ ಸಮಸ್ತರಾಜಗುಣ ಸಂಪನ್ನನಾಗಿ ತಾರತಮ್ಯವನ್ನು ತಿಳಿದು ರಾಜ್ಯವನ್ನಾಳುತ್ತಾ, ಬಹುಕಾಲ ಮಕ್ಕಳಿಲ್ಲದೆ ಕಡೆಗೆ ದೈವಾನುಗ್ರಹದಿಂದ ವಸುಶಕ್ತಿ ರುದ್ರಶಕ್ತಿ ಮೃದುಶಕ್ತಿ ಎಂಬ ಹೆಸರುಳ್ಳ ಮೂರುಮಂದಿ ಕುಮಾರರನ್ನು ಪಡೆದು ಸುಖದಿಂದಿರಲು ಆ ಮೂರು ಮಂದಿಯೂ ತಾಯಿತಂದೆಗಳ ಮಾತನ್ನು ಕೇಳದೆ ದುರ್ಜನರಾಗಿ ಸಮಸ್ತರಿಗೂ ಉಪದ್ರವಗಳನ್ನು ಮಾಡುತ್ತಾ ಇದ್ದರು ಅವರ ದುರ್ಗುಣಗಳು ಯಾವುವಂದರೆ—ಜೂಜಾಡುವುದು ಸುರಾಪಾನ ಮಾಡುವುದು ಚಾರ್ವಾಕರ ಸಂಗಡ ಸ್ನೇಹವನ್ನು ಮಾಡುವುದು ಬೇಟೆಯಾಡುವುದು ವ್ಯಭಿಚಾರ ಮಾಡುವುದು ಕಳ್ಳತನ ಮಾಡುವುದು ನೀಚರ ಸೇವೆಯನ್ನು ಮಾಡುವುದು ಇವು ಏಳೂ ಸಪ್ತವ್ಯಸನಗಳೆನಿಸಿಕೊಳ್ಳುವುವು. ಆ ಕುಮಾರರು ಇಂಥಾ ದುರ್ಗುಣಗಳಲ್ಲಿಯೇ ನಿರಂತರವೂ ಆಸಕ್ತರಾಗಿದ್ದರು.

ಮತ್ತು ಯೌವನವು ಧನಸಂಪತ್ತಿಯು ಪ್ರಭುತ್ವವು ಅವಿವೇಕವೂ ಈ ನಾಲ್ಕರಲ್ಲಿ ಒಂದೊಂದೇ ಅನರ್ಥಕ್ಕೆ ಕಾರಣವಾದುದು. ಆದರೆ ನಾಲ್ಕೂ ಒಬ್ಬನಲ್ಲಿಯೇ ಇದ್ದರೆ ಕೇಳತಕ್ಕುದೇನು ? ಎಂದು ನೀತಿಯುಂಟು. ಆ ಕುಮಾರರಲ್ಲಿ ಈ ನಾಲ್ಕು ಗುಣಗಳೂ ಇದ್ದುದರಿಂದ ಹೀಗೆ ಮದಾಂಧರಾಗಿ ದುರ್ಮಾರ್ಗದಲ್ಲಿ ನಡೆಯುತ್ತಿರುವ ತನ್ನ ಕುಮಾರರನ್ನು ನೋಡಿ ರಾಯನು ತನ್ನ ಮನಸ್ಸಿನಲ್ಲಿ ನೊಂದುಕೊಂಡು ಪ್ರಧಾನನೊಡನೆ ಹೀಗೆಂದನು—ಎಲೈ ಮಂತ್ರಿಯೇ ! ವಿದ್ಯಾಂಸನಲ್ಲದೆಯೂ ಧರ್ಮಿಷ್ಠನಲ್ಲದೆಯೂ ಇರುವ ಮಗನಿಂದಲೂ ಈಯದೆಯೂ ಹಾಲನ್ನು ಕರೆಯದೆಯೂ ಇರುವ ಹಸುವಿನಿಂದಲೂ ಏನು ಪ್ರಯೋಜನವು ? ಮತ್ತು ವಿದ್ಯಾಬುದ್ಧಿಸೌಜನ್ಯಮರ್ಯಾದೆಗಳಿಲ್ಲದ ಕುಮಾರನು ಹುಟ್ಟುವುದಕ್ಕಿಂತ ಗರ್ಭವು ಇಳಿದು ಹೋಗುವುದೇ ಮೇಲು. ಹುಟ್ಟಿದರೆ ಆ ಶಿಶುವು ಆ ಕೂಡಲೇ ಮೃತವಾಗುವುದೇ ಮೇಲು. ಅಥವಾ ಹೆಣ್ಣಾಗಿ ಹುಟ್ಟುವುದು ಲೇಸು. ಅಂಥ ಮಕ್ಕಳನ್ನು ಹೆತ್ತು ಮೈನೋವು ಮಾಡಿಕೊಳ್ಳುವುದಕ್ಕಿಂತ ತಾಯಿಯು ಬಂಜೆಯಾಗಿರುವುದೇ ಒಳ್ಳೆಯದು, ಅಥವಾ ಅದನ್ನು ಮತ್ತೊಬ್ಬರಿಗೆ ಸಾಕುವುದಕ್ಕಾಗಿ ಕೊಟ್ಟುಬಿಡುವುದೇ ಉತ್ತಮವು. ಯಾಕಂದರೆ ಅರಣ್ಯದಲ್ಲಿ ದಟ್ಟವಾಗಿ ಬೆಳೆದು ಇರುವ ಬಿದಿರುಗಳು ಒಂದಕ್ಕೊಂದು ಉಜ್ಜಲಾಗಿ ಆ ಕಾವಿನಿಂದ ಅಗ್ನಿಯು ಹುಟ್ಟಿ ಅದು ಆ ವನವೆಲ್ಲವನ್ನೂ ದಹಿಸುವ ರೀತಿಯಲ್ಲಿ ದುರ್ಮಾರ್ಗಿಗಳಾದ ಕುಮಾರರು ಹುಟ್ಟಿ ದುಷ್ಕುಲಹದಿಂದ ಎರಡು ಕುಲವನ್ನೂ ಕೆಡಿಸುವರು ಎಂದು ಅನೇಕ ಪ್ರಕಾರದಿಂದ ಹೇಳಿಕೊಂಡು ರಾಯನು ಬೆಸುಸುಯ್ದನು.

ಬುದ್ಧಿಯುಳ್ಳವನಾಗಿರಬೇಕು ; ಸ್ಥಿರವಾಗಿ ಮಾತಾಡಬೇಕು ; ಗುಣಾವಗುಣ ಭಾವಗಳನ್ನು ತಿಳಿದಿರಬೇಕು ; ಐಶ್ವರ್ಯವಂತನಾಗಿರಬೇಕು ; ಕೀರ್ತಿವಂತನಾಗಬೇಕು ; ಪರರ ಇಂಗಿತವನ್ನು ತಿಳಿಯುವವನಾಗಿರಬೇಕು ; ಸಕಲ ಜನರಿಗೂ ಸಮ್ಮತನಾಗಿರಬೇಕು ; ಪಂಡಿತನಾಗಿರಬೇಕು ; ಸಾತ್ವಿಕನಾಗಿರಬೇಕು ; ನಾನಾ ಭಾಷೆಗಳಲ್ಲಿಯೂ ನವರಸಾಲಂಕಾರಯುಕ್ತವಾಗಿ ಕವಿತ್ವವನ್ನು ಹೇಳುವ ಪ್ರೌಢಿಮೆಯುಳ್ಳವನಾಗಿರಬೇಕು ; ರಸಜ್ಞನಾಗಬೇಕು ಎಂಬ ನೀತಿಶಾಸ್ತ್ರೋಕ್ತಮಾದ ಸಕಲ ಮಂತ್ರಿಗುಣಯುಕ್ತನಾಗಿದ್ದ ಆ ಪ್ರಧಾನನು ರಾಯನನ್ನು ಕುರಿತು—ಎಲೈ ರಾಯಾ ! ಸಕಲ ಗುಣಸಂಪನ್ನನಾದ ಒಬ್ಬನೇ ಕುಮಾರನು ಸಾಕು. ದುರ್ಮಾರ್ಗಿಗಳಾದ ಕುಮಾರರು ನೂರುಮಂದಿ ಇದ್ದರೂ ಏನು ಪ್ರಯೋಜನ ? ಹೇಗೆಂದರೆ ಒಬ್ಬ ಚಂದ್ರನು ಉದಯವಾದರೆ ಪಂಚಾಶತ್ಕೋಟಿಯೋಜನವಿಸ್ತಾರವಾದ ಈ ಭೂಮಂಡಲವೆಲ್ಲವೂ ಪ್ರಕಾಶಮಾನವಾಗಿ ಇರುವುದು ಆ ಒಬ್ಬ ಚಂದ್ರನು ಇಲ್ಲದೆ ನಕ್ಷತ್ರಗಳು ಎಷ್ಟು ಇದ್ದಾಗ್ಗೂ ಏನು ಪ್ರಯೋಜನವು ? ಮತ್ತು ಪ್ರಿಯಳಾದ ಹೆಂಡತಿ ದೊರಕುವುದೂ ವಿನಯವಂತರಾದ ಕುಮಾರರು ಹುಟ್ಟುವುದೂ ಸೌಜನ್ಯವುಳ್ಳ ಅಣ್ಣತಮ್ಮಂದಿರು ಇರುವುದೂ ಮರ್ಯಾದೆಯುಳ್ಳ ಬಂಧುಗಳು ಇರುವುದೂ ಜಾಣನಾದ ಸ್ನೇಹಿತನು ದೊರಕುವುದೂ ಧರ್ಮಗುಣ ಉಂಟಾಗುವುದೂ ಇವೆಲ್ಲಾ ಪೂರ್ವಜನ್ಮದ ಪುಣ್ಯದ ಫಲಗಳು.

ಮತ್ತು ಸಾಲವನ್ನು ಮಾಡಿದ ತಂದೆಯೂ ಹಾದರವನ್ನು ಮಾಡುವ ತಾಯಿಯೂ ಸೌಂದರ್ಯವಂತಳಾದ ಹೆಂಡತಿಯೂ ಮೂರ್ಖನಾದ ಮಗನೂ ಪರಮಶತ್ರುಗಳೆನ್ನಿಸಿಕೊಳ್ಳುವರು ಎಂದು ನೀತಿ ಇರುವುದರಿಂದ ಈ ಕುಮಾರರು ನಿನಗೆ ಶತ್ರುಗಳೇ ಸರಿ ಎಂದು ಹೇಳಿ ದೀರ್ಘಾಲೋಚನೆಯನ್ನು ಮಾಡಿ—ಎಲೈ ರಾಯನೇ! ನಿನ್ನ ಮಕ್ಕಳನ್ನು ದೊಡ್ಡ ವಿದ್ವಾಂಸರಲ್ಲಿ ಸೇವೆಗೆ ನಿಲ್ಲಿಸಿ ವಿದ್ಯಾಭ್ಯಾಸವನ್ನು ಮಾಡಿಸಿದರೆ ಅವರ ಅನುಗ್ರಹಬಲದಿಂದ ಬುದ್ಧಿವಂತರಾದಾರು ಎನಲು ಆ ರಾಯನು ಪ್ರಧಾನಿಯ ಮಾತು ನಿಶ್ಚಯವೆಂದೆಣಿಸಿ ತನ್ನ ದೇಶದಲ್ಲಿ ಇರುವ ವಿದ್ವಾಂಸರೆಲ್ಲರನ್ನೂ ಕರಿಸಿ ಅವರಿಗೆ ವಂದನಾದ್ಯುಪಚಾರಗಳನ್ನು ಮಾಡಿ ಉಚಿತಾಸನಗಳಲ್ಲಿ ಕುಳ್ಳಿರಿಸಿ ತಾನು ಬದ್ಧಾಂಜಲಿಯಾಗಿ ನಿಂತು—ವಿದ್ಯೆಯೆಂಬ ಮಹದೈಶ್ವರ್ಯಸಂಪನ್ನರೂ ಪರಮಶ್ರೇಷ್ಠರೂ ಆಗಿರುವ ದೈವಜ್ಞಮೂರ್ತಿಗಳಿರಾ! ನನ್ನ ಕುಮಾರರನ್ನು ಬುದ್ಧಿವಂತರನ್ನಾಗ ಮಾಡಿರಯ್ಯಾ! ಅನ್ನಲಾಗಿ ಆ ವಿದ್ವಾಂಸರೆಲ್ಲರೂ ಈ ಕುಮಾರರ ಲಕ್ಷಣಗಳನ್ನು ನೋಡಿದವರೂ ಕೇಳಿದವರೂ ಆದಕಾರಣ ಏಕಮುಖವಾಗಿ ರಾಯನೊಡನೆ ಹೀಗೆಂದರು—ಎಲೈ ರಾಯನೇ! ನಿನ್ನ ಕುಮಾರರು ಅತಿಮೂರ್ಖರು; ಮಹಾ ದುಷ್ಟರು; ದುರಾಚಾರಿಗಳು; ಲೋಕದಲ್ಲಿ ವಿವೇಕಿಯನ್ನು ತಿದ್ದಬಹುದು; ಅವಿವೇಕಿಯನ್ನೂ ತಿದ್ದಬಹುದು. ತಿಳಿದೂ ತಿಳಿಯದ ಮೂರ್ಖನನ್ನು ಸೃಷ್ಟಿಕರ್ತನಾದ ನಾಲ್ಕು ಮುಖಗಳುಳ್ಳ ಬ್ರಹ್ಮನೂ ತಿದ್ದಲಾರನು. ಇದಲ್ಲದೆ ಬಹಳ ಪ್ರಯಾಸಪಟ್ಟು ಮರಳಿನಿಂದಾದರೂ ತೈಲವನ್ನು ತೆಗೆಯಬಹುದು. ದಾಹಗೊಂಡವನು ಬಯಲುದೊರೆಗಳಲ್ಲಾದರೂ ನೀರನ್ನು ಕುಡಿಯಬಹುದು. ಬಹುಕಾಲ ಭೂಮಿಯಲ್ಲಿ ಸುತ್ತಿ ಮೊಲದ ಕೊಂಬನ್ನಾದರೂ ಸಂಪಾದಿಸಬಹುದು. ಇಂಥಾ ಮೂರ್ಖರ ಮನಸ್ಸನ್ನು ಯಾರೂ ತಿದ್ದಲರಿಯರು. ಮತ್ತು ಉಗ್ರವಾದ ನೆಗಳೆನ ಬಾಯಿಯಲ್ಲಿರುವ ರತ್ನವನ್ನಾದರೂ ಬಲಾತ್ಕಾರದಿಂದ ಹೊರಗೆ ತೆಗೆಯಬಹುದು ಜಲಿಸುತ್ತಿರುವ ತೆರೆಗಳಿಂದ ತುಂಬಿರುವ ಸಮುದ್ರವನ್ನಾದರೂ ಕಾಲಿನಿಂದ ದಾಟಿಹೋಗಬಹುದು. ಬಹಳ ಕೋಪಿಷ್ಠವಾದ ಸರ್ಪವನ್ನಾದರೂ ತಲೆಯಮೇಲೆ ಹೂವಿನ ಹಾಗೆ ಧರಿಸಬಹುದು. ಆದರೆ ಮೂರ್ಖರನ್ನು ತಿದ್ದುವುದು ಮಾತ್ರ ಯಾರಿಂದಲೂ ಆಗುವುದಿಲ್ಲ. ಆದುದರಿಂದ ನಾವು ನಿನ್ನ ಕುಮಾರರನ್ನು ತಿದ್ದಲಾರೆವೆಂದು ಹೇಳಲು ರಾಯನು ಮಹಾ ಕೋಪದಿಂದ ಗರ್ಜಿಸಿ—ಎಲೈ ವಿದ್ವಾಂಸರುಗಳಿರಾ! ನೀವು ಮಹಾ ಸಮರ್ಥರೆಂದು ನಿಮ್ಮ ಸಂಗಡ ನಾನು ಹೇಳಿಕೊಂಡರೆ ನಮ್ಮ ಕೈಲಾಗದೆಂದು ನೀವು ಹೇಳಿದ ಮೇಲೆ ನೀವು ನನ್ನ ರಾಜ್ಯದಲ್ಲಿ ಯಥೇಚ್ಛವಾಗಿ ಉಂಬಳಿ ಉಡುಗೆರೆಗಳನ್ನು ಪಡೆದು ವಾಸವನ್ನು ಮಾಡಿಕೊಂಡು ಇರುವುದರಿಂದ ಪ್ರಯೋಜನವೇನು? ಇನ್ನು ಮೇಲೆ ನಿಮಗೆ ನಡೆಯುತ್ತಿರುವ ವರ್ತನ ಮರ್ಯಾದೆ ಮುಂತಾದವುಗಳನ್ನು ನನ್ನ ಅರಮನೆಗೆ ಸೇರಿಸಿಕೊಳ್ಳುತ್ತೇನೆ; ನನ್ನ ಕುಮಾರರನ್ನು ತಿದ್ದಿ ಬುದ್ಧಿವಂತರನ್ನಾಗಮಾಡಲಾರದ ನಿಮ್ಮಿಂದ ನನಗೆ ಏನು ಉಪಯೋಗ? ನಿಮ್ಮನ್ನು ಆದರಿಸಿದುದರಿಂದ ನನಗೆ ಏನುಫಲ? ನೀವು ನನ್ನ ದೇಶದಲ್ಲಿಯೇ ಇರಕೂಡದೆಂದು ಕಠಿಣವಾದ ಮಾತುಗಳನ್ನು ಹೇಳಲಾಗಿ ಆ ವಿದ್ವಾಂಸರು ಒಬ್ಬರ

ಮುಖವನ್ನೊಬ್ಬರು ನೋಡುತ್ತಾ ಬಹಳ ಚಿಂತಾಕ್ರಾಂತರಾಗಿ ಉತ್ತರವನ್ನು ಕೊಡಲರಿಯದೆ ತಲೆಗಳನ್ನು ಬೊಗ್ಗಿಸಿಕೊಂಡು ಸುಮ್ಮನಿರಲು ಅವರೊಳಗೆ ವಿಷ್ಣುಶರ್ಮನೆಂಬ ಒಬ್ಬ ಬ್ರಾಹ್ಮಣನು ಧಿಗ್ಗನೆ ಎದ್ದು—ಎಲೈ ರಾಜಕಂಠೀರವಾ! ರಾಜಮಾರ್ತಾಂಡಾ ರಾಜಚೂಡಾಮಣೀ! ದಾನಚಿಂತಾಮಣೀ! ಶ್ರೀಮದ್ವಿದ್ವಜ್ಜನಮನಃಕುಮುದರಾಕಾ ಸುಧಾಕರೋಪಮಾನಾ! ಪದವಾಕ್ಯಪ್ರಮಾಣಜ್ಞಾ! ಕರುಣಾಕಟಾಕ್ಷವೀಕ್ಷಣಾ! ಕಲ್ಪವೃಕ್ಷದಂತಿರುವ ನಿನ್ನನ್ನು ನಂಬಿ ಸುಖಿಸುವಂಥಾ ಈ ವಿದ್ವಜ್ಜನರ ಮೇಲೆ ಕೋಪವು ಏತಕ್ಕೆ? ನಾನು ನಿನ್ನ ಮೂರು ಮಂದಿ ಕುಮಾರರನ್ನೂ ಆರು ತಿಂಗಳಲ್ಲಿ ವಿದ್ವಜ್ಜೂರರನ್ನು ಮಾಡುವೆನು. ಇದು ಸತ್ಯವು. ನನ್ನ ಸಾಮರ್ಥ್ಯವನ್ನು ನೋಡೆಂದು ಶಪಥವನ್ನು ಮಾಡಿಕೊಳ್ಳಲು ಆ ರಾಯನು ಕೋಪವನ್ನು ಶಾಂತಪಡಿಸಿಕೊಂಡು ನಿರ್ಭರವಾದ ಹರ್ಷದಿಂದ ಉಬ್ಬಿ ದರಿದ್ರಬ್ರಾಹ್ಮಣನಾದ ಆ ವಿಷ್ಣುಶರ್ಮನಿಗೆ ಹಿತ್ತಾಳೆ ತಾಮ್ರ ಕಬ್ಬಿಣ ಸೀಸ ಕಂಚು ಎಂಬ ಪಂಚಲೋಹಗಳು ಮುತ್ತು ರತ್ನ ಪಚ್ಚೆ ನೀಲ ಪುಷ್ಯರಾಗ ವೈಡೂರ್ಯ ವಜ್ರ ಗೋಮೇಧಿಕ ಹವಳಗಳೆಂಬ ನವರತ್ನಗಳು, ಆನೆ ಕುದುರೆ ಮೊದಲಾದ ಯಾನಗಳು, ಶಾಲು ಸಕಲಾತಿ ಮೊದಲಾದ ವಸ್ತ್ರಗಳು, ಗಂಧ ಕಸ್ತೂರಿ ಪುಣಗು ಜವ್ವಾಜಿ ಮೊದಲಾದ ಅನುಲೇಪನಗಳು, ತೊಟ್ಟಿ ಪಡಸಾಲೆ ಮಹಡಿಗಳುಳ್ಳ ಮನೆಗಳು, ಗದ್ದೆ ಹೊಲ ತೋಟ ಮುಂತಾದ ಕ್ಷೇತ್ರಗಳು, ಇವುಗಳನ್ನು ಕೊಟ್ಟನು.

ಹೀಗೆ ಆ ರಾಯನು ವಿಷ್ಣುಶರ್ಮನಿಗೆ ಬಹಳ ಬಹುಮಾನದ್ರವ್ಯಗಳನ್ನು ಕೊಟ್ಟು ವಂದನೋಪಚಾರಗಳಿಂದ ಸತ್ಕರಿಸಿ ತನ್ನ ಕುಮಾರರನ್ನು ಕರಿಸಿ ಆ ಮೂವರನ್ನೂ ವೈಷ್ಣವಶಿಖಾಮಣಿಯೂ ಜಿಷ್ಣುಭೋಗಿಯೂ ವಿಷ್ಣುಭಕ್ತನೂ ಕುಲವರ್ಧಿಷ್ಣುವೂ ಆದ ವಿಷ್ಣುಶರ್ಮನ ವಶಕ್ಕೆ ಕೊಟ್ಟುಕಳುಹಿಸಲು ಆ ಬ್ರಾಹ್ಮಣನು ತನ್ನ ತೃಷ್ಣಾತುರವನ್ನು ಕೃಷ್ಣನ ಕಟಾಕ್ಷದಿಂದ ನೀಗಿದೆನೆಂದು ರಾಜಕುಮಾರರನ್ನು ತನ್ನ ಮನೆಗೆ ಕರೆದುಕೊಂಡು ಹೋಗಿ ಈ ವರ್ತಮಾನವನ್ನೆಲ್ಲಾ ತನ್ನ ಹೆಂಡತಿಯ ಸಂಗಡ ಹೇಳುತ್ತಿರುವ ಸಮಯದಲ್ಲಿ ಆ ಸಭೆಯಲ್ಲಿದ್ದ ವಿದ್ವಾಂಸರೆಲ್ಲರೂ ರಾಯನನ್ನು ಆಶೀರ್ವದಿಸಿ ಅವನ ಅಪ್ಪಣೆಯನ್ನು ತೆಗೆದುಕೊಂಡು ಹೊರಟು ರಾಜದ್ವಾರಕ್ಕೆ ಬಂದು ವಿಷ್ಣುಶರ್ಮನು ರಾಜಾಸ್ಥಾನದಲ್ಲಿ ನಮಗೆ ಅಪಮಾನವಾಗುವ ಹಾಗೆ ಮಾಡಿದನೆಂದು ಬಹಳ ಚಿಂತಾಕ್ರಾಂತರಾಗಿ ಎಲ್ಲರೂ ಒಟ್ಟುಗೂಡಿ ಮನೆಯನ್ನು ಹುಡುಕಿಕೊಂಡು ಬಂದು ಅವನನ್ನು ಕಂಡು—ಎಲೈ ವಿಷ್ಣುಶರ್ಮನೇ? ನೀನು ಶಕ್ರಸಮನಾದ ಚಕ್ರೇಶ್ವರನ ಕುಮಾರರನ್ನು ತಿದ್ದುವೆನೆಂದು ನಿರ್ವಕ್ರವಾದ ಶಪಥವನ್ನು ಮಾಡಿಕೊಳ್ಳಬಹುದೇ? ನಮ್ಮೆಲ್ಲರಿಗಿಂತ ನೀನು ಘನ ವಿದ್ವಾಂಸನೇ? ಈ ದುಷ್ಟರಾದ ರಾಜಪುತ್ರರನ್ನು ತಿದ್ದುವುದು ನಿನ್ನ ಕೈಲಾಗುವುದೇ? ರಾಜಸ್ಥಾನದಲ್ಲಿ ನಾವೆಲ್ಲರೂ ಸಮ್ಮತಿಸದೆ ಇದ್ದ ಕಾರ್ಯವನ್ನು ನೀನು ಮಾಡುತ್ತೇನೆಂದು ಗರ್ವೋಕ್ತಿಗಳನ್ನು ಹೇಳಿ ನಮ್ಮನ್ನು ಅವಮಾನಪಡಿಸಬಹುದೇ? ಎಂದು ಅತ್ಯಂತ ಕೋಪದಿಂದ ಜರಿಯಲಾಗಿ ಆ ವಿಷ್ಣುಶರ್ಮನು—ಚಕ್ರಪಾಣಿಯೇ! ತ್ರಿವಿಕ್ರಮಮೂರ್ತಿಯೇ!

ಈ ವಕ್ರವನ್ನು ಪರಿಹರಿಸಿ ರಕ್ಷಿಸೆಂದು ಮನಸ್ಸಿನಲ್ಲಿ ತನ್ನ ಇಷ್ಟದೈವವನ್ನು ಧ್ಯಾನಿಸಿ ದವನಾಗಿ ಸಮಸ್ತ ವಿದ್ವಾಂಸರಿಗೂ ಸಾಷ್ಟಾಂಗಪ್ರಣಾಮವನ್ನು ಮಾಡಿ—ಸ್ವಾಮಿ! ನಾನು ನಿಮ್ಮೆಲ್ಲರಿಗೂ ಸೇವಕನು; ನನ್ನ ಸಾಮರ್ಥ್ಯವೂ ನನ್ನ ವಿದ್ಯೆಯೂ ಎಷ್ಟರವು? ಆ ಮಹಾರಾಜನು ಕೋಪವನ್ನು ಮಾಡಿಕೊಂಡುದರಿಂದ ಸಕಲ ವಿದ್ವಾಂಸರ ಅನ್ನ ಸ್ಥಿತಿಯು ಹೋಗುವ ವೇಳೆ ಬರಲು ನಿಮ್ಮ ಸಂದರ್ಶನಾನುಗ್ರಹವೆಂಬ ಬಲದಿಂದ ನನಗೆ ಒಂದು ಯುಕ್ತಿಯು ತೋರಿತು. ಏನಂದರೆ ಈ ಕ್ಷಣದಲ್ಲಿ ಹೋಗುವ ನಮ್ಮ ಅನ್ನಸ್ಥಿತಿಯು ಇನ್ನು ಆರು ಮಾಸಗಳಾದರೂ ನಿಶ್ಚಿಂತೆಯಾಗಿರಲಿ ಎಂಬುವುದೇ. ನಾನು ಹೀಗೆ ಹೇಳಿದುದರಿಂದ ರಾಯನು ಒಡಂಬಟ್ಟು ನಮ್ಮೆಲ್ಲರನ್ನೂ ಮನ್ನಿಸಿ ಕಳುಹಿಸಿದನು. ಆದಕಾರಣ ನೀವು ಇದನ್ನೆಲ್ಲಾ ಯೋಚಿಸಿ ನನ್ನ ಮೇಲೆ ಪೂರ್ಣಾನುಗ್ರಹವಿಟ್ಟು ಉದ್ಧಾರವನ್ನು ಮಾಡಬೇಕು ಎಂದು ಹೇಳಲು ಆ ವಿದ್ವಾಂಸರೆಲ್ಲರೂ ಸಂತೋಷಪಟ್ಟು ವಿಷ್ಣುಶರ್ಮನನ್ನು ಸಂತೈಸಿ ತಮ್ಮ ತಮ್ಮ ಮನೆಗಳಿಗೆ ಹೋದರು

ಇತ್ತಲಾ ರಾಜಕುಮಾರರು ಬಹಳ ದುಷ್ಟರಾದುದರಿಂದ ವಿಷ್ಣುಶರ್ಮನು ಅವರು ಹೇಳಿದ ಹಾಗೆ ಕೇಳಿಕೊಂಡು ಕೆಲವು ದಿವಸ ಕಾಲಕ್ಷೇಪವನ್ನು ಮಾಡುತ್ತಾ ಇರಲು ಒಂದು ದಿನ ಆ ರಾಜಕುಮಾರರು ಅರಣ್ಯದಲ್ಲಿ ಬೇಟೆಯಾಡಬೇಕೆಂದು ಪ್ರಯಾಣವಾಗಿ ಸನ್ನಾಹದೊಡನೆ ಹೊರಟರು. ಆಗ ವಿಷ್ಣುಶರ್ಮನು ಕೈಯಲ್ಲಿ ಬುತ್ತಿಯನ್ನು ತೆಗೆದುಕೊಂಡು ಅವರ ಹಿಂದೆಯೇ ಹೋಗುತ್ತಿದ್ದನು. ಅವರು ಘೋರವಾದ ಅರಣ್ಯವನ್ನು ಪ್ರವೇಶಿಸಿ ಮನಸ್ಸಿಗೆ ಬಂದ ಹಾಗೆ ಬೇಟೆಯನ್ನಾಡಿ ಬಹಳ ದಣಿದು ಈ ಬ್ರಾಹ್ಮಣನು ತಂದು ಇದ್ದ ಬುತ್ತಿಯನ್ನು ನೋಡಿ—ಎಲೋ ಬ್ರಾಹ್ಮಣಾ! ನಾವು ಬೇಟೆಯಾಡಿ ಬಹಳ ದಣಿದು ಇದ್ದೇವೆ; ಬುತ್ತಿಯ ಅನ್ನವನ್ನು ಕೊಡೋ ಎಂದು ಕೇಳಲು ವಿಷ್ಣುಶರ್ಮನು ಅವರಿಗೆ ಬುತ್ತಿಯನ್ನು ಕೊಟ್ಟನು. ಅವರು ಅದನ್ನು ಉಂಡು ತಿಳಿಯಾದ ನೀರನ್ನು ಕುಡಿದು ಒಂದು ಮರದ ನೆರಳಿನಲ್ಲಿ ಕುಳಿತುಕೊಂಡು ಬಳಲಿದವರಾದಕಾರಣ ಪವಡಿಸಿ ಆ ವಿಷ್ಣುಶರ್ಮನನ್ನು ನೋಡಿ—ಎಲೈ ಬ್ರಾಹ್ಮಣೋತ್ತಮನೇ! ನಮಗೆ ಹೊತ್ತು ಹೋಗುವ ಹಾಗೆ ಒಂದು ಕಥೆಯನ್ನು ಹೇಳು ಎನ್ನಲು ಆ ಬ್ರಾಹ್ಮಣನು ಬಹಳ ಸಂತುಷ್ಟನಾಗಿ ಇವರನ್ನು ಬುದ್ಧಿವಂತರಾಗುವಂತೆ ಮಾಡುವುದಕ್ಕೆ ಇದೇ ಸಮಯವೆಂದು ಎಣಿಸಿ ಕೇಳುವುದಕ್ಕೆ ಚೆನ್ನಾಗಿಯೂ ಸಕಲ ನೀತಿಯುಕ್ತವಾಗಿಯೂ ಇರುವಂಥಾ ಐದು ಕಥೆಗಳನ್ನು ಕಲ್ಪಿಸಿ ಅವುಗಳನ್ನು ಅವರಿಗೆ ಚೆನ್ನಾಗಿ ತಿಳಿಯುವಂತೆ ಹೇಳುವುದಕ್ಕೆ ಆರಂಭಿಸಿ ಆರು ತಿಂಗಳೊಳಗೆ ಅವರನ್ನು ಸಕಲ ನೀತಿವಿಶಾರದರನ್ನಾಗಿ ಮಾಡಿ ಕೃತಾರ್ಥನಾದೆನೆಂದು ಸಂತೊಷಪಟ್ಟುಕೊಂಡು ಆ ಕುಮಾರರನ್ನು ರಾಯನ ಬಳಿಗೆ ಕರಕೊಂಡು ಹೋಗಿ ಅವರ ವಿದ್ಯಾಪರೀಕ್ಷೆಯನ್ನು ತೋರಿಸಲು ರಾಯನು ತನ್ನ ಮಕ್ಕಳು ಬುದ್ಧಿವಂತರಾದುದನ್ನು ನೋಡಿ ಬಹಳ ಸಂತೋಷವನ್ನು ಹೊಂದಿ ಆ ವಿಷ್ಣುಶರ್ಮನಿಗೆ ಬಹಳ ಉಡುಗೆರೆಗಳನ್ನು ಕೊಟ್ಟು ಜೇಷ್ಠಪುತ್ರನಿಗೆ ಪಟ್ಟವನ್ನು ಕಟ್ಟಿ ಸುಖದಿಂದ್ದನು.

---

45. TALES OF ANIMALS.

೪೫. ಪ್ರಾಣಿಗಳ ವಿಷಯದಲ್ಲಿ ಕಥೋಪಕಥೆಗಳು

ಕಾವೇರೀತೀರದಲ್ಲಿ ವಿಶಾಲವತಿ ಎಂಬ ಪಟ್ಟಣವಿರುವುದು. ಆ ಪಟ್ಟಣದ ಪ್ರಾಂತ್ಯದಲ್ಲಿ ಒಂದು ಅಗ್ರಹಾರವಿರುವುದು. ಆ ಅಗ್ರಹಾರದಲ್ಲಿ ದೇವಶರ್ಮನೆಂಬ ಬ್ರಾಹ್ಮಣನು ಪತ್ನೀಪುತ್ರಾದಿಗಳೊಡನೆ ಸಂಸಾರವನ್ನು ಮಾಡುತ್ತಾ ಇದ್ದು ಕಡೆಗೆ ಅದರಲ್ಲಿ ಉಂಟಾದ ವೈರಾಗ್ಯದಿಂದ ಗಂಗಾಸ್ನಾನವನ್ನು ಮಾಡಬೇಕೆಂದು ಕಾಶೀ ಯಾತ್ರೆಗೆ ಹೊರಟು ಗೊಂಡಾರಣ್ಯವನ್ನು ಹೊಕ್ಕು ಬರುತ್ತಾ ಮಾರ್ಗದಲ್ಲಿ ಒಂದು ತಟಾಕವನ್ನು ಕಂಡು ಅದರಲ್ಲಿ ಸ್ನಾನ ಸಂಧ್ಯಾವಂದನೆ ಮೊದಲಾದ ಅನುಷ್ಠಾನಗಳನ್ನು ಮಾಡುವ ಸಮಯದೊಳಗೆ ಆ ತಟಾಕದಲ್ಲಿ ಇದ್ದ ಒಂದು ಮಂಡೂಕವು ಈ ವಿಪ್ರನನ್ನು ನೋಡಿ—ನನ್ನನ್ನು ತೆಗೆದುಕೊಂಡು ಹೋಗಿ ಗಂಗೆಯಲ್ಲಿ ಬಿಟ್ಟರೆ ನಿನಗೆ ಪ್ರತ್ಯುಪಕಾರವನ್ನು ಮಾಡುತ್ತೇನೆಂದು ಹೇಳಲು ಆ ಬ್ರಾಹ್ಮಣನು ಮಂಡೂಕವನ್ನು ನೋಡಿ ನಿನ್ನಂಥ ಅಲ್ಪಜೀವಿಗಳು ಮನುಷ್ಯರಿಗೆ ಉಪಕಾರವನ್ನು ಮಾಡುವುದುಂಟೇ ? ಎನಲು ಆ ಮಂಡೂಕವು ಅವನಿಗೆ ಒಂದು ಕಥೆಯನ್ನು ಹೇಳಿತು ಹೇಗಂದರೆ :—

ಯಮುನಾತೀರದಲ್ಲಿರುವ ಪ್ರಜಾವತಿ ಎಂಬ ಅಗ್ರಹಾರದೊಳಗೆ ವೇದಪಾಲನೆಂಬ ರಾಯನು ಬ್ರಾಹ್ಮಣರನ್ನು ಅನೇಕ ವಿಧದಿಂದ ರಕ್ಷಿಸಿ ಪೂಜಿಸುತ್ತಾ ಕೀರ್ತಿಯನ್ನು ಸಂಪಾದಿಸಿಕೊಂಡು ಪುಣ್ಯವಂತನಾಗಿ ಇದ್ದನು. ಆ ರಾಯನು ಒಂದು ದಿನ ಬೇಟೆಗೋಸ್ಕರ ಅರಣ್ಯವನ್ನು ಹುಕುರಿತು ಹೊರಟು ಅಲ್ಲಿ ದುಷ್ಟಜಂತುಗಳನ್ನು ಸಂಹರಿಸಿ ಬರುವ ಮಾರ್ಗದೊಳಗೆ ಸತ್ಯಸೇನನೆಂಬ ಒಂದು ಮದದಾನೆಯು ತನ್ನ ಸೈನ್ಯದ ಮೇಲೆ ಬಿದ್ದು ನೂರಾರು ಮಂದಿಯನ್ನು ಕೊಂದು ಹೋಗಲು ಆಗ ರಾಯನು ಕೋಪಾರೂಢನಾಗಿ ತನ್ನ ದೇಶದಲ್ಲಿ ಇದ್ದ ಕಾಮಾಟದ ಜನರನ್ನು ಕರಿಸಿ ಆನೆ ಇರುವ ಸ್ಥಳಕ್ಕೆ ಬಂದು ವಿಸ್ತಾರವಾದ ವಾದವನ್ನು ತೆಗೆಯಿಸಿ ಅದು ಕಾಣದಂತೆ ಕಟ್ಟಿಗೆ ಸೊಪ್ಪುಗಳಿಂದ ಮುಚ್ಚಿ ಮಣ್ಣುಹಾಕಿ ಅದರ ಮೇಲೆ ಹಂದರವನ್ನು ಹಾಕಿಸಿ ಸುತ್ತಲೂ ಜನಗಳು ಆನೆಗಳನ್ನು ಬೆದರಿಸುತ್ತಾ ಬರಲು ಆ ಗಜರಾಜನು ಈ ಸೈನ್ಯವೆಲ್ಲವನ್ನೂ ಕೊಲ್ಲುವೆನೆಂದು ಮಹಾರೋಷಾವೇಶದಿಂದ ಓಡಿಬಂದು ವಾದದಲ್ಲಿ ಬಿದ್ದಿತು. ಆ ರಾಯನು ಬಂದು, ನೋಡಿ ಮೂರು ದಿನಗಳ ಮೇಲೆ ಇದನ್ನು ತನ್ನ ಪಟ್ಟಣಕ್ಕೆ ತೆಗೆದುಕೊಂಡು ಹೋಗಬೇಕೆಂದು ಚತುರಂಗಬಲದೊಡನೆ ತಿರಿಗಿ ತನ್ನ ಪಟ್ಟಣಕ್ಕೆ ಹೋದನು. ಇತ್ತಲಾ ಗಜರಾಜನು ವಾದದಲ್ಲಿ ಬಿದ್ದು ಏಳಲಾರದೆ ಮಹಾಸಂಕಟಪಡುತ್ತಿರುವ ಸಮಯದೊಳಗೆ ಒಬ್ಬ ಬ್ರಾಹ್ಮಣನು ಆ ಮಾರ್ಗದಲ್ಲಿ ಬರುವುದನ್ನು ಕಂಡು—ಎಲೈ ಬ್ರಾಹ್ಮಣೋತ್ತಮನೇ ! ನನ್ನನ್ನು ಹೊರಗೆ ತೆಗೆಯಲಾರೆಯಾ ? ಎಂದು ಬೇಡಿಕೊಳ್ಳಲು ಅವನು ಆ ಆನೆಯನ್ನು ನೋಡಿ —ನಾನು ಅಶಕ್ತನು ; ನಿನ್ನನ್ನು ಹೊರಗೆ ತೆಗೆಯುವ ಸಾಮರ್ಥ್ಯವು ನನಗಿಲ್ಲ. ನೀನು ಜನ್ಮಾರಭ್ಯ ಯಾರಿಗಾದರೂ ಉಪಕಾರವನ್ನು ಮಾಡಿದುದು ಇಲ್ಲವೇ ? ಅನ್ನಲು ಆ ಗಜವು ಇಂತೆಂದುದು—ಎಲೈ ಬ್ರಾಹ್ಮಣನೇ ! ನಾನು ನನ್ನ ಮದೋನ್ಮತ್ತತೆಯಿಂದ

ಲಕ್ಷ್ಯವಿಲ್ಲದೆ ಯಾರಿಗೂ ಉಪಕಾರವನ್ನು ಮಾಡಲಿಲ್ಲ. ಆದರೆ ಒಂದು ದಿನ ಮಾತ್ರ ಇಲಿಗಳಿಗೆ ಉಪಕಾರ ಮಾಡಿ ಇದ್ದೇನೆ. ಅದು ಹೇಗಂದರೆ—ಕಳಿಂಗ ದೇಶದೊಳಗೆ ಇಲಿಗಳು ಹೆಚ್ಚಾಗಿ ಉಪದ್ರವವನ್ನು ಮಾಡಲು ಸಕಲ ಪ್ರಜೆಗಳೂ ಆ ಇಲಿಗಳನ್ನು ಹಿಡಿದು ಭಾಂಡಗಳಲ್ಲಿ ತುಂಬಿ ಬಾಯಿ ಕಟ್ಟಿ ಅರಣ್ಯದಲ್ಲಿ ಇಟ್ಟು ಹೋದರು. ನಾನು ಆಮಾರ್ಗದಲ್ಲಿ ಬರುವುದನ್ನು ಇಲಿಗಳು ಕಂಡು ನನ್ನನ್ನು ಪ್ರಾರ್ಥಿಸಿ ಕರೆದು—ಎಲೊ ಗಜರಾಜಾ! ನಮ್ಮ ಬಂಧನವನ್ನು ಬಿಡಿಸಲಾರೆಯಾ? ನಾವೂ ನಿನಗೆ ಒಂದು ಕಾಲದಲ್ಲಿ ಉಪಕಾರವನ್ನು ಮಾಡುವೆವು ಎನ್ನಲು ನೀವು ಮಾಡುವಂಥಾ ಉಪಕಾರವೇನು? ಎಂದು ನನ್ನಲ್ಲಿ ಅಂದುಕೊಂಡು ಆ ಗಡಿಗೆಗಳನ್ನೆಲ್ಲಾ ಒಡೆಯಬಡಿಯಲು ಅದರೊಳಗಿದ್ದ ಸಮಸ್ತ ಮೂಷಕಗಳೂ ಹೊರಗೆ ಬಂದು ನನ್ನನ್ನು ಕೊಂಡಾಡಿ—ಆಪತ್ಕಾಲದಲ್ಲಿ ನಮ್ಮನ್ನು ನೆನಸು ಎಂದು ಹೇಳಿ, ಹೋದವು ಎನ್ನಲು ಈ ಬ್ರಾಹ್ಮಣನು—ಆ ಮೂಷಿಕಗಳನ್ನು ನೆನೆ ಎಂದು ಹೇಳಿ ಹೋದನು. ಆ ಮೇಲೆ ಈ ಗಜರಾಜನು ಆ ಇಲಿಗಳನ್ನು ನೆನೆಯಲು ಆ ಮೂಷಕಗಳು ತಮ್ಮ ಕುಲಕೋಟಿಯನ್ನು ಕೂಡಿಕೊಂಡು ಅತಿವೇಗದಿಂದ ಬಂದು ವಾದದಲ್ಲಿ ಬಿದ್ದಿದ್ದ ಆನೆಯನ್ನು ನೋಡಿ—ಎಲೋ ಗಜರಾಜಾ! ಧೈರ್ಯಂ ಸರ್ವತ್ರಸಾಧನಂ ಎಂಬ ನೀತಿ ಇರುವುದರಿಂದ ನೀನು ಧೈರ್ಯವನ್ನು ಬಿಡಬೇಡವೆಂದು ಹೇಳಿ ಇಲಿಗಳೆಲ್ಲಾ ಕೂಡಿ ಮಣ್ಣುತೋಡಿ ಆ ವಾದವನ್ನು ಹೂಳಿ ಆನೆಯನ್ನು ಹೊರಡಿಸಲು ಆ ಗಜರಾಜನು ಮೂಷಕಗಳನ್ನು ಕೊಂಡಾಡುತ್ತಾ ತನ್ನ ನಿವಾಸಕ್ಕೆ ಹೋಯಿತು.

ಮರುದಿವಸ ವೇದಪಾಲನೆಂಬ ರಾಯನು ಆನೆಯನ್ನು ತನ್ನ ಪಟ್ಟಣಕ್ಕೆ ತರಬೇಕೆಂದು ಸಕಲ ಸನ್ನಾಹದಿಂದ ಅರಣ್ಯಕ್ಕೆ ಬಂದು ವಾದದಲ್ಲಿ ಆನೆ ಇಲ್ಲದುದನ್ನು ನೋಡಿ ವ್ಯಸನಪಡುತ್ತಿರಲು ಅತನ ಮಂತ್ರಿಯು ರಾಯನನ್ನು ನೋಡಿ—ಅಯ್ಯಾ ಮಹಾರಾಜನೇ! ಆ ಆನೆಯನ್ನು ಮೂಷಕಗಳು ತಮ್ಮ ಸಹಾಯದಿಂದ ಹೊರಡಿಸಿಕೊಂಡು ಹೋದುವು ಎಂದು ಹೇಳಿದನು. ಆಗ ರಾಯನು ಕೋಪರೂಢನಾಗಿ ತನ್ನ ದೇಶದಲ್ಲಿ ಇರುವ ಪ್ರಜೆಗಳೆಲ್ಲರನ್ನು ಕರಿಸಿ ಮೂಷಕಗಳನ್ನು ಸಂಪರಿಸಿರೆಂದು ನೇಮಿಸಿ ಕಳುಹಿಸಲು ಸರ್ವಪ್ರಜೆಗಳೂ ಬೋನುಗಳಿಂದಲೂ ಮಂತ್ರತಂತ್ರಗಳಿಂದಲೂ ವಿಷಪ್ರಯೋಗಗಳಿಂದಲೂ ಮೂಷಕನಿಗ್ರಹವನ್ನು ಮಾಡುತ್ತಾ ಇದ್ದರು. ಸಮಸ್ತ ಮೂಷಕಸಮೂಹವೂ ತಮಗೆ ಯಜಮಾನನಾದ ಬುದ್ಧಿವಂತನೆಂಬ ಮೂಷಕದ ಬಳಿಗೆ ಬಂದು ತಮಗೆ ಬಂದಿರುವ ವಿಪತ್ತನ್ನು ಹೇಳಿಕೊಳ್ಳಲು ಆ ಮೂಷಕರಾಜನು ಅವುಗಳನ್ನು ಸಂತೈಸಿ ನಿಮ್ಮ ವಿಪತ್ತನ್ನು ಪರಿಹರಿಸುವೆನೆಂದು ಅವುಗಳಿಗೆ ಅಭಯವನ್ನು ಕೊಟ್ಟು ಆ ರಾತ್ರಿಯಲ್ಲಿ ರಾಯನ ಮೇಲುಮಾಳಿಗೆಯಲ್ಲಿ ಅಡಗಿದ್ದು ರಾಯನು ಮಜ್ಜನಭೋಜನಾದಿಗಳನ್ನು ತೀರಿಸಿಕೊಂಡು ಕೇಳಿ ಕಾರಾಗೃಹಕ್ಕೆ ಬಂದು ಮಣಿಮಂಚದ ಮೇಲೆ ಮಲಗಿರುವ ಸಮಯದಲ್ಲಿ ಆ ದೊರೆಯ ಸಮೀಪಕ್ಕೆ ಬಂದು—ಎಲೋ ರಾಯಾ! ಮೂಷಕನಿಗ್ರಹವನ್ನು ಮಾಡಿದುದರಿಂದ ನಿನಗೆ ಬರುವ ಆದಾಯವೇನು? ನೀನು ಅವಿವೇಕಿಯು. ಹೇಗಂದರೆ ಆನೆಗೆ ಉಪಕಾರವನ್ನು ಮಾಡಿದಂಥಾ ನಾವು

ನಿಮಗೆ ಉಪಕಾರವನ್ನು ಮಾಡಲಾರೆವೇ ? ಎಂದು ಹೇಳಿತು. ನರರಾಜನು ಇಲಿರಾಯನ ವಾಕ್ಯವನ್ನು ಕೇಳಿ ಇದರ ಮಾತು ನಿಜವೆಂದು ನಿಶ್ಚಯಿಸಿ—ಎಲೋ ಇಲಿರಾಯ ! ಇನ್ನು ಮೇಲೆ ನಿನ್ನ ಕುಲಸ್ಥರನ್ನು ಕೊಲ್ಲಿಸುವುದಿಲ್ಲ ಎಂದು ಅಭಯವನ್ನು ಕೊಟ್ಟು ಕಳುಹಿಸಿ ಮೂಷಕಹಿಂಸೆಮಾಡದ ಹಾಗೆ ಪ್ರಜೆಗಳಿಗೆ ಕಟ್ಟುಮಾಡಿಸಿ ಸುಖದಿಂದಿದ್ದನು.

ಕೆಲವು ದಿನಗಳ ಮೇಲೆ ಪರರಾಜನ ದಂಡು ಬಂದು ಪಟ್ಟಣದ ಸುತ್ತಲೂ ಜೇನುಮುತ್ತಿಗೆಯನ್ನು ಹಾಕಿ ಬಹಳ ಉಪದ್ರವ ಪಡಿಸಲು ಆ ರಾಯನು ನಿರ್ವಹಿಸಲಾರದೆ ಚಿಂತಾಕ್ರಾಂತನಾಗಿ ಆಲೋಚನೆಯನ್ನು ಮಾಡಿ ಮೂಷಕವಾಕ್ಯವನ್ನು ನೆನೆದು, ಮನಸ್ಸಿನಲ್ಲಿ ಇಲಿರಾಯನನ್ನು ಸ್ಮರಿಸಿದನು. ಆ ಮೂಷಕರಾಜನು ತನ್ನ ಸಮೂಹದೊಡನೆ ಬಂದು ರಾಯನ ಮನೋಗತವನ್ನು ತಿಳಿದು ಅತನಿಗೆ—ಹೆದರಬೇಡವೆಂದು ನಂಬಿಕೆಯನ್ನು ಕೊಟ್ಟು ಹೋಗಿ ತಮ್ಮ ಕುಲಕ್ಕೆ ತಿಳಿಸಲು ಅವುಗಳೆಲ್ಲಾ ಕೂಡಿ ಆ ರಾತ್ರಿಯಲ್ಲಿ ದಂಡಿನ ಪಾಳಯವನ್ನು ಹೊಕ್ಕು ಭೇರಿಗಳ ಚರ್ಮಗಳನ್ನೆಲ್ಲಾ ಕತ್ತರಿಸಿ ಆಯುಧಗಳ ಒರೆಗಳೆಲ್ಲವನ್ನೂ ಪುಡಿಪುಡಿಮಾಡಿ ನಾನಾವಿಧ ಚಿತ್ರವಿಚಿತ್ರವಸ್ತ್ರಗಳನ್ನೆಲ್ಲಾ ಶತಸಹಸ್ರಛಿದ್ರಗಳಂ ಮಾಡಿ ದಂಡಿಗೆ ತಂದು ಇದ್ದ ಸಾಮಗ್ರಿಗಳನ್ನೆಲ್ಲಾ ಭಕ್ಷಿಸಿ ಕುದುರೆಗಳಿಗೆ ಕಟ್ಟಿದ ಅಗಾಡಿ ಪಿಠಾಡಿಗಳನ್ನೆಲ್ಲಾ ಹರಿಗಡಿದು ಇನ್ನೂ ಬಹು ಪ್ರಕಾರವಾಗಿ ನಷ್ಟಪಡಿಸಿ ಈ ವಿವರವನ್ನು ರಾಯನಿಗೆ ಹೇಳಿ ತಮ್ಮ ತಮ್ಮ ನಿವಾಸಗಳಿಗೆ ಹೋದವು. ಆ ದಂಡಿನವರು ನಿದ್ದೆ ತಿಳಿದೆದ್ದು ಈ ದಿನ ಕೋಟೆ ಹಲ್ಲಾ ಮಾಡಬೇಕೆಂದು ಪ್ರಯತ್ನವನ್ನು ಮಾಡಿದ್ದ ಪ್ರಾತಃಕಾಲದಲ್ಲಿ ಒಡೆದ ಭೇರಿಗಳನ್ನೂ ಶತಛಿದ್ರಗಳಾದ ವಸ್ತ್ರಗಳನ್ನೂ ನಲಿನಲಿಯಾದ ಹಲ್ಲಣಗಳನ್ನೂ ಪುಡಿಪುಡಿಯಾದ ಹೆದೆಗಳನ್ನೂ ಖಂಡಿತವಾದ ಸಕಲ ಪದಾರ್ಥಗಳನ್ನೂ ನೋಡಿ ಆಶ್ಚರ್ಯಪಟ್ಟು ಎಲ್ಲರೂ ಪಲಾಯನವನ್ನು ಮಾಡಿದರು ಎಂದು ಈ ಕಥೆಯನ್ನು ಹೇಳಿತು ಆ ಬ್ರಾಹ್ಮಣನು ಸಂತೋಷಪಟ್ಟು ಆ ಮಂಡೂಕವನ್ನು ತನ್ನ ಕಮಂಡಲದಲ್ಲಿ ಇಟ್ಟುಕೊಂಡು ಹೊರಟು ಬರುತ್ತಿದ್ದನು.

ಆ ಮೇಲೆ ಅವನು ಒಂದು ದಿನ ಬಿಸಿಲಲ್ಲಿ ಅರಣ್ಯದಲ್ಲಿ ಬರುತ್ತಾ ಅಲ್ಲಲ್ಲಿ ಒಂದು ವೃಕ್ಷದ ನೆರಳಿನಲ್ಲಿ ಕುಳಿತುಕೊಂಡನು. ಆ ವೃಕ್ಷದ ಮಹತ್ತು ಏನಂದರೆ ಯಾರಾದರೂ ಅದರ ಕೆಳಗೆ ಕೂತುಕೊಂಡರೆ ನಿದ್ರೆ ಬರುವುದು. ಆ ಮರದ ಮೇಲೆ ಕಾಷ್ಠಮುಖನೆಂಬ ಒಂದು ವಾಯಸವು ಗೂಡುಮಾಡಿಕೊಂಡಿರುವುದು. ಹಾಗೆ ನಿದ್ರೆ ಹೋಗುವವನನ್ನು ಕಂಡು ಅದು ಧ್ವನಿಮಾಡುವುದು. ಆಗಲೇ ಅದೇ ಮರದಲ್ಲಿ ವಾಸವಾಗಿರುವ ಕರ್ಕೋಟಕನೆಂಬ ಸರ್ಪವು ಬಂದು ಕಚ್ಚಿಹೋಗುವುದು. ತರುವಾಯ ಆ ವಾಯಸವು ತನ್ನ ಕುಲಕೋಟಿಯೊಡನೆ ಬಂದು ಭಕ್ಷಿಸುವುದು. ಈ ಪ್ರಕಾರ ಬಹು ದಿವಸದಿಂದ ಆ ವಾಯಸವೂ ಸರ್ಪವೂ ಸ್ನೇಹದಿಂದ ಇರುತ್ತಿದ್ದವು. ಆ ಮೇಲೆ ಆ ವೃಕ್ಷದ ಕೆಳಗೆ ಈ ಬ್ರಾಹ್ಮಣನು ಮೈಮರೆತು ನಿದ್ದೆ ಹೋದನು. ಆಗ ಆ ವೃಕ್ಷದ ಮೇಲಿದ್ದ ವಾಯಸವು ಕೂಗಲು ಕರ್ಕೋಟಕನೆಂಬ ಸರ್ಪವು ಬಂದು ಈ ಬ್ರಾಹ್ಮಣ

ನನ್ನು ಕಚ್ಚಿಹೋಯಿತು. ಆ ವಾಯಸವು—ಬ್ರಾಹ್ಮಣನು ಮೃತನಾದನೋ? ಇಲ್ಲವೋ? ಎಂದು ನೋಡುವ ಅಪೇಕ್ಷೆಯಿಂದ ಅವನ ಸಮೀಪದಲ್ಲಿದ್ದ ಕಮಂಡಲದ ಮೇಲೆ ಕುಳಿತು ನೋಡಿ ಮೃತನಾದನೆಂದು ನಿಶ್ಚಯಿಸಿ ದೈವಗತಿಯಿಂದ ತನಗೆ ದಾಹವಾಗಲು ಆ ಕಮಂಡದಲ್ಲಿದ್ದ ನೀರನ್ನು ಬಯಸಿ ಅದರಲ್ಲಿ ತನ್ನ ಮೂತಿಯನ್ನು ಇಟ್ಟಿತು. ಕೂಡಲೇ ಅದರಲ್ಲಿದ್ದ ಮಂಡೂಕವು ಈ ಬ್ರಾಹ್ಮಣನ ಮರಣವನ್ನು ಮೊದಲೇ ತಿಳಿದು ಇದ್ದಕಾರಣ ಆ ವಾಯಸದ ಕೊರಳನ್ನು ಗಟ್ಟಿಯಾಗಿ ಕಚ್ಚಿ ಹಿಡಿದುಕೊಂಡು—ಎಲೋ ವಾಯಸನೇ! ನನಗೆ ರಕ್ಷಕನಾದ ಈ ವಿಪ್ರನನ್ನು ಬದುಕಿಸಿಕೊಟ್ಟರೆ ನಿನ್ನನ್ನು ಬಿಡುವೆನು. ಇಲ್ಲದಿದ್ದರೆ ಈಗಲೇ ನಿನ್ನ ಪ್ರಾಣವನ್ನು ತೆಗೆಯುವೆನೆಂದು ಹೇಳಿತು. ವಾಯಸವು ಭಯಪಟ್ಟು ತನ್ನವರನ್ನು ಕೂಗಿ ಈಗ ತನಗೆ ಬಂದಿರುವ ವಿಪತ್ತನ್ನು ಕರ್ಕೋಟಕನೊಡನೆ ಹೇಳಿ ಕರೆದುಕೊಂಡು ಒನ್ನಿ ಎಂದು ಹೇಳಿ ಕಳುಹಿಸಲು ಆ ವಾಯಸನ ಮರಿಗಳು ಸರ್ಪನೊಡನೆ ಈ ಸಂಗತಿಯನ್ನು ಹೇಳಿ ಮೊರೆಯಿಟ್ಟುವು. ಕರ್ಕೋಟಕನು ತನ್ನ ಸ್ನೇಹಿತನಿಗೆ ವಿಪತ್ತು ಬಂದಿತೆಂದು ಅತಿ ವೇಗದಿಂದ ಹೊರಟು ಬಂದು ಬ್ರಾಹ್ಮಣನ ತಲೆಗೆ ಏರಿ ಇದ್ದ ತನ್ನ ವಿಷವೆಲ್ಲವನ್ನೂ ಹೀರಿಕೊಂಡು ಹೋಯಿತು. ಆಗ ಬ್ರಾಹ್ಮಣನು ನಿದ್ರೆ ತಿಳಿದವನ ಹಾಗೆ ಎದ್ದು ಕೂತುಕೊಂಡು ತನ್ನ ಪ್ರಾಣವನ್ನು ಒದುಕಿಸಿದ ಮಂಡೂಕನನ್ನು ಕೊಂಡಾಡಿ—ಈ ಕಾಗೆಯನ್ನು ಬಿಟ್ಟುಬಿಡು ಎಂದು ಹೇಳಿದನು. ಕಪ್ಪೆಯು ಆ ವಿಪ್ರನನ್ನು ನೋಡಿ—ಎಲೋ ಮರುಳು ಬ್ರಾಹ್ಮಣ! ಈ ದುಷ್ಟ ಕಾಗೆಯನ್ನು ಬಿಟ್ಟರೆ ಸಕಲ ಪ್ರಾಣಿಗಳನ್ನೂ ಕೊಂದ ಪಾಪಕ್ಕೆ ಒಳಗಾಗುವೆವು ಎಂದು ಹೇಳಿ ಒಂದು ಕಥೆಯನ್ನು ಹೇಳಿತು. ಏನಂದರೆ—

ಗೋದಾವರೀ ತೀರದಲ್ಲಿ ರಾಮಪುರವೆಂಬ ಒಂದು ಅಗ್ರಹಾರವು ಇರುವುದು. ಅಲ್ಲಿ ಕಾಲಶರ್ಮನೆಂಬ ಬ್ರಾಹ್ಮಣನು ವೇದಶಾಸ್ತ್ರಸಂಪನ್ನನಾಗಿ ಇಹಲೋಕದಲ್ಲಿ ಮಾಡತಕ್ಕ ಕರ್ಮಗಳನ್ನು ಮಾಡಿ ಮೋಕ್ಷಕ್ಕೆ ಸಾಧನವಾದ ಗಂಗಾಸ್ನಾನವನ್ನು ಮಾಡಿಕೊಂಡು ಬರಬೇಕೆಂದು ಕಾಶೀಯಾತ್ರೆಗಾಗಿ ಹೊರಟು ಗೊಂಡಾರಣ್ಯದಲ್ಲಿ ಬರುತ್ತಾ ಅಲ್ಲಿ ಒಂದು ಮಡುವಿನಲ್ಲಿ ನೀರು ಇರುವುದನ್ನು ಕಂಡು—ಇಲ್ಲಿ ಸ್ನಾನವನ್ನು ಮಾಡಿ ಸಂಧ್ಯಾವಂದನಾದಿ ನಿತ್ಯಕರ್ಮಗಳನ್ನು ತೀರಿಸಿಕೊಳ್ಳುವುದಕ್ಕೆ ಪ್ರಶಸ್ತವಾಗಿದೆ ಎಂದು ಅಲ್ಲಿ ನಿಂತು ಮಡುವಿನಲ್ಲಿ ಇಳಿದು ಸ್ನಾನವನ್ನು ಮಾಡುತ್ತಾ ಇರುವ ಸಮಯದಲ್ಲಿ ಅದರೊಳಗೆ ಇದ್ದ ಒಂದು ಮೊಸಳೆಯು ಈ ವಿಪ್ರನನ್ನು ನೋಡಿ—ನನ್ನನ್ನು ತೆಗೆದುಕೊಂಡು ಹೋಗಿ ಗಂಗೆಯಲ್ಲಿ ಬಿಟ್ಟರೆ ನಿನಗೆ ಪ್ರತ್ಯುಪಕಾರವನ್ನು ಮಾಡುವೆನೆಂದಿತು. ಆ ಬ್ರಾಹ್ಮಣನು ಸಂಧ್ಯಾವಂದನಾದಿ ನಿತ್ಯಕರ್ಮಗಳನ್ನು ಮಾಡಿಕೊಂಡು ಅನಂತರದಲ್ಲಿ ತನ್ನನ್ನು ದೈನ್ಯದಿಂದ ಬೇಡಿಕೊಳ್ಳುವ ಮೊಸಳೆಯ ಮೇಲೆ ದಯೆಯುಳ್ಳವನಾಗಿ ಅದನ್ನು ಸಂಚಿಯಲ್ಲಿ ಹೊಗಿಸಿ ಬಿಗಿದು ತಲೆಯಮೇಲೆ ಹೊತ್ತುಕೊಂಡು ಕಾಶಿಯನ್ನು ಸೇರಿ ಗಂಗಾಸ್ನಾನವನ್ನು ಮಾಡಿ ಆ ಮೊಸಳೆಯನ್ನು ಗಂಗೆಯಲ್ಲಿ ಬಿಡಲು ಅದು

ಬ್ರಾಹ್ಮಣನ ಕಾಲನ್ನು ಹಿಡಿದುಕೊಂಡು ಭಕ್ಷಿಸುವುದಕ್ಕೆ ಪ್ರಾರಂಭಿಸಿತು. ಆಗ ವಿಪ್ರನು ಮೊಸಳೆಯನ್ನು ನೋಡಿ—ಎಲೈ ಮೊಸಳೆಯೇ! ಸ್ವಲ್ಪ ನೀರಿನಲ್ಲಿ ಶ್ರಮಪಡುತ್ತಿದ್ದ ನಿನ್ನನ್ನು ಹೊತ್ತುಕೊಂಡು ಬಂದು ಮಹಾಪುಣ್ಯಸ್ಥಳವಾದ ಗಂಗೆಯಲ್ಲಿ ಬಿಟ್ಟು ಸಂರಕ್ಷಣೆ ಮಾಡಿದ ನನ್ನನ್ನು ನೀನು ಭಕ್ಷಿಸುವುದಕ್ಕೆ ಉದ್ಯೋಗಿಸಬಹುದೇ? ಎನಲು ಮೊಸಳೆಯು—ಈ ಕಾಲದಲ್ಲಿ ಉಪಕಾರವನ್ನು ಮಾಡಿದವರಿಗೆ ಅಪಕಾರವನ್ನು ಮಾಡಬಹುದೆಂದು ಮೂರು ಸಾಕ್ಷಿಗಳನ್ನು ನುಡಿಸುತ್ತೇನೆ ಎಂದು ಹೇಳಿತು. ಆ ಬ್ರಾಹ್ಮಣನು—ಹಾಗೆ ಸಾಕ್ಷಿಯನ್ನು ನುಡಿಸಿದ ತರುವಾಯ ನನ್ನನ್ನು ಭಕ್ಷಿಸೆಂದು ಹೇಳಲು ಮೊಸಳೆಯು ಗಂಗಾತೀರದಲ್ಲಿ ಇದ್ದ ಒಂದು ಮಾವಿನ ಮರವನ್ನು ನೋಡಿ—ಎಲೋ ವೃಕ್ಷರಾಜಾ! ಉಪಕಾರವನ್ನು ಮಾಡಿದವರಿಗೆ ಅಪಕಾರವನ್ನು ಮಾಡಬಹುದೇ? ಎಂದು ಕೇಳಿತು. ಆ ವೃಕ್ಷವು—ನಾನು ಸಕಲರಿಗೂ ಪುಷ್ಪಫಲಗಳಿಂದಲೂ ನೆರಳಿನಿಂದಲೂ ಉಪಕಾರವನ್ನು ಮಾಡುತ್ತೇನೆ. ಅವರು ನನ್ನ ಉಪಕಾರವನ್ನು ಅರಿಯದೆ ಕಲ್ಲುಗಳಿಂದ ಹೊಡೆಯುವರು. ಮನೆಗಳನ್ನು ಕಟ್ಟುವುದಕ್ಕೆ ನನ್ನನ್ನು ಕಡಿಯುವರು. ಮತ್ತು ಮೇಲೆ ಹತ್ತಿ ಕಾಲುಗಳಿಂದ ಒದೆಯುವರು. ಹೀಗೆ ನಾನಾ ಪ್ರಕಾರ ಶ್ರಮಪಡಿಸುವರು. ಆದುದರಿಂದ ಉಪಕಾರವನ್ನು ಮಾಡಿದವರಿಗೆ ಅಪಕಾರವನ್ನು ಮಾಡಬಹುದೆಂದು ನುಡಿಯಿತು. ಎಲೋ ವಿಪ್ರನೇ! ಒಂದು ಸಾಕ್ಷಿ ಆಯಿತಲ್ಲಾ! ಎಂದು ಮೊಸಳೆಯು ಹೇಳುವಷ್ಟರಲ್ಲೇ ಒಂದು ಮುದಿ ಆಕಳು ನೀರಿಗಾಗಿ ಬರುತ್ತಾ ಇರಲು ಮೊಸಳೆಯು ಆದನ್ನು ನೋಡಿ—ಎಲೈ ಆಕಳೇ! ಉಪಕಾರಿಗಳಿಗೆ ಅಪಕಾರವನ್ನು ಮಾಡಬಹುದೇ? ಎಂದು ಕೇಳಿತು. ಆ ಹಸುವು—ನಾನು ದೇವಶರ್ಮನೆಂಬ ಬ್ರಾಹ್ಮಣನ ಮನೆಯಲ್ಲಿ ಇರುವೆನು. ಅವನಿಗೆ ನನ್ನಿಂದ ಹತ್ತು ಕಾಲುನಡೆಗಳು ಆದುವು. ಅಲ್ಲದೆ ನಿಶೇಷವಾಗಿ ಕ್ಷೀರವನ್ನು ಕರೆಯುತ್ತಿದ್ದೆನು. ನಾನು ನಿನ್ನೆಯ ದಿವಸ ಶರೀರದ ಜಾಡ್ಯದಿಂದ ಹಾಲು ಕೊಡದೆ ಇರಲು ನನ್ನನ್ನು ಸೊಂಟ ಮುರಿಯುವ ಹಾಗೆ ಹೊಡೆದು ಹೊರಡಿಸಿದನು. ಆದುದರಿಂದ ಉಪಕಾರವನ್ನು ಮಾಡಿದವರಿಗೆ ಅಪಕಾರವನ್ನು ಮಾಡಬಹುದು ಎಂದು ಹೇಳಲು ಮೊಸಳೆಯು—ಎರಡು ಸಾಕ್ಷಿಗಳಾದವು ಎಂದು ಹೇಳುವಷ್ಟರಲ್ಲೇ ಅಲ್ಲಿಗೆ ಒಂದು ಜಂಬುಕವು ಬಂದಿತು. ಮೊಸಳೆಯು—ಎಲೋ ಜಂಬುಕರಾಜಾ! ಉಪಕಾರಿಗಳಿಗೆ ಅಪಕಾರವನ್ನು ಮಾಡಬಹುದಲ್ಲವೇ? ಎಂದು ಕೇಳಿತು. ಆ ಜಂಬುಕವು—ಈ ಕಾಲದಲ್ಲಿ ಉಂಟಾದ ಮಾತನ್ನು ಹೇಳಿದರೆ ಅದು ಲೋಕವಿರುದ್ಧವಾಗಿ ಕಾಣುವುದು. ಇದಲ್ಲದೆ ಮನುಷ್ಯರು ಮಹಾ ಪಾಪಿಗಳು. ನೀರೊಳಗಿರುವವರಿಗೆ ನ್ಯಾಯವನ್ನು ಹೇಳಬಾರದೆಂಬ ನೀತಿ ಉಂಟು. ಆದುದರಿಂದ ನೀವು ನೀರನ್ನು ಬಿಟ್ಟು ಈಚೆಗೆ ಬಂದರೆ ನ್ಯಾಯವನ್ನು ವಿಚಾರಿಸಿ ಹೇಳಬಹುದು ಎನ್ನಲು ಮೊಸಳೆಯು ಬ್ರಾಹ್ಮಣನ ಕಾಲನ್ನು ಬಿಟ್ಟು ತಡಿಗೆ ಬಂದು ತಮ್ಮ ವ್ಯಾಜ್ಯವನ್ನು ಹೇಳಿತು. ನರಿಯು ಬ್ರಾಹ್ಮಣನ ಮೇಲೆ ಕೋಪಿಸಿಕೊಂಡು—ಈ ಮೊಸಳೆಯನ್ನು ಹೇಗೆ ತಂದೆ? ಎಂದು ಗದರಿಸಿ ಕೇಳಲು ವಿಪ್ರನು—ಸಂಚಿಯಲ್ಲಿ

ತಂದೆನು ಎನ್ನಲು ಜಂಬುಕನು ವಿಪ್ರನನ್ನು ಜರಿದು—ತಂದ ವಿವರವನ್ನು ತೋರಿಸು ಎಂದು ಕೇಳಿತು. ಬ್ರಾಹ್ಮಣನು ಮೊಸಳೆಯನ್ನು ಸಂಚಿಯಲ್ಲಿ ಹೊಗಿಸಿ ಹತ್ತ ಕಟ್ಟಿ ತಲೆಯ ಮೇಲೆ ಹೊತ್ತುಕೊಂಡು—ಹೀಗೆ ತಂದೆನು ಅಂದನು. ಆ ಮೇಲೆ ಜಂಬಕನು ಮೊಸಳೆಯನ್ನು ಸ್ವಲ್ಪದೂರ ಹೊರಿಸಿಕೊಂಡು ಹೋಗಿ ನಿರ್ಜಲಭೂಮಿಯಲ್ಲಿ ಇಳಿಸಿ—ಎಲೋ ಶುದ್ಧಸಾತ್ವಿಕಬ್ರಾಹ್ಮಣೋತ್ತಮನೇ! ಇಂಥಾ ದುಷ್ಟಜಂತುಗಳಿಗೆ ಎಂದಿಗೂ ಉಪಕಾರವನ್ನು ಮಾಡಬೇಡ ಎಂದು ಒದ್ದಿಯನ್ನು ಹೇಳಿ ಆತನಿಂದ ಒಂದು ಚಾವು ಕಲ್ಲನ್ನು ತರಿಸಿ ಆ ಮೊಸಳೆಯ ತಲೆಯ ಮೇಲೆ ಹಾಕಿಸಿ ಕೊಂದ ಮೇಲೆ ತಾನು ಅದನ್ನು ಸಮೃದ್ಧಿಯಾಗಿ ಭಕ್ಷಿಸಿ ಹೋಯಿತು. ಆದುದರಿಂದ ಇಂಥಾ ದುಷ್ಟಜಂತುಗಳನ್ನು ಪ್ರಾಣಸಹಿತ ಬಿಡಬಾರದೆಂದು ಹೇಳಿ ಆ ಕಾಗೆಯನ್ನು ಕೊಲ್ಲಿಸಿತು. ಆ ವಿಪ್ರನು ಮಂಡೂಕದೊಡನೆ ಕಾಶಿಯನ್ನು ಸೇರಿ ಗಂಗೆಯಲ್ಲಿ ಅದನ್ನು ಬಿಟ್ಟು ಸ್ನಾನವನ್ನು ಮಾಡಿ ಆ ಕಾಶಿಯಲ್ಲಿ ಇರುವ ವಿಶ್ವನಾಥನಿಗೆ ವಂದನೆಯನ್ನು ಮಾಡಿ ಗಯಾವರ್ಜನೆಯನ್ನು ಮಾಡಿಕೊಂಡು ಹೆಗಲ ಮೇಲೆ ಕಾವಡಿಯನ್ನು ಹೊತ್ತುಕೊಂಡು ತಿರುಗಿ ತನ್ನ ಊರಿಗೆ ಬಂದು, ತಂದೆತಾಯಿಗಳಿಗೆ ಗಂಗೋದಕದಿಂದ ಅಭಿಷೇಕವನ್ನು ಮಾಡಿ ಪುತ್ರಮಿತ್ರಕಳತ್ರಸಮೇತನಾಗಿ ಸುಖದಿಂದ ಬಾಳುತ್ತಿದ್ದನು.

---

46. A PRINCE WINS A PRINCESS BY DISPLAYS OF SKILL

೪೬. ರಾಜಕುಮಾರನು ವಿದ್ಯೆಗಳನ್ನು ಪರೀಕ್ಷೆಕೊಟ್ಟು, ಅರಸನ ಮಗಳನ್ನು ಮದುವೆಯಾದುದು.

ಅಮರಾವತಿ ಎಂಬ ಪಟ್ಟಣದಲ್ಲಿ ಅಮರಶೇಖರನೆಂಬ ಅರಸು ಇರುವನು. ಅವನಿಗೆ ಸರ್ವಗುಣಸಂಪನ್ನೆಯಾದ ಸುಶೀಲೆ ಎಂಬ ಪತ್ನಿಯು ಇರುವಳು. ಈತನು ಸುಬುದ್ಧಿ ಎಂಬ ಮಂತ್ರಿಯೊಡನೆ ಕೂಡಿ ನ್ಯಾಯವಾಗಿ ರಾಜ್ಯಭಾರವನ್ನು ಮಾಡಿಕೊಂಡು ಹಲವು ಕಾಲ ಸುಖವಾಗಿದ್ದನು. ಒಂದು ದಿವಸ ರಾತ್ರಿಯಲ್ಲಿ ಅರಸಿಯು ರಾಯನೊಡನೆ—ನಮ್ಮಿಬ್ಬರಿಗೂ ಮುಪ್ಪಿನ ಕಾಲವಾಗುತ್ತಾ ಬಂತು. ಪಟ್ಟಕ್ಕೆ ಮಕ್ಕಳಾಗಲಿಲ್ಲ. ಮಕ್ಕಳಿಲ್ಲದ ರಾಜ್ಯವು ಅನಾಯಕವಾಗಿ ಕಂಡವರ ಪಾಲಾಗುವುದಿಲ್ಲವೇ? ಯಾಕೆ ಹೀಗೆ ಸುಮ್ಮನಿರುವಿರಿ? ನಾನೆಂತೂ ಬಂಜೆಯು. ಇನ್ನು ಮೇಲೆ ನನ್ನನ್ನು ಕಟ್ಟಿಕೊಂಡು ಏನು ಮಾಡುವಿರಿ? ಇನ್ನೊಬ್ಬಳನ್ನಾದರೂ ತಂದು ಅವಳಲ್ಲಿ ರಾಜ್ಯಭಾರಕ್ಕೆ ಸಂತಾನವನ್ನು ಪಡೆಯಿರಿ ಅಂದಳು. ರಾಯನು—ದೇವರು ಮಾಡಿದುದಾಗಲಿ. ನಾನು ನಿನ್ನ ಮೇಲೆ ಮತ್ತೊಬ್ಬಳನ್ನು ತರುವುದಿಲ್ಲ. ಇಬ್ಬರು ಹೆಂಡರಕಾಟ ಇರಳು ತಿಗಣೆಯ ಕಾಟವೆಂಬ ಗಾದೆಯನ್ನು ನೀನು ಕೇಳರಿಯೆಯಾ?

ಅಂದನು. ರಾಣಿಯು—ಇಷ್ಟು ದಿವಸ ನಾನು ನಿಮ್ಮ ಸುಖವನ್ನನುಭವಿಸಿದೆನು. ಇನ್ನು ಮೇಲೆ ನೀವು ಮತ್ತೊಬ್ಬಳನ್ನು ತಂದು ಮಕ್ಕಳುಗಳನ್ನು ಪಡದು ಬಾಳುವು ದನ್ನು ನೋಡುವ ಸುಖವೇ ಸಾಕು. ನನ್ನ ತಂಟೆಯು ಲೇಶಮಾತ್ರವೂ ನಿಮಗೆ ಇರು ವುದಿಲ್ಲ ಖಂಡಿತವಾಗಿಯೂ ಇನ್ನೊಬ್ಬಳನ್ನು ಮದುವೆಯಾಗಬೇಕೆಂದು ನಿರ್ಬಂಧ ವನ್ನು ಮಾಡಲು ಅರಸು ಹಾಗೇ ಆಗಲಿ ಎಂದು ಮತ್ತೊಬ್ಬಳನ್ನು ಮದುವೆಯಾಗಿ ಇಬ್ಬರೊಡನೆಯೂ ಕೆಲವು ಕಾಲ ಸುಖವಾಗಿದ್ದನು. ಹೀಗಿರುವಲ್ಲಿ ದೇವರ ಚಿತ್ತ ದಿಂದ ಹಿರಿಯ ಹೆಂಡತಿಯು ಗರ್ಭಿಣಿಯಾಗಲು ಕಿರಿಯ ಹೆಂಡತಿಯು ತಾನು ಬಸುರಾಗಲಿಲ್ಲವಲ್ಲಾ! ಬಂಜೆಯಾಗಿದ್ದವಳು ಬಸುರಾದಳಲ್ಲಾ! ಎಂದು ಹೊಟ್ಟೇ ಕಿಚ್ಚು ಪಡುತ್ತಾ ಅರಸನು ಸರ್ವಭಾಗದಲ್ಲಿಯೂ ತನ್ನ ಮಾತಿನಂತೆ ಇರಬೇಕೆಂದು ಯೋಚಿಸಿ ಅವನನ್ನು ತನ್ನಂತೆ ಮಾಡಿಕೊಂಡು ಹಿರಿಯ ಹೆಂಡತಿಯನ್ನು ಅರಮನೆ ಯಿಂದ ಬಿಡಿಸಿ ಹೊರಗೆ ದಾಟಿಸಿದ ಹೊರತು ಅನ್ನೋದಕಗಳನ್ನು ತೆಗೆದುಕೊಳ್ಳು ವುದಿಲ್ಲವೆಂದು ಹಟವನ್ನು ಹಿಡಿದಳು.

ಆಗ ಅರಸು ಮಂತ್ರಿಯನ್ನು ಕರಿಸಿ ಏಕಾಂತದಲ್ಲಿ—ಹಿರಿಯವಳು ಮಾಡಿ ಕೊಂಡುದು ಅವಳ ಪ್ರಾಣಕ್ಕೆ ಬಂದಿತು. ಆದರೂ ವ್ಯಸನಪಡುವುದರಿಂದ ಪ್ರಯೋ ಜನವಿಲ್ಲವು. ತುದಿಪೇಟೆಯಲ್ಲಿ ಒಂದು ಅರಮನೆಯನ್ನು ಕಟ್ಟಿಸಿ ಅಲ್ಲಿ ಹಿರಿಯವ ಳನ್ನು ಇಡು; ಗರ್ಭಿಣಿಯಾಗಿದ್ದಾಳೆ. ಆಕೆಯು ಒಂದಕ್ಕೂ ಕೊರತೆ ಪಡದಂತೆ ಬಯಸಿದ ಬಯಕೆಗಳನ್ನು ಸಲ್ಲಿಸುತ್ತಾ ನೀನೇ ಜೆನ್ನಾಗಿ ಪರಾಂಬರಿಸಿಕೋ ಎಂದು ಅಪ್ಪಣೆಯನ್ನು ಕೊಟ್ಟು ತನ್ನ ಸ್ವಂತ ಕತ್ತಿಯನ್ನೂ ಮುದ್ರೆಯ ಉಂಗುರವನ್ನೂ ಕೊಟ್ಟು ಕಳುಹಿಸಿದನು. ಪ್ರಧಾನಿಯು ಪಟ್ಟದ ರಾಣಿಯ ಬಳಿಗೆ ಬಂದು ಅಳುತ್ತಾ ಅರಸು ಹೇಳಿದ ಮಾತನ್ನು ಹೇಳಿ ಆ ಕತ್ತಿಯನ್ನೂ ಮುದ್ರೆಯ ಉಂಗುರ ವನ್ನೂ ಕೊಟ್ಟು ತುದಿಪೇಟೆಯಲ್ಲಿ ಅರಮನೆಯನ್ನು ಕಟ್ಟಿಸಿ ಆಕೆಯನ್ನು ಅಲ್ಲಿಗೆ ಕರಕೊಂಡು ಹೋಗಿ ಇಟ್ಟು ಸ್ವಲ್ಪವಾದರೂ ಚಿಂತೆಪಡದಂತೆ ದಿನಕಟ್ಟೆ ತಾನೇ ಹೋಗಿ ವಿಚಾರಿಸಿಕೊಳ್ಳುತ್ತಾ ಸಕಲ ಸೌಖ್ಯಗಳಿಂದ ನೊದಲಿಗಿಂತಲೂ ಹೆಚ್ಚಾಗಿ ಇಟ್ಟುಕೊಂಡಿದ್ದನು. ಬಳಿಕ ಪಟ್ಟದ ರಾಣಿಯು ಅರನೆಯ ತಿಂಗಳಲ್ಲಿ ಅರಸಿನ ಕತ್ತಿ ಉಂಗುರಗಳನ್ನೇ ಅರಸೆಂದು ಎಣಿಸಿ ಹಸೆಮಣೆಯ ಮೇಲೆ ಇಟ್ಟುಕೊಂಡು ತಾನೂ ಕುಳಿತು ರಾಜ ಪುರೋಹಿತನ ಕಡೆಯಿಂದ ಪುಂಸವನ ಸೀಮಂತ ಕರ್ಮಗಳನ್ನು ನಡೆಸಿಕೊಂಡು ನವಮಾಸ ತುಂಬಿದ ಮೇಲೆ, ಹತ್ತನೆಯ ತಿಂಗಳಲ್ಲಿ ಸಕಲ ರಾಜ ಲಕ್ಷಣಗಳಿಂದ ಕೂಡಿದ ಗಂಡುಮಗುವನ್ನು ಹೆತ್ತಳು. ಆಗ ಮಂತ್ರಿಯು ಆ ಮಗು ವಿಗೆ ಜಾತಕರ್ಮ ನಾಮಕರಣ ಚೌಲೋಪನಯನಾದಿಗಳನ್ನು ಆಯಾಯ ಕಾಲದಲ್ಲಿ ನೆರವೇರಿಸಿ ಐದು ವರ್ಷವಾಗಲು ಉಪಾಧ್ಯಾಯರುಗಳನ್ನು ಇಟ್ಟು ನಾನಾ ವಿದ್ಯಾ ಭ್ಯಾಸಗಳನ್ನು ಮಾಡಿಸಿದನು. ಆ ಬಳಿಕ ರಾಜಕುಮಾರನು ಹದಿನಾರು ವರುಷದ ಪ್ರಾಯದವನಾಗಿ ಸಕಲ ವಿದ್ಯಾಪಾರಂಗತನಾದನು.

ಒಂದಾನೊಂದು ದಿವಸ ಈ ರಾಜಕುಮಾರನು ಗುಜ್ಜರಿ ಹೊತ್ತಿನಲ್ಲಿ ತೇಜಿ ಯನ್ನು ಏರಿ ವೈಹಾಳಿಯನ್ನು ಮಾಡುತ್ತಿರುವಲ್ಲಿ ಬಾಡಿದ ಮೊಗಗಳ ಬಳಲಿದ

ಮೈಗಳ ಒಣಗಿದ ತುಟಿಗಳ ತಲೆ ಮುಸುಕುಗಳ ಹೊರಗಣಿಂದ ಕೋಟೆಯ ಒಳಗೆ ಬರುವ ತನ್ನ ಗುರುಗಳನ್ನು ಕೋಟೆಯ ಬಾಗಿಲಲ್ಲಿ ಕಂಡು ಝಗ್ಗನೆ ತೇಜಿಯನ್ನಿಳಿದು ಅವರಡಿಗಳಿಗೆ ಅಡ್ಡಬಿದ್ದು ಚಿಂತೆಯ ಕಾರಣವನ್ನು ಕೇಳಿದನು. ಅವರು—ನಾವು ಇಂದಿನವರೆಗೂ ವಿದ್ಯಾಪ್ರಸಂಗದಲ್ಲಿ ಯಾರಿಗೂ ಸೋತುಬರಲಿಲ್ಲ. ಈಗ ಅಳಕವತೀ ಪಟ್ಟಣದ ಅಳಕಶೇಖರರಾಜನ ಮಗಳು, ವಿದ್ಯಾಮಂಜರಿ ಎಂಬವಳು, ತನಗೆ ಅರವತ್ಮೂನಾಲ್ಕು ವಿದ್ಯೆಗಳಲ್ಲಿಯೂ ಉತ್ತರ ಕೊಟ್ಟವನನ್ನೇ ಮದುವೆ ಮಾಡಿಕೊಳ್ಳುವೆನೆಂದು ಸ್ವಯಂವರಮಾಡಿರುವ ಸುದ್ದಿಯನ್ನು ಗತಾನುಗತಿಕವಾಗಿ ಕೇಳಿ ನಾವು ಹುಚ್ಚ ತನದಿಂದ ಹೋಗಿ ಐದಾರು ವಿದ್ಯೆಗಳಲ್ಲಿಯಾದರೂ ಅವಳಿಗೆ ಉತ್ತರವನ್ನು ಕೊಡಲಾರದೆ ಪರಾಜಿತರಾಗಿ ಬಂದೆವು. ಅಲ್ಲದೆ ಚಪ್ಪನ್ನ ದೇಶದ ಮಹಾ ಮಹಾ ವಿದ್ವಾಂಸರೂ ಕೂಡ ಬಂದು ಸೋತುಹೋದರು. ನಮ್ಮ ಬಾಳು ಕೆಟ್ಟ ಬಾಳು ಎಂದು ಹೇಳಿದರು. ಅದಕ್ಕೆ ರಾಜಕುಮಾರನು—ಯಾಕೆ ಇಷ್ಟು ಚಿಂತೆ ಮಾಡುತ್ತೀರಿ? ನಿಮ್ಮ ಶಿಷ್ಯನಾದ ನಾನು ಅವಳನ್ನು ಜಯಿಸಿ ನಿಮ್ಮನ್ನು ಕರಿಸಿ ನಿಮಗೆ ಅವಳಿಂದ ಬಹುಮಾನ ಕೊಡಿಸುವೆನೆಂದು ಸಮಾಧಾನಗೊಳಿಸಿ ಅವರನ್ನು ಪಟ್ಟಣಕ್ಕೆ ಕಳುಹಿಸಿ ತಾನು ಮನೆಯನ್ನು ಹೊಗದೆ ಹಾಗೆಯೇ ಹೊರಟು ರಾತ್ರಿ ಹಗಲೆನ್ನದೆ ದಾರಿಯನ್ನು ನಡೆದು ಅಳಕವತೀ ಪಟ್ಟಣವನ್ನು ಸೇರಿ ವಿದ್ಯಾಮಂಜರಿಯ ಅರಮನೆಯ ಬಾಗಿಲಿನಲ್ಲಿ ಇಳಿದು ತೇಜಿಯನ್ನು ಬಾಗಿಲ ಕಂಬಕ್ಕೆ ಕಟ್ಟಿ ಪ್ರಸಂಗಮಂಟಪವನ್ನು ಹೊಕ್ಕು ಮಂಚದ ಮೇಲೆ ಕುಳಿತುಕೊಂಡನು. ಆಗ ವಿದ್ಯಾಮಂಜರಿಯ ಸಖಿಯಾದ ಕಳಾವತಿ ಎಂಬುವಳು ಈ ರಾಜಕುಮಾರನ ತೇಜಸ್ಸನ್ನೂ ಗಾಂಭೀರ್ಯವನ್ನೂ ಶೀವಿಯನ್ನೂ ಸಡಕನ್ನೂ ರಾಜಲಕ್ಷಣಗಳನ್ನೂ ಸೌಂದರ್ಯವನ್ನೂ ನೋಡಿ ವಿದ್ಯಾಮಂಜರಿಯ ಬಳಿಗೆ ಹೋಗಿ—ಅಕ್ಕಾ! ಈಗ ಬಂದಿರುವ ರಾಜಕುಮಾರನನ್ನು ನೋಡು; ಇವನು ನಿನಗೆ ತಕ್ಕ ವರನಾಗಿದ್ದಾನೆ. ಇವನನ್ನೂ ಕೂಡ ವಿದ್ಯಾಪ್ರಸಂಗದಲ್ಲಿ ಉತ್ತರವನ್ನು ಹೇಳಲಿಲ್ಲವೆಂದು ನೀನು ನಿರಾಕರಿಸಿ ಬಿಟ್ಟರೆ ಇನ್ನು ಇಂಥಾ ವೀರನು ನಿನಗೆ ಸಿಕ್ಕಲರಿಯನು ಆ ಮೇಲೆ ನೀನು ಕಾವಿಯ ಸೀರೆಯನ್ನುಟ್ಟು ವಿರಕ್ತೆಯಾಗಿ ವನಕ್ಕೆ ಹೋಗಬೇಕು ಎನಲು ವಿದ್ಯಾಮಂಜರಿಯು ಕೂಡಲೆ ಪ್ರಸಂಗ ಮಂಟಪಕ್ಕೆ ಬಂದು ತೆರೆಯ ಒಳಗಡೆ ಇರುವ ಮಣಿಮಂಚದ ಮೇಲೆ ತಾನೂ ಕುಳಿತುಕೊಂಡು ಅರಸುಮಗನನ್ನು ಒಂದೊಂದು ವಿದ್ಯೆಯಲ್ಲಿ ಕೇಳುತ್ತಾ ಬರಲು ಇವನು ಅವಳು ಕೇಳಿದ ಎಲ್ಲ ವಿಷಯಗಳಿಗೂ ಉತ್ತರವನ್ನು ಹೇಳಿದನು. ಆಗ ವಿದ್ಯಾಮಂಜರಿಯು ಬಹಳ ಸಂತೋಷಪಟ್ಟು ತೆರೆಯನ್ನು ಹಾರಬಡಿದು ಇವನ ಕೊರಳಿಗೆ ಹೂವಿನ ಮಾಲಿಕೆಯನ್ನು ಹಾಕಿ ತಬ್ಬಿಕೊಂಡು ಕರಕೊಂಡು ಹೋಗಿ ತನ್ನ ಮಂಚದ ಮೇಲೆ ಕೂರಿಸಿಕೊಂಡು—ನಿನು ಅರವತ್ತೆರಡು ವಿದ್ಯೆಯಲ್ಲಿಯೂ ನನಗೆ ಪರೀಕ್ಷೆಯನ್ನು ಕೊಟ್ಟುದರಿಂದ ಉಳಿದ ಎರಡು ವಿದ್ಯೆಗಳೂ ಬಂದಿರಬಹುದೆಂದು ನಾನು ನಿನ್ನನ್ನು ಪತಿಯಾಗಿ ವರಿಸಿದ್ದೇನೆ. ನೀನು ಗಂಧರ್ವವಿವಾಹದಿಂದ ನನ್ನನ್ನು ಕೈಕೊಳ್ಳೆಂದಳು. ಆಗ ಅರಸುಮಗನು ಉಳಿದ ಎರಡು ವಿದ್ಯೆಗಳು ಯಾವುವು?

ಎಂದು ಕೇಳಿದುದಕ್ಕೆ ರಾಜಪುತ್ರಿಯು—ಕಳ್ಳತನ ಒಂದು ವ್ಯಭಿಚಾರ ಒಂದು ಎನ್ನಲು ಅರಸುಮಗನು—ಆ ಎರಡು ವಿದ್ಯೆಗಳಲ್ಲಿಯೂ ನಿನಗೆ ಪರೀಕ್ಷೆಯನ್ನು ಕೊಟ್ಟನಂತರ ನಿನ್ನನ್ನು ಪರಿಗ್ರಹಿಸುವೆನು. ನೀನೇ ನನಗೆ ಪಟ್ಟದ ರಾಣಿಯು. ಇದು ಸತ್ಯವೆಂದು ನಂಬುಗೆಯನ್ನಿತ್ತು ಅಲ್ಲಿಂದ ಹೊರಟು ನಗರ ಗ್ರಾಮಾದಿಗಳನ್ನು ಸುತ್ತುತ್ತಾ ವಿಶಾಲನಗರವೆಂಬ ಪಟ್ಟಣವನ್ನು ಹೊಕ್ಕು ವಿಚಾರಿಸುವಲ್ಲಿ ಆ ಊರಿನಲ್ಲಿರುವ ಸುಬ್ಬಭಟ್ಟನೆಂಬ ಜೋಯಿಸನು ಚೋರವಿದ್ಯೆಯಲ್ಲಿ ಸಮರ್ಥನೆಂಬುವುದನ್ನು ಅತನ ಅಂತರಂಗದ ಆಪ್ತನಿಂದ ಭೇದಿಸಿ ತಿಳಿದು ಆತನೆಡೆಗೆ ಹೋಗಿ ಅವನ ಎರಡು ಕಾಲುಗಳನ್ನೂ ಹಿಡಿದುಕೊಂಡು—ನನಗೆ ಬರುವ ವಿದ್ಯೆಯನ್ನು ನಿನಗೆ ಕಲಿಸಿ ಕೊಡುವೆನೆಂದು ಅಭಯವನ್ನು ಕೊಡಬೇಕೆಂದು ಬೇಡಿಕೊಳ್ಳಲು ಆ ಜೋಯಿಸನು ಅವನಿಗೆ ಅಭಯವನ್ನು ಕೊಟ್ಟು ರಹಸ್ಯ ಸ್ಥಳದಲ್ಲಿ ಕೂರಿಸಿಕೊಂಡು ಚೋರವಿದ್ಯಾಮಂತ್ರಗಳನ್ನು ಉಪದೇಶಿಸಿ—ನನಗೆ ಮಕ್ಕಳಿಲ್ಲ; ಆದುದರಿಂದ ನೀನು ನನಗೆ ಮಗನಾಗಿಯೂ ಶಿಷ್ಯನಾಗಿಯೂ ಇರುತ್ತೀಯೆ. ನಾನು ಚೋರನೆಂಬುವುದು ಯಾರಿಗೂ ತಿಳಿಯದು. ಮುಂದೆ ನೀನೂ ತಿಳಿಸಕೂಡದು. ನಾನು ಸತ್ತರೆ ನನಗೆ ಮಾಡತಕ್ಕ ಕ್ರಿಯೆಗಳನ್ನೆಲ್ಲಾ ನೀನೇ ಮಾಡಬೇಕೆಂದು ಪ್ರಮಾಣವನ್ನು ಮಾಡಿಸಿಕೊಂಡು ಸಾಯಂಕಾಲವಾದ ಮೇಲೆ ಅರಸುಮಗನೊಡನೆ ಭೋಜನವನ್ನು ಮಾಡಿ ಒಬ್ಬರಿಗೂ ತಿಳಿಯದಂತೆ ಕನ್ನಗತ್ತರಿಗಳನ್ನೂ ಮಂಕುಬೂದಿಯನ್ನೂ ನೂಲೇಣಿಗಳನ್ನೂ ತೆಗೆದುಕೊಂಡು ಕಾಡಿನ ಮಾರ್ಗವಾಗಿ ಬರುತ್ತಾ ಗಂಧದ ಮರದಲ್ಲಿ ನಾಲ್ಕು ಮಂಚದ ಕಾಲುಗಳನ್ನು ಮಾಡಿಕೊಂಡು ಮುಂದೆ ಹೋಗುತ್ತಿರುವಲ್ಲಿ ಈ ಅರಸುಮಗನು—ಕಳುವನ್ನು ಮಾಡುವುದಕ್ಕೆ ಎಲ್ಲಿಗೆ ಹೋಗುತ್ತೀರಿ? ಎಂದು ಕೇಳಿದನು. ಜೋಯಿಸನು—ಅಳಕವತೀ ಪಟ್ಟಣದ ಅಳಕಶೇಖರರಾಜನು ಕಳ್ಳರಿಗೆಲ್ಲಾ ಮಿಂಡ ಎಂದು ಹೊಗಳಿಸಿಕೊಳ್ಳುತ್ತಾ ಇದ್ದಾನೆ. ಈ ವರೆಗೂ ನಾನು ಏಕಾಂಗಿಯಾಗಿದ್ದುದರಿಂದ ಅವನ ಪಟ್ಟಣಕ್ಕೆ ಹೋಗುವುದು ನನಗೆ ಬಹು ದುರ್ಘಟವಾಗಿದ್ದಿತು. ಈಗ ನೀನು ಸಹಾಯಕನಾಗಿ ಬಂದುದರಿಂದ ಆತನ ಪಟ್ಟಣಕ್ಕೆ ಹೋಗುತ್ತೇನೆ ಅಂದನು. ಆಗ ಅರಸುಮಗನು—ರೋಗಿ ಬಯಸಿದುದೂ ಹಾಲೋಗರ ವೈದ್ಯ ಹೇಳಿದುದೂ ಹಾಲೋಗರ ಎಂಬ ಗಾದೆಗೆ ಸರಿಯಾಗಿ ನನ್ನ ಮನಸ್ಸಿನಲ್ಲಿ ಇದ್ದುದನ್ನೇ ಜೋಯಿಸರು ಹೇಳಿದರೆಂದು ಸಂತೋಷಪಟ್ಟುಕೊಂಡು, ಅವನ ಜೊತೆಯಲ್ಲಿಯೇ ಹೋದನು.

ಆ ಬಳಿಕ ಆ ಸುಬ್ಬಜೋಯಿಸನು ಅಳಕವತಿ ಪಟ್ಟಣವನ್ನು ಸೇರಿ ಆ ಪಟ್ಟಣಕ್ಕೆ ಇರುವ ಹದಿನಾಲ್ಕು ಸುತ್ತಿನ ಕೋಟೆಯನ್ನೂ ನೂಲೇಣಿಗಳಿಂದ ಹತ್ತಿ ಒಳಗಡೆಗೆ ಇಳಿದು ಕಾವಲುಗಾರರಿಗೆಲ್ಲಾ ಮಂಕುಬೂದಿಯನ್ನು ತಳಿದು ಅರಮನೆಯ ಬಳಿಗೆ ಹೋಗಿ ಆ ಅರಮನೆಯ ಏಳು ಸುತ್ತಿನ ಪಾಗರವನ್ನೂ ನೂಲೇಣಿಯಿಂದಲೇ ಹತ್ತಿ ಇಳಿದು ಅರಸು ಮಲಗುವ ಚಿಕ್ಕಮನೆಯ ಗೋಡೆಗೆ ಕನ್ನಗತ್ತರಿಯಿಂದ ಕನ್ನವನ್ನಿಕ್ಕಿ—ನಾನು ಬರುವ ವರೆಗೂ ನೀನು ಹೊರಗೆ ಎಚ್ಚರವಾಗಿ ಕಾದಿರು. ಒಂದುವೇಳೆ ನನಗೇನಾದರೂ ಅಪಾಯ ಸಂಭವಿಸಿದರೆ ಜನರಿಗೆ ನನ್ನ ಗುರುತು ಸಿಕ್ಕದಿರು

ವುದಕ್ಕಾಗಿ ನೀನು ಮೊದಲು ನನ್ನ ತಲೆಯನ್ನು ತೆಗೆದುಕೊಂಡು ಹೋಗಿ ಮುಚ್ಚಿಟ್ಟಿದ್ದು ಅವರು ಮುಂಡವನ್ನು ಸುಡುವ ಕಾಲದಲ್ಲಿ ಅದರ ಕೂಡ ರುಂಡವನ್ನೂ ಹಾಕಿ ಸುಡುವ ಹಾಗೆ ಮಾಡು ಎಂದು ಅರಸುಮಗನಿಗೆ ಹೇಳಿ ಆ ನಾಲ್ಕು ಗಂಧದ ಮಂಚದ ಕಾಲುಗಳನ್ನೂ ತೆಗೆದುಕೊಂಡು ಕನ್ನದಿಂದ ಒಳಹೊಕ್ಕು ನೋಡುವಲ್ಲಿ ಪಟ್ಟದ ರಾಣಿಯೊಡನೆ ರಾಜನು ಮಂಚದ ಮೇಲೆ ಮಲಗಿರಲು ಅವರು ಅಲುಗದಂತೆ ಆ ಮಂಚಕ್ಕೆ ತನ್ನ ಬೆನ್ನನ್ನು ಕೊಟ್ಟು ಎತ್ತಿ ಆ ಮಂಚದ ಮೂರು ಹವಳದ ಕಾಲುಗಳನ್ನೂ ಕಳಚಿ ಅದಕ್ಕೆ ಬದಲಾಗಿ ತಾನು ತಂದಿದ್ದ ಗಂಧದ ಕಾಲುಗಳನ್ನು ಜೋಡಿಸಿ ನಾಲ್ಕನೆಯ ಕಾಲನ್ನು ಕಳಚಿ ಗಂಧದ ಕಾಲನ್ನು ಜೋಡಿಸುವಲ್ಲಿ ಮಂಚವು ಸ್ವಲ್ಪ ಅಲುಗಾಡಿದುದರಿಂದ ಅರಸು ತಾನು ಮಲಗಿಕೊಂಡಿದ್ದ ಹಾಗೆಯೇ ತನ್ನ ತಲೆದಿಂಬಿನ ಕೆಳಗೆ ಇಟ್ಟು ಇದ್ದ ಬಿಚ್ಚುಗತ್ತಿಯನ್ನು ತೆಗೆದುಕೊಂಡು ಒಂದು ವೇಳೆ ಮಂಚದ ಸುತ್ತಾ ತಿರುಗಿಸಿ ಅಲ್ಲೇ ಇಟ್ಟು ಯಥಾಪ್ರಕಾರ ಮಲಗಿಕೊಂಡನು. ತಿರುಗಿಸಿದ ಆ ಕತ್ತಿಯು ಜೋಯಿಸನ ಕುತ್ತಿಗೆಗೆ ತಗುಲಿ ತಲೆ ಹರಿದು ಬಿದ್ದಿತು. ಒಳಗೆ ಹೋದವನು ಬಹಳ ಹೊತ್ತಾದಾಗ್ಗೂ ಹೊರಗೆ ಬಾರದ ಕಾರಣ ಅರಸುಮಗನು ತತ್ತರಿಸಿ ಗಾಬರಿಯಾಗಿ ಒಳ ಹೊಕ್ಕು ನೋಡಿ ಬಿದ್ದಿರುವ ತನ್ನ ಗುರುವಿನ ತಲೆಯನ್ನೂ ಕಳಚಿರುವ ನಾಲ್ಕು ಹವಳದ ಮಂಚದ ಕಾಲುಗಳನ್ನೂ ಅಲ್ಲಿದ್ದ ರತ್ನಪಡಿಯ ನಗಗಳನ್ನೂ ತೆಗೆದುಕೊಂಡು ಹೊರಗೆ ಬಂದು ತನ್ನ ಸಾಮಾನುಗಳನ್ನು ಕಟ್ಟಿಕೊಂಡು ಅರಮನೆಯ ಪಾಗರಗಳನ್ನು ದಾಟಿ ಬಂದ ಜನರಿಗೆ ಕೂಲಿಯನ್ನು ತೆಗೆದುಕೊಂಡು ಆಟ್ಟಿಕ್ಕುತ್ತಾ ಜೀವನ ಮಾಡಿಕೊಂಡು ಆ ಪಟ್ಟಣದ ಒಂದು ಸಂದಿಯಲ್ಲಿ ಹುಲ್ಲುಗುಡಿಸಲು ಕಟ್ಟಿಕೊಂಡಿರುವ ಅಡುಗೂಳಜ್ಜಿಯ ಬಳಿಗೆ ಹೋದನು. ಅವಳಿಗೆ ಸ್ವಲ್ಪ ಹಣವನ್ನು ಕೊಟ್ಟು—ನೀನು ಸಾಯುವ ಪರಿಯಂತರವೂ ನಿನಗೆ ಅನ್ನವಸ್ತ್ರಗಳನ್ನು ಕೊಟ್ಟು ಕಾಪಾಡುತ್ತೇನೆಂದು ಭಾಷೆ ಮಾಡಿ ಅವಳನ್ನು ತನ್ನ ಸ್ವಾಧೀನ ಮಾಡಿಕೊಂಡು—ಅಮ್ಮಾ! ಪ್ರತಿದಿನವೂ ಅರಮನೆಯಲ್ಲಿಯೂ ಪಟ್ಟಣದಲ್ಲಿಯೂ ನಡೆಯುವ ವಿಶೇಷ ವರ್ತಮಾನವನ್ನು ತಿಳಿಸುತ್ತಾ ನನಗೆ ಅನ್ನವನ್ನಿಟ್ಟುಕೊಂಡು ಇರು ಎಂದು ಹೇಳಿ ಮಂಚದ ಕಾಲುಗಳನ್ನೂ ತಲೆಯನ್ನೂ ಸಾಮಾನುಗಳ ಸಂಗಡ ಒಂದು ಬಳಿಯಲ್ಲಿ ಹೂಳಿಟ್ಟು ಮಲಗಿಕೊಂಡನು.

ಅಡುಗೂಳಜ್ಜಿಯು ಮುಂಗೋಳಿ ಕೂಗಿದ ಕೂಡಲೆ ಎದ್ದು ಉಪಾದಾನವನ್ನು ಮಾಡುವುದಕ್ಕೆ ಹೊರಟು ಮನೆ ಮನೆಗೆ ತಿರುಗಿ, ತನ್ನ ಗುಡಿಸಲಿಗೆ ಬಂದು ರಾಜಕುಮಾರನನ್ನು ಎಬ್ಬಿಸಿ—ಈ ದಿನ ಅರಮನೆಯಲ್ಲಿ ನಡೆದ ಸುದ್ದಿಯನ್ನು ಕೇಳು. ನಿನ್ನೆಯ ರಾತ್ರಿಯಲ್ಲಿ ದೊರೆಯು ಮಲಗುವ ಮನೆಗೆ ಕಳ್ಳರು ಬಿದ್ದು ಹವಳದ ಮಂಚದ ಕಾಲುಗಳನ್ನೂ ಕೆಲವು ವಜ್ರಪಡಿ ನಗಗಳನ್ನೂ ಕದ್ದುಕೊಂಡು ಹೋದರಂತೆ. ಆ ಕಳ್ಳರೊಳಗೆ ಒಂದು ತಲೆಯಿಲ್ಲದ ಮುಂಡ ಮಾತ್ರ ಅಲ್ಲಿ ಬಿದ್ದು ಇದೆಯಂತೆ. `ಅರಸು ತನ್ನ ಮೂಗು ಹೋಯಿತೆಂದು ಬಹಳ ವ್ಯಸನಪಡಲು ಮಂತ್ರಿಯು—ಬಿದ್ದಿರುವ ಈ ಮುಂಡದ ಕೊರಳಲ್ಲಿ ಜನಿವಾರವಿರುವುದರಿಂದ ಕಳ್ಳನು ಬ್ರಾಹ್ಮಣನಾಗಿರುವನು. ಹೊರಗಳ್ಳನಿಗೆ ಈ ಪಟ್ಟಣಕ್ಕೆ ಬರುವ ಶಕ್ತಿ ಇಲ್ಲ. ಪ್ರಾಯಶಃ ಇವನು ಒಳಗಳ್ಳನಾ

ಗಿದ್ದಾನೆ. ಈ ಮುಂಡವನ್ನು ಬಂಡಿಯ ಮೇಲೆ ಹಾಕಿಸಿ ಈ ಪಟ್ಟಣದಲ್ಲಿ ಎಲ್ಲ ಕಡೆಯಲ್ಲಿ ತಿರುಗಿಸುವುದಕ್ಕೆ ಕಳುಹಿಸಿ ಈ ಮುಂಡವನ್ನು ಕಂಡು ಯಾರು ಬಾಯಿ ಬಡುಕೊಳ್ಳುತ್ತಾರೋ ಅವರನ್ನು ಹಿಡುಕೊಂಡು ಬರುವಂತೆ ಅಪ್ಪಣೆಯನ್ನು ಕೊಡಿಸಬೇಕೆಂದನಂತೆ. ದೊರೆಯು ಹಾಗೆಯೇ ಅಪ್ಪಣೆಯನ್ನು ಕೊಟ್ಟುದರಿಂದ ಆ ಹೆಣವನ್ನು ಬೀದಿ ಬೀದಿಗಳಲ್ಲಿ ತಿರುಗಿಸಿಕೊಂಡು ಬರುತ್ತಾರೆಂದು ಹೇಳಿದಳು. ಅರಸುಮಗನು ಅಡುಗೂಳಜ್ಜಿಯು ಮಾಡತಕ್ಕ ಕೆಲಸಗಳನ್ನು ಅವಳಿಗೆ ಮೊದಲೇ ಹೇಳಿಕೊಟ್ಟು ತಾನು ಆ ಗುಡಿಸಲಿನ ಮುಂದೆ ಇರುವ ಒಂದು ನುಗ್ಗೆಯ ಮರವನ್ನು ಹತ್ತಿಕೊಂಡು ನೋಡುತ್ತಾ ಇದ್ದು ಸಮೀಪದಲ್ಲಿ ಬೀದಿಯೊಳಗೆ ಮುಂಡದ ಬಂಡಿ ಬರುವುದನ್ನು ಕಂಡು ಆ ನುಗ್ಗೆಯ ಮರದ ಒಂದು ಕೊಂಬೆಯನ್ನು ಮುರಿದು ಹಾಕಿ ತಾನೂ ಸಂಗಡಲೇ ಬಿದ್ದು ಉಸಿರು ಹಿಡುಕೊಂಡು ಮೂರ್ಛೆ ಹೋದವನ ಹಾಗಿದ್ದನು ಆ ಸಮಯದಲ್ಲಿ ಅಡುಗೂಳಜ್ಜಿಯು—ಇದ್ದ ಒಬ್ಬ ಮಗನು ಸತ್ತನಲ್ಲಪ್ಪಾ! ನನಗೇನು ಗತಿ? ಎಂದು ಬಾಯಿಬಡುಕೊಳ್ಳುತ್ತಾ ಅವನ ಮೇಲೆ ಬಿದ್ದು ಕುಯ್ಯೋ! ಮರ್ಯೋ! ಎಂದು ಅಳುತ್ತಾ ಆ ಬಂಡಿಯವರು ತನ್ನ ಬಳಿಗೆ ಬಂದುದನ್ನು ನೋಡಿ ಇನ್ನೂ ಜೆನ್ನಾಗಿ ಬಡಿಕೊಳ್ಳಲು ಅವರು—ಎಲೈ ಹುಚ್ಚು ಮುದುಕಿಯೇ! ಯಾಕೆ ದಿಗಿಲುಪಡುತ್ತೀ? ಮರದ ಕೊನೆ ಮುರಿದುಕೊಂಡು ಇವನು ಕೆಳಗೆ ಬಿದ್ದುದರಿಂದ ಜ್ಞಾನತಪ್ಪಿ ಇದೆ; ಎದೆಗೂ ಕಣ್ಣುಗಳಿಗೂ ನೀರನ್ನು ಹಾಕಿ ತಟ್ಟಿ ಸ್ವಲ್ಪ ಹೊತ್ತು ಬೀಸು; ಎಚ್ಚತ್ತುಕೊಳ್ಳುತ್ತಾನೆಂದು ಹೇಳಿದರು. ಅವರು ಹೋದಮೇಲೆ ಈ ಅರಸು ಮಗನು ಎದ್ದು ಆ ಗುಡಿಸಲನ್ನು ಕಿತ್ತು ಮತ್ತೊಂದು ಮೂಲೆಯಲ್ಲಿ ಒಡ್ಡಿಗೊಂಡು ಅಲ್ಲಿ ಅಡುಗೂಳಜ್ಜಿಯೊಡನೆ ಇದ್ದನು ಬಂಡಿಯವರು ಊರಲ್ಲೆಲ್ಲ ತಿರಿಗಿಸಿಕೊಂಡು ಬಂದು—ಸ್ವಾಮಿ! ಬುದ್ಧೀ! ಈ ಹೆಣವನ್ನು ಕಂಡು ಯಾರೂ ಅಳಲಿಲ್ಲ. ಒಬ್ಬ ಮುದುಕಿಯು ಮಾತ್ರ ತನ್ನ ಮಗನು ನುಗ್ಗೆಯ ಮರವು ಮುರುಕೊಂಡುದರಿಂದ ಕೆಳಗೆ ಬಿದ್ದು ಜ್ಞಾನತಪ್ಪಿರುವುದನ್ನು ನೋಡಿ ತನ್ನ ಮಗನು ಸತ್ತನೆಂದು ಬಡುಕೊಂಡಳು. ಅವಳಿಗೆ ನಾವು ಸಮಾಧಾನವನ್ನು ಹೇಳಿ ಬಂದೆವು ಇಷ್ಟೇ ಸರಿ, ಬುದ್ಧಿ! ಎನಲು ಅರಸು—ಆ ಮರದಿಂದ ಬಿದ್ದವನೇ ಕಳ್ಳನು. ಅವನ ಮೋಸಕ್ಕೆ ಮರುಗಿ ಬಿಟ್ಟು ಬಂದಿರಿ ಎಂದು ಹೇಳಿ ಅವರನ್ನು ಕಳುಹಿಸಿಬಿಟ್ಟು ವ್ಯಸನದಿಂದ ಒಳಗೆ ಹೋಗಿ ಮಲಗಿಕೊಂಡನು.

ಮಾರಣೆಯ ದಿವಸ ಅಡುಗೂಳಜ್ಜಿಯು ಎಂದಿನಂತೆ ಯಾಯಿವಾರಕ್ಕೆ ಹೋಗಿ ಬಂದು ಅರಸುಮಗನೊಡನೆ—ಅರಸು ಆ ದಿನ ಸಾಯಂಕಾಲದಲ್ಲಿ ತಲೆಯಿಲ್ಲದ ಮುಂಡವನ್ನು ಮಸಣದಲ್ಲಿ ಸುಡುವಂತೆ ನೇಮಿಸಿ, ಅಲ್ಲಿಗೆ ಯಾರಾದರೂ ಬಂದು ಆ ಚಿತೆಯಲ್ಲಿ ತಲೆಯನ್ನು ಹಾಕಿದರೆ ಅವರನ್ನು ಹಿಡುಕೊಂಡು ಬರುವಹಾಗೆ ಕಾವಲಿನವರಿಗೆ ಅಪ್ಪಣೆಯನ್ನು ಕೊಟ್ಟು ಕಳುಹಿಸಿದ್ದಾನಂತೆ ಎಂದು ಹೇಳಲು ರಾಜಕುಮಾರನು ಬೇಗ ಅಡಿಗೆಯನ್ನು ಮಾಡಿಸಿಕೊಂಡು ಉಂಡು ಕಪ್ಪಾದ ಜರಿಯ ಕಂಬಿಯ ರುಮಾಲನ್ನು ತಲೆಗೆ ಸುತ್ತಿಕೊಂಡು ಪಟ್ಟಿಯ ತುಂಡುಜೊಗೆಯನ್ನು

ಇಟ್ಟುಕೊಂಡು ಚಿನ್ನದ ಕಂಬಿಯೂ ಬುಗುಡಿಯೂ ಹಾಕಿರುವ ಅಂಚಿನ ಮಡಿಕೆಯ ಧೋತ್ರವನ್ನು ಮೂಲಗಚ್ಚೆ ಹಾಕಿ ಉಟ್ಟುಕೊಂಡು ಪುಟಾಣಿಯ ಹಚ್ಚಡವನ್ನು ಹೊದ್ದುಕೊಂಡು ಎದೆಯಲ್ಲಿ ಹಾವೇರಿಯ ಚೌಕದ ಕರಡಿಗೆಯನ್ನೂ ಕೊರಳಲ್ಲಿ ರುದ್ರಾಕ್ಷಿ ಮಾಲಿಕೆಯನ್ನೂ ಮುಖದಲ್ಲಿ ವಿಭೂತಿಯನ್ನೂ ಧರಿಸಿ ದೇಶದ ಜೋಡನ್ನು ಮೆಟ್ಟಿ ಕೈಯ್ಯಲ್ಲಿ ಬೆತ್ತದ ಜಡಿಯನ್ನು ಹಿಡಿದು ಕಲ್ಯಾಣಪುರದ ಕೋರೀಬಸವಸೆಟ್ಟರ ಕಡೆಯ ಗುಮಾಸ್ತನೆಂದು ಕೇಳಿದವರಿಗೆ ಹೇಳಿಕೊಂಡು ಗಂದಿಗ ಸಾವಕಾರನ ಬಳಿಗೆ ಹೋಗಿ ಐದು ಸಾವಿರ ರುಪಾಯಿಗಳಿಗೆ ಒಂದು ರತ್ನವನ್ನು ಕೊಟ್ಟು ಅದಕ್ಕೆ ಸರಿಯಾಗಿ ಪರಿಮಳದ ಎಣ್ಣೆಗಳನ್ನೂ ಆರತಿಕರ್ಪೂರ ಗಂಧ ಮುಂತಾದ ವಸ್ತುಗಳನ್ನೂ ಗೋಣಿಗಳಲ್ಲಿಯೂ ಬುದ್ದಲಿಗಳಲ್ಲಿಯೂ ತುಂಬಿಸಿ ಒಬ್ಬರೂ ಕಾಣದಂತೆ ಒಂದು ಗೋಣಿಯ ಮೂಲೆಗೆ ಆ ತಲೆಯನ್ನು ಹಾಕಿಕೊಂಡು ನೂರಾರು ಬಾಡಿಗೆ ಎತ್ತುಗಳ ಮೇಲೆ ಅವುಗಳನ್ನೆಲ್ಲಾ ಹೇರಿಸಿ ಬಾಡಿಗೆದಾರರನ್ನು ಕೂಡಿಕೊಂಡು ಹೊರಟು ಸಾಯಂಕಾಲವಾದ ಜಾವಹೊತ್ತಿಗೆ ಕಾಡುವುರದ ಬಳಿಗೆ ಹೋದನು. ನೂರಾರು ಎತ್ತುಗಳ ಕೊರಳುಗಳಿಗೆ ಕಟ್ಟಿದ್ದ ಘಂಟೆಗಳ ಘಣ ಘಣ ಶಬ್ದದಿಂದ ಕೂಡಿ ಬರುತ್ತಿರಲು ಇವರಾರು ಇಷ್ಟುಹೊತ್ತಿನಲ್ಲಿ ಒರುವವರು? ಇಲ್ಲಿ ಬರುವುದಕ್ಕೆ ಅಪ್ಪಣೆಯಿಲ್ಲ. ದಾರಿಯನ್ನು ಹಿಡುಕೊಂಡು ಹೋಗಿರಿ ಎಂದು ಮಸಣದ ಕಾವಲಿನವರು ಅವರನ್ನು ಅಡ್ಡಿಮಾಡಲು ಅರಸುಮಗನು ಅವರನ್ನು ಕುರಿತು—ವಿದ್ಯಾಮಂಜರಿಯ ಮದುವೆಗಾಗಿ ದೊರೆ ಅಪ್ಪಣೆ ಕೊಟ್ಟ ಪ್ರಕಾರ ದ್ವೀಪಾಂತರಗಳಿಂದ ಸಾಮಾನುಗಳನ್ನು ತಂದು ಇದ್ದೇನೆ. ನಾನು ದೊರೆಗೆ ಪ್ರಿಯನಾದ ಧನಪಾಲಶೆಟ್ಟಿ ಎಂಬುದನ್ನು ಕಾಣಿರಾ? ಪರಸ್ಥಳದ ಬಾಡಿಗೆದಾರರು ದಾರಿತಪ್ಪಿ ಕಾಣದೆ ಬಂದರು. ಅಡ್ಡಿಮಾಡಬೇಡಿರಿ ಎಂದು ಎಷ್ಟು ಒಡಂಬಡಿಸಿದಾಗ್ಗೂ ಕೇಳದೆ ಇದ್ದುದರಿಂದ ಕೋಪಿಸಿಕೊಂಡು—ಬೆಳಿಗ್ಗೆ ಅರಸಿಗೆ ಹೇಳಿ ಇವರಿಗೆ ತಕ್ಕ ಪ್ರಾಯಶ್ಚಿತ್ತವನ್ನು ಮಾಡಿಸುತ್ತೇನೆ, ಈ ಗೋಣಿ ಬುದ್ದಲಿಗಳನ್ನೆಲ್ಲಾ ಈ ಬೆಂಕಿಗೆ ಹಾಕಿಬಿಡಿ ಎಂದು ಬಾಡಿಗೆದಾರರಿಗೆ ಅಪ್ಪಣೆಯನ್ನು ಕೊಡಲು ಅವರು ಕೇವು ಎಣ್ಣೆಯ ಬುದ್ದಲಿಗಳನ್ನು ಬೆಂಕಿಗೆ ಹಾಕಲು ಅದರ ಉರಿಗೆ ಹತ್ತರ ನಿಲ್ಲಲಾರದೆ ಕಾವಲಿನವರು ದೂರವಾಗಿ ಓಡಿಹೋಗಿ ನಿಂತುಕೊಂಡು ನೋಡುತ್ತಿದ್ದರು ಇವನು ಉಳಿದ ಬುದ್ದಲಿಗಳನ್ನೂ ಗೋಣಿಗಳೆಲ್ಲವನ್ನೂ ಬೆಂಕಿಗೆ ಹಾಕಿಸಿ ಕಾವಲುಗಾರರನ್ನು ನೋಡಿ—ಒಳ್ಳೆಯದೆಲೆ! ಸೆರಗಿನಲ್ಲಿ ಗಂಟುಹಾಕಿಕೊಂಡಿರಿ! ಬೆನ್ನಿಗೆ ಎಣ್ಣೆ ಸವರಿಕೊಂಡಿರಿ! ನಾಳೆ ನಿಮ್ಮ ಮನೆಗಳನ್ನೆಲ್ಲಾ ಮುಟ್ಟುಗೋಳ ಹಾಕಿಸಿಕೊಳ್ಳುತ್ತೇನೆ! ನಿಮ್ಮ ತಲೆಗೆ ಬಂತು! ಎಂದು ಹೇಳುತ್ತಾ ಸ್ವಲ್ಪ ದೂರ ಹೋಗಿ ಬಾಡಿಗೆದಾರರಿಗೆ ಬಾಡಿಗೆಯ ಹಣಗಳನ್ನೂ ಉಡಿಗೆರೆಗಳನ್ನೂ ಕೊಟ್ಟು ತಾನು ಅಡುಗೂಳಜ್ಜಿಯ ಮನೆಗೆ ಹೋಗಿ ಉಂಡು ಮಲಗಿಕೊಂಡನು.

ಬೆಳಿಗ್ಗೆ ಯಥಾಪ್ರಕಾರ ಅಡುಗೂಳಜ್ಜಿಯು ತಿರಿಗಿಕೊಂಡು ಬಂದು—ಅವ್ವಾ! ಈ ಹೊತ್ತಿನ ಸುದ್ದಿಯನ್ನು ಕೇಳೋ; ನಿನ್ನೆಯ ದಿವಸದ ರಾತ್ರಿ ಸ್ಮಶಾನದಲ್ಲಿ ಕಾವಲಿದ್ದವರು ಬೆಳಿಗ್ಗೆ ಅರಸಿನ ಬಳಿಗೆ ಬಂದು ಅಡಿದಂಡ ಪಡಿದಂಡ ಬಿದ್ದು—

ಬುದ್ಧೀ ಕೆಲವರು ದುರುಳರು ಧನಪಾಲಸೆಟ್ಟಿಗೆ ದಾರಿಯನ್ನು ಕೊಡದೆ ಹೋದುದ
ರಿಂದ ಸೆಟ್ಟರು ಕೋಪಿಸಿಕೊಂಡು ಸಾವಿರಾರು ಹೇರುಗಳನ್ನು ಬೆಂಕಿಗೆ ಹಾಕಿಸಿ
ಸುಟ್ಟುಬಿಟ್ಟರು. ಪಾದದ ಚಾಕರರು ನಾವೊಬ್ಬರೂ ತಪ್ಪುಮಾಡಲಿಲ್ಲ. ಮನ್ನಿಸಬೇ
ಕೆಂದು ಬೇಡಿಕೊಂಡರಂತೆ. ಅರಸು ಅವರ ಮಾತಿಗೆ ನಕ್ಕು—ಪಕ್ಕಾ ಕಳ್ಳ? ಅವನು
ರುಂಡವನ್ನು ಮುಂಡಕ್ಕೆ ಹೇರಿನಲ್ಲಿ ಹಾಕಿ ಇದ್ದು ಕೂಡಿಸಿಬಿಟ್ಟನು. ಶಾಬಾಸು!
ಎಂದು ಕಳ್ಳನನ್ನು ಕೊಂಡಾಡಿ ಬೂದಿ ತೆಗೆದುಕೊಂಡು ಹೋಗುವುದಕ್ಕೆ ಕಳ್ಳನು
ಕಾಡುಪುರಕ್ಕೆ ಈ ದಿವಸ ಬರುವನು. ಇನ್ನು ಯಾರನ್ನು ಕಾವಲಿಟ್ಟರೂ ಅವರಿಗೆ
ಎಂಗಿ ಹಾಕಿ ತೆಗೆದುಕೊಂಡು ಹೋಗುವನು. ನಾನೇ ಹೋಗಿ ಕಳ್ಳನನ್ನು ಹಿಡಿಯು
ತ್ತೇನೆಂದು ಕಾಡುಪುರದಲ್ಲಿ ಗುಡಾರವನ್ನು ಹಾಕಿಸಿಕೊಂಡು ಸುತ್ತುಮುತ್ತೂ ಪಹ
ರೆಯನ್ನು ಇಟ್ಟುಕೊಂಡು ದೊರೆಯೇ ಹೋಗಿ ಬೂದಿಯ ಬಳಿಯಲ್ಲಿ ಕೂತಿದ್ದಾನಂತೆ
ಎಂದು ಹೇಳಿದಳು. ಅದನ್ನು ಕೇಳಿ ಈ ಅರಸುಮಗನು ಸಾಯಂಕಾಲದವರೆಗೂ
ಮಲಗಿ ನಿದ್ದೆಮಾಡಿ ಎದ್ದು ಕನ್ನಗತ್ತರಿಯನ್ನು ತೆಗೆದುಕೊಂಡು ಹೊರಟು ಅರ
ಸಿನ ನಿದ್ದೆಯ ಕೊಟಡಿಗೆ ಕನ್ನವನ್ನು ಇಕ್ಕಿ ಒಳಹೊಕ್ಕು ನೋಡುವಲ್ಲಿ ಬೇಸಿಗೆಯ
ಕಾಲವಾದುದರಿಂದ ಅರಸಿಯು ತನ್ನ ಎಲ್ಲ ಒಡವೆಗಳನ್ನೂ ಕಳಚಿ ಚಿನ್ನದ ಹರಿವಾ
ಣದಲ್ಲಿಟ್ಟು ತೊಟ್ಟ ಮಾಣಿಕ್ಯದ ಕುಪ್ಪಸವನ್ನೂ ಮುತ್ತಿನ ಸೀರೆಯನ್ನೂ ನೆರೆಕಟ್ಟು
ಸಹಿತ ಗೂಟಕ್ಕೆ ತಗಲಹಾಕಿ ಸಣ್ಣ ಶಲ್ಯವನ್ನು ಉಟ್ಟುಕೊಂಡು ಮಲಗಿ ನಿದ್ರೆಯ
ನ್ನು ಮಾಡುತ್ತಾ ಇದ್ದಳು. ಇವನು ಆ ಒಡವೆಗಳನ್ನೆಲ್ಲಾ ಇಟ್ಟುಕೊಂಡು ಮುತ್ತಿನ
ಸೀರೆಯನ್ನು ಉಟ್ಟುಕೊಂಡು ಮಾಣಿಕ್ಯದ ಕುಪ್ಪಸವನ್ನು ತೊಟ್ಟುಕೊಂಡು ಕಸ್ತೂ
ರಿಯ ತಿಲಕವನ್ನು ಇಟ್ಟು ಕಣ್ಣಿಗೆ ಕಾಡಿಗೆ ಹಚ್ಚಿಕೊಂಡು ತಲೆಯನ್ನು ಬಾಚಿ
ತುರುಬು ಹಾಕಿಕೊಂಡು ಮೆಲ್ಲಗೆ ಕದವನ್ನು ತೆಗೆದು—ಅವನಾರೋ ಬಾಗಿಲಲ್ಲಿ
ಗೊಲ್ಲರವನು? ಎಂದು ಕೂಗಲು ಗೊಲ್ಲರ ಗೊತ್ತುಗಾರನು ಓಡಿಬಂದು
ಅಡ್ಡಬಿದ್ದು—ಬುದ್ಧೀ! ಏನಪ್ಪಣೆ? ಎಂದು ಭಯದಿಂದ ಕೇಳಲು ದೊರೆಗಳು
ಕಳ್ಳನ ಕೈಗೆ ಸಿಕ್ಕಿ ಭಂಗಪಡುವುದಾಗಿ ಕನಸು ಕಂಡೆವು. ಎದೆ ಝಗ್ಗನ್ನುತ್ತದೆ.
ತಾಳಲಾರೆವು ಬೇಗ ಪಾಲಕಿಯನ್ನು ತರಿಸು ಎಂದು ಹೇಳಿ ತರಿಸಿಕೊಂಡು ಗೌಸು
ಹಾಕಿಸಿ ಕಾಡುಪುರಕ್ಕೆ ಬರಲು ಮುಂಚಿತವಾಗಿಯೇ ಗೊಲ್ಲರ ಗೊತ್ತುಗಾರನು
ವರದಿಯನ್ನು ಹೇಳಿದುದರಿಂದ ಅರಸು ಕೋಪದಿಂದ ಉರಿದುಬೀಳುತ್ತಾ ಇದ್ದನು.
ಅಷ್ಟರಲ್ಲಿಯೇ ಪಾಲಕಿಯನ್ನು ಹೊತ್ತು ಇದ್ದ ಬೆಸ್ತರು ಗುಡಾರದ ಒಳಗೆ ಪಾಲಕಿ
ಯನ್ನು ಇರಿಸಿ ಹೊರಗೆ ಹೋದರು. ಈ ಅರಸುಮಗನು ಗೌಸನ್ನು ತೆಗೆದು ಹೊರಗೆ
ಬಂದು ಅರಸನ ಬಳಿಯಲ್ಲಿ ನಿಂತನು. ಅರಸು ಕೋಪದಿಂದ ಕಣ್ಣೆತ್ತಿ ನೋಡದೆ—
ನಿನಗೇನು ಹುಚ್ಚು ಹಿಡಿಯಿತೇ? ಈ ರಾತ್ರಿ ವೇಳೆಯಲ್ಲಿ ಮಸಣಕ್ಕೆ ಬರಬಹುದೇ?
ಎಂದು ತಳ್ಳಲು ಅಷ್ಟು ಮಾತ್ರಕ್ಕೆ ಕೆಳಗೆ ಬಿದ್ದು ಕತ್ತಿನ ಮುತ್ತಿನಸರವನ್ನು ಕಿತ್ತು
ಆಗಲಕ್ಕೆ ಜೆಲ್ಲಿ ಶಿಖೀಸರ ಹರಿದು ಜೆಲ್ಲಿತೆಂದು ಅಳುತ್ತಾ ಒಂದೊಂದು ಮುತ್ತಾಗಿ
ಹುಡುಕಿ ಆಯುತ್ತಾ ಇರಲು ಆ ಶಿಖೀಸರವು ತಮ್ಮ ಕುಲಕ್ರಮವಾಗಿ ಬಂದಂಥಾದು

ಪಾದುದರಿಂದ—ಮನೆಗೆ ಹೋಗಿ ಆಯಿಸಿಕೋ! ಎಂದು ಅರಸು ಜೆಲ್ಲಿದಷ್ಟು ಅಗ
ಲಕ್ಕೂ ಮುತ್ತುಗಳನ್ನೂ ಉಂಗುರಗಳನ್ನೂ ಬೂದಿ ಸಹ ಬಾಚಿ ಪಾಲಕಿಯಲ್ಲಿ ತುಂಬಿ
ಕೊಟ್ಟು ಕಳುಹಿಸಿಬಿಟ್ಟನು ಇವನು ತಿರಿಗಿ ಮನೆಗೆ ಬಂದು ಪಾಲಕಿಯಿಂದ ಇಳಿದು
ಎಂದಿನಂತೆ ಚಿಕ್ಕ ಮನೆಗೆ ಹೋಗಿ—ಈ ಅರಸಿಯನ್ನು ನನ್ನ ತಾಯಿಯಂತೆ ಕಂಡಿದ್ದೇ
ನೆಂದು ಒಂದು ಚೀಟಿಯನ್ನು ಬರೆದು ಆಕೆಯ ತೋಳಿಗೆ ಕಟ್ಟಿ ಪಾಲಕಿಯಲ್ಲಿದ್ದ
ಬೂದಿಯನ್ನು ಪೆಟ್ಟಿಗೆಗೆ ತುಂಬಿ ತೆಗೆದುಕೊಂಡು ಮೊದಲು ಕೊರೆದಿದ್ದ ಕನ್ನದ
ಲ್ಲಿಯೇ ಈಚಿಗೆ ಹೊರಟು ಬಂದು ಅಡುಗೂಳಜ್ಜಿಯ ಮನೆಯನ್ನು ಸೇರಿ ರವಿಕೆ
ಒಡವೆಗಳನ್ನು ಕಳೆದು ಬೂದಿಯೊಡನೆ ಒಂದು ಕಡೆಯಲ್ಲಿ ಬಚ್ಚಿಟ್ಟು ಸ್ವಸ್ಥವಾಗಿ
ಮಲಗಿಕೊಂಡನು

ಮುಂಜಾವದಲ್ಲಿ ಅಡುಗೂಳಜ್ಜಿಯು ತಿರುಗಿ ಬಂದು ನಗುತ್ತಾ —ತಮ್ಮಾ!
ಈ ದಿನದ ವಾರ್ತೆಯನ್ನು ಕೇಳವ್ವಾ! ನಿನ್ನೆಯ ರಾತ್ರಿ ಕಳ್ಳನು ಅರಸಿಗೂ ಕೂಡ
ಮಂಕುಬೂದಿಯನ್ನು ತಳೆದು ಬೂದಿಯನ್ನು ತೆಗೆದುಕೊಂಡು ಹೋದನಂತೆ ಅರಸು
ರಾತ್ರಿಯೆಲ್ಲಾ ಪಿತೃವನದಲ್ಲಿ ದೈವವೇ ಎಂದು ನಿದ್ದೆಗೆಟ್ಟಿದ್ದು ಪ್ರಾತಃಕಾಲದಲ್ಲಿ
ಬಂದು ಮಲಗುವ ಮನೆಗೆ ಹೋಗಿ ಹೆಂಡತಿಯು ಉಟ್ಟು ತೊಟ್ಟಿದ್ದುದನ್ನೆಲ್ಲಾ ಕಳ
ಕೊಂಡು ಅಳುತ್ತಾ ಇರುವುದನ್ನೂ ತೋಳಿನ ಚೀಟನ್ನೂ ಕಳ್ಳನು ಕೊರೆದ ಕನ್ನವನ್ನೂ
ನೋಡಿ—ಛೀ! ಛೀ! ನನ್ನ ಬಾಳು ಎಂಥಾದುದು? ಹೀಗೆ ಲೋಕದಲ್ಲೆಲ್ಲಾ ಅಪ
ಹಾಸ್ಯವಾಗಿ ಬದುಕುವುದಕ್ಕಿಂತ ಸಾಯುವುದು ಲೇಸು! ಎಂದು ಚಿಂತಾಕ್ರಾಂತ
ನಾಗಿ ಮಂಚದ ಮೇಲೆ ಮೊಗಮಡಿಯಾಗಿ ಬಿದ್ದುಕೊಂಡನಂತೆ. ಇದನ್ನು ಪ್ರಧಾನಿ
ಯು ಕೇಳಿ ಅರಸಿನ ಬಳಿಗೆ ಬಂದು—ಸಟಕವಿದ್ದು ನೀವು ಕೈಯನ್ನು ಯಾಕೆ ಸುಟ್ಟು
ಕೊಳ್ಳುತ್ತೀರಿ? ಪಾದಸೇವಕನಾದ ನಾನು ಯಾವ ತೆರದಲ್ಲಿಯಾದರೂ ಆ ಕಳ್ಳನನ್ನು
ಹಿಡಿದುಕೊಡುತ್ತೇನೆಂದು ಅರಸನನ್ನು ಧೈರ್ಯಗೊಳಿಸಿ ಹೊರಗೆ ಬಂದು ಆ ಕಳ್ಳನು ನಿನ್ನೆ
ತೆಗೆದುಕೊಂಡು ಹೋದ ಬೂದಿಯನ್ನು ನೀರಿನಲ್ಲಿ ಕದಡುವ ಸಂಜಯನವೆಂಬ ಕರ್ಮ
ವನ್ನು ಮಾಡದ ಹಾಗೆ ಬೆಸ್ತರನ್ನು ಕರಿಸಿ—ನೀವು ಎಲ್ಲಾ ಜಲಸ್ಥಾನಗಳಲ್ಲಿಯೂ
ಕಾವಲು ಇದ್ದು ಕೊಂಡು ಅಲ್ಲಿ ಯಾರಾದರೂ ಬೂದಿಯನ್ನು ಕದಡುವುದಕ್ಕೆ ಬಂದರೆ
ಅವರನ್ನು ಹಿಡುಕೊಂಡು ಒನ್ನಿರಿ ಎಂದು ನೇಮಿಸಿ ಕಳುಹಿಸಿದ್ದಾನಂತೆ ಎಂದು ಹೇಳಲು
ಈ ರಾಜಕುಮಾರನು ಊಟವನ್ನು ಮಾಡಿ ಚಂದ್ರಗಾವಿಯ ರುಮಾಲನ್ನು ಸುತ್ತಿ
ಕುತ್ತಿಯ ಜಲ್ಲಣವನ್ನು ಇಟ್ಟುಕೊಂಡು ಬಿಳಿಯ ಶಲ್ಯದ ಅಂಗಿಯನ್ನು ತೊಟ್ಟು
ಕೊಂಡು ಒಂದು ಆಡ್ಡೆಯನ್ನು ತೆಗೆದುಕೊಂಡು ಅದರ ಒಂದು ಕಡೆಯಲ್ಲಿ ನಾಲ್ಕೈದು
ಪುಟ್ಟಿಗಳನ್ನು ಇಟ್ಟು ಮತ್ತೊಂದು ಕಡೆಯಲ್ಲಿ ಒಂದು ಸಣ್ಣ ಕರಿಯ ಕಂಬಳಿಯನ್ನೂ
ಹಳೆಯ ಜಮಖಾನವನ್ನೂ ತಂಬಿಗೆ ಗಂಗಳ ರೊಟ್ಟಿ ಬುತ್ತಿ ಸಹಿತವಾದ ಒಂದು
ಹಸಿಬೆಯ ಚೀಲವನ್ನೂ ಇರಿಸಿ ಮುತ್ತು ಉಂಗುರಗಳನ್ನು ಬೇರೆ ತೆಗೆದು ಆ ಪುಟ್ಟಿಗ
ಳಲ್ಲಿ ಕೆಳಗಿರುವ ಬುಟ್ಟಿಗೆ ನಿನ್ನೆ ತಂದ ಬೂದಿಯನ್ನು ತುಂಬಿ ಹೆಗಲ ಮೇಲೆ ಹೊತ್ತು
ಕೊಂಡು ಬೀಸುಬಲೆ ಕೋಲು ಸಹ ತೆಗೆದುಕೊಂಡು ಹೊರಟು ಜಗ್ಗು ಹಾಕುತ್ತಾ

ಹೊಳೆಯ ದಡಕ್ಕೆ ಬರಲು ಅಲ್ಲಿ ಕಾವಲು ಇದ್ದ ಬೆಸ್ತರು ಇವನ ಠೀವಿಗೆ ಬೆರಗಾಗಿ—ಯಾವೂರಪ್ಪಾ ನೀವು? ಹೊಸಬರಾಗಿ ಕಾಣಿಸುತ್ತೀರಿ ಎಂದು ಕೇಳಿದರು. ಇವನು—ಏನಲೇ! ಕಣ್ಣು ಕಾಂಬೋದಿಲ್ಲವೋ? ನಾನು ಅರಸುಮಗಳಾದ ವಿದ್ಯಾಮಂಜರಿಯ ಅಡಿಗೆಯ ಮನೆಗೆ ನಿತ್ಯವೂ ಮೀನುಗಳನ್ನು ತಂದು ಕೊಡುವ ಗಿರಿಜೆಯ ಹನುಮಾ ಬೋಯಿ ಎಂಬುವುದು ತಿಳಿಯದೇ? ಎಂದು ಹೇಳಿ ಬಲೆಯನ್ನು ಹೊಳೆಯಲ್ಲಿ ಬೀಸಿ ಮೀನನ್ನು ಹಿಡಿದು ಮಳಲಿನ ಮೇಲೆ ಸುರಿಯಲು ಕಾವಲಿದ್ದ ಬೆಸ್ತರ ಹುಡುಗರು ಕೆಲವು ಮೀನುಗಳು ತೆಗೆದುಕೊಂಡುದರಿಂದ ಕೋಪಿಸಿಕೊಂಡು ಪುಟ್ಟಿಗಳು ಬಲೆ ಊಟದ ಸಾಮಾನು ಹಾಸಿಗೆಯ ಸಾಮಾನುಗಳನ್ನು ಅಡ್ಡೆಯೊಡನೆ ಹೊಳೆಯಲ್ಲಿ ದೂರವಾಗಿ ಒಗೆದು ನಿಮಗೆ ತಕ್ಕುದನ್ನು ಮಾಡಿಸುತ್ತೇನೆಂದು ಹೇಳಿ ಅಡಗೂಳಜ್ಜಿಯ ಗುಡಿಸಲಿಗೆ ಬಂದು ಮಲಗಿಕೊಂಡನು.

ಪ್ರಾತಃಕಾಲದಲ್ಲಿ ಅಡಗೂಳಜ್ಜಿಯು ಸಂಚಾರಕ್ಕೆ ಮತ್ತೂ ಹೋಗಿ ಬಂದು—ಕಳ್ಳನು ನಿನ್ನೆ ಬೆಸ್ತರಿಗೆ ಮೋಸವನ್ನು ಮಾಡಿ ಬೂದಿಯನ್ನು ಕದಡುವ ಸಂಚಯನವೆಂಬ ಕರ್ಮವನ್ನು ನೆರವೇರಿಸಿದುದಾಗಿ ಮಂತ್ರಿಯು ಚಾರರ ಮುಖದಿಂದ ಕೇಳಿ—ಈ ದಿನ ಯಾರಾದರೂ ಪಿಂಡವನ್ನು ಬೇಸಿ ಹಾಕಿದರೆ ಅವರನ್ನು ಹಿಡುಕೊಂಡು ಬನ್ನಿರಿ ಎಂದು ಕಟ್ಟುಮಾಡಿ ಹಾರವರನ್ನೇ ಹೊಳೆಯ ದಡದಲ್ಲೆಲ್ಲಾ ಕಾವಲು ಇರಿಸಿದ್ದಾನಂತೆ ಎಂದು ತಿಳಿಸಿದಳು. ಆಗ ಅರಸುಮಗನು ಒಂದು ಹಳೆಯ ಹರಕು ಪಂಜೆಯನ್ನು ಉಟ್ಟುಕೊಂಡು ಮತ್ತೊಂದು ಪಂಜೆಯನ್ನು ಹೆಗಲ ಮೇಲೆ ಹಾಕಿಕೊಂಡು ಒಂದು ಹಳೆಯ ಅರಿವೆಯಲ್ಲಿ ಒಂದು ಸೇರು ಅಕ್ಕಿಗೆ ಪಾವುಸೇರು ಹೆಸರು ಸ್ವಲ್ಪ ಅಚ್ಚೆಳ್ಳು, ತುಸ ಬೆಲ್ಲ ತುಪ್ಪ ಇವುಗಳನ್ನು ಬೆರಸಿ ಗಂಟುಕಟ್ಟಿ ಅದನ್ನು ಒಂದು ತಪ್ಪಲೆಯಲ್ಲಿ ತುರುಕಿಕೊಂಡು ಜೆಂಬು ಸ್ವಲ್ಪ ಬೆರಣಿ ಸಹ ತೆಗೆದುಕೊಂಡು ಅಡುಗೂಳಜ್ಜಿಗೆ ಹೇಳತಕ್ಕ ಮಾತನ್ನು ಹೇಳಿಕೊಟ್ಟು ಅವಳು ಹಿಂದೆ ಓಡಿಬರುವಂತೆ ಸೂಚಿಸಿ ತಾನು ಮುಂದೆ ಮುಂದೆ ಹೊಳೆಯ ಒಳಿಗೆ ಓಡಿಹೋದನು ಆಗ ಹಿಂದೆ ಓಡಿಓಡಿ ಬರುತ್ತಾ ಇದ್ದ ಅಡುಗೂಳಜ್ಜಿಯು ಕಾವಲಿರುವ ಬ್ರಾಹ್ಮಣರನ್ನು ನೋಡಿ—ಅಪ್ಪಾ! ಅಪ್ಪಾ! ನೋಡಿದಿರಾ? ನಾನು ಈ ಮಗನನ್ನು ತಪಿಸಿ ಹೆತ್ತೆನು. ಮೂರು ದಿವಸದಿಂದ ಹೊಟ್ಟೆಗೆ ಅನ್ನವನ್ನು ಕೊಡದೆ ಕೊಲ್ಲುತ್ತಾನೆ. ಈ ಹೊತ್ತು ದೂರಕ್ಕೆ ಓಡಿಹೋಗಿ ನಡೆಯಲಾರದ ಮುದುಕಿಯಾದ ನಾನು ಹೋಗುವುದರೊಳಗಾಗಿ ತಾನು ಬೇಸಿಕೊಂಡು ತಿಂದು—ನೀನು ಬರಲಿಲ್ಲ. ನಾನು ಏನು ಮಾಡಲಿ? ಎಂದು ಹೇಳಿಬಿಡುತ್ತಾನೆಂದು ದೈನ್ಯದಿಂದ ಹೇಳಿಕೊಂಡಳು. ಅವರು ಕರುಣ ಹುಟ್ಟಿ—ಎಲಾ ಅಪ್ಪಾ! ಹೆತ್ತತಾಯಿಯನ್ನು ಹೀಗೆ ಗೋಳಾಡಿಸಬಾರದು. ಪಾಪ! ಇಲ್ಲಿಯೇ ಅಡಿಗೆಯನ್ನು ಮಾಡಿ ಅವಳಿಗೂ ಇಕ್ಕಿ ನೀನೂ ಉಂಡು ಹೋಗು. ನಿನ್ನ ಸಂಗಡ ನಡೆಯುತ್ತಾಳೆಯೆ? ಅಂದರು. ಆಗ ಅರಸುಮಗನು ಹೊಳೆಯಲ್ಲಿ ಮುಳುಗಿ ಒದ್ದೆಯನ್ನು ಉಟ್ಟುಕೊಂಡು ತಪ್ಪಲೆ ಜೆಂಬುಗಳನ್ನು ಬೆಳಗಿಕೊಂಡು ಹಣೆಗೆ ವಿಭೂತಿ ಹಚ್ಚಿ ಬೆರಣಿಯ ತಾಳಿಯನ್ನು ಒಟ್ಟಿ ಚಕುಮುಕಿಯಲ್ಲಿ ಬೆಂಕಿಯನ್ನು ಹಚ್ಚಿ ಅನ್ನವನ್ನು ಬೇಯಿಸಿ

ಒಂದು ದೊಡ್ಡ ಉಂಡೆಯನ್ನೂ ಎರಡು ಚಿಕ್ಕ ಉಂಡೆಗಳನ್ನೂ ಮಾಡಿ—ಬಾರೇ ಅಮ್ಮಾ! ಎಂದು ಕೂಗಿದನು. ಅಡುಗೂಳಜ್ಜಿಯು ನೋಡಿ—ಏನಿರಪ್ಪಾ! ಈ ಅನ್ಯಾಯ ಉಂಟೇ! ಒಂದು ದೊಡ್ಡ ಉಂಡೆಯನ್ನೂ ಒಂದು ಚಿಕ್ಕ ಉಂಡೆಯನ್ನೂ ತಾನು ತಿನ್ನುತ್ತಾನೆ; ನನಗೆ ಒಂದು ಚಿಕ್ಕ ಉಂಡೆಯನ್ನು ಬಡಿಸುತ್ತಾನೆ. ಮೂರು ದಿನದಿಂದ ಉಪವಾಸವಾಗಿ ಇದ್ದವಳಿಗೆ ಇದರಿಂದ ಹೊಟ್ಟೆಯು ತುಂಬೀತೇ? ಅಂದಳು. ಆಗ ಅವರು—ಸರಿಯಾಗಿ ಎರಡು ಉಂಡೆಗಳನ್ನು ಮಾಡಿ ಆಕೆಗೆ ಒಂದನ್ನು ಕೊಟ್ಟು ನೀನು ಒಂದನ್ನು ಉಣ್ಣು ಅಂದರು. ಅರಸುಮಗನು—ಈ ಹಾಳು ತಾಯಿಯ ಕಾಟ ನನಗೆ ಎಂದಿಗೆ ತಪ್ಪೀತೋ? ದೇವರೇ! ಎಂದು ಹೇಳುತ್ತಾ ಕೋಪವನ್ನು ಮಾಡಿಕೊಂಡು—ಇವಳಿಗೂ ಬೇಡ ನನಗೂ ಬೇಡ ಎಂದು ಆ ಉಂಡೆಗಳನ್ನು ತಪ್ಪಲೆ ಜೆಂಬುಗಳೊಡನೆ ಹೊಳೆಗೆ ಎಸೆದುಬಿಟ್ಟು ಹಿಂದಿರುಗಿ ಗುಡಸಲಿಗೆ ಬಂದು ಸೇರಿಕೊಂಡನು. ಅಡುಗೂಳಜ್ಜಿಯು ಸ್ವಲ್ಪ ದೂರ ಮೆಲ್ಲಗೆ ನಡೆಯುತ್ತಾ ಆ ಮೇಲೆ ಬೇಗ ಬಂದು ಮನೆಯನ್ನು ಸೇರಿಕೊಂಡಳು.

ತಿರಿಗಿ ಮುಂಜಾವದಲ್ಲಿ ಅಡಗೂಳಜ್ಜಿಯು ಸಂಚರಿಸಿಕೊಂಡು ಬಂದು—ಅಪ್ಪಾ! ಈ ದಿವಸದ ಸುದ್ದಿಯು ಏನಂದರೆ—ನಿನ್ನೆ ನಾವು ಬ್ರಾಹ್ಮಣರನ್ನು ಮೋಸಗೊಳಿಸಿ ಜಲಪಿಂಡವನ್ನು ಹಾಕಿದುದನ್ನು ಮಂತ್ರಿಯು ಕೇಳಿ—ಕಳ್ಳನು ಬಹು ಗಟ್ಟಿಗನು. ನಮ್ಮನ್ನು ವಂಚಿಸಿ ಬ್ರಾಹ್ಮಣ ಕರ್ಮಗಳನ್ನೆಲ್ಲಾ ನೇರವೇರಿಸಿ ಬಿಟ್ಟನು. ಇನ್ನು ಅವನನ್ನು ಹಿಡಿಯುವ ಬಗೆ ಹೇಗೆ? ಎಂದು ಚಿಂತೆಪಡುತ್ತಿರುವಲ್ಲಿ ಈ ಊರ ತಳವಾರರಿಗೆಲ್ಲ ಗೊತ್ತುಗಾರನಾದ ಭರ್ಮಾಜಿನಾಯಕನೆಂಬುವನು ತಾನು ಈ ರಾತ್ರಿಯಲ್ಲಿ ಕಳ್ಳನನ್ನು ಹಿಡಿದು ಕೊಡುತ್ತೇನೆಂದು ಭಾಷೆಯನ್ನು ಮಾಡಿ ಕೊಟ್ಟು ಮಂತ್ರಿಯ ಕೈಯ್ಯಿಂದ ಎಲೆ ಅಡಿಕೆ ಉಡುಗೆರೆಗಳನ್ನು ತೆಗೆದುಕೊಂಡು ಹೋದನಂತೆ ಇದಕ್ಕೇನು ತಂತ್ರವನ್ನು ಮಾಡುತ್ತೀಯೋ ನಾನು ಕಾಣೆನಪ್ಪಾ! ಅಂದಳು. ಅರಸುಮಗನು—ನೀನು ಆ ತಳವಾರನ ಮನೆಗೆ ಹೋಗಿ ಏನಾದರೂ ಒಂದು ಉಪಾಯವನ್ನು ಮಾಡಿ ಹೆಂಡತಿಯ ತೌರುಮನೆ ಗಂಡನ ಮನೆಗಳ ವೂರ್ವೋತ್ತರಗಳನ್ನು ತಿಳಿದು ಥಟ್ಟನೆ ಬಾ ಎಂದು ಅಡುಗೂಳಜ್ಜಿಯನ್ನು ಕಳುಹಿಸಲು; ಅವಳು ಹೋಗಿ ತಿಳಿದುಕೊಂಡು ಬಂದು—ಕೇಳಯ್ಯಾ! ಅವಳ ಮನೆ ಸುದ್ದಿ ಮತ್ತೇನೂ ಹೆಚ್ಚಿಲ್ಲ. ಅವಳಿಗೆ ಒಬ್ಬನೇ ತಮ್ಮನಿದ್ದನಂತೆ. ಅವನು ಐದನೆಯ ವರುಷ ವಯಸ್ಸಿನಲ್ಲಿ ಎಲ್ಲೆಯೋ ತಪ್ಪಿಸಿಕೊಂಡು ಹೋಗಿ ಈಗ ಹನ್ನೆರಡು ವರುಷವಾಯಿತಂತೆ. ಇವಳಿಗಿಂತ ಏಳು ವರುಷ ಚಿಕ್ಕವನಂತೆ ಇವಳಿಗೆ ಹತ್ತು ವರುಷದ ಒಬ್ಬ ಮಗಳೂ ಐದು ವರುಷದ ಒಬ್ಬ ಮಗನೂ ಇದ್ದಾರೆ; ಇಷ್ಟೇ ಎಂದು ಹೇಳಲು; ರಾಜಕುಮಾರನು ಸಾಯಂಕಾಲಕ್ಕೆ ಉಂಡು ಸಾಧಾರಣವಾದ ಬಟ್ಟೆಗಳನ್ನು ಧರಿಸಿಕೊಂಡು ಒಂದು ಹೂವಿನ ಸೀರೆ ಒಂದು ಪಟ್ಟೆಯ ಕಿರಿಗೆ ಒಂದು ಹೂವಿನ ಹಚ್ಚಡ ಒಂದು ಹೂವಿನ ಒಲ್ಲಿ ಹುರಿಗಡಲೆ ಅರಸಿನ ಕೊಪ್ಪರಿಯ ಗಿಟಕು ಬೆಲ್ಲ ಇವುಗಳನ್ನೂ ತನ್ನ ಅಡಿಗೆ ಊಟಕ್ಕೆ ತಕ್ಕ ಪಾತ್ರೆ ಪದಾರ್ಥಗಳನ್ನು ತೆಗೆದುಕೊಂಡು

ಇವುಗಳನ್ನೆಲ್ಲಾ ಒಂದು ಹಸಬೆಯ ಚೀಲದಲ್ಲಿ ಹಾಕಿ ಒಂದು ದೇಶದ ತಟ್ಟುವಿನ ಮೇಲೆ ಏರಿಕೊಂಡು ಸಾಯಂಕಾಲವಾದ ಜಾವ ಹೊತ್ತಿಗೆ ಆ ತಳವಾರನ ಮನೆಗೆ ಹೋಗಿ ಬಾಗಿಲಲ್ಲಿ ನಿಂತು—ಅಕ್ಕಾ! ಅಕ್ಕಾ! ಎಂದು ಕೂಗಲು; ತಳವಾರನ ಹೆಂಡತಿಯು ಒಳಗೆ ಕೇಳಿ—ಇದೇನು ಪುಣ್ಯ? ಅಕ್ಕಾ! ಎಂಬುವ ಸೊಲ್ಲು ಕಿವಿಗೆ ಬಿದ್ದಿತು. ತಮ್ಮನೇನಾದರೂ ಬಂದನೋ? ಎಂದು ಹೆಚ್ಚಳದಿಂದ ಬಾಗಿಲಿಗೆ ಬಂದು ಕದವನ್ನು ತೆಗೆಯಲು; ಇವನು ಕುದುರೆಯಿಂದ ಇಳಿದು ಆಕೆಗೆ ಕಾಲು ಮುಟ್ಟಿ ನಮಸ್ಕಾರವನ್ನು ಮಾಡಿ ಹಾಗೇ ಒಳಹೊಕ್ಕು—ಭಾವ ಎಲ್ಲಿ? ಎಂದು ಕೇಳುತ್ತಾ ತಳವಾರನ ಬಳಿಗೆ ಹೋಗಿ ಅವನಿಗೂ ನಮಸ್ಕರಿಸಿ ತಟ್ಟುವನ್ನು ಬಾಗಿಲಲ್ಲಿ ಕಟ್ಟಿ ಹಸಬೆಯ ಚೀಲವನ್ನು ಒಳಗೆ ತೆಗೆದುಕೊಂಡು ಬಂದನು. ಆಗ ಆಕೆ ತನ್ನ ಮಕ್ಕಳನ್ನು ಅಡ್ಡ ಬೀಳಿಸಿ—ಇಗೋ ಅಪ್ಪಾ! ಇವಳು ನಿನ್ನ ಸೋದರಸೊಸೆ ಇವನು ನಿನ್ನ ಸೋದರಳಿಯನೆಂದು ಹೇಳಲು ಇವನು ಇಬ್ಬರನ್ನೂ ಬಾಚಿ ತಬ್ಬಿಕೊಂಡು ಮುತ್ತುಕೊಟ್ಟು ಮುದ್ದಾಡಿ ತೊಡೆಗಳ ಮೇಲೆ ಕೂರಿಸಿಕೊಂಡು—ಇವರು ಹುಟ್ಟಿರುವುದನ್ನು ಈ ಊರಿನಲ್ಲಿ ವಿಚಾರಿಸಿ ತಿಳಿದೆ ಎಂದು ಹೇಳಿ ತಾನು ತಂದು ಇದ್ದ ಕಡಲೆ ಕೊಪ್ಪರಿ ಮುಂತಾದುದನ್ನು ಕೊಟ್ಟು ಸೊಸೆಗೆ ಪಟ್ಟೆಯ ಕಿರಿಗೆಯನ್ನೂ ಅಳಿಯನಿಗೆ ಹೂವಿನ ಒಲ್ಲಿಯನ್ನೂ ಅಕ್ಕನಿಗೆ ಹೂವಿನ ಸೀರೆಯನ್ನೂ ಕೊಟ್ಟು ಭಾವನಿಗೆ ಹೂವಿನ ಹಚ್ಚಡವನ್ನು ಹೊದ್ದಿಸಿ ಅವರ ಕಿವಿಗೆ ಇಂಪಾಗುವಂತೆ ತಾನು ತಿರುಗಿದ ದೇಶದ ನಡತೆಗಳನ್ನೆಲ್ಲಾ ಹೇಳಿದನು. ಆ ಬಳಿಕ ಅಕ್ಕನು—ಉಣ್ಣೀಳಪ್ಪಾ! ಕಾಲಿಗೆ ನೀರನ್ನು ತೆಗೆದುಕೋ ಅಂದಳು. ಅರಸುಮಗನು ಕಾಲುಗಳನ್ನು ತೊಳೆದುಕೊಂಡು—ಅಕ್ಕಾ! ಮುಚ್ಚಂದೆಯಲ್ಲಿ ಉಂಡೆನು; ಹಸಿವಿಲ್ಲ ಅಂದನು. ಆಗ ಅವಳು—ಉಪವಾಸವಾಗಿ ಮಲಗಬೇಡ ಎಂದು ಹಾಲು ಹಣ್ಣು ತುಪ್ಪವನ್ನು ತಂದು ಕೊಟ್ಟುದರಿಂದ ಫಲಾಹಾರವನ್ನು ಮಾಡಿ ಎಲೆ ಅಡಿಕೆಯನ್ನು ಹಾಕಿಕೊಂಡು ಹಾಸಿಗೆಯ ಮೇಲೆ ಕೂತುಕೊಂಡು ಇದ್ದನು. ಆಗ ತಳವಾರನು ಕರಿಯ ಕಂಬಳಿಯ ಮುಸುಕು ಹಾಕಿ ಕೈಯ್ಯಲ್ಲಿ ದೊಣ್ಣೆ ಹಿಡುಕೊಂಡು ಇವನನ್ನು ಕುರಿತು—ನೀನು ದಣಿದು ಬಂದಿದ್ದೀಯೇ ಸ್ವಸ್ಥವಾಗಿ ಮಲಗಿಕೋ. ಈ ಊರ ಅರಸನನ್ನು ಒಬ್ಬ ಕಳ್ಳನು ಪೇಚಾಡಿಸುತ್ತಾನೆ ಅವನನ್ನು ಈ ದಿವಸ ನಾನು ಹಿಡಿದು ಕೊಡುತ್ತೇನೆಂದು ಹೇಳಿದ್ದೇನೆ. ಅದಕ್ಕಾಗಿ ನಾನು ಹೋಗುತ್ತೇನೆ ಅನ್ನಲು ಇದು ಎಂಥಾ ಮಾತು? ನೀನು ಒಬ್ಬನೇ ಯಾಕೆ ಹೋಗಬೇಕು? ನಾನೂ ಬರುತ್ತೇನೆಂದು ಅರಸುಮಗನು ಅವನ ಸಂಗಡಲೇ ಹೊರಟು ಕೋಟೆಯ ಆಲಂಗದ ಮೇಲೆ ಹತ್ತಿ ತಿರುಗಾಡುತ್ತಾ ಬರುವಲ್ಲಿ ತಳವಾರನ ಹಿತ್ತಲ ಬಳಿಯ ಆಲಂಗದ ಮೇಲೆ ಇದ್ದ ಒಂದು ಕೈಕೋಳವನ್ನು ನೋಡಿ—ಭಾವ! ಭಾವ! ಇದೇನು? ನಾನು ಇಂಥಾದುದನ್ನು ಎಲ್ಲಿಯೂ ನೋಡಲಿಲ್ಲ ಅನ್ನಲು; ತಳವಾರನು—ಇದು ತಪ್ಪನ್ನು ಮಾಡಿದವರಿಗೆ ಹಾಕುವ ಕೈಕೋಳವೆಂದನು. ಇವನು—ಇಲ್ಲೋ ಕೈ ಹಾಕುವುದು? ಎಂದು ತನ್ನ ಕೈಯನ್ನು ಅದರಲ್ಲಿ ಹಾಕಿ—ಎಲ್ಲಿ ಭಾವ? ಕೀಲುಜಡಿ ಹೇಗಾಗುತ್ತದೆ?

ನೋಡೋಣ ಅನ್ನಲು ತಳವಾರನು ಕೀಲನ್ನು ಹಾಕಿ ಸುಮಾರಾಗಿ ಜಡಿದನು. ರಾಜ ಕುಮಾರನು—ಹಾಹಾ ! ಸರಿ ಸರಿ ! ಇದು ಒಳ್ಳೆಯ ಶಿಕ್ಷೆ ಎಂದು ಹೇಳಿ ಕೀಲನ್ನು ಕೀಳಿಸಿಕೊಂಡು ತನ್ನ ಕೈ ತೆಗೆದು—ಎಲ್ಲಿ ಭಾವ ನೀನು ? ಕೈ ಹಾಕು ; ನನಗೆ ಕೀಲು ಜಡಿಯುವುದಕ್ಕೆ ಬರುತ್ತದೋ ? ನೋಡೋಣ ಎಂದು ಅವನ ಕೈ ಹಾಕಿಸಿ ಕೀಲನ್ನು ಗಟ್ಟಿಯಾಗಿ ಜಡಿದು ತೆಗೆಯುವುದಕ್ಕೆ ಆಲ್ಲಾಡಿಸಿ ನೋಡಿ—ಭಾವ ! ಬರುವುದಿಲ್ಲ ಅನ್ನಲು ತಳವಾರನು—ಇಲ್ಲಿಯೇ ಇಳಿದು ಹೋಗಿ ಮನೆಯಲ್ಲಿ ಕೇಳಿ ಕೈ ಬಾಚಿಯನ್ನು ತೆಗೆದುಕೊಂಡು ಬಾ ಅಂದನು. ಇವನು ಇಳಿದು ಒಳಗೆ ಬಂದು ಅಕ್ಕನನ್ನು ಕರೆದು ಕಿವಿಯಲ್ಲಿ—ಅಕ್ಕಾ ! ಕಳ್ಳರು ಭಾವನನ್ನು ಕೊಂದುಹಾಕಬೇಕೆಂದು ಯತ್ನವನ್ನು ಮಾಡಲು ; ಭಾವನು—ನನ್ನ ವಿತ್ತಾಪಾರವೆಲ್ಲಾ ಕೊಡುತ್ತೇನೆ ; ನನ್ನನ್ನು ಬಿಟ್ಟು ಬಿಡಿರಿ ಎಂದು ಹೇಳಿದುದಕ್ಕೆ ಅವರು—ತರಿಸು ಅನ್ನಲು ನನ್ನನ್ನು ಕಳುಹಿಸಿದನು ಕಳ್ಳರು ಬಹು ಗಟ್ಟಿಗರು. ಈ ಹೊತ್ತಿಗೆ ನಿನ್ನ ತಾಳಿ ಒಂದು ಉಳಿದರೆ ಸಾಕು ಭಾವನ ಜೀವ ಒಂದು ಇದ್ದರೆ ಇಂಥಾದುದು ಬೇಕಾದಷ್ಟು ಸಂಪಾದಿಸಿಕೊಳ್ಳಬಹುದು. ಇದ್ದುದನ್ನೆಲ್ಲಾ ಬೇಗ ಕೊಡು ಅಂದನು. ಅವಳು ತಟ್ಟನೆ ಎದ್ದು ಮನೆಯಲ್ಲಿ ಇದ್ದ ಒಡವೆವಸ್ತುಗಳನ್ನೆಲ್ಲ ಸೊಪ್ಪುಸುತ್ತಿ ಗಂಟುಕಟ್ಟಿ ಕೊಟ್ಟಳು. ಇವನು ಅದನ್ನೆಲ್ಲಾ ತೆಗೆದುಕೊಂಡು ಬೀದಿಯ ಬಾಗಿಲಲ್ಲಿ ಹೊರಟು ನೆಟ್ಟನೆ ಅಡುಗೂಳಜ್ಜಿಯ ಗುಡಿಸಲಿಗೆ ಹೋಗಿ ಮಲಗಿಕೊಂಡನು.

ಬೆಳಿಗ್ಗೆ ಪುನಃ ಅಡುಗೂಳಜ್ಜಿಯು ಸುತ್ತಿ ಬಂದು—ಅಪ್ಪಾ ! ಮಂತ್ರಿಯು ತಳವಾರನಿಗೆ ಕೈಕೋಳಬಿದ್ದಿರುವುದನ್ನು ತಿಳಿದು ಅವನ ಕೈಕೋಳವನ್ನು ತೆಗಿಸಿ ಕರಿಸಿ ನೀನು ಅವನಿಗೆ ಮಾಡಿದ ಮೋಸವನ್ನೆಲ್ಲಾ ಅವನಿಂದ ಕೇಳಿ ವ್ಯಸನಪಡುವಾಗ ಸೇನಾಧಿಪತಿಯು ರಾಯನ ಬಳಿಗೆ ಬಂದು—ಆ ಕಳ್ಳನು ಬಲುಗಟ್ಟಿಗ ! ಅವನು ಯಾರಿಗೂ ಸಿಕ್ಕುವುದಿಲ್ಲ. ನಾನು ಈ ದಿನ ಅವನನ್ನು ಹಿಡಿದುಕೊಡುತ್ತೇನೆ. ನನ್ನ ಸಾಮರ್ಥ್ಯವನ್ನು ನೋಡಿ ಎಂದು ಹೇಳಿ ತಾಂಬೂಲವನ್ನು ತೆಗೆದುಕೊಂಡು ಇದ್ದಾನಂತೆ ಎಂದು ಹೇಳಿದುದನ್ನು ಕೇಳಿ ಅರಸುಮಗನು ಸಾಯಂಕಾಲದಲ್ಲಿ ತನ್ನ ಊಟ ಉಪಚಾರಗಳನ್ನು ತೀರಿಸಿಕೊಂಡು ಕಜ್ಜಿಯ ಅರಿವೆಯನ್ನು ಕಟ್ಟಿಕೊಂಡು ತಲೆಗೆ ಒಂದು ಪಾವಡೆಯನ್ನು ಸುತ್ತಿ ಕೆಲವು ಮಡಿಮಾಡಿದ ಬಟ್ಟೆಗಳನ್ನೂ ಕೆಲವು ಮೈಲಿಗೆ ಬಟ್ಟೆಗಳನ್ನೂ ಕ್ರಯಕ್ಕೆ ತೆಗೆದುಕೊಂಡು ನಾಲ್ಕೈದು ಕತ್ತೆಗಳ ಮೇಲೆ ಅವುಗಳನ್ನು ಹೇರಿಕೊಂಡು ಹತ್ತು ಹದಿನೈದು ಕೈಸೋರೆಯ ಒರುಡೆಗಳಿಗೆ ನಾನಾ ಬಣ್ಣದ ರುಮಾಲುಗಳನ್ನು ಸುತ್ತಿ ಅವುಗಳನ್ನೂ ತೆಗೆದುಕೊಂಡು ಪಟ್ಟಣಕ್ಕೆ ಕೊಂಬಿನಕೊಗು ದೂರದಲ್ಲಿರುವ ಸುಡುಗಾಡಿನ ಬಳಿಯ ಕೆರೆಯ ಏರಿಯ ಮೇಲೆ ಮಡಿ ಬಟ್ಟೆಗಳನ್ನೆಲ್ಲಾ ಮಡಿಸಿ ಗಳಿಗೆ ಮಾಡಿ ಇಟ್ಟು ಮೈಲಿಗೆಯ ಬಟ್ಟೆಗಳನ್ನು ನೀರಿನದಡದಲ್ಲಿಟ್ಟು ಕತ್ತೆಗಳ ಕಾಲುಗಳನ್ನು ಕಟ್ಟಿ ಕೆರೆಯ ಹುಲ್ಲಿಗೆ ಅಟ್ಟಿ ಅರಿವೆಗಳನ್ನು ಒಗೆಯುತ್ತಾ ಇದ್ದನು. ರಾತ್ರಿ ಹತ್ತುಗಳಿಗೆಯಲ್ಲಿ ದಳವಾಯಿಯು ನಿರಾಜಿಯ ಪಾಗು ಸುತ್ತಿಕೊಂಡು ಕಿನ್ನಾಪಿನ ಕಾಲುಕುಪ್ಪಸವನ್ನು ತೊಟ್ಟು ದಮಾಸ್ ಜೊಗೆಯನ್ನು ಇಟ್ಟು

ನಡುಕಟ್ಟಿನಲ್ಲಿ ಕತ್ತಿಯನ್ನು ಸಿಕ್ಕಿಸಿ ಕರಿಯ ಶಾಲುಜೋಡಿಯನ್ನು ಮುಸುಕು ಹಾಕಿಕೊಂಡು ಜೋಡುಗಳನ್ನು ಮೆಟ್ಟಿಕೊಂಡು ತನ್ನ ಕಡೆಯ ಏವತ್ತು ಮಂದಿ ಓಲೇಕಾರರನ್ನು ಆಯುಧಸಹಿತವಾಗಿ ಊರು ಹೊರಗಿರುವ ಉಕ್ಕಡದ ಬಳಿಯಲ್ಲಿ ನಿಲ್ಲಿಸಿ ಕಳ್ಳರು ಸಂಚಾರ ಮಾಡುವ ಜಾಗಗಳನ್ನು ನೋಡುತ್ತಾ ಈ ಅರಸುಮಗನು ಮೈಲಿಗೆ ತೊಳೆಯುತ್ತಿದ್ದ ಕೆರೆಯ ಬಳಿಗೆ ಬಂದು—ಅವನು ಯಾರೆಲಾ! ಸಮ ರಾತ್ರಿಯ ಹೊತ್ತಿನಲ್ಲಿ ಒಗೆಯುವವನು? ಎಂದು ಕೇಳಲು; ಬುದ್ಧೀ! ನಾನು ಅಗಸರ ತಿಮ್ಮ ಕಳ್ಳಕಾಕರ ಬಟ್ಟೆಗಳನ್ನು ಒಗೆದುಕೊಂಡು ಹೊಟ್ಟೆಯಪಾಡು ಮಾಡಿಕೊಂಡಿದ್ದೇನೆ ಕಳ್ಳರು ಹಗಲುಹೊತ್ತು ತಿರುಗುವುದಿಲ್ಲವೆಂದು ಪಾದಕ್ಕೆ ಅರಿಕೆ ಇದೆಯಷ್ಟೆ. ಅವರು ಇಲ್ಲಿಗೆ ಸಮರಾತ್ರಿಯ ಹೊತ್ತಿನಲ್ಲಿ ಬಂದು ಮಡಿ ಬಟ್ಟೆಗಳನ್ನು ತೆಗೆದುಕೊಂಡು ಮೈಲಿಗೆ ಬಟ್ಟೆಗಳನ್ನು ಹಾಕಿ ಹೋಗುತ್ತಾರೆ ಅಂದನು. ದಳವಾಯಿಯು—ನಿನಗೆ ಸಂಬಳವನ್ನು ಮಾಡಿಸಿಕೊಡುತ್ತೇನೆ ಆ ಕಳ್ಳರನ್ನು ಹಿಡಿದು ಕೊಟ್ಟೀಯ? ಎಂದು ಕೇಳಿದನು ಅರಸುಮಗನು—ಬುದ್ಧೀ! ಸಂಬಳವಾದರೆ ಈ ಹಾಳು ಹೊಲೆಬಾಳು ತಪ್ಪಿ ಬದುಕಿಕೊಂಡೇನು. ತಾವು ನಾಲ್ಕುಗಳಿಗೆ ಬಿಟ್ಟುಕೊಂಡು ಒಬ್ಬರೇ ದಯಮಾಡಿಸಿದರೆ ಕಳ್ಳರನ್ನು ತೋರಿಸಿಕೊಡುತ್ತೇನೆ ಅನ್ನಲು; ದಳವಾಯಿಯು ಹೊರಟು ಹೋದನು. ಬಳಿಕ ಇವನು ಕೈಸೋರೆಯಬುರುಡೆಗಳನ್ನೆಲ್ಲಾ ತೆಗೆದುಕೊಂಡು ಕೆರೆಯ ಬಳಿಗೆ ಹೋಗಿ ಆ ಬುರುಡೆಗಳನ್ನೆಲ್ಲಾ ನೀರಿನ ಮೇಲೆ ತೇಲ ಬಿಟ್ಟು ಮುಂಜೆ ಇದ್ದ ಬಳಿಗೆ ಬಂದು ಒಗೆಯುತ್ತಾ ಇದ್ದನು. ತಿರಿಗಿ ದಳವಾಯಿಯು ಬಂದ ಮೇಲೆ—ಅಗೋ ಬುದ್ಧಿ! ಕಳ್ಳರೆಲ್ಲರೂ ಕೆರೆಯ ಒಳಗೆ ಈಜಿಕೊಂಡು ಬರುತ್ತಾರೆ; ನೋಡಿ! ಎನ್ನಲು ದಳವಾಯಿಯು—ಎಲಾ ಅಗಸಾ! ನೀನೊಂದು ಕೆಲಸ ಮಾಡು. ನಿನ್ನ ಒಟ್ಟೆಗಳನ್ನು ನನಗೆ ಕೊಟ್ಟು ನನ್ನ ಬಟ್ಟೆಗಳನ್ನೆಲ್ಲಾ ನೀನು ತೊಟ್ಟುಕೊಂಡು ನನ್ನ ಕತ್ತಿಯನ್ನು ಹಿಡಿದುಕೊಂಡು ಓಡಿ ಹೋಗಿ ಹೊರ ಉಕ್ಕಡದ ಬಳಿಯಲ್ಲಿರುವ ನಮ್ಮ ಕಡೆಯ ಓಲೇಕಾರರನ್ನು ತಟ್ಟನೆ ಕರಕೊಂಡು ಬಾ. ಆ ವರೆಗೂ ನಿನ್ನರಿವೆಯನ್ನು ನಾನು ಉಟ್ಟುಕೊಂಡು ಒಗೆಯುತ್ತಾ ಬಂದ ಕಳ್ಳರನ್ನು ಸಮುದಾಯಿಸಿಕೊಂಡು ನಿಲ್ಲಿಸಿಕೊಂಡಿರುತ್ತೇನೆ ಎನ್ನಲು ಇದು ಸರಿ ಬುದ್ಧೀ! ಒಳ್ಳೆಯ ಉಪಾಯವನ್ನು ತೆಗೆದಿರಿ; ಇನ್ನೇನು ಕಳ್ಳರು ಸಿಕ್ಕಿದರು? ಏಡಿ? ಎಂದು ಹೇಳಿ ತನ್ನ ಬಟ್ಟೆಗಳನ್ನು ದಳವಾಯಿಗೆ ಕೊಟ್ಟು ಅವನ ಬಟ್ಟೆಗಳನ್ನು ತಾನು ಹಾಕಿಕೊಂಡು ಅತನ ಕತ್ತಿಯನ್ನು ತೆಗೆದುಕೊಂಡು ಓಡುತ್ತಾ ಹೊರ ಉಕ್ಕುಡದ ಬಳಿಗೆ ಬಂದು ಓಲೇಕಾರರ ಹೋಬಳಿದಾರನನ್ನು ಕರೆದು—ಇಗೋ! ಸುಡುಗಾಡಿನ ಬಳಿಯ ಕೆರೆಯಲ್ಲಿ ಕಳ್ಳನು ಅಗಸನ ಹಾಗೆ ಒಗೆಯುತ್ತಾನೆ. ನೀನು ಆಳುಗಳನ್ನು ಕಟ್ಟಿಕೊಂಡು ಅಲ್ಲಿಗೆ ಹೋಗಿ ಅವನು ಏನು ಹೇಳಿಕೊಂಡಾಗ್ಗೂ ನಂಬದೆ ಹೋದ ಭರಕ್ಕೆ ಹಿಂಗಟ್ಟುಮುರಿಯನ್ನು ಕಟ್ಟಿ ಜತನದಿಂದ ಕರಕೊಂಡು ಬಂದು ಸೆರೆಮನೆಯಲ್ಲಿ ಒಂದು ಕೊಟಡಿಯಲ್ಲಿ ಕೂಡಿ ಹೊರ ಬೀಗವನ್ನು ಹಾಕಿಕೊಂಡು ಅಲ್ಲಿಯೇ ನೀವೆಲ್ಲರೂ ಕಾದು ಇರಿ. ನಾವು ಬೆಳಿಗ್ಯೆ ಬಂದು ವಿಚಾರಿಸುತ್ತೇವೆಂದು ಅಪ್ಪಣೆ ಕೊಡಲು

ಅವರು—ಬುದ್ಧೀ! ಅಪ್ಪಣೆಯ ಪ್ರಕಾರ ಎಂದು ಹೋದರು. ಇವನು ಅಡುಗೂಳ ಜ್ಜಿಯ ಮನೆಗೆ ಒಂದು ಮಲಗಿಕೊಂಡನು.

ಪ್ರಾತಃಕಾಲದಲ್ಲಿ ಅಡುಗೂಲಜ್ಜಿಯು ತಿರುಗಿ ಬಂದು—ಅರಸುಮಗನೇ! ಕೇಳು. ನಿನ್ನೆಯ ರಾತ್ರಿಯಲ್ಲಿ ಸೇನಾಪತಿಯು ಕಳ್ಳನನ್ನು ಹಿಡಿದುತರಿಸಿ ಸೆರೆಮನೆಯಲ್ಲಿ ಹಾಕಿಸಿದಾನೆಂದು ಮಂತ್ರಿಯು ಕೇಳಿ ಸಾಮಾಜಿಕರೊಡನೆ ಸೆರೆಮನೆಯ ಬಳಿಗೆ ಬಂದು ಕುಳಿತುಕೊಂಡು ಬೀಗವನ್ನು ತೆಗೆಸಿ ಒಳಗಿದ್ದವನನ್ನು ಹಿಡಿದುತರಿಸಿ ನೋಡಿ ಕಳ್ಳನು ದಳವಾಯಿಯನ್ನು ಈ ಅವಸ್ಥೆಗೆ ತಂದನೇ? ಎಂದು ಬಹಳವಾಗಿ ವ್ಯಸನಪಟ್ಟು ದಳವಾಯಿಯನ್ನು ಮನ್ನಿಸಿ ಸಮಾಧಾನಗೊಳಿಸಿ ಮನೆಗೆ ಕಳುಹಿಸಿಬಿಟ್ಟು ಈ ದಿನ ಕಳ್ಳನನ್ನು ಹಿಡಿಯತಕ್ಕ ಬಗ್ಗೆ ಮಂತ್ರಿಯು ತಾನೇ ಹೊರಡುತ್ತಾನಂತೆ ಎಂದು ಹೇಳಿದಳು. ಅರಸುಮಗನು ಆದಿವಸ ಸಾಯಂಕಾಲವಾದ ಮೇಲೆ ಬಂದು ಕೋಟೆಯ ಬುಡದ ಮೂಲೆಯಲ್ಲಿ ಒಂದು ಗುಡಿಸಲು ಮಾಡಿಕೊಂಡು ಬಿದುರು ಚಿಬ್ಬಲುಗಳಲ್ಲಿ ಒಂದಷ್ಟು ಭಂಗಿಯಸೊಪ್ಪು ಹೊಗೆಯಸೊಪ್ಪು ಎಲೆ ಅಡಿಕೆ ಹುರಿಗಡಲೆ ಉಪ್ಪುಕಡಲೆ ಅವಲಕ್ಕಿ ಬೆಲ್ಲಗಳಮ್ಮ ಇಟ್ಟುಕೊಂಡು ಮಿಣಮಿಣನೆ ಉರಿಯುವ ಒಂದು ದೀಪವನ್ನು ಹಚ್ಚಿಕೊಂಡು ಹರಕಂಗಿಯನ್ನು ತೊಟ್ಟುಕೊಂಡು ಒಲು ರುಮಾಲು ಸುತ್ತಿ ತೇಪೆಯ ಪಂಜೆಯನ್ನು ಉಟ್ಟುಕೊಂಡು ಕಂತೆಬೊಂತೆ ಬೈರವಾಸವನ್ನು ಹೊದ್ದುಕೊಂಡು ಮೇಲ್ಕಂಡ ಸಾಮಾನುಗಳನ್ನು ಇಡುವುದಕ್ಕೆ ಒಂದು ದೊಡ್ಡ ಪೆಟ್ಟಿಗೆಯನ್ನು ಇಟ್ಟುಕೊಂಡು ಮಾರುವ ಬಡಕೋಮಟಿಗನಂತೆ ಕೂತು ಇದ್ದನು. ಆ ದಿವಸ ಜಾವ ರಾತ್ರಿಯಲ್ಲಿ ಸಕಲಾತಿ ಗೋಟನ್ನು ಮುಸುಕು ಹಾಕಿಕೊಂಡು ಪ್ರಧಾನಿಯೊಬ್ಬನೇ ಇವನ ಗುಡಿಸಲಿನ ಬಳಿಗೆ ಬರುತ್ತಾ ಇರುವಲ್ಲಿ ಇವನು ದೂಂದಲ್ಲಿಯೇ ಕಂಡು ಒಂದು ತಟ್ಟೆಯಲ್ಲಿ ಚಿಗುರೆಲೆ ಅಡಿಕೆ ಲವಂಗ ಜಾಯಿಕಾಯಿ ದ್ರಾಕ್ಷಿ ಬಿಳಿಯ ಕಲ್ಲುಸಕ್ಕರೆ ನಿಂಬೆಯ ಹಣ್ಣುಗಳನ್ನು ಇಟ್ಟುಕೊಂಡು ನಡುವನ್ನು ಬೊಗ್ಗಿಸಿಕೊಂಡು ತಲೆಯನ್ನು ನಡುಗಿಸುತ್ತಾ ಎದುರಿಗೆ ಒಂದು ಕೈಕಾಣಿಕೆಯನ್ನು ಕೊಟ್ಟು ಅಡ್ಡ ಬಿದ್ದು—ಬುದ್ಧೀ? ನಾನು ಪರಸ್ಥಳದ ಒಡಕೋಮಟಿಗನು ಈ ಊರಿಗೆ ಬಂದು ಎರಡು ತಿಂಗಳಾಯಿತು. ಎರಡು ತಿಂಗಳಿಂದಲೂ ಈ ಊರ ಸೆಟ್ಟರು ಯಜಮಾನರನ್ನು ಕುರಿತು ಒಂದು ಅಂಗಡಿಯನ್ನು ಮಾಡಿಸಿಕೊಡಿರಿ ಎಂದು ಎಷ್ಟು ವಿಧವಾಗಿ ಹೇಳಿಕೊಂಡಾಗ್ಗೂ ಬಡವನ ಮಾತನ್ನು ಗಣನೆಗೆ ತರಲಿಲ್ಲ; ಒಂದು ವೇಳೆ ಸ್ವಾಮಿಯವರ ಅಪ್ಪಣೆಯು ಆಗಬೇಕೆಂದು ಬೇಡಿಕೊಳ್ಳಲು ಒಳ್ಳೆಯದು ಎಂದು ಪ್ರಧಾನಿಯು ಹೇಳಿ ಮುಂದಕ್ಕೆ ಹೋದನು. ಇವನು ಹಿಂದಕ್ಕೆ ಬಂದವನ ಹಾಗೆ ಸ್ವಲ್ಪದೂರ ಬಂದು ತಿರಿಗಿ ಪ್ರಧಾನಿಯ ಒಳಿಗೆ ಹೋಗಿ ಬಟ್ಟೆಯಲ್ಲಿ ಬಾಯಿ ಮುಚ್ಚಿಕೊಂಡು ಮೆಲ್ಲನೆ—ಕಳ್ಳನ ಹಿಡಿಯತಕ್ಕ ಬಗ್ಗೆ ದಯಮಾಡಿದುದಾಗಿ ಕೇಳುತ್ತೇನೆ ಈಗ ಹದಿನೈದು ದಿವಸದಿಂದ ಅರ್ಧರಾತ್ರಿಯಲ್ಲಿ ಇಲ್ಲಿಗೆ ಒಬ್ಬನು ಬಂದು ಭಂಗಿಯಸೊಪ್ಪು ಮುಂತಾದುದನ್ನು ತೆಗೆದುಕೊಂಡು ಹೋಗುತ್ತಾನೆ. ಅವನ ಚಾಳಿಯನ್ನು ನೋಡಿದರೆ ಕಳ್ಳನಂತೆ ಕಾಣಿಸುತ್ತಾನೆ. ಒಂದು ಪಾವಡೆಯಲ್ಲಿ ನಾಲ್ಕು ಹವಳದ ಮಂಚದ

ಕಾಲುಗಳನ್ನು ಕಟ್ಟಿ ಸದಾ ಹೆಗಲಿಗೆ ತಗಲುಹಾಕಿಕೊಂಡಿದ್ದಾನೆ ಅಂದನು. ಅವ ನನ್ನು ಹಿಡಿದುಕೊಟ್ಟೀಯಾ ? ಎಂದು ಪ್ರಧಾನಿಯು ಕೇಳಲು ಇವನು—ಅದಕ್ಕೊಂದು ಉಪಾಯವನ್ನು ಮಾಡಬೇಕು. ದಯಮಾಡಿಸಿರಿ ಎಂದು ತನ್ನ ಗುಡಿಸಲಿನ ಬಳಿಗೆ ಕರಕೊಂಡು ಹೋಗಿ ತಾವು ಈ ಪೆಟ್ಟಿಗೆಯಲ್ಲಿ ಮಲಗಿಕೊಂಡಿರಿ. ಆ ಕಳ್ಳನು ಬಂದು ಏನಾದರೂ ವ್ಯಾಪಾರವನ್ನು ಕೇಳುವಾಗ—ಆ ಪೆಟ್ಟಿಗೆಯಲ್ಲಿ ಇದೆ ತೆಗೆದುಕೋ ಅನ್ನುತ್ತೇನೆ ಅವನು ಬಂದು ಮುಚ್ಚಳವನ್ನು ತೆರೆಯುವಾಗ ಸ್ವಾಮಿಯವರು ಅವನ ಜುಟ್ಟನ್ನು ಹಿಡುಕೊಂಡರೆ ಹವಳದ ಮಂಚದ ಕಾಲುಗಳೊಡನೆ ಸಿಕ್ಕುತ್ತಾನೆ ಅನ್ನಲು ಮಂತ್ರಿಯು ನಂಬಿ ಪೆಟ್ಟಿಗೆಯೊಳಗೆ ಮಲಗಿಕೊಂಡನು. ಇವನು ಎರಡು ಗಳಿಗೆಯ ಮೇಲೆ ಆ ಪೆಟ್ಟಿಗೆಗೆ ಬೀಗವನ್ನು ಹಾಕಿ ಮುದ್ರೆಮಾಡಿ ಅಲುಗದಂತೆ ತಲೆಯಮೇಲೆ ಹೊತ್ತುಕೊಂಡು ಕೋಟೆಯ ಮೇಲೆ ಹತ್ತಿ ಅದನ್ನು ಆಗಳಿಗೆ ಎತ್ತಿ ಹಾಕಿಬಿಟ್ಟು ಬಂದು ಅಡುಗೂಳಜ್ಜಿಯ ಮನೆಯನ್ನು ಸೇರಿದನು.

ಪ್ರಾತಃಕಾಲದಲ್ಲಿ ಅಡುಗೂಳಜ್ಜಿಯು ಸುತ್ತಿಬಂದು—ಕೇಳಪ್ಪಾ ದೊರೆಯ ಮಗನೇ : ಬೆಳಿಗ್ಗೆ ಮಂತ್ರಿಯು ಚಾವಡಿಗೆ ಬಾರದುದರಿಂದ ಕಳ್ಳನು ಏನು ಮಾಡಿದನೋ ಎಂದು ಅರಸು ಚಿಂತೆಪಟ್ಟು ಎಲ್ಲಿ ಹುಡುಕಿಸಿದಾಗ್ಗೂ ಸಿಕ್ಕಲಿಲ್ಲವಂತೆ. ಆಗಳಲ್ಲಿ ಮಾತ್ರ ಒಂದು ಪೆಟ್ಟಿಗೆಯು ತೇಲುವ ಸುದ್ದಿಯನ್ನು ಕೇಳಿ ಅದನ್ನು ಚಾವಡಿಗೆ ತರಿಸಿ ನೋಡುವಲ್ಲಿ ಅದರೊಳಗೆ ಮಂತ್ರಿಯು ಮಲಗಿದ್ದನಂತೆ. ಆಗ ಅರಸು ನೊಂದುಕೊಂಡು ಮಂತ್ರಿಯನ್ನು ಮನೆಗೆ ಕಳುಹಿಸಿ ತಾನು ಬಹಳ ಚಿಂತೆಯಿಂದ ಅನ್ನೋದಕಗಳನ್ನು ಬಿಟ್ಟು ಮಲಗಿಕೊಂಡನಂತೆ. ಈ ಸುದ್ದಿಯನ್ನು ಅರಸಿನ ಮಗಳು ವಿದ್ಯಾಮಂಜರಿಯು ಮೊದಲಿನಿಂದ ವಿಸ್ತಾರವಾಗಿ ಕೇಳಿ ಇವೆಲ್ಲವೂ ತನ್ನ ಮನೋನಿಶ್ಚಿತಪತಿಯಾದ ರಾಜಕುಮಾರನ ಕೆಲಸವೆಂದು ನಿಶ್ಚಯಿಸಿ ತಂದೆಯ ಬಳಿಗೆ ಬಂದು—ಅಪ್ಪಾಜಿಯವರೇ ! ಇದಕ್ಕೆ ಯಾಕೆ ಚಿಂತೆಪಡುತ್ತೀರಿ ? ಆ ಕಳ್ಳನು ಇಂಥವನು ಎಂಬುವುದು ನನಗೆ ತಿಳಿಯುವುದು. ಈ ಹೊತ್ತಿಗೆ ನಾಲ್ಕು ದಿವಸದಲ್ಲಿ ಅವ ನನ್ನು ಹಿಡಿದುಕೊಡುತ್ತೇನೆ. ಹವಳದ ಮಂಚದ ಕಾಲನ್ನು ಯಾವನು ತಂದುಕೊಡುತ್ತಾನೋ ಅವನನ್ನು ನನ್ನ ಮಗಳು ಗಂಡನನ್ನಾಗಿ ವರಿಸುತ್ತಾಳೆಂದು ಈ ಪಟ್ಟಣದೊಳಗೆಲ್ಲ ಸಾರಿಸು ಅಂದಳಂತೆ. ಇಗೋ ! ದಂಡೋರ ಹಾಕಿ ಸಾರಿಕೊಂಡು ಬರುತ್ತಾರೆ ಅಂದಳು. ಅದನ್ನು ಕೇಳಿ ಅರಸುಮಗನು ಕ್ಷೌರವನ್ನು ಮಾಡಿಸಿಕೊಂಡು ಸ್ನಾನವನ್ನು ಮಾಡಿ ದಿವ್ಯಾಂಗರಾಗಗಳನ್ನು ಪೂಸಿಕೊಂಡು ದಿವ್ಯವಸ್ತ್ರಗಳನ್ನುಟ್ಟು ದಿವ್ಯಾಭರಣಗಳನ್ನು ತೊಟ್ಟು ತಾಂಬೂಲವನ್ನು ಹಾಕಿಕೊಂಡು ಮದುನೆಗೆ ತೆರಳುವ ಹೊಸ ಮದವಣಿಗನ ಹಾಗೆ ಹವಳದ ಮಂಚದ ಕಾಲೊಂದನ್ನು ತೆಗೆದುಕೊಂಡು ವಿದ್ಯಾಮಂಜರಿಯ ಅರಮನೆಗೆ ಹೋಗಲು ಆಕೆಯು ಎದ್ದು ಕಾಲನ್ನು ತೊಳೆದು ತನ್ನ ಸೀರೆಯ ಸೆರಗಿನಿಂದ ಒತ್ತಿ ಕೈಹಿಡಿದುಕೊಂಡು ಹೋಗಿ ಮಂಚದ ಮೇಲೆ ಕೂರಿಸಿ ಪುಷ್ಪಮಾಲಿಕೆಯನ್ನು ಕೊರಳಿಗೆ ಹಾಕಿ ಆತನು ಕೊಟ್ಟ ಹವಳದ ಮಂಚದ ಕಾಲನ್ನು ತೆಗೆದು ಇಟ್ಟು ಇಬ್ಬರೂ ಕೂಡ ಉಂಡು ರಾತ್ರಿ

ಯಲ್ಲಿ ಮಲಗಿ ಇದ್ದು ಕೋಳಿ ಕೂಗುವ ಹೊತ್ತಿನಲ್ಲಿ ಎದ್ದು ಹೊರಟ ಅರಸು ಮಗನನ್ನು ತಲೆಬಾಗಿಲಿನವರೆಗೂ ಕಳುಹಿಸಿ ಆಲಿಂಗಿಸಿ—ನೀನೆನಗೆ ಗಂಡನಾದುದರಿಂದ ಪ್ರತಿರಾತ್ರಿಯೂ ಹೀಗೆ ದಯಮಾಡಬೇಕೆಂದು ಹೇಳಿ ಕಳುಹಿಸಿಕೊಟ್ಟಳು. ಅರಸು ಮಗನು ಇದೇ ರೀತಿಯಲ್ಲಿ ಮೂರು ದಿವಸ ಮಂಜದ ಮೂರು ಹವಳದ ಕಾಲನ್ನು ಕೊಟ್ಟು ಮಲಗಿದ್ದು ಬಂದು ನಾಲ್ಕನೆಯ ದಿವಸ ಮಂಜದ ಕಾಲನ್ನು ತೆಗೆದು ಕೊಂಡು ಹೋಗುವಾಗ್ಗೆ ಪೇಟೆಯಲ್ಲಿ ಅಂಗಡಿಯ ಬಾಗಿಲನ್ನು ಹಾಕಿಕೊಂಡು ಬಂದವರಿಗೆ ಕಿಟಿಕಿಯಲ್ಲಿ ವ್ಯಾಪಾರವನ್ನು ಕೊಡುತ್ತಿದ್ದ ಒಬ್ಬ ಮುದಿ ಕೋಮಟಿಗನ ಅಂಗಡಿಗೆ ಹೋಗಿ ಒಂದು ಕಾಸಿಗೆ ಎಲೆಯನ್ನು ಕೊಡು ಎಂದು ಕೇಳಿದುದಕ್ಕೆ ಅವನು ಕಿಟಕಿಯಲ್ಲಿ ಕೈನೀಡಿ ಕೊಡಲು ಹಸ್ತವನ್ನು ಕತ್ತರಿಸಿಕೊಂಡು ವಿದ್ಯಾಮಂಜರಿಯ ಮನೆಗೆ ಹೋಗಿ ಮಂಜದ ನಾಲ್ಕನೆಯ ಕಾಲನ್ನು ಕೊಟ್ಟು ಆ ದಿವಸ ಸ್ವಲ್ಪ ಹೊತ್ತು ಹೆಚ್ಚಾಗಿ ಅವಳಿಂದ ವೀಣಾಗಾನವನ್ನು ಕೇಳುತ್ತಾ ಆ ಮೇಲೆ ಮಲಗಿಕೊಂಡನು. ಆಗ ಅವಳು ಇವನ ಹಸ್ತದ ನಡುಬೆರಳನ್ನು ಹಿಡಿದು ಕೊಂಡು ಮಲಗಿದಳು. ಇವನು ನಿದ್ದೆಬರುವ ಸಮಯದಲ್ಲಿ ತನ್ನ ಬೆರಳನ್ನು ಮೆಲ್ಲನೆ ಸೆಳೆದುಕೊಂಡು ತಂದಿದ್ದ ಕೋಮಟಿಗನ ಹಸ್ತದ ಮಧ್ಯಮಾಂಗುಳಿಯನ್ನು ಅಕೆಯ ಕೈಗೆ ಹಿಡುಕೊಳ್ಳುವುದಕ್ಕೆ ಕೊಟ್ಟು ಅವಳಿಗೆ ಚೆನ್ನಾಗಿ ನಿದ್ರೆ ಹತ್ತುವ ವರೆಗೂ ಆ ಹಸ್ತವನ್ನು ತನ್ನ ಕೈಯ್ಯಲ್ಲಿ ಹಿಡಿದುಕೊಂಡಿದ್ದು ಅವಳಿಗೆ ನಿದ್ರೆಯು ಬಂದುದನ್ನು ತಿಳಿದು ಆ ಹಸ್ತವನ್ನು ಬಿಟ್ಟು ಮೆಲ್ಲನೆ ಎದ್ದು ತಾನು ಕೊಟ್ಟು ಇದ್ದ ಮಂಜದ ಕಾಲುಗಳನ್ನೂ ಇನ್ನೂ ಅಲ್ಲಿದ್ದ ಒಡವೆವಸ್ತುಗಳನ್ನೂ ತೆಗೆದುಕೊಂಡು ಬಾಗಿಲು ಬಿಟ್ಟು ಪಾಗರದಿಂದ ಇಳಿಯಬಿದ್ದು ಹೊರಗ ಬಂದು ಅಡುಗೂಳಜ್ಜಿಯ ಗುಡಿಸಲನ್ನು ಸೇರಿಕೊಂಡನು.

ಮೊದಲಿನಂತೆ ಬೆಳಗಿನಲ್ಲಿ ಅಡುಗೂಳಜ್ಜಿಯು ತಿರಿಗಿ ಬಂದು ನಗುತ್ತಾ—ಕೇಳು ರಾಜಕುಮಾರಾ! ಈ ದಿನ ಬೆಳಿಗ್ಗೆ ವಿದ್ಯಾಮಂಜರಿಯು ತಂದೆಯ ಒಳಿಗೆ ಬಂದು ಕಳ್ಳನು ನಾಲ್ಕುದಿನದಿಂದ ಮಾಡಿದ ಸಂಗತಿಯನ್ನೆಲ್ಲಾ ಹೇಳಿ—ಈ ಪಟ್ಟಣದಲ್ಲಿ ಹೊಸದಾಗಿ ಕಡಿದಿರುವ ಹಸ್ತವುಳ್ಳವನು ಯಾವನೋ ಅವನೇ ಕಳ್ಳನೆಂದು ಹೇಳಿದಳಂತೆ. ಅರಸು ಗೊತ್ತುಮಾಡಿಸಿ ಕರಸಿ ವಿಚಾರಿಸುವಲ್ಲಿ ಆ ಮುದಿಕೋಮಟಿಗನು ತನ್ನ ಕಡಿದ ಹಸ್ತದ ಸಂಗತಿಯನ್ನು ಹೇಳಲು; ಇವನು ಕಳ್ಳನಲ್ಲ. ಎಂದು ಬಿಟ್ಟುಬಿಟ್ಟು ಅನ್ನವನ್ನು ಬಿಟ್ಟು ಪ್ರಾಣಗಳನ್ನು ಕಳಕೊಳ್ಳುತ್ತೇನೆಂದು ಬಿದ್ದು ಇದ್ದಾನಂತೆ ಎಂದು ಹೇಳಿದಳು. ರಾಜಕುಮಾರನು ಅರಸಿನ ಅರಮನೆಯ ಮುಂದೆ ಒಂದು ಗುಡಾರವನ್ನು ಹಾಕಿಸಿಕೊಂಡು ತಾನು ಆ ಪಟ್ಟಣದಲ್ಲಿ ಕದ್ದ ಪದಾರ್ಥಗಳೆಲ್ಲವನ್ನು ಹರವಿಕೊಂಡು ಸರ್ವಾಲಂಕಾರ ಭೂಷಿತನಾಗಿ ದಿಂಬನ್ನು ಒರಗಿಕೊಂಡು ಘನ ವರ್ತಕನಂತೆ ಕೂತುಕೊಂಡು ಇದ್ದನು. ಇದನ್ನು ಕೇಳಿ ಅರಸು ಆಶ್ಚರ್ಯಗೊಂಡು ಮಂತ್ರಿಮೊದಲಾದ ಸಾಮಾಜಿಕರೊಡನೆ ಕೂಡಿ ಆ ಬಳಿಗೆ ಹೋಗಲು; ಈ ರಾಜಕುಮಾರನು ಎದುರಾಗಿ ಎದ್ದು ಬಂದು ಮಾವನಾದ ಅರಸಿನ ಪಾದಗ

ಳಿಗೆ ಸಾಷ್ಟಾಂಗವೆರಗಲು ; ಅರಸು—ಇವನೇ ಅಳಿಯನು ಮಗಳಿಗೆ ಸಕಲ ವಿದ್ಯೆಗಳಲ್ಲಿಯೂ ಪರೀಕ್ಷೆಯನ್ನು ಕೊಡುವ ನಿಮಿತ್ತದಿಂದ ಹೀಗೆ ಮಾಡಿದನೆಂದು ತಿಳಿದು ಅಳಿಯನನ್ನು ಆಲಿಂಗಿಸಿಕೊಂಡು ಇವನ ಗುಡಾರದಲ್ಲಿ ಇದ್ದುದನ್ನು ಬೊಕ್ಕಸದಲ್ಲಿ ಇಡಿಸಿ ಮನೆಗೆ ಕರಕೊಂಡು ಹೋಗಿ ಭೋಜನಾದಿಗಳನ್ನು ಮಾಡಿಸಿ ಇವನ ತಂದೆಯಾದ ಅಮರಾವತಿ ಪಟ್ಟಣದ ಅಮರಶೇಖರರಾಯನಿಗೆ ಲಗ್ನಪತ್ರಿಕೆಯನ್ನು ಬರೆಯಿಸಿ ಕಳುಹಿಸಿ ಎಲ್ಲರನ್ನೂ ಕರಿಸಿಕೊಂಡು ಶುಭಮುಹೂರ್ತದಲ್ಲಿ ಶಾಸ್ತ್ರೋಕ್ತಪ್ರಕಾರ ವಿದ್ಯಾಮಂಜರಿಗೆ ಮದುವೆಯನ್ನು ಮಾಡಿಸಿದನು. ಆ ಬಳಿಕ ಬೀಗರಿಬ್ಬರೂ ಅಳಕಾವತಿದೇಶಕ್ಕೂ ಅಮರಾವತಿ ದೇಶಕ್ಕೂ ರಾಜಕುಮಾರನಿಗೆ ಪಟ್ಟಾಭಿಷೇಕವನ್ನು ಮಾಡಿ ತಮ್ಮ ತಮ್ಮ ಪತ್ನೀಸಮೇತರಾಗಿ ನೈಮಿಶಾರಣ್ಯಕ್ಕೆ ತಪಸ್ಸಿಗೆ ಹೋದರು.

---

47. CHANDAPARAKRAMI AND HARIDATTA.

೪೭. ಚಂಡಪರಾಕ್ರಮಿ ಹರಿದತ್ತರು.

ರಾಜೀವಪುರವೆಂಬ ಅಗ್ರಹಾರದಲ್ಲಿ ದೇವದಾಸನೆಂಬ ಒಬ್ಬ ಬ್ರಾಹ್ಮಣನಿದ್ದನು. ಆತನ ಹೆಂಡತಿಯಾದ ದೇವದಾಸಿ ಎಂಬುವಳು ಮಹಾ ಪತಿವ್ರತೆಯಾಗಿ ಒಂದು ವೇಳೆಯಲ್ಲಿಯಾದರೂ ಗಂಡನಾಜ್ಞೆಯನ್ನು ಮೀರದೆ ಆತನ ಶುಶ್ರೂಷೆಯನ್ನು ಮಾಡಿಕೊಂಡಿದ್ದಳು. ಆ ಬ್ರಾಹ್ಮಣನು ಪ್ರತಿದಿನದಲ್ಲಿಯೂ ಬಂದಂಥಾ ಅತಿಥಿ ಅಭ್ಯಾಗತರಿಗೆ ವಿತ್ತಶಾಠ್ಯವನ್ನು ಮಾಡದೆ ತನ್ನಲ್ಲಿ ಇದ್ದುದನ್ನು ವಂಚಿಸದೆ ಅಕ್ಕರದಿಂದ ಅನ್ನೋಪಚಾರಗಳನ್ನು ಮಾಡಿಸುತ್ತಾ ಇದ್ದನು ಹೀಗಿರುವಲ್ಲಿ ಒಂದು ದಿವಸ ರಾತ್ರಿಯಲ್ಲಿ ಹೆಂಡತಿಯು ಗಂಡನೊಡನೆ—ಸ್ವಾಮಿ ಪತಿಯೇ ! ಮಕ್ಕಳಿಲ್ಲದವರಿಗೆ ಗತಿಯಿಲ್ಲವೆಂದು ಸಕಲವೇದಶಾಸ್ತ್ರಗಳೂ ಹೇಳುತ್ತಲಿವೆ ಎಂದು ದೊಡ್ಡವರು ಹೇಳುತ್ತಾರೆ. ನನಗೆ ದೇವರು ಮಕ್ಕಳನ್ನು ಕೊಡಲಿಲ್ಲವಲ್ಲಾ ! ಮುಂದೆ ಏನು ಗತಿ ? ಎಂದು ಹೇಳಿಕೊಂಡಳು. ಗಂಡನು—ನೀನು ಹೇಳಿದುದು ನಿಜ. ಆದರೆ ಮಕ್ಕಳಿಂದ ದುಃಖವೇ ಹೊರತು ಸುಖವು ಸ್ವಲ್ಪವಾದರೂ ತೋರುವುದಿಲ್ಲ. ಹಿಂದೆ ಮಕ್ಕಳನ್ನು ಹೆತ್ತು ದಶರಥ ಮುಂತಾದವರು ಬಹಳ ದುಃಖಪಟ್ಟುದನ್ನು ನೀನು ಅರಿಯೆಯಾ ? ಆ ವ್ಯಸನವನ್ನು ಬಿಟ್ಟು ಮನೆಗೆ ಬಂದವರಿಗೆ ಅನ್ನೋದಕಾದಿಗಳಿಂದ ಆದರಗೈಯುತ್ತಾ ದೇವರ ಧ್ಯಾನವನ್ನು ಮಾಡಿಕೊಂಡು ಇದ್ದರೆ ಅವರನ್ನು ದೇವರು ತನ್ನ ಭಕ್ತರೆಂದು ತನ್ನ ಪಾದಾರವಿಂದದಲ್ಲಿ ಸೇರಿಸಿಕೊಳ್ಳುತ್ತಾನೆ. ಭಯಪಡಬೇಡ. ಮಕ್ಕಳಿಲ್ಲದವರಿಗೆ ಗತಿಯಿಲ್ಲವೆಂದು ಒರಲುವ ವೇದಶಾಸ್ತ್ರಗಳು ಕರ್ಮನಿಷ್ಠರಿಗೆ ಹೇಳಿದುವೇ ಹೊರತು ಜ್ಞಾನನಿಷ್ಠರಿಗೆ ಅಲ್ಲ. ಜ್ಞಾನನಿಷ್ಠರಿಗೆ ದೇವರನ್ನು ನಂಬಿಕೊಂಡು ದೇವರ ಧ್ಯಾನವನ್ನು ಮಾಡಿಕೊಂಡಿರುವುದೇ ಮೋಕ್ಷಸಾಧನವು. ಇದೇ ನಿಶ್ಚಯವು ಎಂದು ಹೇಳಿದನು. ಆ ಹೆಂಡತಿಯು—ಸ್ವಾಮಿ ! ನೆರೆಹೊರೆಯವರೆಲ್ಲಾ

ನನ್ನನ್ನು—ಇವಳು ಬಂಜೆಯು ಇವಳ ಕೈಯ್ಯಲ್ಲಿ ನೀರನ್ನು ಮುಟ್ಟಬಾರದೆಂದು ಹೀಯಾಳಿಸುತ್ತಾರಲ್ಲಾ ! ನನಗೆ ನಾಚಿಕೆ ಆಗುತ್ತದೆಲ್ಲಾ ! ದೇವರ ಧ್ಯಾನವನ್ನೇ ಜೆನ್ನಾಗಿ ಮಾಡಿ ನನ್ನ ಬಂಜೆತನವನ್ನು ಪರಿಹರಿಸಿಕೊಡಬೇಕೆಂದು ಬಹುತರವಾಗಿ ಗಂಡ ನನ್ನು ಬೇಡಿಕೊಂಡಳು. ಆಗ ಗಂಡನು ಆಕೆಯ ದುಃಖವನ್ನು ನೋಡಿ ಮರುಕದಿಂದ ನಿತ್ಯದಲ್ಲಿಯೂ ದೇವರನ್ನು ಸ್ತುತಿಸುತ್ತಾ ಮಕ್ಕಳಪೇಕ್ಷೆಯುಳ್ಳ ಈ ನನ್ನ ಹೆಂಡತಿಗೆ ಮಕ್ಕಳನ್ನು ದಯಪಾಲಿಸಬೇಕೆಂದು ಬೇಡಿಕೊಳ್ಳುತ್ತಾ ಇದ್ದನು.

ಹೀಗಿರುವಲ್ಲಿ ಒಂದಾನೊಂದು ದಿವಸ ಪ್ರಾತಃಕಾಲದಲ್ಲಿ ಹೆಂಡತಿಯು ಎದ್ದು ಬಂದು ಗಂಡನಿಗೆ ನಮಸ್ಕಾರವನ್ನು ಮಾಡಿ—ಸ್ವಾಮಿ ಪತಿಯೇ ! ನಿನ್ನೆಯ ರಾತ್ರಿ ದೇವರು ಕನಸ್ಸಿನಲ್ಲಿ ಬಂದು ನನ್ನ ಕೈಯಲ್ಲಿ ಬಿರಿದಿರುವ ಒಂದು ದಾಳಿಂಬದಹಣ್ಣನ್ನು ಕೊಟ್ಟು ಹೋದನು. ಅದನ್ನು ನಾನು ತಿನ್ನಬೇಕೆಂದು ಕೈಯ್ಯಲ್ಲಿಟ್ಟುಕೊಂಡು ನೋಡುತ್ತಿರುವಷ್ಟರಲ್ಲಿಯೇ ಆ ಹಣ್ಣು ಮಾಯವಾಯಿತು. ಅಷ್ಟರಲ್ಲೇ ಕೋಳಿಯು ಕೂಗಲು ; ನಾನು ಎದ್ದು ಬಂದೆನು. ಎಂದು ಹೇಳಿದಳು. ಅದಕ್ಕೆ ಗಂಡನು—ನಿನಗೆ ಮಗನನ್ನು ದೇವರು ಕೊಡುವನೆಂದು ಸಂತೋಷಪಡಿಸಿ ಕಳುಹಿಸಿದನು. ಕೆಲವು ದಿವಸದ ಮೇಲೆ ಆಕೆಯು ಬಸುರಾಗಿ ಗಂಡುಮಗುವನ್ನು ಹೆತ್ತಳು. ಆ ಮಗುವು ಹುಟ್ಟಿದ ಏಳನೆಯ ದಿವಸದಲ್ಲಿ ತಂದೆಯಾದ ದೇವದಾಸನು ಸತ್ತುಹೋದು ದರಿಂದ ದೇವದಾಸಿಯು—ನನ್ನ ಪತಿಯು ಮಗನನ್ನು ಹಾರೈಸಬೇಡವೆಂದು ಮೊದಲೇ ಹೇಳಿದನು. ನಾನು ಕೇಳದೆ ಗಂಡನನ್ನು ಕಳೆದುಕೊಂಡು ಮುಂಡೆಯಾದೆನು. ಮುಂದೇನು ಗತಿ ? ಜೆನ್ನಾಗಿ ಬದುಕಿದ್ದ ಊರಿನಲ್ಲಿ ತಿರಿದು ಉಣ್ಣುವುದು ಉಚಿತವಲ್ಲವೆಂದು ಯೋಚಿಸುತ್ತಾ ಕೂಸಿಗೆ ಮೂರು ತಿಂಗಳಾಗುವ ವರೆಗೂ ಮನೆಯಲ್ಲಿ ಇದ್ದ ವಸ್ತುವನ್ನೆಲ್ಲಾ ಮಾರಿ ತಿಂದು ಆ ಮೇಲೆ ಕೂಸನ್ನು ಎತ್ತಿಕೊಂಡು ದೇಶಾಂತರಕ್ಕೆ ಹೊರಟು ಬರುವ ದಾರಿಯಲ್ಲಿ ಬಿಸಿಲಿನಿಂದ ಕಂಗೆಟ್ಟು ಬಾಯಾರಿ ಬಸವಳಿದು ಕೂಸಿಗೆ ಮೊಲೆಯನ್ನೂಡಿ ಒಂದು ಮರದ ನೆರಳಿನಲ್ಲಿ ಚಿಗುರನ್ನು ಹಾಸಿ ತಟ್ಟಿ ಮಲಗಿಸಿ ನೀರುಕುಡಿವೆನೆಂದು ನೀರನ್ನು ಅರಸಿಕೊಂಡು ಸಮೀಪದಲ್ಲಿ ಕಾಣದೆ ದೂರ ಹೋಗಿ ಒಂದು ಕೊಳವನ್ನು ಕಂಡು ಅದರೊಳಗೆ ಮಿಂದು ನೀರನ್ನು ಕುಡಿದು ನೀರಡಿಕೆಯನ್ನು ತಗ್ಗಿಸಿಕೊಂಡು ಬರುವಷ್ಟರಲ್ಲಿಯೇ ಆ ಕಾಡಿಗೆ ಬೇಟೆಗಾಗಿ ಬಂದಿದ್ದ ಒಬ್ಬ ಬೇಡನು ಮರದ ಅಡಿಯಲ್ಲಿ ಚಿಗುರಿನ ಹಾಸಿಗೆಯ ಮೇಲೆ ತಣ್ಣಗಿರನಂತೆ ಮಲಗಿ ಕಳಕಳಿಸುತ್ತಿರುವ ಮಗುವನ್ನು ಎತ್ತಿಕೊಂಡು ಬರುತ್ತಿರುವಲ್ಲಿ—ಎಲೈ ಬೇಡನೆ ! ಈ ಕೂಸು ಬ್ರಾಹ್ಮಣರ ಹೊಟ್ಟೆಯಲ್ಲಿ ಹುಟ್ಟಿದುದು ; ನೀನಿಟ್ಟುಕೊಳ್ಳಬೇಡ ; ನಿನಗೆ ಬಹಳ ಮಕ್ಕಳಿರುವುವು. ನಿಮ್ಮ ಕುಶಲವತೀ ಪಟ್ಟಣದ ಕುಶಲಬುದ್ಧಿ ಎಂಬ ಮಂತ್ರಿಗೆ ಮಕ್ಕಳಿಲ್ಲ. ಈ ಕೂಸನ್ನು ನೀನು ತೆಗೆದುಕೊಂಡು ಹೋಗಿ ಏಕಾಂತದಲ್ಲಿ ಕಂಡು ಆತನಿಗೆ ಕೊಟ್ಟರೆ ಆತನು ನಿನಗೆ ಆ ಪಟ್ಟಣದ ಸೇನಾಧಿಪತ್ಯವನ್ನು ಕೊಟ್ಟು ಸನ್ಮಾನದಿಂದ ಇಟ್ಟುಕೊಳ್ಳುವನೆಂದು ಆಕಾಶವಾಣಿ ನುಡಿಯಲು ವ್ಯಾಧನು ಬಹಳ ಸಂತೋಷಪಟ್ಟು ಪಟ್ಟಣಕ್ಕೆ ಹೋಗಿ ಮಂತ್ರಿಯನ್ನ ಕಂಡು ಅಂತರಂಗದಲ್ಲಿ

ಆಕಾಶವಾಣಿಯು ನುಡಿದುದನ್ನು ಹೇಳಿ ಕೊಡಲು ಸಚಿವನು ಸಂತೋಷಪಟ್ಟು ಅರಸಿನ ಚಾವಡಿಗೆ ಹೋಗಿ ಸಭೆಯವರ ಮುಂದೆ ಈ ಬೇಡನನ್ನೂ ಕೂಸನ್ನೂ ಕರ ಕೊಂಡು ಹೋಗಿ ತೋರಿಸಿ ಯಾವದ್ವೃತ್ತಾಂತವನ್ನೂ ಬೇಡನ ಮುಖದಿಂದ ಬಿನ್ನಹ ವನ್ನು ಗೈಸಲು ಅರಸು ಸಭೆಯವರೊಡನೆ ಸಂತೋಷಪಟ್ಟು—ಮಕ್ಕಳಿಲ್ಲದ ನಿನಗೆ ಮಹಾದೇವನು ಮಗುವನ್ನು ಕೊಟ್ಟನು; ಜೆನ್ನಾಗಿ ಸಾಕು ಎಂದು ಹೇಳಿ ಆ ವ್ಯಾಧನಿಗೆ ಅರಸು ತನ್ನ ಸೇನಾಧಿಪತ್ಯವನ್ನು ಕೊಟ್ಟು ಇರಿಸಿಕೊಂಡನು.

ಇತ್ತಲಾ ದೇವದಾಸಿಯು ಮರದ ಬುಡಕ್ಕೆ ಬಂದು ನೋಡಿ ಮಗುವನ್ನು ಕಾಣದೆ—ಅಯ್ಯೋ ದೇವರೇ! ನನ್ನ ಮೇಲೆ ನಿನಗಿಷ್ಟು ನಿಷ್ಕರುಣವೇಕೆ? ನಾನೇನು ನಿನಗೆ ಹಗೆಯೇ? ಜಗದೊಳಗೆ ಅನೇಕ ಜನರನ್ನು ಕಾಪಾಡುವ ನೀನು ಈ ರೀತಿಯಲ್ಲಿ ಮೊದಲು ಮಗುವನ್ನು ಕೊಟ್ಟು ಗಂಡನನ್ನು ಕೊಂದು ಕಡೆಗೆ ಮಗುವನ್ನೂ ಮಾಯ ಮಾಡಿ ನನ್ನನ್ನು ಕಂಗೆಡಿಸಿದೆ ನಾನು ಮಾಡಿದ ಪಾಪದಿಂದ ನನಗೆ ಇಷ್ಟು ಸಂಕಟ ವನ್ನು ತೋರಿಸಿದೆ. ಗಂಡನನ್ನೂ ಮಗನನ್ನೂ ತಿಂದುಕೊಂಡು ಬಾಳುವ ನನ್ನ ಬಾಳು ಇನ್ನು ಮೇಲೆ ಹೇಸಿಕೆಯಲ್ಲವೇ? ನಿನ್ನ ಪಾದಕ್ಕೆ ಈ ಕೆಟ್ಟದೇಹವನ್ನು ಬಲಿ ಯಾಗಿ ಒಪ್ಪಿಸುವೆನೆಂದು ಒಣಗಿದ ಸೌದೆಯನ್ನು ಒಟ್ಟಿ ಚಿತಿಯನ್ನು ಮಾಡಿ ಬೆಂಕಿ ಯನ್ನು ಹಚ್ಚಿಸಿ—ದೇವರೇ! ನನ್ನನ್ನು ನಿನ್ನ ಪಾದಾರವಿಂದದಲ್ಲಿ ಸೇರಿಸಿಕೋ ಎಂದು ಪ್ರಾರ್ಥನೆಯನ್ನು ಮಾಡಿ ಆ ಚಿತೆಯಲ್ಲಿ ಬೀಳುವುದಕ್ಕೆ ಪ್ರದಕ್ಷಿಣವನ್ನು ಮಾಡು ತ್ತಿರಲು ಆಗ ದೇವರು ಸತ್ತು ಹೋಗಿದ್ದ ಈ ಗಂಡನ ಆತ್ಮಕ್ಕೆ ಕರುಣದಿಂದ ಬದಲು ದೇಹವನ್ನು ಪೂರ್ವದಲ್ಲಿದ್ದಂತೆ ಗೈದು ಅದರಲ್ಲಿ ಹೊಗಿಸಿ ಆಕೆಯ ಮುಂದೆ ನಿಲ್ಲಿಸಿ—ಇಗೋ ನಿನ್ನ ಗಂಡನು! ನಾನು ನಿನ್ನ ದುಃಖಕ್ಕೆ ಮರುಗಿ ಪುನಃ ಇವನನ್ನು ಕೊಟ್ಟಿದ್ದೇನೆ. ಇನ್ನು ಮೇಲೆ ಈ ಗಂಡನನ್ನು ಕೂಡಿಕೊಂಡು ಈ ಕುಶಲವತೀ ಪಟ್ಟಣಕ್ಕೆ ಹೋಗಿ ಸುಖವಾಗಿರು ಎಂದು ಹೇಳಿ ಅದೃಶ್ಯನಾದನು. ಆಗ ದೇವದಾಸಿಯು ಆಶ್ಚರ್ಯಪಟ್ಟು ಇದೆಲ್ಲಾ ದೇವರ ಚಿತ್ತವೆಂದು ತಿಳಿದು ದೇವದಾಸ ನಿಗೆ ನಮಷ್ಕರಿಸಿದಳು. ದೇವದಾಸನು ಹೆಂಡತಿಯನ್ನು ಮನ್ನಿಸಿ—ಈಗ ಬಂಜೆತನವು ಹೋಯಿತೇ? ಮಕ್ಕಳಿಂದ ದುಃಖವೆಂದು ನಾನು ಹೇಳಿದುದು ತಾರ್ಕಣಿಗೆ ಬಂದಿತೇ? ಇನ್ನು ಮೇಲಾದರೂ ಯಾವುದನ್ನೂ ಅಪೇಕ್ಷಿಸದೆ ದೇವರಿಗೆ ತೊಂದರೆಯನ್ನು ಕೊಡದೆ ದೇವರು ಕೊಟ್ಟಷ್ಟರಲ್ಲಿ ಸಂತೋಷಪಟ್ಟುಕೊಂಡು ಆತನನ್ನು ನಿರಂತರವೂ ಪ್ರಾರ್ಥಿಸಿಕೊಂಡಿರುವೆಯಾ? ಎಂದು ಕೇಳಿದನು. ಆಗ ದೇವದಾಸಿಯು ತಮ್ಮ ಅಪ್ಪ ಣೆಯ ಮೇರೆಯೇ ನಡೆದುಕೊಂಡು ಇರುವೆನೆಂದು ಹೇಳಿ ಗಂಡನಿಗೆ ಸಾಷ್ಟಾಂಗವಾಗಿ ನಮಸ್ಕರಿಸಿದಳು. ತರುವಾಯ ದೇವದಾಸನು ಮಡದಿಯನೊಡಗೊಂಡು ಕುಶಲವತೀ ಎಂಬ ಪಟ್ಟಣವನ್ನು ಸೇರಿ ಒಂದು ಮನೆಯನ್ನು ಮಾಡಿಕೊಂಡು ಉಂಛವೃತ್ತಿಯಿಂದ ಕಾಲಕ್ಷೇಪವನ್ನು ಮಾಡುತ್ತಾ ದೇವರನ್ನು ಪ್ರಾರ್ಥಿಸಿಕೊಂಡಿದ್ದನು.

ಇತ್ತಲಾ ಕುಶಲಬುದ್ಧಿ ಎಂಬ ಮಂತ್ರಿಯು ಆ ಕೂಸಿಗೆ ಹರಿದತ್ತನೆಂಬ ಹೆಸರ ನ್ನಿಟ್ಟು ಅತಿಶಯದಿಂದ ಕಾಪಾಡುತ್ತಿರಲಾಗಿ ಬಿದಿಗೆಯ ಚಂದ್ರನಂತೆ ದಿನದಿನಕ್ಕೆ ಅಭ

ವೃದ್ಧಿಯಾಗಿ ಬೆಳೆಯುತ್ತಾ ತಂದೆತಾಯಿಗಳಿಗೆ ಬಾಲಲೀಲೆಯನ್ನು ತೋರಿಸುತ್ತಾ ಸಂತೋಷಪಡಿಸುತ್ತಾ ಅಂಬೆಗಾಲನ್ನು ಇಡುತ್ತಾ ದಟ್ಟಡಿಯನ್ನು ಹಾಕುತ್ತಾ ಜೊಲ್ಲನ್ನು ಸುರಿಸುತ್ತಾ ತೊದಲು ನುಡಿಯನ್ನು ನುಡಿಯುತ್ತಾ ನಿಷ್ಕಾರಣವಾಗಿ ನಗುತ್ತಾ ಮೊಲೆಕೊಡೆಂದು ತಾಯಿಯನ್ನು ಕಾಡುತ್ತಾ ಕೇಳಿದುದನ್ನು ಕೊಡದಿದ್ದರೆ ಅಳುತ್ತಾ ಅಸಾಧ್ಯವಾದುವುಗಳನ್ನು ಬೇಡುತ್ತಾ ಅಸಂಗತವಾಗಿ ಅರ್ಧ ಮಾತುಗಳನ್ನು ಆಡುತ್ತಾ ಇರುವ ಮಗುವಿಗೆ ಐದು ವರುಷ ತುಂಬಲು ಕುಶಲಬುದ್ಧಿಯು ಚೌಲಕರ್ಮವನ್ನು ಮಾಡಿ ಓನಾಮ ಪೂಜೆಯನ್ನು ಮಾಡಿಸಿ ಉಪಾಧ್ಯಾಯರ ಮಠಕ್ಕೆ ಹಾಕಿದನು. ಹರಿದತ್ತನು ಉಪಾಧ್ಯಾಯರ ಕಟ್ಟಿಯನ್ನು ಮೀರದೆ ಕೆಟ್ಟ ಹುಡುಗರ ಜೊತೆಯಲ್ಲಿ ಆಡದೆ ಕ್ಷಣವಾದರೂ ವ್ಯರ್ಥ ಕಾಲಕ್ಷೇಪವನ್ನು ಮಾಡದೆ ಪ್ರಾಕೃತವಿದ್ಯೆಗಳನ್ನು ಕಲಿತು ಛಪ್ಪನ್ನದೇಶಗಳ ಮಾತುಗಳನ್ನೂ ಬರಹಗಳನ್ನೂ ಕಲಿತ ಮೇಲೆ ಅವನಿಗೆ ಏಳು ವರುಷವಾಗಲು ತಂದೆಯು ಗರ್ಭಾಷ್ಟಮದಲ್ಲಿ ಉಪನಯನವನ್ನು ಮಾಡಿ ವೇದಶಾಸ್ತ್ರಗಳ ಅಭ್ಯಾಸಕ್ಕೆ ಸಕಲ ವಿದ್ಯಾಪಾರಂಗತರಾದ ಗುರುಗಳ ವಶಕ್ಕೆ ಇವನನ್ನು ಒಪ್ಪಿಸಿದನು. ಈ ಹರಿದತ್ತನು ಪ್ರಾತಃಕಾಲದಲ್ಲಿ ಎದ್ದು ಕೆರೆ ತೊರೆ ಕಟ್ಟೆ ಕುಂಟೆ ಕೊಳ ಭಾವಿ ಮುಂತಾದ ಜಲಸ್ಥಾನಗಳಲ್ಲಿ ಮಿಂದು ಮಡಿಯನ್ನುಟ್ಟು ದೇವರ ಧ್ಯಾನವನ್ನು ಮಾಡಿ ಆಚಾರ್ಯರ ಸನ್ನಿಧಿಗೆ ಹೋಗಿ ಅವರನ್ನು ವಂದಿಸಿ ವೇದಾಧ್ಯಯನವನ್ನು ಮಾಡುತ್ತಾ ಮಧ್ಯಾಹ್ನವಾದ ಮೇಲೆ ಗುರುಗಳಪ್ಪಣೆಯನ್ನು ತೆಗೆದುಕೊಂಡು ಭಿಕ್ಷಾಚರಣೆಯನ್ನು ಮಾಡಿ ಆ ಭಿಕ್ಷಾನ್ನವನ್ನು ತಂದು ದೇವರ ಪ್ರಾರ್ಧನೆಯನ್ನು ಮಾಡಿ ಉಂಡು ತಿರಿಗಿ ಪ್ರದೋಷಕಾಲದ ವರೆಗೂ ಅಧ್ಯಯನವನ್ನು ಮಾಡುತ್ತಾ ಅನಧ್ಯಾಯ ದಿವಸಗಳಲ್ಲಿ ಕಾವ್ಯನಾಟಕಾದಿ ಅಲಂಕಾರ ಶಾಸ್ತ್ರಗಳನ್ನು ಕಲಿಯುತ್ತಾ ಗುರುವಿಗೆ ಅಚ್ಚುಮೆಚ್ಚಾಗಿ ಇದ್ದುಕೊಂಡು ಹನ್ನೆರಡು ವರುಷ ಗುರುಕುಲವಾಸವನ್ನು ಮಾಡಿ ಸಂಹಿತೆ ಪದ ಕ್ರಮ ಜಟೆ ಘನ ಮುಂತಾದ ವೇದವನ್ನೂ ಕಲಿತನು. ಗುರುವು ನೋಡಿ ಸಂತೋಷದಿಂದ ಶಿಷ್ಯನಾದ ಹರಿದತ್ತನ್ನು ಕರಕೊಂಡು ಮಂತ್ರಿಯ ಮನೆಗೆ ಬಂದು ನಿನ್ನ ಮಗನು ಸಾಂಗವಾಗಿ ವೇದವನ್ನು ಕಲಿತು ಘನಪಾಠಿ ಅನ್ನಿಸಿಕೊಂಡನು. ಶಾಸ್ತ್ರೋಕ್ತಪ್ರಕಾರ ಹನ್ನೆರಡು ವರುಷ ಗುರುಕುಲವಾಸವನ್ನೂ ಭಿಕ್ಷಾಚರಣೆಯನ್ನೂ ಮಾಡಿ ಲೇಶಮಾತ್ರವಾದರೂ ವ್ಯತ್ಯಾಸವಾಗಿ ನಡೆಯದೆ ಬ್ರಹ್ಮಚರ್ಯ ವ್ರತದಲ್ಲಿ ಇದ್ದನು. ಇನ್ನು ಮೇಲೆ ವ್ರತಸಮಾವರ್ತನೆಯನ್ನು ಮಾಡಿಸೆಂದು ಹೇಳಿದನು. ಕುಶಲಬುದ್ಧಿಯು ಹರಿದತ್ತನ ಕಡೆಯಿಂದ ಗುರುದಕ್ಷಿಣೆಯನ್ನು ಕೊಡಿಸಿ ಮಗನಿಗೆ ವ್ರತ ಸಮಾವರ್ತನೆಯನ್ನು ಮಾಡಿಸಿದನು.

ಆ ಬಳಿಕ ಹರಿದತ್ತನು ತಂದೆತಾಯಿಗಳಿಗೆ ನಮಸ್ಕಾರವನ್ನು ಮಾಡಿ ಹೇಳಿದುದೇನಂದರೆ—ಸ್ವಾಮಿ ತಂದೆಯೇ ! ಲೋಕದಲ್ಲಿ ಯಾವ ಮನುಜನು ದೇಶಾಟನವನ್ನು ಮಾಡದೆ ಪಂಡಿತರೊಡನೆ ಸಂಭಾಷಣೆಯನ್ನು ಮಾಡದೆ ಇರುವನೋ ಅವನ ಬುದ್ಧಿಯು ತಣ್ಣೀರ ಕೊಪ್ಪರಿಗೆಯಲ್ಲಿಟ್ಟ ತುಪ್ಪದಂತೆ ಸಂಕುಚಿತವಾಗುವುದು. ಯಾವನು ನಾನಾ ದೇಶಗಳನ್ನು ಸಂಚರಿಸುತ್ತಾ ವಿದ್ವಾಂಸರೊಡನೆ ಸಂಭಾಷಣೆಯನ್ನು ಮಾಡುವನೋ

ಅವನ ಬುದ್ಧಿಯು ಬಿಸಿ ನೀರಿನ ಕಡಾಯಿಯೊಳಗಿಟ್ಟ ಕೈಯೆಣ್ಣೆಯ ಹಸಿಯಂತೆ ವಿಸ್ತರಿಸುವುದೆಂದು ವಿಜ್ಞಾಪಿಸಿ ತಂದೆತಾಯಿಗಳನ್ನು ಬೀಳ್ಕೊಂಡು ಹೊರಟು ದೇಶದೇಶಗಳನ್ನು ತಿರುಗುತ್ತಾ ಅಲ್ಲಿರುವ ವಿದ್ವಾಂಸರನ್ನು ಸೇವಿಸುತ್ತಾ ತರ್ಕ ವ್ಯಾಕರಣ ಮೀಮಾಂಸೆ ವೇದಾಂತ ಜ್ಯೋತಿಷ ವೈದ್ಯ ಮಂತ್ರಶಾಸ್ತ್ರ ಶಿಲ್ಪವಿದ್ಯೆ ಸಂಗೀತ ಮುಂತಾದ ಎಶೇಷ ವಿದ್ಯೆಗಳನ್ನು ಗ್ರಹಿಸುತ್ತಾ ಅಲ್ಲಲ್ಲಿ ವಿದ್ವಾಂಸರೊಡನೆ ಪ್ರಸಂಗವನ್ನು ಮಾಡುತ್ತಾ ಸಕಲ ವಿದ್ಯಾವಾರಂಗತನಾಗಿ ಸರ್ವವನ್ನೂ ಶೋಧಿಸಿ ನೋಡಿ ಧರ್ಮಾರ್ಥಕಾಮಮೋಕ್ಷಗಳೆಂಬ ನಾಲ್ಕು ಪುರುಷಾರ್ಥಗಳಲ್ಲಿ ಆತ್ಮೋಜ್ಜೀವಕವಾದ ಮೋಕ್ಷವೇ ನಿತ್ಯ ಸಂತೋಷವನ್ನು ಕೊಡುವುದೆಂದು ಆ ಮೋಕ್ಷಸಾಧನೆಗೆ ಏಕೋದೇವನ ಜ್ಞಾನವೇ ಕಾರಣವೆಂದೂ ಆ ದೇವನೇ ಸಕಲ ಲೋಕವನ್ನೂ ಉಂಟುಮಾಡಿ ಕಾಪಾಡಿ ಶಿಕ್ಷೆ ರಕ್ಷೆಗಳನ್ನು ಮಾಡುವಂಥಾವನೆಂದೂ ನಿಜಮನದಲ್ಲಿ ನಿಶ್ಚಯಿಸಿ ಆತನನ್ನು ನಿಶ್ಚಲವಾದಭಕ್ತಿಯಿಂದ ನಂಬಿ ಪ್ರತಿದಿನವೂ ತ್ರಿಕಾಲದಲ್ಲಿಯೂ —ಈ ದೇಹದಲ್ಲಿ ಹರಣವಿರುವ ತನಕ ನಿನ್ನ ಚಿತ್ತ ಬಂದಂತೆ ನನ್ನ ಪ್ರಾರಬ್ಧಾನುಸಾರವಾಗಿ ಕಾಪಾಡೆಂದು ಪ್ರಾರ್ಥನೆಯನ್ನು ಮಾಡುತ್ತಾ ದೇವರು ಕೊಟ್ಟುದರಲ್ಲಿ ಸಂತೋಷಪಟ್ಟು ಪತ್ನೀಪುತ್ರರೊಡನೆ ಉಂಡು ಉಟ್ಟು ಬೇಡುವ ದೀನರಿಗೆ ವಿತ್ತಶಾಠ್ಯವನ್ನು ಮಾಡದೆ ಕೊಟ್ಟು ಕೊಂಡು ಇರಬೇಕೆಂದು ಯೋಚಿಸಿ ತಿರಿಗಿ ಕುಶಲವತಿಗೆ ಹೋಗಬೇಕೆಂದು ಹೊರಟು ಬರುವ ಮಾರ್ಗದಲ್ಲಿದ್ದ ಸುಗುಣಾರಾಮವೆಂಬ ಅಗ್ರಹಾರದ ಬಳಿಗೆ ಬರುವಷ್ಟರೊಳಗೆ ಸಾಯಂಕಾಲವಾದುದರಿಂದ ಆ ಅಗ್ರಹಾರವನ್ನು ಹೊಕ್ಕು ಅಲ್ಲಿರುವ ಸುಜ್ಞಾನಭಟ್ಟನೆಂಬ ಬ್ರಾಹ್ಮಣನ ಮನೆಯಲ್ಲಿ ಬಂದು ಇಳಿದುಕೊಂಡನು.

ಆ ಸುಜ್ಞಾನಭಟ್ಟನೂ ಆತನ ಹೆಂಡತಿಯಾದ ಸುಶೀಲೆಯೂ ಈತನನ್ನು ಕಂಡು ಒಹು ಸಂತೋಷದಿಂದ ಆದರಿಸಿ ಊಟವುಪಚಾರಗಳನ್ನು ಮಾಡಿಸಿ ಮಲಗಿಕೊಳ್ಳುವುದಕ್ಕೆ ಒಂದು ಮಂದಲಿಗೆಯನ್ನು ಕೊಡಲು ಹರಿದತ್ತನು ದೇವರ ಧ್ಯಾನವನ್ನು ಮಾಡಿ ಆ ಮಂದಲಿಗೆಯ ಮೇಲೆ ಮಲಗಿಕೊಂಡನು. ತರುವಾಯ ಬ್ರಾಹ್ಮಿಮುಹೂರ್ತದಲ್ಲಿ ಮನೆಯ ಯಜಮಾನನಾದ ಸುಜ್ಞಾನಭಟ್ಟನು ಹಾಸಿಗೆಯ ಮೇಲೆ ಕುಳಿತು ದೇವರ ಪ್ರಾರ್ಥನೆಯನ್ನು ಮಾಡುತ್ತಿರುವ ಹರಿದತ್ತನ ಬಳಿಗೆ ಹೋಗಿ ಹೇಳಿದುದೇನಂದರೆ— ಭಗವಂತನಿಗೆ ಏಕಾಂತ ಭಕ್ತನಾದ ಎಲೈ ಹರಿದತ್ತನೆ! ದಂಪತಿಗಳಾದ ನಾವು ಮಕ್ಕಳಿಲ್ಲದೆ ಸರ್ವಲೋಕ ಕರ್ತನಾದ ಹರಿಯನ್ನು ನಿತ್ಯದಲ್ಲೂ ಧ್ಯಾನಿಸುತ್ತಾ ಇರುವಲ್ಲಿ ಒಂದು ದಿವಸ ಕುಗ್ಗಿದ ನಡುವುಳ್ಳ ಸುಕ್ಕಿದ ಚರ್ಮವುಳ್ಳ ಮೈಯಲ್ಲಿ ಎಲಬು ತೊಗಲೇ ಹೊರತು ತುಸವಾದರೂ ಮಾಂಸವು ಇಲ್ಲದವಳಾದ ಮುತ್ತೈದೆಯಾದಂಥಾ ಒಬ್ಬ ಅಜ್ಜುಗುಜ್ಜು ಮುದುಕಿಯು ನೆರೆಯಿಂದ ಬೆಳ್ಳಗಾಗಿರುವ ಕೂದಲುಗಳುಳ್ಳ ತಲೆಯನ್ನು ನಡುಗಿಸುತ್ತಾ ಒಂದು ಹಲ್ಲಾದರೂ ಇಲ್ಲದ ಬಾಯಿಯಲ್ಲಿ ಯಾವಾಗಲೂ ಏನೋ ತಿನ್ನುವವಳ ಹಾಗೆ ಕಾಣಿಸುತ್ತಾ ಕೋಲೂರಿಕೊಂಡು ಮೂರು ವರುಷದ ಒಂದು ಸಣ್ಣ ಹುಡುಗಿಯನ್ನು ಜೊತೆಯಲ್ಲಿ ಕರಕೊಂಡು ನಮ್ಮ ಮನೆಯ ಬಾಗಲಿಗೆ ಒಂದು ಬಾಗಲ ಮೆಟ್ಟಲನ್ನು ಹತ್ತಲಾರದೆ ನಡುಗುವ ಧ್ವನಿಯಿಂದ—ಯಾರೊಳಗೆ!

ಎಂದು ಕೂಗಲು ನನ್ನ ಹೆಂಡತಿಯು ಓಡಿ ಹೋಗಿ ಆ ವೃದ್ಧ ಸುಮಂಗಲಿಯನ್ನು ನೋಡಿ ಅಡ್ಡಬಿದ್ದು ಕಾಲನ್ನು ತೊಳೆದು ಕೈಕೊಟ್ಟು ಮೆಲ್ಲಗೆ ಹತ್ತಿಸಿಕೊಂಡು ಕೂಸು ಸಹಿತ ಒಳಗೆ ಕರಕೊಂಡು ಬಂದು ಕಾಲುಮಣೆಯ ಮೇಲೆ ಕುಳ್ಳಿರಿಸಿ ಅರಿಸಿನ ಕುಂಕುಮ ಹೂವು ಎಲೆ ಅಡಿಕೆಗಳನ್ನು ಕೊಟ್ಟು ಪೂಜಿಸಿ ಅನ್ನೋದಕಗಳಿಂದ ತೃಪ್ತಿ ಪಡಿಸಿದಳು. ಬಳಿಕ ಆ ಮುತ್ತೈದೆಯು ನನ್ನ ಹೆಂಡತಿಯನ್ನು ಕರೆದು—ಎಲೈ ಸತಿಯೆ! ನೀನು ಮಹಾ ಪತಿವ್ರತೆಯು ನಾನು ಕಾಶಿಯಲ್ಲಿರುವ ಗಂಗಾಧರಭಟ್ಟನೆಂಬ ಪಾರ್ವನ ಹೆಂಡತಿಯು. ನನ್ನ ಗಂಡನು ಸನ್ಯಾಸಿಯಾಗಿ ಹುಲಿಯ ಚರ್ಮವನ್ನು ಹೊದಿದುಕೊಂಡು ಸಂಸಾರವಿರಕ್ತನಾಗಿ ಸ್ಮಶಾನದಲ್ಲಿ ವಾಸಮಾಡಿಕೊಂಡಿದ್ದಾನೆ. ಇವಳು ನನ್ನ ಕೂಸು. ಇವಳನ್ನು ಭೂತಪ್ರೇತಪಿಶಾಚಿಗಳಿಂದ ಕೂಡಿರುವ ಮಸಣಕ್ಕೆ ಕರೆಕೊಂಡು ಹೋಗುವುದಕ್ಕೆ ಅಂಜಿ ಇಲ್ಲಿಗೆ ಕರತಂದೆನು ಇವಳನ್ನು ನಿನ್ನ ಮಗಳನ್ನಾಗಿ ಸಾಕಿಕೋ ಎಂದು ಆ ಬಾಲಕಿಯನ್ನು ನನಗೆ ಕೊಟ್ಟು ನನ್ನನ್ನು ಜನರು ಸರ್ವಮಂಗಳೆ ಎಂಬ ಹೆಸರಿನಿಂದ ಕರೆಯುವರು. ನಾನು ನನ್ನ ಗಂಡನಂತೆ ವಿರಕ್ತಳಾಗಿ ಶ್ಮಶಾನವಾಸಕ್ಕೆ ಹೋಗುವೆನೆಂದು ಹೇಳಿ ಅಲ್ಲಿಯೇ ಅದೃಶ್ಯಳಾದಳಂತೆ. ಗ್ರಾಮಾಂತರಕ್ಕೆ ಹೋಗಿದ್ದ ನಾನು ಬಂದ ಮೇಲೆ ಈ ಸುದ್ದಿಗಳನ್ನೆಲ್ಲಾ ಹೇಳಿ ನನ್ನ ಕೈಯಲ್ಲಿ ಆ ಕೂಸನ್ನು ಕೊಡಲು ನಾನು ಸರ್ವಾಂಗ ಸುಂದರಿಯಾದ ಮಗುವನ್ನು ನೋಡಿ ಆಕೆಗೆ ಶಿವದತ್ತೆ ಎಂದು ಹೆಸರನ್ನಿಟ್ಟು ಆರೈಕೆ ಮಾಡಿಕೊಂಡು ಬಂದೆನು. ಈಗ ಆ ಕನ್ನಿಕೆಗೆ ಏಳು ತುಂಬಿ ಎಂಟನೆಯ ವರುಷವಾಗುತ್ತಿರುವುದರಿಂದ ಸತ್ವಾತ್ರದಲ್ಲಿ ಕನ್ಯಾದಾನವನ್ನು ಮಾಡಬೇಕೆಂದು ಎಣಿಸಿಕೊಂಡಿದ್ದೆನು. ಈ ದಿವಸ ಬೆಳಗಿನ ಜಾವದಲ್ಲಿ ಆ ಮಗಳು ಎದ್ದು ನನ್ನ ಬಳಿಗೆ ಬಂದು—ಎಲೈ ತಂದೆಯೇ! ಈ ರಾತ್ರಿ ನನ್ನ ಕನಸಿನಲ್ಲಿ ಒಬ್ಬ ಮುತ್ತೈದೆ ಬಂದು ನನ್ನನ್ನು ಕುರಿತು ನಿಮ್ಮ ಮನೆಯಲ್ಲಿ ಇಳಿದಿರುವ ಹರಿದತ್ತನೆಂಬ ಬ್ರಹ್ಮಚಾರಿಬ್ರಾಹ್ಮಣನನ್ನು ವರಿಸಿ ಮದುವೆಯಾಗೆಂದು ಹೇಳಿ ಅದೃಶ್ಯಳಾದಳು. ಆದಕಾರಣ ನನ್ನನ್ನು ಆತನಿಗೆ ಮದುವೆ ಮಾಡಿಕೊಡು ಎಂದು ಹೇಳಿದಳು. ಇಗೋ! ಇವಳೇ ಆ ಕನ್ನಿಕೆಯು ಎಂದು ತೋರಿಸಿ ಇವಳನ್ನು ಪರಿಗ್ರಹಿಸಬೇಕೆಂದು ಬೇಡಿಕೊಂಡನು. ಅದನ್ನು ಕೇಳಿ ಹರಿದತ್ತನು—ಭಗವತ್ಸಂಕಲ್ಪದಂತೆ ನಡೆಯುವುದೇ ಸುಜನರಿಗೆ ಮುಖ್ಯವಾದುದರಿಂದ ತಮ್ಮ ಅನುಗ್ರಹವಾದಂತಾಗಲಿ ಎಂದು ಒಪ್ಪಿಕೊಂಡನು. ಬಳಿಕ ಸುಜ್ಞಾನಭಟ್ಟನು ಸುಮಾಸ ಸುದಿನ ಸುವಾರ ಸುನಕ್ಷತ್ರ ಸುಯೋಗ ಸುಕರಣ ಸುಲಗ್ನದಲ್ಲಿ ಸುಪುತ್ರಿಯನ್ನು ಸುಶೀಲೆಯಾದ ಸುಸತಿಯೊಡನೆ ಕೂಡಿ ಸುಗುಣನಾದ ಹರಿದತ್ತನಿಗೆ ಸುಜನ ಸಮೂಹದ ಮುಂದೆ ಸುರಾಸ್ಯ ಸಾಕ್ಷಿಯಿಂದ ಸುರಪಾಲನಿಗರ್ಪಿತವೆಂದು ತುಲಸೀದಳ ಸಮೇತ ಗಂಗೋದಕಧಾರಾಪೂರ್ವಕ ಮದುವೆಯನ್ನು ಮಾಡಿಕೊಟ್ಟು ಆ ತರುವಾಯ ಪಾರ್ವರ ಪದ್ಧತಿಯ ಮೇರೆಗೆ ವೈದಿಕ ಲೌಕಿಕ ಕರ್ಮಗಳನ್ನು ನೆರವೇರಿಸಿದನು. ಅನಂತರದಲ್ಲಿ ಹರಿದತ್ತನು ಅತ್ತೆ ಮಾವಂದಿರ ಅಪ್ಪಣೆಯನ್ನು ಪಡೆದು ಮಡದಿಯ ಕೂಡಾ ಕುಶಲವತಿಗೆ ಬಂದು ತನ್ನ ತಾಯಿ ತಂದೆಗಳಿಗೆ ನಮಸ್ಕರಿಸಿ ಹೆಂಡತಿ

ಯನ್ನು ಅಡ್ಡಬೀಳಿಸಿ ದೇಶಾಟನಕ್ಕೆ ಅಲ್ಲಿಂದ ಹೊರಟದು ಮೊದಲು ತಿರುಗಿ ಅಲ್ಲಿಗೆ ಸೇರುವ ತನಕ ತನ್ನ ಯಾವದ್ವೃತ್ತಾಂತವನ್ನೂ ವಿಪ್ಲಾಪಿಸಲಾಗಿ ತಾಯಿತಂದೆಗಳು ಕೇಳಿ ಸಂತೋಷಪಟ್ಟರು.

ಹೀಗೆ ಕೆಲವು ಕಾಲ ಕಳೆಯುತ್ತಿರಲು ದಿಗ್ವಿಜಯಾರ್ಥವಾಗಿ ಹೋಗಿದ್ದ ಆ ಕುಶಲವತಿಯ ನಗರದ ಕುಶಲಶೇಖರರಾಜನ ಮಗನಾದ ಚಂಡಪರಾಕ್ರಮಿ ಎಂಬ ಯುವರಾಜನು ಸಮಸ್ತ ದೇಶದ ದೊರೆಗಳನ್ನು ಜಯಿಸಿ ಅವರಿತ್ತ ಕಪ್ಪದ ವಸ್ತುಗಳು ಸಹಿತವಾಗಿ ತಂದೆಗೆ ಬರೆದು ಕಳುಹಿಸಿದ್ದ ಬಿನ್ನವತ್ತಲೆಯನ್ನು ಅರಸು ಚಾವಡಿಯಲ್ಲಿ ಕುಳಿತು ಒಡ್ಡೋಲಗ ಮಾಡುತ್ತಿರುವಾಗ್ಗೆ ನಿಯೋಗಿಯು ತೆಗೆದುಕೊಂಡು ಬಂದು ಅರಸಿಗೆ ನಮಸ್ಕರಿಸಿ ಕೊಟ್ಟನು. ಅರಸು ಅದನ್ನು ಓದುವಂತೆ ರಾಯಸದವನ ಕೈಯಲ್ಲಿ ಕೊಡಲು ರಾಯಸದವನು ಬಿಚ್ಚಿ ಓದುವಲ್ಲಿ ಅದರಲ್ಲಿದ್ದ ಒಕ್ಕಣೆ ಏನಂದರೆ—ಶ್ರಿಮದ್ರಾಜಾಧಿರಾಜದ ಕುಶಲವತೀ ನಗರದರಸುಗಳಾದ ನನ್ನ ತಂದೆಯ ಅಡಿದಾವರೆಗಳಿಗೆ ನಿಮ್ಮ ಮಗನಾದ ಚಂಡಪರಾಕ್ರಮಿಯು ಸಾಷ್ಟಾಂಗವಾಗಿ ನಮಸ್ಕರಿಸಿ ಬಿನ್ನವಿಸುವುದೇನಂದರೆ—ತಮ್ಮ ಚರಣಾನುಗ್ರಹದಿಂದ ಸಕಲ ದೇಶದ ದೊರೆಗಳು ಸ್ವಾಧೀನರಾಗಿ ಕಪ್ಪವನ್ನು ಕೊಟ್ಟರು. ಈಗ ಸಿಂಹಳದ್ವೀಪಾಧಿಪತಿಯು ಸ್ವಾಧೀನನಾಗದೆ ಇರುವುದರಿಂದ ನಮ್ಮ ಅಧೀನದಲ್ಲಿರುವ ಜಂಬೂದ್ವೀಪದ ಅರಸುಗಳ ಚತುರಂಗಬಲವನ್ನು ಕೂಡಿಕೊಂಡು ಸಿಂಹಳದ್ವೀಪಕ್ಕೆ ದಂಡಯಾತ್ರೆಗೆ ಹೊರಡಬೇಕೆಂದು ನಿಶ್ಚಯಿಸಿದ್ದೇನೆ. ನಮ್ಮ ಮಂತ್ರಿಶಿಖಾಮಣಿಗಳಾದ ಕುಶಲಬುದ್ಧಿಯವರ ಮಕ್ಕಳಾದ ಹರಿದತ್ತರು ದೇಶಾಟನವನ್ನು ಮಾಡಿಕೊಂಡು ನಗರಕ್ಕೆ ಬಂದು ಇದ್ದರೆ ಜಾಗ್ರತೆಯಿಂದ ನನ್ನೆಡೆಗೆ ಕಳುಹಿಸಬೇಕು. ಈಗ ನಾನು ಪ್ರಯತ್ನಿಸಿರುವ ಕಾರ್ಯವು ಅತಿದುರ್ಘಟವಾದುದರಿಂದ ಬುದ್ಧಿಯಲ್ಲಿ ಬೃಹಸ್ಪತಿಗೂ ಕ್ಷೇಮಚಿಂತೆಯಲ್ಲಿ ಜನಸಿಗೂ ಮಂತ್ರಾಲೋಚನೆಗೆ ಸಮರಾದವರು ಬೇಕಾಗಿರುವುದರಿಂದ ಅವರನ್ನು ನನ್ನೆಡೆಗೆ ಕಳುಹಿಸಿದ ಹೊರತು ನಾನು ಮುಂದಕ್ಕೆ ಹೆಜ್ಜೆ ಇಡುವುದಿಲ್ಲ. ಇಂತೀ ಬಿನ್ನಹ. ಈ ರೀತಿಯಾಗಿ ಬರೆದಿದ್ದ ಒಕ್ಕಣೆಯನ್ನು ಕೇಳಿ ಕುಶಲಶೇಖರರಾಜನೂ ಕುಶಲಬುದ್ಧಿಯೂ ಹರಿದತ್ತನನ್ನು ಕರಿಸಿ ಆ ಓಲೆಯನ್ನು ಓದಿಸಿಕೊಟ್ಟರು. ಹರಿದತ್ತನು ಅದನ್ನು ಕೇಳಿದ ಕ್ಷಣವೇ—ಅಪ್ಪಣೆಯಾದರೆ ಯುವರಾಜರ ಬಳಿಗೆ ತೆರಳುತ್ತೇನೆಂದು ಹೊರಡಲು ರಾಯನು ಆತನೊಡನೆ ಚತುರಂಗಬಲಸಮೇತವಾಗಿ ಕಿರಾತಸೇನಾಧಿಪತಿಯನ್ನು ಸಹಾಯವಾಗಿ ಕೊಟ್ಟು ಕಳುಹಿಸಿದನು. ಆಗ ಹರಿದತ್ತನು ಕಿರಾತಸೇನಾಧಿಪತಿಯನ್ನು ಒಡಗೊಂಡು ದಾರಿಯಲ್ಲಿ ತಡವುಮಾಡದೆ ಬಂದು ಯುವರಾಜನಾದ ಚಂಡಪರಾಕ್ರಮಿಯನ್ನು ಕಾಣಿಸಿಕೊಂಡನು. ಈತನು ಎದ್ದು ಹರಿದತ್ತನಿಗೆ ನಮಸ್ಕರಿಸಿ ಕಿರಾತಸೇನಾಧಿಪತಿಯನ್ನು ಮನ್ನಿಸಿ ಸಿಂಹಳದ್ವೀಪದಿಗ್ವಿಜಯಾರ್ಥವಾಗಿ ಹೊರಡಲೆಣಿಸಿ ನಮ್ಮ ಸೇನೆಗಳು ಸಮುದ್ರದ ಮೇಲೆ ತೆರಳುವುದಕ್ಕಾಗಿ ಒಬ್ಬೊಬ್ಬ ದೇಶಾಧಿಪತಿಯು ಒಂದೊಂದು ಹಡಗನ್ನು ಸಿದ್ಧಮಾಡಿಸುವಂತೆ ನಮ್ಮ ಛಪ್ಪನ್ನ ದೇಶದ ದೊರೆಗಳಿಗೆ ಅಪ್ಪಣೆ ಕೊಡಿಸೆಂದು ಹೇಳಿದ ಹಾಗೆಯೇ ಸ್ವಲ್ಪ ಕಾಲದಲ್ಲಿ ಐವತ್ತಾರು

ಹಡಗುಗಳು ಕಡಲ ತಡಿಯಲ್ಲಿ ಸಿದ್ಧವಾಗಿರುವುದನ್ನು ನೋಡಿ ರಾಜಕುಮಾರನು ಹರಿದತ್ತನನ್ನು ಕುರಿತು—ನೀವು ಮುಂದೆ ಏನನ್ನುತ್ತೀರಿ? ಎಂದು ಕೇಳಿದನು.

ಆಗ ರಾಜಾಜ್ಞೆಯಾದಂತೆ ನಡೆಯುವುದೇ ಸೇವಕರಿಗೆ ಮುಖ್ಯಧರ್ಮವಾದಾಗ್ಗೂ ನನ್ನ ಬುದ್ಧಿಗೆ ತೋರಿದುದನ್ನು ನಿಮ್ಮಡಿಯಲ್ಲಿ ಅರಿಕೆ ಮಾಡುವೆನು. ಆದರೆ ಯುಕ್ತಾಯುಕ್ತವನ್ನು ವಿಚಾರಮಾಡಿ ಅಪ್ಪಣೆ ಕೊಟ್ಟಂತೆ ನಾವೆಲ್ಲರೂ ನಡೆಯುತ್ತೇವೆ. ಲೋಕದಲ್ಲಿ ಕಲಿಯಾದವನಿಗೆ ಯಾವ ಕೆಲಸವು ಆಗಾಧವು? ಪ್ರಯತ್ನಶಾಲಿಗೆ ಯಾವ ದೇಶ ದೂರವು? ವಿದ್ಯಾವಂತನಿಗೆ ಯಾವುದು ಪರದೇಶವು? ಪ್ರಿಯವಾದಿಗೆ ಹಗೆ ಯಾರೆಂದು ಪಂಡಿತೋಕ್ತಿ ಇರುವುದರಿಂದಲೂ ಸಾಮ ದಾನ ಭೇದ ದಂಡಗಳೆಂಬ ಚತುರೋಪಾಯದಲ್ಲಿ ಸಾಮವೇ ಮುಖ್ಯೋಪಾಯವಾದುದರಿಂದ ಅದೇ ಮೊದಲು ಗಣಿಸಲ್ಪಟ್ಟಿತೆಂದು ಅರಿತವರು ಅನ್ನುವುದರಿಂದಲೂ ಮುಂಚಿತವಾಗಿ ಸಿಂಹಳದ್ವೀಪದ ಅರಸುಗಳಿಗೆ ಸಂಧಿಪತ್ರಿಕೆಯನ್ನು ಬರೆಯಿಸಿ ದೂತರ ಕೈಯಲ್ಲಿ ಕಳುಹಿಸಿ ಅವರ ಭಾವವನ್ನು ತಿಳಿದುಕೊಂಡು ಅನಂತರ ಮುಂದಾಗುವ ಕಾರ್ಯವನ್ನು ಮಾಡೋಣ ಎಂಬುದಾಗಿ ತೋರುತ್ತದೆ ಎಂದು ಹರಿದತ್ತನು ಅರಿಕೆ ಮಾಡಲು ಆ ಮಾತಿಗೆ ಜಂಬೂದ್ವೀಪದ ಮಂಡಲಾಧಿಪರೂ ಮಂತ್ರಿಗಳೂ ದಳವಾಯಿಗಳೂ ಮುಂತಾದ ಸರ್ವಪರಿವಾರಗಳೂ ಸಮ್ಮತಿಪಟ್ಟುದರಿಂದ ಚಂಡಪರಾಕ್ರಮಿಯೂ ಒಡಂಬಟ್ಟು ಅದೇಪ್ರಕಾರ ಮಾಡಿಸಿರೆಂದು ಉತ್ತರವನ್ನು ಕೊಡಲು ಹರಿದತ್ತನು ರಾಯಸದವರ ಕಡೆಯಿಂದ ಲೇಖನವನ್ನು ಬರೆಯಿಸಿ ದೂತರ ಕೈಯಲ್ಲಿ ಕೊಟ್ಟು ಕಳುಹಿಸಿದನು.

ಆ ದೂತರು ಅತಿತ್ವರೆಯಿಂದ ಸಾಗರದೆಡೆಗೆ ಬಂದು ಹಡಗಿನ ಮೇಲೇರಿ ಸಿಂಹಳದ್ವೀಪದ ಎಲ್ಲೆಯನ್ನು ಹೊಗಲು ಆ ದ್ವೀಪದ ಮೊದಲುಕ್ಕಡದ ಅಧಿಕಾರಿಯ ಆಳುಗಳು ಇವರನ್ನು ಕಂಡು ತಮ್ಮೊಡೆಯನ ಒಳಿಗೆ ಕರಕೊಂಡು ಹೋಗಿ ಕಾಣಿಸಿದರು. ಆ ದೂತರು—ಈ ಉಕ್ಕಡದ ಅಧಿಕಾರಿಯ ಐಶ್ವರ್ಯವೂ ಸೇನೆಯೂ ನಮ್ಮ ಜಂಬೂದ್ವೀಪದ ಸಾರ್ವಭೌಮನಾದ ಚಂಡಪರಾಕ್ರಮಿಯ ಐಶ್ವರ್ಯ ಸೇನೆಗಳಿಗಿಂತ ಇಮ್ಮಡಿಯಾಗಿರುವುದು. ಕಡೆಯ ಉಕ್ಕಡದವನೇ ಇಷ್ಟು ಸಮಕಟ್ಟಿನಿಂದ ಇರುವಲ್ಲಿ ಇನ್ನು ಸಿಂಹಳದ್ವೀಪದ ಸಾರ್ವಭೌಮನನ್ನು ನಮ್ಮ ದ್ವೀಪದ ಸಾರ್ವಭೌಮನು ಜಯಿಸುವುದು ನಮ್ಮ ಬುದ್ಧಿಗೆ ತೋರುವುದಿಲ್ಲ. ದೇವರ ಚಿತ್ತ ಹೇಗಿರುವುದೋ? ಎಂದು ಯೋಚಿಸುತ್ತಾ ನಿಂತಿರುವಲ್ಲಿ ಉಕ್ಕಡದ ತಳವಾರನು ಇವರು ಬಂದ ವಿದ್ಯಮಾನವನ್ನು ಕೇಳಿ ತನ್ನೊಡೆಯನಾದ ಎರಡನೆಯ ಉಕ್ಕಡದ ಯಜಮಾನನ ಬಳಿಗೆ ಕಳುಹಿಸಲು ಅವನ ಐಶ್ವರ್ಯವು ಮೊದಲುಕ್ಕಡ ಅಧಿಕಾರಿಗಿಂತಲೂ ಎರಡರಷ್ಟು ಹೆಚ್ಚಾಗಿದ್ದುದರಿಂದ ಈ ದೂತರು ಅತ್ಯಾಶ್ಚರ್ಯಗೊಂಡು ಅತನ ಅಪ್ಪಣೆಯಿಂದ ಹೊರಟು ಹೀಗೆ ಒಬ್ಬರಿಗೊಬ್ಬರು ಇಮ್ಮಡಿಯಾಗಿರುವ ಹದಿನಾರು ಉಕ್ಕಡದ ಯಜಮಾನರನ್ನು ಬೀಳ್ಕೊಂಡು ಸಿಂಹಳದ್ವೀಪದ ಸಾರ್ವಭೌಮನ ಅರಿದುರ್ಘಟವೆಂಬ ಪಟ್ಟಣವನ್ನು ಹೊಕ್ಕು ಸಿಂಹವಿಕ್ರಮನೆಂಬ ಅರಸಿನ ಸಭೆಗೆ ಹೋಗಿ ಸುಧರ್ಮೆ ಎಂಬ ದೇವಸಭೆಯಲ್ಲಿ

ಅಷ್ಟದಿಕ್ಪಾಲಕರೊಡನೆಯೂ ಅಷ್ಟವಸುಗಳು ಸಪ್ತಮರುತ್ತುಗಳು ಏಕಾದಶರುದ್ರರು ದ್ವಾದಶಾದಿತ್ಯರು ಸಪ್ತರ್ಷಿಗಳು ಮೊದಲಾದವರೊಡನೆಯೂ ಒಡ್ಡೋಲಗವನ್ನು ಕೊಡುತ್ತಿರುವ ದೇವೇಂದ್ರನಂತೆ ಪ್ರಧಾನಿಗಳಿಂದಲೂ ರಾಯಸದವರಿಂದಲೂ ಕರಣಿಕರುಗಳಿಂದಲೂ ದಳವಾಯಿಗಳಿಂದಲೂ ನಿಯೋಗಿಗಳಿಂದಲೂ ನ್ಯಾಯಾಧಿಪತಿಗಳಿಂದಲೂ ಬೊಕ್ಕಸದ ಅಧಿಕಾರಿಗಳಿಂದಲೂ ಕೂಡಿ ಒಡ್ಡೋಲಗವನ್ನು ಕೊಡುತ್ತಿರುವ ಸಿಂಹವಿಕ್ರಮರಾಜನನ್ನು ಕಂಡು ತಲೆಬಾಗಿ ತಂದ ಲೇಖನವನ್ನೊಪ್ಪಿಸಿ ಕೈಕಟ್ಟಿ ಕೊಂಡು ನಿಂತಿರುವಲ್ಲಿ ಸಿಂಹವಿಕ್ರಮನು ಆ ಲೇಖನವನ್ನು ತೆಗೆದು ರಾಯಸದವನ ಕೈಯಲ್ಲಿ ಕೊಡಲು ಆತನು ಓದುತ್ತಿದ್ದನು. ಏನಂದರೆ—ಸ್ವಸ್ತಿ; ಶ್ರೀಮದಖಂಡ ಸಿಂಹಳದ್ವೀಪ ಸಾರ್ವಭೌಮರಾದ ಸಂಧಿ ವಿಗ್ರಹ ಯಾನ ಆಸನ ದ್ವೈಧೀಭಾವ ಸಮಾಶ್ರಯಣಗಳೆಂಬ ಆರು ವಿಧವಾದ ರಾಜಕಾರ್ಯದೋಳ್ಧುರೀಣರಾದ ಸಿಂಹವಿಕ್ರಮ ರಾಜರಿಗೆ—ಜಂಬೂದ್ವೀಪದ ಸಾರ್ವಭೌಮರಾದ ಕುಶಲಪತಿಯ ಕುಶಲಶೇಖರ ರಾಜನ ಸುಕುಮಾರ ಚಂಡಪರಾಕ್ರಮಿ ಎಂಬ ಯುವರಾಜರು ಬಿನ್ನವಿಸುವುದೇ ನಂದರೆ—ನಾವು ಸಮಸ್ತ ದಿಗ್ವಿಜಯಾರ್ಥವಾಗಿ ತಂದೆಗಳ ಉತ್ತರವನ್ನು ಹೊಂದಿ ಸೇನಾಸಮೇತರಾಗಿ ಹೊರಡಲು ಈ ಜಂಬೂದ್ವೀಪದ ಮಂಡಲಾಧಿಪತಿಗಳೆಲ್ಲರೂ ನಮ್ಮ ಪ್ರತಾಪವನ್ನು ಕಂಡು ಅಂಜಿ ಕೊಳುಗುಳಕ್ಕೆ ನಿಲ್ಲದೆ ಕಪ್ಪವನ್ನು ನಿಗದಿ ಮಾಡಿಕೊಂಡು ನಮ್ಮೊಡನೆ ಸ್ನೇಹವನ್ನು ಬಳಸಿ ತಮ್ಮ ತಮ್ಮ ಸೇನಾಸಮೇತರಾಗಿ ನಮಗೆ ಸಹಾಯವನ್ನು ಮಾಡುವುದಕ್ಕೆ ಬಂದಿದ್ದಾರೆ. ತಮಗೂ ನಮ್ಮ ಪ್ರತಾಪಾದಿಗಳು ಪರೋಕ್ಷವಾಗಿ ವೇದ್ಯವಾಗಿರಬಹುದು ಆದುದರಿಂದ ತಮ್ಮಾಪ್ತಮಂತ್ರಿಗಳೊಡನೆ ಚೆನ್ನಾಗಿ ಮಂತ್ರಾಲೋಚನೆಯನ್ನು ಮಾಡಿ ನಮ್ಮೊಡನೆ ಸ್ನೇಹಿಸಿ ಕಪ್ಪವನ್ನು ಕೊಡುವುದಕ್ಕಾಗಲಿ ಕಣದಲ್ಲಿ ಕೊಳುಗುಳವನ್ನು ಈಯುವುದಕ್ಕಾಗಲಿ ಪ್ರತ್ಯುತ್ತರವೀವುದು. ಈಪ್ರಕಾರವಾಗಿ ಬರೆದಿರುವ ಲೇಖನದ ಒಕ್ಕಣೆಯನ್ನು ಕೇಳಿ ಸಿಂಹವಿಕ್ರಮ ರಾಜನು ಪ್ರಳಯಕಾಲದ ಮುಕ್ಕಣ್ಣನಂತೆ ಕಣ್ಣುಗಳಿಂದ ಕಿಡಿಗಳನ್ನು ಉದರಿಸುತ್ತಾ ಮಿಸೆಯನ್ನು ಕುಣಿಸುತ್ತಾ ಕೋಪದಿಂದ ಪರವಶನಾಗಿ ಹಿಂದು ಮುಂದು ಕಾಣದೆ ದೂತರನ್ನು ಕುತ್ತಿಗೆ ಹಿಡಿದು ದೊಬ್ಬಿಸಲು ಅವರು ಹಿಂದಿರುಗಿ ಬಂದು ತಮ್ಮೊಡೆಯನಿಗೆ ಪೊಡಮಟ್ಟು ನಡೆದ ವಿವರವನ್ನು ಬಿನ್ನವಿಸಿದರು. ಅದನ್ನು ಕೇಳಿ ಚಂಡಪರಾಕ್ರಮಿಯು ಹರಿದತ್ತನನ್ನು ನೋಡಿ ಮದಾಂಧರಾದವರಿಗೆ ಮತಿಯುತರಾದವರ ಮತವು ಮನಕ್ಕೊಡಂಬಡದು. ಮರದ ಡೊಂಕನ್ನು ಬೆಂಕಿಯು ತಿದ್ದುವುದೆಂಬ ನಾಣ್ಣುಡಿ ತಪ್ಪುವುದೇ ? ದಂಡು ಮುಂದೆ ನಡೆಯಲೆಂದು ಅಪ್ಪಣೆಯನ್ನು ಕೊಟ್ಟು ಆ ದಿನ ಒಂದು ಗಾವುದವನ್ನು ಬಂದು ತೃಣ ಜಲ ಕಾಷ್ಠ ಸಮೃದ್ಧವಾದ ಒಂದು ತಾಣದಲ್ಲಿ ಪಾಳಯವನ್ನಿಳಿಸಿ ಪಚ್ಚೆಯ ಗುಡಾರದಲ್ಲಿ ಬೆಂಡಿನ ಕಂಬವನೊರಗಿಕೊಂಡು ಓಲಗವನ್ನು ಕೊಡುತ್ತಲಿದ್ದನು.

ಇತ್ತಲಾ ಸಿಂಹಳದ್ವೀಪದಲ್ಲಿ ಸಿಂಹವಿಕ್ರಮರಾಜನಿಗೆ ಮುನಿಸು ಇಳಿದುದನ್ನು ಕಂಡು ಮುಖ್ಯ ಮಂತ್ರಿಯಾದ ಸುಮನೀಷನೆಂಬವನೆದ್ದು ಕೈಮುಗಿದು—ಸ್ವಾಮಿ !

ಒಡೆಯನೇ ಪರರಾಜರು ಬರೆದ ಪತ್ರಿಕೆಗೆ ಪ್ರತಿಪತ್ರಿಕೆಯನ್ನೀಯದೆ ಈರೀತಿಯಿಂದ ಕೋಪಿಸುವುದು ರಾಜನೀತಿಗೆ ಬಹಳ ವಿರೋಧವಾಗಿರುವದು. ದೂತರನ್ನು ದೂಡಿಸುವುದು ಒಂದು ನೊಡ್ಡ ಕೆಲಸವೇ ? ನಡೆದುಹೋದ ಮಾತಿಗೆ ನುಡಿದು ಫಲವಿಲ್ಲ, ಇನ್ನು ಮೇಲಾದರೂ ಸೇವಕನ ಬಿನ್ನಹವನ್ನು ಮನ್ನಿಸಿ ಜಂಬೂದ್ವೀಪದ ಯುವರಾಜನು ಬರೆದ ಕಾಗದಕ್ಕೆ ಪ್ರತ್ಯುತ್ತರವನ್ನು ಬರೆಯಿಸಿ ಚಾರರ ಕೈಯಲ್ಲಿ ಕೊಟ್ಟು ಕಳುಹಿಸಬೇಕೆಂದನು. ಸಿಂಹವಿಕ್ರಮನು ಕ್ಷಣಮಾತ್ರ ಯೋಚಿಸಿ ಪಶ್ಚಾದ್ವಿವೇಕ ಹುಟ್ಟಿ ಪ್ರತಿಪತ್ರವನ್ನು ಬರೆಯಿಸಿ ದೂತರ ಕೈಯಲ್ಲಿ ಕೊಟ್ಟು ಕಳುಹಿಸಿದನು. ಅವರು ಬಂದು ಚಂಡಪರಾಕ್ರಮಿಯನ್ನು ಕಂಡು ಲೇಖನವನ್ನು ಕೊಟ್ಟು ಈ ಚಂಡಪರಾಕ್ರಮಿಯ ಪಾದಾದಿಕೇಶಪರ್ಯಂತರದಲ್ಲಿರುವ ರಾಜಲಕ್ಷಣಗಳನ್ನೂ ಲಾವಣ್ಯವನ್ನೂ ತೇಜಸ್ಸನ್ನೂ ನೋಡಿ ಈತನು ಮನುಜಮಾತ್ರನಲ್ಲ ಅವತಾರಪುರುಷನೆಂದು ಅವನ ಅಮಾನುಷವೈಭವಕ್ಕೆ ಮೆಚ್ಚಿ ಬೆಚ್ಚಿ ಬೆರಗಾಗಿ ನೋಡುತ್ತಿದ್ದರು ಚಂಡಪರಾಕ್ರಮಿಯು ಅವರಿತ್ತ ಲೇಖನವನ್ನು ರಾಯಸದವರ ಕಡೆಯವರಿಂದ ಓದಿಸಲು ಅದರಲ್ಲಿದ್ದ ಅಭಿಪ್ರಾಯವೇನಂದರೆ—ಸ್ವಸ್ತಿ ; ಸಮಸ್ತ ಸಾಮಂತ ರಿಪುಚಕ್ರ ಮಕುಟತಟ ಘಟಿತ ಮಾಣಿಕ್ಯ ರತ್ನಪ್ರಭಾ ನಿರಾಜಿತ ಪಾದಪೀಠರಾದ ಪ್ರತಾಪಾದಿತ್ಯ ಪ್ರತಾಪಿತ ಪ್ರತ್ಯರ್ಥಿ ಪೃಥ್ವೀಪತಿ ಮಂಡಲರಾದ ಕುಶಲ ಮತಿಯುತ ಕುಶಲವತಿಯ ಕುಶಲಶೇಖರ ಸಾರ್ವಭೌಮ ಸುಕುಮಾರ ಯುವರಾಜ ಚಂಡಪರಾಕ್ರಮಿಗಳಿಗೆ ಸಿಂಹಳದ್ವೀಪ ಸಾರ್ವಭೌಮ ಸಿಂಹವಿಕ್ರಮರಾಜರು ಶ್ರುತಪಡಿಸುವುದೇನಂದರೆ—ನೀವು ಬರೆದ ಲೇಖನಾಭಿಪ್ರಾಯವು ನಮಗೆ ಮನವರಿಕೆಯಾದುದು. ದ್ವೀಪಾಂತರ ಚಕ್ರವರ್ತಿ ಕಳಭಕಂಠೀರವರೆಂಬ ಬಿರುದಿನ ಪೆಂಡೆಯವಂ ಎಡಗಾಲೊಳು ಧರಿಸಿರ್ಪೆಮ್ಮ ವಿಕ್ರಮವನ್ನು ಅರಿದೂ ನಮ್ಮಿಂದ ಕಪ್ಪವನ್ನು ಕೊಳ್ಳುವುದಕ್ಕೂ ನಮ್ಮೊಡನೆ ಕೊಳುಗುಳದಲ್ಲಿ ಕೈಮಾಡುವುದಕ್ಕೂ ಬಯಿಸಿದ ನಿಮ್ಮ ಕಲ್ಲೆದೆಯ ಕಟು ಧೈರ್ಯಕ್ಕೆ ಮೆಚ್ಚಿ ಪ್ರತ್ಯುತ್ತರವನ್ನು ಕೊಡುವುದೇನಂದರೆ—ಕಪ್ಪವನ್ನು ಕೊಡದೆ ನಿಮ್ಮೊಡನೆ ಕೆಳೆಯಿಂದಿರುವುದಕ್ಕೆ ನಮಗೆ ಪರಮ ಕುತೂಹಲ ಉಂಟು ಅದು ನಿಮಗೆ ಒಡಂಬಡದೆ ಇದ್ದರೆ ಆಗತ್ಯವಾಗಿ ಯುದ್ಧಕ್ಕೆ ದಯಮಾಡಬಹುದು. ನಾವು ಸನ್ನದ್ಧರಾಗಿರುವೆವು. ಹೀಗೆ ಬರೆದಿರುವ ಅಭಿಪ್ರಾಯಾರ್ಥವನ್ನು ಕೇಳಿ ಹರಿದತ್ತನ ಕಡೆಯಿಂದ ಪ್ರತ್ಯುತ್ತರವನ್ನು ಬರೆಯಿಸಿ ವೀಳ್ಯಸಹಿತವಾಗಿ ದೂತರ ಕೈಯ್ಯಲ್ಲಿ ಕೊಟ್ಟು ಕಳುಹಿಸಲು ಆ ದೂತರು ಅತಿ ಜಾಣರಾದುದರಿಂದ ಆ ಯುವರಾಜನ ಭಾವಚಿತ್ರವನ್ನು ಬರೆದುಕೊಂಡು ತಮ್ಮೊಡೆಯನ ಒಡ್ಡೋಲಗಕ್ಕೆ ಬಂದು ಚಿತ್ರಪಟಸಹಿತವಾಗಿ ಕಾಗದವನ್ನು ಕೊಟ್ಟು ಪೊಡಮಟ್ಟರು. ಆಗ ಸಿಂಹವಿಕ್ರಮರಾಜನು ಪತ್ರಿಕೆಯನ್ನು ಓದಿಸಿ ಕೇಳುವಲ್ಲಿ ಅದರೊಳಗಿದ್ದ ಮುಖ್ಯಾರ್ಥವೇನಂದರೆ—ಲೋಕಕರ್ತನಾದ ದೇವರು ಯಾರನ್ನಾದರೂ ಯಾವಜ್ಜೀವವೂ ಏಕಪ್ರಕಾರವಾಗಿ ಇರಿಸುವುದಿಲ್ಲ. ಇಲಿಯನ್ನು ಹುಲಿಯಾಗಿ ಮಾಡುವನು. ಹುಲಿಯನ್ನು ಇಲಿಯಾಗಿ ಮಾಡುವನು. ಮತ್ತು ಯುದ್ಧದಲ್ಲಿ ಜಯಪರಾಜಯಗಳು ದೈವಾಧೀನವು. ಮತ್ತು ಶರೀರವು ಅಸ್ಥಿರವು. ಕ್ಷತ್ರಿಯರೊಳಗೆ

ಹುಟ್ಟಿದವನು ರಣದಲ್ಲಿ ಶತ್ರುಗಳನ್ನು ಜಯಿಸಿದರೆ ರಾಜ್ಯಲಾಭವಾಗುವುದು ಹಗೆಗಳಿಂದ ಮಡಿದರೆ ವೀರಸ್ವರ್ಗ ಉಂಟಾಗುವುದು ಎಂಬಿವುಗಳನ್ನು ಅರಿತು ಜಾಣರಾದವರು ಗರ್ವದಿಂದ ಬೆರತಿರರು. ಸಕಲವನ್ನೂ ತಿಳಿದವರಿಗೆ ವಿಶೇಷವಾಗಿ ಬರೆಯತಕ್ಕ ಪ್ರಕೃತವಿಲ್ಲವೆಂದೂ ಬರೆದಿರುವ ಗಂಭೀರಾಭಿಪ್ರಾಯವನ್ನು ಪರ್ಯಾಲೋಚಿಸಿ ಚಿತ್ರಪಟವಂ ನೋಡಿ ಈ ರೂಪರೇಖೆಗಳುಳ್ಳವನು ಚಕ್ರವರ್ತಿಯಾಗುವನೆಂದೆಣಿಸಿ ಆ ಪಟವನ್ನು ತೆಗೆದುಕೊಂಡು ಸಂತೋಷದಿಂದ ರಾಣಿವಾಸಕ್ಕೆ ಹೋಗಿ ಅದನ್ನು ತನ್ನ ಪಟ್ಟದರಾಣಿಗೂ ಮದುವೆಯಾಗದೆ ಪ್ರೌಢೆಯಾಗಿರುವ ಆನಂದವಲ್ಲಿ ಎಂಬ ತನ್ನ ಮಗಳಿಗೂ ತೋರಿಸಿ ಈತನು ತನ್ನ ಮೇಲೆ ಯುದ್ದಕ್ಕೆ ಹೊರಟು ಬಂದಿರುವನು. ಈತನು ಆನಂದವಲ್ಲಿಗೆ ಪತಿಯಾದರೆ ನಮ್ಮ ಭಾಗ್ಯಕ್ಕೆ ಎಣೆ ಇಲ್ಲವೆಂದು ಹೇಳಿದನು. ರಾಣಿಯು—ಹಾಗೇ ಸರಿ ಎಂದು ಒಪ್ಪಿಕೊಂಡಳು. ಆನಂದವಲ್ಲಿಯು—ನಾನು ಈ ಚಿತ್ರಪಟವನ್ನು ನೋಡಿದ ಕ್ಷಣದಲ್ಲಿ ಇವನೇ ನನ್ನ ಪತಿ ಎಂದು ಮನಸ್ಸಿನಲ್ಲಿ ನಿಶ್ಚಯಿಸಿರುವೆನು. ಆದರೆ ನಿಮ್ಮ ಮೇಲೆ ಹಗೆತನವನ್ನಿಟ್ಟು ಯುದ್ದಕ್ಕಾಗಿ ಬರುವವನಿಗೆ ಪುತ್ರಿಯನ್ನು ಕೊಡುವೆನೆಂದು ನೀವು ಹೇಳಿ ಕಳುಹಿಸುವುದು ಹೀಯಾಳಿಕೆಯಲ್ಲವೇ? ಎಂದು ಕೇಳಿದಳು. ಅದಕ್ಕೆ ಸಿಂಹವಿಕ್ರಮರಾಜನು—ನನಗೆ ಆ ಯೋಜನೆ ಇಲ್ಲ. ಹೊಟ್ಟೆಯಲ್ಲಿ ಹುಟ್ಟಿದ ಮಗಳನ್ನು ತಕ್ಕ ವರನಿಗೆ ದಾನವನ್ನು ಮಾಡಿದರೆ ಅದಕ್ಕಿಂತಲೂ ಹೆಚ್ಚಾದ ಸಂತೋಷವು ಹೆತ್ತವನಿಗೆ ಮತ್ತಾವುದುಂಟೆಂದು ಹೇಳಿ ಆ ಸ್ಥಾನಕ್ಕೆ ಬಂದು ಜೋಯಿಸರನ್ನು ಕರಿಸಿ ಲಗ್ನಪತ್ರಿಕೆಯನ್ನು ಬರೆಯಿಸಿ ನಿಯೋಗಿಯ ಕೈಯಲ್ಲಿ ಕೊಟ್ಟು ಚಂಡಪರಾಕ್ರಮಿಯ ಬಳಿಗೆ ಕಳುಹಿಸಲು ಆ ನಿಯೋಗಿಯು ಬಂದು ಸಮಯೋಚಿತವಾಗಿ ಕಂಡು ಲಗ್ನಪತ್ರಿಕೆಯನ್ನು ಕೊಟ್ಟನು. ಚಂಡಪರಾಕ್ರಮಿಯು ನೋಡಿ—ವಿಹಿತವೇ ಸರಿ; ಆದರೆ ನಾವು ತಮ್ಮ ಸಂಗಡ ಯುದ್ಧವನ್ನು ಮಾಡಿ ಬದುಕಿದ ಮೇಲಷ್ಟೆ ವಿವಾಹದ ಯೋಜನೆಯು ಎಂದು ಹೇಳಿ ಬಹುಮಾನವನ್ನು ಮಾಡಿ ಕಳುಹಿಸಲು ನಿಯೋಗಿಯು ಹಿಂದಿರಿಗಿ ಬಂದು ಈ ವಿವರವನ್ನು ತಿಳಿಸಿದನು. ಆಗ ಸಿಂಹವಿಕ್ರಮರಾಜನು ಕೋಪಿಸಿಕೊಂಡು ತನ್ನ ಕಡೆಯ ಉಕ್ಕಡದ ಯಜಮಾನನಿಗೆ—ಜಂಬೂದ್ವೀಪದ ಯುವರಾಜ ಚಂಡಪರಾಕ್ರಮಿಯನ್ನು ನಿನ್ನ ಉಕ್ಕಡದಿಂದ ಮುಂದಕ್ಕೆ ಬಿಟ್ಟರೆ ನಿನ್ನನ್ನು ಸಿಗಿಸಿ ತೋರಣವನ್ನು ಕಟ್ಟಿಸುವೆನೆಂದು ಅಪ್ಪಣೆಯನ್ನು ಕೊಟ್ಟು ತಾನೂ ಯುದ್ಧಕ್ಕೆ ಸನ್ನದ್ಧನಾಗಿದ್ದನು.

ಇತ್ತಲಾ ಚಂಡಪರಾಕ್ರಮಿಯು ಸಕಲ ಸೇನಾಸಮೇತನಾಗಿ ಬಂದು ಸಮುದ್ರ ತೀರದಲ್ಲಿ ಒಂದು ಆವೆಯು ತನ್ನ ಮುಖವನ್ನೊಳಸರಿಸಿಕೊಂಡು ದಡದಲ್ಲಿ ಬಿಸಿಲ ಕಾಸಿಕೊಂಡಿರಲು ಅದನ್ನು ಆವೆ ಎಂದರಿಯದೆ ಆಕಾರಸಾಮ್ಯದಿಂದ ಕರಿಯ ಆರೆಯ ಕಲ್ಲೆಂದು ಎಣಿಸಿ ಸೈನ್ಯವನ್ನು ಅದರ ಮೇಲೆ ಇಳಿಸಿದನು. ಕೆಲವು ಹೊತ್ತಿನ ಮೇಲೆ ಸೈನ್ಯದವರು ಅಡಿಗೆ ಮಾಡುವ ಬೆಂಕಿಯ ಉಷ್ಣವನ್ನೂ ಬಿಸಿಲಿನ ತಾಪವನ್ನೂ ತಾಳಲಾರದೆ ಆ ಮಕರವು ಕಡಲಿಗೆ ನೆಗೆಯಲು ದಂಡೆಲ್ಲಾ ಸಮುದ್ರದಲ್ಲಿ ಬಿದ್ದು ಮುಳುಗಿಹೋಯಿತು. ಹರಿದತ್ತನೂ ಕಿರಾತಸೇನಾಧಿಪತಿಯೂ ಚಂಡಪರಾಕ್ರಮಿಯೂ

ಸಹ ಬೆಂಡುಮರದ ಚೌಕಿನಲ್ಲಿ ಕುಳಿತಿದ್ದುದರಿಂದ ತೇಲುತ್ತಾ ಅಲೆಗಳಿಂದ ಬಡಿಸಿ ಕೊಳ್ಳುತ್ತಾ ಒಬ್ಬೊಬ್ಬರೊಂದೊಂದು ಕಡೆಗಾಗಿ ಅಲೆಯ ಹೊಯಿಲಿನಿಂದ ಜರ್ಝರೀಭೂತವಾದ ಅಂಗಗಳುಳ್ಳವರಾಗಿ ಸಿಂಹಳದ್ವೀಪದ ತಡಿಯನ್ನು ಸೇರಿ ಮೂರ್ಛಿತರಾಗಿ ಬಿದ್ದರು. ಇತ್ತ ಕಡೆಯ ಉಕ್ಕಡದ ಯಜಮಾನನು ಬಂದು ಇಳಿದಿದ್ದ ದಂಡನ್ನು ಕಾಣದೆ ಸಿಂಹವಿಕ್ರಮರಾಜನಿಗೆ ಈ ಸುದ್ದಿಯನ್ನು ಕೊಡಲು ಆತನು ಮಹಾ ಸಂಭ್ರಮದಿಂದ ಧ್ವಜಸ್ತಂಭವನ್ನೇರಿ ಕತ್ತಿನಲ್ಲಿ ಇದ್ದ ಶಿಖಿಯಸರವನ್ನು ಆ ಕಂಬಕ್ಕೆ ತಗಲಹಾಕಿ ದೃಷ್ಟಿಯ ಕೊಳವೆಯನ್ನಿಟ್ಟುಕೊಂಡು ನೋಡಿ ಸೈನ್ಯವಿಲ್ಲದಿರುವದನ್ನು ತಿಳಿದು ಸಂತೋಷವೆಂಬ ಸಮುದ್ರದಲ್ಲಿ ಮುಳುಗಿ ಸರವನ್ನು ಅಲ್ಲಿಯೇ ಮರೆತು ಕೆಳಗೆ ಬಂದನು. ಆ ಮೇಲೆ ಆ ಸರವನ್ನು ಒಂದು ಕಾಗೆಯು ಕಚ್ಚಿಕೊಂಡು ಹಾರಿ ಬಂದು ಕಡಲ ದಡದಲ್ಲಿ ಮೂರ್ಛಿತನಾಗಿ ಕೈಕಾಲು ಅಲಗದೆ ಬಿದ್ದಿರುವ ಜಂಡಪರಾಕ್ರಮಿಯನ್ನು ಕಂಡು ಹೆಣವೆಂದು ತಿಳಿದು ಅವನ ಮೇಲೆ ಬಂದು ಕುಳಿತುಕೊಂಡು ತನ್ನ ಕೊಕ್ಕಿನಿಂದ ಕುಕ್ಕಲು ಅವನು ಸ್ವಲ್ಪ ಅಲುಗಾಡಲಾಗಿ ಅದು ಬೆದರಿ ಸರವನ್ನು ಅವನ ಮೈಮೇಲೆಯೇ ಬಿಟ್ಟು ಹಾರಿಹೋಯಿತು. ಇತ್ತಲಾ ಸಿಂಹವಿಕ್ರಮರಾಜನು ಸರವನ್ನು ನೆನಸಿಕೊಂಡು ಧ್ವಜಸ್ತಂಭವನ್ನು ನೋಡಿಸಲಾಗಿ ಅದು ಅಲ್ಲಿ ಇಲ್ಲದೆ ಇದ್ದುದರಿಂದ ತಳವಾರರ ಗೊತ್ತುಗಾರನನ್ನು ಕರಿಸಿ ಈ ಸರವನ್ನು ಕದ್ದೊಯ್ದವನಾರೋ ಅವನನ್ನು ಗೊತ್ತುಮಾಡಿ ಹಿಡಿದು ಅವನ ಮೊಣಕಾಲುಗಳೆರಡನ್ನೂ ತುಂಡುಮಾಡಿ ನಾಲ್ಕು ಬೀದಿ ಕೂಡಿದ ಮಧ್ಯಸ್ಥಳದಲ್ಲಿ ಕೆಡವಿ ಆ ಸರವನ್ನು ತೆಗೆದುಕೊಂಡು ಬರುವುದೆಂದು ಅಪ್ಪಣೆಯನ್ನಿತ್ತನು. ಅವರು ಅಲ್ಲಲ್ಲಿ ಹುಡುಕುತ್ತಾ ಬಂದು ಸಮುದ್ರತೀರದಲ್ಲಿ ಜ್ಞಾನವಿಲ್ಲದೆ ಬಿದ್ದಿರುವ ಜಂಡಪರಾಕ್ರಮಿಯನ್ನೂ ಅವನ ಮೇಲಿರುವ ಶಿಖಿಯ ಸರವನ್ನೂ ಕಂಡು ಇವನೇ ಕಳ್ಳನೆಂದು ಬಗೆದು ಅವನ ಎರಡು ಮೊಣಕಾಲುಗಳನ್ನೂ ಕತ್ತರಿಸಿ ಅವನ ಎರಡು ತೊಡೆಗಳನ್ನು ಕಾಸಿದ ಎಣ್ಣೆಯಲ್ಲಿ ಅದ್ದಿ ಅವನನ್ನು ನಾಲ್ಕು ಬೀದಿ ಕೂಡಿದ ದಾರಿಯಲ್ಲಿ ಕೆಡವಿ ಸರವನ್ನು ತಂದು ದೊರೆಗೆ ಒಪ್ಪಿಸಿದರು. ಬಳಿಕ ಆ ಊರಲ್ಲಿ ಇರುವ ಒಬ್ಬ ಅಡುಗೂಳಜ್ಜಿಯು ದಾರಿಯಲ್ಲಿ ಹೋಗುತ್ತಾ ಈ ಜಂಡಪರಾಕ್ರಮಿಯನ್ನು ಕಂಡು ಇಂಥಾ ರಾಜಕುಮಾರನಿಗೆ ಇಂಥಾ ದುರ್ದಶೆಯು ಬಂದಿತಲ್ಲಾ ! ಎಂದು ಕನಿಕರದಿಂದ ಅವನನ್ನು ಕೂಲಿ ಆಳುಗಳ ಕೈಯಿಂದ ಮನೆಗೆ ತೆಗೆಸಿಕೊಂಡು ಹೋಗಿ ಶೈತ್ಯೋಪಚಾರಗಳನ್ನು ಮಾಡಲು ಸ್ವಲ್ಪ ಚೇತರಿಸಿಕೊಂಡನು. ಆ ಬಳಿಕ ಚನ್ನೋದಕಗಳನ್ನೂ ಉಡುವುದಕ್ಕೆ ಬಟ್ಟೆಯನ್ನೂ ಕೊಟ್ಟುಕೊಂಡು ಆರೈಕೆಮಾಡುತ್ತಾ ತನ್ನ ಮನೆಯಲ್ಲಿ ಇರಿಸಿಕೊಂಡಿದ್ದಳು. ಇತ್ತಲಾ ಕಿರಾತಸೇನಾಧಿಪತಿಯು ಮೂರ್ಛಿತಿಳಿದು ಮಹಾ ವ್ಯಸನಗೊಂಡು ಹರಿದತ್ತನೂ ಜಂಡಪರಾಕ್ರಮಿಯೂ ಏನಾದರೋ ಎಂದು ದುಃಖಪಡುತ್ತಾ ಅವರನ್ನು ಹುಡುಕುತ್ತಾ ಆ ಸಿಂಹಳದ್ವೀಪದಲ್ಲಿ ತಿರುಗುತ್ತಿರುವಾಗ್ಗೆ ಒಂದು ಪರ್ವತದ ಬಳಿಯಲ್ಲಿ ಇರುವ ತೋಟದ ಕೊಳದ ಮೆಟ್ಟಿನ ಮೇಲೆ ಕುಳಿತುಕೊಂಡು ದೇವರ ಧ್ಯಾನವನ್ನು ಮಾಡುತ್ತಿದ್ದ ಹರಿದತ್ತನನ್ನು ಕಂಡು ಮಹಾ ಸಂತೋಷದಿಂದ ಅವನಿ

ಡೆಗೆ ಬಂದು ತಬ್ಬಿಕೊಂಡು—ಈ ಮಹಾ ಪ್ರಳಯದಲ್ಲಿ ಜೀವದಿಂದ ಉಳುಕೊಂಡು ಇದ್ದೀಯಾ? ಎಂದು ಕಣ್ಣೀರನ್ನು ಬಿಟ್ಟು ಕೇಳಿದನು. ಅದಕ್ಕೆ ಹರಿದತ್ತನು—ಯಾಕೆ ಅಳುತ್ತೀಯೇ? ನಾವು ಮಾಡಿ ಇದ್ದ ಪಾಪಕ್ಕಾಗಿ ದೇವರು ನಮಗೆ ಶಿಕ್ಷೆಯನ್ನು ಕೊಟ್ಟನು. ಇದಕ್ಕೆ ನಾವು ಕಂಗೆಡದೆ ದೇವರನ್ನು ನಂಬಿ ಪ್ರಾರ್ಥಿಸಿಕೊಂಡಿದ್ದರೆ ಕಾಪಾಡುವನು ಎಂದು ಹೇಳಲು ಕಿರಾತಸೇನಾಧಿಪತಿಯು—ಯುವರಾಜನಾದ ಚಂಡಪರಾಕ್ರಮಿಯು ಏನಾದನೋ? ತಿಳಿಯದು ಎಂದು ಹೇಳಿದನು. ಅದಕ್ಕೆ ಹರಿದತ್ತನು—ನಿನ್ನನ್ನೂ ನನ್ನನ್ನೂ ಕೂಡಿಸಿದ ದೇವರು ಅವನನ್ನೂ ಕೂಡಿಸುತ್ತಾನೆ ಎಂದು ಈರ್ವರೂ ಕಾಡಿನಲ್ಲಿ ಗೆಡ್ಡೆಗೆಣಸು ಹಣ್ಣುಹಂಪಲುಗಳನ್ನು ತಂದು ತಿನ್ನುತ್ತಾ ದೇವರ ಧ್ಯಾನವನ್ನು ಮಾಡಿಕೊಂಡು ಇದ್ದರು.

ಇತ್ತಲಾ ಸಿಂಹವಿಕ್ರಮನ ಮಗಳಾದ ಆನಂದವಲ್ಲಿಯು ಚಂಡಪರಾಕ್ರಮಿಯ ವಿಚಾರವನ್ನು ಕೇಳಿ ಕಣ್ಣಿನಲ್ಲಿ ಕಂಬನಿ ತುಳುಕುತ್ತಿರಲು ಬಂದು ತಂದೆಯ ಅಡಿಗೆ ಅಡ್ಡಬಿದ್ದು—ಅಯ್ಯಾ, ತಂದೆಯೇ! ನನ್ನ ಮನದಲ್ಲಿ ಮದುವೆಯಾದ ನನ್ನ ಮನೋವಲ್ಲಭನಾದ ಚಂಡಪರಾಕ್ರಮಿಯು ಸೈನ್ಯಸಹಿತ ಸಮುದ್ರದಲ್ಲಿ ಮುಳುಗಿ ಹೋದನಂತೆ ವಿಧವೆಯಾಗಿ ಬದುಕುವ ಈ ನನ್ನ ಬಾಳಿನಿಂದ ಏನು ಪ್ರಯೋಜನ? ಈ ಒಡಲಲ್ಲಿ ಹರಣವಿರುವ ತನಕ ಅರಣ್ಯದಲ್ಲಿ ಹಣ್ಣುಹಂಪಲುಗಳನ್ನು ತಿಂದು ದೇವರ ಧ್ಯಾನವನ್ನು ಮಾಡಿಕೊಂಡು ಇರುವೆನು. ಇದಕ್ಕೆ ಅಪ್ಪಣೆಯನ್ನು ಕೊಡಬೇಕೆಂದು ಕೇಳಿದಳು. ಅದಕ್ಕೆ ಸಿಂಹವಿಕ್ರಮನು—ಅಮ್ಮಣ್ಣೀ! ಆನಂದವಲ್ಲಿಯೇ! ನಿನ್ನ ಪ್ರಿಯನಾದ ಚಂಡಪರಾಕ್ರಮಿಯು ಸತ್ತುಹೋದನೆಂದು ಹೇಗೆ ನಿಶ್ಚಯಿಸಬೇಕು? ಅರಣ್ಯದಲ್ಲಿ ಮಾಡುವ ದೇವರ ಧ್ಯಾನವನ್ನು ಅರಮನೆಯಲ್ಲಿಯೇ ಇದ್ದುಕೊಂಡು ಮಾಡು. ದೇವರು ನಿನ್ನ ಮನೋಭಿಲಾಷೆಯನ್ನು ನೆರವೇರಿಸುವನು. ನಾನು ಸಮಸ್ತ ದೇಶದ ಅರಸುಗಳಿಗೆ ನಿನ್ನ ಸ್ವಯಂವರಕ್ಕೋಸ್ಕರ ನಿರೂಪವನ್ನು ಬರೆಯಿಸಿ ಅವರನ್ನು ಕರೆಯಿಸುವೆನು. ನಿನ್ನ ಮನೋವಲ್ಲಭನು ಜೀವವಂತನಾಗಿದ್ದರೆ ಆತನೂ ಬರುವನು. ಆಗ ನೀನು ಆತನನ್ನು ವರಿಸಬಹುದು. ಎಂದು ಸಮಾಧಾನಗೊಳಿಸಿ ಸಕಲ ದೇಶದ ಅರಸುಗಳಿಗೂ ಸ್ವಯಂವರ ಪತ್ರಿಕೆಯನ್ನು ಬರೆಯಿಸಿ ಕಳುಹಿಸಿದುದರಿಂದ ಎಲ್ಲರೂ ಸಿಂಹವಿಕ್ರಮನ ಪಟ್ಟಣಕ್ಕೆ ಬರುತ್ತಿದ್ದರು. ಕುಶಲವತೀನಗರದ ಕುಶಲಶೇಖರರಾಜನೂ ತನ್ನ ಮಗನಾದ ಚಂಡಪರಾಕ್ರಮಿಯು ಸಮಸ್ತ ಪರಿವಾರದೊಡನೆ ಸಮುದ್ರದಲ್ಲಿ ಮುಳುಗಿಹೋದನೆಂಬ ಸುದ್ದಿಯನ್ನು ಕೇಳಿ ಮಹಾ ವ್ಯಾಕುಲದಿಂದ ಮಂತ್ರಿಸಹಿತ ಸಕಲ ಸೇನಾಸಮೇತನಾಗಿ ಸಿಂಹವಿಕ್ರಮನ ಪಟ್ಟಣವನ್ನು ಕುರಿತು ಹೊರಟು ಬರುವ ಮಾರ್ಗದಲ್ಲಿ ಒಂದು ಹೊಳೆಯ ದಡದಲ್ಲಿ ಸೈನ್ಯವನ್ನು ಬಿಡಿಸಿ ಇಳಿದುಕೊಂಡು ಇದ್ದನು. ಹರಿದತ್ತನ ತಂದೆಯಾದ ದೇವದಾಸನು ತನ್ನ ಪತ್ನಿಯಾದ ದೇವದಾಸಿಯೊಡನೆ ದೇಶಸಂಚಾರವನ್ನು ಮಾಡುವುದಕ್ಕೋಸ್ಕರ ಹೋಗಿದ್ದು ಆ ದಂಡಿಳಿದಿರುವ ಬಳಿಯಲ್ಲಿ ಬರುತ್ತಿರಲು ಆ ದಂಪತಿಗಳನ್ನು ಅರಸೂ ಮಂತ್ರಿಯೂ ಕಂಡು ಎದುರಾಗಿ ಹೋಗಿ ನಮಸ್ಕಾರವನ್ನು ಮಾಡಿ—ನಿಮ್ಮನ್ನು ನೋಡಿದರೆ ಬಹಳ

ಸಾತ್ವಿಕರಾಗಿ ಕಾಣುತ್ತೀರಿ. ಎಲ್ಲಿಂದ ಬಂದಿರಿ? ನೀವು ಸಂಚಾರಮಾಡಿದ ಸ್ಥಳಗಳಲ್ಲಿ ವಿಶೇಷ ಸಮಾಚಾರವೇನು? ಅಪ್ಪಣೆ ಕೊಡಬೇಕೆಂದು ಕೇಳಲು ದೇವದಾಸನು—ನನಗೆ ಒಂದು ಸಮಾಚಾರವೂ ತಿಳಿಯದು. ಆದರೆ ಜಗತ್ತಿನ ಜನರು ದೇವರನ್ನು ನಂಬದೆ ಸುಖವು ಒಂದಾಗ ಸಂತೋಷದಿಂದ ಉಬ್ಬಿ ತಮಗೆ ಯಾರೂ ಸರಿಯಿಲ್ಲ ವೆಂದು ಗರ್ವದಿಂದ ನಲಿಯುತ್ತಾ ದುಃಖ ಬಂದಾಗ ಕಂಗೆಟ್ಟು ಬೆಂದು ಬೆಂಡಾಗಿ ನರಳುತ್ತಾ ಇರುವುದೊಂದು ವಿಚಾರ ಮಾತ್ರ ನನಗೆ ಚೆನ್ನಾಗಿ ತಿಳಿಯುವುದು ಎಂದು ಹೇಳಿದನು. ಆಗ ರಾಜಮಂತ್ರಿಗಳೀರ್ವರೂ ಆ ದಂಪತಿಗಳನ್ನು ಕುರಿತು—ನೀವು ಮಹಾ ಪುರುಷರು. ದೇವಭಕ್ತರು ನೀವು ನಮ್ಮ ಮೇಲೆ ದಯವಿಟ್ಟು ನಮ್ಮಲ್ಲಿ ಇದ್ದುಕೊಂಡು ನಮಗೆ ಶ್ರೇಯಸ್ಸುಂಟಾಗುವಂತೆ ಮಾಡಬೇಕೆಂದು ಬಹಳ ನಿರ್ಬಂಧಪಡಿಸಿದುದರಿಂದ ಅವರೂ ಅವರ ಸಂಗಡಲೇ ಹೊರಟು ಎಂದು ಸಿಂಹಳದ್ವೀಪವನ್ನು ಸೇರಿ ಸಿಂಹವಿಕ್ರಮನಿಂದ ಮಾಡಿಸಿ ಕೊಡಲ್ಪಟ್ಟ ಬಿಡಾರದಲ್ಲಿ ರಾಜಮಂತ್ರಿಗಳೊಡನೆ ಇದ್ದುಕೊಂಡು ಇದ್ದರು.

ಹೀಗಿರುವಲ್ಲಿ ಸಮಸ್ತ ದೇಶದ ಅರಸುಗಳೂ ಬಂದುದನ್ನು ತಿಳಿದು ಸಿಂಹವಿಕ್ರಮನು ಸ್ವಯಂವರಮಂಟಪವನ್ನು ರಚಿಸಿ ಅವರನ್ನೆಲ್ಲಾ ಉಚಿತಾಸನದಲ್ಲಿ ಕುಳ್ಳಿರಿಸಿ ತನ್ನ ಪುತ್ರಿಯಾದ ಆನಂದವಲ್ಲಿಯನ್ನು ಕರೆದು—ಅಮ್ಮಣ್ಣೀ! ಸಕಲ ದೇಶದ ದೊರೆಗಳೂ ಬಂದು ಸ್ವಯಂವರಮಂಟಪದಲ್ಲಿ ಕುಳಿತಿದ್ದಾರೆ. ನೀನು ಬಂದು ನೋಡಿ ನಿನ್ನ ಮನಸ್ಸು ಬಂದವನಿಗೆ ಮಾಲಿಕೆಯನ್ನು ಹಾಕು ಎಂದು ಹೇಳಲು ಆಕೆಯು—ಒಳ್ಳೆಯದು ಎಂದು ಅಲಂಕಾರ ಮಾಡಿಕೊಳ್ಳುತ್ತಾ ಇದ್ದಳು. ಅಷ್ಟರಲ್ಲಿ ಅಡುಗೂಳಜ್ಜಿಯ ಮನೆಯಲ್ಲಿರುವ ಚಂಡಪರಾಕ್ರಮಿಯ ಬುದ್ಧ್ಯಭಿಮಾನಿಯಾದ ದೇವತೆಗೂ ಕರ್ಮಾಭಿಮಾನಿಯಾದ ದೇವತೆಗೂ—ನಾನು ದೊಡ್ಡವಳು ತಾನು ದೊಡ್ಡವಳು ಎಂಬ ವಿಷಯದಲ್ಲಿ ಜಗಳ ಬಂದು ಅದರ ನಿಶ್ಚಯಕ್ಕಾಗಿ ದೇವರ ಬಳಿಗೆ ಹೋಗಿ ಕೇಳಬೇಕೆಂದು ಹೊರಟು ಬರುವ ಮಾರ್ಗದಲ್ಲಿ ಹರಿದತ್ತನನ್ನು ಕಂಡು—ನೀನು ಯಾರು? ಮಹಾ ದೇವರ ಭಕ್ತನಾಗಿ ಕಾಣುತ್ತೀಯೆ? ನಾವು ಚಂಡಪರಾಕ್ರಮಿ ಎಂಬ ರಾಜಕುಮಾರನ ಬುದ್ಧಿಕರ್ಮಾಭಿಮಾನ ದೇವತೆಗಳು. ನಮ್ಮಿರ್ವರಲ್ಲಿ ಯಾರು ದೊಡ್ಡವರೆಂಬುವುದು ನಿನಗೆ ತಿಳಿದರೆ ಹೇಳಬಹುದೆಂದು ಕೇಳಿದರು. ಅದಕ್ಕೆ—ನಿಮಗೆ ಆಶ್ರಯಿಭೂತನಾದ ಚಂಡಪರಾಕ್ರಮಿಯನ್ನು ನನ್ನೆಡೆಗೆ ಕರತಂದರೆ ನಿಮ್ಮ ಜಗಳವನ್ನು ತೀರಿಸುವೆನೆಂದು ಹೇಳಿದನು. ಆಗ ಅಭಿಮಾನ ದೇವತೆಗಳಿಬ್ಬರೂ ಅಡಗೂಳಜ್ಜಿಯ ಮನೆಗೆ ಹೋಗಿ ಚಂಡಪರಾಕ್ರಮಿಯನ್ನು ಹೊತ್ತುಕೊಂಡು ಬಂದು ಹರಿದತ್ತನ ಮುಂದೆ ಇಳಿಸಿದರು. ಆಗ ಅವರೀರ್ವರೂ ಪರಸ್ಪರಾವಲೋಕನದಿಂದ ಸಂತೋಷಪಟ್ಟು ಕುಳಿತುಕೊಂಡಿರುವಲ್ಲಿ ಹರಿದತ್ತನು—ನಮ್ಮ ಚಂಡಪರಾಕ್ರಮಿಗೆ ಕಡಿದಿರುವ ಕಾಲುಗಳನ್ನು ಉಂಟುಮಾಡಿ ಸಮುದ್ರದಲ್ಲಿ ಮುಳುಗಿಹೋದ ನಮ್ಮ ಬತುರಂಗಬಲದಲ್ಲಿ ಒಂದೂ ಉಳಿಯದಂತೆ ಜೀವಿಸಿ ಎದ್ದು ಸಿಂಹವಿಕ್ರಮನ ಪಟ್ಟಣಕ್ಕೆ ಪ್ರವೇಶಿಸಿ ಆತನನ್ನು ಕೈಸೆರೆ ಹಿಡಿದು ನಮ್ಮ ಬಳಿಗೆ ತಂದು

ಕೊಡುವಂತೆ ನೀವು ವರವನ್ನು ಕೊಟ್ಟರೆ ನಿಮ್ಮ ವ್ಯವಹಾರವನ್ನು ತೀರಿಸಿಕೊಡುವೆನೆಂದು ಹೇಳಿದುದರಿಂದ ಅವರು—ಹಾಗೇ ಆಗಲಿ ಎಂದು ವರವನ್ನು ಕೊಟ್ಟು ಕೇಳಲು ಹರಿದತ್ತನು ‘‘ ಬುದ್ಧಿಃ ಕರ್ಮಾನುಸಾರಣೀ ’’ ಎಂದು ದೇವರ ವಾಕ್ಯವಿರುವದರಿಂದ ಕರ್ಮಾಭಿಮಾನದೇವತೆಯು ಯಜಮಾನಿಯು ಬುದ್ಧ್ಯಭಿಮಾನದೇವತೆಯು ಆಕೆಯ ಅನುಚರಿಯು. ಇದು ಸತ್ಯವು. ಆದುದರಿಂದ ಇನ್ನು ಮೇಲೆ ಇಂಥಾ ವ್ಯರ್ಥ ಕಲಹ ಗಳನ್ನು ಮಾಡದೆ ಸುಖವಾಗಿ ಈ ಚಂಡಪರಾಕ್ರಮಿಯಲ್ಲಿ ವಾಸವನ್ನು ಮಾಡಿಕೊಂ ಡಿರಿ ಎಂದು ಹೇಳಿದನು. ಆ ಕ್ಷಣದಲ್ಲಿಯೇ ಚಂಡಪರಾಕ್ರಮಿಯ ಕಾಲುಗಳು ಪೂರ್ವದಂತೆ ಹುಟ್ಟಲು ಆಗ ಸಂತೋಷದಿಂದ ಅಭಿಮಾನದೇವತೆಗಳಿಗೆ ಚಂಡಪರಾ ಕ್ರಮಿ ಹರಿದತ್ತ ಕಿರಾತಸೇನಾಪತಿಗಳು ಸಾಂಷ್ಟಾಂಗವಾಗಿ ಪ್ರಣಾಮವನ್ನು ಮಾಡಿ ದರು. ಅಭಿಮಾನದೇವತೆಗಳು—ನಿಮ್ಮ ಇಷ್ಟಾರ್ಥ ಕೈಗೂಡಲೆಂದು ಹರಿಸಿ ಅದೃಶ್ಯರಾಗಿ ಚಂಡಪರಾಕ್ರಮಿಯ ಶರೀರವನ್ನು ಹೊಕ್ಕು ತಮ್ಮ ತಮ್ಮ ಸ್ಥಾನದಲ್ಲಿ ನೆಲೆಗೊಂಡರು.

ಇತ್ತಕಡೆ ದೇವರ ದಯೆಯಿಂದ ಸಮುದ್ರದಲ್ಲಿ ಮುಳುಗಿ ಹೋಗಿದ್ದ ಇವರ ಚತುರಂಗಬಲವೂ ಎದ್ದು ಸಿಂಹವಿಕ್ರಮನ ಅರಿದುರ್ಘಟವೆಂಬ ಪಟ್ಟಣವನ್ನು ಮುತ್ತಿ ಸ್ವಯಂವರ ಮಂಟಪವನ್ನು ಹೊಕ್ಕು ಕೆಲವರು ಆತನ ಸೇನೆಯೊಡನೆ ಯುದ್ಧಕ್ಕೆ ನಿಂತು ಕೆಲವರು ಸಿಂಹವಿಕ್ರಮನನ್ನು ಹಿಡಿದು ಮದದಾನೆಯ ಮೇಲೆ ಅಂಬಾರಿಯಲ್ಲಿ ಕೂರಿಸಿಕೊಂಡು ಚಂಡಪರಾಕ್ರಮಿ ಇರುವ ಸ್ಥಳಕ್ಕೆ ಕರೆದುಕೊಂಡು ಬರುತ್ತಾ ಇರು ವಲ್ಲಿ ಚಂಡಪರಾಕ್ರಮಿಯು ದೂರದಿಂದಲೇ ಕಂಡು ಹರಿದತ್ತನನ್ನೂ ಕಿರಾತಸೇನಾ ಪತಿಯನ್ನೂ ಕರೆದುಕೊಂಡು ಆತನೆಡೆಗೆ ಹೋಗಿ ಭೂಮಿಯಲ್ಲಿ ಸಾಷ್ಟಾಂಗ ಪ್ರಮಾ ಣವನ್ನು ಮಾಡಿ ಕೈಮುಗಿದು ನಿಂತುಕೊಂಡು—ಸ್ವಾಮಿ ! ಸಿಂಹಳದ್ವೀಪದ ಸಾರ್ವಭೌಮರಾದ ಸಿಂಹವಿಕ್ರಮ ಮಾವಾಜಿಯವರೇ ! ಚಂಡಪರಾಕ್ರಮಿ ಎಂಬ ನಿಮ್ಮ ಅಳಿಯನು ನಾನೇ. ದೇವರು ಮಾಡಿದಂಥಾ ಕೆಲಸಕ್ಕೆ ನಾವು ಸರ್ವರೂ ಸಂತೋ ಷಪಟ್ಟುಕೊಂಡು ಇರಬೇಕೇ ಹೊರತು ವ್ಯಸನಪಡಕೂಡದು. ನಿಮ್ಮ ಚಿರಂಜೀವಿ ಯಾದ ನನ್ನ ಅಪರಾಧಗಳನ್ನು ಚಿತ್ತದಲ್ಲಿ ತಾರದೆ ಬಾಲಕನನ್ನು ಮನ್ನಿಸಬೇಕೆಂದು ತಿರಿಗಿ ಪೊಡಮಡಲು ಸಿಂಹವಿಕ್ರಮನು ಆನೆಯಿಂದ ಇಳಿದು ಆಲಿಂಗಿಸಿಕೊಂಡು ಆ ಮೂವರೂ ತಾನೂ ಸಹ ಗಜಾರೂಢರಾಗಿ ಪಟ್ಟಣಕ್ಕೆ ಬಂದು ಅರಮನೆಯಲ್ಲಿ ಇಳಿದು ಕುಶಲಶೇಖರರಾಜನ ಬಿಡಾರಕ್ಕೆ ಸರ್ವವರೂ ಬಂದು ಕಾಣಿಸಿಕೊಳ್ಳಲು ದೇವದಾಸನು ಆದಿಯಿಂದಲೂ ನಡೆದ ವೃತ್ತಾಂತವನ್ನೆಲ್ಲಾ ಸರ್ವರ ಮುಂದೆ ತಿಳಿಸಲು ಸರ್ವರೂ ಕೇಳಿ—ಇವರು ಹರಿದಾಸನ ತಾಯಿತಂದೆಗಳೆಂದು ತಿಳಿದು ಅತ್ಯಾಶ್ಚರ್ಯ ಗೊಂಡರು. ಸಿಂಹವಿಕ್ರಮನು ಚಂಡಪರಾಕ್ರಮಿಗೂ ಆನಂದವಲ್ಲಿಗೂ ವಿವಾಹ ಪ್ರಸ್ತಾವನ್ನು ಬೆಳೆಸಿ ತನ್ನ ದ್ವೀಪದ ನಾಲ್ಕು ಭಾಗದಲ್ಲಿ ಒಂದು ಭಾಗವನ್ನು ಅಳಿಯನಿಗೆ ಧಾರೆಯನ್ನೆರದು ಕೊಟ್ಟು ಕುಶಲವತೀನಗರಕ್ಕೆ ಹೋಗುವಂತೆ ಅಪ್ಪಣೆಯನ್ನು ಕೊಟ್ಟು ಕಳುಹಿಸಿದನು. ಬಳಿಕ ಕುಶಲಶೇಖರರಾಜನು ಮಗನನ್ನೂ ಸೊಸೆಯನ್ನೂ ಕರಕೊಂಡು ಸರ್ವಪರಿವಾರಸಮೇತನಾಗಿ ಪಟ್ಟಣಕ್ಕೆ ಬಂದು ದೇವದಾಸನನ್ನೂ ದೇವದಾಸಿಯನ್ನೂ ಪೂಜಿಸುತ್ತಾ ದೇವರ ಧ್ಯಾನವನ್ನು ಮಾಡಿಕೊಂಡು ಸುಖದಲ್ಲಿದ್ದನು.

೨ನೆಯ ಭಾಗ

ಶಿವಪುರಾಣದಿಂದ ಸಂಗ್ರಹಿಸಿದ ಕಥೆಗಳು

1. THE REWARD OF WORSHIPPING SHIVA.

೧. ನಿಯಮದಿಂದ ಶಿವಪೂಜೆ ಮಾಡಿದುದರ ಫಲ.

ಲೋಕದಲ್ಲಿ ನಿಯಮದಿಂದ ಪರಮೇಶ್ವರಸ್ವಾಮಿಯವರಿಗೆ ಸೇವೆಯನ್ನು ಮಾಡುವವರು ಸಂಸಾರ ಬಂಧಗಳನ್ನು ಪರಿಹರಿಸಿಕೊಂಡು ಮುಕ್ತರಾಗುವರು. ಈ ಅರ್ಥದಲ್ಲಿ ಒಂದು ಕಥೆಯುಂಟು. ಅದು ಹೇಗಂದರೆ —

ಚೋಳದೇಶಕ್ಕೆ ಸೇರಿರುವುದಾಗಿ ಸಮುದ್ರತೀರದಲ್ಲಿ ಪ್ರಸಿದ್ಧವಾದ ನಾಗಪಟ್ಟಣವಿರುವುದು ಅದು ತತ್ವಜ್ಞಾನಿಗಳಾದ ಬ್ರಾಹ್ಮಣರಿಂದಲೂ ಧನುರ್ವಿದ್ಯಾವಿಶಾರದರಾದ ಕ್ಷತ್ರಿಯರಿಂದಲೂ ಹಡಗುಗಳ ಮೂಲಕ ನಾನಾ ದ್ವೀಪಾಂತರಗಳಲ್ಲಿ ಮಾಡುವ ವ್ಯಾಪಾರಗಳಿಂದ ರಾಶಿರಾಶಿಗಳಾಗಿ ಸುರಿದಿರುವ ನವರತ್ನಗಳುಳ್ಳ ವಣಿಗ್ಜನಗಳಿಂದಲೂ ಗೋಬ್ರಾಹ್ಮಣ ಸೇವೆಯಲ್ಲಿ ನಿರತರಾಗಿ ಕೃಷಿಕರ್ಮಾವಲಂಬಿಗಳಾದ ಶೂದ್ರರಿಂದಲೂ ಕೂಡಿ ನಿರಂತರವೂ ಶೋಭಿಸುತ್ತಿರುವುದು.

ಮತ್ತು ನವರತ್ನಾದಿಗಳಿಂದ ನಿರ್ಮಿತಗಳಾಗಿ ಗಗನವನ್ನು ಜುಂಬಿಸುತ್ತಿರುವ ಸೌಧಪಙ್ತಿಗಳಿಂದಲೂ ದೀರ್ಘವಾಗಿಯೂ ವಿಸ್ತಾರವಾಗಿಯೂ ಇರುವ ರಾಜವೀಧಿಗಳಿಂದಲೂ ವಿಚಿತ್ರತರಗಳಾದ ದೇವಾಲಯಗಳಿಂದಲೂ ಲೋಕೋಪಕಾರಾರ್ಥವಾಗಿ ಸ್ಥಾಪಿತಗಳಾಗಿರುವ ಅನ್ನಸತ್ರಗಳಿಂದಲೂ ವಿಕಸನವಾಗಿ ಸುಗಂಧವನ್ನು ಬೀರುತ್ತಿರುವ ಕಮಲಗಳುಳ್ಳ ಸರೋವರಗಳಿಂದಲೂ ಅನೇಕ ವಿಧ ಫಲಪುಷ್ಪಭರಿತ ತರುಲತಾಮಂಜುಳವಾಗಿಯೂ ಶುಕಪಿಕ ಮಯೂರಾದಿ ಮಂಜುರವಮಂಡಿತವಾಗಿಯೂ ಇರುವ ಉದ್ಯಾನವನಗಳಿಂದಲೂ ಪರೋಪಕಾರಶೀಲರಾದ ಧರ್ಮಾತ್ಮರಿಂದಲೂ ಪೂಜ್ಯರಾದ ಜ್ಞಾನವಯೋವೃದ್ಧರುಗಳಿಂದಲೂ ಕೂಡಿ ರಮಣೀಯವಾಗಿರುವ ಆ ಪುಟಭೇದನವು ತನ್ನಲ್ಲಿ ನಿರಂತರವೂ ವಾಸಿಸುವ ಜನರಿಗೆ ಸ್ವರ್ಗಾದ್ಯುತ್ತಮಲೋಕಗಳ ಭೋಗಾಸಕ್ತಿಯನ್ನು ಮರೆಯಿಸುತ್ತಿತ್ತು. ಅಂಥಾ ನಾಗಪಟ್ಟಣದಲ್ಲಿ ಮಾನದತ್ತನೆಂಬ ಒಬ್ಬ ಬೆಸ್ತನು ಸಮುದ್ರದಲ್ಲಿ ಇರುವ ಮತ್ಸ್ಯಗಳನ್ನು ಹಿಡಿದು ವ್ಯಾಪಾರವನ್ನು ಮಾಡಿ ಹೆಚ್ಚಾಗಿ ಹಣವನ್ನು ಸಂಪಾದಿಸಿ ತನ್ನ ಕುಲದಲ್ಲಿ ಹುಟ್ಟಿದ ಮಾಲಿನಿ ಎಂಬ ಸ್ತ್ರೀಯನ್ನು

ಮದುವೆ ಮಾಡಿಕೊಂಡು ಅವಳೊಡನೆ ಕೂಡಿ ಸಕಲ ಭೋಗಗಳನ್ನೂ ಅನುಭವಿಸುತ್ತಾ ಇದ್ದನು. ಇವನು ಒಂದು ದಿವಸ ಕಾವೇರಿಯ ಸಂಗಮದಲ್ಲಿ ಮತ್ಸ್ಯಗಳನ್ನು ಹಿಡಿದು ದಡದಲ್ಲಿ ಗುಡ್ಡೆಯನ್ನು ಹಾಕಿಕೊಂಡು ವ್ಯಾಪಾರವನ್ನು ಮಾಡುತ್ತಾ ಇರಲು ಆ ದಿವಸ ಆಷಾಢಬಹುಳ ಅಮಾವಾಸ್ಯೆಯಾದುದರಿಂದ ಆ ಕಾವೇರಿಯ ತೀರದಲ್ಲಿ ಇರುವಂಥಾ ಬ್ರಾಹ್ಮಣರೆಲ್ಲರೂ ಸಂಗಮದಲ್ಲ ಸ್ನಾನವನ್ನು ಮಾಡುವುದಕ್ಕೋಸ್ಕರ ಸಮುದ್ರಜಲದಲ್ಲಿ ನಿಂತು ಸ್ನಾನವನ್ನು ಮಾಡಿ ದಡದಲ್ಲಿ ಕುಳಿತುಕೊಂಡು ಕೆಲವರು ಜಪವನ್ನು ಮಾಡುತ್ತಿದ್ದರು. ಕೆಲವರು ಪುರಾಣಗಳನ್ನು ಹೇಳುತ್ತಿದ್ದರು. ಕೆಲವರು ದಾನಧರ್ಮಗಳನ್ನು ಮಾಡುತ್ತಿದ್ದರು. ಆ ಮಿಾನದತ್ತನು ಸ್ನಾನವನ್ನು ಮಾಡುವಂಥಾ ಬ್ರಾಹ್ಮಣರನ್ನೂ ಕ್ಷತ್ರಿಯರನ್ನೂ ವೈಶ್ಯರನ್ನೂ ಶೂದ್ರರನ್ನೂ ದಾನಗಳನ್ನು ಮಾಡುವಂಥಾ ಪುಣ್ಯಪುರುಷರನ್ನೂ ಪುರಾಣವನ್ನೂ ಹೇಳುವಂಥಾ ವೃದ್ಧರನ್ನೂ ನೋಡಿ ಆಶ್ಚರ್ಯಪಟ್ಟು ಪುರಾಣವನ್ನು ಹೇಳುವಂಥಾ ಬ್ರಾಹ್ಮಣರ ಸಮಿಾಪದಲ್ಲಿ ನಿಂತು—ಪರಮೇಶ್ವರನ ಪಾದಗಳಲ್ಲಿ ಭಕ್ತಿಯುಳ್ಳಂಥವರು ಸಕಲ ಪಾಪಗಳ ಪರಿಹಾರವನ್ನೂ ಹೊಂದಿ ಮುಕ್ತರಾಗುವರು. ಮತ್ತು ಪರಮೇಶ್ವರಸ್ವಾಮಿಯವರಿಗೆ ಭಕ್ತಿಯಿಂದ ತನ್ನ ಶಕ್ತಿಗೆ ತಕ್ಕ ಹಾಗೆ ಹಣವನ್ನಾದರೂ ಪತ್ರ ಪುಷ್ಪ ಫಲಗಳನ್ನಾದರೂ ಒಂದು ಮಾನ ಅಕ್ಕಿಯನ್ನಾದರೂ ಅಡಿಕೆ ಎಲೆಗಳನ್ನಾದರೂ ತಂದು ಸಮರ್ಪಿಸಿದಂಥವರಿಗೆ ಪರಮೇಶ್ವರನು ಪ್ರಸನ್ನನಾಗಿ ಬೇಕಾದ ವರಗಳನ್ನು ಕೊಡುವನು ಎಂಬ ಅರ್ಥವನ್ನು ಕೇಳಿ ಪುರಾಣಹೇಳುವಂಥಾ ಬ್ರಾಹ್ಮಣರಿಗೆ ನಮಸ್ಕಾರವನ್ನು ಮಾಡಿ ಆ ಹೊತ್ತು ಮೊದಲ್ಗೊಂಡು ಪರಮೇಶ್ವರನಲ್ಲಿ ಭಕ್ತಿಯುಳ್ಳವನಾಗಿ ನಿತ್ಯವೂ ಮತ್ಸ್ಯಗಳ ವ್ಯಾಪಾರದಲ್ಲಿ ಬಂದ ಹಣದಲ್ಲಿ ನಾಲ್ಕನೆಯ ಪಾಲನ್ನು ತೆಗೆದು ಪರಮೇಶ್ವರಸ್ವಾಮಿಯವರಿಗೆ ಮಿಾಸಲಾಗಿ ಇರಿಸಿ ಮಿಕ್ಕಾದ ಹಣವನ್ನು ತಾನು ವೆಚ್ಚವನ್ನು ಮಾಡಿಕೊಳ್ಳುತ್ತಾ ನಿತ್ಯವೂ ಪರಮೇಶ್ವರಸ್ವಾಮಿಯವರನ್ನೇ ಮನಸ್ಸಿನಲ್ಲಿ ಸ್ಮರಿಸುತ್ತಾ ಕೂಡಿದ ಹಣವೆಲ್ಲವನ್ನೂ ತಿಂಗಳಿಗೆ ಒಂದು ಸಾರಿ ತ್ಯಾಗರಾಜಸ್ವಾಮಿಯವರಿಗೆ ಸಮರ್ಪಿಸುತ್ತಾ ಈ ಪ್ರಕಾರದಿಂದ ಆರವತ್ತು ವರುಷ ಪರ್ಯಂತರವೂ ನಿಯಮವನ್ನು ತಪ್ಪದೆ ತ್ಯಾಗರಾಜಸ್ವಾಮಿಯವರಿಗೆ ಸೇವೆಯನ್ನು ಮಾಡುತ್ತಿರಲು ಆ ಪರಮೇಶ್ವರಸ್ವಾಮಿಯವರ ಪ್ರಸಾದದಿಂದ ಒಬ್ಬ ದಿವ್ಯಪುರುಷನು ಮಿಾನದತ್ತನಿಗೆ ಪ್ರಸನ್ನನಾಗಿ ಆತನ ಮನೆಯಲ್ಲಿ ಬೆಳೆಯುತ್ತಿರಲು ಮಿಾನದತ್ತನು ಆ ಬಾಲಕನನ್ನು ನೋಡಿ ಸಂತೋಷಪಟ್ಟು ಪರಮೇಶ್ವರಸ್ವಾಮಿಯವರೇ ಈ ರೂಪದಿಂದ ಬಂದಿದಾರೆ ಎಂದು ಎಣಿಸಿ ಬಹು ಪ್ರೀತಿಯಿಂದ ಕಾಪಾಡುತ್ತಾ ಅವನನ್ನು ಪ್ಯವನೆಂಬ ಹೆಸರಿನಿಂದ ಕರೆಯುತ್ತಾ ಅಧಿಕವಾದ ಸಂತೋಷವುಳ್ಳವನಾಗಿ ಬಹು ದಿವಸ ಬದುಕಿದ್ದು ಕಡೆಗೆ ಕೈಲಾಸವನ್ನೈದಿದನು. ಆ ಪ್ಯವನು ತನ್ನ ಕುಲಾಚಾರವನ್ನು ಬಿಡದೆ ಮತ್ಸ್ಯಗಳನ್ನು ಹಿಡಿದು ವ್ಯಾಪಾರವನ್ನು ಮಾಡುತ್ತಾ ಬುದ್ಧಿವಂತನಾಗಿ ಇರುತ್ತಿದ್ದನು. ಒಂದು ದಿವಸ ಫಾಲ್ಗುಣಮಾಸದಲ್ಲಿ ತ್ಯಾಗರಾಜಸ್ವಾಮಿಯವರಿಗೆ ರಥೋತ್ಸವವಾಗುತ್ತಿರಲು ಆ ನಾಗಪಟ್ಟಣದಲ್ಲಿರುವ ಜನರೆಲ್ಲರೂ ರಥೋ

ತ್ಸವವನ್ನು ನೋಡುವುದಕ್ಕೋಸ್ಕರ ಹೋಗುತ್ತಿದ್ದರು. ಆ ವ್ಯವನು ಅವರ ಸಂಗಡ ತಿರುವಾಲೂರಿಗೆ ಹೋಗಿ ರಥೋತ್ಸವವನ್ನು ನೋಡಿ ತ್ಯಾಗರಾಜ ಸ್ವಾಮಿಯವರನ್ನು ಮನಸ್ಸಿನಲ್ಲಿ ಧ್ಯಾನಿಸುತ್ತಾ ಸಾಯಂಕಾಲ ವೇಳೆಯಲ್ಲಿ ಕಮಲಾಲಯದ ಸೋಪಾನದಲ್ಲಿ ಕುಳಿತುಕೊಂಡು ವಿನೋದಗಳನ್ನು ನೋಡುತ್ತಿರಲು ಆ ಹೊತ್ತು ಸಾಯಂಕಾಲದಲ್ಲಿ ಒಬ್ಬ ಬ್ರಾಹ್ಮಣನು ಸ್ನಾನವನ್ನು ಮಾಡಿ ಮಡಿಯನ್ನು ಉಟ್ಟು ಸೋಪಾನದಲ್ಲಿ ಕುಳಿತುಕೊಂಡು ವಿಭೂತಿ ರುದ್ರಾಕ್ಷಿಗಳನ್ನು ಧರಿಸಿ ಸ್ವೇಷ್ಟಲಿಂಗರೂಪ ಶಿವ ಪೂಜೆಯನ್ನು ಮಾಡಿ ನಿರ್ಮಾಲ್ಯದ ಪತ್ರ ಪುಷ್ಪಗಳನ್ನೂ ತಿಲಾಕ್ಷತೆಗಳನ್ನೂ ಉದಕದಲ್ಲಿ ಹಾಕಲು ಒಂದು ಮತ್ಸ್ಯವು ಅಲ್ಲಿಗೆ ಬಂದು ಆ ತಿಲಾಕ್ಷತೆಗಳನ್ನು ಭಕ್ಷಿಸುತ್ತಿರಲು ಆ ವ್ಯವನು ಅದನ್ನು ನೋಡಿ ಹಿಡಿದು ಸಂಹರಿಸುವುದಕ್ಕೆ ಯತ್ನಿಸಲು ಆ ಬ್ರಾಹ್ಮಣನು ಅದನ್ನು ನೋಡಿ ಆತನ ಸಮೀಪಕ್ಕೆ ಬಂದು—ಆ ಮೀನನ್ನು ಬಿಟ್ಟುಬಿಡು ಎಂದು ಹೇಳಲು ಆ ವ್ಯವನು ಬ್ರಾಹ್ಮಣನ ವಾಕ್ಯವನ್ನು ಕೇಳಿ ಆ ಮತ್ಸ್ಯವನ್ನು ಬಿಟ್ಟು ಎದ್ದು ಕೈಮುಗಿದು—ಸ್ವಾಮೀ ಬ್ರಾಹ್ಮಣ ಶ್ರೇಷ್ಠರುಗಳಿರಾ! ಈ ಮತ್ಸ್ಯವನ್ನು ಬಿಟ್ಟುದರಿಂದ ಫಲವೇನೆಂದು ಕೇಳಲು ಬ್ರಾಹ್ಮಣನು ಆತನನ್ನು ನೋಡಿ—ಎಲೈ ಪರಮಭಕ್ತನೆ! ನಿನ್ನ ಜಾತಿ ಯಾವುದೆಂದು ಕೇಳಲು ಆತನು ತನ್ನ ಜಾತಿಯನ್ನು ಆತನಿಗೆ ತಿಳಿಸಲು ಆ ಬ್ರಾಹ್ಮಣನು ಅವನನ್ನು ನೋಡಿ—ಎಲೈ, ಪರಮಭಕ್ತನೆ! ಮೀನುಗಳನ್ನು ಕೊಲ್ಲುವುದು ನಿಮ್ಮ ಜಾತಿಯ ಧರ್ಮವು. ಆದರೂ ನೀನು ನನ್ನ ಮಾತನ್ನು ಕೇಳಿ ಈ ಮತ್ಸ್ಯವನ್ನು ಬಿಟ್ಟವನಾದುದರಿಂದ ನೀನು ಪರಮಭಕ್ತನಾಗಿ ಪುಣ್ಯವಂತನಾಗುತ್ತೀ. ನಿನ್ನಲ್ಲಿ ಪರಮೇಶ್ವರಸ್ವಾಮಿಯವರು ಅನುಗ್ರಹವನ್ನು ಮಾಡುತ್ತಾರೆ. ಈ ಭಾಗದಲ್ಲಿ ಸಂಶಯವಿಲ್ಲ. ಇನ್ನು ಪರಮೇಶ್ವರಸ್ವಾಮಿಯಲ್ಲಿ ನಿಜವಾದ ಭಕ್ತಿಯನ್ನು ಇಟ್ಟುಕೊಂಡಿರು ಎಂದು ಹೇಳಿ ತನ್ನ ಕೈಯಲ್ಲಿದ್ದ ವಿಭೂತಿಯನ್ನು ಕೊಟ್ಟು ನಿನಗೆ ಶಿವಾನುಗ್ರಹವುಂಟಾಗಲಿ ಎಂದು ಆಶೀರ್ವಾದವನ್ನು ಮಾಡಿ ನೀನು ಅಧಿಕ ಭಕ್ತಿಯನ್ನು ಮಾಡಿದವನಾದುದರಿಂದ ಅತಿಭಕ್ತನೆಂದು ಪ್ರಸಿದ್ಧನಾಗುತಲಿದ್ದೀ ಎಂದು ನುಡಿದು ತನ್ನ ಮನೆಗೆ ಹೋದನು. ಅಲ್ಲಿದ್ದ ಜನರೆಲ್ಲರೂ ಆತನ ಭಕ್ತಿಯನ್ನು ನೋಡಿ ಆತನನ್ನು ಅತಿಭಕ್ತನೆಂದು ಕರೆಯುತ್ತಿದ್ದರು.

ಆ ಅತಿಭಕ್ತನು ಆ ಹೊತ್ತು ಮೊದಲ್ಗೊಂಡು ಪರಮೇಶ್ವರಸ್ವಾಮಿಯವರಲ್ಲಿ ಭಕ್ತಿಯುಳ್ಳವನಾಗಿ ಅಲ್ಲಿಂದ ಹೊರಟು ತಮ್ಮ ಊರಿಗೆ ಬಂದು ಪರಮೇಶ್ವರ ಸ್ವಾಮಿಯವರನ್ನು ಸ್ಮರಿಸುತ್ತಾ ಮತ್ಸ್ಯಗಳನ್ನು ಹಿಡಿಯುವಾಗ ಮೊದಲು ಸಿಕ್ಕಿದ ಮತ್ಸ್ಯವನ್ನು ಪರಮೇಶ್ವರಸ್ವಾಮಿಯವರಿಗೆ ಸಮರ್ಪಿಸಿ ಅದನ್ನು ಜೀವಸಹಿತವಾಗಿ ಬಿಟ್ಟುಬಿಡುತ್ತಾ ನಿತ್ಯವೂ ಪರಮೇಶ್ವರ ಸ್ವಾಮಿಯವರಲ್ಲಿ ಭಕ್ತಿಯನ್ನು ಮಾಡುತ್ತಾ ಐವತ್ತು ವರುಷದ ಪರ್ಯಂತರ ತಪ್ಪದೆ ಈ ನಿಯಮವನ್ನು ನಡೆಸುತ್ತಾ ಬರುತ್ತಿರಲು ಅಲ್ಲಿರುವ ನೆಂಟರೆಲ್ಲರೂ ಅತಿಭಕ್ತನನ್ನು ನೋಡಿ ಹಾಸ್ಯವನ್ನು ಮಾಡುತ್ತಿದ್ದರು. ಆ ಅತಿಭಕ್ತನು ಈಶ್ವರಾನುಗ್ರಹದಿಂದ ಮತ್ಸ್ಯಗಳನ್ನು ಹಿಡಿದು ವ್ಯಾಪಾರಗಳನ್ನು ಮಾಡಿ ಯಾಚಿಸಿದಂಥವರಿಗೆ ಬೇಕಾದ ಹಣವನ್ನೂ ಮತ್ಸ್ಯಗಳನ್ನೂ ಕೊಡತ್ತಿರಲು ಒಂದು

ದಿವಸದಲ್ಲಿ ಪರಮೇಶ್ವರಸ್ವಾಮಿಯವರು ಆತನ ಭಕ್ತಿಯನ್ನು ನೋಡುವುದಕ್ಕೋಸ್ಕರ ಒಂದೇ ಮತ್ಸ್ಯವು ಸಿಕ್ಕುವ ಹಾಗೆ ಮಾಡಲು ಅತಿಭಕ್ತನು ಆ ಒಂದು ಮತ್ಸ್ಯವನ್ನೇ ಪರಮೇಶ್ವರಸ್ವಾಮಿಯವರಿಗೋಸ್ಕರ ಬಿಟ್ಟುಬಿಟ್ಟನು. ಆ ಮೇಲೆ ಅವನು ಬಹು ಶ್ರಮಪಟ್ಟರೂ ಒಂದು ಮೀನಾದರೂ ಸಿಕ್ಕದೇ ಹೋಯಿತು. ತಿರಿಗಿ ಮನೆಗೆ ಬಂದನು. ಮತ್ತೊಂದು ದಿವಸದಲ್ಲಿ ಅತಿಭಕ್ತನು ಮತ್ಸ್ಯಗಳನ್ನು ಹಿಡಿಯುವುದಕ್ಕೋಸ್ಕರ ಬಲೆಯನ್ನು ನೀರಿನಲ್ಲಿ ಬಿಟ್ಟುಕೊಂಡು ಸಾಯಂಕಾಲದ ವರೆಗೂ ಇದ್ದಾಗ್ಗೂ ಕಡೆಯಲ್ಲಿ ಒಂದೇ ಮತ್ಸ್ಯವು ಸಿಕ್ಕಿತು. ಅದನ್ನು ಪರಮೇಶ್ವರಸ್ವಾಮಿಯವರಿಗೆ ಸಮರ್ಪಿಸಿ ಬಿಟ್ಟು ಬಿಟ್ಟು ಮನೆಗೆ ಬಂದು ರಾತ್ರಿಯನ್ನು ಕಳೆದು ಮಾರನೆಯ ದಿವಸ ಪ್ರಾತಃಕಾಲದಲ್ಲಿ ಎದ್ದು ಸಮುದ್ರದಲ್ಲಿ ಬಲೆಯನ್ನು ಹಾಕಿ ಎಳೆಯುವ ಸಮಯದಲ್ಲಿ ಪರಮೇಶ್ವರ ಸ್ವಾಮಿಯವರ ಅನುಗ್ರಹದಿಂದ ಕೋಟಿ ಮತ್ಸ್ಯಗಳಿಗೆ ಸಮಾನವಾಗಿ ಬಲಿತು ಮಹೋನ್ನತವಾದ ಒಂದು ಚಿನ್ನದ ಮತ್ಸ್ಯವು ಸಮುದ್ರಮಧ್ಯದಲ್ಲಿ ಸಿಕ್ಕಿ ಬಲೆಯನ್ನು ಎಳೆದು ಕೊಂಡು ಹೋಗುವುದಕ್ಕಾರಂಭಿಸಿತು. ಅತಿಭಕ್ತನು ಆ ಮತ್ಸ್ಯವನ್ನು ಎಳೆಯಲಾರದೆ ತನ್ನ ಸಮೀಪದಲ್ಲಿರುವ ನೆಂಟರನ್ನು ಕರೆದು—ಎಲೈ, ಮಹಾತ್ಮರುಗಳಿರಾ ! ಈ ಬಲೆಯನ್ನು ಎಳೆಯುವದಕ್ಕೆ ಬನ್ನಿರಿ ಎನಲು ಅವರೆಲ್ಲರೂ—ಈ ಬಲೆಯಲ್ಲಿ ಸಿಕ್ಕಿರುವ ಮತ್ಸ್ಯದಲ್ಲಿ ನಮಗೆ ಅರ್ಧವನ್ನು ಕೊಟ್ಟರೆ ಬರುತ್ತೇವೆ ಎಂದು ಹೇಳಿದರು. ಅತಿಭಕ್ತನು ಹಾಗೆಯೇ ಆಗಲೆಂದು ಒಪ್ಪಲು ಅವರೆಲ್ಲರೂ ಕೂಡಿ ಬಲೆಯನ್ನು ಎಳೆದು ಮತ್ಸ್ಯವನ್ನು ಹಿಡಿದು ಅದನ್ನು ದಡದಲ್ಲಿ ಇರಿಸಿದರು. ಅತಿಭಕ್ತನು ಕೋಟಿ ಮತ್ಸ್ಯಗಳಿಗೆ ಸಮಾನವಾಗಿ ಬಲಿತು ಮಿಂಚಿನ ಹಾಗೆ ಹೊಳೆಯುತ್ತಿರುವ ಚಿನ್ನದ ಮತ್ಸ್ಯವನ್ನು ನೋಡಿ ಆಶ್ಚರ್ಯಪಟ್ಟು ಇದನ್ನು ಪರಮೇಶ್ವರಸ್ವಾಮಿಯವರಿಗೆ ಸಮರ್ಪಿಸುತ್ತೇನೆ ಎಂದು ನುಡಿದು ಬಲೆಯಿಂದ ಆ ಮೀನನ್ನು ತೆಗೆದು ನೀರಿನಲ್ಲಿ ಬಿಟ್ಟುಬಿಟ್ಟನು. ಅಲ್ಲಿರುವ ನೆಂಟರೆಲ್ಲರೂ ಕೂಡಿ—ಈ ಮತ್ಸ್ಯವನ್ನು ಬಿಟ್ಟುಬಿಡುವುದಕ್ಕೆ ಕಾರಣವೇನು ? ಇದು ಚಿನ್ನದ ಮತ್ಸ್ಯವು. ಚಿನ್ನವೆಲ್ಲವನ್ನೂ ಮಾರಿದರೆ ಒಬ್ಬೊಬ್ಬನಿಗೆ ಸಾವಿರ ವರಹಗಳ ಮೇರೆಗೆ ಬರುವುವು. ನಮ್ಮ ಮತ್ಸ್ಯವನ್ನು ನಮಗೆ ಕೊಡು. ಇಲ್ಲವಾದರೆ ನಿನ್ನ ಮನೆಯಲ್ಲಿ ಇರುವ ಹಣವೆಲ್ಲವನ್ನೂ ನಮಗೆ ಹಂಚಿಕೊಡು ಎಂದು ತಡೆದುಕೊಂಡು ಬಿಡದೆ ಬಾಧಿಸಿದುದರಿಂದ ಅತಿಭಕ್ತನು ತನ್ನ ಮನೆಯಲ್ಲಿ ಇರುವ ಹಣವೆಲ್ಲವನ್ನೂ ಅವರಿಗೆ ಕೊಟ್ಟು ಸಮಾಧಾನವನ್ನು ಮಾಡಲು ನೆಂಟರೆಲ್ಲರೂ ಅದನ್ನು ತೆಗೆದು ಕೊಂಡು ಸಂತೋಷಪಟ್ಟು ಅವನನ್ನು ಹೊಗಳುತ್ತಿದ್ದರು. ಪರಮೇಶ್ವರಸ್ವಾಮಿಯವರು ಅತಿಭಕ್ತನ ಭಕ್ತಿಗೆ ಮೆಚ್ಚಿ ವೃಷಭಾರೂಢರಾಗಿ ಪಾರ್ವತಿಯ ಸಮೇತರಾಗಿ ಪ್ರಮಥಗಣಗಳೊಡನೆ ಕೂಡಿ ಪ್ರಸನ್ನರಾಗಿ ಬಂದು ಆತನ ಮುಂದೆ ನಿಂತು—ಎಲೈ ಅತಿಭಕ್ತನೇ ! ನಿನ್ನ ಭಕ್ತಿಯಿಂದ ನನಗೆ ಸಂತೋಷವಾಯಿತು. ನಿನಗೆ ಮುಕ್ತಿಯನ್ನು ಕೊಡುತ್ತೇನೆ. ಕೈಲಾಸಕ್ಕೆ ಬಾ ಎಂದು ನುಡಿದು ಪ್ರಮಥಗಣಗಳೊಡನೆ ಕೂಡಿ ಮಾಯವಾಗಿ ಹೋಗಲು ಅಲ್ಲಿರುವ ಅಂಬಿಗರೆಲ್ಲರೂ ಈ ಸಂಗತಿಯನ್ನು ಆಶ್ಚರ್ಯದಿಂದ ನೋಡುತ್ತಿದ್ದರು. ಅತಿಭಕ್ತನು ಪ್ರತ್ಯಕ್ಷರಾದ ಪರಮೇಶ್ವರಸ್ವಾಮಿಯವರಿಗೆ

ನಮಸ್ಕಾರವನ್ನು ಮಾಡಿ ಸ್ತುತಿಸಿ ಅವರ ಅಪ್ಪಣೆಯಿಂದ ಬಂದ ದಿವ್ಯವಿಮಾನವನ್ನು ಏರಿ ಕೈಲಾಸಕ್ಕೆ ಹೋದನು.

---

2. THE REWARD OF WORSHIPPING THE FOLLOWERS OF SHIVA.

ಶಿವಭಕ್ತರ ಪೂಜಾಫಲ.

ಉತ್ತಮವಾದ ಶಿವಭಕ್ತಿಯಿಂದ ಕೂಡಿದವರಾಗಿ ಬ್ರಾಹ್ಮಣರನ್ನೂ ಶಿವಭಕ್ತರನ್ನೂ ಯಾಚಕರನ್ನೂ ಪೂಜಿಸಿದರೆ ಅವರು ಪರಮೇಶ್ವರಸ್ವಾಮಿಯವರ ಅನುಗ್ರಹದಿಂದ ಮುಕ್ತಿಯನ್ನು ಹೊಂದುವರು. ಈ ಅರ್ಥದಲ್ಲಿ ಒಂದು ಕಥೆಯುಂಟು ಹೇಗಂದರೆ—

ದಕ್ಷಿಣದೇಶದಲ್ಲಿ ಕಾಂಪಿಲ್ಯವೆಂಬ ಪಟ್ಟಣದಲ್ಲಿ ಪುಣ್ಯಶೀಲನೆಂಬ ಒಬ್ಬ ಜೇಡರವನು ತನ್ನ ಜಾತಿಧರ್ಮವನ್ನು ಬಿಡದೆ ವಸ್ತ್ರಗಳನ್ನು ನೇಯುವುದರಲ್ಲಿ ಬಹು ಸಮರ್ಥನಾಗಿ ಬುದ್ಧಿವಂತನಾಗಿ ಆ ದೇಶದಲ್ಲಿರುವ ಜೇಡರಿಗೆಲ್ಲಾ ತಾನೇ ವೆಗ್ಗಳನಾಗಿ ಹೆಚ್ಚಾದ ಹಣವನ್ನು ಸಂಪಾದಿಸಿ ತನ್ನ ಕುಲದಲ್ಲಿ ಹುಟ್ಟಿದ ಸುಮುಖಿ ಎಂಬ ಹೆಸರುಳ್ಳ ಹೆಣ್ಣನ್ನು ಮದುವೆಮಾಡಿಕೊಂಡು ಅವಳೊಡನೆ ಕೂಡಿ ಸಕಲ ಭೋಗಗಳನ್ನೂ ಅನುಭವಿಸುತ್ತಾ ಐವತ್ತು ವರುಷಗಳ ಕಾಲವನ್ನು ಕಳೆದನು. ಆ ಬಳಿಕ ಒಂದು ದಿವಸದಲ್ಲಿ ತನಗೆ ಸಂತಾನವಿಲ್ಲದೆ ಇರುವುದರಿಂದ ತನ್ನ ಹೆಂಡತಿಯನ್ನು ಕರೆದು—ಎಲೈ, ಸುಮುಖಿಯೇ! ನಾನು ಹೆಚ್ಚಾಗಿ ಹಣವನ್ನು ಸಂಪಾದಿಸಿದೆನು. ನಮಗೆ ಮಕ್ಕಳಿಲ್ಲದುದರಿಂದ ಇನ್ನು ಮೇಲೆ ಮುಪ್ಪಿನ ಕಾಲದಲ್ಲಿ ನಮ್ಮನ್ನು ಕಾಪಾಡುವಂಥಾವರು ಒಬ್ಬರೂ ಇಲ್ಲ. ಆದುದರಿಂದ ನಮ್ಮ ಮನೆಯಲ್ಲಿರುವ ಹಣವೆಲ್ಲವನ್ನೂ ಸತ್ಪಾತ್ರಕ್ಕಾಗಿ ವಿನಿಯೋಗಿಸೋಣ ಎಂದು ನುಡಿದು ಹೆಂಡತಿಯನ್ನು ಒಡಂಬಡಿಸಿ ಆ ದಿನ ಮೊದಲು ಬಂದಂಥ ಬ್ರಹ್ಮಜ್ಞಾನಿಗಳಾದ ಬ್ರಾಹ್ಮಣರಿಗೆ ವಸ್ತ್ರಗಳನ್ನೂ ಹಣವನ್ನೂ ಅಕ್ಕಿ ಬೇಳೆ ಮೊದಲಾದ ಪದಾರ್ಥಗಳನ್ನೂ ಕೊಟ್ಟು ಅಧಿಕವಾದ ಭಕ್ತಿಯಿಂದ ಪೂಜಿಸಿ ಅವರಿಗೆ ಅಡ್ಡಬಿದ್ದು ಅವರ ಸಂಗಡ ಕೆಲವು ದೂರ ಹೋಗಿ ಒಳ್ಳೆಯ ಮಾತುಗಳನ್ನು ನುಡಿದು ಅವರನ್ನು ಕಳುಹಿಸುತ್ತಾ ನಿತ್ಯವೂ ಪ್ರಾತಃಕಾಲದಲ್ಲಿ ಎದ್ದು ಸ್ನಾನವನ್ನು ಮಾಡಿ ಮಡಿಯನ್ನು ಉಟ್ಟು ಪತ್ರಪುಷ್ಪಗಳನ್ನೂ ಹಣ್ಣುಕಾಯಿಗಳನ್ನೂ ತೆಗೆದುಕೊಂಡು ಶಿವಾಲಯಕ್ಕೆ ಹೋಗಿ ಪ್ರದಕ್ಷಿಣನಮಸ್ಕಾರಗಳನ್ನು ಮಾಡಿ ಸನ್ನಿಧಿಯಲ್ಲಿ ನಿಂತು—ಸ್ವಾಮಿ, ಪರಮೇಶ್ವರನೇ! ನನಗೆ ಮಗನನ್ನು ಕೊಡಬೇಕೆಂದು ಬೇಡಿಕೊಂಡು ಮನೆಗೆ ಬಂದು ಮಧ್ಯಾಹ್ನವಾಗುವ ಪರ್ಯಂತರವೂ ಪರಮೇಶ್ವರ ಸ್ವಾಮಿಯವರಿಗೆ ಸಮರ್ಪಿಸುವುದಕ್ಕೋಸ್ಕರ ಒಂದು ವಸ್ತ್ರವನ್ನು ನೇಯುತ್ತಿದ್ದು ಮಧ್ಯಾಹ್ನವಾದ ಬಳಿಕ ಬಂದ ಶಿವಭಕ್ತರಿಗೆ ಅನ್ನವನ್ನು ಕೊಟ್ಟು ಆ

ಬಳಿಕ ತಾನೂ ಊಟಮಾಡಿ ಶಿವಭಕ್ತರಿಗೆ ಬೇಕಾದ ವಸ್ತ್ರವನ್ನು ಕೊಟ್ಟು ಒಳ್ಳೆಯ ಮಾತುಗಳನ್ನು ಆಡಿ ಅವರನ್ನು ಕಳುಹಿಸಿ ಸಾಯಂಕಾಲದ ಪರ್ಯಂತರವೂ ಬ್ರಾಹ್ಮಣರಿಗೂ ಶಿವಭಕ್ತರಿಗೂ ಯಾಚಕರಿಗೂ ದರಿದ್ರರಿಗೂ ಹಣವನ್ನೂ ವಸ್ತ್ರವನ್ನೂ ಕೊಡುತ್ತಾ ಹಳೆಯವಾಗಿರುವ ಶಿವಾಲಯಗಳನ್ನು ಹೊಸದಾಗಿ ಕಟ್ಟಿಸುತ್ತಾ ತಿಂಗಳಿಗೊಂದು ಸಾರಿ ಒಂದು ವಸ್ತ್ರವನ್ನು ಪರಮೇಶ್ವರಸ್ವಾಮಿಯವರಿಗೆ ಸಮರ್ಪಿಸುತ್ತಾ ಈ ಪ್ರಕಾರದಿಂದ ಐದು ವರುಷ ಪರ್ಯಂತರವೂ ಪರಮೇಶ್ವರಸ್ವಾಮಿಯವರಿಗೆ ಕೈಂಕರ್ಯವನ್ನು ಮಾಡುತ್ತಿರಲು ಪರಮೇಶ್ವರಸ್ವಾಮಿಯವರು ಒಂದು ದಿವಸ ಆ ಪುಣ್ಯಶೀಲನಿಗೆ ಪುತ್ರನನ್ನು ಕೊಡಬೇಕೆಂದು ನಿಶ್ಚಯಿಸಿ ಸ್ತ್ರೀರೂಪವನ್ನು ಧರಿಸಿ ಬಿಳಿಯ ಸೀರೆಯನ್ನು ಉಟ್ಟು ಸಕಲವಾದ ಒಡವೆಗಳನ್ನು ಧರಿಸಿ ಚಂದ್ರಬಿಂಬದೋಪಾದಿಯಲ್ಲಿ ಬಿಳುಪಾದ ತಾವರೆಯ ಹೂವನ್ನು ಹಿಡಿದು ಪುಣ್ಯಶೀಲನ ಸ್ವಪ್ನದಲ್ಲಿ ಬಂದು ಆತನನ್ನು ಕುರಿತು—ಎಲ್ಲೈ, ಪುಣ್ಯಶೀಲನೇ! ಈ ತಾವರೆಯ ಹೂವನ್ನು ತೆಗೆದುಕೊಂಡರೆ ನಿನಗೆ ಶುಭವಾಗುತ್ತದೆ ಎಂದು ನುಡಿದು ಅದನ್ನು ಪುಣ್ಯಶೀಲನಿಗೆ ಕೊಟ್ಟು ಹಾಗೆಯೇ ಮಾಯವಾಗಿ ಹೋಗಲು ಪುಣ್ಯಶೀಲನು ಆ ಸ್ವಪ್ನದಲ್ಲೇ ತನ್ನ ಹೆಂಡತಿಯನ್ನು ಕರೆದು ತಾವರೆಯ ಹೂವನ್ನು ಆಕೆಯ ಕೈಗೆ ಕೊಟ್ಟನು.

ಅನಂತರದಲ್ಲಿ ಆ ಪುಣ್ಯಶೀಲನು ಬೆಳಗಾದ ಬಳಿಕ ಎದ್ದು ಸ್ವಪ್ನವನ್ನು ನೆನೆದು ಆಶ್ಚರ್ಯಪಡುತ್ತಾ ಸ್ನಾನವನ್ನು ಮಾಡಿ ಮಡಿಯನ್ನು ಉಟ್ಟು ವೇದಶಾಸ್ತ್ರಗಳನ್ನು ಓದಿದಂಥ ಬ್ರಾಹ್ಮಣರನ್ನು ಕರಿಸಿ ತನ್ನ ಸ್ವಪ್ನವೃತ್ತಾಂತವನ್ನು ಅವರಿಗೆ ತಿಳಿಸಿ—ಸ್ವಾಮಿ, ಮಹಾನುಭಾವರುಗಳಿರಾ! ಈ ಸ್ವಪ್ನಕ್ಕೆ ಫಲವೇನು? ಅದನ್ನು ನನಗೆ ತಿಳಿಸಬೇಕೆಂದು ಬೇಡಿಕೊಳ್ಳಲು ಆ ಬ್ರಾಹ್ಮಣರು ಆತನನ್ನು ನೋಡಿ—ಎಲ್ಲೈ, ಪುಣ್ಯಶೀಲನೇ! ಸ್ವಪ್ನದಲ್ಲಿ ಮುತ್ತೈದೆಯಾದ ಸ್ತ್ರೀಯನ್ನು ಕಂಡುದರಿಂದಲೂ ಬಳಿಕ ತಾವರೆಯ ಹೂವನ್ನು ತೆಗೆದುಕೊಂಡು ಹೆಂಡತಿಗೆ ಕೊಟ್ಟುದರಿಂದಲೂ ನಿನಗೆ ಶೀಘ್ರದಲ್ಲೇ ಪರಮೇಶ್ವರಸ್ವಾಮಿಯವರಿಗೆ ಸಮಾನನಾದ ಮಗನು ಹುಟ್ಟುತ್ತಾನೆ ಎಂದು ನುಡಿದರು. ಪುಣ್ಯಶೀಲನು ಅವರ ವಾಕ್ಯವನ್ನು ಕೇಳಿ ಸಂತೋಷಪಟ್ಟು ಅವರಿಗೆ ಬಹುಮಾನವನ್ನು ಮಾಡಿ ಕಳುಹಿಸಿ ಆ ಹೊತ್ತು ಮೊದಲ್ಗೊಂಡು ಮತ್ತೂ ಅಧಿಕವಾದ ಭಕ್ತಿಯಿಂದ ಪರಮೇಶ್ವರಸ್ವಾಮಿಯವರಿಗೆ ಕೈಂಕರ್ಯವನ್ನು ಮಾಡುತ್ತಿರಲು ಆತನ ಪತ್ನಿಯು ಪರಮೇಶ್ವರಸ್ವಾಮಿಯವರ ಅನುಗ್ರಹದಿಂದ ಗರ್ಭಿಣಿಯಾಗಿ ಹತ್ತನೆಯ ತಿಂಗಳಲ್ಲಿ ಒಬ್ಬ ಕುಮಾರನನ್ನು ಪ್ರಸವಿಸಿದಳು. ಆ ಮಗನು ದಿನದಿನಕ್ಕೂ ಪ್ರವರ್ಧಮಾನನಾಗುತ್ತಿರಲು ಪುಣ್ಯಶೀಲನು ಆ ಕುಮಾರನನ್ನು ನೋಡಿ ಸಂತೋಷಪಟ್ಟು ಒಳ್ಳೆಯ ಕೀರ್ತಿಯನ್ನು ಸಂಪಾದಿಸುವವನಾಗುವನೆಂದೂ ಅಮೃತೋಪಮಾನಗಳಾದ ಕಥೆಗಳುಳ್ಳವನಾಗುವನೆಂದೂ ತಿಳಿದು ಕೀರ್ತಿಕಥಾಮೃತನೆಂದು ನಾಮಕರಣವನ್ನು ಮಾಡಿ ಬಹುಮಾನದಿಂದ ಕಾಪಾಡುತ್ತಾ ಹದಿನಾರನೆಯ ವರುಷದಲ್ಲಿ ಮದುವೆಯನ್ನು ಮಾಡಿ ತಾನು ಪರಮೇಶ್ವರಸ್ವಾಮಿಯವರಿಗೆ ಕೈಂಕರ್ಯವನ್ನು ಮಾಡುತ್ತಿರಲು ಕೀರ್ತಿಕಥಾಮೃತನು ಸಕಲ ವಿದ್ಯೆಗಳನ್ನೂ ಕಲಿತು ತಮ್ಮ ಜಾತಿಯ ಧರ್ಮ

ವನ್ನು ಬಿಡದೆ ಒಳ್ಳೆಯವಸ್ತ್ರಗಳನ್ನು ನೇಯುತ್ತಾ ಪರಮೇಶ್ವರನಲ್ಲಿ ಭಕ್ತಿಯುಳ್ಳವನಾಗಿ ಶಿವಭಕ್ತರನ್ನು ಕಂಡರೆ ಭಕ್ತಿಯಿಂದ ಪೂಜಿಸುತ್ತಾ ನಿತ್ಯವೂ ಮೊಳದಗಲವುಳ್ಳಂಥಾದು ದಾಗಿ ಸಣ್ಣದೂ ಮೃದುವೂ ವಿಚಿತ್ರವೂ ಮನೋಹರವೂ ಆಗಿರುವ ಒಂದು ವಸ್ತ್ರವನ್ನು ಭಕ್ತಿಪೂರ್ವಕವಾಗಿ ನೆಯ್ದು ಅದನ್ನು ಪರಮೇಶ್ವರಸ್ವಾಮಿಯವರಿಗೆ ಅರ್ಪಿಸುತ್ತಾ ನಿತ್ಯವೂ ಬಂದಂಥ ಬ್ರಾಹ್ಮಣರಿಗೂ ಶಿವಭಕ್ತರಿಗೂ ಯಾಚಕರಿಗೂ ಬೇಕಾದ ವಸ್ತ್ರಗಳನ್ನೂ ಕಂಥೆಗಳನ್ನೂ ಕೌಪೀನಗಳನ್ನೂ ಭಕ್ತಿಯಿಂದ ಕೊಡುತ್ತಾ ಒಳ್ಳೆಯ ಮಾತುಗಳಿಂದ ಉಪಚರಿಸಿ ಕಳುಹಿಸುತ್ತಾ ಶಿವಭಕ್ತರಿಗೆ ಅನ್ನವನ್ನು ಕೊಟ್ಟು ಬಳಿಕ ತಾನು ಭೋಜನ ಮಾಡುವ ವ್ರತವನ್ನು ಹಿಡಿದು ಲೋಪವಿಲ್ಲದೆ ಅದನ್ನು ನಡಿಸುತ್ತಾ ಈ ಪ್ರಕಾರ ಸುಖದಲ್ಲಿ ಇದ್ದುಕೊಂಡು ಒಂದು ದಿವಸ ಪರಮಭಕ್ತಿಯಿಂದ ಪರಮೇಶ್ವರನಿಗೆ ಸಮರ್ಪಿಸುವುದಕ್ಕೋಸ್ಕರ ಒಂದು ವಸ್ತ್ರವನ್ನು ನೆಯ್ದು ಏಂಗಡವಾಗಿ ಒಂದು ತಾವಿನಲ್ಲಿ ಅದನ್ನು ಮಡಚಿ ಎಚ್ಚರವಾಗಿ ನೋಡುತ್ತಿರಲು ಪರಮೇಶ್ವರನು ಅವನ ಭಕ್ತಿಪರೀಕ್ಷೆಯನ್ನು ನೋಡುವುದಕ್ಕೋಸ್ಕರ ಬ್ರಾಹ್ಮಣರೂಪವನ್ನು ಧರಿಸಿ ಮುದುಕನಾಗಿ ಕೋಲನ್ನು ಊರಕೊಂಡು ತಲೆ ನಡುಗುತ್ತಾ ನೂರು ಮಂದಿ ಶಿವಭಕ್ತರನ್ನು ಸಂಗಡ ಕರೆದುಕೊಂಡು ಕೀರ್ತಿಕಥಾಮೃತನ ಮನೆಗೆ ಬಂದು ಆ ಶಿವಭಕ್ತರನ್ನು ಅವನ ಬಳಿಗೆ ಕಳುಹಿಸಿ ತಾನು ಒಂದು ತಾವಿನಲ್ಲಿ ಮರೆಯಾಗಿ ಔತುಕೊಂಡಿರಲು ಕೀರ್ತಿಕಥಾಮೃತನು ಬಂದಂಥಾ ಶಿವಭಕ್ತರನ್ನು ನೋಡಿ ಸಂತೋಷಪಟ್ಟು ಅವರೆಲ್ಲರಿಗೂ ಕ್ರಮವಾಗಿ ಒಂದೊಂದು ವಸ್ತ್ರವನ್ನು ಕೊಟ್ಟು ಕಳುಹಿಸಿದನು. ಕಡೆಗೆ ಪುಣ್ಯಶೀಲನ ಮನೆಯಲ್ಲಿದ್ದ ವಸ್ತ್ರಗಳೆಲ್ಲಾ ವೆಚ್ಚವಾಗಿ ಹೋಗಲು ಆ ಬಳಿಕ ಪರಮೇಶ್ವರನು ಮುದುಕನಾಗಿ ಕೌಪೀನವನ್ನು ಕಟ್ಟಿಕೊಂಡು ಆ ಭಕ್ತನು ಇರುವ ತಾವಿಗೆ ಬರಲು ಕೀರ್ತಿಕಥಾಮೃತನು ಬಂದ ಬ್ರಾಹ್ಮಣನನ್ನು ನೋಡಿ ಸಂತೋಷಪಟ್ಟು ಎದ್ದು ಎದುರಾಗಿ ಹೋಗಿ ಆತನ ಪಾದಗಳಿಗೆ ನಮಸ್ಕರಿಸಿ ಒಳಗೆ ಕರೆದುಕೊಂಡು ಬಂದು ಮಣೆಯನ್ನು ಕೊಟ್ಟು ಕುಳ್ಳಿರಿಸಿ ಕೈಕಟ್ಟಿ ನಿಂತುಕೊಂಡು—ಸ್ವಾಮಿ, ಮಹಾನುಭಾವರೆ! ನಿಮ್ಮ ದರ್ಶನದಿಂದ ನಾನು ಧನ್ಯನಾದೆನು. ಅಪ್ಪಣೆಯನ್ನು ಪಾಲಿಸಬಹುದೆಂದು ಬೇಡಿಕೊಂಡನು. ಆ ಬ್ರಾಹ್ಮಣನು—ಎಲೈ, ಭಕ್ತನೇ! ನಾನು ಮುದುಕನಾದುದರಿಂದ ದಾರಿಯಲ್ಲಿ ನಡೆದು ಬರುವಾಗ ನನ್ನ ವಸ್ತ್ರವು ಗಾಳಿಯಿಂದ ಹಾರಿ ಹೋಯಿತು. ಅದು ಸಿಕ್ಕಲಿಲ್ಲ. ನೀನು ಧರ್ಮಾತ್ಮನಾದುದರಿಂದ ನಿನ್ನ ಬಳಿಗೆ ಬಂದೆನು ಎನಲು ಕೀರ್ತಿಕಥಾಮೃತನು ಆ ವಾಕ್ಯವನ್ನು ಕೇಳಿ ಸಂತೋಷಪಟ್ಟು—ಮನೆಯಲ್ಲಿರುವ ವಸ್ತ್ರಗಳೆಲ್ಲಾ ವೆಚ್ಚವಾಗಿ ಹೋದುವು. ಪರಮೇಶ್ವರನಿಗೆ ಸಮರ್ಪಿಸುವುದಕ್ಕೋಸ್ಕರ ಮಾಸಲಾಗಿ ತೆಗೆದು ಇರಿಸಿದ್ದ ವಸ್ತ್ರವೊಂದೇ ಉಳಿದಿದೆ. ಪರಮೇಶ್ವರ ಸ್ವಾಮಿಯವರೇ ಈ ಬ್ರಾಹ್ಮಣ ರೂಪಿನಿಂದ ಬಂದಿದ್ದಾರೆ. ಈ ವಸ್ತ್ರವನ್ನು ಇವರಿಗೆ ಕೊಟ್ಟರೆ ಪರಮೇಶ್ವರ ಸ್ವಾಮಿಯವರು ಸಂತೋಷಪಡುವರು ಎಂದು ಮನಸ್ಸಿನಲ್ಲಿ ನಿಶ್ಚಯಿಸಿ ಅದನ್ನು ತೆಗೆದುಕೊಂಡು ಬ್ರಾಹ್ಮಣನ ಸಮೀಪಕ್ಕೆ ಬಂದು—ಸ್ವಾಮೀ, ಮಹಾನುಭಾವರೇ! ಈ ವಸ್ತ್ರವನ್ನು ಸ್ವಾಮಿಯವರು ಧರಿಸಿದರೆ ನಾನು ಮಾಡಿದ

ಸೇವೆಯು ಸಾರ್ಥಕವಾಗುತ್ತದೆ. ಆದುದರಿಂದ ಇದನ್ನು ತೆಗೆದುಕೊಳ್ಳಬೇಕೆಂದು ಬೇಡಿ ಕೊಂಡುದಕ್ಕೆ ಆ ಬ್ರಾಹ್ಮಣನು ಆ ವಸ್ತ್ರವನ್ನು ತೆಗೆದುಕೊಂಡು ಅಲ್ಲೇ ಅದೃಶ್ಯನಾದನು. ಕೀರ್ತಿಕಥಾಮೃತನು ಆ ಬ್ರಾಹ್ಮಣನನ್ನು ಕಾಣದೆ ಆಶ್ಚರ್ಯಪಡುತ್ತಿರುವಲ್ಲಿ ಪರಮೇಶ್ವರ ಸ್ವಾಮಿಯವರು ಆತನ ಭಕ್ತಿಗೆ ಮೆಚ್ಚಿ ವೃಷಭಾರೂಢರಾಗಿ ಪ್ರಥಮಗಣಗಳೊಡನೆ ಕೂಡಿ ಪ್ರತ್ಯಕ್ಷವಾಗಿ ಬಂದು ಆತನ ಮುಂದೆ ನಿಲ್ಲಲು ಕೀರ್ತಿಕಥಾಮೃತನು ಪರಮೇಶ್ವರಸ್ವಾಮಿಯವರನ್ನು ನೋಡಿ ಪರಮಭಕ್ತಿಯಿಂದ ಎದ್ದು ಸಾಷ್ಟಾಂಗವಾಗಿ ನಮಸ್ಕಾರನನ್ನು ಮಾಡಿ ಕೈಗಳನ್ನು ಕಟ್ಟಿಕೊಂಡು ನಿಂತು ಸ್ತುತಿಸಿದನು. ಆಗ ಪರಮೇಶ್ವರ ಸ್ವಾಮಿಯವರು ಆತನನ್ನು ಕರೆದು—ಎಲೈ, ಪರಮಭಕ್ತನೇ! ನಿನ್ನ ಭಕ್ತಿಯಿಂದ ನನಗೆ ಸಂತೋಷವಾಯಿತು. ನೀನು ಕೊಟ್ಟ ವಸ್ತ್ರವನ್ನು ಧರಿಸಿ ಇದ್ದೇನೆ. ನೋಡು! ಎಂದು ಹೇಳಿ ಅದನ್ನು ತೋರಿಸಿ—ನಿನಗೆ ಮುಕ್ತಿಯನ್ನು ಕೊಡುತ್ತೇನೆ. ಕೈಲಾಸಕ್ಕೆ ಬಾ ಎಂದು ನುಡಿದು ಪ್ರಥಮಗಣಗಳೊಡನೆ ಕೂಡಿ ಮಾಯವಾಗಿ ಹೋಗಲು ಆ ಕೀರ್ತಿಕಥಾಮೃತನು ಪರಮೇಶ್ವರಸ್ವಾಮಿಯವರ ಅನುಗ್ರಹದಿಂದ ಬಂದ ವಿಮಾನವನ್ನು ಏರಿ ಸಂತೋಷದಿಂದ ಕೈಲಾಸಕ್ಕೆ ಹೋದನು.

---

3. THE REWARD OF GIVING UP LIFE TO ATONE FOR OFFENCES AGAINST THE FOLLOWERS OF SHIVA

೩. ತಿಳಿಯದೆ ಶಿವಭಕ್ತರಿಗೆ ದ್ರೋಹಮಾಡಿ ತನ್ನ ಪ್ರಾಣವನ್ನು ಬಿಟ್ಟ ಧರ್ಮಕೇತನನು.

ಲೋಕದಲ್ಲಿ ಯಾವ ಪುರುಷನು ತಾನು ಶಿವಭಕ್ತನಾಗಿ ವಿಭೂತಿರುದ್ರಾಕ್ಷಿಗಳನ್ನು ಧರಿಸಿ ಬಂದಂಥ ಶಿವಭಕ್ತರಿಗೆ ಅಪರಾಧವನ್ನು ಮಾಡದೆ ಇದ್ದುಕೊಂಡು ಒಂದು ವೇಳೆ ಅರಿಯದೆ ಅಪರಾಧವನ್ನು ಮಾಡಿದರೆ ಪ್ರಾಣಗಳನ್ನು ಬಿಡುವನೋ ಆತನು ಪರಮೇಶ್ವರಸ್ವಾಮಿಯವರ ಅನುಗ್ರಹದಿಂದ ಮುಕ್ತನಾಗುವನು. ಈ ಅರ್ಥದಲ್ಲಿ ಒಂದು ಕಥೆಯುಂಟು. ಹೇಗಂದರೆ—

ಚೋಳದೇಶದಲ್ಲಿ ಆಮೋದವೆಂಬ ಪಟ್ಟಣವಿರುವುದು. ಅದರಲ್ಲಿ ಧರ್ಮವರ್ಧನನೆಂಬ ಅರಸು ಅತ್ಯೈಶ್ವರ್ಯಸಂಪನ್ನನಾಗಿ ಭೋಗಗಳಲ್ಲಿ ಇಂದ್ರನಿಗೂ ತ್ಯಾಗದಲ್ಲಿ ಬಲಿಚಕ್ರವರ್ತಿಗೂ ಯಾಗಗಳಲ್ಲಿ ಕಪಿಲಮುನೀಂದ್ರನಿಗೂ ಸಮಾನನಾಗಿ ಪರಾಕ್ರಮದಿಂದ ಸಕಲ ಶತ್ರುಗಳನ್ನೂ ಜಯಿಸಿ ಬಹು ಧನವನ್ನು ಸಂಪಾದಿಸಿ ಏಕವೀರನಾಗಿ ಸುಲೋಚನೆ ಎಂಬ ಹೆಸರುಳ್ಳ ಹೆಂಡತಿಯೊಡನೆ ಕೂಡಿ ಯಾಗವನ್ನು ಮಾಡಬೇಕೆಂದು ಆಲೋಚಿಸಿದವನಾಗಿ ಬ್ರಾಹ್ಮಣರನ್ನು ಕರತರಿಸಿ ವಿಶ್ವಜಿತ್ತೆಂಬ ಯಾಗವನ್ನು ಮಾಡಲು ಆ ಯಾಗದಿಂದ ಪರಮೇಶ್ವರಸ್ವಾಮಿಯವರು ಸಂತೋಷಪಟ್ಟು ಆತನ ಹೆಂಡತಿಯ ಸ್ವಪ್ನದಲ್ಲಿ ಬಂದು ಆಕೆಯನ್ನು ಕುರಿತು—ಎಲೈ,

ಚಿತ್ರಾಂಗಿಯೇ! ನಿನ್ನ ಗಂಡನು ಮಾಡಿದ ಯಜ್ಞದಿಂದ ನನಗೆ ಸಂತೋಷವಾಯಿತು. ನಾನು ಪರಮೇಶ್ವರನು. ನಿನಗೆ ಬೇಕಾದ ವರಗಳನ್ನು ಕೊಡುತ್ತೇನೆ. ಕೇಳೆಂದು ನುಡಿದು ಮಾಯವಾಗಿ ಹೋದನು. ಆ ಚಿತ್ರಾಂಗಿಯು ಮಾರನೆಯ ದಿವಸ ಪ್ರಾತಃಕಾಲದಲ್ಲಿ ಎದ್ದು ಸ್ವಪ್ನವನ್ನು ತನ್ನ ಗಂಡನಿಗೆ ತಿಳಿಸಿ—ಎಲೈ, ಮಹಾನುಭಾವರುಗಳಿರಾ! ನನ್ನ ಸ್ವಪ್ನವು ಅದ್ಭುತವಾಗಿ ಇದೆ. ಅದರಿಂದ ಪರಮೇಶ್ವರಸ್ವಾಮಿಯವರನ್ನು ಸ್ತುತಿಸಿ ಮಗನನ್ನು ಕೊಡಬೇಕೆಂದು ಬೇಡಿಕೊಳ್ಳಬೇಕೆಂದು ನುಡಿಯಲು ಅರಸು ಆ ಮಾತನ್ನು ಕೇಳಿ ಅವಳನ್ನು ಕುರಿತು—ಎಲೈ, ಶುಭಾಂಗಿಯೇ! ನನ್ನ ಮಾತನ್ನು ಕೇಳು. ನಿನಗೆ ಪರಮೇಶ್ವರಸ್ವಾಮಿಯವರಲ್ಲಿ ಭಕ್ತಿಯು ದೃಢವಾಗಿ ಇದೆ. ಆದುದರಿಂದ ನೀನೇ ಪರಮೇಶ್ವರಸ್ವಾಮಿಯವರನ್ನು ಪೂಜಿಸಿ ಮಗನನ್ನು ಕೊಡಬೇಕೆಂದು ಬೇಡಿಕೊಂಡರೆ ನಿನಗೆ ಕೊಡುತ್ತಾರೆ ಎಂದು ನುಡಿದು ಪುರೋಹಿತನನ್ನು ಕರಿಸಿ ಇವಳ ಕೈಯ್ಯಿಂದ ಶಿವಪೂಜೆಯನ್ನು ಮಾಡಿಸು ಎಂದು ಆ ಬ್ರಾಹ್ಮಣೋತ್ತಮನಿಗೆ ಕಟ್ಟು ಮಾಡಿದನು. ಆ ಬ್ರಾಹ್ಮಣನು—ಹಾಗೆಯೇ ಆಗಲಿ ಎಂದು ಒಪ್ಪಿ ಚಿತ್ರಾಂಗಿಯ ಸಮೀಪಕ್ಕೆ ಹೋಗಿ ಆಕೆಗೆ ಶಿವಪೂಜಾವಿಧಾನವನ್ನು ತಿಳಿಸಲು ಆ ರಾಜಭಾರ್ಯೆಯು ಕಲಶಸ್ಥಾಪನವನ್ನು ಮಾಡಿ ಪುರೋಹಿತನು ಹೇಳಿದ ರೀತಿಯಾಗಿ ಕಲಶದಲ್ಲಿ ಪರಮೇಶ್ವರ ಸ್ವಾಮಿಯವರನ್ನು ಆವಾಹನೆ ಮಾಡಿ ಶ್ರೀಗೋಸ್ಥಳನಿವಾಸರಾದ ಪರಮೇಶ್ವರಸ್ವಾಮಿಯವರನ್ನು ಪೂಜಿಸಿ ಪೂಜೆಯು ಮುಗಿದ ಬಳಿಕ ಪ್ರದಕ್ಷಿಣನಮಸ್ಕಾರಗಳನ್ನು ಮಾಡಿ ಮನಸ್ಸಿನಲ್ಲಿ ಪ್ರಾರ್ಥನೆಯನ್ನು ಮಾಡುತ್ತಾ ಈ ಪ್ರಕಾರದಿಂದ ಒಂದು ತಿಂಗಳ ಪರ್ಯಂತರವೂ ನಿಯಮದಿಂದ ಪೂಜಿಸುತ್ತಿರಲು ಒಂದು ದಿವಸ ಪರಮೇಶ್ವರಸ್ವಾಮಿಯವರು ಪ್ರಸನ್ನರಾಗಿ ರಾಜಪತ್ನಿಯನ್ನು ನೋಡಿ—ಎಲೈ, ಚಿತ್ರಾಂಗಿಯೇ! ನಿನಗೆ ಅಯೋನಿಜನಾದ ಕುಮಾರನು ಉದಯಿಸುತ್ತಾನೆ. ಎಂದು ನುಡಿದು ಅಂತರ್ಧಾನನಾದನು. ಆ ಸಮಯದಲ್ಲಿ ಪರಮೇಶ್ವರಸ್ವಾಮಿಯವರ ಮಹಿಮೆಯಿಂದ ಸರ್ವಲಕ್ಷಣಸಂಪನ್ನನೂ ಶೂರನೂ ದಿವ್ಯಸೌಂದರ್ಯವುಳ್ಳವನೂ ಆಗಿರುವ ಒಬ್ಬ ಬಾಲಕನು ತನ್ನ ತೇಜಸ್ಸಿನಿಂದ ದಿಕ್ಕುಗಳನ್ನು ಬೆಳಗಿಸುತ್ತಾ ಜೈತ್ರಮಾಸದ ಶುಕ್ಲಪಕ್ಷದಲ್ಲಿ ಹಸ್ತ ನಕ್ಷತ್ರಯುಕ್ತವಾದ ಶುಭಲಗ್ನದಲ್ಲಿ ಆ ಚಿನ್ನದ ಕಲಶದಿಂದ ಆವಿರ್ಭವಿಸಿ ಚಿತ್ರಾಂಗಿಯ ತೊಡೆಯ ಮೇಲೆ ಬಂದು ಕುಳಿತುಕೊಳ್ಳಲು ಆಕೆಯು ಐದು ವರುಷದ ವಯಸ್ಸುಳ್ಳಂಥ ಆ ಬಾಲಕನನ್ನು ನೋಡಿ ಆಶ್ಚರ್ಯಪಟ್ಟು ಅತನನ್ನೇ ತನ್ನ ಮಗನೆಂದು ಎಣಿಸಿ ಪರಮೇಶ್ವರಸ್ವಾಮಿಯವರನ್ನು ಕುಲದೇವರೆಂದು ಭಾವಿಸಿ ಭಕ್ತಿಯಿಂದ ಪೂಜಿಸಿ ಬಾಲಕನನ್ನು ಕರೆದುಕೊಂಡು ಗಂಡನ ಸಮೀಪಕ್ಕೆ ಬಂದು ತಾನು ಮಾಡಿದ ಕಾರ್ಯವನ್ನೆಲ್ಲಾ ಅತನಿಗೆ ತಿಳಿಸಿದಳು. ಅರಸು ಅದನ್ನು ಕೇಳಿ ಸಂತೋಷಪಟ್ಟು ಪುರೋಹಿತನನ್ನು ಕರತರಿಸಿ ಆ ಬಾಲಕನಿಗೆ ಜಾತಕವನ್ನು ಬರೆಯಿಸಿ ಧರ್ಮಕೇತನನೆಂದು ನಾಮಕರಣವನ್ನು ಮಾಡಿ ಸಕಲ ವಿದ್ಯಾಭ್ಯಾಸಗಳನ್ನೂ ಮಾಡಿಸಿ ಹದಿನಾರು ವರುಷ ಪರ್ಯಂತರವೂ ಭಕ್ತಿಯಿಂದ ಕಾಪಾಡಿ ಮದುವೆಯನ್ನು ಮಾಡಿ ತನ್ನ ರಾಜ್ಯವನ್ನು ಅತನ ವಶಕ್ಕೆ

ಒಪ್ಪಿಸಿ ಪತ್ನಿಯೊಡನೆ ವನಕ್ಕೆ ಹೋಗಿ ತಪಸ್ಸನ್ನು ಮಾಡುತ್ತಾ ಕೆಲವು ದಿವಸವಿದ್ದು ಆ ಬಳಿಕ ಶಿವಲೋಕವನ್ನೈದಿದನು.

ಆ ಮೇಲೆ ಧರ್ಮಕೇತನನು ತಾಯಿತಂದೆಗಳಿಗೆ ಪರಲೋಕಕ್ರಿಯೆಗಳನ್ನು ಸಾಂಗವಾಗಿ ಮಾಡಿ ರಾಜನೀತಿಯನ್ನು ಸ್ವಲ್ಪವೂ ಅತಿಕ್ರಮಿಸದೆ ಧರ್ಮದಿಂದ ರಾಜ್ಯ ಪಾಲನೆಯನ್ನು ಮಾಡುತ್ತಾ ಪರಮೇಶ್ವರನೇ ಪರಮತತ್ವವೆಂದು ತಿಳಿದು ಆತನನ್ನು ಭಕ್ತಿಯಿಂದ ಪೂಜಿಸುತ್ತಾ ಅಲ್ಲಿ ಇರುವ ಜನರಿಂದ ತನ್ನ ಜನನದ ವಿವರವನ್ನು ತಿಳಿದು ಪರಮೇಶ್ವರಸ್ವಾಮಿಯವರಲ್ಲಿ ಭಕ್ತಿಯುಳ್ಳವನಾಗಿ ತನ್ನ ತಾಯಿಗೆ ಕುಲದೇವತೆಯಾಗಿ ಗೋಸ್ಥಳದಲ್ಲಿ ವಾಸವನ್ನು ಮಾಡಿಕೊಂಡಿರುವಂಥ ಪರಮೇಶ್ವರಸ್ವಾಮಿಯವರನ್ನೇ ಪೂಜಿಸುತ್ತಾ ಶಿವಕೈಂಕರ್ಯವನ್ನೇ ಮಾಡುತ್ತಾ ಶಿವಭಕ್ತರನ್ನು ಪಾಲಿಸುತ್ತಾ ಅನೇಕ ಗಜಘಟಗಳನ್ನು ಸಂಪಾದಿಸಿ ಕುದುರೆಗಳನ್ನೂ ರಥಗಳನ್ನೂ ಅತ್ಯಂತವಾಗಿ ಸೇರಿಸಿ ಸಕಲ ಶತ್ರುಗಳನ್ನೂ ಜಯಿಸಿ ಧರ್ಮದಿಂದ ಪ್ರಜಾರಕ್ಷಣವಂ ಮಾಡುತ್ತಾ ಇರಲು ಅವನ ದೇಶದಲ್ಲಿ ಬ್ರಾಹ್ಮಣರು ವೇದಗಳನ್ನೋದಿ ವೇದಮಾರ್ಗವನ್ನು ಬಿಡದೆ ಆಚರಿಸುತ್ತಿದ್ದರು. ಭಟರೆಲ್ಲರೂ ಆಯುಧಗಳನ್ನು ಹಿಡಿದು ಸ್ವಾಮಿಕಾರ್ಯವೇ ಮುಖ್ಯವೆಂದು ನಡೆದುಕೊಳ್ಳುತ್ತಿದ್ದರು. ದೇವೇಂದ್ರನು ಕಾಲಕಾಲಕ್ಕೆ ತಕ್ಕಂತೆ ಮಳೆಯನ್ನು ಹೊಯಿಸುತ್ತಿದ್ದನು. ಭೂಮಿಯು ಸಮೃದ್ಧವಾದ ಪೈರುಗಳೊಡನೆ ಕೂಡಿ ಇತ್ತು. ಈ ಪ್ರಕಾರದಿಂದ ಅತನು ಸಮೃದ್ಧವಾದ ರಾಜ್ಯವನ್ನಾಳುತ್ತಿರುವಾಗ್ಗೆ ಒಂದು ದಿವಸ ಮಧ್ಯಾಹ್ನ ಕಾಲದಲ್ಲಿ ಒಬ್ಬ ಮಾವುತನು ಆನೆಯ ಮೇಲೆ ಏರಿಕೊಂಡು ಅದಕ್ಕೆ ನೀರನ್ನು ಕುಡಿಸುವುದಕ್ಕೋಸ್ಕರ ಕೆರೆಗೆ ಹೋಗುತ್ತಿರಲು ಶಿವದಾಸನೆಂಬ ಒಬ್ಬ ಬ್ರಾಹ್ಮಣನು ಸ್ನಾನಸಂಧ್ಯಾವಂದನೆಗಳನ್ನು ತೀರಿಸಿಕೊಂಡು ವಿಭೂತಿರುದ್ರಾಕ್ಷಿಗಳನ್ನು ಧರಿಸಿ ಶಿವಪೂಜೆಯನ್ನು ಮಾಡುವುದಕ್ಕೋಸ್ಕರ ಜೆಂಬಿನಲ್ಲಿ ಉದಕವನ್ನು ತುಂಬಿಕೊಂಡು ನಂದನವನದಲ್ಲಿ ಬಾಳೆಯ ಎಲೆಯೊಳಗೆ ಮಲ್ಲಿಗೆ ಮೊದಲಾದ ಪುಷ್ಪಗಳನ್ನು ಕೊಯಿದು ಪೊಟ್ಟಣವನ್ನು ಕಟ್ಟಿ ಕೈಯ್ಯಲ್ಲಿ ಹಿಡಿದುಕೊಂಡು ಮನೆಗೆ ಹೋಗುತ್ತಾ ಇದ್ದನು. ಆ ಮದದಾನೆಯು ಮಾವುತನಿಂದ ತಡೆಯಲ್ಪಟ್ಟುದಾದರೂ ಮದದಿಂದ ಆ ಬ್ರಾಹ್ಮಣನ ಸಮೀಪಕ್ಕೆ ಹೋಗಿ ಪೊಟ್ಟಣವನ್ನು ತನ್ನ ಸೊಂಡಲಿನಿಂದ ಎಳೆದುಕೊಂಡು ಅದರಲ್ಲಿದ್ದ ಪುಷ್ಪಗಳನ್ನೆಲ್ಲಾ ನೆಲದ ಮೇಲೆ ಜೆಲ್ಲಿಬಿಡಲು ಬ್ರಾಹ್ಮಣನು ಭಯಪಟ್ಟು—ಶಿವ ಶಿವಾ ! ಎಂದು ಕೂಗುತ್ತಾ ಓಡಿ ಹೋದನು. ಅರಸು ಉಪ್ಪರಿಗೆಯಲ್ಲಿ ಇದ್ದುಕೊಂಡು ಇದೆಲ್ಲವನ್ನೂ ನೋಡಿ—ಶಿವ ಶಿವಾ ! ಶಿವದ್ರೋಹ ಬಂದಿತಲ್ಲಾ ! ಇದಕ್ಕೆ ಪ್ರಾಯಶ್ಚಿತ್ತವೇನು ? ಎಂದು ಯೋಚಿಸಿ ಪ್ರಾಣತ್ಯಾಗವೇ ಪ್ರಾಯಶ್ಚಿತ್ತವೆಂದು ನಿಶ್ಚಯಿಸಿ ಕತ್ತಿಯಿಂದ ತಲೆಯನ್ನು ಕಡಿದುಕೊಳ್ಳುವುದಕ್ಕೆ ಪ್ರಯತ್ನ ಮಾಡಲು ಆ ಸಮಯದಲ್ಲಿ ಆಕಾಶದಿಂದ—ಎಲೈ, ಭೂಪಾಲಕನೇ ! ನೀನು ಸಾಹಸವನ್ನು ಮಾಡಬೇಡ. ಆ ಪುಷ್ಪಗಳೆಲ್ಲವೂ ಪರಮೇಶ್ವರಸ್ವಾಮಿಯವರ ಶಿರಸ್ಸಿನಲ್ಲಿ ಕಾಣಲ್ಪಡುತ್ತವೆ. ಹೋಗಿ ನೋಡು ಎಂಬ ಶಬ್ದವಾಗಲು ಅರಸನು ಆ ಅಶರೀರವಾಕ್ಯವನ್ನು ಕೇಳಿ ಸಂತೋಷಪಟ್ಟು ಶೀಘ್ರವಾಗಿ ಶಿವಾಲಯಕ್ಕೆ ಹೋಗಿ ಪರಮೇಶ್ವರ

ಸ್ವಾಮಿಯವರ ಶಿರಸ್ಸಿನಲ್ಲಿ ಆ ಪುಷ್ಪಗಳನ್ನು ನೋಡಿ ಆ ಬ್ರಾಹ್ಮಣನೇ ಪರಮೇಶ್ವರ ಸ್ವಾಮಿಯವರು ಎಂದು ಎಣಿಸಿ ಚಿನ್ನದಿಂದ ಸಾವಿರ ತಾವರೆಯ ಹೂವುಗಳನ್ನು ಮಾಡಿಸಿ ಆ ಬ್ರಾಹ್ಮಣನನ್ನು ಕರಿಸಿ ಆತನಿಗೆ ಕೊಟ್ಟು ಅದರ ಮೇಲೆ ಒಂದು ಗ್ರಾಮವನ್ನೂ ಒಂದು ಮನೆಯನ್ನೂ ಕೆಲವು ಗೋವುಗಳನ್ನೂ ಕೊಟ್ಟು ಆತನಿಗೆ ಶುಶ್ರೂಷೆಯನ್ನು ಮಾಡಿ ಕಳುಹಿಸಿ ಪರಮೇಶ್ವರಸ್ವಾಮಿಯವರಿಗೆ ಅಭಿಷೇಕಾರ್ಥವಾಗಿ ಒಂದು ಚಿನ್ನದ ಕಲಶವನ್ನೂ ಆ ಮದದಾನೆಯನ್ನೂ ಸಮರ್ಪಿಸಿ ಭಕ್ತಿಯುತನಾಗಿರುತ್ತಿರಲು ಅಲ್ಲಿ ಇರುವ ಜನರೆಲ್ಲರೂ ಈ ಭೂಪಾಲಕನು ನಂದೀಶ್ವರನಿಗೆ ಸಮಾನನೆಂದು ಎಣಿಸಿ ಪೂಜಿಸುತ್ತಿದ್ದರು.

ಆ ಅರಸು ಧರ್ಮಾತ್ಮಕನೂ ಮಹಾ ವೀರನೂ ದಯಾವಂತನೂ ಆಗಿದ್ದು ಧರ್ಮದಿಂದ ರಾಜ್ಯವನ್ನಾಳುತ್ತಾ ಬಹು ಕಾಲವಿದ್ದು ಒಂದು ದಿವಸ ತನ್ನ ಮಂತ್ರಿಯನ್ನು ಕರೆದು ಶತ್ರುಗಳನ್ನು ಜಯಿಸಿಕೊಂಡು ಬಾರೆಂದು ಹೇಳಿಕಳುಹಿಸಲು ಆ ಮಂತ್ರಿಯು ಸೇನೆಯೊಡನೆ ಕೂಡಿಹೋಗಿ ತನ್ನ ಪರಾಕ್ರಮದಿಂದ ಸಕಲ ಶತ್ರುಗಳನ್ನೂ ಜಯಿಸಿ ಶತ್ರುಭೂಪಾಲಕರ ಶಿರಸ್ಸುಗಳನ್ನು ಬಂಡಿಯ ಮೇಲೆ ಹೇರಿಸಿಕೊಂಡು ಬರುವಾಗ ಪರಮೇಶ್ವರಸ್ವಾಮಿಯವರು ಅರಸಿನ ಭಕ್ತಿಯನ್ನು ನೋಡುವುದಕ್ಕೋಸ್ಕರ ಆ ತಲೆಗಳೊಳಗೆ ಒಂದರಲ್ಲಿ ಜಡೆಗಳನ್ನು ಕಲ್ಪಿಸಿದರು. ಆ ಬಳಿಕ ಮಂತ್ರಿಯು ಅದನ್ನು ತಿಳಿಯದೆ ತಲೆಗಳೆಲ್ಲವನ್ನು ತೆಗೆದುಕೊಂಡು ಅರಸಿನ ಬಳಿಗೆ ಬರಲು ಅರಸು ಆ ತಲೆಗಳನ್ನು ನೋಡುವಾಗ ಜಡೆಗಳೊಡನೆ ಕೂಡಿದ ತಲೆಯನ್ನು ನೋಡಿ ಮಂತ್ರಿಯನ್ನು ಕುರಿತು—ಎಲೈ, ಮಂತ್ರಿಯೇ! ನೀನು ಇಂಥಾ ಪಾಪವನ್ನು ಮಾಡಬಹುದೇ? ಶಿವಭಕ್ತನ ತಲೆಯನ್ನು ತೆಗೆದುಕೊಂಡು ಬಂದಂಥ ನಿನ್ನ ಪಾಪಕ್ಕೆ ಪ್ರಾಯಶ್ಚಿತ್ತವೇ ಇಲ್ಲ. ನೀನು ಶಿವದ್ರೋಹವನ್ನು ಮಾಡಿದಂಥವನು. ಆದಕಾರಣ ನಾನು ನಿನ್ನ ಮುಖವನ್ನು ನೋಡುವುದಿಲ್ಲ ಎಂದು ಧಿಕ್ಕರಿಸಿ ಇಂಥ ಶಿವದ್ರೋಹಿಯ ಮುಖವನ್ನು ನೋಡಿದ ದೋಷಕ್ಕೆ ನನ್ನ ಶಿರಸ್ಸನ್ನು ತೆಗೆದು ಪರಮೇಶ್ವರಸ್ವಾಮಿಯವರಿಗೆ ಸಮರ್ಪಿಸಿದರೆ ಪ್ರಾಯಶ್ಚಿತ್ತವಾಗುತ್ತದೆ ಎಂದು ನಿರ್ಣಯಿಸಿ ತನ್ನಲ್ಲಿದ್ದ ಹಣವೆಲ್ಲವನ್ನೂ ಶಿವಭಕ್ತರಿಗೆ ದಾನ ಮಾಡಿ ರಾಜ್ಯಭಾರವನ್ನು ಮಗನಿಗೆ ವಹಿಸಿ ಅಗ್ನಿಪ್ರವೇಶದಿಂದ ಪ್ರಾಣತ್ಯಾಗವನ್ನು ಮಾಡಬೇಕೆಂದು ನಿಶ್ಚಯಿಸಿ ಅಗ್ನಿಯನ್ನು ಮಾಡಿಸಿ ಆ ಜಡೆಗಳೊಡನೆ ಕೂಡಿದ ತಲೆಯನ್ನು ತನ್ನ ಶಿರಸ್ಸಿನಲ್ಲಿ ಇರಿಸಿಕೊಂಡು ಆ ಅಗ್ನಿಹೋತ್ರದ ಸವಿಾಪಕ್ಕೆ ಹೋಗಿ ಮೂರು ಪ್ರದಕ್ಷಿಣಗಳನ್ನು ಮಾಡಿ ಅಗ್ನಿಯಲ್ಲಿ ಬೀಳುವಷ್ಟರೊಳಗೆ ಆ ಜಡೆಗಳೊಡನೆ ಕೂಡಿದ ಶಿರಸ್ಸು ಮಾಯವಾಗಿ ಹೋಗಲು ಅರಸು ಅದನ್ನು ನೋಡಿ ಆಶ್ಚರ್ಯಪಡುತ್ತಿದ್ದನು. ಆಗ ಪರಮೇಶ್ವರಸ್ವಾಮಿಯವರು ಆತನ ಭಕ್ತಿಗೆ ಮೆಚ್ಚಿ ವೃಷಭಾರೂಢರಾಗಿ ಆತನ ಎದುರಿಗೆ ಬಂದು ನಿಂತರು. ಅರಸು ಪರಮೇಶ್ವರಸ್ವಾಮಿಯವರನ್ನು ನೋಡಿ ಪ್ರದಕ್ಷಿಣನಮಸ್ಕಾರಗಳನ್ನು ಮಾಡಿ ಅಧಿಕವಾದ ಭಕ್ತಿಯಿಂದ ಸ್ತುತಿಸಲು ಪರಮೇಶ್ವರಸ್ವಾಮಿಯವರು ಸಂತೋಷಪಟ್ಟು ಧರ್ಮಕೇತನನಿಗೆ ಮುಕ್ತಿಯನ್ನು ಕೊಟ್ಟು ಕೈಲಾಸಕ್ಕೆ ಚಿತ್ತೈಸಿ

ದರು. ಆ ಬಳಿಕ ಧರ್ಮಕೇತನನು ಪರಮೇಶ್ವರಸ್ವಾಮಿಯವರ ಅನುಗ್ರಹದಿಂದ ಬಂದ ದಿವ್ಯ ವಿಮಾನವನ್ನು ಏರಿ ಕೈಲಾಸಕ್ಕೆ ಹೋದನು.

---

4. THE MERIT OF GIVNG FOOD.

೪. ಅನ್ನದಾನದ ಪುಣ್ಯ.

ಮಧ್ಯಾಹ್ನಕಾಲದಲ್ಲಿ ತನ್ನ ಮನೆಗೆ ಬಂದು ಅನ್ನವನ್ನು ಕೇಳಿದಂಥ ಶಿವಭಕ್ತರಿಗೆ ಅನ್ನವನ್ನಾದರೂ ಉದಕವನ್ನಾದರೂ ಹಣ್ಣುಗಳನ್ನಾದರೂ ಕೊಟ್ಟು ಸಂತೋಷಪಡಿಸುವಂಥವರು ಪರಮೇಶ್ವರಸ್ವಾಮಿಯ ಅನುಗ್ರಹದಿಂದ ಮುಕ್ತರಾಗುವರು. ಈ ಅರ್ಥದಲ್ಲಿ ಒಂದು ಕಥೆಯು ಇರುವುದು. ಹೇಗಂದರೆ—

ಪೂರ್ವದಲ್ಲಿ ಕಾವೇರೀತೀರದಲ್ಲಿ ಶಾರ್ಜರಿವನವೆಂಬ ಒಂದು ಪಟ್ಟಣವು ತಮ್ಮ ತಮ್ಮ ಧರ್ಮಗಳನ್ನು ಅತಿಕ್ರಮಿಸದೆ ವರ್ತಿಸುವ ಬಹುಮಂದಿ ಬ್ರಾಹ್ಮಣರಿಂದಲೂ ಕ್ಷತ್ರಿಯರಿಂದಲೂ ವೈಶ್ಯರಿಂದಲೂ ಶೂದ್ರರಿಂದಲೂ ತುಂಬಿ ಇರುವುದು. ಆ ಪಟ್ಟಣದಲ್ಲಿ ಧನವಂತರಾದ ವರ್ತಕರು ಕುಬೇರನಿಗೆ ಸಮಾನರಾಗಿ ಎಲ್ಲಿ ನೋಡಿದರೂ ನವರತ್ನಗಳನ್ನು ಬೀದಿಗಳಲ್ಲಿ ರಾಶಿಯಾಗಿ ಹಾಕಿಕೊಂಡು ವ್ಯಾಪಾರಗಳನ್ನು ಮಾಡುತ್ತಿರುವರು. ಇಂಥ ಪಟ್ಟಣದಲ್ಲಿ ಪ್ರಸಿದ್ಧನಾದ ಧನದತ್ತನೆಂಬ ಒಬ್ಬ ವೈಶ್ಯನು ಶೀಲವತಿ ಎಂಬ ಹೆಂಡತಿಯೊಡನೆ ಕೂಡಿ ಸಕಲ ಭೋಗಗಳನ್ನೂ ಅನುಭವಿಸುತ್ತಾ ಅಲ್ಲಿರುವ ವೈಶ್ಯರೊಳಗೆ ಅಗ್ರಗಣ್ಯನಾಗಿ ತನ್ನ ವ್ಯಾಪಾರಗಳಿಂದ ಹೆಚ್ಚಾಗಿ ಹಣವನ್ನು ಸಂಪಾದಿಸಿ ಬ್ರಾಹ್ಮಣರಲ್ಲಿ ಭಕ್ತಿಯುಳ್ಳವನಾಗಿ ನಿತ್ಯವೂ ಬ್ರಾಹ್ಮಣರನ್ನು ಪೂಜಿಸುತ್ತಾ ಸಕಲ ದಾನಗಳನ್ನು ಮಾಡುತ್ತಾ ಬ್ರಾಹ್ಮಣರಿಗೆ ಬೇಕಾದಷ್ಟು ಹಣವನ್ನು ಧರ್ಮಾರ್ಥವಾಗಿ ಕೊಟ್ಟು ಅವರಿಗೆ ವರ್ತಾಶನಗಳನ್ನು ಕೊಡುತ್ತಾ ವೇದವನ್ನು ಓದುವಂಥ ಬ್ರಾಹ್ಮಣರಿಗೆ ಅನ್ನವಸ್ತ್ರಗಳನ್ನು ನಡಿಸುತ್ತಾ ಪರಮೇಶ್ವರಸ್ವಾಮಿಯವರಲ್ಲಿ ಪರಮಭಕ್ತಿಯುಳ್ಳವನಾಗಿ ನಿತ್ಯವೂ ಶಿವಾರ್ಚನೆಗಳನ್ನು ಮಾಡುತ್ತಾ ವಿಭೂತಿರುದ್ರಾಕ್ಷಧಾರಕರಾಗಿ ಬಂದಂಥ ಶಿವಭಕ್ತರನ್ನು ಪೂಜಿಸುತ್ತಾ ಮಧ್ಯಾಹ್ನದಲ್ಲಿ ಬಂದು ಅನ್ನವನ್ನು ಬೇಡಿದಂಥವರಿಗೆ ಕೊಡುತ್ತಾ ಈ ಪ್ರಕಾರದಿಂದ ಬಹುಕಾಲವಿದ್ದು ತನಗೆ ಮಕ್ಕಳಿಲ್ಲದೇ ಇರುವುದರಿಂದ ಒಂದು ದಿವಸ ತನ್ನ ಮನಸ್ಸಿನಲ್ಲಿ ಹೀಗೆ ಯೋಚಿಸಿದನು—ನನಗೆ ಮಕ್ಕಳಿಲ್ಲದೇ ಇದ್ದರೆ ಕುಲವೆಲ್ಲವೂ ಅಪವಿತ್ರವಾಗಿರುವುದು ಎಂದು ತಿಳಿದು ಹತ್ತು ವರುಷ ಪರ್ಯಂತರವೂ ಸಕಲವಾದ ವ್ರತಗಳನ್ನು ಮಾಡಿ ಪರಮೇಶ್ವರಸ್ವಾಮಿಯವರನ್ನು ಸಂತೋಷಪಡಿಸಲು ಪರಮೇಶ್ವರಸ್ವಾಮಿಯವರು ಸಂತೋಷಪಟ್ಟು ಒಂದು ದಿವಸ ಧನದತ್ತನ ಸ್ವಪ್ನದಲ್ಲಿ ಬಂದು ಆತನನ್ನು ಕುರಿತು–ಎಲೈ, ಧನದತ್ತನೇ ! ನನ್ನ ಮಾತನ್ನು ಕೇಳು. ನಿನಗೆ ಒಬ್ಬ ಮಗಳನ್ನು ಕೊಡುತ್ತೇನೆ. ಪೂರ್ವತೀರದೇವಿಯ ಸಮಾಪದಲಿ ಪರಿಚಾರಿಕೆಯಾಗಿದ್ದಂಥ ಶಾರಿಕೆ ಎಂಬ ದಾಸಿಯು

ಭೂಲೋಕದಲ್ಲಿ ಹೆಣ್ಣಾಗಿ ಹುಟ್ಟಿ ಸಕಲಭೋಗಗಳನ್ನೂ ಅನುಭವಿಸಬೇಕೆಂದು ಯೋಚಿಸಿ ಪಾರ್ವತೀದೇವಿಯು ಅಪ್ಪಣೆಯಿಂದ ಭೂಲೋಕದಲ್ಲಿ ಸ್ತ್ರೀರೂಪವನ್ನು ಧರಿಸಿ ನನ್ನ ಆಲಯದಲ್ಲಿ ಇದ್ದಾಳೆ. ಅವಳನ್ನು ನೀನು ಕರೆದುಕೊಂಡು ಹೋಗು. ಆ ಹೆಣ್ಣು ನಿನ್ನ ಕುಲವೆಲ್ಲವನ್ನೂ ಪವಿತ್ರಮಾಡುತ್ತಾಳೆ. ನಿನ್ನ ವಂಶವನ್ನು ಪವಿತ್ರ ಮಾಡುವವಳಾದುದರಿಂದ ಈ ಹೆಣ್ಣು ಪೂತವತಿ ಎಂಬ ಹೆಸರಿನಿಂದ ಪ್ರಸಿದ್ಧಳಾಗು ತ್ತಾಳೆ ಎಂದು ನುಡಿದು ಮಾಯವಾಗಿ ಹೋದನು. ಧನದತ್ತನು ಮಾರನೆಯ ದಿವ ಸದಲ್ಲಿ ಎದ್ದು ಸ್ನಾನವನ್ನು ಮಾಡಿ ಮಡಿಯನ್ನು ಉಟ್ಟು ವಿಭೂತಿರುದ್ರಾಕ್ಷಿಗ ಳನ್ನು ಧರಿಸಿ ಸಕಲನಿಯಮಗಳನ್ನೂ ತೀರಿಸಿಕೊಂಡು ತನ್ನ ನೆಂಟರನ್ನು ಕರೆದು ಸ್ವಪ್ನವೃತ್ತಾಂತವನ್ನು ತಿಳಿಸಲು ಆ ನೆಂಟರೆಲ್ಲರೂ ಧನದತ್ತನನ್ನು ನೋಡಿ — ಎಲೈ, ಧನದತ್ತನೇ ! ನೀನು ಪೂರ್ವಜನ್ಮದಲ್ಲಿ ಹೆಣ್ಣಾಗಿ ಪುಣ್ಯವನ್ನು ಮಾಡಿದೆ. ನೀನು ಕೃತಾರ್ಥನು. ನಿನ್ನನ್ನು ನೋಡಿದುದರಿಂದ ನಾನೆಲ್ಲರೂ ಪುಣ್ಯವಂತರಾದೆವು. ನೀನೇ ಧನ್ಯನು. ಅಲ್ಲದಿದ್ದರೆ ಈ ಪ್ರಕಾರ ಪರಮೇಶ್ವರ ಸ್ವಾಮಿಯವರು ನಿನಗೆ ಮಗಳನ್ನು ಕೊಡುವರೇ ? ದೇವತಾರೂಪಿಣಿಯಾಗಿರುವಂಥ ಮಗಳನ್ನು ಪರಮೇಶ್ವರಸ್ವಾಮಿ ಯವರು ನಿನಗೆ ಕೊಟ್ಟುದರಿಂದ ನೀನು ಪುಣ್ಯವಂತನೇ ಸರಿ. ಆ ಮಗಳನ್ನು ನೀನು ಕರೆದುಕೊಂಡು ಬಾ ಎಂದು ನುಡಿದು ಧನದತ್ತನಿಗೆ ಬಹುಮಾನವನ್ನು ಮಾಡಿ ನೆಂಟ ರೆಲ್ಲರೂ ಸ್ವಸ್ಥಳಗಳಿಗೆ ಹೊರಟು ಹೋದರು. ಆ ಧನದತ್ತನು ಹೆಂಡತಿಯೊಡನೆ ಕೂಡಿ ಸಂತೋಷಪಡುತ್ತಾ ಪರಮೇಶ್ವರಸ್ವಾಮಿಯವರನ್ನು ಮನಸ್ಸಿನಲ್ಲಿ ಧ್ಯಾನ ಮಾಡಿ ಶಿವಾಲಯವನ್ನು ಹೊಕ್ಕು ಪ್ರದಕ್ಷಿಣನಮಸ್ಕಾರವನ್ನು ಮಾಡಿ ಸನ್ನಿಧಿ ಯಲ್ಲಿ ನಿಂತು ಕೈಮುಗಿದು ಪರಮೇಶ್ವರಸ್ವಾಮಿಯವರ ಅನುಗ್ರಹದಿಂದ ಒಂದು ವರುಷದ ಹೆಣ್ಣು ಮಗುವು ಅತನ ಮುಂದೆಸೆಯಲ್ಲಿ ಪ್ರಸನ್ನವಾಗಲು ಧನದತ್ತನು ಶಿವಪ್ರಸಾದದಿಂದ ಪ್ರಸನ್ನಳಾದಂಥ ಮಗಳನ್ನು ನೋಡಿ ಸಂತೋಷಪಟ್ಟು ಮನೆಗೆ ಕರೆದುಕೊಂಡು ಬಂದು ಅವಳ ರೂಪವನ್ನೂ ಸೌಂದರ್ಯವನ್ನೂ ಕಾಂತಿಯನ್ನೂ ನೋಡಿ ಆಶ್ಚರ್ಯಪಡುತ್ತಾ ತನ್ನ ಕುಲವೆಲ್ಲವೂ ಈ ದಿವಸ ಪವಿತ್ರವಾಯಿತು ಎಂದೆ ಣಿಸಿ ಶಿವನ ಅಪ್ಪಣೆಯ ಪ್ರಕಾರ ಆ ಶಿಶುವಿಗೆ ಪೂತವತಿ ಎಂಬ ನಾಮಕರಣವನ್ನು ಮಾಡಿ ಆ ಕಾಲದಲ್ಲಿ ಬ್ರಾಹ್ಮಣರಿಗೆ ಬಹು ಧನವನ್ನು ಕೊಟ್ಟು ನೆಂಟರಿಗೆ ಬಹು ಮಾನಗಳನ್ನು ಮಾಡಿ ಆ ಹೊತ್ತು ಮೊದಲ್ಗೊಂಡು ಪರಮೇಶ್ವರಸ್ವಾಮಿಯವರಿಗೆ ಹೆಚ್ಚಾಗಿ ಸೇವೆಯನ್ನು ಮಾಡುತ್ತಾ ಮಗಳಿಗೆ ನವರತ್ನಮಯಗಳಾದ ಒಡವೆಗಳ ನ್ನಿಟ್ಟು ಮೂರು ಲೋಕಗಳೂ ಮೋಹಿಸುವ ಹಾಗೆ ಮಾಡುತ್ತಾ ಬಹುಮಾನದಿಂದ ಕಾಪಾಡುತ್ತಾ ಮಗಳಿಗೆ ವಯಸ್ಸು ಅಭಿವೃದ್ಧಿಯಾಗುವುದಕ್ಕೋಸ್ಕರ ಶಿವಭಕ್ತ ರಾದ ಬ್ರಾಹ್ಮಣರ ಕೈಯ್ಯಿಂದ ವಿಭೂತಿಯನ್ನು ಕೊಡಿಸುತ್ತಾ ಈ ಪ್ರಕಾರ ಕಾಪಾ ಡುತ್ತಾ ಇದ್ದನು. ಆ ಮೇಲೆ ಪುತ್ರಿಯು ವಯಸ್ಕಳಾದುದನ್ನು ಕಂಡು ಇವಳಿಗೆ ವಿವಾಹವನ್ನು ಮಾಡಬೇಕೆಂದು ಯೋಚಿಸಿ ಒಂದು ದಿವಸದಲ್ಲಿ ಪತ್ರಿಕೆಯನ್ನು ಬರೆದು ಕಳುಹಿಸಿ ನಾಗಪಟ್ಟಣದಲ್ಲಿರುವಂಥ ಪರಮದತ್ತನೆಂಬ ಹೆಸರುಳ್ಳ ಸಕಲ

ಗುಣಸಂಪನ್ನನಾದ ವೈಶ್ಯಪುತ್ರನನ್ನು ಕರತರಿಸಿ ಆತನಿಗೆ ತನ್ನ ಮಗಳನ್ನು ಕೊಟ್ಟು ಸಂತೋಷದಿಂದ ಮದುವೆಯನ್ನು ಮಾಡಿ ತನ್ನ ಮನೆಯ ಸಮೀಪದಲ್ಲಿ ಒಂದು ಮನೆಯನ್ನು ಕಟ್ಟಿಸಿ ಅಲ್ಲಿ ಸರ್ವೋಪಕರಣಗಳನ್ನೂ ಸಿದ್ಧಮಾಡಿ ಪರಮದತ್ತನ ತಾಯಿತಂದೆಗಳ ಅಪ್ಪಣೆಯಿಂದ ಅಳಿಯನನ್ನೂ ಮಗಳನ್ನೂ ಅದರಲ್ಲಿ ಸೌಖ್ಯದಿಂದ ಇರಿಸಿ ಕಾಪಾಡುತ್ತಾ ಬರಲು ಆ ಪರಮದತ್ತನು ಧನದತ್ತನ ಮಗಳೊಡನೆ ಕೂಡಿ ಸಕಲಭೋಗಗಳನ್ನೂ ಅನುಭವಿಸುತ್ತಾ ಪರಮೇಶ್ವರಸ್ವಾಮಿಯವರಲ್ಲಿ ಭಕ್ತಿಯುಳ್ಳವನಾಗಿ ಬ್ರಹ್ಮಜ್ಞಾನಿಗಳಾದ ಬ್ರಾಹ್ಮಣರಿಗೆ ಸಕಲದಾನಗಳನ್ನು ಕೊಡುತ್ತಾ ಅವರಿಂದ ಆಶೀರ್ವಾದಗಳನ್ನು ಹೊಂದುತ್ತಾ ತನ್ನ ಮನೆಗೆ ಬಯಸಿಬಂದಂಥ ಶಿವಭಕ್ತರಿಗೆ ಅನ್ನವನ್ನು ಕೊಡುತ್ತಾ ನಿತ್ಯವೂ ಬಂದಂಥವರಿಗೆ ಹಾಲು ತುಪ್ಪ ಮೊಸರು ಮೇಲೋಗರಗಳನ್ನೂ ಐದು ಬಗೆ ಕಜ್ಜಾಯಗಳನ್ನೂ ಕೊಡುತ್ತಾ ಬಂದವರಿಗೆ ಇಲ್ಲವೆಂದು ನುಡಿಯದೆ ಅನ್ನವನ್ನು ಕೊಡೆಂದು ತನ್ನ ಹೆಂಡತಿಗೆ ಕಟ್ಟು ಮಾಡಲು ಬಾಲ್ಯ ಮೊದಲ್ಗೊಂಡು ಶಿವಭಕ್ತಿಯುಳ್ಳವಳಾಗಿದ್ದ ಅವಳು ಹಾಗೆಯೇ ಆಗಲೆಂದು ಒಪ್ಪಿ ಬಂದಂಥ ಶಿವಭಕ್ತರಿಗೆ ಅನ್ನವನ್ನು ಕೊಡುತ್ತಾ ಶರೀರವನ್ನು ಧರಿಸಿ ಬಂದಿರುವ ಶಿವಭಕ್ತಿಯೋ ಎಂಬ ಹಾಗೆ ಅಧಿಕವಾಗಿ ಪರಮೇಶ್ವರಸ್ವಾಮಿಯವರಲ್ಲಿ ಭಕ್ತಿಯನ್ನು ಮಾಡುತ್ತಾ ಒಂದು ದಿವಸವನ್ನೂ ವ್ಯರ್ಥಮಾಡದೆ ನಿರಂತರವೂ ಧರ್ಮಕಾರ್ಯವನ್ನು ಮಾಡುತ್ತಿದ್ದಳು.

ಒಂದು ದಿವಸದಲ್ಲಿ ಒಬ್ಬ ಶಿವಭಕ್ತನು ಒಂದೇ ತೊಟ್ಟಿನಲ್ಲಿರುವ ಎರಡು ಮಾವಿನ ಹಣ್ಣುಗಳನ್ನು ತಂದು ಪರಮದತ್ತನಿಗೆ ಕೊಟ್ಟನು. ಪರಮದತ್ತನು ಆ ಎರಡು ಹಣ್ಣುಗಳನ್ನೂ ಮನೆಗೆ ತಂದು ಹೆಂಡತಿಯನ್ನು ಕರೆದು ಅವಳ ಕೈಯಿಗೆ ಕೊಡಲು ಆ ಪೂತವತಿಯು ಆ ಹಣ್ಣುಗಳನ್ನು ತೆಗೆದುಕೊಂಡು ಎಚ್ಚರದಿಂದ ಬಚ್ಚಿಟ್ಟು ಶಿವಭಕ್ತರ ಪೂಜೆಯನ್ನು ಮಾಡುತ್ತಿದ್ದಳು. ಮಾರನೆಯ ದಿವಸ ಪ್ರಾತಃಕಾಲದಲ್ಲಿ ಪರಮೇಶ್ವರಸ್ವಾಮಿಯವರು ಪೂತವತಿಯ ಭಕ್ತಿಯನ್ನು ಲೋಕದಲ್ಲಿ ಪ್ರಕಟಮಾಡುವುದಕ್ಕೋಸ್ಕರ ಶಿವಭಕ್ತರ ವೇಷವನ್ನು ಧರಿಸಿ ಅಲ್ಲಿಗೆ ಬಂದು ಅನ್ನವನ್ನು ಕೇಳಲು ಪೂತವತಿಯು ಶೀಘ್ರವಾಗಿ ಎದ್ದು ಎದುರಾಗಿ ಹೋಗಿ ಕರೆದುಕೊಂಡು ಬಂದು ಪಾದಗಳಿಗೆ ಉದಕವನ್ನು ಕೊಟ್ಟು ಮಣೆಯ ಮೇಲೆ ಕುಳ್ಳಿರಿಸಿ ಆತನನ್ನು ಕುರಿತು—ಸ್ವಾಮೀ, ಮಹಾನುಭಾವರುಗಳಿರಾ! ಇ ನ್ನ ಮೇಲೆ ಅಡಿಗೆಯನ್ನು ಮಾಡಬೇಕು. ಆದುದರಿಂದ ಈಗ ಸ್ವಲ್ಪ ಫಲಾಹಾರವನ್ನು ಮಾಡಿಕೊಳ್ಳಬಹುದು ಎಂದು ನುಡಿದು ಒಂದು ಮಾವಿನ ಹಣ್ಣನ್ನು ತಂದು ಕೊಡಲು ಆ ಪರಮೇಶ್ವರಸ್ವಾಮಿಯವರು ಮಾವಿನ ಹಣ್ಣನ್ನು ಮೆದ್ದು ಹಾಲು ಕುಡಿದು ಸಂತೋಷಪಟ್ಟು ಹಾಗೆಯೇ ಮಾಯವಾಗಿ ಹೋದರು. ಪೂತವತಿಯು ಶಿವಭಕ್ತರು ಮಾಯವಾದುದನ್ನು ನೋಡಿ ಆಶ್ಚರ್ಯಪಟ್ಟು ತನ್ನ ಮನಸ್ಸಿನಲ್ಲಿ—ಸಿದ್ಧಪುರುಷರ ಮಹಿಮೆಯನ್ನು ತಿಳಿಯಕೂಡದು ಎಂದು ಎಣಿಸಿ ಸಂತೋಷದಿಂದ ಅನ್ನದಾನವನ್ನು ಮಾಡುತ್ತಿದ್ದಳು. ಪರಮದತ್ತನು ಶಿವಭಕ್ತರೆಲ್ಲರೂ ಊಟವನ್ನು ಮಾಡಿದ ಬಳಿಕ ಅವರನ್ನು ಕಳುಹಿಸಿ ಸಾಯಂಕಾಲದಲ್ಲಿ ತಾನು

ಊಟವನ್ನು ಮಾಡುವುದಕ್ಕೆ ಕುಳಿತುಕೊಳ್ಳಲು ಪೂತವತಿಯು ಗಂಡನಿಗೆ ಅನ್ನವನ್ನೂ ಕಜ್ಜಾಯಗಳನ್ನೂ ಹಾಲು ತುಪ್ಪ ಮೊಸರುಗಳನ್ನೂ ಬಡಿಸಿದಳು. ಪರಮದತ್ತನು ಅದೆಲ್ಲವನ್ನೂ ಊಟ ಮಾಡಿ ಹೆಂಡತಿಯನ್ನು ಕರೆದು ಮಾವಿನ ಹಣ್ಣನ್ನು ತಂದು ಬಡಿಸೆಂದು ನುಡಿಯಲು ಪೂತವತಿಯು ಒಂದು ಮಾವಿನ ಹಣ್ಣನ್ನು ತಂದು ಬಡಿಸಿದಳು ಪರಮದತ್ತನು ಅದನ್ನು ಮೆದ್ದು—ಇನ್ನೊಂದನ್ನೂ ತಂದು ಬಡಿಸೆಂದು ನುಡಿಯಲು ಪೂತವತಿಯು ಪರಮದತ್ತನ ಮಾತನ್ನು ಕೇಳಿ ತಾನು ಮಾಡಿದ ಕಾರ್ಯವನ್ನು ಗಂಡನಿಗೆ ತಿಳಿಸಲಾರದೆ ಮೌನದಿಂದ ಅಡಿಗೆಯ ಮನೆಗೆ ಹೋಗಿ ಪರಮೇಶ್ವರಸ್ವಾಮಿಯವರನ್ನು ಮನಸ್ಸಿನಲ್ಲಿ ಧ್ಯಾನಮಾಡಿ—ಸ್ವಾಮಿ, ಪರಮೇಶ್ವರನೇ! ಗಂಡನಿಗೆ ಏನು ಉತ್ತರವನ್ನು ಹೇಳಲಿ? ಸ್ವಾಮಿ! ನನ್ನನ್ನು ರಕ್ಷಿಸು ಎಂದು ಬೇಡಿಕೊಳ್ಳಲಾಗಿ ಪರಮೇಶ್ವರಸ್ವಾಮಿಯವರು ಸಂತೋಷಪಟ್ಟು ತನ್ನ ಮಾಯೆಯಿಂದ ಒಂದು ಮಾವಿನ ಹಣ್ಣನ್ನು ಕಲ್ಪಿಸಿ ಅವಳ ಮುಂದೆ ಬೀಳುವ ಹಾಗೆ ಮಾಡಿದನು. ಪೂತವತಿಯು ಆ ಮಾವಿನ ಹಣ್ಣನ್ನು ತೆಗೆದುಕೊಂಡು ಸಂತೋಷಪಟ್ಟು ಗಂಡನಿಗೆ ಕೊಡಲು ಪರಮದತ್ತನು ಆ ಹಣ್ಣನ್ನು ಮೆದ್ದು ಮೊದಲು ಮೆದ್ದ ಹಣ್ಣಿಗಿಂತ ಹೆಚ್ಚಾಗಿ ಸೀಯಾಗಿರುವುದರಿಂದ—ಈ ಹಣ್ಣು ಎಲ್ಲಿಂದ ಬಂದಿತು? ಎಂದು ಕೇಳಿದುದಕ್ಕೆ ಪೂತವತಿಯು ಗಂಡನ ಮಾತನ್ನು ಕೇಳಿ ಆತನನ್ನು ಕುರಿತು—ಶಿವಪ್ರಸಾದದಿಂದ ಬಂದಿತು ಎಂದು ಹೇಳಲು ಪರಮದತ್ತನು ಹೆಂಡತಿಯನ್ನು ನೋಡಿ—ಎಲೈ, ಪೂತವತಿಯೇ! ನಿನಗೆ ಪರಮೇಶ್ವರಸ್ವಾಮಿಯವರು ಹಣ್ಣನ್ನು ಕೊಟ್ಟುದು ನಿಜವಾದರೆ ಇನ್ನೊಂದು ಹಣ್ಣನ್ನು ತೆಗೆದುಕೊಂಡು ಬಾ ಎಂದು ಹೇಳಿದನು. ಪೂತವತಿಯು ಒಳಗೆ ಹೋಗಿ ಪರಮೇಶ್ವರಸ್ವಾಮಿಯವರನ್ನು ಧ್ಯಾನ ಮಾಡಲು ಪರಮೇಶ್ವರಸ್ವಾಮಿಯವರು ಪೂತವತಿಗೆ ಮತ್ತೊಂದು ಹಣ್ಣನ್ನು ಕೊಟ್ಟನು. ಪೂತವತಿಯು ಆ ಹಣ್ಣನ್ನು ತೆಗೆದುಕೊಂಡು ಸಂತೋಷದಿಂದ ಗಂಡನಿಗೆ ಕೊಡಲು ಪರಮದತ್ತನು ಹಣ್ಣನ್ನು ನೋಡಿ ಅಧಿಕವಾದ ಭಯದಿಂದ—ಈ ಪೂತವತಿಯು ಪರಮೇಶ್ವರ ಸ್ವಾಮಿಯವರನ್ನು ತನ್ನ ಅಧೀನವನ್ನು ಮಾಡಿಕೊಂಡಳು. ಇವಳು ಪಾರ್ವತೀದೇವಿಯೇ ಸರಿ. ಅಲ್ಲದಿದ್ದರೆ ಪರಮೇಶ್ವರ ಸ್ವಾಮಿಯವರು ಪೂತವತಿಗೆ ಹಣ್ಣನ್ನು ಕೊಡುವರೇ? ಆದುದರಿಂದ ನಾನು ಇವಳನ್ನು ಮುಟ್ಟುವುದು ಯುಕ್ತವಲ್ಲವು. ಹಾಗೆ ಇವಳನ್ನು ಬಿಟ್ಟು ಬಿಟ್ಟರೆ ಅಪರಾಧ ಬರುತ್ತದೆ. ಬಿಡದೇ ಇದ್ದರೆ ಶಿವದ್ರೋಹ ಬರುತ್ತದೆ. ಹೀಗಿರುವಲ್ಲಿ ಏನು ಮಾಡಲಿ? ಎಂದು ಮನಸ್ಸಿನಲ್ಲಿ ಯೋಚಿಸುತ್ತಾ ಒಂದು ಉಪಾಯವನ್ನು ನೆನೆದು ವ್ಯಾಪಾರವನ್ನು ಮಾಡುವುದಕ್ಕೋಸ್ಕರ ಹೋಗುತ್ತೇನೆ ಎಂದು ಕಪಟದಿಂದ ಹೇಳಿ ಮತ್ತೊಂದು ದೇಶಕ್ಕೆ ಹೋಗಿ ವಸ್ತ್ರಗಳನ್ನೂ ಹಸುಗಳನ್ನೂ ಬೇಕಾದ ವಸ್ತುಗಳೆಲ್ಲವನ್ನೂ ಹಡಗುಗಳಲ್ಲಿ ತುಂಬಿಕೊಂಡು ಸಮುದ್ರವನ್ನು ದಾಟಿ ದ್ವೀಪಾಂತರದಲ್ಲಿ ವ್ಯಾಪಾರವನ್ನು ಮಾಡಿ ಹೆಚ್ಚಾಗಿ ಹಣವನ್ನು ಸಂಪಾದಿಸಿಕೊಂಡು ಅಲ್ಲಿಂದ ಹೊರಟು ಮಧುರಾ ಪಟ್ಟಣವನ್ನು ಸೇರಿ ಅಲ್ಲಿನ ಅರಸನ ಅಪ್ಪಣೆಯಿಂದ ಆ ಊರಲ್ಲಿ ಮನೆಯನ್ನು ಕಟ್ಟಿಕೊಂಡು ತಮ್ಮ ಕುಲದಲ್ಲಿ ಹುಟ್ಟಿದಂಥ ಮತ್ತೊಂದು ಹೆಣ್ಣನ್ನು

ಮದುವೆ ಮಾಡಿಕೊಂಡು ಅವಳೊಡನೆ ಕೂಡಿ ಸಕಲ ಭೋಗಗಳನ್ನೂ ಅನುಭವಿಸುತ್ತಾ ಬಬ್ಬ ಮಗಳನ್ನು ಪಡೆದು ಮೊದಲು ತನ್ನ ಹೆಂಡತಿಯನ್ನು ಬಿಟ್ಟಂಥ ಅಪರಾಧವು ಪರಿಹಾರವಾಗಬೇಕೆಂದು ಆ ಮಗಳನ್ನು ಪೂತವತಿ ಎಂಬ ಹೆಸರಿಂದ ಕರೆಯುತ್ತಾ ಸುಖವಾಗಿ ಇದ್ದನು ಆ ಮೇಲೆ ಧನದತ್ತನು ಇವನನ್ನು ಹುಡುವುದಕ್ಕಾಗಿ ಬೇಹಿನವರನ್ನು ಕಳುಹಿಸಿ ಅವರ ಮುಖದಿಂದ ತನ್ನ ಅಳಿಯನು ಮಧುರಾ ಪಟ್ಟಣದಲ್ಲಿ ಇದ್ದಾನೆಂದು ತಿಳಿದು ತನ್ನ ಮಗಳನ್ನು ಅಳಿಯನ ಬಳಿಗೆ ಕಳುಹಿಸುವುದಕ್ಕಾಗಿ ಪ್ರಯಾಣವನ್ನು ಸಿದ್ಧಮಾಡಲು ಆ ಪೂತವತಿಯು ಧನದತ್ತನ ಮಾತನ್ನು ಕೇಳಿ ಬೇಕಾದ ಹಣವನ್ನೂ ಒಡವೆಗಳನ್ನೂ ವಸ್ತ್ರಗಳನ್ನೂ ತೆಗೆದುಕೊಂಡು ಪಲ್ಲಕ್ಕಿಯನ್ನು ಏರಿ ಆಪ್ತರಾದ ನೆಂಟರನ್ನು ತನ್ನ ಸಂಗಡ ಕರೆದುಕೊಂಡು ಪರಮದತ್ತನ ಬಳಿಗೆ ಹೋಗಲು ಆ ಪರಮದತ್ತನು ತನ್ನ ಬಳಿಗೆ ಬಂದ ಪೂತವತಿಯನ್ನು ನೋಡಿ ಎದುರಾಗಿ ಹೋಗಿ ತನ್ನ ಹೆಂಡತಿ ಮಗಳು ಸಹಿತವಾಗಿ ಅವಳಿಗೆ ನಮಸ್ಕಾರವನ್ನು ಮಾಡಿ ಹೇಳಿದುದೇನಂದರೆ—ಕೇಳು ಪೂತವತಿಯೇ ನೀನು ಪಾರ್ವತೀದೇವಿಗೆ ಸಮಾನಳಾಗಿ ಇರುವುದರಿಂದ ನಿನ್ನನ್ನು ತ್ಯಾಗಮಾಡಿ ಇಲ್ಲಿಗೆ ಬಂದೆನು ನಿನ್ನನ್ನು ಬಿಟ್ಟಂಥ ಅಪರಾಧವನ್ನು ಪರಿಹರಿಸಿಕೊಳ್ಳುವುದಕ್ಕೋಸ್ಕರ ನನ್ನ ಮಗಳನ್ನು ನಿನ್ನ ಹೆಸರಿನಿಂದ ಕರೆದಿದ್ದೇನೆ. ನಾನು ನಿನ್ನನ್ನು ದೇವತೆ ಎಂದು ಎಣಿಸಿ ನಿನ್ನ ಶರಣನ್ನು ಹೊಂದುತ್ತೇನೆ. ನೀನು ಇಲ್ಲಿಗೆ ಬಂದುದರಿಂದ ನಾನು ಇನ್ನೊಂದು ತಾವಿಗೆ ಹೋಗುತ್ತೇನೆ ಎಂದು ಹೇಳಿದನು. ಪೂತವತಿಯು ಗಂಡನ ಮಾತನ್ನು ಕೇಳಿ—ಸ್ವಾಮಿಾ ಮಹಾನುಭಾವರುಗಳಿರಾ! ಇಷ್ಟುಪರ್ಯಂತರವೂ ನಿಮಗೋಸ್ಕರ ಈ ಶರೀರವನ್ನು ಕಾಪಾಡಿಕೊಂಡಿದ್ದೆನು. ಇನ್ನು ಮೇಲೆ ನನ್ನನ್ನು ನೀವು ಬಿಟ್ಟರೆ ಈ ಶರೀರವನ್ನು ಬಿಟ್ಟು ಶಿವಲೋಕಕ್ಕೆ ಹೋಗುತ್ತೇನೆ ಎಂದು ನುಡಿದು ಅಲ್ಲಿರುವಂಥ ಬ್ರಾಹ್ಮಣರನ್ನು ಕರೆದು ತಾನು ತಂದ ಹಣವೆಲ್ಲವನ್ನೂ ಅವರಿಗೆ ದಾನವಾಗಿ ಕೊಟ್ಟು ಅವರ ಅಪ್ಪಣೆಯಿಂದ ಪರಮೇಶ್ವರಸ್ವಾಮಿಯವರನ್ನು ಧ್ಯಾನಿಸಲು ಪರಮೇಶ್ವರಸ್ವಾಮಿಯವರು ವೃಷಭಾರೂಢರಾಗಿ ಪಾರ್ವತಿಯೊಡನೆ ಕೂಡಿ ಪ್ರತ್ಯಕ್ಷರಾದರು. ಪೂತವತಿಯು ಪ್ರಸನ್ನರಾದಂಥ ಪರಮೇಶ್ವರಸ್ವಾಮಿಯವರಿಗೆ ಪ್ರದಕ್ಷಿಣನಮಸ್ಕಾರಗಳನ್ನು ಮಾಡಿ ಸ್ತುತಿಸಲಾಗಿ ಪರಮೇಶ್ವರಸ್ವಾಮಿಯವರು ಪೂತವತಿಯು ಮಾಡಿದ ಸ್ತೋತ್ರದಿಂದ ಸಂತೋಷಪಟ್ಟು ಅವಳನ್ನು ಕುರಿತು—ಎಲೈ, ಪೂತವತಿಯೇ! ನಿನಗೆ ಬೇಕಾದ ವರವನ್ನು ಬೇಡಿಕೋ ಎನಲು ಅವಳು—ಸ್ವಾಮಿಾ ಪರಮೇಶ್ವರಸ್ವಾಮಿಯೇ! ನಿಮ್ಮ ಆನಂದನಾಟ್ಯವನ್ನು ನೋಡುವುದಕ್ಕಾಗಿ ಕೈಲಾಸಕ್ಕೆ ಬರಬೇಕು ಎಂದು ಬೇಡಿಕೊಳ್ಳಲು ಪರಮೇಶ್ವರಸ್ವಾಮಿಯವರು—ಎಲೈ, ಪೂತವತಿಯೇ! ವಟಾರಣ್ಯದಲ್ಲಿ ನಾಟ್ಯವನ್ನು ತೋರಿಸುತ್ತೇನೆ. ಅಲ್ಲಿಗೆ ಬಾ ಎಂದು ನುಡಿದರು. ಪೂತವತಿಯು ಪರಮೇಶ್ವರಸ್ವಾಮಿಯವರನ್ನು ಕುರಿತು—ಸ್ವಾಮಿಾ, ಪರಮೇಶ್ವರ ಸ್ವಾಮಿಯವರೇ! ನಾನು ಮುದುಕಿಯಾದುದರಿಂದ ನಡೆಯಲಾರೆನು ಎಂದು ಆತನ ಪಾದಗಳನ್ನು ಹಿಡಿದುಕೊಳ್ಳಲು ಪರಮೇಶ್ವರಸ್ವಾಮಿಯವರು ವಿಘ್ನೇ

ಶ್ವರನನ್ನು ಕರೆದು—ಈ ಪೂತವತಿಯನ್ನು ವಟಾರಣ್ಯಕ್ಕೆ ಕರೆದುಕೊಂಡು ಹೋಗಿ ಬಿಡೆಂದು ಕಟ್ಟುಮಾಡಿದರು. ವಿಘ್ನೇಶ್ವರನು ಅವರ ಅಪ್ಪಣೆಯ ಪ್ರಕಾರ ಪೂತವತಿಯನ್ನು ತನ್ನ ಸೊಂಡಲಿನಿಂದ ಎತ್ತಿಕೊಂಡು ಒಂದೇ ಕ್ಷಣದಲ್ಲಿ ಕರೆದುಕೊಂಡು ಹೋಗಿ ವಟಾರಣ್ಯದಲ್ಲಿ ಬಿಡಲು ಪೂತವತಿಯು ವಟಾರಣ್ಯವನ್ನು ಸೇರಿ ಅಲ್ಲಿ ನವರತ್ನಮಯವಾದ ಸಭಾಮಂಟಪದಲ್ಲಿ ಬೆತ್ತವನ್ನು ಕೈಯಲ್ಲಿ ಹಿಡಿದು ತಿರುಗುತ್ತಿರುವ ನಂದೀಶ್ವರನನ್ನೂ ವೀಣಾಗಾನವನ್ನು ಮಾಡುತ್ತಿರುವ ಸರಸ್ವತೀ ದೇವಿಯನ್ನೂ ವೇಣುಗಾನವನ್ನು ಮಾಡುವ ಲಕ್ಷ್ಮೀದೇವಿಯನ್ನೂ ಮದ್ದಲೆಯನ್ನು ಬಾರಿಸುವಂಥ ವಿಷ್ಣುವನ್ನೂ ತಾಳವನ್ನು ಕುಟ್ಟುತ್ತಿರುವಂಥ ಬ್ರಹ್ಮದೇವನನ್ನೂ ದೀಪಗಳಾಗಿ ಬೆಳಗುತ್ತಿರುವಂಥ ನಾಲ್ಕು ವೇದಗಳನ್ನೂ ವಿನೋದಗಳನ್ನು ನೋಡುತ್ತಿರುವ ಸಕಲ ಮುನಿಗಳನ್ನೂ ಗಾಯತ್ರೀಮಯವಾದ ಮಂಟಪವನ್ನೂ ಮೇಲ್ಕಟ್ಟುಗಳಾಗಿ ಬೆಳಗುತ್ತಿರುವ ಸಕಲಸಿದ್ಧಾಂತಗಳನ್ನೂ ಪುಷ್ಪಗಳಾಗಿ ಒಪ್ಪುತ್ತಿರುವ ಸಪ್ತಕೋಟಿ ಮಹಾಮಂತ್ರಗಳನ್ನೂ ಪಂಚಾಕ್ಷರೀಮಯವಾದ ಭದ್ರಪೀಠವನ್ನೂ ಸಾಕ್ಷಿಗಳಾಗಿ ನೋಡುತ್ತಿರುವ ಚಂದ್ರಸೂರ್ಯರನ್ನೂ ಸರ್ವಸಾಕ್ಷಿಣಿಯಾದ ಪರದೇವತೆಯನ್ನೂ ಭದ್ರಪೀಠದಲ್ಲಿ ಕುಳಿತುಕೊಂಡು ಇರುವ ಪರಮೇಶ್ವರಸ್ವಾಮಿಯವರನ್ನೂ ನೋಡಿ ಬಹಳ ಆಶ್ಚರ್ಯಪಟ್ಟು ಆತನ ದಿವ್ಯಸುಂದರಮೂರ್ತಿಯನ್ನು ಮನಸ್ಸಿನಲ್ಲಿ ಧ್ಯಾನಿಸುತ್ತಿರಲು ಪರಮೇಶ್ವರಸ್ವಾಮಿಯವರು ಪೂತವತಿಗೆ ಆನಂದಮಯವಾದ ನಾಟ್ಯವನ್ನು ತೋರಿಸಿದರು.

ಪೂತವತಿಯು ಆ ನಾಟ್ಯವನ್ನು ನೋಡಿ ಸಂತೋಷಪಟ್ಟು ಪರಮೇಶ್ವರನನ್ನು ಸ್ತುತಿಸುತ್ತಿರಲು ಪರಮೇಶ್ವರನು ಪೂತವತಿಯನ್ನು ನೋಡಿ—ಎಲೈ, ಪೂತವತಿಯೇ! ನಿನ್ನ ಭಕ್ತಿಯಿಂದ ನನಗೆ ಸಂತೋಷವಾಯಿತು. ನಿನಗೆ ಮುಕ್ತಿಯನ್ನು ಕೊಡುತ್ತೇನೆ. ಕೈಲಾಸಕ್ಕೆ ಬಾ ಎಂದು ನುಡಿದು ಮಾಯವಾಗಿ ಹೋದನು. ಪೂತವತಿಯು ಪರಮೇಶ್ವರನಿಗೆ ಪ್ರದಕ್ಷಿಣನಮಸ್ಕಾರಗಳನ್ನು ಮಾಡಿ ಸ್ತುತಿಸಿ ಅಲ್ಲಿ ಇರುವ ಜನರೆಲ್ಲರೂ ಆಶ್ಚರ್ಯಪಡುವಹಾಗೆ ಯೋಗಮಾರ್ಗದಿಂದ ತನ್ನ ಶರೀರವನ್ನು ಬಿಟ್ಟು ಪರಮೇಶ್ವರಸ್ವಾಮಿಯವರ ಅಪ್ಪಣೆಯಿಂದ ಬಂದಂಥ ದಿವ್ಯ ವಿಮಾನವನ್ನು ಏರಿ ಕೈಲಾಸಪರ್ವತವನ್ನು ಸೇರಿ ದೂರದಲ್ಲಿ ವಿಮಾನದಿಂದ ಇಳಿದು ಕೈಲಾಸ ಪ್ರದೇಶವನ್ನು ಪಾದಗಳಿಂದ ಮುಟ್ಟಬಾರದೆಂಬ ಭಕ್ತಿಯಿಂದ ತಲೆ ಕೆಳಗಾಗಿ ಕೈಗಳನ್ನು ಊರಿಕೊಂಡು ಪರಮೇಶ್ವರಸ್ವಾಮಿಯವರ ಸನ್ನಿಧಿಗೆ ಹೋಗಲು ಅಮ್ಮನವರು ತಲೆಯಿಂದ ನಡೆದು ಬರುವಂಥ ಪೂತವತಿಯನ್ನು ಕಂಡು ಆಶ್ಚರ್ಯದಿಂದ ಪರಮೇಶ್ವರನನ್ನು ನೋಡಿ—ಸ್ವಾಮಿ, ದೇವ ದೇವನೇ ! ತಲೆಯಿಂದ ನಡೆದು ಒರುವಂಥ ಈ ಸ್ತ್ರೀ ಯಾರು ? ಇವಳ ರೂಪವು ವಿಕಾರವಾಗಿದೆ. ಇವಳ ಮಹಿಮೆಯಾದರೆ ಅಧಿಕವಾಗಿದೆ. ಅಧಿಕವಾದ ಭಕ್ತಿಯುಳ್ಳವಳಾಗಿ ಎಪ್ಪತ್ತುನಾಲ್ಕು ಸಾವಿರ ಯೋಜನಗಳಿಂದ ನಡೆದು ಬರುತ್ತಿದಾಳೆ. ಇವಳ ಸ್ವರೂಪವನ್ನು ತಿಳುಹಿಸಬೇಕೆನಲು ಪರಮೇಶ್ವರನು ಅಮ್ಮನವರನ್ನು ನೋಡಿ—ಎಲೈ, ಪಾರ್ವತಿಯೇ ! ಇವಳು ನಿನ್ನಪ್ಪಣೆಯನ್ನು

ಹೊಂದಿ ಭೂಲೋಕಕ್ಕೆ ಹೋಗಿದ್ದ ನಿನ್ನ ಪರಿಚಾರಿಣಿಯಾದ ಶಾರಿಕೆಯಲ್ಲವೇ? ಈಕೆಯು ಲ್ಲಿ ಪೂತವತಿ ಎಂಬ ಹೆಸರನ್ನು ಹೊಂದಿ ನನ್ನ ಭಕ್ತರನ್ನು ಕಾಪಾಡಿ ದವಳು. ಇವಳು ನನಗೆ ತಾಯಿಯಾಗಬೇಕು. ಇವಳನ್ನು ನಾನು ಪೂಜಿಸಬೇಕು ಎಂದು ನುಡಿದು ಪಾರ್ವತೀದೇವಿಯೊಡನೆ ಕೂಡಿ ಎದುರಾಗಿ ಹೋಗಿ ಇವಳನ್ನು ನೋಡಿ—ಎಲೈ, ಪೂತವತಿಯೇ! ಸುಖವಾಗಿ ಬಂದೆಯಾ? ಎಂದು ನುಡಿಯಲು ಆ ಪೂತವತಿಯು ಸಕಲವಾದ ಪ್ರಪಂಚಕ್ಕೂ ಒಡೆಯನಾದ ಪರಮೇಶ್ವರನಿಗೆ ನಮ ಸ್ಕಾರವನ್ನು ಮಾಡಿ ಆತನ ಅನುಗ್ರಹದಿಂದ ಅಪಾಕೃತವಾದ ದಿವ್ಯ ಶರೀರವನ್ನು ಧರಿ ಸಿ ಆ ಕೈಲಾಸ ಮಧ್ಯದಲ್ಲಿ ಅಮ್ಮನವರ ಸನ್ನಿಧಿಯಲ್ಲಿ ಆನಂದವನ್ನೆ ೃದಿ ಎಂದಿನಂತೆ ಸುಖವಾಗಿ ಇದ್ದಳು.

೩ ನೆಯ ಭಾಗ

ಮಹಾಭಾರತದಿಂದ ಸಂಗ್ರಹಿಸಿದ ಕಥೆಗಳು

1. THE CHURNING OF THE SEA OF MILK.

೧. ಸಮುದ್ರಮಥನವು.

ಪೂರ್ವದಲ್ಲಿ ಒಂದಾನೊಂದು ಸಮಯದಲ್ಲಿ ವಿಷ್ಣುಬ್ರಹ್ಮೇಂದ್ರಾದಿ ಸಮಸ್ತ ದೇವತೆಗಳೂ ಸೂರ್ಯನ ಕಾಂತಿಯನ್ನು ನಿರಾಕರಿಸುತ್ತಿರುವುದಾಗಿಯೂ ಚಿನ್ನದ ಶಿಖರಗಳಿಂದ ಕೂಡಿರುವುದಾಗಿಯೂ ಸರ್ವದೇವದಾನವಾದಿಗಳಿಂದ ಸೇವಿಸಲ್ಪಡುವು ದಾಗಿಯೂ ದುಷ್ಕರ್ಮಗಳನ್ನು ಮಾಡಿದ ಜನರಿಗೆ ದುರವಗಾಹವಾಗಿಯೂ ಅತಿ ಭಯಂಕರವಾದ ಸರ್ಪಸಮೂಹದಿಂದ ಯುಕ್ತವಾಗಿಯೂ ಸಕಲಮೂಲಿಕೆಗಳಿಗೆ ಆಶ್ರಯವಾಗಿಯೂ ನಿರ್ಮಲವಾದ ಜಲದಿಂದ ಕೂಡಿಹರಿಯುವ ಅನೇಕ ಗಿರಿನದಿಗ ಳಿಂದ ಕೂಡಿರುವುದಾಗಿಯೂ ಫಲಪುಷ್ಪಶೋಭಿತಗಳಾದ ಅನೇಕ ವನಗಳಿಂದ ಸಂಯು ಕ್ತವಾಗಿಯೂ ಗಿಣಿ ಗೊರವಂಕ ಪಾರಿವಾಳ ನವಿಲು ಇವೇ ಮೊದಲಾದ ನಾನಾ ಪಕ್ಷಿಗಳ ಧ್ವನಿಗಳಿಂದ ಅತಿರಮಣೀಯವಾಗಿಯೂ ಇರುವ ಮಹಾಮೇರು ಪರ್ವ ತಕ್ಕೆ ಹೋಗಿ ಅಲ್ಲಿ ಒಂದು ಓಲಗದ ಚಾವಡಿಯಲ್ಲಿ ಕುಳಿತುಕೊಂಡು ರಾಕ್ಷಸಬಾ ಧಾನಿವೃತ್ತಿಗಾಗಿ ಅಮೃತವನ್ನು ಹೊಂದುವುದಕ್ಕೋಸ್ಕರ ಆಲೋಚನೆಯನ್ನು ಮಾಡು ತ್ತಿರಲು ಆಗ ಭಕ್ತಜನ ಪರಿವಾಲಕನಾದ ಮಹಾವಿಷ್ಣುವು ಬ್ರಹ್ಮದೇವನನ್ನು ಕುರಿತು—ಎಲೈ, ಬ್ರಹ್ಮನೇ! ಈ ದೇವತೆಗಳೂ ರಾಕ್ಷಸರೂ ಕ್ಷೀರಸಮುದ್ರಕ್ಕೆ ಹೋಗಿ ಸಕಲ ಮೂಲಿಕೆಗಳನ್ನೂ ರತ್ನಗಳನ್ನೂ ಅದರೊಳಗೆ ಹಾಕಿ ಮಥಿಸಿದರೆ ಅದರಲ್ಲಿ ಅಮೃತವು ಹುಟ್ಟುತ್ತದೆ. ಆ ಅಮೃತಪಾನದಿಂದ ದೇವತೆಗಳು ಸುಖದಲ್ಲಿರು ವರು ಎಂದು ಆಜ್ಞಾಪಿಸಲು ಬ್ರಹ್ಮನು ದೇವಾಸುರರಿಗೆ ಹಾಗೆಯೇ ಕಟ್ಟು ಮಾಡಿದನು

ಆಗಲಾ ದೇವಾಸುರರು ಬಹ್ಮದೇವನ ಆಜ್ಞೆಯನ್ನು ಶಿರಸಾವಹಿಸಿ ಶರತ್ಕಾ ಲದ ಮೇಘಗಳೋಪಾದಿಯಲ್ಲಿ ಬಿಳುಪಾಗಿರುವ ಶಿಖರಗಳಿಂದ ಅಲಂಕೃತವಾದಂಥಾ ಗರುಡ ಗಂಧರ್ವ ಕಿನ್ನರ ಕಿಂಪುರುಷ ದೇವತಾ ಸಮೂಹದಿಂದ ಸೇವಿಸಲ್ಪಟ್ಟಂಥಾ ನಾನಾ ಪಕ್ಷಿಗಳ ಧ್ವನಿಗಳಿಂದ ಶೋಭಿಸುವಂಥಾ ಸಿಂಹ ಶಾರ್ದೂಲ ಶರಭ ಮೊದ

ಲಾದ ಮೃಗಗಳಿಂದ ಅತಿಭಯಂಕರವಾದಂಥಾ ಭೂಮಿಯೊಳಗೆ ಹನ್ನೊಂದು ಸಾವಿರ ಯೋಜನ ಇಳಿದಿರುವುದಾಗಿಯೂ ಭೂಮಿಯ ಮೇಲೆ ಹನ್ನೊಂದು ಸಾವಿರ ಯೋಜನ ಎತ್ತರವಾಗಿಯೂ ಇರುವಂಥಾ ಮಂದರಪರ್ವತದ ಸಮೀಪಕ್ಕೆ ಹೋಗಿ ಅದನ್ನು ಬಹು ಪ್ರಯತ್ನದಿಂದ ಎತ್ತಿದರೂ ಅಲ್ಲಾಡದೆ ಇದ್ದುದರಿಂದ ದೇವತೆಗಳು ತಿರಿಗಿ ಬ್ರಹ್ಮದೇವನೊಡನೆ ಕೂಡಿರುವ ವಿಷ್ಣುವಿನ ಬಳಿಗೆ ಬಂದು ನಮಸ್ಕರಿಸಿ ಮಂದರ ಪರ್ವತವನ್ನು ತರುವುದಕ್ಕೆ ಉಪಾಯವೇನೆಂದು ಕೇಳಿದರು. ಆಗ ಮಹಾ ವಿಷ್ಣುವು ಅನಂತನೆಂಬ ಮಹಾ ಸರ್ಪವನ್ನು ಕರೆದು—ನೀನು ಮಂದರಪರ್ವತವನ್ನು ಭೂಮಿಯಿಂದ ಕಿತ್ತುಬಿಡೆಂದು ಅಪ್ಪಣೆಯನ್ನು ಕೊಟ್ಟು ಕಳುಹಿಸಲು ಆತನು ಮಹಾ ಬಲಶಾಲಿಯಾದುದರಿಂದ ಆ ಪರ್ವತವನ್ನು ಕ್ಷಣಮಾತ್ರದಲ್ಲಿ ಕಿತ್ತುಬಿಟ್ಟನು. ಆಗ ದೇವಾಸುರರು ಅನಂತನೊಡನೆ ಕೂಡಿ ಆ ಮಂದರಪರ್ವತವನ್ನು ತಂದು ಸಮುದ್ರದಲ್ಲಿ ಹಾಕಿ ಆ ಸಮುದ್ರವನ್ನು ಕುರಿತು—ಎಲೈ, ಸಮುದ್ರನೇ! ನಾವು ನಿನ್ನ ಉದಕವನ್ನು ಮಥಿಸುತ್ತೇವೆ. ನೀನು ಸೈರಿಸಬೇಕೆಂದು ಪ್ರಾರ್ಥಿಸಲು ಆತನು—ಎಲೈ, ದೇವತೆಗಳಿರಾ! ಆ ಅಮೃತದಲ್ಲಿ ನನಗೊಂದು ಭಾಗವನ್ನು ಕೊಟ್ಟರೆ ಈ ಆಯಾಸವನ್ನು ಸಹಿಸಿಕೊಳ್ಳುತ್ತೇನೆಂದು ಹೇಳಿದನು. ಅದಕ್ಕೆ ದೇವಾಸುರರು ಒಪ್ಪಿಕೊಂಡು ಸಮುದ್ರ ಮಧ್ಯದಲ್ಲಿರುವ ಮಹಾ ಕೂರ್ಮನನ್ನು ಕಂಡು—ಎಲೈ, ಕೂರ್ಮನೇ! ಈ ಸಮುದ್ರಮಥನಕ್ಕೋಸ್ಕರ ಅದರ ಮಧ್ಯದಲ್ಲಿ ಹಾಕಲ್ಪಡುವ ಮಂದರಪರ್ವತಕ್ಕೆ ಕೆಳಗಡೆಯಲ್ಲಿ ಆಧಾರವಾಗಿ ನೀನಿರಬೇಕೆಂದು ಪ್ರಾರ್ಥಿಸಲು ಆ ಕೂರ್ಮನು—ಹಾಗೆಯೇ ಆಗಲೆಂದು ಸಮ್ಮತಿಸಿ ತನ್ನ ಬೆನ್ನಿನ ಚಿಪ್ಪಿನಿಂದ ಆ ಮಹಾ ಪರ್ವತವನ್ನು ಆನಲು ಇಂದ್ರನು ತನ್ನ ವಜ್ರಾಯುಧದಿಂದ ಆ ಪರ್ವತದ ಮೇಲ್ಭಾಗವನ್ನು ಅಮುಕಿಕೊಂಡಿರಲು ಮಂದರಪರ್ವತವೆಂಬ ಕಡೆಗೋಲಿಗೆ ವಾಸುಕಿಯನ್ನು ಹಗ್ಗವಾಗಿ ಮಾಡಿ ಸುತ್ತಿ ಸಮುದ್ರಮಥನಕ್ಕೆ ಯತ್ನವನ್ನು ಮಾಡಿದರು. ದೈತ್ಯದಾನವರು ವಾಸುಕಿಯ ಮುಖಭಾಗವನ್ನೂ ದೇವತೆಗಳು ಬಾಲದ ಕಡೆಯನ್ನೂ ಹಿಡಿದುಕೊಂಡು ಸರ್ಪಶ್ರೇಷ್ಠನಾದ ಅನಂತನೊಡನೆ ಕೂಡಿಕೊಂಡಿರುವ ನಾರಾಯಣನ ಸಂಗಡ ನಿಂತು ಕಡೆಯುತ್ತಿರುವಲ್ಲಿ ಆ ವಾಸುಕಿಯ ಮುಖದಿಂದ ಹೊರಡುವ ವಿಷಜ್ವಾಲೆಗಳು ಸಮುದ್ರದ ನೀರಿನೊಡನೆ ಕೂಡಲು ಆ ಮಥನ ಸಮಯದಲ್ಲಿ ಹಾಲಾಹಲವೆಂಬ ಮಹಾ ವಿಷವು ವಾಸುಕಿಯ ವಿಷಜ್ವಾಲೆಗಳೊಡನೆ ಕೂಡಿ ಆ ಸಮುದ್ರದಲ್ಲಿ ಹುಟ್ಟಿ ದೇವದಾನವರನ್ನು ಏಕಕಾಲದಲ್ಲಿ ಕೊಲ್ಲುವುದಕ್ಕೆ ಉಪಕ್ರಮಿಸಿತು. ಅವರು ಆ ವಿಷಜ್ವಾಲೆಯನ್ನು ಸಹಿಸಲಾರದೆ ಬಲುಬೇಗನೆ ಬ್ರಹ್ಮದೇವನ ಸನ್ನಿಧಿಗೆ ಹೋಗಿ—ಸ್ವಾಮಿ, ಬ್ರಹ್ಮನೇ! ನಾವು ಅಮೃತವನ್ನು ಬಯಸಿ ಸಮುದ್ರವನ್ನು ಮಥಿಸುವ ಸಮಯದಲ್ಲಿ ಕಾಲಾಗ್ನಿಯೋಪಾದಿಯಲ್ಲಿರುವ ಹಾಲಾಹಲವೆಂಬ ಭಯಂಕರವಾದ ವಿಷವು ಹುಟ್ಟಿ ಲೋಕಗಳೆಲ್ಲವನ್ನೂ ದಹಿಸಿಬಿಡುತ್ತಾ ಇದೆ. ಇದಕ್ಕೆ ಈಗಲೇ ಪ್ರತಿಕ್ರಿಯೆಯನ್ನು ಮಾಡಬೇಕೆಂದು ಪ್ರಾರ್ಥಿಸಲು ಆಗ ಬ್ರಹ್ಮದೇವನು ಶೂಲಪಾಣಿಯಾಗಿಯೂ ತ್ರಿನೇತ್ರಧರನಾಗಿಯೂ ಸಕಲಲೋಕಾಧಿಪತಿಯಾಗಿಯೂ

ಸಕಲದೇವತೆಗಳಲ್ಲಿ ಶ್ರೇಷ್ಠನಾಗಿಯೂ ಇರುವ ಪರಮೇಶ್ವರನನ್ನು ಮನಸ್ಸಿನಲ್ಲಿ ಧ್ಯಾನಿಸಿದನು. ಆಗ ಭಕ್ತಾನುಗ್ರಹವುಳ್ಳ ಪರಮೇಶ್ವರನು ಪ್ರತ್ಯಕ್ಷನಾಗಿ ನಿಂತು ಬ್ರಹ್ಮನ ಮುಖವಜನದಿಂದ ವಿಷ ಹುಟ್ಟಿದ ರೀತಿಯನ್ನು ತಿಳಿದು ಲೋಕಹಿತಾರ್ಥವಾಗಿ ಆ ವಿಷವನ್ನು ಪಾನಮಾಡಿ ಕಂಠದಲ್ಲಿ ನಿಲ್ಲಿಸಿಕೊಂಡು ಲೋಕದಲ್ಲಿ ವಿಷಕಂಠನೆಂಬ ಹೆಸರನ್ನು ತಾಳಿದನು. ಹೀಗೆ ಆ ಪರಮೇಶ್ವರನು ವಿಷಬಾಧೆಯನ್ನು ಪರಿಹರಿಸಲು ದೇವತೆಗಳೆಲ್ಲ ಸಂತುಷ್ಟರಾಗಿ ಯಥಾಪ್ರಕಾರ ಸಮುದ್ರವನ್ನು ಮಥಿಸುವುದಕ್ಕೆ ತೊಡಗಿದರು.

ಆ ಕಾಲದಲ್ಲಿ ಹೊಗೆಗಳಿಂದಲೂ ಉರಿಗಳಿಂದಲೂ ಕೂಡಿ ಮಹತ್ತಾದ ಗಾಳಿ ಬೀಸಿತು. ಆ ಹೊಗೆ ಉರಿಗಳು ಆಕಾಶದಲ್ಲಿ ಮಿಂಜುಗಳೊಡನೆ ಕೂಡಿದ ಮೇಘಗಳಾಗಿ ದೇವತೆಗಳ ಶ್ರಮವನ್ನು ಪರಿಹರಿಸುವ ಹಾಗೆ ಉದಕದ ಹನಿಗಳನ್ನು ವರ್ಷಿಸುತ್ತಿದ್ದುವು. ಮತ್ತು ಆ ಮಂದರ ಪರ್ವತದಲ್ಲಿರುವ ಮರಗಳು ತಮ್ಮ ಪುಷ್ಪವರ್ಷಗಳಿಂದ ಸಕಲದೇವತೆಗಳ ಶ್ರಮವನ್ನು ಪರಿಹರಿಸುತ್ತಿದ್ದುವು. ಈ ಪ್ರಕಾರ ದೇವಾಸುರ ಪ್ರಯಾಸದಿಂದ ಮಥಿಸುತ್ತಿರುವಲ್ಲಿ ಸಮುದ್ರಮಧ್ಯದಿಂದ ಮೇಘಧ್ವನಿಯ ಹಾಗೆ ದೊಡ್ಡ ಧ್ವನಿ ಹುಟ್ಟಿತು. ಮತ್ತು ಸಮುದ್ರವನ್ನು ಪರ್ವತದಿಂದ ಕಡೆಯುವ ಕಾರಣ ನಾನಾ ಜಲಜರಗಳೂ ಅನೇಕ ಪರ್ವತಗಳೂ ತುಮುರುತುಮುರಾಗಿ ಹೋದುವು. ಮತ್ತು ಆ ಪರ್ವತದಲ್ಲಿರುವ ಮರಗಳು ಆ ವೇಗಕ್ಕೆ ಒಂದಕ್ಕೊಂದು ಬಡಿದಾಡಿ ಮುರಿದು ಪಕ್ಷಿಸಮೇತಗಳಾಗಿ ಆ ಸಮುದ್ರದಲ್ಲಿ ಬಿದ್ದುವು. ಆ ಮರಗಳು ಒಂದಕ್ಕೊಂದು ಉಜ್ಜುವುದರಿಂದ ಎಲ್ಲಿ ನೋಡಿದರೂ ಕಾಡ್ಗಿಚ್ಚು ಹೆಚ್ಚಿ ಬಳ್ಳಿಮಿಂಜುಗಳು ಮೇಘಗಳನ್ನು ಆವರಿಸುವ ಹಾಗೆ ಆ ಮಹಾ ಪರ್ವತವನ್ನು ಸುತ್ತಿಕೊಂಡು ಅಲ್ಲಿರುವ ಸಿಂಹ ಶಾರ್ದೂಲಶರಭ ಗಂಡಭೇರುಂಡಾದಿ ಮೃಗಗಳನ್ನೂ ಪಕ್ಷಿಗಳನ್ನೂ ಸುಡುತ್ತಿರಲು ದೇವೇಂದ್ರನು ಅದನ್ನು ನೋಡಿ ಮೇಘವರ್ಷಗಳಿಂದ ಆ ಕಾಡ್ಗಿಚ್ಚನ್ನು ಕೆಡಿಸುತ್ತಿದ್ದನು. ಆ ಮಂದರಪರ್ವತದಲ್ಲಿರುವ ವೃಕ್ಷಗಳ ಬೇರುಗಳಿಂದ ನಾನಾಪ್ರಕಾರವಾದ ಮೂಲಿಕಾರಸಗಳು ನದಿಯ ರೂಪವಾಗಿ ಹರಿಯುತ್ತಿದ್ದುವು. ಆ ಅಮೃತ ಸಮಾನವಾದ ದಿವ್ಯರಸಸಂಪರ್ಕದಿಂದ ದೇವತೆಗಳಿಗೆ ಬಲ ಹೆಚ್ಚುತ್ತಾ ಬಂದಿತು. ಹೀಗೆ ಅತಿಪ್ರಯತ್ನದಿಂದ ದೇವದಾನವರು ಬಹುಕಾಲ ಮಥಿಸಿದರೂ ಅಮೃತವು ಹುಟ್ಟಲಿಲ್ಲ. ಆಗ ದೇವತೆಗಳು ಬ್ರಹ್ಮನ ಬಳಿಗೆ ಹೋಗಿ—ಎಲೈ, ಬ್ರಹ್ಮನೇ ! ನಾವು ಎಷ್ಟು ಕಷ್ಟಪಟ್ಟರೂ ಸಕಲಲೋಕರಕ್ಷಕನಾದ ಭಗವಂತನ ಅನುಗ್ರಹವಿಲ್ಲದೆ ಹೋದರೆ ಅಮೃತವನ್ನು ಹೊಂದುವುದಕ್ಕಾಗುವುದಿಲ್ಲ ಎಂದು ವಿನ್ನೈಸಿದರು. ಹಾಗೆಯೇ ಬ್ರಹ್ಮನು ಮಹಾವಿಷ್ಣುವಿಗೆ ಅರಿಕೆಮಾಡಿಕೊಳ್ಳಲು ಆ ವಿಷ್ಣುವು—ನಾನು ದೇವದಾನವರಿಗೆ ಹೆಚ್ಚಾದ ಬಲವನ್ನು ಕೊಡುತ್ತೇನೆ. ಅವರು ಯಥಾಪ್ರಕಾರ ಮಥಿಸಲಿ ಎಂದು ಅಪ್ಪಣೆಯನ್ನು ಕೊಟ್ಟನು. ಆಗ ವಿಷ್ಣುವಿನ ಅನುಗ್ರಹದಿಂದ ದೇವದಾನವರು ಮಹಾ ಬಲಶಾಲಿಗಳಾಗಿ ಎಲ್ಲರೂ ಒಟ್ಟಾಗಿ ಕೂಡಿ ಸಾವಿರ ವರುಷಗಳ ಪರ್ಯಂತರವೂ ಮಥಿಸುತ್ತಿರಲು ಸರ್ವಾಭರಣಭೂಷಿತೆಯಾಗಿ ಕಪ್ಪುವರ್ಣವುಳ್ಳ ಜ್ಯೇಷ್ಠಾದೇವಿಯು ಹುಟ್ಟಿದಳು. ಅನಂತರ ನೂರು ಸೂರ್ಯಕಾಂತಿ

ಗಳನ್ನು ಜಿಲ್ಲುತ್ತಾ ತಂಪಾದ ಕಿರುಣಗಳುಳ್ಳ ಚಂದ್ರನು ಹುಟ್ಟಿದನು. ಅನಂತರದಲ್ಲಿ ಧವಳಾಂಬವರವನ್ನು ಧರಿಸಿಕೊಂಡು ಮಹಾಲಕ್ಷ್ಮಿ ಹುಟ್ಟಿದಳು. ಆ ಮೇಲೆ ಮದ್ಯವೂ ಉಚ್ಚೈಶ್ರವಸ್ಸೆಂಬ ಕುದುರೆಯೂ ಕೌಸ್ತುಭವೆಂಬ ದಿವ್ಯ ರತ್ನವೂ ಹುಟ್ಟಿದುವು. ಆ ಕೌಸ್ತುಭಮಣಿಯು ನಾರಾಯಣನಿಗೆ ಪದಕವಾಯಿತು. ಆ ಮೇಲೆ ಪಾರಿಜಾತವೂ ಕಾಮಧೇನುವೂ ಕಲ್ಪವೃಕ್ಷಗಳೂ ನಾಲ್ಕು ಕೊಂಬುಗಳಿಂದ ಒಪ್ಪುತ್ತಿರುವ ಐರಾವತವೆಂಬ ಆನೆಯೂ ಜನಿಸಿದುವು. ಜ್ಯೇಷ್ಠಾದೇವಿಯೂ ಚಂದ್ರನೂ ಲಕ್ಷ್ಮಿಯೂ ಸುರೆಯೂ ಉಚ್ಚೈಶ್ರವಸ್ಸೆಂಬ ಕುದುರೆಯೂ ಕಾಮಧೇನುವೂ ಕಲ್ಪವೃಕ್ಷವೂ ಐರಾವತವೂ ಇವೆಲ್ಲಾ ದೇವತೆಗಳ ಪಾಲಿಗೆ ಬಂದುವು.

ಅನಂತರದಲ್ಲಿ ಧನ್ವಂತರಿ ಎಂಬ ಒಬ್ಬ ದಿವ್ಯ ಪುರುಷನು ಅಮೃತಪೂರಿತವಾದ ಬೆಳ್ಳಿಯ ಕಲಶವನ್ನು ಕೈಯಲ್ಲಿ ಪಿಡಿದುಕೊಂಡು ಸಮುದ್ರಮಧ್ಯದಿಂದ ಹೊರಟು ಬರಲು ಆತನನ್ನು ಕಂಡು ಆಶ್ಚರ್ಯಪಟ್ಟು ದಾನವರು ಆ ಅಮೃತಕ್ಕೋಸ್ಕರ ದೇವತೆಗಳೊಡನೆ ಕಲಹವಾಡಿ ಆ ಅಮೃತವನ್ನು ತಾವು ತೆಗೆದುಕೊಂಡು ಹೋದರು. ಆಗ ನಾರಾಯಣನು ಯೋಗಮಾಯಾಪ್ರಭಾವದಿಂದ ಮೋಹಿನಿಯ ರೂಪವನ್ನು ತಾಳಿ ಆ ದಾನವರಿಗೆ ಎದುರಾಗಿ ಬಂದು ನಿಲ್ಲಲು ಅವರು ಸುಂದರಾಕಾರಿಣಿಯಾದ ಈ ಮೋಹಿನಿಯನ್ನು ಕಂಡು ಮೂಢಹೃದಯರಾಗಿ ಆಕೆಯ ಮೇಲಣ ಮೋಹದಿಂದ ಪರವಶರಾಗಿ ಆ ಅಮೃತವನ್ನು ಮೋಹಿನಿಗೆ ಒಪ್ಪಿಸಿದರು. ಆ ಮೋಹಿನಿಯು ಅಮೃತಕಲಶವನ್ನು ಕೈಯಲ್ಲಿ ಧರಿಸಿ ದೇವತೆಗಳನ್ನೂ ದಾನವರನ್ನೂ ಪ್ರತ್ಯೇಕವಾಗಿ ತನ್ನ ಎರಡು ಪಾರ್ಶ್ವಗಳಲ್ಲಿಯೂ ಪಙ್ತಿಯಾಗಿ ಕುಳ್ಳಿರಿಸಿ ಪಕ್ಷಪಾತದಿಂದ ದೇವತೆಗಳಿಗೆ ಮೊದಲು ಅಮೃತವನ್ನು ಬಡಿಸಲು ಅದಕ್ಕೆ ದಾನವರು ಕೋಪಿಸಿಕೊಂಡು ನಾನಾಯುಧಗಳನ್ನು ತೆಗೆದುಕೊಂಡು ದಿವ್ಯವಾದ ಕವಚಗಳನ್ನು ತೊಟ್ಟು ಆ ದೇವತೆಗಳ ಕೂಡ ಯುದ್ಧವನ್ನು ಮಾಡಲಾರಂಭಿಸಿದರು. ಆಗ ನಾರಾಯಣನು ಇಂದ್ರನಿಗೆ ಸಹಾಯವಾಗಿ ತಾನೇ ಕಾಣಿಸಿಕೊಂಡು ಅದ್ಭುತಪರಾಕ್ರಮದಿಂದ ಯುದ್ಧದಲ್ಲಿ ದಾನವ ಶ್ರೇಷ್ಠರನ್ನು ಪೆಟ್ಟಿನಿಂದ ಓಡಿಸಿ ಆ ಅಮೃತವನ್ನು ದೇವತೆಗಳಿಗೆ ಹಂಚುತ್ತಿರಲು ಅವರು ಪಙ್ತಿಯಾಗಿ ಕುಳಿತುಕೊಂಡು ಅಮೃತವನ್ನು ಪಾನಮಾಡುತ್ತಿರುವ ಸಮಯದಲ್ಲಿ ಸೈಂಹಿಕೇಯನೆಂಬ ದಾನವನು ದೇವತಾವೇಷದಿಂದ ಕೂಡಿ ದೇವತೆಗಳೊಡನೆ ಕುಳಿತು ಅಮೃತಪಾನವನ್ನು ಮಾಡುವ ಸಮಯದಲ್ಲಿ ಆ ಅಮೃತವುಅವನ ಕೊರಳಿನಲ್ಲಿ ಇಳಿಯುವಷ್ಟರೊಳಗೆ ದೇವತೆಗಳಿಗೆ ಹಿತವನ್ನು ಬಯಸಿ ಚಂದ್ರಸೂರ್ಯರಿಬ್ಬರೂ ಸರ್ವಜ್ಞನಾದ ವಿಷ್ಣುವಿಗೆ ಸನ್ನೆಯಿಂದ ತಿಳಿಸಲು ಆಗ ಚಕ್ರಾಯುಧನು ತನ್ನ ಕೈಯಲ್ಲಿರುವ ಚಕ್ರದಿಂದ ಆ ದನುಜನ ಕೊರಳನ್ನು ಕತ್ತರಿಸಿದನು. ಅವನ ತಲೆಯು ಪರ್ವತಶಿಖರದೋಪಾದಿಯಲ್ಲಿ ಭೂಮಿಯಲ್ಲಿ ಬೀಳಲು ಅದರ ಭಾರದಿಂದ ಭೂಮಿಯು ಗಡಗಡನೆ ನಡುಗಿತು. ಆ ಮೇಲೆ ಅಮೃತಪಾನಪ್ರಭಾವದಿಂದ ಅವನ ರುಂಡವು ರಾಹುವೂ ಮುಂಡವು ಕೇತುವೂ ಆಗಿ ಪೂರ್ವದ್ವೇಷವನ್ನು ಮನಸ್ಸಿನಲ್ಲಿಟ್ಟುಕೊಂಡು ಚಂದ್ರಸೂರ್ಯರನ್ನು ಈಗಲೂ ಪರ್ವಕಾಲಗಳಲ್ಲಿ ಪೀಡಿಸುತ್ತಿರುವುದುಂಟು. ಈ ರೀತಿಯಲ್ಲಿ ದೇವತೆಗಳು ಮಹಾ

ವಿಷ್ಣುವಿನ ದಯೆಯಿಂದ ಅಮೃತಪಾನವನ್ನು ಮಾಡಿ ದಾನವರ ಮೇಲೆ ಜಯವನ್ನು ಹೊಂದಿ ಮಂದರ ಪರ್ವತವನ್ನು ಯಥಾಸ್ಥಾನದಲ್ಲಿ ನಿಲ್ಲಿಸಿ ಇಂದ್ರನ ಸನ್ನಿಧಿಗೆ ಬಂದು—ಈ ಅಮೃತವನ್ನೂ ನಮ್ಮನ್ನೂ ರಕ್ಷಿಸುವ ಭಾರ ನಿನ್ನದೇ ಎಂದು ಹೇಳಿ ಆ ಅಮೃತಕಲಶವನ್ನು ಇಂದ್ರನ ವಶಕ್ಕೆ ಒಪ್ಪಿಸಿಬಿಟ್ಟರು.

---

2. GARUDA CONQUERS THE GODS AND CARRIES OFF THE AMBROSIA.

೨. ಗರುಡನು ದೇವತೆಗಳನ್ನು ಜಯಿಸಿ ಅಮೃತಕಲಶವನ್ನು ತಂದದ್ದು.

ಒಂದಾನೊಂದು ದಿವಸ ಕದ್ರುದೇವಿಯು ಸಕಲಶುಭಲಕ್ಷಿತವಾಗಿ ಅತ್ಯಂತ ವೇಗಯುಕ್ತವಾಗಿರುವ ಉಚ್ಚೈಶ್ಶ್ರವಸ್ಸೆಂಬ ಒಂದು ಅಶ್ವರತ್ನವನ್ನು ಕಂಡು ವಿನತೆಯನ್ನು ಕರೆದು—ಈ ಕುದುರೆಯು ಯಾವ ವರ್ಣವುಳ್ಳದಾಗಿದೆ? ಬೇಗ ಹೇಳಿನಲು ಆ ವಿನತೆಯು—ಇದು ಬಿಳಿಯ ವರ್ಣವುಳ್ಳದಾಗಿ ತೋರುತ್ತದೆ. ಆದರೆ ನಿನಗೆ ಹೇಗೆ ತೋರುತ್ತದೆ? ಹೇಳೆಂದಳು. ಆ ಕದ್ರುದೇವಿಯು—ಈ ಕುದುರೆಯ ಬಾಲ ಕಪ್ಪಾಗಿ ತೋರುತ್ತಿದೆ ಈ ವಿಷಯದಲ್ಲಿ ಸೋತವರು ಗೆದ್ದವರಿಗೆ ದಾಸ್ಯವನ್ನು ಮಾಡತಕ್ಕವರು ಎಂದು ಜೂದವಿಸಿ ಇದನ್ನು ನಾಳೆ ಪರೀಕ್ಷೆ ಮಾಡೋಣ ಎಂದು ಹೇಳಿದಳು. ಆ ಮೇಲೆ ಅವರಿಬ್ಬರೂ ತಮ್ಮ ತಮ್ಮ ಮನೆಗಳಿಗೆ ಹೋದರು. ಆ ಕದ್ರುವು ತನ್ನ ಸಾವಿರ ಮಂದಿ ಮಕ್ಕಳಾದ ಸರ್ಪಗಳನ್ನು ಕರೆದು—ಎಲೈ, ಮಕ್ಕಳಿರಾ! ನಾನು ವಿನತೆಯ ಕೂಡ ಪಂತಕಟ್ಟಿಕೊಂಡು ಇದ್ದೇನೆ. ಆದುದರಿಂದ ನಾನು ಈ ಅರ್ಧದಲ್ಲಿ ಸೋಲದಂತೆ ನೀವೆಲ್ಲರೂ ಕಪ್ಪು ಕೂದಲುಗಳ ಹಾಗೆ ಆ ಕುದುರೆಯ ಬಾಲದಲ್ಲಿ ಕಾಣಿಸಬೇಕೆಂದು ಪ್ರಾರ್ಥಿಸಲು ಆ ಕುಮಾರಕರು ಆ ವಾಕ್ಯವನ್ನು ಕೇಳಿ ಪರಿಹಾಸ್ಯದಿಂದ ಆ ಅರ್ಥವನ್ನು ಅಂಗೀಕರಿಸದೆ ಹೋದರು ಆಗ ಕದ್ರುದೇವಿಯು ಕೋಪಿಸಿಕೊಂಡು—ನನ್ನ ಮಾತನ್ನು ಮೀರಿದುದರಿಂದ ಜನಮೇಜಯರಾಯನ ಸರ್ಪಯಾಗದಲ್ಲಿ ಈ ಸರ್ಪಕುಲವಷ್ಟನ್ನೂ ಅಗ್ನಿಯು ದಹಿಸಲಿ ಎಂದು ಶಪಿಸಲು ತಾಯಿಯ ಶಾಪಕ್ಕೆ ತಲ್ಲಣಿಸಿ ಕರ್ಕೋಟಕನೆಂಬ ಸರ್ಪನು ಭಕ್ತಿವಿಶ್ವಾಸಗಳಿಂದ ತಾಯಿಯ ಅಡಿಗಳಿಗೆ ಎರಗಿ—ಎಲೌ, ತಾಯೇ! ನೀನು ಹೇಳಿದ ಪ್ರಕಾರ ಕುದುರೆಯ ಬಾಲದಲ್ಲಿ ಸೇರಿ ಕಪ್ಪು ಕೂದಲುಗಳೋಪಾದಿಯಲ್ಲಿ ಕಾಣಿಸುತ್ತೇವೆ. ನಿನ್ನ ಮನಸ್ಸಿನಲ್ಲಿರುವ ಪರಿತಾಪವನ್ನು ಬಿಡೆಂದು ಪ್ರಾರ್ಥಿಸಿದನು. ಕದ್ರುದೇವಿಯು—ನೀವು ಹಾಗೆ ಮಾಡಿದರೆ ನಮಗೆ ಶ್ರೇಯಸ್ಸಾಗುತ್ತದೆ ಎಂದು ಹೇಳಿ ಸಂತೋಷಪಟ್ಟಳು.

ಆ ರಾತ್ರಿ ಕಳೆದು ಸೂರ್ಯೋದಯವಾಗಲು ಅಕ್ಕತಂಗಿಯರಾದ ಕದ್ರುವಿನತೆಯರು ಓರ್ವರೋರ್ವರಿಗೆ ಮತ್ಸರಿಸಿ ತಮ್ಮ ತಮ್ಮ ಪಂತವು ಗೆಲ್ಲಬೇಕೆಂದು ನಿಶ್ಚಯಿಸಿ ಉಚ್ಚೈಶ್ಶ್ರವಸ್ಸೆಂಬ ಕುದುರೆಯನ್ನು ಹುಡುಕುತ್ತಾ ಅದನ್ನು ಮೊದಲು ಕಂಡ ಸ್ಥಳಕ್ಕೆ ಬಂದು ಆ ಪ್ರದೇಶದಲ್ಲಿ ಮಹತ್ತಾದ ಜಲಗಳಿಗೆ ಆಧಾರವಾಗಿಯೂ ಹೆಚ್ಚಾ

ಗಿರುವ ಧ್ವನಿಯಿಂದ ಭಯಂಕರವಾಗಿಯೂ ತಿಮಿತಿಮಿಂಗಿಲಗಳು ಮೊದಲಾದ ಜಲ ಜಂತುಗಳಿಂದ ಕೂಡಿ ಅಖಿಲರತ್ನಗಳಿಗೂ ಆಕರವಾಗಿಯೂ ವರುಣನಿಗೆ ಅರಮನೆ ಯಾಗಿಯೂ ಸಕಲಲೋಕಭಯಂಕರವಾಗಿಯೂ ಅಮೃತಕ್ಕೆ ಉತ್ಪತ್ತಿಸ್ಥಾನವಾ ಗಿಯೂ ಅಪ್ರಮೇಯವಾಗಿಯೂ ಅನಂತವಾಗಿಯೂ ಗಾಳಿಯಿಂದ ತೆರಳಿ ಬರುವ ತೆರೆಗಳೆಂಬ ಹಸ್ತಗಳಿಂದ ನಟಿಸುವಂಥಾದುದಾಗಿಯೂ ಚಂದ್ರನ ವೃದ್ಧಿಕ್ಷಯಗಳಲ್ಲಿ ವೃದ್ಧಿಕ್ಷಯಗಳನ್ನು ಆಚರಿಸುತ್ತಾ ಆಕಾಶದೋಪಾದಿಯಲ್ಲಿ ಇರುವ ಸಮುದ್ರವನ್ನು ಕಂಡು ಅದನ್ನು ದಾಟಿ ಬಹು ದೂರವಾಗಿ ಹೋಗಿ ಒಂದು ಪ್ರದೇಶದಲ್ಲಿ ಆ ಕುದುರೆ ಯನ್ನು ಕಂಡರು. ಪರೀಕ್ಷಿಸುವಲ್ಲಿ ಅದರ ಬಾಲವು ಕಪ್ಪಾಗಿರುವುದರಿಂದ ಮನಸ್ಸಿನಲ್ಲಿ ಖೇದಯುಕ್ತಳಾಗಿರುವ ವಿನತೆಯನ್ನು ಕದ್ರುದೇವಿಯು ತನ್ನ ದಾಸತ್ವಕ್ಕೆ ನೇಮಿಸಲು ಅದಕ್ಕೆ ಮನಸ್ಸು ಒಡಂಬಡದೆ ವಿನತೆಯು ಹಂಬಲಿಸುತ್ತಾ ಇದ್ದಳು. ಹೀಗಿರುತ್ತಿರುವಲ್ಲಿ ಆಕೆಯ ಗರ್ಭದಿಂದ ಜನಿಸಿದ ಮೊಟ್ಟೆ ಒಡೆದು ಹುಟ್ಟಿದ ಗರುಡನು ಮಹಾ ಬಲ ಸಂಪನ್ನನಾಗಿಯೂ ಸೂರ್ಯನನ್ನು ಅತಿಕ್ರಮಿಸಿರುವ ತೇಜೋವಿಶೇಷದಿಂದ ಯುಕ್ತ ನಾಗಿಯೂ ಸ್ವೇಚ್ಛಾವಿಹಾರಿಯಾಗಿಯೂ ಸಮುದ್ರತೀರದಲ್ಲಿದ್ದ ತನ್ನ ತಾಯಿಯ ಬಳಿಗೆ ಬಂದನು. ಅದುಮೊದಲ್ಗೊಂಡು ವಿನತೆಯು ಕದ್ರುದೇವಿಯ ದಾಸ್ಯದಲ್ಲಿ ನಿಂತಳು.

ಹೀಗಿರುವಲ್ಲಿ ಒಂದಾನೊಂದು ದಿವಸ ಆ ಕದ್ರುವು ತನ್ನ ಕುಮಾರರ ಎದು ರಿಗೆ ಆ ವಿನತಾದೇವಿಯನ್ನು ಕರೆದು—ಎಲೈ! ಸಕಲ ಸರ್ಪಗಳಿಗೆ ಆಶ್ರಯವಾಗಿ ಸಮು ದ್ರಮಧ್ಯದಲ್ಲಿರುವ ರಮಣಕ ದ್ವೀಪಕ್ಕೆ ನನ್ನನ್ನೂ ನನ್ನ ಕುಮಾರರನ್ನೂ ಕರೆದು ಕೊಂಡು ಹೋಗೆನಲು ಹಾಗೆಯೇ ಆಗಲೆಂದು ವಿನತಾ ದೇವಿಯು ಆ ಕದ್ರುದೇವಿ ಯನ್ನು ತನ್ನ ಬೆನ್ನಿನ ಮೇಲೆ ಏರಿಸಿಕೊಂಡು ಆ ಸರ್ಪಗಳನ್ನು ಬೆನ್ನಿನ ಮೇಲೆ ಹೊತ್ತು ಕೊಂಡು ಬರುವಂತೆ ತನ್ನ ಮಗನಾದ ಗರುಡನಿಗೆ ಆಜ್ಞಾಪಿಸಿದಳು. ಅವನು ತನ್ನ ತಾಯಿಯ ಅಪ್ಪಣೆಯ ಪ್ರಕಾರ ಆ ಸರ್ಪಗಳನ್ನು ತನ್ನ ಬೆನ್ನಿನ ಮೇಲೆ ಏರಿಸಿಕೊಂಡು ಅಂತರಿಕ್ಷದಲ್ಲಿ ಸೂರ್ಯನಿಗೆದುರಾಗಿ ಹಾರಿದನು. ಅವರಿಬ್ಬರೂ ನಡೆಯುತ್ತಿರುವ ಸಮ ಯದಲ್ಲಿ ಸೂರ್ಯಕಿರಣಸಂತಾಪದಿಂದ ಸರ್ಪಗಳೆಲ್ಲಾ ಮೂರ್ಛಿತಗಳಾಗಿ ಕೆಳಗೆ ಬೀಳಲು ಆ ಕದ್ರುವು ದೇವೇಂದ್ರನನ್ನು ನಾನಾ ಪ್ರಕಾರವಾದ ಸ್ತೋತ್ರಗಳಿಂದ ಸ್ತುತಿಸಿದಳು. ಇಂದ್ರನು ಸಂತುಷ್ಟನಾಗಿ ಮೇಘಗಳನ್ನೆಲ್ಲಾ ಕರೆದು—ನೀವು ಆಕಾ ಶವನ್ನೆಲ್ಲಾ ಆವರಿಸಿಕೊಂಡು ವರ್ಷಿಸಿರಿ ಎಂದು ಕಟ್ಟು ಮಾಡಲು ಅವುಗಳು ಆದೇ ಪ್ರಕಾರ ವರ್ಷಿಸಿದವು. ಆ ವರ್ಷದಿಂದ ತಂಪು ಹೊಂದಿ ಸರ್ಪಗಳೆಲ್ಲಾ ಯಥಾಪ್ರಕಾರ ಮೂರ್ಛೆ ತಿಳಿದು ಎದ್ದು ತಿರಿಗಿ ಗರುಡನ ಮೇಲೆ ಏರಿಕೊಂಡು ಸಮುದ್ರಮಧ್ಯದಲ್ಲಿ ಹೋಗುತ್ತಾ ವಿಚಿತ್ರ ಫಲಪುಷ್ಪ ಭರಿತಗಳಾಗಿ ಪರಿಮಳಿಸುತ್ತಿರುವ ಹೊನ್ನೆ ಸುರ ಹೊನ್ನೆ ಮಾವು ಸೀಮಾವು ನಿಂಬೆ ದಾಳಿಂಬೆ ಹಲಸು ಕಿತ್ತಳೆ ನೇರಿಲು ಮೊದಲಾದ ವೃಕ್ಷಸಮೂಹದಿಂದಲೂ ಮಕರಂದಪಾನದಿಂದ ಮದಿಸಿ ಝೇಂಕರಿಸುತ್ತಲಿರುವ ತುಂಬಿಗಳ ತಂಡಗಳಿಂದಲೂ ಯುಕ್ತವಾದ ಉದ್ಯಾನವನಗಳಿಂದಲೂ ಕನಕರತ್ನ ಖಚಿ ತಗಳಾದ ಮನೆಗಳಿಂದಲೂ ಸ್ವಚ್ಛೋದಕಗಳುಳ್ಳ ಸರಸ್ಸುಗಳಿಂದಲೂ ಶೋಭಿಸುವ

ರಮಣಕದ್ವೀಪವನ್ನು ಕಂಡು ಅಲ್ಲಿ ಇಳಿದು ತಮ್ಮ ಮನಸ್ಸುಬಂದ ಕಡೆಯಲ್ಲೆಲ್ಲಾ ಸಂಚರಿಸಿ ತಿರಿಗಿ ಆ ಸರ್ಪಗಳು ಗರುಡನನ್ನು ಕುರಿತು—ಎಲೈ! ಈ ದ್ವೀಪವಲ್ಲದೆ ಇನ್ನೂ ಅನೇಕ ಸ್ಥಳಗಳಿವೆ. ಅವುಗಳನ್ನೆಲ್ಲಾ ತೋರಿಸು ಎಂದು ಹೇಳಿದವು. ಗರುಡನು ಆ ಮಾತನ್ನು ಕೇಳಿ ಚಿಂತಾಕ್ರಾಂತನಾಗಿ ತನ್ನ ತಾಯಿಯ ಮುಖವನ್ನು ನೋಡಿ—ಎಲೈ, ತಾಯೇ! ನಾವು ಇವರ ಇಚ್ಛಾನುಸಾರ ಸೇವೆಯನ್ನು ಮಾಡುವುದಕ್ಕೆ ಕಾರಣವೇನೆಂದು ಕೇಳಲು ಆ ವಿನತೆಯು ತನ್ನನ್ನು ಕದ್ರುವು ಮೋಸದಿಂದ ಜೂಜಿನಲ್ಲಿ ಗೆದ್ದುದನ್ನು ವಿಸ್ತಾರವಾಗಿ ತಿಳಿಸಿದಳು. ಅದನ್ನು ಕೇಳಿ ಗರುಡನು ಮನಸ್ಸಿನಲ್ಲಿ ಬಹಳ ವ್ಯಸನಪಟ್ಟು ಈ ದಾಸ್ಯವನ್ನು ತಪ್ಪಿಸುವದಕ್ಕೆ ಏನು ಉಪಾಯವನ್ನು ಮಾಡಬೇಕೆಂದು ಯೋಚಿಸುತ್ತಾ ಆ ಕದ್ರುವಿನ ಮಕ್ಕಳನ್ನು ಕರೆದು—ಎಲೈ, ಮಹಾತ್ಮರುಗಳಿರಾ! ನಮ್ಮ ದಾಸ್ಯವನ್ನು ತಪ್ಪಿಸಿಕೊಳ್ಳುವುದಕ್ಕಾಗಿ ನಾವು ನಿಮಗೆ ಏನು ತಂದು ಕೊಡಬೇಕು? ಯಾವ ವೃತ್ತಾಂತವನ್ನು ತಿಳಿದು ಹೇಳಬೇಕು? ಎಂಥಾ ಸಾಹಸ ಕಾರ್ಯವನ್ನು ಮಾಡಬೇಕು? ನಿಶ್ಚಯವಾಗಿ ಹೇಳಿರೆಂದು ಕೇಳಲು ಆ ಸರ್ಪಗಳೆಲ್ಲಾ ಒಟ್ಟುಕೂಡಿ ಆಲೋಚನೆಯನ್ನು ಮಾಡಿಕೊಂಡು—ಎಲೈ, ಗರುಡನೇ! ನೀನು ಅಮೃತವನ್ನು ತಂದು ಕೊಟ್ಟರೆ ನಿಮ್ಮ ದಾಸ್ಯವು ತಪ್ಪುವುದೆಂದು ಗರುಡನಿಗೆ ಹೇಳಿದುವು. ಅವನು ಅದಕ್ಕೆ ಒಪ್ಪಿಕೊಂಡು ತನ್ನ ತಾಯಿಯ ಸಂಗಡ—ಎಲೈ, ತಾಯೇ! ನಾನು ಅವಶ್ಯಕವಾಗಿ ಈ ಸರ್ಪಗಳಿಗೋಸ್ಕರ ಅಮೃತವನ್ನು ತರುವುದಕ್ಕೆ ಹೋಗುತ್ತಲಿದ್ದೇನೆ. ನನಗೆ ಆಹಾರವನ್ನು ಕೊಡೆಂದು ಕೇಳಲು ಆಕೆಯು—-ಎಲೈ, ಮಗನೇ! ಸಮುದ್ರ ಮಧ್ಯದ ಒಂದು ದ್ವೀಪದಲ್ಲಿ ಬೇಡರ ಹಳ್ಳಿಗಳುಂಟು. ಅಲ್ಲಿ ಬೇಡರು ಹೆಚ್ಚಾಗಿದ್ದಾರೆ. ನೀನಲ್ಲಿಗೆ ಹೋಗಿ ಅವರನ್ನು ಭಕ್ಷಿಸು. ಅಲ್ಲಿ ಬ್ರಾಹ್ಮಣರು ಇದ್ದರೆ ಅವರನ್ನು ಬಿಟ್ಟುಬಿಡು ಎಂದು ಹೇಳಿದಳು. ಗರುಡನು ಆ ವಾಕ್ಯವನ್ನು ಕೇಳಿ—ಅಷ್ಟು ಮಂದಿ ಬೇಡರಲ್ಲಿ ಬ್ರಾಹ್ಮಣನು ಸಿಕ್ಕುವುದನ್ನು ಹೇಗೆ ತಿಳಿಯಬೇಕೆಂದು ಕೇಳಲು ವಿನತೆಯು ಮಗನನ್ನು ನೋಡಿ—ನೀನು ಬೇಡರನ್ನು ಭಕ್ಷಿಸುವ ಸಮಯದಲ್ಲಿ ಕೊರಳಿಗೆ ಸಿಕ್ಕಿ ಅಗ್ನಿಯೋಪಾದಿಯಲ್ಲಿಯೂ ಗಾಣದೋಪಾದಿಯಲ್ಲಿಯೂ ಯಾವನು ಪೀಡಿಸುವನೋ ಅವನೇ ಬ್ರಾಹ್ಮಣನು ಎಂದು ಗುರುತನ್ನು ಹೇಳಿ ಆಶೀರ್ವಾದಗಳನ್ನು ಮಾಡಿ ಕಳುಹಿಸಿದಳು. ತಾಯಿಯ ಅಪ್ಪಣೆಯನ್ನು ಶಿರಸಾವಹಿಸಿ ಗರಿಗಳನ್ನು ಬಿಚ್ಚಿ ಗಗನಮಂಡಲಕ್ಕೆ ಹಾರಿ ಅಧಿಕವಾದ ಹಸಿವು ಬಾಯಾರಿಕೆಗಳಿಂದ ಕಂಗೆಟ್ಟು ಎರಡನೆಯ ಯಮನೋಪಾದಿಯಲ್ಲಿ ಆ ಬೇಡರ ಗ್ರಾಮವನ್ನು ಕುರಿತು ಹೋಗುವಾಗ ಗರಿಗಳ ಗಾಳಿಗೆ ಭೂಮಿಯಿಂದ ಎದ್ದ ದೂಳಿಯು ಆಕಾಶಮಂಡಲಕ್ಕೆ ಹಾರಲು ಸಮುದ್ರಮಧ್ಯದಲ್ಲಿ ಇರುವ ಜಲವೆಲ್ಲವೂ ಕಲಕಾಡಲು ಸಮೀಪದಲ್ಲಿರುವ ಪರ್ವತಗಳು ಅಲ್ಲಾಡಲು ಭಯಂಕರವಾದ ಬಾಹುಬಲದಿಂದ ವಿಜೃಂಭಿಸಿ ಬೇಡರನ್ನು ನುಂಗುವುದಕ್ಕೋಸ್ಕರ ಬಾಯಿ ತೆರೆದ ಕ್ಷಣದಲ್ಲೇ ಬಿರುಗಾಳಿಯಿಂದ ಕದಲುತ್ತಿರುವ ವನದಲ್ಲಿ ಧೂಳಿಗಳ ಪೆಟ್ಟಿನಿಂದ ಕಂಗೆಟ್ಟು ಬೆದರಿದ ಪಕ್ಷಿಸಮೂಹವು ಆಕಾಶವನ್ನು ಪ್ರವೇಶಿಸುವ ಹಾಗೆ ಆ ಬೇಡರು ಅತಿತ್ವರೆಯಿಂದ ಆ ಗರುಡನ ಬಾಯಿಯನ್ನು ಪ್ರವೇಶಿಸಲು

ಅವರೆಲ್ಲರನ್ನೂ ಭಕ್ಷಿಸಿದರೂ ತೃಪ್ತಿಯಾಗದೆ ಸಮುದ್ರದಲ್ಲಿರುವ ಬಹುವಿಧ ಮತ್ಸ್ಯ ಗಳನ್ನೂ ಭಕ್ಷಿಸಿದನು.

ಆ ಸಮಯದಲ್ಲಿ ಗರುಡನ ಕೊರಳಲ್ಲಿ ಅಗ್ನಿಜ್ವಾಲೆಯ ಹಾಗೆ ಉರಿಯುತ್ತಾ ನುಂಗಕೂಡದೆ ಇರುವ ಒಬ್ಬ ಬ್ರಾಹ್ಮಣನು ಅಡ್ಡಲಾಗಲು ಆ ಬ್ರಾಹ್ಮಣನನ್ನು ಬಿಟ್ಟುಬಿಟ್ಟು ಆ ಕಿರಾತರನ್ನೆಲ್ಲಾ ತಿಂದರೂ ಹಸಿವು ಅಡಗದೆ ಹೋದುದರಿಂದ ತನ್ನ ತಂದೆಯಾದ ಕಶ್ಯಪನೆಡೆಗೆ ಹೋಗಿ—ಅಪ್ಪಾ! ನಾನು ತಾಯಿಯ ದಾಸ್ಯವನ್ನು ಪರಿ ಹರಿಸುವ ನಿಮಿತ್ತವಾಗಿ ಅಮೃತವನ್ನು ತರುವುದಕ್ಕೆ ಹೋಗುತ್ತಿದ್ದೇನೆ. ನನಗೆ ಯಾವ ಆಹಾರದಿಂದಲೂ ತೃಪ್ತಿಯಾಗಲಿಲ್ಲ. ನೀನಿನ್ನೊಂದು ಆಹಾರವನ್ನು ನೇಮಿಸೆಂದು ಬೇಡಿಕೊಳ್ಳಲು ಅವನು—ಎಲೈ, ಮಗನೇ! ಪೂರ್ವದಲ್ಲಿ ಸುಪ್ರತೀಕ ವಿಭಾವಸು ಗಳೆಂಬ ಇಬ್ಬರು ಅಣ್ಣತಮ್ಮಂದಿರು ಪಿತ್ರಾರ್ಜಿತ ಧನವಿಭಾಗದ ನಿಮಿತ್ತದಿಂದ ಪರ ಸ್ಪರ ಶಾಪಗ್ರಸ್ತರಾಗಿ ಆನೆ ಆಮೆಗಳ ರೂಪದಿಂದ ಒಂದು ನದಿಯಲ್ಲಿ ಜಗಳವಾಡುತ್ತಿ ದ್ದಾರೆ. ನೀನು ಅವುಗಳನ್ನು ಭಕ್ಷಿಸು. ಹೋಗೆಂದು ಕಳುಹಿಸಲು ಗರುಡನು ಅದೇ ಮೇರೆಗೆ ಅವುಗಳನ್ನು ಭಕ್ಷಿಸಿ ತೃಪ್ತನಾಗಿ ಅಮೃತವನ್ನು ತರುವುದಕ್ಕೋಸ್ಕರ ಅಂತರಿ ಕ್ಷಕ್ಕೆ ಹಾರಿದನು. ಆಗ ದೇವಲೋಕದಲ್ಲಿ ಅಶುಭಸೂಚಕಗಳಾದ ಉತ್ಪಾತಗಳು ಉಂಟಾದವು. ಹೇಗಂದರೆ—ಇಂದ್ರನ ವಜ್ರಾಯುಧವು ತನ್ನಷ್ಟಕ್ಕೆ ತಾನೇ ಉರಿ ಯಿತು. ಹೊಗೆಯಿಂದಲೂ ಉರಿಯಿಂದಲೂ ಕೂಡಿ ಒಂದು ಕೊಳ್ಳಿಯು ಇಂದ್ರನ ಮುಂದೆ ಬಿದ್ದಿತು. ಆಕಾಶವು ಮೇಘಗಳಿಲ್ಲದೆ ಗುಡುಗಿತು. ಮೇಘಗಳೆಲ್ಲಾ ರಕ್ತ ವನ್ನು ವರ್ಷಿಸಿದವು. ದೇವತೆಗಳು ಧರಿಸಿರುವ ಪುಷ್ಪಮಾಲೆಗಳು ಬಾಡಿದವು. ದೇವತೆ ಗಳ ಮುಖಕಾಂತಿಯು ತಗ್ಗಿತು. ಇವೇ ಮೊದಲಾದ ಉತ್ಪಾತಗಳನ್ನು ಕಂಡು ದೇವೇಂದ್ರನು ಭಯಪಟ್ಟು ಬೃಹಸ್ಪತ್ಯಾಚಾರ್ಯನನ್ನು ಕರಿಸಿ—ಈ ಅಪಶಕುನವು ಯಾವ ನಿಮಿತ್ತದಿಂದ ಉಂಟಾಯಿತು? ಹೇಳಿರೆಂದು ಕೇಳಲು ಆ ಗುರುವು—ಎಲೈ, ಇಂದ್ರನೇ! ನೀನು ಪೂರ್ವದಲ್ಲಿ ವಾಲಖಿಲ್ಯರನ್ನು ಪರಿಹಾಸ್ಯ ಮಾಡಿದುದರಿಂದ ಅವರ ತಪಃಪ್ರಭಾವದಿಂದ ಹುಟ್ಟಿದ ಗರುಡನೆಂಬುವನು ಅಮೃತವನ್ನು ತೆಗೆದುಕೊಂಡು ಹೋಗುವುದಕ್ಕಾಗಿ ಬರುತ್ತಿದ್ದಾನೆ ಇದು ನಿಶ್ಚಯವೆಂದು ಹೇಳಿದನು. ಇಂದ್ರನು ಆ ಅಮೃತಕಲಶಕ್ಕೆ ಕಾವಲಾಗಿರುವ ದೇವತೆಗಳನ್ನು ಕರಿಸಿ ಈ ವೃತ್ತಾಂತವನ್ನು ತಿಳಿಸಿ—ನೀವು ನಿಮ್ಮ ಆಯುಧಗಳನ್ನು ಹಿಡಿದು ಮೋಸಬಾರದ ರೀತಿಗೆ ಸನ್ನದ್ಧರಾಗಿ ರಬೇಕು ಎಂದು ಕಟ್ಟುಮಾಡಲು ಅವರು ಅದೇ ಪ್ರಕಾರ ಎಚ್ಚರದಿಂದ ಕಾದು ಕೊಂಡಿದ್ದರು. ಇತರ ದೇವತೆಗಳು ಕನಕವೈಡೂರ್ಯ ವಿಚಿತ್ರಗಳಾದ ತಮ್ಮ ತಮ್ಮ ಕವಚಗಳನ್ನು ತೊಟ್ಟು ಕೆಲವರು ಶಸ್ತ್ರಗಳನ್ನೂ ಕೆಲವರು ಚಕ್ರಗಳನ್ನೂ ಕೆಲವರು ದೊಣ್ಣೆಗಳನ್ನೂ ಕೆಲವರು ಶೂಲಗಳನ್ನೂ ಕೆಲವರು ಕೊಡಲಿಗಳನ್ನೂ ಇನ್ನು ಕೆಲವರು ಈಟಿಗಳನ್ನೂ ಹಿಡಿದು ಯುದ್ಧಸನ್ನದ್ಧರಾಗಿ ನಿಂತುಕೊಂಡರು.

ಇತ್ತಲಾ ಗರುಡನು ದೇವಲೋಕವನ್ನು ಪ್ರವೇಶಿಸಿದ ಮಾತ್ರದಿಂದ ಆತನನ್ನು ಕಂಡು ದೇವತಾಸೈನ್ಯವೆಲ್ಲವೂ ತಲ್ಲಣಿಸುತ್ತಾ ಇರಲು ಆ ಅಮೃತಕಲಶಕ್ಕೆ ಕಾವ

ಆಗಿದ್ದ ಭೌಮನು ಮುಹೂರ್ತಮಾತ್ರ ಕಾದಿ ಆ ಪಕ್ಷಿರಾಜನ ಗರಿಗಳಿಂದಲೂ ಕೊಕ್ಕಿನಿಂದಲೂ ಗಾಯವಡೆದು ಓಡಿಹೋದನು. ಗರುಡನು ತನ್ನ ಗರಿಗಳ ವೇಗ ದಿಂದ ಗಾಳಿಯನ್ನು ಕಲ್ಪಿಸಲು ಆ ಗಾಳಿಯಿಂದುಂಟಾದ ಧೂಳಿಯು ದೇವತಾಸೈನ್ಯ ಗಳ ಮೇಲೆ ಕವಿಯುತ್ತಾ ಅವರ ಕಣ್ಣುಗಳಿಗೆಲ್ಲಾ ತುಂಬಿಕೊಂಡುದರಿಂದ ಅವರು ಕುರುಡರಾಗಿ ಇವನನ್ನು ನೋಡುವುದಕ್ಕಾಗದೆ ಸುಮ್ಮನೆ ತಿರುಗುತ್ತಿದ್ದರು. ಗರುಡನು ಆ ಸೈನ್ಯವನ್ನೆಲ್ಲಾ ಗರಿಗಳಿಂದಲೂ ಕೊಕ್ಕಿನಿಂದಲೂ ಹೊಡೆದು ಜಜ್ಜುತ್ತಾ ನೆಲಕ್ಕೆ ಕೆಡಹಲು ದೇವೇಂದ್ರನು ಆ ಧೂಳಿಯನ್ನು ಹೋಗಲಾಡಿಸುವುದಕ್ಕೆ ವಾಯುದೇವ ನನ್ನು ಕಳುಹಿಸಿದನು. ಆ ವಾಯುವು ಆ ಧೂಳಿಯನ್ನು ಪರಿಹರಿಸಿ ದಿಕ್ಕುಗಳನ್ನು ಬೆಳಗಿಸಲು ದೇವತೆಗಳು ಒಮ್ಮಡಿಯಾಗಿ ಕಾಣಿಸಿಕೊಂಡು ತಮ್ಮ ತಮ್ಮ ಆಯುಧ ಗಳಿಂದ ಗರುಡನನ್ನು ತಿವಿದರು. ಗರುಡನು ಕೋಪಿಸಿಕೊಂಡು ಸಿಂಹನಾದವನ್ನು ಮಾಡಿ ನಾಲ್ಕು ದಿಕ್ಕುಗಳಲ್ಲಿಯೂ ಕಾಣಿಸಿಕೊಂಡು ನಾನಾಪ್ರಕಾರವಾಗಿ ಆಯುಧ ಗಳಿಂದ ತಿವಿಯುವ ದೇವತೆಗಳಿಗೆ ಭಯಹುಟ್ಟುವ ಹಾಗೆ ಆಕಾಶಕ್ಕೆ ಹಾರಿದನು. ಆ ದೇವತೆಗಳು ಕಬ್ಬಿಣದ ಕೋಲುಗಳನ್ನೂ ಶೂಲಗಳನ್ನೂ ದೊಣ್ಣೆಗಳನ್ನೂ ಪಟ್ಟಾ ಕತ್ತಿಗಳನ್ನೂ ಜೂರಿಗಳನ್ನೂ ಸಾಣೆಯಕತ್ತಿಗಳನ್ನೂ ಇನ್ನು ನಾನಾ ವಿಧಗಳಾದ ಆಯುಧಗಳನ್ನೂ ಆ ಗರುಡನ ಮೇಲೆ ಪ್ರಯೋಗಿಸಿದರೂ ಅವುಗಳನ್ನು ಲಕ್ಷಿಸದೆ ನಿಮಿಷಮಾತ್ರದಲ್ಲಿ ಆ ಗರುಡನು ತನ್ನ ಗರಿಗಳಿಂದಲೂ ಉಗುರುಗಳಿಂದಲೂ ದೇವತೆ ಗಳನ್ನು ಪ್ರಹರಿಸಲು ಅವನ ಉಗುರುಗಳ ಪೆಟ್ಟನ್ನು ತಡೆಯಲಾರದೆ ಆ ದೇವತೆಗಳೆ ಲ್ಲರೂ ದಿಕ್ಕುದಿಕ್ಕಿಗೆ ಓಡಿಹೋದರು.

ಈ ಪ್ರಕಾರವಾಗಿ ಸಕಲದೇವತಾಸಮೂಹಗಳು ಅನೇಕಮುಖವಾಗಿ ತಮ್ಮೊ ಡನೆ ಕಾಳಗ ಮಾಡುತ್ತಿರುವ ಗರುಡನ ಪರಾಕ್ರಮಕ್ಕೆ ಎದುರಾಗಿ ನಿಲ್ಲಲಾರದೆ ತಿರುತಿರಿಗಿ ನೋಡುತ್ತಾ ಭಯದಿಂದ ಪಲಾಯನವನ್ನು ಮಾಡಿದರು. ಆ ಮೇಲೆ ಅಶ್ವಕ್ರಂದನನು ರೇಣುಕನು ಕ್ರರನು ತಪನನು ಉಲೂಖನು ಜ್ಯವಮಾನನು ನಿಮಿ ಷನು ಪ್ರರುಜನು ಪ್ರತಿಹನು ಎಂಬ ದೇವತೆಗಳೊಡನೆ ತಾಕಿ ಯುದ್ಧಕ್ಕೆ ತೊಡಗಿ ಕೊಕ್ಕಿನಿಂದ ತಿವಿದು ರೆಕ್ಕೆಗಳಿಂದ ಬಡಿದು ಹದವಾದ ಉಗುರುಗಳಿಂದ ಸೀಳಿ ಧುಮುಕಿ ಕಕ್ಕಸಗಾರನಾಗಿ ಪ್ರಳಯಕಾಲದ ರುದ್ರನೋಪಾದಿಯಲ್ಲಿ ರೌದ್ರರೂಪಿನಿಂದ ಇರಲು ಮಹಾ ಬಲಪರಾಕ್ರಮಸಂಪನ್ನನಾಗಿರುವ ಆ ಗರುಡನೆದುರಿಗೆ ಅಮರಶ್ರೇ ಷ್ಠರು ರಕ್ತವನ್ನು ವರ್ಷಿಸುವ ಮಹಾ ಮೇಘಗಳ ರೀತಿಗೆ ನಿಂತಿದ್ದರು. ಗರುಡನು ಅವರನ್ನು ನಿಃಶೇಷವಾಗಿ ಕೊಂದು ಅಮೃತವಿದ್ದ ತಾವಿಗೆ ಹೋಗುವ ಸಮಯ ದಲ್ಲಿ ಅಮೃತಸ್ಥಾನವನ್ನು ಸುತ್ತಿಕೊಂಡು ಜ್ವಾಲೆಗಳಿಂದ ದಹಿಸುತ್ತಿರುವ ಅಗ್ನಿ ಸ್ವರೂಪವಾದ ಸುತ್ತಣ ಕೋಟೆಯನ್ನು ಕಂಡು ಎಂಟು ಸಾವಿರದ ನೂರು ಮುಖಗ ಳನ್ನು ಧರಿಸಿ ಅತಿವೇಗದಿಂದ ಹೋಗಿ ಸಕಲ ನದೀಜಲಗಳನ್ನೆಲ್ಲಾ ಕುಡಿದು ಬಂದು ಆದರಿಂದ ಅಗ್ನಿಜ್ವಾಲೆಯನ್ನು ತಡೆದು ಅಮೃತಸ್ಥಾನವನ್ನು ಹೊಕ್ಕು ಅದರ ಸಮೀಪದಲ್ಲಿ ಅಮೃತವನ್ನು ಅಪಹರಿಸಿಕೊಂಡು ಹೋಗುವವರಿಗೆ ವಿಘ್ನವಾ

ಗುವ ರೀತಿಗೆ ದೇವತೆಗಳಿಂದ ನಿರ್ಮಿಸಲ್ಪಟ್ಟು ತೀಕ್ಷ್ಣವಾದ ಅಚ್ಚುಗಳಿಂದಲೂ ಅಗ್ನಿಸೂರ್ಯಕಾಂತಿಯಿಂದಲೂ ಕೂಡಿಕೊಂಡು ಯಾವಾಗಲೂ ಸುತ್ತುತ್ತಾ ಇರುವ ಶಸ್ತ್ರಯಂತ್ರವನ್ನು ನೋಡಿ ಅದರಲ್ಲಿ ಹೋಗುವದಕ್ಕೆ ಅವಕಾಶವನ್ನು ಕಾಣದೆ ಆ ಯಂತ್ರದ ಸುತ್ತಲೂ ತಿರಿಗಿ ಅದರ ಅಚ್ಚಿನ ಸಂದಿನಲ್ಲಿ ಸ್ವಲ್ಪ ಸ್ಥಳವನ್ನು ಕಂಡು ಸೂಕ್ಷ್ಮರೂಪವನ್ನು ವಹಿಸಿ ನಿಮಿಷಮಾತ್ರದಲ್ಲಿ ಅದರೊಳಗೆ ಹೊಕ್ಕು ಆ ಚಕ್ರದ ಕೆಳಗೆ ಬಳ್ಳಿಮಿಂಚುಗಳಂದದಿಂದ ನಾಲಿಗೆಗಳನ್ನು ನೀಡುತ್ತಾ ಗಗನವನ್ನು ಸೋಕುವ ಉರಿಗಳೊಡನೆ ಕೂಡಿರುವ ಕಾಡ್ಗಿಚ್ಚಿನೋಪಾದಿಯಲ್ಲಿ ಮಹಾ ಶರೀರ ಯುಕ್ತಗಳಾಗಿ ಕಣ್ಣುಗಳಿಂದ ವಿಷವನ್ನು ಕಾರುವಂಥಾ ಎವೆ ಇಲ್ಲದೆ ಇರುವ ದೃಷ್ಟಿಗಳುಳ್ಳಂಥಾ ಯಾವಾಗಲೂ ಕೋಪದಿಂದಲೇ ಕೂಡಿ ನೋಡಿದ ಮಾತ್ರದಿಂದಲೇ ವಸ್ತುಗಳನ್ನು ದಹಿಸುವಂಥಾ ಎರಡು ಸರ್ಪಗಳನ್ನು ಕಂಡು ತನ್ನ ಗರಿಗಳ ಗಾಳಿಗಳಿಂದ ಹುಟ್ಟಿದ ಧೂಳಿಗಳಿಂದ ಆ ಕ್ರೂರಸರ್ಪಗಳ ಕಣ್ಣುಗಳನ್ನು ಮುಚ್ಚಿ ಅವುಗಳನ್ನು ಕಾಣದಂತೆ ಆ ಸರ್ಪಗಳನ್ನು ಹಿಡಿದು ತುಮುರುತುಮುರಾಗಿ ಮಾಡಿ ಆ ಅಮೃತ ಕಲಶವನ್ನು ತೆಗೆದುಕೊಂಡು ತಾನು ಅಮೃತಪಾನವನ್ನು ಅಪೇಕ್ಷಿಸದೆ ಹೊರಗೆ ಬಂದು ತನ್ನ ಎರಡು ಗರಿಗಳಿಂದ ಸೂರ್ಯನ ತೇಜಸ್ಸನ್ನು ಮುಚ್ಚುತ್ತಾ ಬರುವ ಸಮಯದಲ್ಲಿ ಮಹಾ ವಿಷ್ಣುವು ಆತನ ಸಾಹಸಕ್ಕೆ ಸಂತೋಷಪಟ್ಟು ಆತನಿಗೆ ಪ್ರಸನ್ನನಾಗಿ—ಎಲೈ, ಪಕ್ಷಿರಾಜನೇ! ನಾನು ನಿನ್ನ ಪರಾಕ್ರಮಕ್ಕೆ ಮೆಚ್ಚಿದೆನು. ನಿನಗಿಷ್ಟವಾದ ವರವನ್ನು ಬೇಡೆನಲು—ಎಲೈ, ವಿಷ್ಣುವೇ! ನನಗೆ ಅಮೃತಪಾನವಿಲ್ಲದಿದ್ದರೂ ಜರಾಮರಣಗಳಿಲ್ಲದಂತೆ ದಯಮಾಡಬೇಕೆನಲು ವಿಷ್ಣುವು—ಹಾಗೇ ಆಗಲೆಂದು ವರವನ್ನು ಕೊಟ್ಟು ಆತನನ್ನು ತನಗೆ ವಾಹನವಾಗಿಯೂ ಧ್ವಜವಾಗಿಯೂ ಇರಬೇಕೆಂದು ಪ್ರಾರ್ಥಿಸಿದನು. ಗರುಡನು ಅದಕ್ಕೆ ಒಪ್ಪಿಕೊಂಡು ಗಗನ ಮಾರ್ಗದಲ್ಲಿ ಬರುತ್ತಿರಲು ಅಮೃತವನ್ನು ತೆಗೆದುಕೊಂಡು ಹೋದನೆಂಬ ಕೋಪದಿಂದ ಇಂದ್ರನು ಆ ಗರುಡನನ್ನು ಬೆನ್ನಟ್ಟಿಕೊಂಡು ಬಂದು ಅವನನ್ನು ತನ್ನ ವಜ್ರಾಯುಧದಿಂದ ಬಲವಾಗಿ ತಿವಿದನು. ಅವನು ಇಂದ್ರನನ್ನು ಕುರಿತು ನಗುತ್ತಾ—ಎಲೈ, ಇಂದ್ರನೇ! ನಿನ್ನ ವಜ್ರಾಯುಧವು ನನಗೆ ಒಂದಿಷ್ಟಾದರೂ ನೋಯಿಸದೇ ಹೋಯಿತು. ಆದರೆ ಈ ಆಯುಧೋತ್ಪತ್ತಿಕಾರಣನಾದ ದಧೀಚಿಯನ್ನೂ ನಿನ್ನನ್ನೂ ಈ ಆಯುಧವನ್ನೂ ಸಕಲರೂ ಬಹುಮಾನಪಡಿಸುವ ಹಾಗೆ ನನ್ನ ಈ ಪಕ್ಷದಲ್ಲಿರುವ ಒಂದು ಗರಿಯನ್ನು ಸಡಲಿಸಿ ಬಿಡುತ್ತೇನೆ ಎಂದು ಒಂದು ಗರಿಯನ್ನು ಉದುರಿಸಿದನು. ಇಂದ್ರನು ಆತನ ಅದ್ಭುತಪರಾಕ್ರಮವನ್ನೂ ಸಾಹಸವನ್ನೂ ಕಂಡು ಆತನನ್ನು ಕರೆದು—ನಿನ್ನ ಬಲ ವೆಷ್ಟು ಎಂದು ತಿಳಿಯಬೇಕು. ನಿನ್ನ ಕೂಡ ಸರ್ವಥಾ ಸ್ನೇಹವನ್ನು ಬಯಸಿದ್ದೇನೆ ಎನ್ನಲು ಗರುಡನು—ಎಲೈ, ದೇವೇಂದ್ರನೇ! ನೀನು ಹೇಳಿದ ಪ್ರಕಾರಕ್ಕೆ ನನ್ನ ಸ್ನೇಹವು ನಿನಗೆ ಆಗತಕ್ಕುದೇ ಸರಿ. ನನ್ನ ಮಹಾ ಬಲವನ್ನು ತಿಳಿಯಬೇಕೆಂದು ಕೇಳಿದಿಯಲ್ಲ? ಲೋಕದಲ್ಲಿ ಯಾರೂ ಆತ್ಮಸ್ತುತಿಯನ್ನು ಮಾಡಬಾರದು ಎಂದು ದೊಡ್ಡವರು ಹೇಳುವರು. ಆದರೂ ನೀನು ಮಿತ್ರಭಾವದಿಂದ ನನ್ನನ್ನು ಕೇಳಿದಕಾರಣ

ವಿವರಿಸುತ್ತೇನೆ. ಕೇಳು ; ಪರ್ವತಗಳೂ ವನಗಳೂ ಧನಗಳೂ ನಿಧಿಗಳೂ ಸಮುದ್ರ ಗಳೂ ಉಳ್ಳ ಈ ಮಹೀಮಂಡಲವನ್ನೂ ನಿನ್ನೊಡನೆ ಕೂಡಿದ ಸ್ಥಾವರ ಜಂಗಮಾತ್ಮ ಕವಾದ ಸಮಸ್ತಲೋಕಗಳನ್ನೂ ಒಂದೇ ರೆಕ್ಕೆಯಲ್ಲಿ ಅಯಾಸವಿಲ್ಲದೆ ವಹಿಸುವೆನು. ಇದೀಗ ನನ್ನ ಬಲವೆಂದು ತಿಳಿಸಲು ದೇವೇಂದ್ರನು ಆತನನ್ನು ಕಂಡು—ನೀನು ಅಷ್ಟು ಬಲವುಳ್ಳವನೇ ಸರಿ. ಅದಕ್ಕೆ ಸಂಶಯವಿಲ್ಲ. ಈ ಹೊತ್ತು ಮೊದಲ್ಗೊಂಡು ನನ್ನಲ್ಲಿ ಶಾಶ್ವತವಾದ ಸ್ನೇಹವನ್ನು ಪಡಿಪಾಲಿಸು. ಈ ಅಮೃತವನ್ನು ತೆಗೆದುಕೊಂಡು ಹೋಗಿ ಮತ್ತೊಬ್ಬರಿಗೆ ಕೊಟ್ಟರೆ ಅವರು ನಮ್ಮ ಕೂಡ ಪ್ರತಿಭಟಿಸಿ ನಮ್ಮನ್ನು ಬಾಧಿಸುವರು. ಇದರಿಂದ ನಿನಗೆ ಪ್ರಯೋಜನವೇನು ? ಆದುದರಿಂದ ಈ ಅಮೃತವನ್ನು ಮರಳಿ ನನಗೆ ಕೊಡಬೇಕೆನಲು ಆ ಗರುಡನು ಒಂದು ನಿಮಿತ್ತದಿಂದ ಈ ಅಮೃತವನ್ನು ತೆಗೆದು ಕೊಂಡು ಹೋಗುವುದೇ ಹೊರತಾಗಿ ಒಬ್ಬರಿಗೆ ಪಾನವನ್ನು ಮಾಡಿಸಬೇಕೆಂದು ನನಗೆ ಇಚ್ಛೆ ಇಲ್ಲ. ಇದನ್ನು ಒಂದು ಪ್ರದೇಶದಲ್ಲಿ ಇರಿಸಿದ ಮೇಲೆ ನೀನು ಎತ್ತಿ ಕೊಂಡು ಹೋಗುವುದು ನನಗೆ ಸಮ್ಮತವೇ ಎಂದು ಹೇಳಿದುದಕ್ಕೆ ದೇವೇಂದ್ರನು ಸಂತೋಷಪಟ್ಟು ನೀನು ಅಮೃತವನ್ನು ಕೆಳಗೆ ಇರಿಸಿದಲ್ಲಿ ನಾನು ಅದನ್ನು ಎತ್ತಿ ಕೊಂಡು ಹೋಗುನೆನು ಎಂದು ನುಡಿದು ಗರುಡನ ಸಂಗಡವೇ ಬರುತ್ತಿದ್ದನು. ಗರುಡನು ಅತಿತ್ವರೆಯಿಂದ ತನ್ನ ತಾಯಿಯ ಸನ್ನಿಧಿಗೆ ಬಂದು—ಅಮ್ಮಾ ! ಅಮೃತ ವನ್ನು ತಂದೆನು. ಇನ್ನೇನು ಮಾಡಬೇಕೆನಲು ಅವಳು ಪರಮಸಂತೋಷಯುಕ್ತಳಾಗಿ ಇದನ್ನು ಆ ಸರ್ಪಗಳಿಗೆ ಒಪ್ಪಿಸೆಂದಳು. ಅವನು ಸರ್ಪಗಳ ಬಳಿಗೆ ಬಂದು—ಎಲೈ, ಸರ್ಪಗಳಿರಾ ! ಅಮೃತವನ್ನು ತಂದಿದ್ದೇನೆ. ಅದನ್ನು ದರ್ಭೆಯ ಮೇಲಿರಿಸು ತ್ತೇನೆ. ನೀವು ಸ್ನಾನವನ್ನು ಮಾಡಿ ಅದನ್ನು ಭಕ್ಷಿಸಬಹುದೆನಲು ಆ ಸರ್ಪಗಳು ಅತಿಸಂತೋಷದಿಂದ—ಎಲೈ, ಗರುಡನೇ ! ನಿನ್ನ ತಾಯಿಯ ದಾಸ್ಯವು ಇಂದಿಗೆ ತೀರಿತು. ಸ್ವಸ್ಥನಾಗಿ ಹೋಗೆಂದು ಹೇಳಿ ಸ್ನಾನಕ್ಕೆ ಹೋದುವು. ಆ ಸಮಯ ವನ್ನು ನಿರೀಕ್ಷಿಸಿಕೊಂಡಿದ್ದ ಇಂದ್ರನು ಆ ಅಮೃತಕಲಶವನ್ನು ತೆಗೆದುಕೊಂಡು ಅಮರಾವತಿಗೆ ಹೋದನು. ಇತ್ತಲಾ ಸರ್ಪಗಳು ಸ್ನಾನವನ್ನು ಮಾಡಿ ಬಂದು ಅಮೃತಕಲಶವನ್ನು ಕಾಣದೆ ಗರುಡನು ಮೋಸಮಾಡಿದನೆಂದು ಖೇದಗೊಂಡು ಆ ಕಲಶವನ್ನು ಇಟ್ಟಿದ್ದ ದರ್ಭೆಗಳನ್ನು ನೆಕ್ಕಲು ಆ ದರ್ಭೆಗಳ ಅಂಚುಗಳು ಅವು ಗಳ ನಾಲಿಗೆಗಳನ್ನು ಇಬ್ಭಾಗಮಾಡಿದುವು. ಅಂದಿನಿಂದ ಸರ್ಪಗಳಿಗೆ ದ್ವಿಜಿಹ್ವಗ ಳೆಂದು ಹೆಸರಾಯಿತು. ಅನಂತರದಲ್ಲಿ ಗರುಡನು ಪಕ್ಷಿರಾಜನಾಗಿ ಸರ್ಪಗಳನ್ನು ಭಕ್ಷಿಸುತ್ತಾ ಆ ಪವಿತ್ರವಾದ ಅರಣ್ಯದಲ್ಲಿ ಮಾತೃಶುಶ್ರೂಷೆಯನ್ನು ಮಾಡಿಕೊಂಡಿ ರುತ್ತಿದ್ದನು.

———

3. THE STORY OF DUSHYANTA.

೩. ದುಷ್ಯಂತೋಪಾಖ್ಯಾನ.

ಪೌರವವಂಶೋದ್ಧಾರಕನಾದ ದುಷ್ಯಂತಮಹಾರಾಜನು ಅಸಮಾನಶೌರ್ಯವುಳ್ಳವನಾಗಿ ಚತುಸ್ಸಮುದ್ರಮುದ್ರಿತವಾದ ಭೂಮಂಡಲವನ್ನು ತನ್ನ ಸ್ವಾಧೀನವನ್ನು ಮಾಡಿಕೊಂಡು ನಾಲ್ಕನೆಯ ಭಾಗವನ್ನು ತಾನು ಅನುಭವಿಸುತ್ತಾ ಸಮುದ್ರತೀರದ ದೇಶಗಳು ಮ್ಲೇಚ್ಛದೇಶಗಳು ಇವೇ ಮೊದಲಾದ ಸಮಸ್ತದೇಶಗಳನ್ನೂ ಎಚ್ಚರವಾಗಿ ಪಾಲಿಸುತ್ತಾ ಇರುವಾಗ ಸಮಸ್ತಜನರೂ ವರ್ಣಸಂಕರರಾದಿ ಪಾಪಕೃತ್ಯಗಳನ್ನು ಮಾಡದೆ ಧರ್ಮದಲ್ಲಿಯೇ ನಿರತರಾಗಿದ್ದರು ಮತ್ತು ಆತನ ದೇಶದಲ್ಲಿ ಚೋರವ್ಯಾಘ್ರಾದಿಗಳ ಭಯವೂ ಹಸಿವು ಬಾಯಾರಿಕೆ ಮೊದಲಾದ ಉಪದ್ರವಗಳೂ ಇರಲಿಲ್ಲವು. ಪರ್ಜನ್ಯನು ತಿಂಗಳಿಗೆ ಮೂರು ಸಾರಿ ವರ್ಷಿಸುವುದರಿಂದ ಆತನ ದೇಶದಲ್ಲಿ ಸಕಲವಾದ ಸಸ್ಯಗಳು ಬೆಳೆದು ಧಾನ್ಯಗಳೆಲ್ಲಾ ಅಗ್ಗವಾಗಿ ಇದ್ದುವು ಆ ರಾಜಕುಮಾರನು ಯೌವನದಲ್ಲಿ ಗರುಡೀಸಾಧಕವನ್ನು ಮಾಡಿ ಮಂದರಪರ್ವತವನ್ನಾದರೂ ಎತ್ತುವಷ್ಟು ಭುಜಬಲವನ್ನು ಸಂಪಾದಿಸಿ ಧನುರ್ಯುದ್ಧದಲ್ಲಿಯೂ ಗದಾಯುದ್ಧದಲ್ಲಿಯೂ ಮುಷ್ಟಿಯುದ್ಧದಲ್ಲಿಯೂ ಇನ್ನು ನಾನಾ ವಿಧಗಳಾದ ಆಯುಧಯುದ್ಧಗಳಲ್ಲಿಯೂ ಸಮರ್ಥನಾಗಿ ಆನೆ ಕುದುರೆ ರಥ ಇವುಗಳನ್ನೇರುವುದರಲ್ಲಿ ಜತುರನಾಗಿ ಬಲದಲ್ಲಿ ವಿಷ್ಣುವಿಗೂ ಪ್ರತಾಪದಲ್ಲಿ ಸೂರ್ಯನಿಗೂ ಗಾಂಭೀರ್ಯದಲ್ಲಿ ಸಮುದ್ರನಿಗೂ ಕ್ಷಮೆಯಲ್ಲಿ ಭೂಮಿಗೂ ಸಮಾನನಾಗಿ ಯಶೋವಂತನಾಗಿರುತ್ತಿದ್ದನು.

ಹೀಗಿರುವಲ್ಲಿ ಒಂದಾನೊಂದು ದಿವಸ ಆ ದುಷ್ಯಂತ ಮಹಾರಾಜನು ವನದಲ್ಲಿರುವ ನಾನಾ ಮೃಗಗಳನ್ನು ಬೇಟೆಯಾಡಬೇಕೆಂದೆಣಿಸಿ ಸುವರ್ಣಮಯರಥಾರೂಢನಾಗಿ ಶತಘ್ನಿ ಕತ್ತಿ ಪಟ್ಟಾಕತ್ತಿ ತೊಡಪು ಜಮದಾಡೆ ಬಾಕು ಸುರಗಿ ಕಬ್ಬಿಣದ ಕೋಲು ಭಿಂಡಿವಾಳ ಭರಜಿ ಭಲ್ಲೆ ಈಟಿ ಸಿಂಗಾಡಿ ಮೊದಲಾದ ಆಯುಧಗಳನ್ನು ಹಿಡಿದು ಉಕ್ಕಿನ ಕವಚಗಳನ್ನು ತೊಟ್ಟು ತೇರುಗಳನ್ನೂ ಆನೆಗಳನ್ನೂ ಕುದುರೆಗಳನ್ನೂ ಏರಿದ ರಾಹುತರೂ ಕಾಲಾಳುಗಳೂ ಉಭಯಪಾರ್ಶ್ವದಲ್ಲಿ ನಡೆದು ಬರುತ್ತಾ ಇರಲು ಭಟರ ಸಿಂಹನಾದಗಳಿಂದಲೂ ಭುಜಗಳ ಜಪ್ಪಾಳೆಗಳಿಂದಲೂ ರಥಚಕ್ರಧ್ವನಿಗಳಿಂದಲೂ ಮದದಾನೆಗಳ ಬೃಂಹಿತಗಳಿಂದಲೂ ಕುದುರೆಗಳ ಹೇಷಾರವಗಳಿಂದಲೂ ಭೇರೀ ಮೃದಂಗ ದುಂದುಭಿ ಕಹಳಾದಿ ವಾದ್ಯಧ್ವನಿಗಳಿಂದಲೂ ಸರ್ವದಿಕ್ಕುಗಳಲ್ಲಿಯೂ ಒಂದೇ ಪ್ರಕಾರ ಭೋರೆಂದು ಮೊರೆಯುತ್ತಿರಲು ಆತನು ಹೊರಟು ಬೀದಿಯಲ್ಲಿ ಬರುತ್ತಿದ್ದನು ಆ ರಾಯನನ್ನು ನೋಡಬೇಕೆಂದು ಸಂತೋಷದಿಂದ ಆ ಪಟ್ಟಣದಲ್ಲಿ ಇರುವ ಸ್ತ್ರೀಯರು ಅತ್ಯುನ್ನತಗಳಾದ ಉಪ್ಪರಿಗೆಗಳನ್ನು ಏರಿ ಅಂದದಿಂದ ಒಪ್ಪಿ ದೇವೇಂದ್ರನಿಗೆ ಸಮಾನನಾಗಿರುವ ರಾಯನನ್ನು ಕಂಡು—ಈತನ ಪರಾಕ್ರಮವು ಲೋಕಾದ್ಭುತವಾದುದು ಎಂದು ಸ್ತುತಿಸಿ ಆತನಲ್ಲಿ ಪ್ರೇಮಾತಿಶಯದಿಂದ ಪುಷ್ಪವರ್ಷಗಳನ್ನು ಕರೆಯುತ್ತಿದ್ದರು.

ಆ ಬಳಿಕ ದುಷ್ಯಂತರಾಜನು ಬ್ರಾಹ್ಮಣರಿಂದ ಸ್ತುತಿಸಲ್ಪಟ್ಟವನಾಗಿ ಪಟ್ಟಣವನ್ನು ಬಿಟ್ಟು ಹೋಗುತ್ತಾ ಕೆಲವು ಪ್ರದೇಶಗಳನ್ನು ಕಳೆದು ಸ್ವಲ್ಪ ದೂರದಲ್ಲಿ ಆಲ ಬೇಲ ಕೆಮ್ಮತ್ತಿ ಕಗ್ಗಲಿ ಅತ್ತಿ ಅರಟಾಳ ಅರಳಿ ಅಮಟೆ ಕಕ್ಕೆ ಎಕ್ಕ ಬಿಲ್ವವತ್ತ ಮಾವು ಸೀಮಾವು ಮೊದಲಾದ ಮರಗಳಿಂದ ಶೋಭಿತವಾಗಿ ಕಲ್ಲುಗಳಿಂದಲೂ ವಿಷಮಸ್ಥಳಗಳಿಂದಲೂ ನಿರ್ಝರಪ್ರದೇಶಗಳಿಂದಲೂ ಹುಲಿ ಕರಡಿ ಕಾಡ್ಗೋಣ ಕಡವೆ ಮೊದಲಾದ ದುಷ್ಟ ಮೃಗಗಳಿಂದ ಕೂಡಿರುವ ಒಂದು ಮಹಾರಣ್ಯವನ್ನು ನೋಡಿ ಚತುರಂಗ ಬಲಸಮೇತನಾಗಿ ಆ ವನವನ್ನು ಹೊಕ್ಕು ಅನೇಕವಾದ ದುಷ್ಟಮೃಗಗಳನ್ನು ಕೆಣಕಿ ಬೇಟೆಯಾಡುತ್ತಾ ಬಾಣಗಳಿಂದ ಶಾರ್ದೂಲಗಳನ್ನು ಮಥಿಸಿ ತನ್ನ ಸಮೀಪಕ್ಕೆ ಬರುತ್ತಿರುವ ದುಷ್ಟಮೃಗಗಳನ್ನು ಕತ್ತಿಯಿಂದ ಕಡಿದು ಕೆಡಹುತ್ತಾ ಕೈಗೆ ಸಿಕ್ಕದೆ ಓಡಿಹೋಗುತ್ತಿರುವ ಮೃಗಗಳನ್ನು ಅಟ್ಟಿಕೊಂಡು ಹೋಗಿ ಕೊಲ್ಲುತ್ತಾ ಮೃಗಗಳ ಮರ್ಮಗಳನ್ನು ತಿಳಿದು ಅವುಗಳನ್ನು ಭೇದಿಸುತ್ತಾ ತೊಡವು ಕಬ್ಬಿಣದ ದೊಣ್ಣೆ ಪಟ್ಟಾಕತ್ತಿ ಒನಕೆ ಭರ್ಜಿ ಮೊದಲಾದ ನಾನಾಯುಧಗಳನ್ನು ತೆಗೆದು ಕೊಂಡು ಮದದಾನೆಗಳನ್ನು ಕೊಲ್ಲುತ್ತಾ ಮಹಾರಣ್ಯದಲ್ಲಿ ಸಂಚರಿಸಿದನು. ಈ ಪ್ರಕಾರ ರಾಯನು ಕೆಣಕಿದ ಕಾರಣ ಗುಂಪಿನಿಂದ ಚೆದರಿಹೋಗಿ ಹಿಂಡಿನಲ್ಲಿ ನಿಲ್ಲದೆ ಮಹಾ ಭಯದಿಂದ ಹಂಬಲಿಸುತ್ತಾ ಹಸಿವು ಬಾಯಾರಿಕೆಗಳಿಂದ ಮೈಮರೆತು ನೀರಿಲ್ಲದೆ ಇರುವ ತೊರೆಗಳನ್ನು ಕಂಡು ಮೂರ್ಛೆಯಿಂದ ಅವುಗಳಲ್ಲಿ ಬೀಳುವುದರಿಂದಲೂ ಬೆನ್ನಟ್ಟಿ ಬರುವ ರಾಜಭಟರ ಕೈಗೆ ಸಿಕ್ಕಿ ಅವರಿಂದ ಕೊಲ್ಲಲ್ಪಡುವುದರಿಂದಲೂ ಅಡವಿಯಲ್ಲಿರುವ ಬೇಡರು ಸೋಲಿಗರು ಮುಂತಾದವರಿಂದ ಭಕ್ಷಣಾರ್ಥವಾಗಿ ಹಿಡಿದು ಬೆಂಕಿಯಿಂದ ಸುಡಲ್ಪಡುವುದರಿಂದಲೂ ಹೀಗೆ ಇನ್ನೂ ನಾನಾ ಪ್ರಕಾರದಿಂದ ಕಾಡಿನ ಮೃಗಗಳೆಲ್ಲಾ ನಾಶವಾಗುತ್ತಾ ಬಂದವು ಮತ್ತು ಆನೆಯ ಗುಂಪುಗಳು ಭಟರ ಶಸ್ತ್ರಗಳ ಪೆಟ್ಟಿಗೆ ಬಹಳ ಕಂಗೆಟ್ಟು ಸೊಂಡಿಲುಗಳನ್ನು ಸುತ್ತಿಕೊಂಡು ಲದ್ದಿಯನ್ನು ಹಾಕುತ್ತಾ ಉಚ್ಚೆಯನ್ನು ಹೊಯ್ದುಕೊಳ್ಳುತ್ತಾ ಗಾಯಗಳಿಂದ ನೆತ್ತರು ಸುರಿಯುತ್ತಿರುವಲ್ಲಿ ತತ್ತರದಿಂದ ನನದಲ್ಲಿರುವ ಹುಲ್ಲೆ ಮೊದಲಾದ ಮೃಗಗಳನ್ನು ತುಳಿಯುತ್ತಾ ಘೀಳಿಡುತ್ತಾ ದಿಕ್ಕುದಿಕ್ಕಿಗೆ ಓಡಿದುವು ಆ ಬಳಿಕ ದುಷ್ಯಂತ ರಾಜನ ಸೈನ್ಯವೆಂಬ ಮೇಘದಿಂದ ಬಿಡಲ್ಪಟ್ಟ ನಾನಾ ಪ್ರಕಾರಗಳಾದ ಬಾಣವರ್ಷಗಳಿಂದ ಮುಚ್ಚಲ್ಪಟ್ಟ ಕಾಡ್ಗೋಣಗಳು ಸಕಲದಿಕ್ಕುಗಳಲ್ಲಿ ತಿರುಗುತ್ತಿರಲು ಆ ವನವು ವರ್ಷಾಕಾಲದೋಪಾದಿಯಲ್ಲಿ ಒಪ್ಪುತ್ತಿದ್ದಿತು.

ಆ ಬಳಿಕ ದುಷ್ಯಂತರಾಜನು ದುಷ್ಟಮೃಗಗಳನ್ನು ಬೇಟೆಯಾಡುತ್ತಾ ಚತುರಂಗಬಲಸಮೇತನಾಗಿ ವನದದೆಸೆಯಿಂದ ಹೊರಟು ಪಟ್ಟಣಕ್ಕೆ ಎರಡು ಗಾವುದ ದೂರದಲ್ಲಿ ಸಿದ್ಧಚಾರಣರಿಂದ ಸೇವಿತವಾಗಿರುವ ಒಂದು ವನವನ್ನು ಹೊಕ್ಕು ಅಲ್ಲಿರುವ ನಾನಾ ಮೃಗಗಳನ್ನು ಬೇಟೆಯಾಡುವುದಕ್ಕೋಸ್ಕರ ಜೊತೆಯಲ್ಲಿ ಕುದುರೆಯ ರಾವುತರನ್ನೂ ಕೆಲವು ಸಾಯದಳವನ್ನೂ ಕರೆದುಕೊಂಡು ಬಹಳ ದೂರ ಹೋಗಿ ಶ್ರಮದಿಂದ ಕಂಗೆಟ್ಟು ಹಸಿವು ಬಾಯಾರಿಕೆಗಳಿಂದ ಪೀಡಿತನಾಗಿ ಆ ವನ

ವನ್ನು ದಾಟಿ ಒಂದು ಮೃಗವನ್ನು ಹುಡುಕಿಕೊಂಡು ಒಬ್ಬನೇ ಹೋಗುತ್ತಾ ದಾರಿಯಲ್ಲಿ ಒಂದು ಚೌಳುಭೂಮಿಯನ್ನು ಕಂಡು ಅದನ್ನು ಅತಿಕ್ರಮಿಸಿ ಆ ಬಳಿಕ ಉತ್ತಮರಾದ ತಾಪಸರಿಗೆ ವಾಸಸ್ಥಾನವಾಗಿಯೂ ಮನಸ್ಸಿಗೆ ಸಂತೋಷಕರವಾಗಿಯೂ ಸಕಲಜನಮನೋಹರವಾಗಿಯೂ ಮಂದಮಾರುತಸಮೇತವಾಗಿಯೂ ಪುಷ್ಪಿಸಿ ಫಲಿಸಿ ಜಗ್ಗುತ್ತಿರುವ ವೃಕ್ಷಗಳಿಂದ ಕೂಡಿರುವುದಾಗಿಯೂ ಮೃದುವೂ ಹಸರೂ ಆದ ಹುಲ್ಲುಗಳಿಂದ ರಮಣೀಯವಾಗಿರುವ ಪ್ರದೇಶಗಳುಳ್ಳದಾಗಿಯೂ ಕಿವಿಗಳಿಗೆ ಇಂಪಾಗುವ ಹಾಗೆ ಧ್ವನಿ ಮಾಡುವ ಗಿಣಿ ಗೊರವಂಕ ಪಾರಿವಾಳ ನವಿಲು ಮೊದಲಾದ ಹಕ್ಕಿಗಳಿಂದ ಕೂಡಿಕೊಂಡಿರುವುದಾಗಿಯೂ ತಂಪಾದ ನೆರಳುಳ್ಳ ಮಹಾವೃಕ್ಷಗಳಿಂದ ತುಂಬಿರುವುದಾಗಿಯೂ ತುಂಬಿಗಳ ಝೇಂಕಾರದಿಂದ ಮನೋಹರವಾಗಿಯೂ ಇರುವ ಒಂದು ವನವನ್ನು ಕಂಡು ಸಂತೋಷಪಡುತ್ತಾ ಅದರೊಳಗೆ ಹೊಕ್ಕು ನೋಡುವಲ್ಲಿ ಅಲ್ಲಿರುವ ಸಮಸ್ತವೃಕ್ಷಗಳೂ ಮಂದಮಾರುತದಿಂದ ಆತನ ಮೇಲೆ ಪುಷ್ಪಗಳನ್ನು ಉದುರಿಸುತ್ತಾ ಹೂವು ಹೀಚು ಕಾಯಿ ಹಣ್ಣು ಇವುಗಳ ಭಾರದಿಂದ ಬೊಗ್ಗಿ ಬಳುಕುತ್ತಾ ಕೆಲವು ಕೊನೆಗಳಿಂದ ಆಕಾಶವನ್ನು ಮುಟ್ಟುತ್ತಾ ತಮ್ಮ ಮೇಲೆ ಧ್ವನಿಗೈಯುತ್ತಾ ವಾಸವನ್ನು ಮಾಡುತ್ತಿರುವ ಶುಕಶಾರಿಕಾ ನಿಕರಗಳ ಸಲ್ಲಾಪಗಳೆಂಬ ಮೃದುಭಾಷಿತಗಳಿಂದ ತಮ್ಮ ಬಳಿಗೆ ಬಂದ ಪಥಿಕರ ಯೋಗಕ್ಷೇಮವನ್ನು ವಿಚಾರಿಸುತ್ತಿವೆಯೋ ಎಂಬ ಹಾಗೆ ಇದ್ದುವು. ಮತ್ತು ಬಿಳಿಯ ಹೂವುಗಳಿಂದ ತುಂಬಿರುವ ಬಳ್ಳಿಗಳು ಆ ಮರಗಳ ಸುತ್ತಲೂ ಸುತ್ತಿಕೊಂಡು ಹಬ್ಬಿ ಇರುವುದರಿಂದ ಅವುಗಳು ಬಿಳಿಯ ವಸ್ತ್ರಗಳನ್ನು ಉಟ್ಟುಕೊಂಡಿರುವ ಹಾಗೆ ಕಾಣಿಸುತ್ತಾ ಇದ್ದುವು.

ಇಂಥಾ ವನದಲ್ಲಿ ಅನೇಕವಾದ ಮೃಗಗಣದಿಂದ ಕೂಡಿಕೊಂಡು ಬಹು ವಿಧ ವಿಹಗಕೋಲಾಹಲಭರಿತವಾಗಿಯೂ ಪ್ರಜ್ವಲಿಸುತ್ತಿರುವ ಯಜ್ಞೇಶ್ವರನುಳ್ಳದಾಗಿಯೂ ವಾಲಖಿಲ್ಯರೇ ಮೊದಲಾದ ಮಹರ್ಷಿಗಳ ವಾಸಕ್ಕೆ ಯೋಗ್ಯವಾಗಿಯೂ ಅಗ್ನಿಹೋತ್ರಗೃಹಗಳಿಂದಲೂ ಪುಷ್ಪಶಯ್ಯೆಗಳಿಂದಲೂ ಮನೋಹರವಾಗಿಯೂ ಇರುವ ಒಂದು ದಿವ್ಯವಾದ ಋಷ್ಯಾಶ್ರಮಸಮೀಪದಲ್ಲಿ ಹಂಸ ಚಕ್ರವಾಕ ಮೊದಲಾದ ನಾನಾವಿಧ ಜಲಪಕ್ಷಿಗಳಿಂದ ಕೂಡಿ ಸಕಲ ಮೃಗಗಳ ಸಂಚಾರಕ್ಕೆ ಯೋಗ್ಯಗಳಾದ ತಡಿಗಳುಳ್ಳದಾಗಿಯೂ ದೇವಲೋಕಕ್ಕೆ ಸಮಾನವಾದ ಪುಣ್ಯಾಶ್ರಮಕ್ಕೆ ಭೂಷಣವಾಗಿಯೂ ಸಕಲ ಪ್ರಾಣಿಸಮೂಹಕ್ಕೆ ತಾಯಿಯೋಪಾದಿಯಲ್ಲಿ ಇರುವುದಾಗಿಯೂ ಚಕ್ರವಾಕಪಕ್ಷಿಗಳು ಸಂಚರಿಸುತ್ತಿರುವ ಪುಳಿನ ರಾಶಿಗಳಿಂದ ಶೋಭಿತವಾಗಿಯೂ ಶುಭ್ರವಾದ ನೊರೆಯಿಂದ ಕೂಡಿದುದಾಗಿಯೂ ಸ್ನಾನಂಗೈದು ವೇದವನ್ನು ಪಠಿಸುತ್ತಿರುವ ಧೃತವ್ರತರಾದ ಮುನಿಕುಮಾರರ ಸಮೂಹದಿಂದ ರಂಜಿತವಾಗಿಯೂ ಇರುವ ನಿರ್ಮಲಜಲಯುಕ್ತವಾದ ಮಾಲಿನಿ ಎಂಬ ಪುಣ್ಯನದಿಯನ್ನು ಕಂಡು ಅದರ ತೀರದಲ್ಲಿ ಸಕಲ ಮುನಿಜನಸೇವ್ಯವಾಗಿರುವ ಕಣ್ವಾಶ್ರಮದ ಸಮೀಪದಲ್ಲಿರುವ ಪ್ರದೇಶಗಳೆಲ್ಲೆಲ್ಲಾ ಸಂಚರಿಸಿ ಆ ರಾಯನು ಆ ಆಶ್ರಮವನ್ನು ಪ್ರವೇಶಿಸಿ ಆ ಕಣ್ವಮಹರ್ಷಿಯನ್ನು ಸೇವಿಸುವುದಕ್ಕೋಸ್ಕರ ಇಚ್ಛೈಸಿ ರಥಸಾರಥ್ಯಾದಿ

ಪರಿವಾರವನ್ನೆಲ್ಲಾ ಆ ಆಶ್ರಮದ ಹೊರಗಡೆಯಲ್ಲಿಯೇ ನಿಲ್ಲಿಸಿಬಿಟ್ಟು ಛತ್ರಚಾಮರಾದಿ ರಾಜಚಿಹ್ನೆಗಳನ್ನೆಲ್ಲಾ ಬಿಟ್ಟುಬಿಟ್ಟು ಮಂತ್ರಿಗಳನ್ನೂ ಸೇನಾಪತಿಯನ್ನೂ ಕರೆದು—ಆಯ್ಯಾ! ನಾವು ತಪೋಧನರಾದ ಮುನೀಶ್ವರರ ಆಶ್ರಮಕ್ಕೆ ಹೋಗಿ ಅವರ ದರ್ಶನವನ್ನು ಮಾಡಿಕೊಂಡು ತಿರಿಗಿ ಬರುವ ಪರ್ಯಂತರವೂ ಸಕಲಸೇನೆಯನ್ನೂ ಇಲ್ಲೇ ಇರಿಸಿಕೊಂಡು ಇರಬೇಕೆಂದು ಹೇಳಿ ಸತ್ಯಲೋಕಕ್ಕೆ ಸಮಾನವಾದ ಆ ಆಶ್ರಮವನ್ನು ಪ್ರವೇಶಿಸಿ ಅದರ ಮಹತ್ವವನ್ನು ನೋಡುತ್ತಿರಲಾಗಿ ಆ ಆಶ್ರಮದಲ್ಲಿ ಒಂದುಕಡೆ ವೇದವೇದಾಂಗಪಾರಂಗತರಾಗಿ ನ್ಯಾಯತತ್ವಾರ್ಥವಿಜ್ಞಾನಸಂಪನ್ನರಾದ ಕೆಲವು ಬ್ರಾಹ್ಮಣಶ್ರೇಷ್ಠರು ಪದಕ್ರಮ ಸಮೇತವಾಗಿ ಪಠಿಸುವ ವೇದಘೋಷವು ಆ ರಾಯನ ಕಿವಿಗಳಿಗೆ ಇಂಪಾಗಿತ್ತು. ಕೆಲವು ಕಡೆಯಲ್ಲಿ ಯಜುರ್ವೇದಪಠನವೂ ಕೆಲವು ಕಡೆಯಲ್ಲಿ ಸಾಮವೇದಗಾನವೂ ಇನ್ನೂ ಕೆಲವು ಸ್ಥಳದಲ್ಲಿ ಅಥರ್ವಣವೇದಪಾಠವೂ ಮತ್ತು ಕೆಲವು ಬಳಿಯಲ್ಲಿ ಶಬ್ದಶಾಸ್ತ್ರೋಪನ್ಯಾಸವನ್ನು ಮಾಡುವ ರೀತಿಯೂ ಮತ್ತೊಂದು ಕಡೆಯಲ್ಲಿ ಯಾಗಪ್ರಯೋಗವನ್ನು ತಿಳಿಹಿಸುವಂಥ ಅಂದವೂ ಇವೇ ಮೊದಲಾದವುಗಳಿಂದ ಪಾಪರಹಿತವಾಗಿಯೂ ನೇತ್ರಾನಂದಕರಗಳಾಗಿಯೂ ಇರುವ ಪವಿತ್ರಸ್ಥಳಗಳನ್ನು ನೋಡುತ್ತಾ ವಿಶದವಾಗಿಯೂ ವಿಜನವಾಗಿಯೂ ಪವಿತ್ರವಾಗಿಯೂ ಇರುವ ಕಣ್ವರ ಪರ್ಣಶಾಲೆಯನ್ನು ಹೊಕ್ಕು ಒಳಗೆ ಹೋಗಿ ನೋಡಿ ಅಲ್ಲಿ ಒಬ್ಬರನ್ನೂ ಕಾಣದೆ—ಈ ಆಶ್ರಮದಲ್ಲಿರುವವರು ಯಾರು? ಎಂದು ವನದಲ್ಲಿ ಪ್ರತಿಧ್ವನಿಯು ಹುಟ್ಟುವ ಹಾಗೆ ಗಟ್ಟಿಯಾಗಿ ಕೂಗಿ ಎಚ್ಚರಿಸಲು ಆ ಧ್ವನಿಯನ್ನು ಕೇಳಿ ಕಾರ್ಮುಗಿಲ ದೆಸೆಯಿಂದ ಹೊರಟು ಬರುವ ಬಳ್ಳಿಮಿಂಚಿನೋಪಾದಿಯಲ್ಲಿ ಹೊಳೆಯುತ್ತಿರುವಂಥಾ ಪ್ರತ್ಯಕ್ಷವಾಗಿ ಬಂದ ಮಹಾಲಕ್ಷ್ಮ್ಯೋಪಾದಿಯಲ್ಲಿ ರೂಪಲಾವಣ್ಯಸಂಪನ್ನೆಯಾಗಿರುವಂಥಾ ಒಬ್ಬ ಕನ್ನಿಕೆಯು ಆ ಆಶ್ರಮದ ಒಳಗಣಿಂದ ಹೊರಟು ಬಂದು ಅಭ್ಯಾಗತನಾದ ಆ ಮಹಾರಾಜನನ್ನು ಕಂಡು ಆಶ್ಚರ್ಯಪಡುತ್ತಾ ತಾವರೆಯ ಎಸಳುಗಳೋಪಾದಿಯಲ್ಲಿ ನೀಟವಾದ ನೇತ್ರಯುಗ್ಮವನ್ನೂ ವಿಶಾಲವಾದ ವಕ್ಷಸ್ಥಳವನ್ನೂ ಸಿಂಹಸ್ಕಂಧ ಸಮಾನವಾದ ಭುಜಮೂಲವನ್ನೂ ಆಜಾನುದೀರ್ಘಗಳಾದ ಬಾಹುಗಳನ್ನೂ ಇವೇ ಮೊದಲಾದ ರಾಜಲಕ್ಷಣಗಳನ್ನು ನೋಡಿ ಮೃದು ಮಧುರ ಭಾಷೆಗಳಿಂದ ಕುಶಲ ಪ್ರಶ್ನೆಯನ್ನು ಮಾಡಿ ಸಮುಚಿತವಾದ ಪೀಠದಲ್ಲಿ ಕುಳ್ಳಿರಿಸಿ ಅರ್ಘ್ಯಪಾದ್ಯಾಚಮನಗಳನ್ನು ಕೊಟ್ಟು ಸನ್ಮಾನದಿಂದ ಸಂತುಷ್ಟನಾದ ಆ ರಾಯನ ಎದುರಿಗೆ ನಾಚಿಕೆಯಿಂದ ಸ್ವಲ್ಪವಾಗಿ ಮುಖವನ್ನು ಬಾಗಿಸಿ ನಿಂತುಕೊಂಡು ತನ್ನ ಮುಖದ ಮುಗುಳುನಗೆಯ ಸೊಬಗಿನಿಂದ ದಿಕ್ಕುಗಳನ್ನು ಬೆಳಗಿಸುತ್ತಾ—ಎಲೈ, ಮಹಾನುಭಾವನೇ! ನೀನು ಯಾರು? ಯಾವ ನಿಮಿತ್ತದಿಂದ ಈ ಆಶ್ರಮಕ್ಕೆ ಬಂದೆ? ನಾವು ಮಾಡತಕ್ಕಂಥ ಕಾರ್ಯವೇನು? ಇದಷ್ಟನ್ನೂ ತಿಳುಹಿಸಬೇಕೆನಲು ಆ ರಾಜನು ಸಕಲ ಶುಭಲಕ್ಷಣಗಳಿಂದ ಕೂಡಿ ಸದಾಚಾರಸಂಪನ್ನೆಯಾಗಿ ಮಹಾಲಕ್ಷ್ಮ್ಯೋಪಾದಿಯಲ್ಲಿ ಒಪ್ಪುತ್ತಾ ಮಂಜುಭಾಷಿಣಿಯಾದ ಆ ಕನ್ಯಕೆಯನ್ನು ಕುರಿತು ಇಂತೆಂದನು—ಎಲೌ, ರಾಜೀವಲೋಚನೆಯೇ! ನಾನು ಮಹಾತ್ಮನಾದ ಇಲಲನ ಮಗ

ನಾದ ದುಷ್ಯಂತ ರಾಜನು ಎನಲು ಆ ಶಕುಂತಳೆಯು—ಸಕಲರಾಜಪೂಜಿತನಾದ ನಿನ್ನಂಥಾ ಅರಸಿಗೆ ನಾವು ಉಪಚರಿಸತಕ್ಕದ್ದೇನಿದೆ? ನಾವು ಕೊಡುವ ಕಂದಮೂಲ ಫಲಗಳನ್ನು ಪರಿಗ್ರಹಿಸಿ ನಮ್ಮಿಂದ ಆಗತಕ್ಕ ಕಾರ್ಯವನ್ನು ನಿರೂಪಿಸಬೇಕೆನಲು; ದುಷ್ಯಂತನು—ಎಲೌ, ಮಂಜುಭಾಷಿಣಿಯೇ! ಮಹಾನುಭಾವರಾದ ಕಣ್ವಮುನೀಶ್ವರರನ್ನು ಸೇವಿಸುವುದಕ್ಕೆ ನಾನು ಇಲ್ಲಿಗೆ ಬಂದೆನು. ಆ ಮಹಾತ್ಮರೆಲ್ಲಿದ್ದಾರೆ? ಎನಲು ಆ ಕನ್ಯಕೆಯು—ಕಣ್ವರು ಕಂದ ಮೂಲ ಫಲಗಳನ್ನು ತರುವುದಕ್ಕೆ ಆಶ್ರಮದಿಂದ ಹೊರಟು ವನಕ್ಕೆ ಹೋಗಿದ್ದಾರೆ. ಒಂದು ಮುಹೂರ್ತಮಾತ್ರ ಇಲ್ಲಿ ಇದ್ದರೆ ಅವರ ದರ್ಶನವನ್ನು ಮಾಡಿಕೊಂಡು ಹೋಗಬಹುದೆಂದು ಹೇಳಿದಳು.

ದುಷ್ಯಂತನು ಆಶ್ರಮದಲ್ಲಿ ಆ ಮಹಾ ಮುನೀಶ್ವರನು ಇಲ್ಲದೆ ಇರುವುದರಿಂದ ಶಕುಂತಳೆಯು ಉಪಚರಿಸುವ ಮಾತುಗಳಿಂದ ಸಂತೋಷಪಟ್ಟು ರೂಪಯೌವನಸಂಪನ್ನೆಯೂ ವಿನಯಾನ್ವಿತೆಯೂ ಆದ ಅವಳನ್ನು ನೋಡಿ—ನೀನು ಯಾರು? ಯಾರ ಮಗಳು? ನೀನು ಈ ತಪೋವನಕ್ಕಾಗಿ ಬಂದಿರುವುದಕ್ಕೆ ಕಾರಣವೇನು? ನಿನ್ನನ್ನು ನೋಡಿದ ಮಾತ್ರದಿಂದಲೇ ನನ್ನ ಮನಸ್ಸು ಮನ್ಮಥಬಾಣದಿಂದ ಪೀಡಿತವಾಗಿದೆ. ನಾನು ಒಂದು ರಹಸ್ಯವನ್ನು ಕೇಳುತ್ತೇನೆ. ಮರೆಮಾಜದೆ ಹೇಳಬೇಕು—ನಾನು ರಾಜರ್ಷಿಯಾದ ಪುರುವಂಶದಲ್ಲಿ ಹುಟ್ಟಿದವನು. ನನ್ನ ಮನಸ್ಸು ರಾಜಕನ್ಯಕೆಯಲ್ಲಿ ತಗಲುವುದೇ ಹೊರತಾಗಿ ಮತ್ತೊಬ್ಬ ಕನ್ಯಕೆಯಲ್ಲಿ ತಗಲುವುದಿಲ್ಲ. ಆದರೆ ನಿನ್ನಲ್ಲಿ ತಗುಲಿರುವುದರಿಂದ ನೀನು ನಿಶ್ಚಯವಾಗಿಯೂ ಕ್ಷತ್ರಿಯಕನ್ಯಕೆಯೆಂದು ತೋರುತ್ತೀ. ಇದಲ್ಲದೆ ನಿನ್ನನ್ನು ಮದುವೆಮಾಡಿಕೊಳ್ಳುವುದಕ್ಕೆ ನನ್ನ ಮನಸ್ಸು ಬಯಸುತ್ತದೆ. ನೀನು ನನಗೆ ಮದುವೆ ಆಗಬೇಕು. ಹಾಗೆ ಮದುವೆಯಾದರೆ ಚತುಸ್ಸಮುದ್ರದಿಂದ ಸುತ್ತಲ್ಪಟ್ಟ ಭೂಮಂಡಲವಷ್ಟೂ ನಿನ್ನ ವಶವಾಗುತ್ತದೆ ನಿನ್ನ ಮನಸ್ಸಿನಲ್ಲಿ ಮತ್ತೊಂದನ್ನು ಎಣಿಸದೆ ಅವಶ್ಯವಾಗಿ ನನ್ನನ್ನು ಮದುವೆಯಾಗಬೇಕೆನಲು; ಆ ಕನ್ಯಾರತ್ನವು ಮಧುರಭಾಷೆಗಳಿಂದ ಆತನನ್ನು ಕುರಿತು ಇಂತೆಂದಿತು—ಕೇಳೈ ರಾಯನೇ! ನೀನು ಸಕಲಧರ್ಮಗಳನ್ನು ತಿಳಿದಿರುವಂಧವನು. ನಾನು ಕಣ್ವಮುನೀಶ್ವರನ ಮಗಳಾದುದರಿಂದ ನನ್ನ ತಂದೆಯು ಇರುವಾಗಲೇ ನನ್ನ ಸ್ವಾತಂತ್ರ್ಯದಿಂದ ಹೀಗೆ ಮಾತಾಡಬಾರದಲ್ಲ! ನನ್ನ ತಂದೆಯನ್ನು ಕೇಳಿ ಅವರ ಅಪ್ಪಣೆಯನ್ನು ಪಡೆದ ಮೇಲೆ ಮದುವೆಯಾಗುವುದೇ ಹೊರತಾಗಿ ಹೀಗೆ ಕಾಮಾತುರತ್ವದಿಂದ ಅತಿಕ್ರಮಿಸುವುದು ಉಚಿತವಲ್ಲ ಎನಲು ದುಷ್ಯಂತನು—ಎಲೈ, ಶಕುಂತಳೆಯೇ! ನನ್ನ ಮನಸ್ಸಿನಲ್ಲಿ ಒಂದು ಸಂಶಯ ಉಂಟು. ಏನಂದರೆ ಲೋಕಪೂಜಿತನಾಗಿ ಮಹಾನುಭಾವನಾದ ಕಣ್ವಮಹಾ ಮುನೀಶ್ವರನು ಜಿತೇಂದ್ರಿಯನಾದುದರಿಂದ ಆತನ ಮನೋಧರ್ಮವು ಚಲಿಸಿದರೂ ದೃಢವ್ರತನಾದ ಆತನು ಚಲಿಸನು. ಆತನಿಗೆ ನೀನು ಯಾವ ರೀತಿಯಿಂದ ಮಗಳಾದೆ? ನನಗೆ ತಿಳುಹಿಸಬೇಕೆನಲು ಶಕುಂತಳೆಯು ಇಂತೆಂದಳು—ಎಲೈ, ರಾಯನೇ! ಕೇಳು; ಲೋಕದಲ್ಲಿ ಯಾರಾದರೂ ತಮ್ಮ ರೀತಿ ಒಂದು ಪ್ರಕಾರವಾಗಿರುವಲ್ಲಿ ಅದನ್ನು ಹೇಳಿಕೊಳ್ಳುವುದು ಬೇರೊಂದು

ಪ್ರಕಾರವಾದರೆ ಅಂಥವರಿಗೆ ಆತ್ಮಹತ್ಯಾದೋಷವು ಸಂಘಟಿಸುತ್ತದೆ. ಆದುದರಿಂದ ನನ್ನ ಸ್ಥಿತಿಯನ್ನು ಯಥಾರ್ಥವಾಗಿ ಹೇಳುತ್ತೇನೆ—

ಒಂದು ದಿವಸ ಒಬ್ಬ ಮುನೀಶ್ವರನು ಬಂದು ಕಣ್ವನಿಂದ ಪೂಜಿತನಾಗಿ ಆತ ನನ್ನು ಕುರಿತು ನೀನು ಕೇಳಿದ ರೀತಿಯಲ್ಲಿ ಪ್ರಶ್ನೆಯನ್ನು ಮಾಡಲು, ನನ್ನ ತಂದೆಯು ನನ್ನ ಕಿವಿಗೆ ಬೀಳುವಹಾಗೆ ಆತನನ್ನು ಕುರಿತು ಇಂತೆಂದನು—ಎಲೈ ಭಾರ್ಗವ ಮುನಿಯೇ! ನನಗೆ ಪರಮಮಿತ್ರನಾದ ವಿಶ್ವಾಮಿತ್ರನು ಘೋರವಾದ ತಪಸ್ಸನ್ನು ಮಾಡುತ್ತಿರಲು ಆ ತಪಸ್ಸಿಗೆ ಇಂದ್ರನು ಭಯಪಟ್ಟು ಆತನ ತಪೋಬಲವನ್ನು ಕೆಡಿ ಸಬೇಕೆಂದು ಮೇನಕೆ ಎಂಬ ಅಪ್ಸರಸ್ತ್ರೀಯನ್ನು ಕರೆದು—ನೀನು ಸಕಲರೂಪಸೌಂ ದರ್ಯಯುಕ್ತಳಾದುದರಿಂದ ನನ್ನ ಅಪ್ಪಣೆಯ ಮೇರೆಗೆ ವಿಶ್ವಾಮಿತ್ರನ ತಪಸ್ಸನ್ನೂ ಬ್ರಹ್ಮಚರ್ಯವ್ರತವನ್ನೂ ಕೆಡಿಸಿ ನನಗೆ ಹಿತವನ್ನುಂಟುಮಾಡಬೇಕೆನಲು ಆ ಮೇನ ಕೆಯು ಇಂದ್ರನನ್ನು ನೋಡಿ—ಎಲೈ ಇಂದ್ರನೇ ಆ ವಿಶ್ವಾಮಿತ್ರನ ಕೋಪಕ್ಕೆ ನೀವೇ ಭಯಪಡುವಾಗ ಅಂಥಾ ಜಿತೇಂದ್ರಿಯನ ಎದುರಿಗೆ ನಿಲ್ಲುವುದಕ್ಕೆ ನಾನೆಷ್ಟು ಮಾತ್ರದ ವಳು! ಆತನು ಸಾಮಾನ್ಯಪುರುಷನಲ್ಲ. ಆತನು ಬಹ್ಮಸೃಷ್ಟಿಗೆ ಬದಲಾಗಿ ತನ್ನ ಮನಸ್ಸಿಗೆ ಬಂದುದನ್ನೆಲ್ಲಾ ಸೃಷ್ಟಿಸಬಲ್ಲನು. ಇಂಥಾ ಅದ್ಭುತ ಮಹಿಮೆಯುಳ್ಳ ಆತನ ಎದುರಿಗೆ ನಿಂತು ಹೇಗೆ ಜೀವಿಸಲಿ? ಆದರೂ ನಿನ್ನ ಮಾತು ಮೀರಕೂಡದು. ಆದಕಾ ರಣ ನಾನು ಹೋಗಿ ಸೌಖ್ಯದಿಂದ ಹಿಂತಿರಿಗಿ ಬರುವ ಹಾಗೆ ನನ್ನ ಸಹಾಯಕ್ಕೆ ಮನ್ಮಥನನ್ನೂ ಮಂದಮಾರುತನನ್ನೂ ಕಳುಹಿಸಬೇಕೆನಲು ಇಂದ್ರನು ಆ ಮಾತಿಗೆ ಒಪ್ಪಿ ಅವರನ್ನು ಸಂಗಡ ಕಳುಹಿಸಲು; ಆ ಮೇನಕೆಯು ಅವರಿಬ್ಬರ ಸಹಾಯದಿಂದ ವಿಶ್ವಾಮಿತ್ರನ ಆಶ್ರಮದ ಬಳಿಗೆ ಬಂದು ತಪಸ್ಸಿನಿಂದ ಕೃಶನಾಗಿರುವ ಆತನನ್ನು ಕಂಡು ನಮಸ್ಕರಿಸಿ ನಾನಾ ವಿಧ ಶೃಂಗಾರಚೇಷ್ಟೆಗಳನ್ನು ತೋರಿಸುತ್ತಾ ಉಪಚರಿಸುತ್ತಿರಲು ಆ ವಿಶ್ವಾಮಿತ್ರನು ಇವಳ ರೂಪಲಾವಣ್ಯಗಳನ್ನು ನೋಡಿ ಮೋಹಿತನಾದನು. ಹೀಗೆ ಮೇನಕೆಯು ಆತನಿಂದ ಗರ್ಭವನ್ನು ಧರಿಸಿ ಈ ಶಕುಂತಳೆಯನ್ನು ಹೆತ್ತು ತನ್ನ ಒಡೆಯನ ಕೆಲಸವು ಕೈಸೇರಿತೆಂದು ತಿಳಿದು ಆ ಶಿಶುವನ್ನು ಹಿಮವತ್ಪರ್ವತದ ಸಮೀಪ ದಲ್ಲಿ ಹರಿಯುವ ಈ ಮಾಲಿನೀನದಿಯ ತೀರದಲ್ಲಿರಿಸಿ ಶುಭವಾಗಲಿ! ಎಂದು ಹರಸಿ ಅಮರಾವತೀ ಪಟ್ಟಣಕ್ಕೆ ಹೊರಟುಹೋದಳು. ನಾನು ಒಂದಾನೊಂದು ದಿವಸ ಸ್ನಾನಾರ್ಥವಾಗಿ ಆ ಮಾಲಿನೀ ನದಿಗೆ ಹೋಗಿ ಅಲ್ಲಿ ಅಳುತ್ತಿರುವ ಶಿಶುವನ್ನು ನೋಡಿ ನನ್ನ ದಿವ್ಯ ದೃಷ್ಟಿಯಿಂದ ನಡೆದ ವೃತ್ತಾಂತವನ್ನು ತಿಳಿದು ಶಿಶುವನ್ನು ನನ್ನಾಶ್ರಮಕ್ಕೆ ಎತ್ತಿಕೊಂಡು ಬಂದು ನನ್ನ ಹೊಟ್ಟೆಯಲ್ಲಿ ಹುಟ್ಟಿದ ಮಗುವಿನಂತೆಯೇ ಸಾಕುತ್ತಾ ಮೊದಲು ಕಾಡಿನಲ್ಲಿ ಶಕುಂತ ಪಕ್ಷಿಗಳು ಆ ಶಿಶುವನ್ನು ಪೋಷಿಸಿದ ಕಾರಣ ಇವಳಿಗೆ ಶಕುಂತಳೆ ಎಂದು ಹೆಸರಿಟ್ಟೆನು ಎಂದು ಹೇಳಲು ಆ ಋಷಿಯು ಕೇಳಿ ಕಣ್ವನ ಅಪ್ಪಣೆಯನ್ನು ಹೊಂದಿ ತನ್ನಾಶ್ರಮಕ್ಕೆ ಹೊರಟುಹೋದನು.

ಎಲೈ, ರಾಯನೇ! ಇದೀಗ ನನ್ನ ಜನ್ಮದ ರೀತಿಯು ಎಂದು ಹೇಳಿದ ಶಕುಂ ತಳೆಯ ಮಾತನ್ನು ಕೇಳಿ ದುಷ್ಯಂತ ಮಹಾರಾಯನು ಬಹಳ ಸಂತುಷ್ಟನಾಗಿ—ಎಲೈ

ಕನ್ಯಕೆಯೇ ! ನೀನು ಕ್ಷತ್ರಿಯಕನ್ಯೆಯಾಗಿರುವುದು ನಿಶ್ಚಯವಾಯಿತು. ಇನ್ನು ನನಗೆ ಹೆಂಡತಿಯಾಗಿ ನನ್ನ ಮನೋರಥವನ್ನು ಸಲ್ಲಿಸಬೇಕೆನಲು ಶಕುಂತಳೆಯು—ಎಲ್ಲೆ, ರಾಯನೇ ! ನನ್ನ ತಂದೆಯು ವನದಿಂದ ಒರುವವರೆಗೂ ನೀನಿಲ್ಲಿದ್ದರೆ ಆತನೇ ನನ್ನನ್ನು ನಿನಗೆ ಮದುವೆಮಾಡಿ ಕೊಡುತ್ತಾನೆ ಕನ್ಯಕೆಗೆ ತಂದೆಯೇ ಗುರುವಾದುದರಿಂದ ಆತನು ಅವಳನ್ನು ಯಾರಿಗೆ ಕೊಡುತ್ತಾನೋ ಅವನೇ ಅವಳಿಗೆ ಗಂಡನು. ನೀನು ಧರ್ಮಜ್ಞನು. ಸ್ತ್ರೀಯರಿಗೆ ಬಾಲ್ಯದಲ್ಲಿ ತಂದೆಯೂ ಯೌವನದಲ್ಲಿ ಗಂಡನೂ ಮುಪ್ಪಿನಲ್ಲಿ ಮಗನೂ ರಕ್ಷಕರಾದುದರಿಂದ ಅಪರಿಗೆ ಯಾವಾಗಲೂ ಸ್ವಾತಂತ್ರ್ಯವಿಲ್ಲ. ಹೀಗಿರುವಲ್ಲಿ ತಂದೆಯ ಅನುಮತಿ ಇಲ್ಲದೆ ನಿನ್ನನ್ನು ಧರ್ಮವಿರುದ್ಧವಾಗಿ ಹೇಗೆ ಮದುವೆಯಾಗಲಿ ? ಎಂದು ಹೇಳಿದಳು ಆ ಶಕುಂತಲೆಯನ್ನು ಕುರಿತು ರಾಯನು—ಎಲ್ಲೆ, ಶಕುಂತಳೆಯೇ ! ಈ ಕಾರ್ಯಕ್ಕೆ ನಿನ್ನ ತಂದೆಯು ಕೋಪಿಸನು. ತನ್ನ ಶರೀರಕ್ಕೆ ತಾನೇ ಬಾಧ್ಯಳಾದುದರಿಂದ ತನ್ನನ್ನು ತಾನೇ ದಾನಮಾಡುವುದು ಧರ್ಮವಿಹಿತವು. ಬ್ರಾಹ್ಮ ದೈವ ಆರ್ಷ ಪ್ರಾಜಾಪತ್ಯ ಆಸುರ ಗಾಂಧರ್ವ ರಾಕ್ಷಸ ಪೈಶಾಚಗಳೆಂದು ವಿವಾಹಗಳು ಎಂಟು ತೆರನಾಗಿರುವವು. ಈ ವಿವಾಹಗಳಲ್ಲಿ ಮೊದಲು ಹೇಳಿದ ನಾಲ್ಕು ಬ್ರಾಹ್ಮಣರಿಗೆ ಪ್ರಶಸ್ತವಾಗಿವೆ ಕ್ಷತ್ರಿಯರಿಗೆ ಮೊದಲು ಹೇಳಿದ ಆರೂ ವೈಶ್ಯ ಶೂದ್ರರಿಗೆ ಆಸುರವೂ ಯುಕ್ತವು. ಬ್ರಾಹ್ಮಣರಿಗೆ ಉಚಿತವಾದ ಬ್ರಾಹ್ಮ ದೈವ ಆರ್ಷ ಪ್ರಾಜಾಪತ್ಯಗಳೆಂಬ ನಾಲ್ಕು ವಿವಾಹಗಳೊಳಗೆ ಯಾವುದಾದರೂ ಒಂದು ಗಾಂಧರ್ವ ರಾಕ್ಷಸ ವಿವಾಹಗಳೆರಡು ಅಂತು ಈ ಆರು ವಿವಾಹಗಳು ಕ್ಷತ್ರಿಯರಿಗೆ ಯೋಗ್ಯವಾಗಿರುವುವು. ಒಂದು ವೇಳೆ ಕ್ಷತ್ರಿಯನು ರಾಕ್ಷಸ ವಿವಾಹವನ್ನೂ ಮಾಡಿಕೊಳ್ಳಬಹುದೆಂದು ಸ್ವಾಯಂಭುವ ಎಂಬ ಮನುವು ಹೇಳಿದ್ದಾನೆ ಆದುದರಿಂದ ನಿನ್ನಲ್ಲೇ ತಗುಲಿರುವ ಮನಸ್ಸುಳ್ಳ ನನ್ನನ್ನು ಗಾಂಧರ್ವ ವಿವಾಹದಿಂದ ಮದುವೆ ಮಾಡಿಕೋ ಎನಲು ಆ ಶಕುಂತಳೆಯು—ಎಲ್ಲೆ, ರಾಯನೇ ! ತಂದೆಯ ಅಪ್ಪಣೆ ಇಲ್ಲದೆ ಮದುವೆಯಾಗುವುದು ಧರ್ಮವಿರುದ್ಧವಲ್ಲವೆಂದು ನಿನಗೆ ತೋರಿದರೆ ನಾನೊಂದು ಸಂಕೇತವನ್ನು ಮಾಡುತ್ತೇನೆ ಏನಂದರೆ, ನಿನ್ನ ರಾಜ್ಯಾಧಿಕಾರವನ್ನು ನನ್ನ ಹೊಟ್ಟೆಯಲ್ಲಿ ಹುಟ್ಟುವ ಮಗನಿಗೆ ನೀನು ಕೊಡಬೇಕು. ಇದು ನಿನಗೆ ಸಮ್ಮತವಾದರೆ ನೀನು ಹೇಳಿದಹಾಗಾಗಬಹುದು ಎನಲು ರಾಯನು—ಹಾಗೇ ಆಗಲೆಂದು ಪ್ರತಿಜ್ಞೆಯನ್ನು ಮಾಡಿಕೊಟ್ಟು ಅವಳು ಕೋರಿದ ಮೇರೆಗೆ ತನ್ನ ಪುರೋಹಿತನನ್ನು ಕರಿಸಿ ಸಾಂಗವಾಗಿ ಗಾಂಧರ್ವ ವಿವಾಹದಿಂದ ಆ ಶಕುಂತಳೆಯನ್ನು ವರಿಸಿ ಅವಳೊಡನೆ ಅಭೀಷ್ಟಭೋಗಗಳನ್ನು ಪಡೆದು ತಿರಿಗಿ ತನ್ನ ಪಟ್ಟಣಕ್ಕೆ ಹೋಗಬೇಕೆಂದು ಆಲೋಚಿಸಿ ಆ ಶಕುಂತಳೆಯನ್ನು ಕುರಿತು—ಎಲ್ಲೆ, ಪ್ರಿಯಳೇ ! ನಾನು ಪಟ್ಟಣಕ್ಕೆ ಹೋಗಿ ಆನೆ ಕುದುರೆ ರಥ ಪದಾತಿಗಳನ್ನೂ ನನ್ನ ಬಿರುದಾವಳಿಯನ್ನೂ ಓಲಗ ತಮಟೆ ಭೇರಿ ಮೃದಂಗ ಕಹಳೆ ಇವೇ ಮೊದಲಾದ ವಾದ್ಯಗಳನ್ನೂ ಗಾಯಕ ನರ್ತಕಿಯರನ್ನೂ ದಾಸ ದಾಸೀ ಜನರನ್ನೂ ಆಂದೋಳಿಕೆಗಳನ್ನು ಇಲ್ಲಿಗೆ ತೆಗೆಯಿಸಿಕೊಂಡು ಬಂದು ಸಂಭ್ರಮದೊಡನೆ ನಿನ್ನನ್ನು ಕರೆದುಕೊಂಡು ಹೋಗುತ್ತೇನೆ. ಆ ಪರ್ಯಂತರವೂ

ನೀನು ಈ ವನದಲ್ಲೇ ಇರು ಸತ್ಯವಾಗಿ ಹೇಳುತ್ತೇನೆ. ಸಂಶಯಪಡಬೇಡ ಎನಲು ಶಕುಂತಳೆಯು ಆತನನ್ನು ಪ್ರೇಮದಿಂದ ತಬ್ಬಿಕೊಂಡು ಆತನಿಗೆ ಪ್ರದಕ್ಷಿಣ ನಮಸ್ಕಾರಗಳನ್ನು ಮಾಡಿ ಮುಗುಳುನಗೆಯಿಂದ ಮುಖವು ಪ್ರಕಾಶಿಸುವ ಹಾಗೆ ಎದುರಾಗಿ ನಿಂತು ಮುಖವನ್ನು ನೋಡಿ ಪಾದಗಳಿಗೆ ಅಡ್ಡಬಿದ್ದು ಎದ್ದು ಕಣ್ಣೀರು ತುಂಬಿ ನಿಲ್ಲಲು ಆ ದುಷ್ಯಂತರಾಜನು ಆಕೆಯನ್ನು ತಬ್ಬಿಕೊಂಡು ಗಲ್ಲವನ್ನು ಹಿಡಿದು—ಯಾತಕ್ಕೆ ಮನಸ್ಸಿನಲ್ಲಿ ಇಷ್ಟು ಚಿಂತಿಸಬೇಕು ? ನನ್ನ ಪುಣ್ಯಸಾಕ್ಷಿಯಾಗಿ ತಿರಿಗಿ ಬಂದು ನಿನ್ನನ್ನು ಕರಕೊಂಡು ಹೋಗುತ್ತೇನೆ ಎಂದು ಸಂತೈಸಿ ಅವಳನ್ನು ಅಲ್ಲೇ ಇರಿಸಿ ಉಗ್ರತಪಸ್ವಿಯಾದ ಕಣ್ವ ಮಹಾಮುನೀಶ್ವರನು ಈ ವೃತ್ತಾಂತವನ್ನು ಕೇಳಿ ಏನು ಮಾಡುವನೋ ಎಂದು ಚಿಂತಿಸುತ್ತಾ ಪಟ್ಟಣಕ್ಕೆ ಹೊರಟು ಹೋದನು.

ಬಳಿಕ ಶಕುಂತಳೆಯು—ದುಷ್ಯಂತ ಮಹಾರಾಜನು ತಾನು ಹೇಳಿದ ಪ್ರಕಾರವೇ ಚತುರಂಗಬಲಸಮೇತನಾಗಿ ಬ್ರಾಹ್ಮಣರನ್ನೂ ಸ್ತ್ರೀಜನರನ್ನೂ ಕೂಡಿಕೊಂಡು ಈಹೊತ್ತು ನಾಳೆ ನಾಳೆದ್ದು ಯಾವಾಗಲಾದರೂ ಅವಶ್ಯವಾಗಿ ಬರುವನು ಎಂದು ಎದುರಾಗಿ ದಾರಿಯನ್ನು ನೋಡುತ್ತಾ ದಿನ ವರುಷ ಮಾಸ ಋತು ಅಯನಗಳನ್ನು ಕಳೆದು ಬೇಸರಪಟ್ಟು ಸ್ನಾನ ಭೋಜನ ನಿದ್ರೆಗಳನ್ನು ಬಿಟ್ಟು ಮೂರು ವರುಷಗಳ ಮೇಲೆ ದಿವ್ಯ ತೇಜೋವಿರಾಜಮಾನನಾದ ರೂಪಲಾವಣ್ಯಗಳುಳ್ಳ ಮಗನನ್ನು ಪಡೆದಳು. ಆ ಕುಮಾರನು ಹುಟ್ಟಿದ ಸಮಯದಲ್ಲಿ ಅಂತರಿಕ್ಷದಿಂದ ಪುಷ್ಪವೃಷ್ಟಿಯು ಸುರಿಯಿತು. ಅನೇಕಪ್ರಕಾರವಾದ ದೇವದುಂದುಭಿಗಳು ಮೊಳಗಿದವು. ಸಕಲಲೋಕ ಮನೋಹರವಾಗಿ ಗಂಧರ್ವರು ಗಾನವನ್ನು ಮಾಡಿದರು. ಕಣ್ವ ಋಷೀಶ್ವರನು ಅತಿ ಸಂತೋಷಪಟ್ಟು ಅಲ್ಲಿ ಇರುವ ಮಹರ್ಷಿಗಳನ್ನು ಕರಿಸಿ ಆ ಕುಮಾರಕನಿಗೆ ಜಾತಕರ್ಮ ಮೊದಲಾದ ಸಂಸ್ಕಾರಗಳನ್ನು ಶಾಸ್ತ್ರೋಕ್ತಪ್ರಕಾರವಾಗಿ ನೆರವೇರಿಸಿದನು ಆ ಕುಮಾರನು ದೇವಕುಮಾರ ಸಮಾನನಾಗಿ ಆ ಆಶ್ರಮದಲ್ಲಿ ದಿನದಿನವೂ ಬೆಳೆದು ಸಮೀಪದಲ್ಲಿ ಜನರನ್ನು ಪೀಡಿಸುತ್ತಿರುವ ಸಿಂಹ ಹುಲಿ ಕರಡಿ ಕಾಡುಹಂದಿ ಕಾಡ್ಗೋಣ ಮೊದಲಾದ ಕ್ರೂರ ಜಂತುಗಳನ್ನು ತನ್ನ ಭುಜಬಲದಿಂದ ಹಿಡಿದು ಕಟ್ಟಿಹಾಕಿ ಅವುಗಳ ಮೇಲೆ ಹತ್ತಿ ಓಡಾಡುತ್ತಾ ಆಶ್ರಮಕ್ಕೆ ಉಪದ್ರವನ್ನು ಮಾಡುತ್ತಿರುವ ಪಿಶಾಚ ಸಮೂಹಗಳನ್ನೂ ರಾಕ್ಷಸರನ್ನೂ ತನ್ನ ಮುಷ್ಟಿಯ ಪೆಟ್ಟಿನಿಂದ ಹೊಡೆದು ಕೆಡಹುತ್ತಾ ಆಶ್ರಮವನ್ನು ನಿಷ್ಕಂಟಕವಾಗಿ ಮಾಡಿದುದರಿಂದ ಕಣ್ವನೇ ಮೊದಲಾದ ಋಷಿಗಳು ಆತನಿಗೆ ಸರ್ವದಮನನೆಂದು ಹೆಸರನ್ನಿಟ್ಟರು.

ಆ ಬಳಿಕ ದುಷ್ಯಂತನು ತಾನು ಮಾಡಿದ ಕಾರ್ಯಕ್ಕೆ ಕಣ್ವಮುನೀಶ್ವರನು ಕೋಪಿಸಿಕೊಂಡು ಶಪಿಸುವನೆಂದು ಎಣಿಸಿ ಶಕುಂತಳೆಯಲ್ಲಿ ಅನುರಾಗವಿದ್ದರೂ ತನ್ನ ಪಟ್ಟಣಕ್ಕೆ ಕರತರುವುದಕ್ಕೆ ಭಯಪಟ್ಟುಕೊಂಡಿದ್ದನು. ಆ ಬಳಿಕ ಕೆಲವು ಕಾಲವಾಗಲು. ಬಹು ಕಾರ್ಯಾಸಕ್ತನಾದುದರಿಂದ ಆ ವೃತ್ತಾಂತವನ್ನೇ ಮರೆತು ರಾಜ್ಯವನ್ನಾಳುತ್ತಿದ್ದನು.

ಇತ್ತಲಾಗಿ ಶಕುಂತಳೆಯು ತನ್ನ ಗಂಡನಾದ ದುಷ್ಯಂತರಾಜನು ಮಗನು ಸಹಿತವಾಗಿ ತನ್ನನ್ನು ಕರಕೊಂಡು ಹೋಗದೆ ಇರುವುದರಿಂದಲೂ ವಿರಹವೇದನೆಯಿಂ

ದಲೂ ಬಿಳುಪೇರಿದ ಶರೀರವುಳ್ಳವಳಾಗಿ ಹಣೆಯಲ್ಲಿ ಜೋಲುತ್ತಿರುವ ಮುಂಗುರುಳು ಗಳುಳ್ಳವಳಾಗಿ ದಿನದಿನಕ್ಕೆ ಕೃಶಳಾಗಿ ಮಲಿನವಾದ ವಸ್ತ್ರಗಳನ್ನು ಧರಿಸಿ ಮುಖ ಕಾಂತಿ ತಪ್ಪಿ ದೈನ್ಯ ಹೆಚ್ಚಿ ಚಿಂತಿಸುತ್ತಿರಲು ಆ ಸರ್ವದಮನನು ಹನ್ನೆರಡು ವರು ಷದ ಪ್ರಾಯದವನಾಗಿ ಮಾನುಷ ಚರಿತ್ರೆಯನ್ನು ಅತಿಕ್ರಮಿಸಿ ಯುವರಾಜಪಟ್ಟಕ್ಕೆ ಯೋಗ್ಯನಾಗಿರುವುದನ್ನು ಕಂಡು ಕಣ್ವಮುನೀಶ್ವರನು ಶಕುಂತಳೆಯನ್ನು ನೋಡಿ—ಎಲೌ, ಶಕುಂತಳೆಯೇ! ನಿನ್ನ ಗಂಡನಾದ ದುಷ್ಯಂತರಾಜನ ಸಮೀಪಕ್ಕೆ ಹೋಗಿ ಆತನನ್ನು ಸೇವಿಸಿಕೊಂಡಿರುವುದೇ ನಿನಗೆ ಉಚಿತವು. ಆತನು ಇಷ್ಟು ಕಾಲದ ತನಕ ನನ್ನನ್ನು ಕರಿಸಲಿಲ್ಲವೆಂದು ಮನಸ್ಸಿನಲ್ಲಿ ಎಣಿಸಬೇಡ. ಆತನು ನಿನ್ನಿಂದ ಸಂತೋಷ ಪಟ್ಟು ನಿನ್ನ ಮಗನಿಗೆ ಯುವರಾಜಾಧಿಕಾರವನ್ನು ಕೊಡುತ್ತಾನೆ. ಈ ಮಗನನ್ನು ಕರಕೊಂಡು ಗಂಡನ ಸಮೀಪಕ್ಕೆ ಹೋಗು ಎಂದು ಹೇಳಿ ತನ್ನ ಶಿಷ್ಯರನ್ನು ಕರೆದು—ಸರ್ವಲಕ್ಷಣಸಂಪನ್ನೆಯಾದ ಈ ಶಕುಂತಳೆಯನ್ನ ಮಗನೊಡನೆ ಆ ರಾಯನ ಪಟ್ಟಣಕ್ಕೆ ಕರಕೊಂಡು ಹೋಗಿ ಬಿಟ್ಟುಬಿಡಿರಿ. ಸ್ತ್ರೀಯರು ಬಹುಕಾಲ ತಂದೆಯ ಮನೆಯಲ್ಲಿ ಇದ್ದರೆ ಸಚ್ಚರಿತ್ರೆ ಧರ್ಮಗಳು ತಪ್ಪುವುದರಿಂದ ತಡಮಾಡದೆ ಕರಕೊಂಡು ಹೋಗಿರಿ ಎನಲು ಆಗ ಶಕುಂತಳೆಯು ತಂದೆಯಾದ ಕಣ್ವಮುನೀಶ್ವರನಿಗೆ ನಮಸ್ಕಾರವನ್ನು ಮಾಡಿ ಕೈ ಮುಗಿದು—ಎಲೈ ಮಹಾನುಭಾವನೇ! ನಾನು ತಂದೆ ಎಂಬ ಸಲಿಗೆ ಯಿಂದ ಈ ವರೆಗೂ ಕಲಿತೂ ಕಲಿಯದೆ ಮಾಡಿದ ಕಾರ್ಯಗಳಿಂದಲೂ ಅರಿತೂ ಅರಿ ಯದೆ ಆಡಿದ ಮಾತುಗಳಿಂದಲೂ ಉಂಟಾದ ಅಪರಾಧವನ್ನು ಪುತ್ರಿವಾತ್ಸಲ್ಯದಿಂದ ನೀನು ಕ್ಷಮಿಸಬೇಕೆನಲು ಆತನು ಆ ಮಗಳಲ್ಲಿರುವ ಕೃಪಾವಿಶೇಷದಿಂದ ಒದಲು ಮಾತನಾಡುವುದಕ್ಕೆ ತೀರದೆ ತಲೆಯನ್ನು ಬೊಗ್ಗಿಸಿಕೊಂಡು ಲೌಕಿಕ ಮನುಷ್ಯನ ಹಾಗೆ ಕಣ್ಣಿನಲ್ಲಿ ನೀರು ತುಂಬಿ ಕೆಲವು ಹೊತ್ತಿನ ಮೇಲೆ ಧೈರ್ಯವನ್ನು ತಂದು ಕೊಂಡು ಉದಕಪಾನಗಳಿಂದ ದಿನಗಳನ್ನು ತಳ್ಳುತ್ತಿರುವವರೂ ವಾಯುಭಕ್ಷಣೆ ಯಿಂದ ಕಾಲಕ್ಷೇಪವನ್ನು ಮಾಡುವಂಥಾವರೂ ಹಣ್ಣೆಲೆಗಳನ್ನು ಭಕ್ಷಿಸುವಂಥಾ ವರೂ ಕಂದಮೂಲಾದಿಗಳಿಂದ ತೃಪ್ತಿ ಪಡುವಂಥಾವರೂ ನಾರುಸೀರೆಗಳನ್ನು ಉಟ್ಟು ಕೃಷ್ಣಾಜಿನವನ್ನು ಉತ್ತರೀಯವಾಗಿ ಮಾಡಿಕೊಂಡಿರುವಂಥಾವರೂ ತಪ ಸ್ಸಿನಿಂದ ಕೃಶವಾಗಿನರಗಳು ಹೊರಟು ಇರುವಂಥಾವರೂ ವ್ರತನಿಷ್ಠರಾಗಿರು ವಂಥಾವರೂ ಜಟಾಧಾರಿಗಳಾಗಿರುವಂಥಾವರೂ ಜುಟ್ಟಿಲ್ಲದೆ ಇರುವಂಥಾವರೂ ಇವರೇ ಮೊದಲಾದ ಮಹಾ ಮುನೀಶ್ವರರನ್ನು ಕರೆದು—ಎಲೈ, ಮಹಾನುಭಾ ವರುಗಳಿರಾ! ನಮ್ಮ ಶಕುಂತಳೆಯು ಇಲ್ಲಿಯೇ ಹುಟ್ಟಿ ಇಲ್ಲಿಯೇ ಬೆಳೆದು ಯಾವಾ ಗಲೂ ನಾನೇ ಸಂರಕ್ಷಿಸಿದುದರಿಂದ ಇವಳು ಮತ್ತೇನನ್ನೂ ಅರಿತವಳಲ್ಲದೆ ಇರುವಳು ಆದುದರಿಂದ ಮಾರ್ಗದಲ್ಲಿ ಶ್ರಮವು ತೋರದೆ ಇರುವಹಾಗೆ ಇಲ್ಲಿಗೆ ಎರಡುಗಾವುದ ದಾರಿಯಿಂದ ಆಚೆಗೆ ಇರುವ ಪ್ರತಿಷ್ಠಾನಗರಕ್ಕೆ ಚಿಕ್ಕಚಿಕ್ಕ ಪಯಣಗಳಿಂದ ಕರ ಕೊಂಡು ಹೋಗಬೇಕು. ಸರ್ವಸಂಪತ್ತುಗಳಿಂದಲೂ ತುಂಬಿರುವ ಗಂಗಾ ಯಮುನಾ ಸಂಗಮದಲ್ಲಿ ತೋರುವ ಪ್ರತಿಷ್ಠಪಟ್ಟಣದಲ್ಲಿ ಸರ್ವದಮನನಿಗೆ ಮುತ್ತಪ್ಪನಾದ ಪುರೂ

ರವಸ್ಸಿನ ಅರಮನೆಯ ಪರ್ಯಂತರಕ್ಕೂ ಹೋಗಿ ಅಲ್ಲಿ ಸ್ನಾನವನ್ನು ಮಾಡಿ ಮಂಗಳಗಳ ನ್ನಾಚರಿಸಿ ಕಂದಮೂಲಫಲಗಳನ್ನು ಭಕ್ಷಿಸಿ ಅಲ್ಲಿಂದ ಹೊರಟು ಬನ್ನಿರಿ. ಚುರುಕಾಗಿ ಪಯಣವನ್ನು ನಡೆಯಬೇಡಿರಿ. ಮಾರ್ಗದಲ್ಲಿ ಶ್ರಮ ತಟ್ಟೀತು ಎಂದು ನುಡಿಯಲು ಆ ಋಷಿಗಳು—ಹಾಗೇ ಆಗಲಿ ಎಂದು ಶಕುಂತಳೆಯನ್ನು ಮಗನು ಸಹಿತವಾಗಿ ಕರ ಕೊಂಡು ದುಷ್ಯಂತನ ಪಟ್ಟಣವನ್ನು ಕುರಿತು ನಡೆಯುವ ಸಮಯದಲ್ಲಿ ವನಗಳನ್ನೂ ನದಿಗಳನ್ನೂ ಪರ್ವತಗಳನ್ನೂ ತೊರೆಗಳನ್ನೂ ಗಿರಿಗಳನ್ನೂ ಗುಹೆಗಳನ್ನೂ ಪುಣ್ಯಾಶ್ರಮ ಗಳನ್ನೂ ನೋಡುತ್ತಾ ಅಲ್ಲಲ್ಲಿ ನಿಂತು ಶ್ರಮವನ್ನು ಪರಿಹರಿಸಿಕೊಂಡು ಮೆಲ್ಲಮೆಲ್ಲನೆ ಒಂದು ದಿವಸ ಮಧ್ಯಾಹ್ನದ ಸಮಯದಲ್ಲಿ ಪ್ರತಿಷ್ಠಾ ನಗರವನ್ನು ಸೇರಿ ಆ ಪಟ್ಟಣದ ಸಮೀಪದಲ್ಲಿರುವ ಉದ್ಯಾನವನಗಳನ್ನೂ ಪದ್ಮಶೋಭಿತಗಳಾದ ತಟಾಕಗಳನ್ನೂ ನೋ ಡುತ್ತಾ ಪೂರ್ವದಲ್ಲಿ ದೇವೇಂದ್ರನು ಪುರೂರವ ಮಹಾರಾಜನಿಗೋಸ್ಕರ ನಿರ್ಮಿಸಿ ಕೊಟ್ಟಿರುವುದಾದುದರಿಂದ ಸಕಲ ಸೌಭಾಗ್ಯದಿಂದ ಕೂಡಿದುದಾಗಿ ಅತ್ಯುನ್ನತವಾದ ಅಲಂಗಗಳೂ ಯಾವಾಗಲೂ ಒಳವು ಕಾಣಿಸದೆ ಇರುವ ಅಗಳುಗಳೂ ನಿಚಿತ್ರವಾದ ಕೊತ್ತಲಗಳೂ ಪಿರಂಗಿಗಳೂ ಜಂಜಾಲುಗಳೂ ಮಕರಡಿಬ್ಬಿ ಮೊದಲಾದ ಯಂತ್ರವಿಶೇ ಷಗಳೂ ಉಳ್ಳ ಕೋಟೆಗಳೂ ಉಪ್ಪರಿಗೆಗಳೂ ಸೆಜ್ಜೆಯ ಮನೆಗಳೂ ಪಣ್ಯವೀಧಿಗಳೂ ಜಗುಲಿಗಳೂ ಹಜಾರಗಳೂ ಮಂಟಪಗಳೂ ಅರವಟ್ಟಿಗೆಗಳೂ ಸಕಲ ಜನ ಮನೋ ಹರವಾಗಿ ಅತಿವಿಶಾಲವಾದ ರಾಜಮಾರ್ಗಗಳೂ ಕೈಲಾಸಶಿಖರಗಳೋಪಾದಿಯಲ್ಲಿ ಅತಿ ಶುಭ್ರವಾಗಿ ಅತ್ಯುನ್ನತವಾದ ಊರುಬಾಗಿಲುಗಳೂ ವ್ಯಾಘ್ರಮುಖಗಳೂ ಮೇಲು ಮುದ್ದೆಗಳೂ ಹೆಬ್ಬಾಗಿಲುಗಳೂ ಉಳ್ಳುದಾಗಿ ಸ್ವರ್ಗದಂತಿರುವ ಪಟ್ಟಣವನ್ನು ಪ್ರವೇ ಶಿಸಿ ತಮ್ಮತಮ್ಮ ಧರ್ಮಗಳನ್ನೂ ತಪ್ಪದೆ ಅಗ್ನಿಹೋತ್ರಗಳನ್ನೂ ಯಾಗಗಳನ್ನೂ ಮಾ ಡುತ್ತಾ ಧನಧಾನ್ಯಸಂಪನ್ನರೂ ರತ್ನಾಲಂಕಾರಭೂಷಿತರೂ ದಾನಶೀಲರೂ ದಯಾಪ ರರೂ ಆಗಿ ಅಕಾರ್ಯಕ್ಕೆ ಹೋಗದೆ ಪಾಪಗಳಿಗೆ ಭಯಪಟ್ಟು ಪುಣ್ಯಲೋಕಗಳು ಬೇಕೆಂಬ ಮನಸ್ಸಿನಿಂದ ಸದಾಚಾರಸಂಪನ್ನರಾಗಿರುವ ನಾನಾ ಜನಗಳನ್ನು ಕಾಣುತ್ತಾ ಸಂತೋಷಪಡುತ್ತಾ ಬರುತ್ತಿದ್ದರು.

ಆ ಸಮಯದಲ್ಲಿ ದುಷ್ಯಂತ ಮಹಾರಾಜನು ಅಮರಾವತಿಯಂತಿರುವ ಪ್ರತಿ ಷ್ಠಾನಗರದ ಮಧ್ಯಪ್ರದೇಶದಲ್ಲಿ ದಿವ್ಯರತ್ನಮಯವಾದ ದೇವೇಂದ್ರನ ಮನೆಯಹಾಗೆ ಒಪ್ಪುತ್ತಿರುವ ಅರಮನೆಯಲ್ಲಿ ಮಣಿಗಣಖಚಿತವಾದ ಒಂದು ಓಲಗದ ಹಜಾರದಲ್ಲಿ ರುವ ಉನ್ನತವಾದ ಸಿಂಹಾಸನದಲ್ಲಿ ಕುಳಿತುಕೊಂಡು ಸರ್ವಾಲಂಕಾರಭೂಷಿತನಾಗಿ ಬ್ರಾಹ್ಮಣರು ಮೊದಲಾದ ಸಕಲ ವರ್ಣದವರೂ ಮಂತ್ರಿಜನಗಳೂ ಮಿಕ್ಕಾದವರೂ ಓಲಗಿಸುತ್ತಿರಲು ಸೂತಮಾಗಧರು ಜಯ ಜಯಧ್ವನಿಗಳಿಂದ ಹೊಗಳುತ್ತಿರಲು ಕಾರ್ಯಾರ್ಥಿಗಳಾಗಿ ಬಂದ ದೇಶದೇಶದನಿಯೋಗಿಗಳ ಕಾರ್ಯಗಳನ್ನು ವಿಚಾರಿ ಸುತ್ತಾ ಒಡ್ಡೋಲಗದಲ್ಲಿ ಇದ್ದು ಬೇರೆಬೇರೆಯಾಗಿ ಅವರವರು ತಮಗೆ ಅಪ್ಪಣೆ ಯನ್ನು ತೆಗೆದುಕೊಂಡು ಮನೆಗಳಿಗೆ ಹೋಗಲು ಮಿತಜನಗಳೊಡನೆ ಇಷ್ಟಾಲಾ ಪಗಳನ್ನು ಮಾಡುತ್ತಿದ್ದನು.

ಇತ್ತಲಾ ಮುನೀಂದ್ರರು ಶಕುಂತಳೆಯನ್ನು ನೋಡಿ—ಒಳ್ಳೆಯ ಶಕುನಗಳು ಆಗುತ್ತವೆ. ಈ ಹೊತ್ತು ನೀನು ಮಹಾರಾಜನಿಗೆ ಪಟ್ಟದ ರಾಣಿಯಾಗುತ್ತೀ. ನಿನ್ನ ಮಗನಿಗೆ ಯುವರಾಜಪಟ್ಟಾಭಿಷೇಕವಾಗುತ್ತದೆ ಎಂದು ಹೇಳುತ್ತಾ ಅವಳನ್ನು ಕರ ಕೊಂಡು ನಾನಾ ಪ್ರಕಾರವಾದ ಧ್ವನಿಗಳಿಂದ ಒಪ್ಪುತ್ತಿರುವ ಆ ಪಟ್ಟಣದ ರಾಜ ವೀಧಿಯಲ್ಲಿ ಬರುತ್ತಿರುವಾಗ ಆ ಕುಮಾರನ ರೂಪರೇಖಾತಿಶಯಗಳನ್ನು ಕಂಡ ಪೌರ ಜನರು ಆಶ್ಚರ್ಯಪಟ್ಟು ಒಬ್ಬರೊಬ್ಬರನ್ನು ಕರೆಯುತ್ತಾ ಎರಡನೆಯ ಮಹಾಲಕ್ಷ್ಮಿ ಯಂತೆಯೂ ಜಯಂತನೊಡನೆ ಬರುವ ಶಚೀದೇವಿಯಂತೆಯೂ ಮುಂದೆ ಬರುವ ಈ ಅಂಗನಾಮಣಿಯು ಯಾರೋ ತಿಳಿಯದು ಎಂದು ಮಹಾ ಋಷಿಗಳ ಸಮೀಪಕ್ಕೆ ಬಂದು—ಎಲೈ, ಮಹಾ ಋಷಿಗಳಿರಾ! ನಿಮಗೆ ನಮಸ್ಕಾರ ಮಾಡುತ್ತೇವೆ. ಇಂಥಾ ಪರಮಪವಿತ್ರರಾದ ನಿಮ್ಮನ್ನು ಕಂಡುದರಿಂದ ನಮ್ಮ ಜನ್ಮಗಳು ಸಫಲವಾ ದವು ಎಂದು ಸ್ತುತಿಸಿದರು. ಅವರಲ್ಲಿ ಕೆಲವರು ಆ ಋಷಿಗಳ ಸಂಗಡಲೇ ಹೋಗಿ ಕುಮಾರಸ್ವಾಮಿಯ ಹಾಗೆ ಇರುವ ಆ ಕುಮಾರನನ್ನು ಕಂಡು ಸಂತೋಷಪಟ್ಟರು. ಆ ಸರ್ವದಮನನು ಎಂದೂ ಕಾಣದಿರುವ ಆ ಪಟ್ಟಣದ ಸೌಭಾಗ್ಯಾತಿಶಯವನ್ನು ನೋಡಿ ತಾನು ದೇವೇಂದ್ರನ ಪಟ್ಟಣಕ್ಕೆ ಬಂದೆನೋ ಎಂದು ಸಂತೋಷಪಟ್ಟನು. ಮತ್ತು ಆ ಪಟ್ಟಣದಲ್ಲಿರುದ ಕೆಲವರು ಮೂಢರು ಕೃಷ್ಣಾಜಿನಗಳನ್ನು ಧರಿಸಿ ತಪ ಸ್ಸಿನಿಂದ ಕೃಶವಾದ ಶರೀರವುಳ್ಳವರಾಗಿ ಎದ್ದಿರುವ ನರಗಳೊಡನೆ ಕೂಡಿ ಹೊಂಬ ಣ್ಣವುಳ್ಳ ನೇತ್ರಗಳನ್ನೂ ಜಡೆಗಳನ್ನೂ ಉದ್ದವಾದ ಹಲ್ಲುಗಳನ್ನೂ ಬೆನ್ನುಹತ್ತಿರುವ ಹೊಟ್ಟೆಗಳನ್ನೂ ಬಿಟ್ಟ ಮಂಡೆಗಳನ್ನೂ ಎತ್ತಿದ ಕೈಗಳನ್ನೂ ಧರಿಸಿ ವಿಕಾರವಾದ ವೇಷಗಳೊಡನೆ ಕೂಡಿ ಇರುವ ಆ ಮುನೀಶ್ವರರನ್ನು ಕಂಡು—ಇದೇನು ಇವರು ಹೀಗಿರುವರು! ಎಂದು ಹಾಸ್ಯ ಮಾಡಿದರು ಅಂಥಾ ದುರ್ಜನರ ಮಾತುಗಳನ್ನು ಕೇಳಿ ಮುನಿಜನಗಳು—ಸಕಲವನ್ನು ಬಿಟ್ಟ ನಾವು ಏತಕ್ಕೆ ಪಟ್ಟಣಕ್ಕೆ ಬರಬೇಕು?. ಎಂದು ಹೇಳಿ ಆರಮನೆಯನ್ನು ಪ್ರವೇಶಿಸದೆ ಹಿಂದಿರುಗಿ ಗಂಗಾಯಮುನಾ ಸಂಗ ಮಸ್ಥಳಕ್ಕೆ ಬಂದರು

ಆ ಮೇಲೆ ಶಕುಂತಳೆಯು ಮಗನೊಡನೆ ಪಟ್ಟಣದ ಬೀದಿಯಲ್ಲಿ ಹೋಗುತ್ತಿ ರುವಾಗ ಕೆಲವು ಜನಗಳು ಅವರನ್ನು ಕಂಡು—ಈ ಸ್ತ್ರೀರತ್ನವು ಯಾರೋ ತಿಳಿಯ ಕೂಡದು. ಹಂಸೆಯ ಹಾಗೆ ನಡೆಯೂ ಕೋಗಿಲೆಯ ಹಾಗೆ ಧ್ವನಿಯೂ ಚಂದ್ರನ ಹಾಗೆ ಮುಖವೂ ಮೊಲ್ಲೆಯ ಮೊಗ್ಗಿಗೆ ಸಮಾನವಾದ ನಗೆಯ ಕಾಂತಿಯೂ ತಾವ ರೆಯ ಹೂವಿನ ಒಳಗಣ ಎಸಳುಗಳ ಹಾಗೆ ಮೃದುವಾಗಿರುವ ಚರ್ಮವೂ ಕಮಲದ ಳದ ಹಾಗೆ ಇರುವ ನೇತ್ರಗಳೂ ಕುಂದಣದ ಹಾಗಿರುವ ಶರೀರದ ಬಣ್ಣವೂ ಹಿಡಿ ಯಲ್ಲಿ ಅಡಕವಾಗುವ ನಡುವೂ ವಕ್ರವಾಗಿಯೂ ಕಪ್ಪಾಗಿಯೂ ಹಿಮ್ಮಡಿಯಲ್ಲಿ ಬೀಳುವ ಕುರುಳುಗಳೂ ಚಿಗುರಿನ ಹಾಗೆ ಮೃದುವಾದ ಪಾದಗಳೂ ಲೋಕೋತ್ತರ ವಾದ ಸಕಲ ಶರೀರಲಕ್ಷಣಗಳೂ ಉಳ್ಳವಳಾಗಿ ಕೈಯಲ್ಲಿ ಕಮಲಮಾತ್ರವಿಲ್ಲದೆ ಇರುವ ಮಹಾಲಕ್ಷ್ಮಿಯ ಹಾಗೆ ತೋರುವಂಥ ಈಕೆಯು ಏನೋ ಒಂದು ಕಾರಣ

ದಿಂದ ಸ್ವರ್ಗವನ್ನು ಬಿಟ್ಟು ಭೂಲೋಕಕ್ಕೆ ಬಂದ ದೇವಕನ್ಯೆಯಾಗಿರಬೇಕೆಂದು ಎಣಿಸಿ ಹಾಗೆ ಒಬ್ಬರಿಗೊಬ್ಬರು ಹೇಳಿಕೊಂಡರು. ಮತ್ತು ಆ ಕುಮಾರನನ್ನು ಕಂಡು ಸಿಂಹದ ಸೊಂಟವೂ ಕೋರೆಯ ಹಲ್ಲುಗಳೂ ಮುಡುಹುಗಳೂ ಎದೆಯೂ ಬಲವೂ ಗಮನವೂ ಉಳ್ಳ ಸ್ವಭಾವ ರಕ್ತವಾದ ಜೆಂದುಟಿಯು ದುಂದುಭಿಧ್ವನಿಯಂತೆ ಧ್ವನಿಯೂ ಇವೇ ಮೊದಲಾದ ರಾಜಲಕ್ಷಣಗಳುಳ್ಳ ಈ ಕುಮಾರಕನಲ್ಲಿ ರಾಜಲಕ್ಷ್ಮಿಯು ತೋರುತ್ತಿದೆ. ಈ ಬಾಲಕನು ರೂಪ ಆಕಾರ ಶರೀರಕಾಂತಿ ವಿಶೇಷಗಳಿಂದ ನಮ್ಮ ದುಷ್ಯಂತರಾಜನನ್ನು ಹೋಲುತ್ತಿದ್ದಾನೆ. ಈತನು ಯಾರ ಕುಮಾರನೋ? ಎಂದು ತಮ್ಮೊಳಗೆ ಹೇಳಿಕೊಳ್ಳುತ್ತಿದ್ದರು.

ಹೀಗೆ ಶಕುಂತಳೆಯು ಪ್ರೇಮದಿಂದ ನುಡಿಯುವ ಪಟ್ಟಣದ ಜನರ ಪ್ರಿಯ ವಾಕ್ಯಗಳನ್ನು ಕೇಳುತ್ತಾ ಪುತ್ರಸಮೇತಳಾಗಿ ಅರಮನೆಯ ಬಾಗಿಲೆಡೆಗೆ ಹೋಗಿ ಕಾರ್ಯ ಗೌರವದಿಂದ ಮನಸ್ಸಿನಲ್ಲಿ ಚಿಂತೆ ಹೆಚ್ಚಲು ನಾಚಿಕೆಯಿಂದ ಮುಖವನ್ನು ಬೊಗ್ಗಿಸಿಕೊಂಡು ತಾನು ದಯೆಯಿಲ್ಲದ ಅರಸಿನ ಒಳಿಗೆ ಹೋಗಿ ನಿರ್ನಿಮಿತ್ತವಾಗಿ ಏನು ಮಾತಾಡಬೇಕೆಂದು ಚಿಂತಿಸುತ್ತಾ ಹಜಾರದಲ್ಲಿ ನಿಂತು ತಾನು ಬಂದಿರುವ ಸಮಾಚಾರವನ್ನು ದ್ವಾರಪಾಲಕರಿಂದ ಅರಸಿಗೆ ಅರಿಕೆ ಮಾಡಿಸಿ ಆತನ ಅಪ್ಪಣೆಯಿಂದ ಸೂರ್ಯನಿಗೆ ಸಮಾನವಾದ ಕಾಂತಿಯುಳ್ಳ ಕುಮಾರನೊಡನೆ ಅರಸನ ಸನ್ನಿಧಿಗೆ ಹೋಗಿ ಎರಡನೆಯ ದೇವೇಂದ್ರನೋಪಾದಿಯಲ್ಲಿ ಸಿಂಹಾಸನದ ಮೇಲೆ ಕುಳಿತಿರುವ ರಾಯನನ್ನು ಕಂಡು ಇಷ್ಟುಕಾಲಕ್ಕೆ ಈ ರಾಯನ ದರ್ಶನವಾಯಿತು ಎಂದು ಸಂತೋಷಪಡುತ್ತಾ ತನ್ನ ಮಗನನ್ನು ಕುರಿತು—ಎಲೈ! ಧೃಢವ್ರತನಾದ ನಿನ್ನ ತಂದೆಗೆ ನಮಸ್ಕರಿಸು ಎಂದು ಕಟ್ಟುಮಾಡಿ ನಾಚಿಕೆಯಿಂದ ತಲೆಯನ್ನು ಬೊಗ್ಗಿಸಿಕೊಂಡು ಒಂದು ಕಂಬದ ಮರೆಯಲ್ಲಿ ನಿಂತುಕೊಂಡಳು. ಆ ಬಾಲಕನು ತನ್ನ ತಂದೆಯಾದ ಮಹಾರಾಜನಿಗೆ ನಮಸ್ಕಾರವನ್ನು ಮಾಡಿ ಕೈಕಟ್ಟಿಕೊಂಡು ನಿಂತಿರಲು ದುಷ್ಯಂತರಾಜನು ಶಕುಂತಳೆಯನ್ನು ನೋಡಿ—ಮಗನೊಡನೆ ನೀನು ಇಲ್ಲಿಗೆ ಬಂದ ಕಾರ್ಯವೇನು? ಹೇಳಿದರೆ ಆ ಕಾರ್ಯವನ್ನು ನಾನು ಮಾಡಿಕೊಟ್ಟೇನು ಎನಲು ಶಕುಂತಳೆಯು—ಎಲೈ, ಮಹಾರಾಜನೇ! ಪೂರ್ವದಲ್ಲಿ ನೀನು ಬೇಟೆಯ ವಿನೋದದಿಂದ ವನದಲ್ಲಿ ತಿರುಗುತ್ತಾ ಕಣ್ವಾಶ್ರಮಕ್ಕೆ ಬಂದ ಸಮಯದಲ್ಲಿ ನನ್ನಲ್ಲಿಟ್ಟ ಅನುಗ್ರಹದಿಂದ ಮದುವೆ ಮಾಡಿಕೊಳ್ಳುವಾಗ ಏನು ಸಂಕೇತವನ್ನು ಮಾಡಿದ್ದೆಯೋ ಆ ಪ್ರತಿಜ್ಞೆಯನ್ನು ಸ್ಮರಿಸಿ ಆ ಪ್ರಕಾರ ನಡಿಸು. ಇಗೋ! ಈತನು ನಿನ್ನಿಂದ ನನ್ನಲ್ಲಿ ಹುಟ್ಟಿದ ಮಗನು. ಈತನಿಗೆ ಯುವರಾಜ ಪಟ್ಟವನ್ನು ಕಟ್ಟಬೇಕೆನಲು ದುಷ್ಯಂತನು ಆ ಮಾತನ್ನು ಕೇಳಿ ಒಳಗೆ ಸಂತೋಷಪಟ್ಟರೂ ಕಾರಣಾಂತರದಿಂದ ಅರಿಯದವನಂತೆ ಶಕುಂತಳೆಯನ್ನು ನೋಡಿ—ನಾನು ನಿನ್ನನ್ನು ಎಂದೂ ನೋಡಿದವನೂ ಅಲ್ಲ. ನುದುವೆಯಾದವನೂ ಅಲ್ಲ. ಹೀಗೆ ಧರ್ಮವನ್ನು ತಪ್ಪಿ ಪರಿಗ್ರಹಿಸುವ ಸ್ವಭಾವವೂ ನನ್ನಲ್ಲಿಲ್ಲ. ಇಂಥಾ ವ್ಯರ್ಥವಾದ ಮಾತುಗಳನ್ನು ನುಡಿಯಬೇಡ. ಸುಮ್ಮನೆ ಇರಬೇಕಾದರೆ ಇರು. ಅಲ್ಲದೆ ಹೋಗಬೇಕಾದರೆ ಹೋಗು ಎನಲು ಶಕುಂತಳೆಯು ಆ ರಾಯನ ಮಾತುಗಳನ್ನು ಕೇಳಿ ಆಧಿ

ಕವಾದ ಲಜ್ಜೆಯಿಂದಲೂ ದುಃಖದಿಂದಲೂ ಒಂದುಗಳಿಗೆ ಮೈಮರೆತು ತಿರಿಗಿ ಧೈರ್ಯವನ್ನು ಹೊಂದಿ ಕೋಪಾವೇಶದಿಂದ ಕೆಂಪಾದ ಕಣ್ಣುಗಳುಳ್ಳವಳಾಗಿ ತುಟಿಗಳನ್ನಲ್ಲಾಡಿಸುತ್ತಾ ಆ ರಾಯನನ್ನು ವಕ್ರದೃಷ್ಟಿಗಳಿಂದ ಬಿರಬಿರನೇ ನೋಡುತ್ತಾ ಕೋಪದಿಂದ ಹುಟ್ಟಿರುವ ತೇಜೋವಿಶೇಷವನ್ನು ತನ್ನ ಧೈರ್ಯದಿಂದ ತಡೆದು ಸ್ವಲ್ಪ ಹೊತ್ತು ಆಲೋಚಿಸಿ ತಿರಿಗಿ ರಾಯನನ್ನು ನೋಡಿ—ಎಲೈ ರಾಯನೇ! ನೀನು ತಿಳಿದರೂ ತಿಳಿಯದವನ ಹಾಗೆ ಯಾಕೆ ಹೀಗೆ ಮಾತಾಡುತ್ತಿದ್ದೀ? ಇದಕ್ಕೆ ಸಾಕ್ಷಿಯಾದ ನಿನ್ನ ಮನಸ್ಸನ್ನು ಯಾಕೆ ವಂಚಿಸುತ್ತೀ? ಸಕಲ ಧರ್ಮಗಳನ್ನೂ ತಿಳಿದಿರುವಂಥಾ ನೀನು ಎತಕ್ಕೆ ಮೊದಲು ಹೇಳಿ ಈಗ ಹುಸಿಯುತ್ತೀ? ಪತಿವ್ರತೆಯಾದ ನನ್ನನ್ನು ಕಾಮುಕಿಯಾಗಿ ತನಗೆ ತಾನೇ ಬಯಸಿ ಬಂದಳು ಎಂದು ತಿಳುದುಕೊಳ್ಳಬೇಡ. ಬಹುಮಾನಪೂರ್ವಕವಾಗಿ ರಕ್ಷಿಸತಕ್ಕಂಥಾ ನನ್ನನ್ನು ಬಹುಮಾನಪಡಿಸದೆ ಉಪೇಕ್ಷೆಯನ್ನು ಮಾಡಲಾಗದು. ನೀನು ತುಚ್ಛಮನುಷ್ಯನ ಹಾಗೆ ಈ ತುಂಬಿದ ಸಭೆಯಲ್ಲಿ ಇಂಥಾ ನೀಚ ಮಾತುಗಳನ್ನು ಆಡುವುದು ಉಚಿತವಲ್ಲ. ಏನೇಕಿಗಳಾದವರು ಕೋಪಬಂದರೂ ತಮ್ಮ ಹೆಂಡತಿಯರನ್ನು ಧಿಕ್ಕರಿಸಬಾರದು. ತಮ್ಮ ಹೆಂಡತಿಯರನ್ನೂ ಮಕ್ಕಳನ್ನೂ ತಬ್ಬಿಕೊಂಡು ಅತ್ಯಂತ ಸಂತೋಷಪಡಬೇಕು. ಎಂಥಾವರಾಗಲಿ ಮಹಾ ಬ್ರಹ್ಮಜ್ಞಾನಿಗಳಾದವರೂ ಸ್ತ್ರೀಯರಲ್ಲಿಯೇ ಹುಟ್ಟಬೇಕು. ಅದುದರಿಂದ ಸ್ತ್ರೀಯರು ಪ್ರಸಿದ್ಧರಾಗಿರುವರು. ಲೋಕದಲ್ಲಿ ಮಗನಾಗಿರುವವನು ಧೂಳಿಗಳಲ್ಲಿ ಓಡ್ಯಾಡಿ ಮುದ್ದು ಮುದ್ದಾಗಿ ಬಂದು ತಂದೆಯ ಶರೀರವನ್ನು ತಬ್ಬಿಕೊಂಡರೆ ಅದರಿಂದುಂಟಾಗುವ ಸುಖಕ್ಕೆ ಸ್ವರ್ಗಲೋಕದ ಸುಖವಾದರೂ ಸಮಾನವಾಗಲಾರದು. ಹಾಗೆ ಇರುವಲ್ಲಿ ನಿನ್ನಂಥಾ ಮಹಾ ಪುರುಷನು ತಂದೆ ಎಂದು ನೆರೆನಂಬಿ ತನಗೆ ತಾನೇ ಬಂದ ದಿವ್ಯಕುಮಾರನನ್ನು ಆದರಿಸದೆ ಇರಬಹುದೇ? ಇರುವೆ ಮೊದಲಾದ ತಿರ್ಯಗ್ಜಾತಿಜಂತುಗಳೂ ಕೂಡ ತಮ್ಮ ತಮ್ಮ ಮೊಟ್ಟೆಗಳನ್ನು ಬಿಡದೆ ರಕ್ಷಿಸುತ್ತವೆ. ಕಾಗೆಗಳು ಕೋಗಿಲೆಯ ಮೊಟ್ಟೆಗಳನ್ನು, ತಮ್ಮ ಮೊಟ್ಟೆಗಳೆಂದು ಪ್ರೀತಿಯಿಂದ ಕಾಪಾಡುತ್ತವೆ. ಹೀಗಿರುವಲ್ಲಿ ನಿನ್ನಂಥಾ ಪುರುಷನು ಹೊಟ್ಟೆಯಲ್ಲಿ ಹುಟ್ಟಿದ ವಂಶಾಲಂಕಾರವಾಗಿರುವ ಪುತ್ರರತ್ನವನ್ನು ಉಪೇಕ್ಷೆ ಮಾಡಬಹುದೇ? ಇದಲ್ಲದೆ ನೀನು ಮದುವೆಯಾದ ನನ್ನಲ್ಲಿ ಏನು ಅಪರಾಧವನ್ನು ಕಂಡು ಬಿಡುತ್ತಿದ್ದೀ? ಚಿಕ್ಕವಳಾಗಿರುವಾಗ ತಾಯಿತಂದೆಗಳನ್ನು ತೊರೆದು ಬಂದೆನು. ಈಗ ನೀನು ನನ್ನನ್ನು ತೊರೆದರೆ ನನಗೆ ಗತಿ ಯಾರು? ಒಂದು ಪಕ್ಷದಲ್ಲಿ ನಾನಾದರೂ ನನ್ನ ತಂದೆಯ ಆಶ್ರಮಕ್ಕೆ ಹೋದೇನು. ಈ ಬಾಲಕನಾದ ಮಗನನ್ನು ಬಿಡುವುದು ಹೇಗೆ? ಎಂದು ನುಡಿಯಲು ದುಷ್ಯಂತನು ಆ ವಾಕ್ಯವನ್ನು ಕೇಳಿ ಹೀಗಂದನು—ಕೇಳೈ ಶಕುಂತಳೆಯೇ! ನಿನ್ನನ್ನೂ ನಿನ್ನ ಮಗನನ್ನೂ ನಾನು ಗುರುತರಿಯೆನು. ಸಟೆ ಮಾತುಗಳನ್ನಾಡುವ ಸ್ತ್ರೀಯರನ್ನು ಯಾರು ನಂಬುವರು? ಇಂಥ ಸುಳ್ಳು ಮಾತುಗಳನ್ನು ನಾಚಿಕೆಯಿಲ್ಲದೆ ಈ ರಾಜಸಭೆಯಲ್ಲಿ ಏನೆಂದು ಆಡಿದೆ? ಎಲಾ ದುಷ್ಟಸ್ತ್ರೀಯೇ! ಇಂಥ ಅಸತ್ಯವಾದ ಮಾತುಗಳನ್ನು ಈ ಸಭೆಯಲ್ಲಿರುವ ಜನರೂ ನಾನೂ ಕೇಳಲಾರೆವು. ಎಲ್ಲಿಗಾದರೂ ಹೋಗು. ಸುಮ್ಮನೆ ಹೋಗುವುದಕ್ಕೆ ಮನಸ್ಸು ಇಲ್ಲದಿದ್ದರೆ

ಚಿನ್ನ ಬೆಳ್ಳಿ ವಸ್ತ್ರಗಳೂ ಆಭರಣಗಳೂ ಮುತ್ತಿನ ಹಾರಗಳೂ ಹವಳಗಳೂ ಇವು ಮೊದ
ಲಾದ ವಸ್ತುಗಳಲ್ಲಿ ಬೇಕಾದುದನ್ನು ಕೊಡುತ್ತೇನೆ. ತೆಗೆದುಕೊಂಡು ತಡಮಾಡದೆ
ನಡೆ ! ನಿನ್ನನ್ನು ನೋಡಲಾರೆನು ! ಬೇಗ ಹೊರಟು ಹೋಗು ! ಎಂದು ನುಡಿಯಲು
ಶಕುಂತಳೆಯು—ಎಲೈ, ಮಹಾರಾಜನೆ ! ನಿನಗೂ ನನಗೂ ಸಾಸುವೆಕಾಳಿಗೂ
ಮೇರುಪರ್ವತಕ್ಕೂ ಇರುವಷ್ಟು ಹೆಚ್ಚುಕಡಿಮೆ ಇದೆ. ಹೇಗಂದರೆ ನಾನು ದೇವ
ಕನ್ಯಕೆಯು. ನೀನು ಮನುಷ್ಯನು. ಮತ್ತು ಸತ್ಯಕ್ಕೂ ಮತ್ತು ಅಸತ್ಯಕ್ಕೂ ನಿನ್ನ
ಮನಸ್ಸೇಕಾರಣವು ; ನಾನು ಎಷ್ಟು ಹೇಳಿದರೂ ನನ್ನ ವಾಕ್ಯವನ್ನು ಸಟೆ ಎಂದು ದೃಢ
ವಾಗಿ ನಂಬಿರುವ ತುಚ್ಛಮನುಷ್ಯನಾದ ನಿನ್ನಿಂದ ನನಗೇನಾಗಬೇಕು ? ಇಂಥ
ಸಭೆಯಲ್ಲಿ ನನ್ನನ್ನು ಅವಮಾನ ಮಾಡಿದುದರಿಂದ ನಾನು ನಿನ್ನ ಬಳಿಯಲ್ಲಿ ಆರೆಗಳಿಗೆ
ಯೂ ನಿಲ್ಲಲಾರೆನು. ನಾನಾದರೋ ಹೋಗುತ್ತೇನೆ. ಇವನು ಖಂಡಿತವಾಗಿಯೂ
ನಿನ್ನ ಮಗನು. ಲೋಕದಲ್ಲಿ ನಡೆ ನುಡಿ ಧ್ವನಿ ಬುದ್ಧಿ ಬಲ ಆಚಾರ ವಿದ್ಯೆ ಪರಾಕ್ರಮ
ಧೈರ್ಯ ಆಕಾರ ಮನಸ್ಸು ಸುಳಿಗಳು ಮೊದಲಾದ ಲಕ್ಷಣಗಳು ಇಬ್ಬರಿಗೂ ಒಂದೇ
ಪ್ರಕಾರವಾಗಿ ಇದ್ದರೆ ಅವರೇ ತಂದೆ ಮಕ್ಕಳೆನ್ನಿಸಿಕೊಳ್ಳುವರು. ಆದುದರಿಂದ ಈ
ಬಾಲಕನು ಸಕಲ ಲಕ್ಷಣಗಳಲ್ಲಿಯೂ ನಿನ್ನನ್ನೇ ಹೋಲುತ್ತಾನೆ. ತಂದೆಯೇ ಎಂದು
ಮಾತಾಡಿಸುತ್ತಾ ನಿಂತುಕೊಂಡು ಇದ್ದಾನೆ. ಇಂಥವನನ್ನು ಅಂಗೀಕರಿಸದೆ ಇರಬೇಡ.
ಇನ್ನುಮೇಲಾದರೂ ದುರ್ಬುದ್ಧಿಯನ್ನು ಬಿಟ್ಟು ಇವನನ್ನು ಮನ್ನಿಸು. ಇಲ್ಲದಿದ್ದರೆ
ನಿನ್ನ ತಲೆ ಸಹಸ್ರ ಹೋಳಾಗುತ್ತದೆ ಎಂದು ಕಣ್ಣುಗಳನ್ನು ಕೆಂಪಗೆ ಮಾಡಿಕೊಂಡು
ಆಸ್ಥಾನವನ್ನು ಬಿಟ್ಟು ವನಕ್ಕೆ ಅಭಿಮುಖಳಾದಳು.

ಆ ಸಮಯದಲ್ಲಿ ಋತ್ವಿಕ್ಪುರೋಹಿತಾಚಾರ್ಯಮಂತ್ರಿಸಮೇತನಾದ ದುಷ್ಯಂತ
ಮಹಾರಾಜನನ್ನು ಕುರಿತು ಅಶರೀರವಾಣಿಯು—ಎಲೈ, ರಾಯನೇ ! ನಿನಗೆ ಈ
ಬಾಲಕನು ಪುತ್ರನಹುದು. ಆ ಶಕುಂತಳೆಯು ಹೇಳಿದವುಗಳೆಲ್ಲಾ ಸತ್ಯವು.
ಈಕೆಯು ಮಹಾ ಪತಿವ್ರತೆಯೂ ನಿನ್ನ ಪತ್ನಿಯೂ ಹೌದು. ಸಾವಿರ ಮಾತುಗಳೆಂದ
ಪ್ರಯೋಜನವೇನು ? ಈ ಬಾಲಕನನ್ನು ಮುನಃಪೂರ್ವಕವಾಗಿ ಅಂಗೀಕರಿಸು. ಶಕುಂ
ತಳೆಯನ್ನು ಕರಿಸಿ ಮನ್ನಿಸು. ನಿನ್ನ ಈ ಮಗನು ಭರತನೆಂಬ ನಾಮದಿಂದ ಪ್ರಸಿದ್ಧನಾಗಿ
ಚಕ್ರವರ್ತಿ ಎನ್ನಿಸಿಕೊಂಡು ನಿನ್ನ ಕುಲವನ್ನು ಉದ್ಧರಿಸುವನು ಎಂದು ನುಡಿಯಲು
ಆಗ ತಿಳುವಳಿಕೆಯಿಂದ ರಾಯನು ಸಂತುಷ್ಟಚಿತ್ತನಾಗಿ ಸಿಂಹಾಸನದಿಂದಿಳಿದು ಸಭಾ
ಜನರನ್ನು ಕುರಿತು—ಎಲೈ, ಸಾಮಾಜಿಕರೇ ! ಕೇಳಿರಿ ಈ ಶಕುಂತಳೆಯು ನನ್ನ
ಪತ್ನಿ ಎಂದೂ ಈ ಬಾಲಕನು ನನ್ನ ಮಗನೆಂದೂ ನಾನು ತಿಳಿದಿದ್ದರೂ ಲೋಕಾಪ
ವಾದಕ್ಕೊಸ್ಕರ ಭಯಪಟ್ಟು ನನಗೆ ತಿಳಿಯದು ಎಂದು ಹೇಳಿದೆನೇ ಹೊರತು ಬೇರೆ
ಅಲ್ಲ ಎಂದು ನುಡಿದು ಸಕಲ ಜನಸಮ್ಮತಿಯಿಂದ ಮಗನನ್ನು ತಬ್ಬಿಕೊಂಡು ಶಿರಸ್ಸನ್ನು
ಆಘ್ರಾಣಿಸಿ ಕುಮಾರನ ಅಂಗಸಂಗದಿಂದ ಉಂಟಾದ ಸುಖವನ್ನನುಭವಿಸಿ ಶಕುಂತ
ಳೆಯನ್ನು ಕರೆಯಿಸಿ ಬಹುಮಾನವನ್ನು ಮಾಡಿ ಸಕಲಜನ ಸಮ್ಮತವಾಗಿ ರಾಜ್ಯಪರಿ
ಪಾಲನೆಯನ್ನು ಮಾಡಿಕೊಂಡು ಪತ್ನೀಪುತ್ರರೊಡನೆ ಸುಖದಲ್ಲಿದ್ದನು.

4. KALINGA'S POLICY.

೪. ಕಳಿಂಗನ ನೀತಿ.

ಧೃತರಾಷ್ಟ್ರರಾಜನು ತಾನೂ ತನ್ನ ಮಕ್ಕಳೂ ನಿಷ್ಕಂಟಕವಾಗಿ ಬದುಕತಕ್ಕುದು ಹೇಗೆ? ಎಂದು ಯೋಚಿಸುತ್ತಾ ಶಕುನಿಯ ಮಂತ್ರಿಯಾದ ಕಳಿಂಗನೆಂಬ ಬ್ರಾಹ್ಮಣನನ್ನು ಕರತರಿಸಿ ಏಕಾಂತದಲ್ಲಿ ಆತನನ್ನು ಕುರಿತು—ಎಲೈ, ಭೂಸುರೋತ್ತಮನೇ! ಈ ಪಾಂಡು ಕುಮಾರಕರು ಬಲಪರಾಕ್ರಮಗಳಿಂದ ಪ್ರತಿದಿನದಲ್ಲಿಯೂ ಹೆಚ್ಚಿ ಬರುತ್ತಿದ್ದಾರೆ. ಅವರ ಏಳಿಗೆಯನ್ನು ನಾನು ಸಹಿಸಲಾರೆನು. ನೂರು ಮಂದಿ ಮಕ್ಕಳೊಡನೆ ಕೂಡಿರುವ ನನಗೆ ಹೇಗೆ ನಡೆದರೆ ಕ್ಷೇಮಬರುವುದೋ ಆ ಅರ್ಥವನ್ನು ತಿಳುಹಿಸಬೇಕೆನಲು ಆ ಕಳಿಂಗನು ತೀಕ್ಷ್ಣವಾದ ನೀತಿಶಾಸ್ತ್ರವನ್ನು ಅವಲಂಬಿಸಿ ಇಂತೆಂದನು—ಎಲೈ, ಧೃತರಾಷ್ಟ್ರರಾಜನೇ! ಕೇಳು! ಲೋಕದಲ್ಲಿ ಅರಸುಗಳಿಗೆ ಬ್ರಾಹ್ಮಣರನ್ನು ಪೂಜಿಸುವುದೂ ದುಷ್ಟರನ್ನು ಶಿಕ್ಷಿಸುವುದೂ ಅಪರಾಧವನ್ನು ಮಾಡಿದವರಿಗೆ ಶಾಸ್ತ್ರೋಕ್ತಪ್ರಕಾರವಾಗಿ ದಂಡನೆಯನ್ನು ಮಾಡುವುದೂ ನಿತ್ಯಕರ್ತವ್ಯವಾಗಿ ಇರುವುದು. ಹೀಗೆ ಮಾಡಿದರೆ ಇಹಪರಗಳಲ್ಲಿ ಸೌಖ್ಯವು ಲಭಿಸುವುದು.

ಆಮೆಯು ತನ್ನ ಅಂಗಗಳನ್ನು ಇತರರಿಗೆ ತಿಳಿಸದೆ ಇರುವಂತೆ ಅರಸು ತನ್ನ ಮರ್ಮವನ್ನು ತಿಳಿಸದೆ ಸರರ ಮರ್ಮಗಳನ್ನು ತಾನು ತಿಳಿದುಕೊಂಡು ತಪ್ಪು ಮಾಡಿದವರನ್ನು ಸಾವಕಾಶ ಮಾಡದೆ ಶಿಕ್ಷಿಸುತ್ತಾ ಇದ್ದರೆ ಅವನಿಗೆ ಸಮಸ್ತ ಜನಗಳೂ ಭಯಪಟ್ಟು ವಿನೀತರಾಗಿ ನಡೆಯುತ್ತಾ ಇರುವರು. ಅಪರಾಧ ಮಾಡಿದವರನ್ನು ಶಿಕ್ಷಿಸದೆ ಬಿಟ್ಟರೆ ಅವರ ದೆಸೆಯಿಂದ ಲೋಕದಲ್ಲಿ ಅವಮಾನವನ್ನು ಹೊಂದಿ ಇಹಪರಗಳಲ್ಲಿ ಸೌಖ್ಯವನ್ನು ಹೊಂದದೆ ಹೋಗುವನು ಐಶ್ವರ್ಯಾತಿಶಯದಿಂದ ತನ್ನನ್ನು ಎಣಿಸದೆ ಇರುವಂಥಾವರನ್ನು ಹಿಡಿತರಿಸಿ ನಿಗ್ರಹಿಸಿ ಅವರ ಧನವನ್ನು ಅನ್ಯರಿಗೆ ಕೊಡಿಸಬೇಕು. ಒಂದು ಉದ್ಯೋಗವನ್ನು ನಡಿಸಬೇಕಾದರೆ ತನಗೆ ಆಪ್ತರಾಗಿಯೂ ಕಾರ್ಯಸಾಧನಾನಿಪುಣರಾಗಿಯೂ ಇರುವಂಥವರನ್ನು ಬಿಟ್ಟು ಅನ್ಯರನ್ನು ಆ ಕೆಲಸದಲ್ಲಿ ನಿಯೋಗಿಸಿದರೆ ಅವರಿಂದ ಆ ಕೆಲಸವು ನೆರವೇರಲಾರದು. ಗ್ರಾಮಗಳಲ್ಲಿಯೂ ಪಟ್ಟಣಗಳಲ್ಲಿಯೂ ದೇಶಗಳಲ್ಲಿಯೂ ನೇಮಿಸಿ ಇರಿಸಿದ ಜನಗಳು ಧರ್ಮಗಳನ್ನು ಬಿಡದೆ ಜನರಿಗೆ ತೊಂದರೆ ಕೊಡದೆ ಇರುವ ರೀತಿಯನ್ನು ಗೋಪ್ಯವಾಗಿ ಚಾರರ ಮುಖಾಂತರದಿಂದ ತಿಳಿದು ಅವರು ಒಂದು ವೇಳೆ ದುರ್ಮಾರ್ಗಪ್ರವರ್ತಕರಾದರೆ ಅವರನ್ನಾಕ್ಷಣವೇ ಆ ಅಧಿಕಾರದಿಂದ ತಪ್ಪಿಸಿ ನಿಗ್ರಹಿಸಬೇಕು. ಅನ್ಯರಛಿದ್ರಗಳನ್ನು ತಾನು ತಿಳಿಯಬೇಕಲ್ಲದೆ ತನ್ನ ಛಿದ್ರಗಳನ್ನು ಒಬ್ಬರಿಗೂ ತಿಳಿಸಕೂಡದು.

ಒಬ್ಬನನ್ನು ನಿಗ್ರಹಿಸಬೇಕಾದರೆ ಸಮೂಲವಾಗಿ ನಿಗ್ರಹಿಸಬೇಕು ಸ್ವಲ್ಪ ನಿಗ್ರಹಿಸಿ ಬಿಟ್ಟುಬಿಟ್ಟರೆ ಅವನು ಅರ್ಧ ಮುರಿದ ಮುಳ್ಳಿನೋಪಾದಿಯಲ್ಲಿ ಬಾರಿಬಾರಿಗೂ ಬಾಧಿಸುತ್ತಾ ಇರುವನು. ಶತ್ರುವನ್ನು ಪ್ರಾಣಾಂತವಾಗಿ ನಿಗ್ರಹಿಸಿದರೆ ಸುಖವಾಗಿ ನಿಶ್ಚಿಂತೆಯಿಂದಿರಬಹುದು. ಅಪರಾಧವನ್ನು ಮಾಡಿದವರೊಳಗೆ ಒಬ್ಬಿಬ್ಬರು ಮೂರು ಮಂದಿ ಹತ್ತು ಮಂದಿ ಸಿಕ್ಕಿದರೂ ಎಲ್ಲರೂ ಸಿಕ್ಕಲಿ ಏಂದು ಸುಮ್ಮನಿರದೆ ಸಿಕ್ಕಿದವ

ರನ್ನು ಆ ಕ್ಷಣವೇ ಶಿಕ್ಷಿಸಬೇಕು. ಆವರ ಸ್ನೇಹಿತರು ಮೊದಲಾದವರನ್ನು ಸಾವಕಾಶವಾಗಿ ನಿಗ್ರಹಿಸಿಕೊಳ್ಳಬಹುದು. ಬೇರು ಕಡಿದ ವೃಕ್ಷದ ಕೊಂಬುಗಳು ತಮಗೆ ತಾವೇ ಒಣಗಿ ಹೋಗುವ ಹಾಗೆ ಪರಪಕ್ಷಬಲವು ದಿನದಿನಕ್ಕೂ ತಾನೇ ಸವೆದುಹೋಗುವುದು. ಆಣಿ ತಪ್ಪಿದ ವೇಳೆಯಲ್ಲಿ ಆಲೋಚನೆ ಮಾಡದೆ ಸಾಹಸವನ್ನಾಗಲಿ ಸಂಧಿಯನ್ನಾಗಲಿ ಪಲಾಯನವನ್ನಾಗಲಿ ನಾಚಿಕೆಯ ಕೆಲಸವೆಂದು ಹೇಳದೆ ನಡಿಸಬೇಕು. ಸಮಸ್ತ ಜನಗಳಿಂದ ಹೊಗಳಿಸಿಕೊಳ್ಳುವ ನಿಮಿತ್ತವಾಗಿಯಾದರೂ ಶತ್ರುಗಳನ್ನೂ ಇತರರನ್ನೂ ಸ್ವಾಧೀನ ಮಾಡಿಕೊಳ್ಳುವುದಕ್ಕೋಸ್ಕರವಾಗಿಯಾದರೂ ಧನವ್ಯಯವನ್ನು ಮಾಡದೆ ಸಾಹಸದಿಂದಲೇ ಸಾಧಿಸಿಕೊಳ್ಳಬೇಕು. ಶತ್ರುವಾದವನು ಪರಾಜಿತನಾಗಿ ಓಡಿಹೋಗಿ ಇನ್ನಾರನ್ನಾದರೂ ಆಶ್ರಯಿಸಿ ಸಮಯವನ್ನು ಸಾಧಿಸುತ್ತಾ ಇರುವುದನ್ನು ತಿಳಿದು ಎಂಥಾ ಬಲಿಷ್ಠನಾದರೂ ಮೈಮರೆತಿರಬಾರದು. ತಾನೊಂದು ವೇಳೆ ಪರಾಜಿತನಾದರೆ ತನಗೆ ಸಮಯ ಸಿಕ್ಕುವ ಪರ್ಯಂತರ ಯಜ್ಞ ಮಾಡುವವನ ಹಾಗೂ ಜಟಾಜಿನ ವಲ್ಕಲಗಳನ್ನು ಧರಿಸಿಕೊಂಡು ಸರ್ವಸಂಗಪರಿತ್ಯಾಗ ಮಾಡಿದವನ ಹಾಗೂ ಜನರನ್ನು ವಂಚಿಸುತ್ತಾ ಸಮಯವನ್ನು ಸಾಧಿಸಬೇಕು. ಹೀಗೆ ಜನರನ್ನು ವಂಚಿಸುತ್ತಾ ಸಮಯ ಸಿಕ್ಕಿದಾಗ ತೋಳನು ಕುರಿಯಮಂದೆಯಲ್ಲಿ ಹೊಂಚಿ ಬೀಳುವ ಹಾಗೆ ತನ್ನ ಶತ್ರುವಿನ ಮೇಲೆ ಬಿದ್ದು ಸಾಹಸವನ್ನು ಮಾಡಬೇಕು.

ಜನರು ಹಣ್ಣುಕಾಯಿಗಳು ತುಂಬಿರುವ ಮರದ ಕೊನೆಯನ್ನು ಕೊಕ್ಕೆಯಿಂದ ಬಗ್ಗಿಸಿ ಅವುಗಳಲ್ಲಿ ಪಕ್ವಾಪಕ್ವವಾದುವುಗಳನ್ನು ವಿಚಾರಿಸುವ ತೆರದಿಂದ ಶತ್ರುಗಳನ್ನು ಒಳಹೊಕ್ಕು ಬಲಾಬಲಗಳನ್ನು ವಿಚಾರಿಸಿ ಅಬಲನಾಗಿ ಇರುವಾಗ ಅತನನ್ನು ಕೊಲ್ಲಬೇಕು ಉಪೇಕ್ಷೆಯನ್ನು ಮಾಡಕೂಡದು ಮತ್ತು ಶತ್ರುವಾದವನು ತನಗೆ ಅಧೀನವಾಗದಿದ್ದರೆ ಆತನನ್ನು ಅನುಸರಿಕೊಂಡಿದ್ದು ಸಮಯ ಬಂದಾಗ ತುಂಬಿದ ಗಡಿಗೆಯನ್ನು ಎತ್ತಿ ಹಾಕಿ ಜೂರುಜೂರಾಗಿ ಒಡೆದು ಹಾಕುವ ಹಾಗೆ ಶತ್ರುವನ್ನು ನಿಃಶೇಷವಾಗಿ ಕೊಂದುಹಾಕಬೇಕು. ಶತ್ರುವು ತನ್ನ ಕೈಗೆ ಸಿಕ್ಕಿದಾಗ ಅವನು ಎಷ್ಟು ಪ್ರಿಯವಚನಗಳನ್ನು ಆಡಿದಾಗ್ಗೂ ದಯೆಯನ್ನು ತೋರಿಸದೆ ಕೊಂದು ಹಾಕಬೇಕು.

ತನಗೆ ದಾಯಾದಿಗಳಾದವರನ್ನು ಸಾಮದಿಂದಾಗಲಿ ಭೇದದಿಂದಾಗಲಿ ದಾನದಿಂದಾಗಲಿ ದಂಡದಿಂದಾಗಲಿ ವಿಷಪ್ರಯೋಗಾದಿ ಕಪಟಕೃತ್ಯಗಳಿಂದಾಗಲಿ ಕೊಂದು ಹಾಕಬೇಕೇ ಹೊರತಾಗಿ ಅವರನ್ನು ಉಳಿಸಕೂಡದು. ಹೀಗೆ ಹೇಳಿದ ಕಳಿಂಗನ ಮಾತನ್ನು ಕೇಳಿ ಧೃತರಾಷ್ಟ್ರನು ಈ ಚತುರೋಪಾಯಗಳಿಂದ ಶತ್ರುಗಳನ್ನು ಜಯಿಸುವುದು ಹೇಗೆ? ಅದರ ರೀತಿಯನ್ನು ವಿಶದವಾಗಿ ತಿಳಿಯಪಡಿಸಬೇಕೆಂದು ಕೇಳಿಕೊಳ್ಳಲು ಆ ಕಳಿಂಗನು ಮತ್ತೂ ಹೇಳಿದನು. ಹೇಗಂದರೆ—

ಎಲೈ, ಧೃತರಾಷ್ಟ್ರನೇ! ಈ ಅರ್ಥಕ್ಕೆ ಅನುಕೂಲವಾದ ಒಂದು ಇತಿಹಾಸ ಉಂಟು. ಅದನ್ನು ತಿಳಿಸುತ್ತಿದ್ದೇನೆ; ಕೇಳು. ಒಂದು ವನದಲ್ಲಿ ಒಂದು ನರಿಯು ವಾಸಮಾಡಿಕೊಂಡು ಇರುವುದು. ಒಂದು ಹುಲಿಯೂ ಒಂದು ತೋಳವೂ ಒಂದು

ಕೀರವೂ ಒಂದು ಹೆಗ್ಗಣವೂ ಆದರೊಡನೆ ಸ್ನೇಹವನ್ನು ಮಾಡಿಕೊಂಡು ಇರುವುವ. ಈ ಐದು ಜಂತುಗಳೂ ಒಂದು ದಿವಸದಲ್ಲಿ ಸ್ಥೂಲಕಾಯವುಳ್ಳ ಒಂದು ಮೃಗವನ್ನು ನೋಡಿ ಅದನ್ನು ಹಿಡಿದು ಕೊಲ್ಲಬೇಕೆಂದು ಬಹು ಯತ್ನವನ್ನು ಮಾಡಿದರೂ ಶಕ್ಯ ವಾಗದುದರಿಂದ ಆಲೋಚನೆಯನ್ನು ಮಾಡುತ್ತಿರಲು ಅವುಗಳಲ್ಲಿ ನರಿಯು ಹುಲಿ ಮೊದಲಾದ ಜಂತುಗಳನ್ನು ನೋಡಿ—ಈ ವನದಲ್ಲಿರುವ ಮೃಗವು ಯೌವನ ವೇಗ ಬಲ ಸ್ಥೂಲತ್ವಗಳುಳ್ಳುದಾದ ಕಾರಣ ನಾವು ಎಷ್ಟು ಪ್ರಯತ್ನಗಳನ್ನು ಮಾಡಿದರೂ ಅದು ನಮ್ಮ ಕೈಗೆ ಸಿಕ್ಕದೆ ಓಡುತ್ತದೆ. ಆದಕಾರಣ ಅದು ಒಂದು ಪ್ರದೇಶದಲ್ಲಿ ನಿದ್ದೆ ಹೋಗುವ ಸಮಯದಲ್ಲಿ ಹೆಗ್ಗಣವು ಅದರ ಕಾಲುಗಳನ್ನು ತನ್ನ ಹಲ್ಲುಗಳಿಂದ ಕಡಿಯಬೇಕು. ಕಾಲುಗಳನ್ನು ಕಡಿದ ಮೇಲೆ ಹೆಬ್ಬುಲಿಯು ಬಂದು ಅದನ್ನು ಕೊಲ್ಲಬೇಕು, ಕೊಂದಮೇಲೆ ಆ ದುಷ್ಟನನ್ನು ನಾವೆಲ್ಲರೂ ಕೂಡಿ ಭಕ್ಷಿಸಬೇಕು ಎಂದು ಹೇಳಿತು. ಆ ಮಾತಿಗೆ ಎಲ್ಲವೂ ಒಪ್ಪಿಕೊಂಡು ಹಾಗೆಯೇ ಆಗಲಿ ಎಂದು ಆ ಮೃಗವು ನಿದ್ದೆಹೋಗುವ ಸಮಯದಲ್ಲಿ ಹೆಗ್ಗಣವು ಅದರ ಕಾಲುಗಳನ್ನು ಕಡಿ ಯಲು. ಹೆಬ್ಬುಲಿಯು ಅದನ್ನು ಕೊಲ್ಲಲು ಆ ನರಿಯು ವ್ಯಾಘ್ರಾದಿಗಳನ್ನು ಕುರಿತು—ನೀವು ಸ್ನಾನವನ್ನು ಮಾಡಿ ಬನ್ನಿರಿ ಅಷ್ಟು ಪರ್ಯಂತರ ನಾನು ಈ ಮೃಗವನ್ನು ಕಾದುಕೊಂಡಿರುತ್ತೇನೆ ಎನಲು ಆ ಹುಲಿ ಮೊದಲಾದ ಜಂತುಗಳು—ಹಾಗೆಯೇ ಆಗಲಿ ಎಂದು ನದಿಯ ತೀರಕ್ಕೆ ಹೋದವು. ಆ ಮೇಲೆ ಹುಲಿಯು ಮುಂಚಿತವಾಗಿ ಸ್ನಾನವನ್ನು ಮಾಡಿ ಬರುವಷ್ಟರೊಳಗೆ ನರಿಯು ಮನಸ್ಸಿನಲ್ಲಿ ಖೇದ ವನ್ನು ತಂದುಕೊಂಡು ಚಿಂತಿಸುತ್ತಿರಲು ಆ ಹುಲಿಯು ನರಿಯನ್ನು ನೋಡಿ—ಎಲೈ, ನರಿಯೇ! ನೀನು ಬುದ್ಧಿ ಸಂಪನ್ನನಾಗಿದ್ದರೂ ಇಷ್ಟೇತಕ್ಕೆ ಚಿಂತಿಸುತ್ತಾ ಇದ್ದೀ? ನಾವೀಮೃಗವನ್ನು ಭಕ್ಷಿಸಿಕೊಂಡು ಸುಖವಾಗಿರುವಣ ಎನಲು ಆ ನರಿಯು—ಎಲೈ, ಹುಲಿರಾಯನೆ! ಹೆಗ್ಗಣವು ನಿನ್ನನ್ನು ದೂಷಿಸಿದ ವಿವರವನ್ನು ಹೇಳುತ್ತೇನೆ. ಕೇಳು ಏನಂದರೆ—ನಾನು ಆ ಮೃಗದ ಕಾಲುಗಳನ್ನು ಕಡಿದುದ ರಿಂದ ಅದು ಸತ್ತುಹೋಗಿ ಹೆಬ್ಬುಲಿಗೆ ಜೀವನವಾಯಿತಲ್ಲದೆ ಈ ಹುಲಿಯ ಸಾಮ ರ್ಥ್ಯವೇನು? ಇದಕ್ಕೆ ಒರಿಯ ಹೆಮ್ಮೆ ಏತಕ್ಕೆ? ಎಂದು ಇನ್ನೂ ಬಹು ಪ್ರಕಾರವಾಗಿ ನಿನ್ನನ್ನು ದೂಷಿಸಿತು. ನಿನ್ನನ್ನು ದೂಷಿಸಿದುದೇ ನನ್ನನ್ನು ದೂಷಿಸಿದ ಹಾಗೆ ನಾನು ಎಣಿಸಿ ಈ ಮಾಂಸವನ್ನು ಮುಟ್ಟಲೊಲ್ಲೆನು ಎನಲು ಹುಲಿಯು—ಎಲೈ ನರಿಯ! ನೀನು ನನಗೆ ಪರಮಮಿತ್ರನಾದುದರಿಂದ ನಾನು ಈ ಮಾಂಸವನ್ನು ಭಕ್ಷಿಸುವುದಕ್ಕಿಂತ ಮೊದಲೇ ಇದನ್ನು ನನಗೆ ತಿಳಿಸಿಹಿದುದು ಒಳ್ಳೆಯದಾಯಿತು. ನಾನು ಅಪೇಕ್ಷಿಸಿದರೆ ಈ ವನದಲ್ಲಿ ಇನ್ನೂ ಎಷ್ಟು ಮೃಗಗಳಿಲ್ಲ? ಅವುಗಳನ್ನು ಕೊಂದು ಭಕ್ಷಿಸುವೆನೇ ಹೊರತಾಗಿ ಇದನ್ನು ನಾನು ಮುಟ್ಟುವುದಿಲ್ಲ ಎಂದು ಹೇಳಿ ಯಥೇಚ್ಛವಾಗಿ ಹೊರ ಟುಹೋಯಿತು. ಅನಂತರ ಹೆಗ್ಗಣವು ಬರಲು ನರಿಯು ಅದನ್ನು ನೋಡಿ—ಎಲೈ, ಹೆಗ್ಗಣವೇ! ಆ ಮುಂಗಿಸಿಯು ನನ್ನ ಸಂಗಡ—ಈ ಮೃಗದ ಮಾಂಸವು ಕಠಿಣವಾ ದುದರಿಂದ ನನಗೆ ರುಚಿಸದು. ಆದರೆ ಹೆಗ್ಗಣದ ಮಾಂಸವು ಮೃದುವಾದುದರಿಂ

ನೀನು ಸಮ್ಮತಿಸಿದರೆ ನಾನು ಅದನ್ನು ಭಕ್ಷಿಸುತ್ತೇನೆ ಎಂದು ಹೇಳಿತು ಎನಲು ಹೆಗ್ಗಣವು ಆ ಮಾತನ್ನು ಕೇಳಿ ಭಯಪಟ್ಟು ಬಲವನ್ನು ಹೊಕ್ಕಿಕೊಂಡಿತು. ತೋಳವು ಬಂದ ಮೇಲೆ ನರಿಯು ಅದನ್ನು ಕುರಿತು—ಎಲೈ, ತೋಳನೇ! ಹೆಬ್ಬುಲಿಯು ಕುಟುಂಬಸ ಮೇತವಾಗಿ ಬರುತ್ತದೆ. ಅದು ನಮಗೆ ಸೌಖ್ಯವನ್ನು ಮಾಡುವ ರೀತಿಯು ತೋರುವು ದಿಲ್ಲ. ನಿನಗೆ ತೋರಿದ ರೀತಿಯಲ್ಲಿ ನಡೆದುಕೋ ಎನಲು ತೋಳವು ಭಯಪಟ್ಟು ಹೊರಟು ಹೋಗಲು ಆ ನರಿಯು ಮುಂಗಿಸಿ ಬಂದ ಮೇಲೆ—ಎಲೈ, ಕೀರನೇ! ನನ್ನ ಬಾಹುಬಲದಿಂದ ಹುಲಿ ಮೊದಲಾದ ಸಮಸ್ತ ಜಂತುಗಳೂ ಹೆದರಿ ಓಡಿಹೋದವು. ನೀನು ಸಮರ್ಥನಾದರೆ ನನ್ನೊಡನೆ ಯುದ್ಧವನ್ನು ಮಾಡಿ ನನ್ನನ್ನು ಜಯಿಸಿ ಈ ಮಾಂಸ ವನ್ನು ಭಕ್ಷಿಸು ಎನಲು ಆ ಮುಂಗಿಸಿಯು—ಹುಲಿಯೂ ತೋಳವೂ ಬುದ್ಧಿಯುಳ್ಳ ಹೆಗ್ಗಣವೂ ನಿನಗೆ ಭಯಪಟ್ಟು ಓಡಿಹೋದುದರಿಂದ ನೀನು ವೀರಾಗ್ರೇಸರನು. ನಿನ್ನೊಡನೆ ಹೋರುವುದಕ್ಕೆ ನಾನು ಸಮರ್ಥನಲ್ಲ ಎಂದು ಹೇಳಿ ಅದೂ ಓಡಿಹೋಯಿತು. ಈ ಪ್ರಕಾರ ತನ್ನ ಉಪಾಯಬಲದಿಂದ ಆ ಮೃಗಗಳನ್ನೆಲ್ಲಾ ದಾಟಿಸಿ ನರಿಯು ತಾನೊಂದೇ ಆ ಮೃಗ ಮಾಂಸವನ್ನು ಸ್ವೇಚ್ಛೆಯಾಗಿ ಭಕ್ಷಿಸಿತು.

ಅರಸನಾದವನು ಭಯಗ್ರಸ್ತನಾದವನಿಗೆ ಭಯವನ್ನು ತೋರಿಸುತ್ತಾ ಶೂರನಾ ದವನಿಗೆ ಕೈಮುಗಿಯುತ್ತಾ ಲುಬ್ಧನಾದವನಿಗೆ ಹಣವನ್ನು ಕೊಡುತ್ತೇನೆಂದು ಆಶೆಯನ್ನು ಹುಟ್ಟಿಸುತ್ತಾ ಸಮಾನ ಬಲಶಾಲಿಯೊಡನೆ ಸ್ನೇಹವನ್ನು ಬಳಸುತ್ತಾ ತನ್ನ ಅರ್ಥಕ್ಕೆ ದ್ರೋಹವನ್ನು ಎಣಿಸಿದವನು ಮಗನಾದರೂ ಸ್ನೇಹಿತನಾದರೂ ಅಣ್ಣನಾ ದರೂ ತಮ್ಮನಾದರೂ ತಂದೆಯಾದರೂ ಗುರುವಾದರೂ ದಾಕ್ಷಿಣ್ಯವನ್ನು ನೋಡದೆ ಅವನನ್ನು ಸಂಹರಿಸಬೇಕು.

ಅಣೆಯನ್ನು ಇಟ್ಟುಕೊಂಡಾದರೂ ನಂಬಿಗೆಯನ್ನು ಕೊಟ್ಟಾದರೂ ಶತ್ರುವಿ ನೊಡನೆ ಸಂಧಿ ಮಾಡಿಕೊಂಡು ಹೊಂಚಿ ಆತನನ್ನು ಕೊಂದುಹಾಕಬೇಕು. ಅದರಿಂದ ದೋಷವಿಲ್ಲ ಎಂದು ಭಾರ್ಗವನು ಹೇಳಿದ್ದಾನೆ. ತನಗೆ ಭಯವು ಬರುವ ಪರ್ಯಂತ ರವೂ ಭಯಪಟ್ಟಿರುವವನೋಪಾದಿಯಲ್ಲಿ ಇದ್ದುಕೊಂಡು ಭಯವು ಬಂದಾಗ ನಿರ್ಭೀ ತನ ಹಾಗೆ ಕಾಣಿಸಬೇಕು. ಶತ್ರುವಿಗೆ ಆಪತ್ತು ಒಂದಾಗ ದಯೆಯಿಂದ ಬಿಟ್ಟು ಬಿಟ್ಟರೆ ಆತನು ಮೃತ್ಯುಪ್ರಾಯನಾಗುವನು

ಮನಸ್ಸಿನಲ್ಲಿ ಕೋಪವಿದ್ದರೂ ಸ್ನೇಹಿತನೋಪಾದಿಯಲ್ಲಿ ನಗುನಗುತ್ತಾ ಮಾತಾ ಡುವುದರಿಂದ ತನ್ನ ಕೋಪವು ಪರರಿಗೆ ತಿಳಿಯದ ಹಾಗೆ ಇರಬೇಕು. ಕೊಲ್ಲುವು ದಕ್ಕೆ ಎಣಿಸುವಾಗಲೂ ಕೊಲ್ಲುವಾಗಲೂ ಕೊಂದ ಮೇಲೆಯೂ ಕ್ಲೇಶದಿಂದ ತಪ್ಪಿ ಸುವನೋಪಾದಿಯಲ್ಲಿ ಪ್ರಿಯವಾಗಿಯೇ ಮಾತಾಡುತ್ತಿರಬೇಕು. ಶತ್ರುವಾದವನಿಗೆ ಒಳ್ಳೆಯ ಮಾತುಗಳನ್ನಾಡಿ ಬೇಕಾದ ವಸ್ತುಗಳನ್ನು ಕೊಟ್ಟು ಉಪಚಾರಗಳನ್ನು ಮಾಡಿ ನಂಬಿಕೆಯನ್ನು ಕೊಟ್ಟು ಸ್ವಲ್ಪ ಅಣಿ ತಪ್ಪಿದ ವೇಳೆಯಲ್ಲಿ ಅವನನ್ನು ಕೊಂದು ಹಾಕಬೇಕು. ಮನಸ್ಸಿನಲ್ಲಿ ಎಷ್ಟು ದ್ವೇಷವಿದ್ದರೂ ಧರ್ಮಮಾರ್ಗವನ್ನೇ ಅನುಸರಿಸಿ ದವನಂತೆ ನಟಿಸುತ್ತಾ ಇದ್ದರೆ ಕಪ್ಪು ಮೇಘಗಳು ಸೂರ್ಯನ ಪ್ರಕಾಶದಿಂದ ಮರೆ

ಯಾಗುವಂತೆ ಆತನ ದೋಷಗಳು ಮರೆಯಾಗಿ ಹೋಗುವುವು. ಕೊಲ್ಲತಕ್ಕಂಥ ಶತ್ರುವು ಏನಾದರೂ ಒಂದು ವಿಧದಿಂದ ತಪ್ಪಿಸಿಕೊಂಡರೆ ಅವನ ಮನೆಗೆ ಬೆಂಕಿಯನ್ನು ಹಾಕಿಯಾದರೂ ಯಾರಾದರೂ ಭಿಕ್ಷುಕರ ಮುಖಾಂತರದಿಂದ ಅವನಿಗೆ ವಿಷವನ್ನು ಹಾಕಿಸಿಯಾದರೂ ಆಗತ್ಯವಾಗಿ ಅವನನ್ನು ಕೊಂದುಹಾಕಬೇಕು. ಶತ್ರುವು ಏನಾದರೂ ಒಂದು ದುರಾಲೋಚನೆಯಿಂದ ತನ್ನ ಬಳಿಗೆ ಬಂದರೆ ಅವನಿಗೆ ಪ್ರತ್ಯುತ್ತಾದ್ಯನಾಭಿನಂದನೆಗಳನ್ನು ಮಾಡಿ ಬೇಕಾದ ವಸ್ತುಗಳನ್ನು ಕೊಟ್ಟು ಸ್ನೇಹಭಾವದ ನಂಬಿಕೆಯನ್ನು ಉಂಟುಮಾಡಿ ಸಮಯವರಿತು ಅವನನ್ನು ಕೊಂದುಹಾಕಬೇಕು.

ವಿಶ್ವಾಸಕ್ಕೆ ಯೋಗ್ಯನಾಗಿರುವಂಥವನಲ್ಲಿಯೂ ತಾನು ಪೂರ್ಣ ವಿಶ್ವಾಸವಿಡಕೂಡದು ವಿಶ್ವಾಸ ಯೋಗ್ಯನಲ್ಲದವನನ್ನು ಹತ್ತಿರಕ್ಕೇ ಸೇರಿಸಕೂಡದು. ಯಾವ ರಹಸ್ಯವಾದರೂ ಅದನ್ನು ತಾನೊಬ್ಬನೇ ವಿಚಾರಿಸಿ ನಡಿಸಬೇಕೇ ಹೊರತು ಮತ್ತೊಬ್ಬರ ಸಂಗಡ ಆಲೋಚಿಸಕೂಡದು. ಒಬ್ಬರಲ್ಲಿಯೂ ವಿಶ್ವಾಸವಿಡದೆ ಹೋದರೆ ತನ್ನ ಕಾರ್ಯವು ಕೈಗೂಡುವುದು. ಹೇಗೆಂದರೆ—ಬೇರೆ ವೇಷವನ್ನು ಧರಿಸಿಕೊಂಡು ಜೋಗಿ ಜಂಗಮ ದಾಸಯ್ಯ ಇವರ ಹಾಗೆ ತೋರ್ಪಡಿಸುವ ಬುದ್ಧಿವಂತರಾದ ಗೂಢಚಾರರನ್ನು ಸ್ವರಾಷ್ಟ್ರದಲ್ಲಾದರೂ ಪರರಾಷ್ಟ್ರದಲ್ಲಾದರೂ ನೇಮಿಸಿ ಉದ್ಯಾನವನಗಳಲ್ಲಿಯೂ ಜಗತಿಯ ಕಟ್ಟೆಗಳಲ್ಲಿಯೂ ದೇವಾಲಯಗಳಲ್ಲಿಯೂ ಅರವಟ್ಟಿಗೆಗಳಲ್ಲಿಯೂ ಬಾಹ್ಯಪ್ರದೇಶಗಳಲ್ಲಿಯೂ ಹಜಾರಗಳಲ್ಲಿಯೂ ಬ್ರಾಹ್ಮಣರ ಮನೆಗಳಲ್ಲಿಯೂ ಜೂಜಾಡುವ ಸ್ಥಳಗಳಲ್ಲಿಯೂ ಪರ್ವತ ವನಪ್ರದೇಶಗಳಲ್ಲಿಯೂ ಜಾತ್ರೆಗಳಲ್ಲಿಯೂ ಪುಣ್ಯನದೀತೀರಂಗಳಲ್ಲಿಯೂ ಮಂತ್ರಿಗಳಲ್ಲಿಯೂ ಪುರೋಹಿತರಲ್ಲಿಯೂ ಸರ್ವಾಧಿಕಾರಿಗಳಲ್ಲಿಯೂ ದಳಪತಿಗಳಲ್ಲಿಯೂ ಬಾಗಿಲು ಕಾಯುವವರಲ್ಲಿಯೂ ಅಂತಃಪುರಸಂಚಾರಿಗಳಲ್ಲಿಯೂ ಸೆರೆಮನೆಯ ಅಧಿಕಾರಿಗಳಲ್ಲಿಯೂ ಬೊಕ್ಕಸದ ಗುರಿಕಾರರಲ್ಲಿಯೂ ಧರ್ಮಾನುಸಾರವಾಗಿ ನಡೆಯುವ ವಿದ್ವಾಂಸರ ಸಮೂಹದಲ್ಲಿಯೂ ಅವಸರದವರಲ್ಲಿಯೂ ಚಾವಡಿಯ ಅಧಿಕಾರಿಗಳಲ್ಲಿಯೂ ತಳವಾರರಲ್ಲಿಯೂ ದುರ್ಗದ ಠಾಣೆದವರಲ್ಲಿಯೂ ಉಕ್ಕಡದವರಲ್ಲಿಯೂ ಇನ್ನೂ ಇವೇ ಮುಂತಾದ ಸ್ಥಳಗಳಲ್ಲಿ ನಡೆಯುವ ಸ್ವರಾಷ್ಟ್ರಪರರಾಷ್ಟ್ರ ವಿಚಾರಗಳನ್ನು ತಿಳಿಯಬೇಕು. ತನಗಿಂತ ಬಲಿಷ್ಠನಾದವನು ತನ್ನಿಂದ ಧನವನ್ನೇನಾದರೂ ಅಪೇಕ್ಷಿಸಿದರೆ ವೃಕ್ಷವು ಪುಷ್ಪಿಸಿ ಫಲಾಶೆಯನ್ನು ತೋರಿಸುತ್ತಾ ಫಲಿಸದೆ ಇರುವಹಾಗೂ ಫಲಿಸಿದರೂ ಹತ್ತುವುದಕ್ಕಾಗದೆ ಇರುವ ಹಾಗೂ ಹತ್ತಿದರೂ ಕಾಯಾಗಿರುವ ಹಾಗೂ ಒಂದುವೇಳೆ ಹಣ್ಣಾಗಿದ್ದರೂ ಭಕ್ಷಿಸಿದರೆ ಜೀರ್ಣಕ್ಕೆ ಬಾರದೆ ಇರುವ ಹಾಗೂ ಆ ಶತ್ರುವಿಗೆ ಕೈ ಮುಗಿದು ವಿನಯವನ್ನು ನಟಿಸುತ್ತಾ ಆತನನ್ನು ಕೊಲ್ಲುವ ಸಮಯ ಬರುವ ಪರ್ಯಂತರವೂ ಹಣವನ್ನು ಕೊಡುತ್ತೇನೆಂದು ಭಾಷೆಯನ್ನು ಮಾಡಿಕೊಟ್ಟು ಒಂದು ವೇಳೆ ಹಣವಿಲ್ಲದೆ ಹೋದರೆ ಇದ್ದಷ್ಟನ್ನಾದರೂ ಕೊಡುವವನ ಹಾಗೆ ಒಳ್ಳೆಯ ಮಾತುಗಳನ್ನಾಡುತ್ತಾ ತನಗೆ ಹಣವು ಕೈಸೇರಿದ ಮೇಲೆ ಪ್ರಭುತ್ವದ ಪೋಡಿಯಿಂದ ಆತನು ಬಂದು ಕೇಳುವುದಕ್ಕೆ ಸಮಯವನ್ನು ಸಾಧಿಸಿ ಕೇಳಿದರೆ ಕೊಟ್ಟುಬಿಡುವವನ ಹಾಗೆ ಅಭಿನಯಿಸಿ ಕೊಡದೆ ಕಾಲಹರಣವನ್ನು ಮಾಡುತ್ತಾ ಆತನನ್ನು ಕಡೆಗೂ ವಂಚಿಸಬೇಕು.

ಧರ್ಮಾರ್ಥಕಾಮಗಳಲ್ಲಿ ಒಂದೊಂದನ್ನು ವ್ಯತ್ಯಾಸವಾಗಿ ಆಚರಿಸಿದರೆ ಪರಸ್ಪರ ವಿರೋಧ ಬರುವುದರಿಂದ ಮೂರನ್ನೂ ಸಮವಾಗಿಯೇ ಆಚರಿಸಬೇಕು. ಪುರುಷಾರ್ಥವನ್ನು ಬಯಸುವಂಥ ಅರಸು ಗರ್ವವನ್ನು ಬಿಟ್ಟು ದ್ವೇಷಾಸೂಯೆಗಳಿಲ್ಲದೆ ಪ್ರಿಯವಚನಗಳನ್ನೇ ಆಡುತ್ತಾ ಶುದ್ಧಾಂತಃಕರಣನಾಗಿ ಬ್ರಾಹ್ಮಣರೊಡನೆ ಆಲೋಚಿಸಿ ಪುಣ್ಯಕರ್ಮವನ್ನಾಗಲಿ ಪಾಪಕರ್ಮವನ್ನಾಗಲಿ ಮಾಡಿ ಐಶ್ವರ್ಯವನ್ನು ಹೊಂದಿ ಆ ಮೇಲೆ ಪಾಪನಿವಾರಣಾರ್ಥವಾಗಿ ಧರ್ಮವನ್ನು ಮಾಡಬೇಕು. ತನ್ನ ಕಾರ್ಯಕ್ಕೋಸ್ಕರ ಯಾರಿಗಾದರೂ ಆ ಶ್ರೇಯಸ್ಸನ್ನು ಮಾಡಿದರೆ ಆ ಮೇಲೆ ಅವರ ಬಳಿಗೆ ಹೋಗಿ ಬಹಳ ಪಶ್ಚಾತ್ತಾಪಪಟ್ಟು ಕ್ಷಮಿಸಬೇಕೆಂದು ಸಮಾಧಾನವನ್ನು ಮಾಡಬೇಕು. ಮೂಢನಾದವನಿಗೆ ಆಶೆಯನ್ನು ಹುಟ್ಟಿಸಿ ತನ್ನ ಸ್ವಾಧೀನವನ್ನು ಮಾಡಿಕೊಳ್ಳಬೇಕು. ಬುದ್ಧಿವಂತನಾದವನನ್ನು ಸಮಯೋಚಿತವಾದ ದಾನಗಳಿಂದ ವಶಮಾಡಿಕೊಳ್ಳಬೇಕು. ಶತ್ರುವಿನೊಡನೆ ಸಮಾಧಾನವನ್ನು ಮಾಡಿಕೊಂಡೆನಲ್ಲಾ; ಇನ್ನು ಭಯವಿಲ್ಲವೆಂದು ಮೈಮರೆತಿರುವ ಪುರುಷನು ವೃಕ್ಷದ ಕೊಂಬೆಯನ್ನು ಹಿಡಿದುಕೊಂಡು ನಿದ್ರೆಮಾಡುವವನ ಹಾಗೆ ನಷ್ಟವಾಗುವನು.

ಮತ್ತು ಮಂತ್ರಾಲೋಚನೆಯನ್ನು ಮಾಡುವಂಥವನು ಸೌಧಾಗ್ರದಲ್ಲಾದರೂ ಮೇಲ್ಮಚ್ಚಿನ ಮೇಲಾದರೂ ನಿರ್ಜನವಾದ ವನದಲ್ಲಾದರೂ ಪರ್ವತಾಗ್ರದಲ್ಲಾದರೂ ತನ್ನ ಮುಖ್ಯರಾದ ಆಪ್ತರೊಡನೆ ಕೂಡಿಕೊಂಡು ಆ ಸ್ಥಳಗಳಲ್ಲಿ ಚಿಕ್ಕಮಕ್ಕಳೂ ಮೂಗರೂ ಗಿಣಿ ಗೊರವಂಕ ಇವೇ ಮೊದಲಾದವುಗಳನ್ನೆಲ್ಲಾ ಹೊರಡಿಸಿಬಿಟ್ಟು ನಾಲ್ಕು ದಿಕ್ಕುಗಳನ್ನೂ ನೋಡಿ ಆಲೋಚನೆಯನ್ನು ಮಾಡಬೇಕು. ಆಲೋಚನೆಗೆ ಇಬ್ಬರೇ ಹೊರತು ಆರು ಕಿವಿಯಾದರೆ ಕಾರ್ಯಕೆಡುವುದು. ಶತ್ರುಗಳ ಬಲವು ಬರದಿಂದ ಬಡವಾಗಿರುವ ಕಾಲದಲ್ಲಿಯೂ ವ್ಯಾಧಿಯಿಂದ ಪೀಡಿತವಾಗಿರುವ ಸಮಯದಲ್ಲಿಯೂ ಗ್ರಹಾದಿಗಳಿಂದ ತೊಂದರೆ ಪಡುತ್ತಿರುವ ವೇಳೆಯಲ್ಲಿಯೂ ದೂರಪ್ರಯಾಣದಿಂದ ಕಂಗೆಟ್ಟಿರುವ ಹೊತ್ತಿನಲ್ಲಿಯೂ ಹೋಗಿ ಆ ಶತ್ರುವನ್ನು ಸಂಹರಿಸಬೇಕು. ಶೀಘ್ರವಾಗಿ ಆಗತಕ್ಕಂಥ ಕಾರ್ಯವನ್ನು ತನ್ನ ಬುದ್ಧಿಯಿಂದಲೇ ಗ್ರಹಿಸಿ ನಡಿಸಬೇಕು. ವಿಳಂಬದಿಂದ ಆಗುವಂಥ ಕಾರ್ಯಕ್ಕೆ ಭಯವು ತಟ್ಟಿದರೆ ತಾನು ಭಯಪಡುವವನೋಪಾದಿಯಲ್ಲಿ ಪ್ರತಿಕ್ರಿಯೆಯನ್ನು ಮಾಡಬೇಕು. ಭಯವು ಬಂದಾಗ ಧೀರನಾಗಿ ನಿರ್ವಹಿಸಬೇಕು. ಬುದ್ಧಿ ಪ್ರಮಾದದಿಂದ ವಿಾರಿಹೋದ ಕಾರ್ಯಕ್ಕೆ ಯೋಚಿಸದೆ ಮುಂದೆ ಮಾಡತಕ್ಕ ಕಾರ್ಯವನ್ನು ಮೋಸಬೇಳದ ಹಾಗೆ ನಡಿಸಬೇಕು. ಅಜ್ಞಾನದಿಂದ ಶತ್ರುವನ್ನು ನಿಗ್ರಹಿಸದೆ ಉಪೇಕ್ಷಿಸಿದರೆ ಕಾಡಿನಲ್ಲಿ ಬಿದ್ದ ಸಣ್ಣ ಕಿಡಿಯೋಪಾದಿಯಲ್ಲಿ ಆ ಶತ್ರುವು ಕಾಲವಿಶೇಷದಲ್ಲಿ ಪ್ರಬಲನಾಗಿ ಬಹು ಅನರ್ಥಕ್ಕೆ ಗುರಿಯಾಗುವನು.

ತನಗಿಂತ ಅಧಿಕನಾಗಿರುವ ಶತ್ರುವಿನೊಡನೆ ಸಂಧಿಯನ್ನು ಮಾಡಿಕೊಳ್ಳುವಾಗ ಆತನಿಗೆಬೇಕಾದಷ್ಟು ದ್ರವ್ಯವನ್ನು ಕೊಡುತ್ತೇನೆಂದು ಆಶೆಯನ್ನು ತೋರಿಸಿ ಆದನ್ನು ಕೊಡುವುದಕ್ಕೆ ಬಹು ಕಾಲ ಗಡುವು ಕಟ್ಟಿಕೊಳ್ಳಬೇಕು. ಆ ಗಡುವು ಸಮೀಪಿಸಿದರೆ ಅದಕ್ಕೊಂದು ವಿಘ್ನವನ್ನು ಕಲ್ಪಿಸಬೇಕು. ಆ ವಿಘ್ನಕ್ಕೆ ಒಂದು ನಿಮಿತ್ತವನ್ನು ಕಲ್ಪಿ

ಸಬೇಕು. ಆ ನಿಮಿತ್ತಕ್ಕೆ ಒಂದು ಅವಶ್ಯಕತ್ವವನ್ನು ಉಂಟುಮಾಡಬೇಕು. ಉಕ್ಕಿನಿಂದ ಮಾಡಲ್ಪಟ್ಟುದಾಗಿಯೂ ಸಾಣೆಯಿಂದ ಹರಿತವಾಗಿಯೂ ಒರೆಯಲ್ಲಿ ಮರೆಯಾಗಿಯೂ ಇರುವ ಕತ್ತಿಯು ಸರ್ವಾಂಗರೋಮಗಳನ್ನು ಹೇಗೆ ಕತ್ತರಿಸುತ್ತಿದೆಯೋ ಹಾಗೆಯೇ ಸಮಯವನ್ನು ಸಾಧಿಸಿಕೊಂಡು ಕರ್ಕಶಹೃದಯನಾಗಿಯೂ ದಯಾರಹಿತನಾಗಿಯೂ ಒಬ್ಬರಿಗೂ ತನ್ನ ಹೃದಯವನ್ನು ತಿಳಿಸದೆ ಇರುತ್ತಾ ಹೊಂಚಿಕೊಂಡಿದ್ದು ಶತ್ರುವನ್ನು ಕೊಂದುಹಾಕಬೇಕು. ಆದುದರಿಂದ ಎಲೈ, ಧೃತರಾಷ್ಟ್ರರಾಜನೇ! ಪಾಂಡವರು ಬಲಪರಾಕ್ರಮಶಾಲಿಗಳಾಗಿಯೂ ದಾಯಾದರಾಗಿಯೂ ಇರುವುದರಿಂದ ಅವರ ಭಯವನ್ನು ತಪ್ಪಿಸಿಕೊಳ್ಳುವಂಥ ಉಪಾಯವನ್ನು ಮಾಡಿದರೆ ನೀನು ಭಯವಿಲ್ಲದೆ ನಿನ್ನ ಮಕ್ಕಳೊಡನೆ ಸುಖವಾಗಿ ಬದುಕುತ್ತೀ ಎಂದು ಹೇಳಿ ಕಳಿಂಗನು ತನ್ನ ಮನೆಗೆ ಹೊರಟುಹೋದನು.

---

5. DURYODHANA ATTEMPTS THE DESTRUCTION OF THE PANDUS: THE ESCAPE.

೫. ದುರ್ಯೋಧನನು ಪಾಂಡವರನ್ನು ನಾಶಪಡಿಸುವುದಕ್ಕೆ ಪ್ರಯತ್ನ ಮಾಡಲು ಅವರು ತಪ್ಪಿಸಿಕೊಂಡು ಹೋದುದು.

ಕರ್ಣನೂ ದುಶ್ಶಾಸನನೂ ಶಕುನಿಯೂ ಕೌರವನೂ ಇವರೆಲ್ಲರೂ ಕಳಿಂಗನ ನೀತಿಯನ್ನು ವಿಸ್ತಾರವಾಗಿ ಕೇಳಿದ ಧೃತರಾಷ್ಟ್ರನ ಬಳಿಗೆ ಬಂದು—ಎಲೈ, ರಾಜನೆ! ಈ ಪಾಂಡವರು ಅತ್ಯಂತ ಬಲಶಾಲಿಗಳಾದುದರಿಂದ ಇವರನ್ನು ಏನಾದರೂ ಒಂದು ಉಪಾಯದಿಂದ ಕೊಲ್ಲಬೇಕೆನಲು ಆ ರಾಜನು—ಎಲೈ, ಕೌರವಾದಿಗಳಿರಾ! ಆ ಪಾಂಡವರು ನಿಮಗೆ ಏನು ಅಪಕಾರವನ್ನು ಮಾಡಿದ್ದಾರೆ? ಅವರ ತಂದೆಯಾದ ಪಾಂಡುರಾಜನು ತಾನು ಮಹಾಬಲಪರಾಕ್ರಮಶಾಲಿಯಾದರೂ ಜಾತ್ಯಂಧನಾದ ನನಗೆ ಪಟ್ಟವನ್ನು ಕಟ್ಟಿ ನನಗೆ ಸಹಾಯವನ್ನು ಮಾಡಿಕೊಂಡಿದ್ದು ಪರಲೋಕಗತನಾದನು. ಆತನು ಮಾಡಿದ ಉಪಕಾರವನ್ನು ನಾನೆಂದಿಗೂ ಮರೆಯೆನು. ನಾನು ಪಾಂಡವರಲ್ಲಿ ಲೇಶಮಾತ್ರವೂ ದ್ವೇಷವನ್ನೆಣಿಸತಕ್ಕವನಲ್ಲ. ನಿಮ್ಮ ಮನಬಂದಂತೆ ನಡಿಸಬಹುದು ಎನಲು ಅದಕ್ಕವರು ಎಲೈ, ರಾಜಾ! ನಮ್ಮನ್ನು ಒಬ್ಬರೂ ದೂಷಿಸರು ಎಂದು ಹೇಳಿ ಆ ಮೇಲೆ ಪುರೋಜನನೆಂಬ ಒಬ್ಬ ಶಿಲ್ಪಿಯನ್ನು ಕರೆದು ಅವನಿಗೆ ಹೇಳಬೇಕಾದ ಮಾತುಗಳನ್ನು ರಹಸ್ಯವಾಗಿ ಹೇಳಿ ನೀನೀಕಾರ್ಯವನ್ನು ಒಂದು ಪಿಳ್ಳೆಗೂ ಗೋಚರವಾಗದಂತೆ ನಡಿಸು; ಹೋಗೆಂದು ವೀಳೆಯವನ್ನು ಕೊಟ್ಟು ಕಳುಹಿಸಲು ಅದೇ ಮೇರೆಗೆ ಅವನು ಲಾಕ್ಷಾಗೃಹವನ್ನು ಇಂದ್ರಪ್ರಸ್ಥನಗರದಲ್ಲಿ ಮಾಡಿ ಕಾದುಕೊಂಡಿದ್ದನು.

ಅನಂತರದಲ್ಲಿ ಕೌರವರೆಲ್ಲರೂ ಇಂದ್ರಪ್ರಸ್ಥನಗರದಲ್ಲಿ ಪಾಂಡವರಿಗಾಗಿ ಕಟ್ಟಲ್ಪಟ್ಟು ಸರ್ವಸಾಮಗ್ರಿಯೊಡನೆ ಸಿದ್ಧವಾಗಿರುವ ಅರಮನೆಯಲ್ಲಿ ವಾಸಮಾಡಿಕೊಂಡಿ

ರುವುದರಿಂದ ವಿಶೇಷ ಪ್ರಯೋಜನವೂ ಕ್ಷೇಮವೂ ಉಂಟೆಂದು ಆದಕ್ಕೆಲ್ಲಾ ತಕ್ಕ ಕಾರಣಗಳನ್ನು ಕಲ್ಪಿಸಿ, ಪ್ರಯಾಣವನ್ನು ಮಾಡಿಸಿ ಅವರನ್ನು ಕಳುಹಿಸಿಬಿಡಲು; ಆ ಮೇಲೆ ವಾರಣವತಿಯನ್ನು ಬಿಟ್ಟು ಹೋಗುತ್ತಿರುವ ಪಾಂಡವರು ತಮ್ಮ ಮಾರ್ಗದಲ್ಲಿ ಹಿಂದೆಯೇ ಬರುವ ಭೀಷ್ಮಾದಿಗಳನ್ನೂ ಪುರಜನರನ್ನೂ ಹಿಂದಿರುಗಿ ಹೋಗುವ ಹಾಗೆ ಬೇಡಿಕೊಳ್ಳುತ್ತಿರಲು; ಅವರೆಲ್ಲರೂ ಬಹು ವ್ಯಸನಾಕ್ರಾಂತರಾಗಿ ಕಂಬನಿಗಳನ್ನು ತುಂಬುತ್ತಾ ಆ ಪಾಂಡವರನ್ನು ಹರಸಿ ಹಿಂದಿರುಗಿ ಹಸ್ತಿನಾವತಿ ಪಟ್ಟಣಕ್ಕೆ ಹೋದರು. ಆದರೆ ಈ ಕೌರವಾದಿಗಳು ಮಾಡಿದ ದುರಾಲೋಚನೆಯನ್ನು ತಿಳಿದಿದ್ದ ವಿದುರನು ಆ ಪಾಂಡವರ ಮೇಲಣ ಮೋಹದಿಂದ ಅವರಿಗೆ ಉಂಟಾಗುವ ಆಪತ್ತು ನಾಶವಾಗಿ ಹೋಗುವ ಹಾಗೆ ತಕ್ಕ ತೋಡನ್ನು ಮಾಡಿ ಈ ವಿವರವನ್ನು ಧರ್ಮರಾಜನಿಗೆ ತಿಳಿಸ ಬೇಕೆಂದು ಇನ್ನೂ ಸ್ವಲ್ಪದೂರ ಅವರ ಸಂಗಡವೇ ಹೋಗಿ, ಅಲ್ಲಿ ಮತ್ತೊಬ್ಬರಿಗೂ ತಿಳಿಯದ ಹಾಗೆ ಧರ್ಮರಾಜನನ್ನು ಕುರಿತು ಮ್ಲೇಚ್ಛ ಭಾಷೆಯಲ್ಲಿ ಗೂಢಾರ್ಥವಾಗಿ ಹೇಳಿದನು. ಏನಂದರೆ—ಎಲೈ, ಧರ್ಮರಾಜನೇ! ನೀನು ಸಕಲ ಭಾಷೆಗಳನ್ನೂ ತಿಳಿದಂಥವನು. ಲೋಕದಲ್ಲಿ ಪೂರ್ವೋತ್ತರ ವೃತ್ತಾಂತಗಳನ್ನು ವಿಚಾರಿಸಿ ಬುದ್ಧಿಬಲದಿಂದ ನಡೆಯುತ್ತಿರುವಂಥ ಪುರುಷನು ಸ್ವಸಂರಕ್ಷಣ ರೂಪಧರ್ಮವನ್ನೂ ಬಂಧುಜನ ವಿರೋಧವನ್ನೂ ತಿಳಿದು ತನಗೆ ಶತ್ರುಗಳಿಂದ ಬರುವ ಆಪತ್ತುಗಳನ್ನು ತಪ್ಪಿಸಿಕೊಳ್ಳುವುದನ್ನೇ ಹುಡುಕುತ್ತಾ ಇರಬೇಕು. ಕಬ್ಬಿಣ ಉಕ್ಕುಗಳಿಂದ ಮಾಡಲ್ಪಡದೆ ಇರುವುವಾಗಿದ್ದರೂ ಅತಿ ತೀಕ್ಷ್ಣವಾಗಿ ಶರೀರವನ್ನು ಖಂಡಖಂಡಗಳಾಗಿ ಕೊಯ್ಯುವಂಥ ಶಸ್ತ್ರಾಸ್ತ್ರವು ಇಂಥಾದುದೆಂದು ತಿಳಿದಿರುವಂಥವನನ್ನು ಶತ್ರುಗಳು ಸಂಹರಿಸಲಾರರು. ಪೊದೆಗಳನ್ನು ಕೆಡಿಸುವುದಾಗಿಯೂ ಶೈತ್ಯವನ್ನು ಹೋಗಲಾಡಿಸುವುದಾಗಿಯೂ ಒಬ್ಬರಿಗೂ ತಿಳಿಯದಂತೆ ಗೋಪ್ಯವಾಗಿ ಒಂದು ಮರದ ಪೊಟ್ರೆಯಲ್ಲಿ ಇರುವ ವಸ್ತುವಿನಂತೆ ತನಗೆ ಬಾಧೆಯನ್ನು ಉಂಟುಮಾಡದ ಹಾಗೆ ಎಚ್ಚರವಾಗಿ ನಡೆದುಕೊಳ್ಳುವವನು ಬಹುಕಾಲ ಬದುಕುವನು. ಕಣ್ಣು ಇಲ್ಲದೆ ಇರುವಂಧವನು ಮಾರ್ಗವನ್ನೂ ತಿಳಿಯಲಾರನು. ಧೈರ್ಯವಿಲ್ಲದ ಪುರುಷನು ತಾನು ಐಶ್ವರ್ಯವಂತನಾಗುವ ಹಾಗೆ ಒಂದು ಕಾರ್ಯವನ್ನೂ ಮಾಡಲಾರನು. ಈ ಅರ್ಥವನ್ನು ನೀನು ತಿಳಿದಿರು. ಮತ್ತು ಪ್ರಾಜ್ಞರಾಗಿರುವಂಧವರು ಲೋಹಾದಿಗಳಿಂದ ನಿರ್ಮಿತವಾದ ಅಸ್ತ್ರವನ್ನು ಶತ್ರುವಿನಿಂದ ಹೊಂದುವುದೇ ಇಲ್ಲ. ಒಂದುವೇಳೆ ಹೊಂದಿದರೂ ಮುಳ್ಳು ಹಂದಿಯು ಅಗ್ನಿಯಿಂದ ಒಂದು ಮಾರ್ಗಕ್ಕೆ ಭಯತಟ್ಟಿದರೆ ಮತ್ತೊಂದು ಮಾರ್ಗದಿಂದ ತಪ್ಪಿಸಿಕೊಂಡು ಹೋಗುವ ಹಾಗೆ ಆ ಶಸ್ತ್ರದಿಂದುಂಟಾಗುವ ಅಪಾಯವನ್ನು ತಪ್ಪಿಸಿಕೊಳ್ಳುವರು. ಹಗಲಿನಲ್ಲಿ ಸಂಚಾರದಿಂದಲೂ ರಾತ್ರಿಯಲ್ಲಿ ನಕ್ಷತ್ರಗಳಿಂದಲೂ ಮಾರ್ಗವನ್ನು ತಿಳಿಯಬೇಕು. ತನ್ನ ನಿಮಿತ್ತವಾಗಿ ಪಂಚೇಂದ್ರಿಯಗಳನ್ನು ನಿಗ್ರಹಿಸಿದಲ್ಲದೆ ಸ್ವಸಂರಕ್ಷಣೆ ಆಗುವುದಿಲ್ಲವೆಂದು ಹೇಳಿದ ವಿದುರನ ಮಾತನ್ನು ಕೇಳಿ ಧರ್ಮರಾಜನು—ನೀನು ಹೇಳಿದುದಕ್ಕೆಲ್ಲಾ ಅರ್ಥವಾಯಿತು ಎನಲು; ವಿದುರನು ಅವರೆಲ್ಲರನ್ನೂ ಹರಸಿ ತಾನು ಹಿಂದಿರುಗಿ ಪಟ್ಟಣಕ್ಕೆ ಬಂದನು.

ಇತ್ತಲಾ ಧರ್ಮರಾಜಾದಿಗಳು ಇಂದ್ರಪ್ರಸ್ಥ ಪಟ್ಟಣವನ್ನು ಕುರಿತು ತೆರಳುತ್ತಿರಲು ; ಮಾರ್ಗದಲ್ಲಿ ಕುಂತಿಯು—ಎಲೈ, ಧರ್ಮರಾಜನೇ! ವಿದುರನು ಹೇಳಿದ ಸಂಕೇತವನ್ನು ನಾವು ಕೇಳಬಹುದಾಗಿದ್ದರೆ ಅದನ್ನು ನಮಗೆ ತಿಳಿಸು ಎನಲು ; ಆತನು—ಎಲೈ, ತಾಯೇ! ಇಂದ್ರಪ್ರಸ್ಥ ಪಟ್ಟಣದಲ್ಲಿ ಕೌರವಾದಿಗಳು ಮಾಡಿರುವ ಅರಗಿನ ಮನೆಯಲ್ಲಿ ಅರ್ಧರಾತ್ರಿಯಲ್ಲಿ ಉಂಟಾಗುವ ಬೆಂಕಿಯಿಂದ ನಾವೆಲ್ಲರೂ ದಹಿಸಲ್ಪಡದ ಹಾಗೆ ಎಚ್ಚರವಾಗಿರಬೇಕೆಂತಲೂ ಆ ಮನೆಗೆ ಬೆಂಕಿಯನ್ನು ಹಾಕುವ ಪುರೋಚನನು ನಮ್ಮ ಆಶ್ರಿತನಾಗಿಯೇ ಇರುತ್ತಾನೆಂತಲೂ ನಾವು ಹಿಂದಿರುಗಿ ಹೋಗದೆ ಆ ಮನೆಯಲ್ಲಿಯೇ ಇದ್ದುಕೊಂಡು ಒಂದು ಸುರಂಗವನ್ನು ಮಾಡಿಸಿ ಅದರ ಮೂಲಕವಾಗಿ ಅಗ್ನಿಭಯವನ್ನು ತಪ್ಪಿಸಿಕೊಳ್ಳಬೇಕೆಂತಲೂ ಉದಯ ಕಾಲದಲ್ಲಿ ಬೇಟೆಯ ನೆವದಿಂದಲೂ ರಾತ್ರಿ ಕಾಲದಲ್ಲಿ ನಕ್ಷತ್ರ ಮೂಲಕವಾಗಿಯೂ ಮಾರ್ಗವನ್ನು ತಿಳಿದುಕೊಂಡು ದೇಶಾಂತರಕ್ಕೆ ಹೋಗಬೇಕೇ ಹೊರತಾಗಿ ಹಿಂದಿರುಗಿ ಪಟ್ಟಣಕ್ಕೆ ಬರಕೂಡದೆಂತಲೂ ಭಯಪಡದೆ ಧೈರ್ಯವಾಗಿರಬೇಕೆಂತಲೂ ಅಲ್ಲಿ ಸುರಂಗವನ್ನು ಮಾಡುವುದಕ್ಕೆ ತಾನೇ ಒಬ್ಬ ಆಪ್ತನನ್ನು ಕಳುಹಿಸುತ್ತೇನೆಂತಲೂ ಹೀಗಾದರೆ ನಿಮ್ಮೆಲ್ಲರಿಗೂ ಕೇಡು ಬರಲಾರದೆಂತಲೂ ವಿದುರನು ಹೇಳಿ ಹೋದನು ಎಂದು ಹೇಳಲು ; ಕುಂತೀದೇವಿಯು ಯೋಜನಾಪರಳಾಗಿ—ನಿಮ್ಮ ಮನ ಬಂದಂತೆ ನಡಿಸಿ ಎಂದು ಹೇಳಿದಳು. ಆಗ ಪಾಂಡವರು ಪ್ರಯಾಣಗತಿಯಿಂದ ಇಂದ್ರಪ್ರಸ್ಥಕ್ಕೆ ಸೇರಿ ಆ ಪಟ್ಟಣದ ಮುಖ್ಯಾಧಿಕಾರಿಗಳೇ ಮೊದಲಾದ ಪುರಜನಗಳಿಂದ ಸನ್ಮಾನವನ್ನು ಹೊಂದಿ ಅಚ್ಚಿನ್ನ ಭಕ್ತನಂತೆ ನಟಿಸುತ್ತಿರುವ ಪುರೋಚನನು ತೋರಿಸಿದ ಅರಮನೆಯನ್ನು ಪ್ರವೇಶಿಸಿ ಅಲ್ಲಿ ಸಿದ್ಧವಾಗಿರುವ ಷಡ್ರಸೋಪೇತಾನ್ನವನ್ನುಂಡು ಬೇಕಾದ ಪಾನೀಯವನ್ನು ಕುಡಿದು ವಿಶ್ರಮಿಸಿಕೊಳ್ಳುತ್ತಾ ಇರುವಾಗ ಧರ್ಮಜನು ತನ್ನ ತಮ್ಮಂದಿರಿಗೆ ವಿದುರನು ಹೇಳಿದ ಸಂಕೇತಾರ್ಥವನ್ನು ತಿಳಿಸಿ ಕೆಲವು ಕಾಲ ಸುಖದಿಂದಿರುತ್ತಿರಲು ; ಒಂದು ದಿವಸ ವಿದುರನು ಕಳುಹಿಸಿದ ಒಬ್ಬ ಕಾಮಾಟದವನು ಬಂದು ಅಂತರಂಗವಾಗಿ ಧರ್ಮರಾಜನನ್ನು ಕಂಡು—ಎಲೈ, ಯಮಜಾತನೇ! ನಾನು ವಿದುರನು ಕಳುಹಿಸಿದ ಕಾಮಾಟದವನು ; ಆತನು ನಡುದಾರಿಯಲ್ಲಿ ಮ್ಲೇಚ್ಛ ಭಾಷೆಯಲ್ಲಿ ಉಸುರಿದುದನ್ನೇ ಗುರುತಾಗಿ ಹೇಳಿ ನೀವು ತಪ್ಪಿಸಿಕೊಂಡು ಹೋಗುವಂತೆ ಒಂದು ಸುರಂಗವನ್ನು ಮಾಡಿ ಬರಹೇಳಿದನು ಎನಲು ; ಧರ್ಮರಾಜನು ಆತನಿಗೆ ಬಹುಮಾನವನ್ನು ಕೊಟ್ಟನು. ಆ ಕಾಮಾಟದವನು ರಹಸ್ಯವಾಗಿ ಮೇಲಚ್ಛಾಗದಲ್ಲಿ ಒಬ್ಬನು ಪ್ರವೇಶಿಸುವ ಹಾಗೆ ಬಾಯಿ ಇಟ್ಟು ಒಳಗೆ ವಿಸ್ತಾರವಾಗಿ ಹಳ್ಳವನ್ನು ತೆಗೆದು ಮೇಲು ಬಾಗಿಲು ಮುಚ್ಚಿ ಒಬ್ಬರಿಗೂ ಕಾಣಿಸದ ಹಾಗೆ ಮಾಡಿ ಪುರೋಚನನು ಬೆಂಕಿಯನ್ನು ಹಚ್ಚುವುದಕ್ಕಿರುವ ದಿವಸವನ್ನು ಆತನಿಗೆ ತಿಳುಹಿಸಿ ವಿದುರನ ಬಳಿಗೆ ಹೊರಟು ಹೋದನು. ಈ ಪಾಂಡವರು ಈ ಅರ್ಥವನ್ನು ಒಬ್ಬರಿಗೂ ತಿಳಿಸದೆ ವಂಚಕನಾದ ಪುರೋಚನನನ್ನು ವಂಚಿಸಬೇಕೆಂದು ಸಮಯವನ್ನು ನಿರೀಕ್ಷಿಸುತ್ತಾ ಇರುತ್ತಿದ್ದರು. ಇದಲ್ಲದೆ ಆ ಪುರೋಚನನು ಒಬ್ಬ ವ್ಯಾಧ ಸ್ತ್ರೀಯನ್ನು ಆ ಅರಮನೆಯಲ್ಲಿ ನಡೆದ ಸಂಗತಿಯನ್ನೆಲ್ಲಾ ತನಗೆ ತಿಳಿಸುವ ಹಾಗೆ ನೇಮಿಸಿ ಇಟ್ಟಿದ್ದನು.

ಹೀಗೆ ಕೆಲವು ದಿವಸಗಳು ಕಳೆದ ಮೇಲೆ ವಿದುರನು ಹೇಳಿದ್ದ ಸಂಕೇತ ದಿವಸವು ಬರಲು; ಪಾಂಡವರು ಆ ರಾತ್ರಿಯಲ್ಲಿ ಪುರೋಜನ ಸಮೇತವಾಗಿರುವ ಆ ಅರಮನೆಗೆ ತಾವೇ ಬೆಂಕಿಯನ್ನು ಹಾಕಿ ತಾವು ಸುರಂಗಮಾರ್ಗವಾಗಿ ತಪ್ಪಿಸಿಕೊಂಡು ಹೋಗುವುದಕ್ಕೆ ಸಿದ್ಧವಾಗಿದ್ದರು. ಆ ರಾತ್ರಿಯಲ್ಲಿ ಕುಂತೀದೇವಿಯು ಒಂದು ನಿಮಿತ್ತವಾಗಿ ಆ ಪುರದ ಬ್ರಾಹ್ಮಣರಿಗೆಲ್ಲಾ ಸಮಾರಾಧನೆಯನ್ನು ಮಾಡಿಸಿ ಭೋಜನಾನಂತರ ಅವರಿಗೆ ದಕ್ಷಿಣೆ ತಾಂಬೂಲಗಳನ್ನು ಕೊಟ್ಟು ಅವರನ್ನು ಕಳುಹಿಸಿ ತಾನು ಪುತ್ರಸಮೇತಳಾಗಿ ಭೋಜನವನ್ನು ಮಾಡಿ ಸುಖನಿದ್ರೆಗೈಯುತ್ತಿದ್ದಳು. ಇದಲ್ಲದೆ ಪುರೋಜನನು ನೇಮಿಸಿದ ಆ ಶಬರಸ್ತ್ರೀಯು ಅದೇ ದಿವಸದ ರಾತ್ರಿಯಲ್ಲಿ ಕಾಲಪ್ರೇರಿತಳಾಗಿ ತನ್ನ ಐದು ಮಂದಿ ಮಕ್ಕಳನ್ನೂ ಕರೆದುಕೊಂಡು ಜೀನು ಮೊದಲಾದ ಗುರುಪದಾರ್ಥಗಳನ್ನು ತಿಂದು ಮದ್ಯಪಾನವನ್ನು ಮಾಡಿ ಮತ್ತಳಾಗಿ ಅಲ್ಲಿಯೇ ಗಾಢ ನಿದ್ರೆಯನ್ನು ಮಾಡುತ್ತಿದ್ದಳು. ಇತ್ತಲಾ ಭೀಮನು ಅರ್ಧರಾತ್ರಿಯಲ್ಲಿ ಎಲ್ಲರೂ ಗಾಢ ನಿದ್ರೆಯಲ್ಲಿರುವಾಗ ಕುಂತಿ ಮೊದಲಾದ ಐವರನ್ನೂ ಮೊದಲು ಸುರಂಗಮಾರ್ಗದಿಂದ ಆಚೆಗೆ ಕಳುಹಿಸಿ ತಾನು ದೊಡ್ಡ ಸುಂಟರಗಾಳಿ ಬಂದ ವೇಳೆಯಲ್ಲಿ ಮೊದಲು ಪುರೋಜನನು ಮಲಗಿದ್ದ ಮನೆಗೆ ಯಜ್ಞೇಶ್ವರನನ್ನು ತೋರಿಸಿ ಆ ಮೇಲೆ ತಾವಿದ್ದ ಮನೆಗೆ ಬೆಂಕಿಯನ್ನು ಹಚ್ಚಿ ಸುರಂಗಮಾರ್ಗದಿಂದ ತಾನೂ ಹೊರಟು ತಾಯಿ ಅಣ್ಣತಮ್ಮಂದಿರೊಡನೆ ಅರಣ್ಯಮಾರ್ಗವಾಗಿ ಹೋಗುತ್ತಾ ನಡೆಯಲಾರದೆ ಶ್ರಮಪಡುವ ಧರ್ಮರಾಜಾದಿಗಳನ್ನು ಭುಜದ ಮೇಲೂ ಕಂಕುಳಲ್ಲಿಯೂ ಇಟ್ಟುಕೊಂಡು ವೇಗದಿಂದ ನಡೆಯುತ್ತಾ ಗಂಗಾನದಿಯ ತಡಿಗೆ ಹೋಗಿ ಅಲ್ಲಿ ವಿದುರನು ಆಜ್ಞಾಪಿಸಿದ ದಾಶರಾಜನ ಸಹಾಯದಿಂದ ಹರಿಗೋಲ ಮೇಲೆ ಆ ಗಂಗೆಯನ್ನು ದಾಟಿ ಇನ್ನೂ ಕೆಲವು ಗಾವುದಗಳ ದೂರವನ್ನು ಹೋಗಿ ಗೊಂಡಾರಣ್ಯದಲ್ಲಿರುವ ಒಂದು ದೊಡ್ಡ ಆಲದ ಮರದ ಕೆಳಗೆ ಅವರೆಲ್ಲರನ್ನೂ ಇಳಿಸಿ ಅಲ್ಲಿ ನಿದ್ರೆಯನ್ನು ಮಾಡುತ್ತಿರುವ ಧರ್ಮರಾಜಾದಿಗಳನ್ನು ಒಬ್ಬನೇ ಧೈರ್ಯವಾಗಿ ಕಾದುಕೊಂಡು ಇರುತ್ತಿದ್ದನು.

ಅನಂತರದಲ್ಲಿ ಆ ಭೀಮನು ಎಚ್ಚತ್ತಿರುವ ಧರ್ಮರಾಜನನ್ನು ನೋಡಿ ಅಲ್ಲಿ ಎಚ್ಚರವಾಗಿರುವಂತೆ ಹೇಳಿ ತಾನು ದಾಹತೀರ್ಥವನ್ನು ತೆಗೆದುಕೊಂಡು ಬರಬೇಕೆಂದು ಜಲಪಕ್ಷಿಗಳ ಸ್ವರವನ್ನೇ ಅಲಿಸಿಕೊಂಡು ನಡೆದು ಹೋಗುತ್ತಿದ್ದನು. ಆಗ ಅವನು ಹೆಜ್ಜೆಯಿಟ್ಟ ಸ್ಥಳದಲ್ಲಿರುವ ಮಹಾ ವೃಕ್ಷಗಳೆಲ್ಲಾ ಅವನ ತೊಡೆಗಳಿಗೆ ಸೋಂಕಿ ಸಹಮೂಲವಾಗಿ ಮುರಿದು ಬೀಳುತ್ತಿದ್ದವು. ಮತ್ತು ಆತನ ಭುಜಬಲದಿಂದ ಹುಟ್ಟಿದ ಜಂಡಮಾರುತವು ದಿಕ್ಕುಗಳಲ್ಲಿ ಕಿಕ್ಕಿರಿದು ಅತಿ ಭಯಂಕರವಾದ ಧ್ವನಿಯನ್ನು ಮಾಡುತ್ತಾ ಬೀಸುವುದಕ್ಕೆ ತೊಡಗಿತು. ಹೀಗೆ ಒಂದು ಸರೋವರದ ಬಳಿಗೆ ಹೋಗಿ ಅಲ್ಲಿ ಸ್ನಾನಪಾನಗಳನ್ನು ಮಾಡಿ ತನ್ನ ಉತ್ತರೀಯದಲ್ಲಿಯೂ ತಾವರೆಯ ಎಲೆಗಳಲ್ಲಿಯೂ ಉದಕವನ್ನು ಕಟ್ಟಿಕೊಂಡು ಅಲ್ಲಿಗೆ ಎರಡು ಹರದಾರಿ ದೂರದಲ್ಲಿರುವ ತಾವು ಇಳಿದಿದ್ದ ವಟವೃಕ್ಷದ ಬಳಿಗೆ ಬಂದು ಕುಂತಿ ಮೊದಲಾದವರನ್ನೆಬ್ಬಿಸಿ ಅವರಿಗೆ ಪಾನೀಯವನ್ನು ಕೊಡಲು; ಅವರು ಆ ತಣ್ಣೀರನ್ನು ಕುಡಿದ ಮಾತ್ರದ

ಲ್ಲಿಯೇ ಮಾರ್ಗಶ್ರಮ ಪರಿಹಾರವಾಗಿ ಆ ಮರದ ಬುಡದಲ್ಲಿಯೇ ಗೊರಕೆಹಾಕುತ್ತಾ ನಿದ್ರೆ ಮಾಡುತ್ತಿದ್ದರು. ಆಗ ಭೀಮನು ಅವರನ್ನು ನೋಡಿ ಶೋಕಸಂಪತ್ತಹೃದಯನಾಗಿ ಹಸ್ತಿನಾವತೀ ಪಟ್ಟಣದಲ್ಲಿಯೂ ಇಂದ್ರಪ್ರಸ್ಥ ಪಟ್ಟಣದಲ್ಲಿಯೂ ದಿವ್ಯಶಯನಗಳ ಮೇಲೆ ಮಲಗುತ್ತಿದ್ದ ಇವರಿಗೆ ವ್ಯತ್ಯಾಸವಾಗಿರುವ ಈ ನೆಲದ ಮೇಲೆ ಹೇಗೆ ನಿದ್ರೆ ಬಂದಿತೋ ? ವಸುದೇವನಿಗೆ ತಂಗಿಯೂ ಕುಂತೀಭೋಜನಿಗೆ ಮಗಳೂ ವಿಚಿತ್ರವೀರ್ಯನಿಗೆ ಸೊಸೆಯೂ ಪಾಂಡುರಾಜನಿಗೆ ಧರ್ಮಪತ್ನಿಯೂ ಸರ್ವಲಕ್ಷಣ ಸಂಪನ್ನೆಯೂ ಪದ್ಮಗರ್ಭಸದೃಶಕಾಂತಿ ವಿರಾಜಮಾನೆಯೂ ಕೋಮಲಾಂಗಿಯೂ ದಿವ್ಯಪರ್ಯಂಕದ ಮೇಲೆ ಮಲಗುವದಕ್ಕೆ ಯೋಗ್ಯಳೂ ಆಗಿರುವ ಈ ಕುಂತಿದೇವಿಯು ದೇವಾಂಶಸಂಭವರಾದ ನಮ್ಮಂಥಾ ಕುಮಾರರನ್ನು ಪಡೆದವಳಾದರೂ ಈ ಅರಣ್ಯದಲ್ಲಿ ದಿಕ್ಕಿಲ್ಲದವಳಂತೆ ನಿದ್ರೆ ಹೋಗುವದನ್ನು ನೋಡಬೇಕಾಯಿತು ! ಧರ್ಮಪರನಾಗಿಯೂ ಮಹಾಪರಾಕ್ರಮಶಾಲಿಯಾಗಿಯೂ ತ್ರಿಲೋಕಾಧಿಪತ್ಯಕ್ಕೆ ಯೋಗ್ಯನಾಗಿಯೂ ಇರುವ ಈ ಯಮಜಾತನೂ ಈ ಭೂಮಿಯ ಮೇಲೆ ನಿದ್ರಿಸುತ್ತಾನೆ : ಶರನ್ಮೇಘ ಸಮಾನ ಕಾಂತಿವಂತನಾಗಿ ಅಸಮಾನ ಶೌರ್ಯ ಧುರಂಧರನಾದ ಈ ಧನಂಜಯನು ಹೀಗೆ ನೆಲದ ಮೇಲೆ ಮಲಗಿದ್ದಾನೆ. ಕನ್ನೈದಿಲೆಯ ಹೂವಿನೋಪಾದಿಯಲ್ಲಿ ಕಪ್ಪಾದ ಕಾಂತಿಯುಳ್ಳವರಾಗಿ ರೂಪಸಂಪತ್ತಿನಲ್ಲಿ ಅಶ್ವಿನೀ ದೇವತೆಗಳನ್ನೇ ಅನುಸರಿಸುವಂಥ ನಕುಲಸಹದೇವರೂ ಈ ನೆಲದ ಮೇಲೆ ಒರಗಿರುವುದನ್ನು ನೋಡುವುದಕ್ಕಿಂತ ಮತ್ತೊಂದು ದುಃಖ ಉಂಟೇ ? ಎಂದು ಕೊರಗುತ್ತಾ ನಿರ್ಭೀತನಾಗಿ ಕಾದುಕೊಂಡಿರುತ್ತಿದ್ದನು.

---

6. THE DEMON HIDIMBA SLAIN BY BHIMA.

ಹಿಡಿಂಬ ವಧೆ.

ಅನಂತರದಲ್ಲಿ ಪಾಂಡವರು ಮಲಗಿರುವ ಮರಕ್ಕೆ ಸ್ವಲ್ಪ ದೂರವಲ್ಲಿರುವ ಒಂದು ಮುತ್ತಿಯ ಮರವನ್ನು ಆಶ್ರಯಿಸಿಕೊಂಡು ಹಸಿವು ಬಾಯಾರಿಕೆಗಳಿಂದ ಪೀಡಿತನಾಗಿಯೂ ಮಹಾ ಬಲಶಾಲಿಯಾಗಿಯೂ ಕ್ರೂರಾತ್ಮನಾಗಿಯೂ ವಿಕಾರರೂಪವುಳ್ಳವನಾಗಿಯೂ ಕರಾಳವದನನಾಗಿಯೂ ಕೊತ್ತಿಗಣ್ಣುಗಳುಳ್ಳವನಾಗಿಯೂ ಇರುವಂಥ ಹಿಡಿಂಬನೆಂಬ ರಾಕ್ಷಸನು ಬಂದು ಸಾರಿ ಆಕಳಿಸಿ ಮೈಮುರಿದುಕೊಂಡು ಬಿರುಸಾಗಿರುವ ತಲೆಯ ಕೂದಲನ್ನು ಕೆದರಿಕೊಂಡು ಮನುಷ್ಯಗಂಧವನ್ನು ಆಘ್ರಾಣಿಸಿ ಮಾಂಸದ ಮೇಲಣ ಆಶೆಯಿಂದ ತನ್ನ ತಂಗಿಯಾದ ಹಿಡಿಂಬಿಯನ್ನು ನೋಡಿ—ಎಲೈ ಹಿಡಿಂಬಿಯೇ ! ಬಹು ಕಾಲದಲ್ಲಿ ಮನಸ್ಸಿಗೆ ಪ್ರಿಯವಾದ ಮನುಷ್ಯಮಾಂಸದ ಗಂಧವು ಗಾಳಿಯಿಂದ ತಿಳಿಯಬಂದು ನನ್ನ ಬಾಯಿಯ ನೀರನ್ನು ಕರಿಸುತ್ತದೆ. ಈಗ ತುಪ್ಪವನ್ನು ಸುರಿಯುವದಾಗಿಯೂ ಅತಿ ಮೃದುವಾಗಿಯೂ ಇರುವ ಮನುಷ್ಯನ ಖಂಡವನ್ನು ಅತಿ ತೀಕ್ಷ್ಣವಾದ ನನ್ನ ಎಂಟು ಕೋರದಾಡೆಗಳಿಂದ ಕಚ್ಚಿ ಹೊಸ ರಕ್ತವನ್ನು ಸೊರೆಕಟ್ಟುವಹಾಗೆ ಹೀರಬೇಕು. ಆದುದರಿಂದ ನೀನು ಶೀಘ್ರವಾಗಿ ಹೋಗಿ ಆ ಮನುಷ್ಯರನ್ನು

ಹುಡುಕಿ ಕಂಡು ಆವರನ್ನು ಸಂಹರಿಸಿ ನನ್ನ ಬಳಿಗೆ ತೆಗೆದುಕೊಂಡುಬಾ ನಾವಿಬ್ಬರೂ ಆ ಮಾಂಸವನ್ನು ಹೊಟ್ಟೆತುಂಬಾ ಉಂಡು ತೃಪ್ತಿಪಟ್ಟು ಸಂತೋಷದಿಂದ ಕೈತಪ್ಪಳೆ ಗಳನ್ನು ಹಾಕಿಕೊಂಡು ಸಂಗೀತವನ್ನು ಹಾಡುತ್ತಾ ನಾಟ್ಯವಾಡೋಣ ಎಂದು ಹೇಳಿ ಕಳುಹಿಸಲು; ಆ ಹಿಡಿಂಬಿಯು ವೃಕ್ಷಗಳ ಮೇಲೆ ನಡೆಯುತ್ತಾ ಪಾಂಡವರಿದ್ದ ತಾವಿಗೆ ಬಂದು ಸುಕುಮಾರಶರೀರಿಗಳಾಗಿಯೂ ರೂಪಸಂಪನ್ನರಾಗಿಯೂ ನೆಲದ ಮೇಲೆ ಮಲಗಿರುವ ಧರ್ಮರಾಜಾದಿಗಳನ್ನೂ ಅವರ ಬಳಿಯಲ್ಲಿ ಯೌವನ ಸಂಪನ್ನ ನಾಗಿಯೂ ಆಜಾನುಬಾಹುವಾಗಿಯೂ ವಿಶಾಲವಾದ ಎದೆಯುಳ್ಳವನಾಗಿಯೂ ಅಸಮಾನಸೌಂದರ್ಯಶಾಲಿಯಾಗಿಯೂ ಉನ್ನತಾಕಾರವುಳ್ಳವನಾಗಿಯೂ ಸಿಂಹಸ್ಕಂ ಧನಾಗಿಯೂ ದಿವ್ಯಕಾಂತಿ ಸಂಪನ್ನನಾಗಿಯೂ ಕಂಬುಗ್ರೀವನಾಗಿಯೂ ಕಮಲಪತ್ರಾ ಕ್ಷನಾಗಿಯೂ ಇರುವ ಎತ್ತರವಾಗಿದ್ದ ಭೀಮನನ್ನು ನೋಡಿ ಕಾಮಬಾಣಪೀಡಿತೆ ಯಾಗಿ ಆತನನ್ನು ಮುದುವೆಮಾಡಿಕೊಳ್ಳಬೇಕೆಂದು ಮನಸ್ಸಿನಲ್ಲಿ ಆಲೋಚನೆ ಮಾಡಿ ತಾನು ಕಾಮರೂಪಿಯಾದುದರಿಂದ ತನ್ನ ರೌದ್ರವಾದ ರಾಕ್ಷಸಾಕಾರವನ್ನು ಬಿಟ್ಟು ಅತಿ ರಮಣೀಯವಾದ ಮನುಷ್ಯ ಸ್ತ್ರೀ ರೂಪವನ್ನು ಧರಿಸಿ ಸರ್ವಾಲಂಕಾರಶೋಭಿತೆ ಯಾಗಿ ಮಂದಗಮನದಿಂದ ಆತನ ಇಂಗಿತಗಳನ್ನೇ ದೃಷ್ಟಿಸಿ ನೋಡುತ್ತಾ ಆತನ ಸಮೀಪಕ್ಕೆ ಬಂದು ಸೇರಲು; ಭೀಮನು ಅತಿ ಲಲಿತಾಕೃತಿಯುಳ್ಳವಳಾಗಿಯೂ ಚಂದ್ರ ಮುಖ ಶೋಭಿತೆಯಾಗಿಯೂ ಕಮಲಲೋಚನೆಯಾಗಿಯೂ ಕುಟಿಲವಾದ ಮುಂಗು ರುಳುಳ್ಳವಳಾಗಿಯೂ ನಸುನಗುತ್ತಾ ತನ್ನ ಸಮೀಪದಲ್ಲಿ ನಿಂತಿರುವವಳನ್ನು ನೋಡಿ ಆಶ್ಚರ್ಯಪಡುತ್ತಿದ್ದನು.

ಆ ಬಳಿಕ ಅವಳು ಉಚಿತಪ್ರಕಾರದಿಂದ ಆತನಿಗೆ ತನ್ನ ವಿಲಾಸಗಳನ್ನು ತೋರಿ ಸಿ ನಾಚಿಕೆಯಿಂದ ತಲೆಯನ್ನು ಬೊಗ್ಗಿಸಿ ಮುಖದಲ್ಲಿ ಮುಗುಳುನಗೆಯನ್ನು ತೋರಿ ಸುತ್ತಾ ಇಂತೆಂದಳು—ಎಲೈ, ಮಹಾಪುರುಷನೇ! ನೀನು ಯಾರು? ಎಲ್ಲಿಂದ ಬಂದೆ? ದೇವಕುಮಾರಕರೋಪಾದಿಯಲ್ಲಿ ಮಲಗಿರುವ ಈ ಕುಮಾರಕರು ಯಾರು? ಸ್ವಂತ ಮನೆಯಲ್ಲಿ ಸುಖದಿಂದ ಮಲಗಿರುವ ಹಾಗೆ ನಿಷ್ಕಂಟಕವಾದ ಈ ವನದಲ್ಲಿ ನಿರ್ಭೀತೆಯಾಗಿ ಮಲಗಿರುವ ಈ ಮುದುಕಿಯು ನಿನಗೇನಾಗಬೇಕು? ಈ ಮಹಾರಣ್ಯವು ರಾಕ್ಷಸ ಭೂಯಿಷ್ಠವಾದುದೆಂದು ತಿಳಿದೂ ಇಲ್ಲಿ ಹೇಗಿದ್ದೀರಿ? ಈ ಅರಣ್ಯದಲ್ಲಿ ಹಿಡಿಂಬನೆಂಬ ಒಬ್ಬ ರಾಕ್ಷಸನು ಪಾಪಾತ್ಮನಾಗಿ ದುಷ್ಟಸ್ವಭಾವದಿಂದ ಮನುಷ್ಯಮಾಂಸವನ್ನು ಬಯಸಿ ನಿಮ್ಮನ್ನು ಕೊಂದು ತರುವಹಾಗೆ ನನ್ನನ್ನು ಇಲ್ಲಿಗೆ ಕಳುಹಿಸಿದನು. ಆದರೆ ನಾನು ನಿನ್ನ ರೂಪಾತಿಶಯಕ್ಕೆ ಮೋಹಿಸಿ ನಿನ್ನನ್ನು ಗಂಡನನ್ನಾಗಿ ವರಿಸಿದ್ದೇನೆ. ಇದು ಸತ್ಯವು ನೀನು ನನ್ನ ಮನೋಭೀಷ್ಟವನ್ನು ಸಲ್ಲಿಸಿದರೆ ನಿಮಗೆ ರಾಕ್ಷಸರಿಂದುಂಟಾಗುವ ಭಯವನ್ನು ತಪ್ಪಿಸುತ್ತೇನೆ. ನೀನು ನನ್ನನ್ನು ವರಿಸುವುದಕ್ಕೆ ಸಮ್ಮತಿ ಪಡದಿದ್ದರೆ ನನ್ನ ಪ್ರಾಣವು ನಿಲ್ಲಲಾರದು ಎನಲು; ಭೀಮನು ಎಲೈ, ಕೋಮಲಾಂಗಿಯೇ! ನೀನು ಹೇಳುವುದು ಯುಕ್ತವೇ ಸರಿ ಆದರೂ ನನಗೆ ಜ್ಯೇಷ್ಠಭ್ರಾತೃವಾಗಿರುವ ಈ ಯುಧಿ ಷ್ಠಿರನು ಕನ್ಯಾಪರಿಗ್ರಹ ಮಾಡುವದಕ್ಕಿಂತ ಮುಂಚೆ ನಾನು ಹೇಗೆ ನಿನ್ನನ್ನು ವರಿಸಲಿ?

ಮತ್ತು ನನಗೆ ಈ ರಾಕ್ಷಸಾದಿಗಳಿಂದ ಲೇಶವೂ ತೊಂದರೆ ಉಂಟಾಗಲಾರದು. ನನ್ನ ಎದುರಿಗೆ ನಿಲ್ಲುವುದಕ್ಕೆ ದೇವೇಂದ್ರಾದಿ ದೇವತೆಗಳೇ ಭಯಪಡುವಾಗ ಈ ರಾಕ್ಷಸ ರೆಷ್ಟು ಮಾತ್ರದವರು ? ನೀನು ಹೋಗಿ ಅಗತ್ಯವಾಗಿ ನಿನ್ನ ಅಣ್ಣನನ್ನು ಕಳುಹಿಸಬ ಹುದು ಎಂದು ಹೇಳಲು ; ಅಕೆಯು ಅವನನ್ನು ಬಿಟ್ಟು ಹೋಗಲಾರದೆ ಅಲ್ಲಿಯೇ ನಿಂತಿದ್ದಳು.

ಹೀಗಿರುವಷ್ಟರಲ್ಲಿಯೇ ರೋಷಾರುಣನೇತ್ರಗಳುಳ್ಳವನಾಗಿಯೂ ಮಹಾರೌ ದ್ರಾಕಾರಧರನಾಗಿಯೂ ಊರ್ಧ್ವಕೇಶವುಳ್ಳವನಾಗಿಯೂ ಕಪ್ಪಾದ ಶರೀರವುಳ್ಳವನಾ ಗಿಯೂ ದಂಷ್ಟ್ರಾಕರಾಳಮುಖವುಳ್ಳವನಾಗಿಯೂ ಸಿಂಹದಂತೆ ರೌದ್ರವಾದ ಗರ್ಜನೆ ಯುಳ್ಳವನಾಗಿಯೂ ಮಹಾ ಬಲಶಾಲಿಯಾಗಿಯೂ ಇರುವ ಹಿಡಿಂಬನು ತನ್ನ ತಂಗಿ ಯಾದ ಹಿಡಿಂಬಿಯು ತಡಮಾಡಿದುದರಿಂದ ಅತಿ ಕೋಪಿಷ್ಠನಾಗಿ ಹಲ್ಲುಗಳನ್ನು ಕಡಿ ಯುತ್ತಾ ಮೈಮುಗಳನ್ನು ಕಚ್ಚುತ್ತಾ ಕಣ್ಣುಗಳಿಂದ ರಕ್ತಮಯವನ್ನು ಕಾರುತ್ತಾ ಭುಜ ಯುಗ್ಮವನ್ನು ಅಪ್ಪಳಿಸುತ್ತಾ ಕಾಲುಗಳಿಂದ ನೆಲವನ್ನು ಬಡಿಯುತ್ತಾ ಮೇಘದಂತೆ ಗರ್ಜಿಸುತ್ತಾ ಕೋರೆದಾಡೆಗಳನ್ನು ಮಸೆದುಕೊಳ್ಳುತ್ತಾ ಹಸಿವು ಬಾಯಾರಿಕೆಗಳಿಂದ ಪೀಡಿತನಾಗಿ—ನನಗೆ ಆಹಾರ ವಿಘ್ನವನ್ನು ಮಾಡಿದ ದುರಾತ್ಮರಾರು ? ನನ್ನ ದುರಾ ಗ್ರಹವನ್ನು ತಿಳಿದಿದ್ದರೂ ಹಿಡಿಂಬಿಯು ಹಿಂದಿರುಗಿ ಬಾರದೆ ಸಾವಕಾಶವನ್ನು ಮಾಡು ವುದಕ್ಕೆ ಕಾರಣವೇನು ? ಎಂದು ಆ ಹಿಡಿಂಬನು ತಾನು ಕೂತಿದ್ದ ಮರದ ಮೇಲಿನಿಂದ ಕೆಳಕ್ಕೆ ಧುಮುಕಿ ಯುಧಿಷ್ಠಿರಾದಿಗಳಿದ್ದೆಡೆಗೆ ಬರುತ್ತಿರಲು ; ಅತಿಭಯಂಕರನಾಗಿರು ವಂಥ ಆತನ ಬರುವಿಕೆಯನ್ನು ನೋಡಿ ಹಿಡಿಂಬಿಯು ಭೀತಳಾಗಿ ಭೀಮನನ್ನು ನೋಡಿ—ಎಲೈ, ದುಷ್ಟನಾದ ಹಿಡಿಂಬನು ಬರುತ್ತಾನೆ. ನೀನು ಇವರನ್ನು ಎಬ್ಬಿಸಿ ದರೆ ನಾನು ಕಾಮರೂಪಿಯಾದಕಾರಣ ಎಲ್ಲಾದರೂ ಹೊತ್ತುಕೊಂಡು ಹೋಗುತ್ತೇ ನೆನಲು ; ಭೀಮನು—ಎಲೈ, ರಾಕ್ಷಸಿಯೇ ! ಈ ಹುಲುರಕ್ಕಸನ ಬರುವಿಕೆಗೆ ಭಯ ಪಟ್ಟು ಶತ್ರುಭೀಮನಾದ ನಾನು ಇವರ ನಿದ್ರಾಭಂಗವನ್ನು ಮಾಡುವುದಿಲ್ಲ. ನಾನು ಮನುಷ್ಯಮಾತ್ರದವನೆಂದು ತಿಳಿಯಬೇಡ. ಈ ನಿಶಾಚರನು ಜೀವದ ಆಶೆಯನ್ನು ತ್ಯಜಿಸಿ ನನ್ನನ್ನು ಕೆಣಕುವುದಕ್ಕೆ ಬರುತ್ತಾನೆ. ನೀನು ಹೆದರದೆ ನಿಶ್ಚಿಂತಳಾಗಿರು ಎನಲು ; ಅಷ್ಟರಲ್ಲೇ ಹಿಡಿಂಬನು ಸಮೀಪಕ್ಕೆ ಬಂದು ದೊಡ್ಡ ತುರುಬಿನಲ್ಲಿ ಮುಡಿದಿರುವ ಕುಸು ಮಸರವನ್ನೂ ಅತಿಸೂಕ್ಷ್ಮವಾಗಿ ನೆರಿಗೆಯನ್ನು ಹಿಡಿದು ಉಟ್ಟಿರುವ ದಿವ್ಯಾಂಬರವನ್ನೂ ತೊಟ್ಟಿರುವ ಂದಿಗೆ ಪಾಡಗ ಪಾದರಸ ಕಿರುಗಂಟೆ ಒಡ್ಯಾಣ ಕೈಸರ ಕಡಗ ಜಳಕಿ ತಾಳೀಪದಕ ಮುತ್ತಿನಸರ ಚಿನ್ನದಸರ ಹರಳೋಲೆ ಮೂಗುತಿ ಬಾವುಲಿ ಮೊದಲಾದ ಆಭರಣಗಳನ್ನೂ ಪೂರ್ಣಚಂದ್ರ ಸಮಾನವಾದ ಮುಖವನ್ನೂ ಆಂದವಾಗಿರುವ ಹುಬ್ಬು ಗಳನ್ನೂ ಸಂಪಿಗೆಯ ಮೊಗ್ಗಿನೋಪಾದಿಯಲ್ಲಿರುವ ಮೂಗನ್ನೂ ಕನ್ನೈದಿಲೆಯ ಪುಷ್ಪದ ಎಸಳಿನೋಪಾದಿಯಲ್ಲಿರುವ ನೇತ್ರಗಳನ್ನೂ ಚಿನ್ನದ ಬಣ್ಣಕ್ಕೆ ಸಮಾನವಾದ ಶರೀರವನ್ನೂ ಹೊಂದಿ ಭೀಮನ ಬಳಿಯಲ್ಲಿ ನಲವಿನಿಂದ ನಿಂತಿರುವ ತನ್ನ ತಂಗಿಯನ್ನು ನೋಡಿ ಇವಳು ಪುರುಷಾಭಿಲಾಷೆಯಿಂದ ಹೀಗೆ ಮಾಡಿದಳೆಂದು ಕೋಪಿಸಿಕೊಂಡು—ಎಲೈ, ಹಿಡಿಂ

ಬಿಯೇ ! ನನ್ನ ಭೋಜನಕ್ಕೆ ಯಾವನು ವಿಘ್ನವನ್ನು ಮಾಡುವನು ? ನಾನು ಹಸಿವಿನಿಂದ ಬಾಧೆ ಪಡುವುದನ್ನು ಎಣಿಸದೆ ನೀನು ಯಾರ ಬಲದಿಂದ ಇಲ್ಲಿ ನಿಂತೆ ? ರಾಕ್ಷಸಕುಲಕ್ಕೆ ಹೀಗೆ ಅಪಕೀರ್ತಿಯನ್ನುಂಟುಮಾಡಿದ ನಿನ್ನನ್ನು ಈಗಲೇ ವಧಿಸುತ್ತೇನೆಂದು ಕೋರೆದಾಡೆಗಳು ಅದಿರುವಹಾಗೆ ದಂತಗಳನ್ನು ನರನರನೆ ಕಡಿಯುತ್ತಾ ಅಟ್ಟಹಾಸವನ್ನು ಮಾಡಿಕೊಂಡು ಹಿಡಿಂಬಿಯನ್ನು ಹೊಡೆಯುವುದಕ್ಕೆ ಕೈಯ್ಯೆತ್ತಿದನು. ಭೀಮನು ಆ ರಾಕ್ಷಸನನ್ನು ನೋಡಿ ತನ್ನ ಅಣ್ಣತಮ್ಮಂದಿರಿಗೂ ತಾಯಿಗೂ ನಿದ್ರಾಭಂಗವಾಗಕೂಡದೆಂದೆಣಿಸಿ—ಎಲೈ, ರಾಕ್ಷಸಾಧಮನೇ ! ನಿಲ್ಲು ; ನಿಲ್ಲು ! ಎಂದು ಹೇಳಿ ಆತನ ಎದುರಿಗೆ ಹೋಗಿ ನಿಂತು—ಎಲೋ, ಹೇಡಿಯೇ ! ತಂಗಿಯನ್ನು ಕೊಲ್ಲುವುದಕ್ಕೆ ಅಪೇಕ್ಷಿಸಿದ ನಿನ್ನ ದಿಟ್ಟತನವನ್ನು ಸುಡಬೇಕು ! ಲೋಕದಲ್ಲಿ ಸ್ತ್ರೀಯರು ಮದನಾಧೀನರಾಗಿ ಪುರುಷರನ್ನು ಬಯಸುವುದು ಸಹಜವೇ. ನೀನು ಹೆಂಗಸಿನ ಮೇಲೆ ಕೈಮಾಡುವುದು ಉಚಿತವಲ್ಲ. ನಿನ್ನಲ್ಲಿ ಬಲವಿದ್ದರೆ ನನ್ನ ಸಂಗಡ ಯುದ್ಧವನ್ನು ಮಾಡು. ನಾಸೊಬ್ಬನೇ ನಿನ್ನನ್ನು ಯಮಸನ್ನಿಧಾನಕ್ಕೆ ಕಳುಹಿಸುತ್ತೇನೆ. ಮತ್ತು ನಿನ್ನ ಕರಚರಣಾದ್ಯವಯವಗಳೆಲ್ಲವನ್ನೂ ನಾಯಿ ನರಿ ಹದ್ದು ಮುಂತಾದವುಗಳಿಗೆ ಹಂಚಿಕೊಟ್ಟು ಈ ವನವನ್ನು ಅರಾಕ್ಷಸವಾಗಿ ಮಾಡಿ ಸರ್ವರಿಗೂ ಸಂತೋಷವನ್ನುಂಟುಮಾಡುತ್ತೇನೆಂದು ಹೇಳಲು ;

ಹಿಡಿಂಬನು—ಎಲೈ, ನರಾಧಮನೇ ! ನಿನ್ನನ್ನು ನೀನೇ ಯಾಕೆ ಹೊಗಳಿಕೊಳ್ಳುತ್ತೀ ? ಸಾಮರ್ಥ್ಯವಿದ್ದರೆ ನಿನ್ನ ಭುಜಬಲವನ್ನು ತೋರಿಸು ಮೊದಲು ನಿನ್ನನ್ನು ಕೊಂದು ನಿನ್ನ ರಕ್ತವನ್ನು ಹೀರಿ ಆ ಮೇಲೆ ಇಲ್ಲಿ ಮಲಗಿರುವವರ ಮಾಂಸವನ್ನು ತಿಂದು ಅನಂತರ ಈ ದುಷ್ಟಳನ್ನು ಸಂಹರಿಸುತ್ತೇನೆಂದು ಹೇಳಿ ಯುದ್ಧಸನ್ನದ್ಧನಾಗಿ ಕಾಣಿಸಿಕೊಳ್ಳಲು ; ಭೀಮಪರಾಕ್ರಮಶಾಲಿಯಾದ ಭೀಮಸೇನನು ಮುಖದಲ್ಲಿ ಮುಗುಳುನಗೆಯನ್ನು ತೋರಿಸುತ್ತಾ ಚಾಚಿರುವ ಹಿಡಿಂಬನ ತೋಳುಗಳನ್ನು ತನ್ನ ಬಾಹುದಂಡಗಳಿಂದ ಸಿಂಹವು ಕ್ಷುದ್ರಮೃಗಗಳನ್ನು ಹಿಡಿದುಕೊಳ್ಳುವಂತೆ ಗಟ್ಟಿಯಾಗಿ ಹಿಡಿದುಕೊಳ್ಳಲು ; ಆ ರಾಕ್ಷಸನು ಭೀಮನ ಭುಜಬಲಕ್ಕೆ ಆಶ್ಚರ್ಯಪಟ್ಟು ರೋಷದಿಂದ ಆತನನ್ನು ಬಿಗಿದಪ್ಪಿಕೊಂಡು ಅಟ್ಟಹಾಸವನ್ನು ಮಾಡಲು ; ಭೀಮನು ಇನ್ನೂ ಕೋಪಿಸಿಕೊಂಡು—ರಾಕ್ಷಸನ ಸಿಂಹನಾದದಿಂದ ಇವರಿಗೆ ಎಚ್ಚರವಾದೀತು ಎಂದು ಎಣಿಸಿ ಆ ರಾಕ್ಷಸನನ್ನು ದೂರವಾಗಿ ಆಚೆಗೆ ಎಳೆದುಕೊಂಡು ಹೋಗಿ ಮತ್ತಿ ಮಾವು ತಾಳೆ ಹೊಂಗೆ ಮುಂತಾದ ಮರಗಳಿಂದಲೂ ಪರ್ವತ ಶಿಖರಗಳಿಂದಲೂ ಗುಂಡು ಕಲ್ಲುಗಳಿಂದಲೂ ಅವನೊಡನೆ ಹೆಣಗಾಡುತ್ತಿದ್ದನು. ಆ ಮೇಲೆ ಈ ಸಾಮು ಸರಿಯಲ್ಲವೆಂದೆಣಿಸಿ ಬಾಹುಯುದ್ಧವನ್ನು ಮಾಡುವುದಕ್ಕೆ ತೊಡಗಿ ಇಬ್ಬರೂ ಮದದಾನೆಗಳೋಪಾದಿಯಲ್ಲಿ ರೋಷಭೀಷಣಾಕಾರಗಳಿಂದ ಕೂಡಿದವರಾಗಿ ಸರಿಮಿಗಿಲಾಗಿ ಹತ್ತಿಕೊಂಡು ಮಗುಚಿ ವಿಂಗಡಿಸುತ್ತಾ ಭುಜಗಳಿಗೆ ಭುಜಗಳನ್ನು ಆನಿಸಿ ತಳ್ಳುತ್ತಾ ಒಳಹೊಕ್ಕು ಒಬ್ಬರನ್ನೊಬ್ಬರು ಎತ್ತಿ ಹಾಕುತ್ತಾ ಸಿಕ್ಕಿದರೆ ತಿರಿಗಿಹಾಕುತ್ತಾ ಕರಕೌಶಲ್ಯಗಳನ್ನು ತೋರಿಸುತ್ತಾ ಲಾಗಗಳನ್ನು ಹಾಕಿ ಪೆಟ್ಟು ತಪ್ಪಿಸಿಕೊಂಡು ಎಡಗೈಯ್ಯಿಂದ ಕೊರಳನ್ನು ಒತ್ತಿ ಹಿಡಿದು ಮಂಡಿಗೆ ಮಂಡಿಯನ್ನು ತಾಡಿಸಿ ತಲೆ ಕೆಳಗಾಗಿ ತಳ್ಳುತ್ತಾ ವಾಢೆ

ಪಾಟನಲ್ಲಿ ಅಮುಕಿಕೊಂಡು ಹೊಕ್ಕು ಲಂಘಿಸಿ ನೂಕುತ್ತಾ ಚಕ್ರದೋಪಾದಿಯಲ್ಲಿ ಗರಗರನೆ ತಿರುಗುತ್ತಾ ತಮ್ಮ ಪಾದಗಳ ಪೆಟ್ಟಿನಿಂದ ಹೊದೆಗಳನ್ನೂ ಮರಗಳನ್ನೂ ಬಳ್ಳಿಗಳನ್ನೂ ಧ್ವಂಸಮಾಡುತ್ತಾ ಬಾರಿಬಾರಿಗೂ ಉಲ್ಲಾಸದಿಂದ ಕೈಗಳನ್ನು ಅಪ್ಪಳಿಸುತ್ತಾ ಕಲ್ಲುಗಳಂತಿರುವ ಮುಷ್ಟಿಗಳಿಂದ ಒಬ್ಬರನ್ನೊಬ್ಬರು ತಿವಿಯುತ್ತಾ ಅಟ್ಟಹಾಸಗಳಿಂದ ದಿಗಂತರವನ್ನು ಮುಚ್ಚುತ್ತಾ ಒಬ್ಬರೊಬ್ಬರ ಮೇಲೆ ರೋಷಯುಕ್ತರಾಗಿ ಸೆಣಸಾಡುತ್ತಿರುವ ಸಮಯದಲ್ಲಿ ಮರದ ಕೆಳಗೆ ನಿದ್ರೆಯನ್ನು ಮಾಡುತ್ತಾ ಇದ್ದ ಕುಂತೀ ಧರ್ಮರಾಜಾದಿಗಳು ಎಚ್ಚತ್ತು, ಎದುರಿನಲ್ಲಿ ನಿಂತಿರುವ ಹಿಡಿಂಬಿಯಿಂದ ಸಕಲ ವೃತ್ತಾಂತವನ್ನೂ ತಿಳಿದು ಭೀಮನಿಗೆ ಇಂಥಾ ಕಷ್ಟ ಬಂದಿತೆ? ಅಯ್ಯೋ! ಎಂದು ಕ್ಲೇಶಪಡುತ್ತಿದ್ದರು.

ಆಗ ಅರ್ಜುನನು ಭೀಮನ ಸಮೀಪಕ್ಕೆ ಹೋಗಿ—ಎಲೈ? ಮಹಾತ್ಮನೇ! ನಾವು ನಿದ್ರೆಯಿಂದ ಈ ವೃತ್ತಾಂತವನ್ನು ತಿಳಿಯದೆ ಹೋದೆವು. ಈಗ ಕುಂತೀಧರ್ಮಜರನ್ನು ನಕುಲಸಹದೇವರು ಸೋಡಿಕೊಳ್ಳುತ್ತಿದ್ದಾರೆ ನಾನು ನಿನಗೆ ಸಹಾಯಮಾಡುವುದಕ್ಕಾಗಿ ಬಂದೆನು. ನೀನು ಸ್ವಲ್ಪ ಹೊತ್ತು ಸುಮ್ಮನಿರು ಎನಲು; ಭೀಮನು—ಎಲೈ, ತಮ್ಮನೆ! ನನ್ನ ಬಾಹುಮಧ್ಯದಲ್ಲಿ ಸಿಕ್ಕಿರುವ ಈ ಕಳ್ಳನು ಪ್ರಾಣಸಹಿತ ಎಲ್ಲಿಗೆ ಹೋದಾನು? ನೀನು ಭಯಪಡಬೇಡ, ಸುಮ್ಮನೆ ನೋಡುತ್ತಿರು ಎನಲು; ಅರ್ಜುನನು—ಎಲೈ, ಭೀಮನೇ! ನೀನು ನಿನ್ನೆಯ ರಾತ್ರಿಯಿಂದ ಇನ್ನೂ ಯುದ್ಧವನ್ನು ಪೂರಯಿಸಲಿಲ್ಲ. ಪ್ರಾತಃಕಾಲವಾಗುತ್ತಾ ಬಂದಿತು, ಇವನನ್ನು ಕೊಲ್ಲುವುದಕ್ಕೆ ಯಾಕೆ ತಡಮಾಡುತ್ತೀಯೆ? ಇನ್ನು ಮೇಲೆ ಸಂಧ್ಯಾಸಮಯ ಬರುತ್ತಿದೆ. ರೌದ್ರವೆಂಬ ಹೆಸರುಳ್ಳ ಸಮಯದಲ್ಲಿ ರಾಕ್ಷಸರಿಗೆ ಬಲಹೆಚ್ಚುವುದೆಂದು ಲೋಕರೂಢಿಯಿರುವುದರಿಂದ ಈತನ ಸಂಗಡ ಏನೋದಗಳನ್ನು ಮಾಡದೆ ಶೀಘ್ರ ವಾಗಿ ಕೊಲ್ಲು ಎನಲು; ಆ ಕ್ಷಣವೇ ಭೀಮನು ತನ್ನ ಭುಜಬಲವನ್ನು ತೋರಿಸುತ್ತಾ ಆ ರಾಕ್ಷಸನ ತೋಳುಗಳನ್ನು ತನ್ನ ಹಸ್ತದಿಂದ ಹಿಡಿದು ನೂರುಸಾರಿ ಗರಗರನೆ ತಿರಿಗಿಸಿ ಅವನನ್ನು ಕುರಿತು—ಎಲೈ, ರಾಕ್ಷಸಾಧಮನೇ! ಇಷ್ಟು ಕಾಲವೂ ಮನುಷ್ಯರಿಗೆ ಹಿಂಸೆಯನ್ನು ಮಾಡುತ್ತಾ ಮಾಂಸಗಳನ್ನು ಮೆದ್ದು ಪುಷ್ಟನಾಗಿ ಭೂಮಿಗೆ ಹೊರೆಯಾಗಿ ಬದುಕಿದೆ ಇನ್ನು ಮೇಲೆ ಸುಮ್ಮನೆ ಸತ್ತುಹೋಗು. ಈ ವನವು ಈ ಹೊತ್ತು ಮೊದಲ್ಗೊಂಡು ನಿಷ್ಕಂಟವಾಗಿ ಸಕಲಜನಸಂಚಾರಯೋಗ್ಯವಾಗಿರಲಿ ಎಂದು ಹೇಳಿ ಅವನನ್ನು ಮೇಲಕ್ಕೆ ಎತ್ತಿ ಭೂಮಿಗೆ ಬಡಿದು ತನ್ನ ಪಾದಗಳಿಂದ ಉಜ್ಜುತ್ತಾ ಕುತ್ತಿಗೆಯನ್ನು ಓಡಿದು ನುಲಿಯಲು; ಆ ಹಿಡಿಂಬನು ಮಳೆಯಲ್ಲಿ ನೆನೆದಿರುವ ಭೇರಿಯ ಶಬ್ದದಂತೆ ವಿಕಾರ ಧ್ವನಿಯನ್ನು ಮಾಡುತ್ತಾ ಮರಣವನ್ನೈದಿದನು. ಆಗ ಕುಂತೀ ಧರ್ಮರಾಜಾದಿಗಳೂ ದೇವತೆಗಳೂ ಅತ್ಯಂತ ಹರ್ಷಿತರಾದರು.

ಆ ತರುವಾಯ ಅರ್ಜುನನು—ಈ ವನ ಸಮೀಪದಲ್ಲಿ ಒಂದು ಪಟ್ಟಣವಿರುವಂತೆ ಕಾಣಿಸುತ್ತದೆ. ಈ ಗದ್ದಲವನ್ನು ಆ ಪಟ್ಟಣದವರು ತಿಳಿದರೆ ಅವರ ಮೂಲಕ ನಮ್ಮ ವೃತ್ತಾಂತವು ಕೌರವರಿಗೆ ಹೇಗಾದರೂ ತಿಳಿಯಬರುತ್ತದೆ. ಆದಕಾರಣ ಇಲ್ಲಿಂದ ಶೀಘ್ರ

ವಾಗಿ ಹೋಗಬೇಕೆನಲು ; ಎಲ್ಲರೂ ಆ ವನವನ್ನು ಬಿಟ್ಟು ಮುಂದಕ್ಕೆ ಹೊರಟರು. ಹಿಡಿಂಬಿಯು ಅವರ ಹಿಂಗಡೆಯಲ್ಲಿಯೇ ನಡೆದಳು. ಹೀಗೆ ಸ್ವಲ್ಪ ದೂರ ಹೋದ ಮೇಲೆ ಆ ಹಿಡಿಂಬಿಯು ಕುಂತೀಧರ್ಮರಾಜರಿಗೆ ನಮಸ್ಕರಿಸಿ ಕೈಕಟ್ಟಿ ನಿಂತುಕೊಂಡು ಕುಂತಿಯ ಸಂಗಡ—ಎಲೌ, ತಾಯೇ ! ನಾನು ಭೀಮನನ್ನು ನೋಡಿದುದು ಮೊದಲು ಆತನನ್ನೇ ವರಿಸಿ ಇದ್ದೇನೆ. ಆತನೆನಗೆ ಪತಿಯಾಗದೆ ಹೋದರೆ ನನ್ನ ಪ್ರಾಣಗಳು ನಿಲ್ಲಲಾರವು. ಆದುದರಿಂದ ನೀವು ಆತನನ್ನು ಒಡಂಬಡಿಸಿ ನನಗೆ ಪ್ರಾಣದಾನವನ್ನು ಮಾಡಬೇಕು. ನಾನು ದುಷ್ಪಸ್ತ್ರೀ ಎಂದು ಎಣಿಸಬೇಡಿರಿ ನಾನು ಸಾಲಕಟಂಕಟಾ ಎಂಬ ಅಪ್ಸರಸ್ತ್ರೀಯು ; ನಾನು ತ್ರಿಕಾಲಜ್ಞಳು. ನಿಮ್ಮನ್ನು ಧೃತರಾಷ್ಟ್ರನು ವಾರಣಾವತಕ್ಕೆ ಕಳುಹಿಸಿದುದನ್ನೂ ನೀವು ವಿದುರನ ಸಹಾಯದಿಂದ ಅರಗಿನ ಮನೆಯಿಂದ ತಪ್ಪಿಸಿಕೊಂಡುದನ್ನೂ ಇಲ್ಲಿಂದಮುಂದೆ ಹೋದರೆ ಶಾಲಿಹೋತ್ರಾಶ್ರಮದಲ್ಲಿ ನಿಮಗೆ ವೇದವ್ಯಾಸರ ಸಂದರ್ಶನ ಉಂಟಾಗುವುದನ್ನೂ ಅವರ ಅನುಗ್ರಹದಿಂದ ಮುಂದೆ ನಿಮಗಾಗ ತಕ್ಕ ಶುಭವನ್ನೂ ಬಲ್ಲೆನು ಎಂದು ಹೇಳಲು ; ಆ ಕುಂತಿಯು ಧರ್ಮಜನೊಡನೆ—ಇವಳು ದುಷ್ಪಸ್ತ್ರೀಯಲ್ಲ. ಭೀಮನು ಪರಿಗ್ರಹಿಸ ಬಹುದೆಂದು ಹೇಳಲು ; ಅನಂತರದಲ್ಲಿ ಧರ್ಮಜನು ಭೀಮನನ್ನು ಕರೆದು—ನೀನು ನಮ್ಮಿಬ್ಬರ ಅಪ್ಪಣೆಯ ಪ್ರಕಾರ ಈಕೆಯನ್ನು ಪರಿಗ್ರಹಿಸು ಎಂದು ಆಜ್ಞಾಪಿಸಲು ; ಭೀಮನು ಸಮ್ಮತಿಸಿ ಅವಳನ್ನು ವರಿಸಿದನು. ಹೀಗೆ ಇವರು ಬಹು ದೂರವನ್ನು ನಡೆದುಕೊಂಡು ಶಾಲಿಹೋತ್ರಾಶ್ರಮವನ್ನು ಸೇರಿದರು.

7. BHIMA SLAYS THE DEMON BAKA.

೭. ಬಕಾಸುರ ಸಂಹಾರ.

ಆ ಬಳಿಕ ಪಾಂಡವರು ಶಾಲಿಹೋತ್ರಾಶ್ರಮದಲ್ಲಿ ಆ ಮಹಾನುಭಾವನ ದೆಸೆಯಿಂದ ಸತ್ಕೃತರಾಗಿ ಜಟೆಗಳನ್ನು ಧರಿಸಿ ನಾರುಸೀರೆಗಳನ್ನುಟ್ಟು ಕೃಷ್ಣಾಜಿನವನ್ನು ಹೊದೆದುಕೊಂಡು ತಾಪಸವೇಷವನ್ನು ಧರಿಸಿಕೊಂಡು ಬ್ರಾಹ್ಮಣರೋಪಾದಿಯಲ್ಲಿ ವೇದವೇದಾಂಗಗಳನ್ನು ಓದುತ್ತಾ ಉಪನಿಷತ್ಪಾರಾಯಣವನ್ನು ಮಾಡುತ್ತಾ ನೀತಿಶಾಸ್ತ್ರ ಧರ್ಮಶಾಸ್ತ್ರಗಳನ್ನು ಪಠಿಸುತ್ತಾ ಶಾಲಿಹೋತ್ರನ ಅಪ್ಪಣೆಯನ್ನು ತೆಗೆದುಕೊಂಡು ಆ ವನದಿಂದ ಹೊರಟುಬರುವ ಮಾರ್ಗದಲ್ಲಿ ದುಷ್ಟಮೃಗಗಳನ್ನು ಕೊಲ್ಲುತ್ತಾ ಅತಿತ್ವರಿತದಿಂದ ಮತ್ಸ್ಯತ್ರಿಗರ್ತ ಪಾಂಚಾಲ ದೇಶಗಳನ್ನೂ ನಾನಾಬಿದುರಿನ ಅರಣ್ಯಗಳನ್ನೂ ರಮಣೀಯ ವನ ಪ್ರದೇಶಗಳನ್ನೂ ಏಮಲೋದಕಗಳುಳ್ಳ ಸರೋವರಗಳನ್ನೂ ದಾಟುತ್ತಾ ಮಾರ್ಗದಲ್ಲಿ ನಡೆಯಲಾರದ ತಮ್ಮ ತಾಯಿಯನ್ನು ಉಪಚರಿಸುತ್ತಾ ಕೆಲವು ಪ್ರದೇಶಗಳಲ್ಲಿ ಪ್ರಚ್ಛನ್ನರಾಗಿ ಹೋಗುತ್ತಾ ಮಾರ್ಗದಲ್ಲಿ ತಮ್ಮ ಮುತ್ತಪ್ಪನಾದ ವ್ಯಾಸಮುನೀಶ್ವರನನ್ನು ಕಂಡು ಆತನ ಪಾದಗಳಿಗೆ ಕುಂತೀ ಸಮೇತರಾಗಿ ನಮಸ್ಕರಿಸಿ ವಿನಯದಿಂದ ನಿಂತಿರಲು ; ಆ ವ್ಯಾಸನು—ಎಲೈ, ಮಹಾತ್ಮರಿರಾ !

ಹಿಡಿಂಬವಧೆಯು ಬಹು ಜನಾನಂದಕರವಾಯಿತು. ಇಲ್ಲಿಗೆ ಸಮೀಪದಲ್ಲಿ ಏಕಚಕ್ರವು ರವೆಂಬೊಂದು ಪಟ್ಟಣವಿದೆ. ಆ ಪಟ್ಟಣವು ರಮಣೀಯವಾಗಿರುವುದರಿಂದ ನಿಮಗೆ ವಾಸಯೋಗ್ಯವಾಗಿ ಇರುವುದು. ಆ ಪಟ್ಟಣಕ್ಕೆ ನಾನೂ ಒಂದು ವೇಳೆ ಬರುತ್ತೇನೆ. ನೀವು ಪ್ರಚ್ಛನ್ನರೂಪದಿಂದ ಇರಿ ಎಂದು ಹೇಳಿ ಹೋದನು. ಅದೇಪ್ರಕಾರ ಪಾಂಡವರು ಏಕಚಕ್ರನಗರಕ್ಕೆ ಬಂದು ಅಲ್ಲಿ ಒಬ್ಬ ಬ್ರಾಹ್ಮಣನ ಮನೆಯಲ್ಲಿ ಇಳಿದುಕೊಂಡು ಆ ಪಟ್ಟಣದ ಬಳಿಯಲ್ಲಿರುವ ನಾನಾ ಪ್ರಕಾರವಾದ ವನಗಳನ್ನೂ ರಮಣೀಯವಾದ ಭೂಪ್ರದೇಶಗಳನ್ನೂ ವಿಮಲೋದಕವುಳ್ಳ ಸರಸ್ಸುಗಳನ್ನೂ ನೋಡುತ್ತಾ ಕಾಲಹರಣ ಮಾಡುತ್ತಿದ್ದರು. ಮತ್ತು ಭೀಮಾರ್ಜುನನಕುಲಸಹದೇವರು ಭಿಕ್ಷೆಯನ್ನು ಮಾಡಿಕೊಂಡು ಬಂದು ಆ ಅನ್ನದಿಂದ ಕುಂತೀಧರ್ಮರಾಜರನ್ನು ಪೋಷಿಸುತ್ತಾ ಶಮದಮಾದಿ ಸದ್ಗುಣಗಳಿಂದ ಅಲ್ಲಿದ್ದ ಜನರ ಮನೋರಂಜನವನ್ನು ಮಾಡುತ್ತಾ ಕಾಲಕ್ಷೇಪ ಮಾಡಿಕೊಂಡಿದ್ದರು.

ಆ ಪಟ್ಟಣದ ಜನರು ಈ ಪಾಂಡವರನ್ನು ನೋಡಿ—ನೋಡತಕ್ಕ ಆಕಾರವುಳ್ಳವರಾಗಿಯೂ ವಿಶುದ್ಧಸ್ವಭಾವವುಳ್ಳವರಾಗಿಯೂ ದೇವಕುಮಾರ ಸಮಾನರಾಗಿಯೂ ಸರ್ವಲಕ್ಷಣ ಸಂಪನ್ನರಾಗಿಯೂ ಇರುವ ಈ ಕುಮಾರರು ರಾಜ್ಯಾರ್ಹರೇ ಹೊರತಾಗಿ ಭಿಕ್ಷಾಯೋಗ್ಯರಲ್ಲ. ಸುಕುಮಾರಶರೀರಿಗಳಾದ ಇವರನ್ನು ನೋಡಿದರೆ ಏನೋ ಒಂದು ನಿಮಿತ್ತದಿಂದ ಪ್ರಚ್ಛನ್ನರಾಗಿ ಈ ರೀತಿಯಲ್ಲಿದ್ದಾರೆಂದು ಒಬ್ಬರಸಂಗಡಲೊಬ್ಬರು ಹೇಳಿಕೊಳ್ಳುತ್ತಾ ಅವರಿಗೆ ಹೆಚ್ಚಾಗಿ ಭಿಕ್ಷೆಯನ್ನಿಕ್ಕುತ್ತಾ ಆದರಿಸುತ್ತಿದ್ದರು. ಹೀಗೆ ಭೀಮಾರ್ಜುನರು ಭಿಕ್ಷೆಯನ್ನು ತಂದು ತಾಯಿಯ ವಶಕ್ಕೆ ಒಪ್ಪಿಸಲು; ಅವಳು ತಂದ ಅನ್ನದಲ್ಲಿ ಅರ್ಧಭಾಗವನ್ನು ಸರಿಯಾಗಿ ಭೀಮನಿಗೆ ಕೊಟ್ಟು ಉಳಿದ ಅರ್ಧವನ್ನು ತಾವೈದು ಮಂದಿಗಳೂ ಭುಜಿಸುತ್ತಿದ್ದರು. ಆದರೆ ಭೀಮನು ಮೊದಲು ರಾಜಯೋಗ್ಯವಾಗಿಯೂ ಷಡ್ರಸೋಪೇತವಾಗಿಯೂ ಇರುವ ಅನ್ನವನ್ನು ಅಪರಿಮಿತವಾಗಿ ಭಕ್ಷಿಸಿದವನಾದುದರಿಂದ ಆ ಭಿಕ್ಷಾಶನದಿಂದ ತೃಪ್ತಿಯನ್ನು ಹೊಂದದೆ, ದಿನದಿನಕ್ಕೂ ಶರೀರದಲ್ಲಿ ಇರುವ ಕಾಂತಿಯು ತಪ್ಪಿ ಬಡವಾಗುತ್ತಾ ಬಂದನು. ಅವರೆಲ್ಲರೂ ತಂದ ಭಿಕ್ಷಾನ್ನದಲ್ಲಿ ಅರ್ಧವು ಉರಿಯುತ್ತಲಿರುವ ಬೆಂಕಿಯಲ್ಲಿ ಬಿದ್ದ ತುಪ್ಪದ ಹಸಿಯೋಪಾದಿಯಲ್ಲಿ ಆತನಿಗೆ ಯಾವ ಮೂಲೆಗೂ ಸಾಲದೆ ಇತ್ತು ಈ ಪ್ರಕಾರದಲ್ಲಿ ಆ ಮಹಾನುಭಾವರು ಕೆಲವು ದಿವಸ ಕಾಲಕ್ಷೇಪ ಮಾಡುತ್ತಿರಲು; ಆ ಭೀಮನು ಒಬ್ಬ ಕುಂಬಾರನಿಗೆ ನೂರು ಸಾರಿ ತರುವ ಮಣ್ಣನ್ನು ಒಂದೇಸಾರಿ ತಂದು ಹಾಕಲು; ಆತನು ಇವನಿಗೆ ಒಂದು ದೊಡ್ಡ ಗುಡಾಣವನ್ನು ಮಾಡಿಕೊಟ್ಟನು. ಭೀಮನು ಆದನ್ನು ಬಲದ ಅಂಗೈಯಲ್ಲಿ ಇಟ್ಟುಕೊಂಡು ತಾನೊಬ್ಬನೇ ಭಿಕ್ಷಾರ್ಥವಾಗಿ ಹೋಗಲು; ಜನರು ಅವನನ್ನು ನೋಡಿ ನಗುತ್ತಾ ಬೇಕಾದ ಭಕ್ಷ್ಯ ಭೋಜ್ಯಗಳನ್ನು ಭಿಕ್ಷೆಯಾಗಿ ಆ ಗುಡಾಣಕ್ಕೆ ತಂದುಹಾಕುತ್ತಾ ಇದ್ದರು. ಭೀಮನು ಆ ಗುಡಾಣದ ತುಂಬಾ ಭಿಕ್ಷೆಯನ್ನು ತಂದು ಅದನ್ನೆಲ್ಲಾ ತಾನೊಬ್ಬನೇ ತಿಂದು—ಈ ಅನ್ನವು ಲೇಶವಾದರೂ ನನ್ನ ಹಸಿವಿಗೆ ಸಾಲದೆಂದು ನಿತ್ಯವೂ ತಾಯಿಯ ಸಂಗಡ ಗುಣಗುಟ್ಟುತ್ತಾ ಇರುತ್ತಿದ್ದನು.

ಹೀಗೆ ಕೆಲವು ದಿವಸಗಳು ಕಳೆದ ತರುವಾಯ ಒಂದಾನೊಂದು ದಿವಸ ಅವರು ಇಳಿದು ಇದ್ದ ಬ್ರಾಹ್ಮಣನ ಮನೆಯೊಳಗೆ ರೋದನ ಧ್ವನಿಯು ಕೇಳಿಸಿತು. ಆಗ ಕುಂತಿ ದೇವಿಯು ಆ ಧ್ವನಿಯನ್ನು ಕೇಳಿ ಕಾರುಣ್ಯಭಾವದಿಂದ ಹೃದಯದಲ್ಲಿ ಪಶ್ಚಾತ್ತಾಪಪ ಡುತ್ತಾ ತನ್ನ ಸಮೀಪದಲ್ಲಿ ಇದ್ದ ಭೀಮಸೇನನನ್ನು ನೋಡಿ——ಎಲೈ, ಕುಮಾರನೇ! ನಾವು ಈ ಬ್ರಾಹ್ಮಣನ ಮನೆಯಲ್ಲಿ ಧೃತರಾಷ್ಟ್ರಾದಿಗಳಿಗೆ ತಿಳಿಯದೆ ಇರುವ ರೀತಿ ಯಿಂದ ಕೆಲವು ದಿವಸಗಳು ಇದ್ದೆವು. ಇವರಿಗೆ ಏನು ಉಪಕಾರವನ್ನು ಮಾಡೋಣ? ಎಂದು ಯಾವಾಗಲೂ ಚಿಂತಿಸುತ್ತಿದ್ದೇನೆ. ಉಪಕಾರವನ್ನು ಮಾಡಿದವರಿಗೆ ಪ್ರತ್ಯು ಪಕಾರವನ್ನು ಮಾಡಬೇಕೆಂದು ಎಣಿಸಿದವರು ಮನುಷ್ಯೋತ್ತಮರೆನಿಸಿಕೊಳ್ಳುವರು ಈ ಮನೆಯ ಬ್ರಾಹ್ಮಣನಿಗೆ ಏನೋ ಪ್ರಾಣಾಪತ್ತು ಉಂಟಾಗಿರುವ ಹಾಗೆ ತೋರುತ್ತದೆ. ನಾನೇನು ಮಾಡಲಿ? ಎಂದು ಮರುಗುತ್ತಿರಲು; ಭೀಮನು ತಾಯಿಯನ್ನು ಕುರಿತು– ಎಲೈ, ತಾಯೇ! ಇವರಿಗೆ ದುಃಖ ಬರುವುದಕ್ಕೆ ಕಾರಣವೇನು? ಅದನ್ನು ಕೇಳಿ ತಿಳಿದುಕೊಂಡು ಬಾ ಎಂಥಾ ದುಷ್ಕರವಾದ ಕಾರ್ಯವನ್ನಾದರೂ ನಾನು ನಡಿಸು ತ್ತೇನೆ ಎಂದನು. ಅಷ್ಟರಲ್ಲೇ ರೋದನಧ್ವನಿಯು ಹೆಚ್ಚುತ್ತಾ ಬರಲು; ಕುಂತಿಯು ಕಟ್ಟಿಹಾಕಿದ ಕರುವಿನ ಸಮೀಪಕ್ಕೆ ಹೋಗುವ ಹಸುವಿನ ಹಾಗೆ ವಾತ್ಸಲ್ಯದಿಂದ ಆತನ ಮನೆಯ ಒಳಗೆ ಹೋಗಿ ಅಲ್ಲಿ ಹೆಂಡತಿ ಮಗಳು ಮಗನು ಇವರೊಡನೆ ಪ್ರಲಾಪಿಸುತ್ತಿರುವ ಬ್ರಾಹ್ಮಣನ ಸಮೀಪದಲ್ಲಿ ಕೂತುಕೊಂಡಳು. ಆಗ ಆ ಬ್ರಾಹ್ಮ ಣನು——ಅಕಟಕಟಾ! ನಿಸ್ಸಾರವಾಗಿಯೂ ನಿರರ್ಥಕವಾಗಿಯೂ ಸಕಲ ದುಃಖಗ ಗಳಿಗೆ ಮೂಲವಾಗಿ ನಿತ್ಯಪರಾಧೀನವಾಗಿಯೂ ಇರುವ ಈ ನನ್ನ ಬದುಕಿನೋಪಾ ದಿಯಲ್ಲಿರುವ ಬದುಕು ಯಾರಿಗಾದರೂ ಉಂಟೇ? ಶರೀರದುಃಖಗಳನ್ನೂ ಮನೋ ದುಃಖಗಳನ್ನೂ ಜಳಿ ಬಿಸಲು ಮೊದಲಾದ ದ್ವಂದ್ವ ದುಃಖಗಳನ್ನೂ ನಾನು ಜೀವ ವಂತನಾಗಿರುವುದರಿಂದಲ್ಲವೇ ಅನುಭವಿಸಬೇಕಾಯಿತು? ಏಕಾಕಿಯಾಗಿ ಇರುವ ಪುರುಷನಿಗೆ ಧರ್ಮಾರ್ಥಕಾಮಗಳು ಯಾವಾಗಲೂ ಉಂಟಾಗಲಾರವು. ಅದು ಹಾಗಿ ರಲಿ. ಹಣದ ಸಂಪಾದನೆಗೆ ಹಣದ ಆಸೆಯೇ ಸಾಧನವು. ದೈವಯೋಗದಿಂದ ಹಣವು ಲಭಿಸಿದರೆ ಅದು ಇನ್ನೂ ಕ್ಲೇಶಕ್ಕೆ ಕಾರಣವಾಗುವುದು. ಹಾಗೆ ಲಬ್ಧವಾದ ಹಣದಲ್ಲಿ ಮೋಹವು ಹುಟ್ಟಿದರೆ ಆ ಹಣವು ಹೋಗುವ ಕಾಲದಲ್ಲಿ ಆಗುವಂಥಾ ದುಃಖವು ಅಪರಿಮಿತವಾಗಿರುವುದು. ಇಷ್ಟ ವಸ್ತುಗಳಲ್ಲಿ ಯಾರಿಗೆ ಎಷ್ಟು ಪ್ರೀತಿ ಹೆಚ್ಚುವುದೋ ಆತನು ಆ ಪ್ರೀತಿಯಿಂದುಂಟಾಗುವ ಶೋಕವೆಂಬ ದಸಿಯನ್ನು ಎದೆ ಯಲ್ಲಿ ನೆಟ್ಟುಕೊಳ್ಳುವನು. ಹೀಗೆ ಸ್ವಲ್ಪ ಸುಖಕ್ಕಾಗಿ ಒಹಳ ದುಃಖವುಳ್ಳ ಸಂಸಾರ ವನ್ನು ಐದಿ ಹೆಂಡತಿಯನ್ನು ಕಟ್ಟಿಕೊಂಡು ಏಕಪುತ್ರನುಳ್ಳ ನನಗೆ ಪುತ್ರವಿಯೋಗ ರೂಪವಾದ ವ್ಯಸನವು ಪ್ರಾಪ್ತವಾಯಿತು. ಏನು ಮಾಡಲಿ? ಎಲ್ಲಿಗೆ ಹೋಗಲಿ? ಯಾರಿಗೆ ಹೇಳಲಿ? ಈ ಆಪತ್ತು ಪರಿಹಾರವಾಗುವುದಕ್ಕೆ ಉಪಾಯವು ಯಾವುದೂ ತೋರುವುದಿಲ್ಲ. ನಾನು ಪುತ್ರದಾರಸಮೇತನಾಗಿ ಈ ದೇಶವನ್ನು ಬಿಟ್ಟು ನಿರುಪದ್ರ ವಾದ ಮತ್ತೊಂದು ದೇಶಕ್ಕೆ ಹೋಗೋಣ ಎಂದು ಎಷ್ಟು ಹೇಳಿದರೂ ನನ್ನ ಮಾತನ್ನು

ಕೇಳದೆ ಈ ದೇಶದಲ್ಲಿ ಹುಟ್ಟಿ ಬೆಳೆದು ನಾನು ನನ್ನ ತಂದೆತಾಯಿಗಳನ್ನು ಬಿಟ್ಟು ದೇಶಾಂತರಕ್ಕೆ ಹೇಗೆ ಬಂದೇನು? ಎಂದು ಹೇಳೆದೆಯಲ್ಲಾ! ಅಂಥಾ ತಾಯಿ ತಂದೆಗಳು ಪರಲೋಕಕ್ಕೆ ಹೋದರು. ಇನ್ನು ಈ ದೇಶದಲ್ಲಿ ಇದ್ದುದಕ್ಕೆ ಏನು ಫಲವಾಯಿತು? ಭೋಜನವೂ ದೇಶವೂ ಸ್ತ್ರೀಜನವೂ ಬಂಧುಜನವೂ ಪ್ರತಿಕೂಲವಾದರೆ ಪ್ರಾಜ್ಞನಾದವನು ಕಾರ್ಯಗೌರವದಿಂದ ಗರುಡಹಂಸಗಳೋಪಾದಿಯಲ್ಲಿ ಹಾರಿಹೋಗಬೇಕು. ಈ ಶಾಸ್ತ್ರವನ್ನು ಎಣಿಸದೆ ನಾನು ನಿನ್ನ ಮಾತಿಗೆ ಒಳಪಟ್ಟು ಇಲ್ಲಿ ಇದ್ದುದರಿಂದ ನಮಗೆ ಈ ದುರ್ದಶೆಯು ಪ್ರಾಪ್ತವಾಯಿತು. ಈ ದುಃಖವೆಲ್ಲವನ್ನೂ ನೀನೆನು ಭವಿಸು ಎಂದು ಹೇಳಿದನು.

ಆದಕ್ಕೆ ಆ ಬ್ರಾಹ್ಮಣ ಸ್ತ್ರೀಯು—ನೀವು ಯಾಕೆ ಕ್ಲೇಶಪಡುತ್ತಿದ್ದೀರಿ? ನನ್ನನ್ನು ಆ ಬಕನಿಗೆ ಆಹಾರವಾಗಿ ಕೊಟ್ಟುಬಿಡಿರಿ ಎನಲು; ಆ ಬ್ರಾಹ್ಮಣನು—ಇಂಥಾ ಅವಲಕ್ಷಣ ದೇಶದಲ್ಲಿ ಇದ್ದುದರಿಂದ ನಾಲ್ಕು ಮಂದಿಗಳೊಳಗೆ ಒಬ್ಬರಿಗೆ ನಾಶವು ಪ್ರಾಪ್ತವಾಗಿದೆ. ಆದರೆ ನನ್ನ ಕೂಡ ಉಚಿತವಾದ ಕರ್ಮಗಳನ್ನು ಆಚರಿಸುತ್ತಾ ಸಾತ್ವಿಕ ಗುಣಗಳೊಡನೆ ಕೂಡಿ ನನ್ನನ್ನು ಪೋಷಿಸಿಕೊಂಡು ದೈವವಶದಿಂದ ದೊರಕಿದ ಆರ್ಧದಿಂದ ಸಂಸಾರವನ್ನು ನಡಿಸಿಕೊಂಡು ತಾಯಿತಂದೆಗಳು ಬಾಲ್ಯದಲ್ಲಿಯೇ ಮದುವೆಯನ್ನು ಮಾಡಿದುದರಿಂದ ಅಧಿಕವಾದ ಅನುರಾಗದೊಡನೆ ಕೂಡಿ ಮಂತ್ರಪೂರ್ವಕವಾಗಿ ಕೈಹಿಡಿದು ಸತ್ಕುಲದಲ್ಲಿ ಹುಟ್ಟಿ ಮಕ್ಕಳನ್ನು ಪಡೆದು ಮತ್ತೊಬ್ಬರನ್ನು ಅರಿಯದೆ ನನಗೆ ಅನುಕೂಲಳೂ ಸದಾಚಾರಸಂಪನ್ನಳೂ ಆಗಿರುವ ಈ ಧರ್ಮಪತ್ನಿಯನ್ನು ಹೇಗೆ ಬಿಡಲಿ? ಅಪ್ರಾಪ್ತ ಯೌವನನಾಗಿಯೂ ಗಡ್ಡ ಮೀಸೆಗಳು ಬಾರದೆ ಇರುವಂಥವನಾಗಿಯೂ ಇಹದಲ್ಲಿ ಸೌಖ್ಯಪ್ರದನಾಗಿಯೂ ಸಕಲ ಜನೋಪಲಾಲನೀಯನಾಗಿಯೂ ಪಿತೃಋಣವಿಮೋಚಕನಾಗಿಯೂ ವಂಶಾಭಿವೃದ್ಧಿಕರನಾಗಿಯೂ ನನ್ನ ಅನಂತರ ನನಗೆ ಪಿಂಡೋದಕಪ್ರದಾನಗಳಿಂದ ಪರಲೋಕವನ್ನು ಕಲ್ಪಿಸುವಂಥಾವನಾಗಿಯೂ ಇರುವ ಈ ಪುತ್ರನನ್ನು ಹೇಗೆ ಬಿಡಲಿ? ಒಬ್ಬ ಬ್ರಹ್ಮಚಾರಿಯ ನಿಮಿತ್ತವಾಗಿ ಬ್ರಹ್ಮಸಂಕಲ್ಪದಿಂದ ಹುಟ್ಟಿರುವಂಥಾವಳೂ ನನಗೆ ದೌಹಿತ್ರಲೋಕವನ್ನು ಕಲ್ಪಿಸುವಂಥವಳೂ ನನ್ನ ಗರ್ಭದಲ್ಲಿ ಹುಟ್ಟಿರುವವಳೂ ಆಗಿರುವ ಈ ಕನ್ಯಾರತ್ನವನ್ನು ಹೇಗೆ ಬಿಟ್ಟುಬಿಡುವೆನು? ಲೋಕದಲ್ಲಿ ಕೆಲವರೊಳಗೆ—ತಂದೆಗೆ ಮಗನಲ್ಲಿಯೂ ತಾಯಿಗೆ ಮಗಳಲ್ಲಿಯೂ ಪ್ರೀತಿ ಉಂಟಾಗಿರುವುದು ಎಂದು ಹೇಳುವರು. ನನಗಾದರೋ ಇಬ್ಬರಲ್ಲಿಯೂ ಸಮವಾದ ಪ್ರೀತಿ ಇದೆ. ಮತ್ತು ಹೆಣ್ಣಿನ ದೆಸೆಯಿಂದ ನನಗೆ ಪುಣ್ಯಲೋಕಗಳೂ ವಂಶಾಭಿವೃದ್ಧಿಯೂ ಸೌಖ್ಯವೂ ಆಗುವುವಷ್ಟೆ. ಬುದ್ಧಿಸಂಪನ್ನೆಯಾಗಿಯೂ ದೋಷರಹಿತೆಯಾಗಿಯೂ ಮದುವೆಯಾದ ಮೇಲೆ ಮಾವನ ಮನೆಗೆ ಹೋಗಿ ಗಂಡನಿಗೆ ಅನುಕೂಲವಾಗಿ ನಡೆದುಕೊಂಡು ಆತನಿಂದ ಸಕಲ ಸೌಖ್ಯಗಳನ್ನೂ ಪಡೆಯಬೇಕೆಂದು ಎಣಿಸಿ ಗರ್ವವನ್ನು ಬಿಟ್ಟು ವಿನಯದಿಂದ ನಡೆದುಕೊಳ್ಳುವ ಈ ಹೆಣ್ಣುಮಗಳನ್ನು ಹೇಗೆ ಬಿಟ್ಟುಬಿಡುವೆನು? ಈ ಮಕ್ಕಳನ್ನು ಬಿಟ್ಟರೆ ಪರಲೋಕದಲ್ಲಿ ನನ್ನ ದುಃಖವು ತೀರದು. ಈ ಮಕ್ಕಳು ಚಿಕ್ಕವರಾದುದರಿಂದ ನನ್ನನ್ನು ಬಿಟ್ಟು ನಿಮಿ

ಷವೂ ನಿರ್ವಹಿಸಲಾರವು. ಆದುದರಿಂದ ಈ ಮೂರು ಮಂದಿಯೊಳಗೆ ಒಬ್ಬರನ್ನೂ ಬಿಡುವುದಕ್ಕಾಗುವುದಿಲ್ಲ. ಯಾವ ಪ್ರಯತ್ನದಿಂದಾದರೂ ಈ ಆಪತ್ತನ್ನು ಪರಿಹರಿಸುವುದಕ್ಕೆ ಉಪಾಯವನ್ನು ಕಾಣದೆ ಇರುವುದರಿಂದ ಹೆಂಡತಿಯೂ ಮಗನೂ ನಾನೂ ಏಕಕಾಲದಲ್ಲಿ ಸಾಯುವುದೇ ಉಚಿತವೆಂದು ನಿಶ್ಚಯಿಸಿದನು.

ಹೀಗೆ ಏಕಕಾಲದಲ್ಲಿ ಎಲ್ಲರೂ ಸತ್ತುಹೋಗಬೇಕೆಂದು ಹಂಬಲಿಸುತ್ತಿರುವ ಪತಿಯನ್ನು ಕುರಿತು ಹೆಂಡತಿಯು ಇಂತೆಂದಳು—ಎಲೈ, ನಾಯಕನೇ! ಮೂಢ ಮನುಷ್ಯರೋಪಾದಿಯಲ್ಲಿ ನೀವು ಯಾತಕ್ಕೆ ಕ್ಲೇಶಪಡುತ್ತಿದ್ದೀರಿ? ವಿಶೇಷವಾದ ಸಂತಾಪಕ್ಕೆ ಇದು ಕಾಲವಲ್ಲ. ಪುರುಷರು ಧೈರ್ಯಗೆಡುವರೇ? ಹುಟ್ಟಿದಾಗಲೇ ಮನುಷ್ಯನಿಗೆ ಮರಣವು ನಿಶ್ಚಯವಾಗಿರುವುದು. ಅವಶ್ಯವಾಗಿ ಮಾಡತಕ್ಕಂಥಾ ಕಾರ್ಯಕ್ಕೆ ಕ್ಲೇಶಪಟ್ಟುದರಿಂದ ಪ್ರಯೋಜನವೇನು? ಪುತ್ರಮಿತ್ರಕಳತ್ರಾದಿಗಳು ನಿಮ್ಮ ನಿಮಿತ್ತವಾದುದರಿಂದ ನೀವು ಸುಖವಾಗಿದ್ದು ನನ್ನನ್ನು ಕಳುಹಿಸಿಬಿಡಿರಿ. ಪತಿಯ ನಿಮಿತ್ತವಾಗಿ ಪ್ರಾಣಗಳನ್ನು ಪರಿತ್ಯಜಿಸುವುದಕ್ಕಿಂತ ಸ್ತ್ರೀಯರಿಗೆ ಮತ್ತೊಂದು ಧರ್ಮ ಉಂಟೇ? ನಿಮ್ಮ ನಿಮಿತ್ತವಾಗಿ ನಾನು ಶರೀರತ್ಯಾಗವನ್ನು ಮಾಡಿದರೆ ಈ ಲೋಕದಲ್ಲಿ ನಿಮಗೆ ಸೌಖ್ಯವೂ ಪರಲೋಕದಲ್ಲಿ ನನಗೆ ಗತಿಯೂ ಉಂಟಾಗುವುದು. ಲೋಕದಲ್ಲಿ ಮದುವೆಯಾಗುವುದು ಸಂತಾನಾರ್ಥವಾಗಿಯೇ ಇದೆ. ನಮಗೆ ಅಂಥಾ ಸಂತಾನವು ಕನ್ಯಾಕುಮಾರರೂಪದಿಂದ ಆಯಿತು. ನಾನು ನಿಮ್ಮ ಋಣವನ್ನು ತೀರಿಸಿಕೊಂಡಿದ್ದೇನೆ. ನೀವಿದ್ದರೆ ಈ ಚಿಕ್ಕವರಿಗೆ ಸೌಖ್ಯ ಉಂಟು. ನಾನು ಅಬಲೆಯಾದುದರಿಂದ ಇವರನ್ನು ರಕ್ಷಿಸಲಾರೆನು ನೀವಿಲ್ಲದೆಹೋದರೆ ಜಾತಿಹೀನರಾದವರು ಅಹಂಕಾರಗ್ರಸ್ತರಾಗಿ ನಮ್ಮ ಸ್ವರೂಪವನ್ನು ತಿಳಿಯದೆ ಈ ಕನ್ನೆಯನ್ನು ಕೇಳುವುದಕ್ಕೆ ಬಂದರೆ ಅನಾಥಳಾದ ನಾನು ಹೇಗೆ ಅವರನ್ನು ನಿರಾಕರಿಸಲಿ? ಭೂಮಿಯಲ್ಲಿ ಬಿದ್ದಿರುವ ಮಾಂಸಖಂಡವನ್ನು ಪಕ್ಷಿಗಳು ಅಪೇಕ್ಷಿಸುವ ಹಾಗೆ ಪತಿರಹಿತಳಾದ ಸ್ತ್ರೀಯನ್ನು ಯಾರಾದರೂ ಅಪೇಕ್ಷಿಸುವರು. ಆದರಿಂದ ಅಂಥಾ ದುರಾತ್ಮರು ಬಹು ಪ್ರಕಾರದಿಂದ ಬಾಧಿಸಿದರೆ ನನಗೆ ಪಾತಿವ್ರತ್ಯಧರ್ಮವು ದಕ್ಕಲಾರದು. ಲೋಕದಲ್ಲಿ ದುಷ್ಟ ಜನರು ಹೆಚ್ಚಿದುದರಿಂದ ಸ್ತ್ರೀ ಜನ್ಮವು ನಿಂದಿತವಾದುದೆಂದು ಎಣಿಸುತ್ತಿದ್ದೇನೆ. ಆದರಿಂದಲೇ ಸ್ತ್ರೀಯರು ಬಾಲ್ಯದಲ್ಲಿ ತಾಯಿತಂದೆಗಳಿಗೂ ಯೌವನದಲ್ಲಿ ಗಂಡನಿಗೂ ವಾರ್ಧಿಕ್ಯದಲ್ಲಿ ಮಕ್ಕಳಿಗೂ ಅಧೀನರಾಗಿ ಇರಬೇಕೇ ಹೊರತು ಸ್ವತಂತ್ರರಾಗಿರಬಾರದು. ಸ್ವತಂತ್ರರಾಗಿದ್ದರೆ ತುಪ್ಪದಿಂದ ನೆನೆದ ವಸ್ತ್ರಖಂಡವನ್ನು ನಾಯಿಗಳು ಎಳೆಯುವ ಹಾಗೆ ದುರ್ಜನರು ಸ್ತ್ರೀಜನರನ್ನು ಬಾಧಿಸದೆ ಇರರು. ಉಪನಯನವಿಲ್ಲದೆ ಇರುವಂಥಾ ಈ ಬಾಲಕನಿಗೆ ಉಪನಯನಾದಿ ಕೃತ್ಯಗಳನ್ನು ಮಾಡಿ ವೇದಶಾಸ್ತ್ರಗಳನ್ನು ಓದಿಸುವಂಥಾವರಾರು? ನಿಮ್ಮನ್ನು ಬಿಟ್ಟು ಅನಾಥೆಯಾಗಿರುವ ನನ್ನನ್ನು ಎಣಿಸದೆ ಈ ಕನ್ಯಕೆಯನ್ನು ಯಾರಾದರೂ ದುಷ್ಟರು—ಶೂದ್ರನು ಶ್ರುತಿಯನ್ನು ಬಯಸುವ ಪ್ರಕಾರವೂ ಕಾಕವು ಮಂತ್ರಪೂತವಾದ ಹವಿಸ್ಸನ್ನು ಇಚ್ಛೈಸುವಂತೆಯೂ ಇಚ್ಛೈಸಿ ಕೇಳಿದಲ್ಲಿ ನಾನು ಒಡೆಂಬಟ್ಟು ಕೊಡದಿದ್ದರೆ ಬಲಾತ್ಕಾರದಿಂದ ಅಪಹರಿಸುವರು. ಅದನ್ನು

ನೋಡಿ ಸಹಿಸಲಾರದೆ ನಾನು ಶರೀರವನ್ನು ಬಿಡುವೆನು. ಆ ಮೇಲೆ ಇವರಿಬ್ಬರೂ ನೀರಿನಿಂದ ಹೊರಗೆ ಬಂದ ಮೀನುಗಳ ಹಾಗೆ ಕೆಟ್ಟುಹೋಗುವರು. ಆದುದರಿಂದ ಹೇಗೆ ನೋಡಿದರೂ ನಿಮ್ಮನ್ನು ಬಿಟ್ಟರೆ ಈ ಮೂರು ಮಂದಿಗೂ ಪ್ರಾಣಸಂಶಯವಾಗುವುದರಿಂದ ಇದೆಲ್ಲವನ್ನು ನಿನ್ನ ಮನಸ್ಸಿನಲ್ಲಿ ನಿಶ್ಚಯಿಸಿ ನನ್ನನ್ನು ಅವಶ್ಯವಾಗಿ ಕಳುಹಿಸಿಬಿಡಿ. ಪತಿವ್ರತಾ ಜನಗಳಿಗೆ ಪತಿಗಳಿಗಿಂತ ಮೊದಲೇ ಅರಸಿನ ಕುಂಕುಮ ಪುಷ್ಪ ಮಂಗಳಸೂತ್ರ ಇವುಗಳ ಸಂಗಡ ಪರಲೋಕಕ್ಕೆ ಹೋಗಿ ತನ್ನ ಗಂಡನು ಕೊಟ್ಟ ತರ್ಪಣಾದಿಗಳಿಂದ ತೃಪ್ತಿಯನ್ನು ಪಡೆಯುವುದು ಉತ್ತಮವೇ ಹೊರತು ವೈಧವ್ಯವನ್ನು ಅನುಭವಿಸುತ್ತಾ ಮಕ್ಕಳು ಕೊಟ್ಟ ಅನ್ನದಿಂದ ಕಾಲವನ್ನು ಕಳೆಯುವುದು ಧರ್ಮವಲ್ಲ. ಗಂಡನ ಪಾದಗಳನ್ನು ತನ್ನ ಮನಸ್ಸಿನಲ್ಲಿ ಧ್ಯಾನಿಸುತ್ತಾ ಪತಿಗಿಂತ ಮೊದಲೇ ಶರೀರವನ್ನು ಬಿಡುವಂಥಾ ಸ್ತ್ರೀಯು ಪಾರ್ವತೀದೇವಿಗೆ ಕೆಳದಿಯಾಗಿ ಆ ಮಹಾದೇವಿಯೊಡನೆ ಚತುರಂಗವನ್ನು ಆಡುತ್ತಿರುವಳು. ಅದಲ್ಲದೆ ತಾಯಿತಂದೆಗಳೂ ಒಡಹುಟ್ಟಿದವರೂ ಮಕ್ಕಳೂ ಇವರೆಲ್ಲರೂ ಸ್ತ್ರೀಗೆ ಮಿತವಾದ ಸೌಖ್ಯವನ್ನು ಕೊಡುವವರೇ ಹೊರತು ಗಂಡನೋಪಾದಿಯಲ್ಲಿ ಅಮಿತ ಸೌಖ್ಯವನ್ನು ಕೊಡಲಾರರು. ಆದುದರಿಂದ ಗಂಡನನ್ನು ಉಪಚರಿಸದೆ ಇರುವಂಥ ನಿರ್ಭಾಗ್ಯಳು ಲೋಕದಲ್ಲಿ ಉಂಟೇ? ಈ ಮಗನನ್ನೂ ಮಗಳನ್ನೂ ಬಿಟ್ಟು ಮತ್ತು ಬಂಧು ಜನಗಳನ್ನೆಲ್ಲಾ ತೊರೆದು ನಿಮಗೆ ಸುಖವಾಗುವ ರೀತಿಗೆ ನನ್ನ ಪ್ರಾಣಗಳನ್ನು ಒಪ್ಪಿಸುತ್ತೇನೆ. ಸ್ತ್ರೀಜನಗಳಿಗೆ ಯಜ್ಞದಾನ ತಪೋನಿಯಮಗಳಿಗಿಂತಲೂ ಪತಿಗೆ ಹಿತವನ್ನು ಮಾಡುವುದೇ ಪರಮಧರ್ಮವೆನಿಸುವುದು. ಈಗ ನಾನು ಹೇಳಿದ ಮಾತುಗಳೆಲ್ಲವೂ ನಿಮಗೂ ನಿಮ್ಮ ಕುಲಕ್ಕೂ ಹಿತವಾಗಿರುವುವು. ಲೋಕದಲ್ಲಿ ಪುರುಷನಿಗೆ ಕುಮಾರಕರೂ ಧನವೂ ಮಿತ್ರವರ್ಗವೂ ಹೆಂಡತಿಯೂ ಆಪತ್ತಿನ ಸಮಯಕ್ಕೆ ಒದಗದಿದ್ದರೆ ವ್ಯರ್ಥವೆನಿಸಿಕೊಂಬುವರು. ತನ್ನ ಕುಲವೆಲ್ಲವೂ ಆತ್ಮಸಂರಕ್ಷಣ ಧರ್ಮಕ್ಕೆ ಸಮಾನವಾಗಿ ಇರಲಾರದು. ಆದರಿಂದ ಈ ಆಪತ್ತನ್ನು ನನ್ನ ದೆಸೆಯಿಂದ ತಪ್ಪಿಸಿಕೊಳ್ಳಿರಿ. ನೀವು ಉಳಿದು ಈ ಮಕ್ಕಳನ್ನು ರಕ್ಷಿಸಿಕೊಳ್ಳಿರಿ. ಲೋಕದಲ್ಲಿ ಸ್ತ್ರೀ ವಧೆಯು ಅಧರ್ಮವೆಂದು ಧರ್ಮಶಾಸ್ತ್ರಜ್ಞರು ಹೇಳುವುದರಿಂದ ಆ ರಾಕ್ಷಸನು ಒಂದು ವೇಳೆ ನನ್ನನ್ನು ಕರುಣಿಸಿ ಬಿಟ್ಟುಬಿಟ್ಟಾನು. ಆದುದರಿಂದ ನೀವು ನಿಂತು ನನ್ನನ್ನು ಕಳುಹಿಸಿ ಬಿಡುವುದು ಯುಕ್ತವು. ಯಾಕಂದರೆ ನಾನು ನಿಮ್ಮ ದೆಸೆಯಿಂದ ಸಕಲ ಸೌಖ್ಯಗಳನ್ನೂ ಅನುಭವಿಸಿ ಪ್ರಿಯವಾದುವುಗಳನ್ನು ಹೊಂದಿ ಧರ್ಮವನ್ನು ಆಚರಿಸಿ ಸಂತಾನವನ್ನು ಪಡೆದು ನಿಮಗೆ ಶುಶ್ರೂಷೆಯನ್ನು ಮಾಡಿ ಪಾತಿವ್ರತ್ಯಧರ್ಮದಿಂದ ಕೀರ್ತಿಯನ್ನು ಹೊಂದಿ ಯೌವನವನ್ನು ಮೀರಿದೆನು. ಇನ್ನು ಮೇಲೆ ನಿಮಗೆ ಪ್ರಿಯವನ್ನೇ ಮಾಡಬೇಕೆಂಬ ಬಯಕೆ ಇದೆಯೇ ಹೊರತಾಗಿ ಮತ್ತೊಂದು ಬಯಕೆ ಇಲ್ಲ ನೀವು ಇನ್ನೊಂದು ಮದುವೆ ಮಾಡಿಕೊಂಡು ಧರ್ಮಲೋಪವಿಲ್ಲದಂತೆ ನಡೆದುಕೊಳ್ಳಿರಿ. ಸ್ತ್ರೀಜನಗಳಿಗೆ ಗಂಡನನ್ನು ಬಿಟ್ಟು ಮತ್ತೊಬ್ಬ ಪುರುಷನನ್ನು ಪರಿಗ್ರಹಿಸುವುದು ದೋಷವೇ ಹೊರತಾಗಿ ಪುರುಷರಿಗೆ ಬಹು ಪತ್ನೀಪರಿಗ್ರಹವು ದೋಷವಲ್ಲ. ಈ ಧರ್ಮವನ್ನು ನಿಮ್ಮ ಮನಸ್ಸಿನಲ್ಲಿ ವಿಚಾರಿಸಿ ಆತ್ಮತ್ಯಾ

ಗವು ದೋಷವೆಂದು ತಿಳಿದು ನನ್ನಿಂದ ನಿಮ್ಮನ್ನೂ ನಿಮ್ಮ ಮಕ್ಕಳನ್ನೂ ನಿಮ್ಮ ಕುಲವನ್ನೂ ಊರ್ಜಿತವಾಗಿ ರಕ್ಷಿಸಿಕೊಳ್ಳಿರಿ ಎನಲು ; ಆ ಬ್ರಾಹ್ಮಣನು ಅತಿದುಃಖದಿಂದ ಆವಳನ್ನು ಅಪ್ಪಿಕೊಂಡು ಕಣ್ಣೀರು ತುಂಬಿ—ನೀನು ಸುಖವಾಗಿರುವುದೇ ನನಗೆ ಪರಮಸುಖವು. ಆದುದರಿಂದ ಹೀಗೆ ನುಡಿಯಬೇಡ. ಪ್ರಾಜ್ಞನಾದ ಮನುಷ್ಯನು ಪುತ್ರ ಮಿತ್ರಕಳತಾದ್ರಿಗಳನ್ನು ಯಾಕೆ ಬಿಡುವನು ? ವಿಶೇಷವಾಗಿ ಸ್ತ್ರೀಜನಗಳನ್ನು ರಕ್ಷಿಸಲಾರದೆ ಇರುವ ಪುರುಷನು ಚತುರ್ವಿಧ ಪುರುಷಾರ್ಥಗಳಿಗೂ ದೂರಸ್ಥನಾಗುವನು ಎಂದು ಹೇಳುತ್ತಿದ್ದನು.

ಈ ಪ್ರಕಾರ ತಾಯಿತಂದೆಗಳು ಕ್ಲೇಶಪಡುವುದನ್ನು ನೋಡಿ ಆ ಬ್ರಾಹ್ಮಣನ ಮಗಳು ತಾನು ಕ್ಲೇಶಪಟ್ಟು ಧೈರ್ಯವನ್ನು ಹೊಂದಿ ತಾಯಿತಂದೆಗಳನ್ನು ನೋಡಿ—ಎಲೈ ! ನೀವು ಅನಾಥರೋಪಾದಿಯಲ್ಲಿ ಹಂಬಲಿಸುವುದೇಕೆ ? ನನಗೆ ತೋರಿದಂತೆ ಹೇಳುತ್ತೇನೆ. ನಿಮಗೆ ಸಮ್ಮತವಾದರೆ ಹಾಗೆಯೇ ನಡಿಸಿರಿ. ನಿಮ್ಮಿಬ್ಬರಿಗೂ ನಾನು ಮಗಳಾದುದರಿಂದ ನನ್ನನ್ನು ಅವಶ್ಯವಾಗಿ ಕಳುಹಿಸಬೇಕು. ನನ್ನನ್ನು ಕಳುಹಿಸಿ ನಿಮ್ಮನ್ನು ಸಂರಕ್ಷಿಸಿಕೊಳ್ಳುವುದು ಯುಕ್ತವು ಲೋಕದಲ್ಲಿ ಜನರು ತಾವು ಆಪತ್ತುಗಳನ್ನು ಪರಿಹರಿಸಿಕೊಳ್ಳಬೇಕೆಂದಲ್ಲವೇ ಮಕ್ಕಳನ್ನು ಬಯಸುವುದು ? ಇಂಥಾ ಆಪತ್ಕಾಲದಲ್ಲಿ ನನ್ನಿಂದ ಈ ಆಪತ್ತನ್ನು ಪರಿಹರಿಸಿಕೊಂಬುವುದು ಯುಕ್ತವು. ಇಹಲೋಕ ಪರಲೋಕಗಳಲ್ಲಿ ಮಾತಾಪಿತೃಗಳ ದುಃಖವನ್ನು ಪರಿಹರಿಸುವಂಥವಳೇ ಪುತ್ರಿಯೆನಿಸಿಕೊಳ್ಳುವಳು. ಆದುದರಿಂದ ಅಂಥಾ ದುಃಖವನ್ನು ಈ ಲೋಕದಲ್ಲಿ ಪರಿಹರಿಸುತ್ತೇನೆ. ದೌಹಿತ್ರನ ದೆಸೆಯಿಂದ ಅತಿಶಯ ಬರಬೇಕೆಂದು ಪ್ರಾರ್ಥಿಸುವಂಥ ನಿಮಗೆ ನಾನೇ ಪ್ರಾಣದಾನವನ್ನು ಮಾಡುತ್ತೇನೆ. ನನ್ನ ತಮ್ಮನು ಬಾಲಕನಾದುದರಿಂದ ನಿಮ್ಮನ್ನು ಬಿಟ್ಟು ಬದುಕಲಾರನು ? ಮತ್ತು ನೀವೂ ಈ ನನ್ನ ತಮ್ಮನೂ ಇಬ್ಬರೂ ಇಲ್ಲದೇ ಹೋದರೆ ಪಿತೃದೇವತೆಗಳಿಗೆ ಪಿಂಡೋದಕಪ್ರದಾನಗಳು ನಿಂತುಹೋಗುವುವು. ಆದುದರಿಂದ ನೀವು ಹೋಗುವುದು ಪಿತೃದೇವತೆಗಳಿಗೆ ಸಮ್ಮತವಲ್ಲ. ತಾಯಿತಂದೆಗಳಾದ ನೀವೂ ತಮ್ಮನೂ ನನ್ನನ್ನು ಬಿಟ್ಟರೆ ನಾನು ದುಃಖದ ಮೇಲೆ ದುಃಖವನ್ನು ಹೊಂದಿ ಶರೀರವನ್ನು ಬಿಡಬೇಕಾಗುವುದು. ನೀವು ನಿಂತರೆ ಪಿತೃದೇವತೆಗಳಿಗೆ ಪಿಂಡೋದಕಕ್ರಿಯೆಗಳು ಊರ್ಜಿತವಾಗಿ ನಡೆದು ನನ್ನ ತಾಯಿಯ ಮತ್ತು ನಿಮ್ಮ ವಂಶಗಳು ಅಭಿವೃದ್ಧಿಯಾಗುವುವು. ತಂದೆಯು ತಾನೇ ಮಗನಾಗಿರುವುದರಿಂದಲೂ ಹೆಂಡತಿಯು ಸಕಲ ಕಾರ್ಯಗಳಲ್ಲಿಯೂ ಸಹಾಯಕಳಾಗಿ ಸತಿ ಎನಿಸಿಕೊಂಡಿರುವುದರಿಂದಲೂ ಮಗನನ್ನೂ ಹೆಂಡತಿಯನ್ನೂ ಬಿಡಬಾರದು. ಕನ್ಯಾಜನವು ತಾಯಿತಂದೆಗಳಿಗೆ ದುಃಖವನ್ನು ಉಂಟುಮಾಡುವವರಾಗಿರುವುದರಿಂದ ನನ್ನನ್ನು ಕಳುಹಿಸಿ ಸದ್ಯಃ ಬಂದ ದುಃಖವನ್ನು ಪರಿಹರಿಸಿಕೊಳ್ಳಿರಿ. ನಾನು ಇಂಥಾ ಧರ್ಮದಿಂದ ಪುಣ್ಯಲೋಕಗಳನ್ನು ಹೊಂದುತ್ತೇನೆ. ನಾನು ಚಿಕ್ಕವಳಾದ ಅಬಲೆಯಾಗಿರುವುದರಿಂದ ನೀವು ಹೋದರೆ ನಾನು ಅನಾಥೆಯಾಗಿ ದೈನ್ಯದಿಂದ ಭೂಮಿಯಲ್ಲಿ ಬಿದ್ದು ಹೊರಳಾಡುತ್ತಿರಬೇಕು. ಈಗ ನೀವು ನನ್ನನ್ನು ಕಳುಹಿಸಿದರೆ ನಾನು ಶರೀರವನ್ನು ರಾಕ್ಷಸನಿಗೆ ಕೊಟ್ಟು

ಕುಲಸಂರಕ್ಷಣೆಯನ್ನು ಮಾಡಿ ಅಪರಿಮಿತವಾದ ಪುಣ್ಯಲೋಕಗಳನ್ನೈದುವೆನು. ಆದು ದರಿಂದ ಬಿಡತಕ್ಕವಳಾಗಿರುವ ನನ್ನನ್ನು ಕಳುಹಿಸಿ ವಂಶಾಭಿವೃದ್ಧಿಗೆ ಕಾರಣರಾದ ನಿಮ್ಮನ್ನು ರಕ್ಷಿಸಿಕೊಳ್ಳಬೇಕು ಇದು ಧರ್ಮವು. ನೀವು ಕೊಡುವಂಥಾ ತರ್ಪಣೋದಕದ ದೆಸೆಯಿಂದ ನಾನು ಪರಲೋಕ ಸುಖವನ್ನು ಹೊಂದುತ್ತೇನೆ. ಹಾಗಲ್ಲವೆಂದು ನೀವು ನನ್ನನ್ನು ಬಿಟ್ಟು ಪರಲೋಕಕ್ಕೆ ಹೋದರೆ ನಾನು ನಾಯಿಯಂತೆ ಮನೆಮನೆಗೂ ತಿರುಗಿ ಅನ್ನವನ್ನು ಬೇಡಿ ಬೇಸರಪಡಬೇಕು. ಇದಕ್ಕಿಂತ ಇನ್ನು ಬೇರೇ ದುಃಖ ಉಂಟೆ? ನೀವು ಸಮಸ್ತ ಬಂಧುಜನಗಳೊಡನೆ ಸುಖವಾಗಿದ್ದರೆ ಅದರಿಂದ ಪರಲೋಕದಲ್ಲಿ ಸುಖ ಪಡುವುದಕ್ಕಿಂತ ನನಗೆ ಬೇರೆ ಸುಖವುಂಟೆ? ನೀವು ಇವೆರಡನ್ನೂ ವಿಚಾರಿಸಿ ನಿಮಗೂ ನನ್ನ ತಾಯಿತಮ್ಮಂದಿರಿಗೂ ಸುಖವಾಗುವ ಹಾಗೆಯೇ ನಡಿಸಿರಿ. ನೀವು ಜೀವ್ಸಾಗಿದ್ದರೆ ನಿಮಗೆ ಇನ್ನೂ ಗುಣವಂತರಾದ ಹೆಣ್ಣು ಗಂಡು ಮಕ್ಕಳು ಹುಟ್ಟುವರೇ ಹೊರತು ಮಕ್ಕಳಿಗೆ ತಾಯಿತಂದೆಗಳು ತಿರಿಗಿ ಹುಟ್ಟಲಾರರು. ಅದರಿಂದ ನಿಮಗೆ ಪ್ರಿಯವಾಗುವುದಕ್ಕೋಸ್ಕರ ನನ್ನ ಪ್ರಾಣವನ್ನು ಅರ್ಪಿಸುತ್ತೇನೆ ಎಂದಳು. ಹೀಗೆ ತಾಯಿ ತಂದೆಗಳು ಮಗಳು ಸಹ ರೋದನದನ್ನು ಮಾಡುತ್ತಿದ್ದರು.

ಆ ಕುಮಾರನು ಅವರ ಸಮೀಪಕ್ಕೆ ಹೋಗಿ ತೊದಲು ನುಡಿಗಳಿಂದ—ಅಳಬೇಡಿರೆಂದು ಪ್ರತ್ಯೇಕಪ್ರತ್ಯೇಕವಾಗಿ ತಾಯಿತಂದೆ ಅಕ್ಕಂದಿರಿಗೆ ಸಮಾಧಾನವನ್ನು ಹೇಳುತ್ತಾ ನಗುತ್ತಾ, ಬಬ್ಬೊಬ್ಬರ ಸಮೀಪಕ್ಕೆ ಹೋಗಿ ಅವರ ಮೇಲೆ ಬಿದ್ದು ಸಂತೋಷಪಡುತ್ತಾ ಹುಲ್ಲನ್ನು ತೆಗೆದುಕೊಂಡು ಮನುಷ್ಯರನ್ನು ಕೊಲ್ಲುವ ಆ ರಾಕ್ಷಸನನ್ನು ಇದರಿಂದ ಕೊಂದು ಹಾಕುತ್ತೇನೆ ಎಂದು ಹೇಳಿದುದಕ್ಕೆ ಅವರು ಅತಿ ದುಃಖಿತರಾಗಿದ್ದರೂ ಆ ಚಿಕ್ಕವನ ಮಾತನ್ನು ಕೇಳಿ ಸಂತೋಷಪಟ್ಟು ನಗುತ್ತಿರಲು: ಇದೇ ಸಮಯವೆಂದು ಕುಂತಿಯು ಅವರ ಸಮೀಪಕ್ಕೆ ಹೋಗಿ ಆ ಬ್ರಾಹ್ಮಣನನ್ನು ಕುರಿತು ಮಧುರವಚನದಿಂದ ಇಂತೆಂದಳು—ಎಲೈ ಬ್ರಾಹ್ಮಣಶ್ರೇಷ್ಠನೆ! ನೀವು ಹೀಗೆ ಕ್ಲೇಶಪಡುವುದಕ್ಕೆ ಕಾರಣವೇನು? ಹೇಳು. ಅದು ನಮ್ಮ ಕೈಲಾಗುವ ಕಾರ್ಯವಾದರೆ ತೀರಿಸುತ್ತೇವೆ ಎನಲು; ಆ ಬ್ರಾಹ್ಮಣನು—ಪರದುಃಖಗಳನ್ನು ಹೋಗಲಾಡಿಸುವುದಕ್ಕೆ ಉಜ್ಜುಗಿಸುವುದು ಸಜ್ಜನರಿಗೆ ಸ್ವಭಾವವಾದುದು. ನೀವು ಹೀಗೆ ಕೇಳುವುದು ಉಚಿತವೇ ಸರಿ. ಆದರೆ ಈ ದುಃಖವು ದೇವತೆಗಳಿಂದಲೇ ಹೊರತು ಮನುಷ್ಯರಿಂದ ತೀರಿಸುವುದಕ್ಕೆ ಶಕ್ಯವಲ್ಲ. ಆದರೂ ನೀವು ಕೇಳಿದುದರಿಂದ ವಿವರಿಸುತ್ತೇನೆ.

ಈ ಪಟ್ಟಣಕ್ಕೆ ಎರಡು ಹರದಾರಿಯ ದೂರದಲ್ಲಿ ಯಮುನಾನದೀ ತೀರದ ಪರ್ವತ ಗುಹಾಂತರದಲ್ಲಿ ಮಹಾ ಬಲಶಾಲಿಯಾಗಿಯೂ ಈ ದೇಶಕ್ಕಧಿಪತಿಯಾಗಿಯೂ ಮನುಷ್ಯ ಮಾಂಸ ಭಕ್ಷಕನಾಗಿಯೂ ಕಾಮರೂಪಿಯಾಗಿಯೂ ಇರುವ ಒಕನೆಂಬ ಒಬ್ಬ ರಾಕ್ಷಸನಿರುವನು. ಅವನು ಈ ದೇಶಕ್ಕೆ ಬಂದು ಹದಿಮೂರು ಸಂವತ್ಸರಗಳ ಪರ್ಯಂತರವೂ ಸಕಲ ಜನರಿಗೂ ಉಪದ್ರವನ್ನು ಮಾಡುತ್ತಾ ಒಂದೊಂದು ಮನೆಯನ್ನು ಹೊಕ್ಕು ಅದರಲ್ಲಿರುವ ಜನರೆಲ್ಲರನ್ನೂ ಒಂದೇ ದಿವಸದಲ್ಲಿ ಭಕ್ಷಿಸುತ್ತಾ ಇತರರ ಭಯವಿಲ್ಲದೆ ಇರುತ್ತಿದ್ದನು. ಹೀಗೆ ನಮಗೆ ಯಾರೂ ರಕ್ಷಕರಿಲ್ಲದೆ ಇದ್ದು

ದರಿಂದಲೂ ಸ್ತ್ರೀಬಾಲವೃದ್ಧರಿಗೆ ಆವನ ಭಯವು ಹೆಚ್ಚಾಗುತ್ತಾ ಬಂದುದರಿಂದಲೂ ಎಲ್ಲಾ ಬ್ರಾಹ್ಮಣರ ಮಂತ್ರ ಹೋಮ ಜಪ ಭೋಜನಗಳ ದೆಸೆಯಿಂದ ಆ ದುರಾತ್ಮನಿಗೆ ಸಂತೋಷವನ್ನು ಮಾಡಿ ಆತನನ್ನು ಕುರಿತು—ಎಲೈ ರಾಕ್ಷಸೋತ್ತಮನೇ! ನೀನು ಈ ಪ್ರಕಾರ ಪ್ರತಿದಿನವೂ ಜನರಿಗೆ ಬಾಧೆಯನ್ನು ಮಾಡಬೇಡ, ನಿನಗೆ ಮಾಂಸಾಶನಗಳನ್ನೂ ಅನ್ನಪಾನಗಳನ್ನೂ ಪುಂಡಿಯ ಸೊಪ್ಪು ಮೊದಲಾದ ಶಾಕಗಳನ್ನೂ ತುಪ್ಪವನ್ನೂ ಅರಳು ಅಪೂಪ ಸೂಪಗಳನ್ನೂ ಪಾನಕದ ಗುಡಾಣಗಳನ್ನೂ ಮೊಸರಿನ ಗಡಿಗೆಗಳನ್ನೂ ತಂಬಿಟ್ಟು ಚಿಗಳಿಗಳ ರಾಶಿಗಳನ್ನೂ ಎರಡೆತ್ತುಗಳನ್ನು ಕಟ್ಟಿದ ಒಂದು ಬಂಡಿಯಲ್ಲಿ ಜೊತೆಮಾಡಿರಿಸಿ ಒಂದೊಂದು ಮನೆಗೆ ಒಬ್ಬೊಬ್ಬ ಮನುಷ್ಯನ ಮೇರೆಗೆ ಪ್ರತಿ ದಿನವೂ ಕಳುಹಿಸುತ್ತೇವೆ. ನೀನು ಇದನ್ನು ಅಂಗೀಕರಿಸಿ ನಮಗೆ ಉಪದ್ರವನ್ನು ಮಾಡದೆ ಇರಬೇಕು ಎನಲು; ಆ ದೈತ್ಯಾಧಮನು—ಹಾಗೇ ಆಗಲಿ ಎಂದು ಆ ಅರ್ಧಕ್ಕೆ ಒಡಂಬಟ್ಟು ಪ್ರತಿದಿನವೂ ಆ ಮೇರೆಗೆ ಆ ಊರಿನವರು ಕಳುಹಿಸುವ ಬಲಿಯನ್ನು ತೆಗೆದುಕೊಂಡು ಈ ದೇಶವನ್ನು ಶತ್ರು ಚೋರಾದಿ ಭಯವಿಲ್ಲದಂತೆ ಪರಿಪಾಲಿಸುತ್ತಿದ್ದಾನೆ. ಆತನ ಬಲಿಗೋಸ್ಕರ ಒಬ್ಬೊಬ್ಬರ ಮನೆಗೆ ಅನೇಕ ವರುಷಗಳಿಗೆ ಒಂದುಸಾರಿ ಸರದಿ ಬರುವುದು, ಆ ಕಾಲದಲ್ಲೇನಾದರೂ ಅವರು ಊರನ್ನು ಬಿಟ್ಟು ಹೋಗುವುದಕ್ಕೆ ಯತ್ನವನ್ನು ಮಾಡಿದರೆ ಆ ರಾಕ್ಷಸನು ಕುಟುಂಬ ಸಮೇತವಾಗಿ ಅವರನ್ನು ಕೊಂದುಹಾಕುವನು. ಈ ಪಟ್ಟಣದಲ್ಲಿರುವ ವೇತ್ರಕಿಯನೆಂಬ ಅರಸು ರಾಜನೀತಿಪರನಲ್ಲದೆ ಇರುವುದರಿಂದ ಈ ಪಟ್ಟಣದ ಜನರಿಗೆ ಉಂಟಾದ ಉಪದ್ರವವನ್ನು ಪರಿಹರಿಸಿ ಶಾಶ್ವತವಾದ ಸುಖವನ್ನು ಕಲ್ಪಿಸಲಾರನು. ನಿಷ್ಕಂಟಕಗಳಾದ ದೇಶಗಳು ಎಷ್ಟು ಇದ್ದಾಗ್ಗೂ ನಾವು ದುರ್ಬಲಾಶ್ರಯವಾದ ಇಂಥಾ ಪ್ರದೇಶಗಳಲ್ಲಿ ಬಿದ್ದು ಇದ್ದೇವೆ. ಬ್ರಾಹ್ಮಣನಿಗೆ ಪರಸ್ಪರಾನುಕೂಲ್ಯವಿಲ್ಲದಿದ್ದರೆ ಸ್ವೇಚ್ಛಾಗಮನದಿಂದ ಎಲ್ಲಿಗಾದರೂ ಪಕ್ಷಿಗಳೋಪಾದಿಯಲ್ಲಿ ಹೋಗಬಹುದು. ಗೃಹಸ್ಥನಾದವನಿಗೆ ಮೊದಲು ಧಾರ್ಮಿಕನಾದ ಅರಸಿನ ಆಶ್ರಯವಿರಬೇಕು. ಹೆಂಡತಿಯು ಅನುಕೂಲೆಯಾಗಿರಬೇಕು. ಧನವು ಯಥೇಚ್ಛವಾಗಿರಬೇಕು. ಈ ಮೂರು ಇದ್ದರೆ ಆತನು ತನ್ನ ಜ್ಞಾತಿಪುತ್ರಾದಿಗಳನ್ನು ರಕ್ಷಿಸುವನು. ಈ ಮೂರು ಅರ್ಧಗಳಲ್ಲಿ ಒಂದಾದರೂ ನನಗೆ ಇಲ್ಲದುದರಿಂದ ನಾನು ಹೀಗೆ ಕ್ಲೇಶಪಡುತ್ತಿದ್ದೇನೆ. ಈ ದಿವಸ ಮನೆಗಳ ಸರದಿಯ ಮೇರೆಗೆ ನನ್ನ ಕುಲನಾಶಕವಾದ ವಾರವು ಪ್ರಾಪ್ತವಾಯಿತು. ಭೋಜನವನ್ನೂ ಪುರುಷ ಬಲಿಯನ್ನೂ ಸಂಪಾದಿಸಬೇಕು. ಒಬ್ಬ ಪುರುಷನನ್ನು ಕ್ರಯಕ್ಕಾದರೂ ಕೊಂಡು ಕೊಟ್ಟೇವು ಎಂದರೆ ಹಣವಿಲ್ಲ. ಇವರೊಬ್ಬರನ್ನೂ ಕೊಡುವುದಕ್ಕೆ ಮನಸ್ಸು ಒಡಂಬಡುವುದಿಲ್ಲ. ಇಂಥಾ ರಾಕ್ಷಸನ ಭಯವನ್ನು ಹೋಗಲಾಡಿಸಿಕೊಳ್ಳುವುದಕ್ಕೆ ಮತ್ತೊಂದು ಉಪಾಯವೂ ತೋರುವುದಿಲ್ಲ. ಆದುದರಿಂದ ನಾವೆಲ್ಲರೂ ಆತನ ಬಾಯಿಯಲ್ಲಿ ಬೀಳಬೇಕೆಂದು ಯೋಚಿಸುತ್ತಿದ್ದೇವೆ. ನೀವು ಕೇಳಿದುದರಿಂದ ಈ ದುಃಖದ ಕಾರಣವನ್ನು ವಿವರವಾಗಿ ಹೇಳಿದೆನು ಎನಲು;

ಆ ಕುಂತೀದೇವಿಯು ಆ ಬ್ರಾಹ್ಮಣನನ್ನು ನೋಡಿ—ಎಲೈ, ಬ್ರಾಹ್ಮಣೋತ್ತಮನೇ! ಈ ವಿಷಯಕ್ಕಾಗಿ ನೀನು ಭಯಪಡಬೇಡ ಇದಕ್ಕೆ ನಾನೊಂದು ಉಪಾ

ಯವನ್ನು ಹೇಳುತ್ತೇನೆ. ನೀವಿಷ್ಟು ಮಂದಿಯೂ ಏಕಕಾಲದಲ್ಲಿ ಹೋಗುವುದು ಯುಕ್ತವಲ್ಲ. ನಿನಗೆ ಒಬ್ಬನೇ ಮಗನೂ ಒಬ್ಬಳೇ ಮಗಳೂ ಇರುವುದರಿಂದ ಅವರನ್ನೂ ಅವರನ್ನು ಕಾಪಾಡುವ ಪತಿಯನ್ನೂ ಕಳುಹಿಸುವುದೂ ಸರಿಯಲ್ಲ. ನನಗೆ ಐದುಮಂದಿ ಮಕ್ಕಳಿದ್ದಾರೆ. ಅವರೊಳಗೊಬ್ಬನನ್ನು ನಿಮಗೆ ಕೊಡುತ್ತೇನೆ. ಅತನು ನೀವು ಕೊಡುವ ಅನ್ನಪಾನಗಳನ್ನು ಜೊತೆಮಾಡಿಕೊಂಡು ರಾಕ್ಷಸನ ಸಮೀಪಕ್ಕೆ ಹೋಗುತ್ತಾನೆ ಎನಲು ಆ ಬ್ರಾಹ್ಮಣನು—ನಾನು ನನ್ನ ಪ್ರಾಣರಕ್ಷಣಾರ್ಥವಾಗಿ ಇಂಥಾ ಅಕೃತ್ಯಕ್ಕೆ ಒಡಂಬಡುವವನಲ್ಲ. ಬ್ರಾಹ್ಮಣನಾಗಿಯೂ ಅತಿಥಿಯಾಗಿಯೂ ಇರುವ ನಿನ್ನ ಕುವಾರನನ್ನು ರಾಕ್ಷಸನಿಗೆ ಕೊಡುವುದಕ್ಕೆ ಹೇಗೆ ಸಮ್ಮತಿಸುವೆನು ? ಮಹಾ ಕುಲ ಪ್ರಸೂತರಾದ ನಿಮ್ಮಂಥವರಿಗೆ ಇಂಥಾ ಪರೋಪಕಾರ ಬುದ್ಧಿಯುಂಟಾಗುವುದು ಅದ್ಭುತವಲ್ಲ. ಬ್ರಾಹ್ಮಣ ನಿಮಿತ್ತವಾಗಿ ಸ್ವಪುತ್ರನನ್ನಾದರೂ ಒಪ್ಪಿಸುವುದು ನಿಮಗೆ ಯುಕ್ತವು. ಅದರೂ ನಾನು ಶ್ರೇಯಸ್ಸಾಗುವ ಮೇರೆಗೆ ವಿಚಾರಿಸಬೇಡವೇ ? ಬ್ರಾಹ್ಮಣವಧೆಗೂ ಆತ್ಮವಧೆಗೂ ಅಂತರವನ್ನು ವಿಚಾರಿಸುವಲ್ಲಿ ಆತ್ಮವಧೆಗಿಂತಲೂ ಬ್ರಹ್ಮವಧೆಯೇ ಅಧಿಕವಾಗಿರುವುದು. ಹೀಗಿರುವಲ್ಲಿ ಅದಕ್ಕೆ ಪ್ರಾಯಶ್ಚಿತ್ತವು ವಿಧಿಸಲ್ಪಟ್ಟಿರುವುದು. ಬ್ರಾಹ್ಮಣವಧೆಯನ್ನು ಅಜ್ಞಾನದಿಂದ ಮಾಡಿದರೂ ದುಷ್ಪರಿಹಾರವಾದುದರಿಂದ ಬುದ್ಧಿಪೂರ್ವಕವಾಗಿ ಮಾಡಿದರೆ ಹೇಗೆ ಪರಿಹರಿಸತಕ್ಕುದು ? ತನಗೆ ಅಭಿಮತವಿಲ್ಲದೆ ಮತ್ತೊಬ್ಬರ ನಿರ್ಬಂಧದ ದೆಸೆಯಿಂದ ಬರುವ ಆತ್ಮವಧೆಗೆ ದೋಷವಿಲ್ಲ. ನಿನ್ನ ಕುಮಾರನನ್ನು ಕಳುಹಿಸುವುದು ಬುದ್ಧಿಪೂರ್ವಕವಾದ ಬ್ರಾಹ್ಮಣವಧೆಯಾದುದರಿಂದ ಈ ಕೃತ್ಯವು ಅತಿಕ್ರೂರವಾಗಿರುವುದು. ವಿಶೇಷವಾಗಿ ತನ್ನ ಮನೆಗೆ ಬಂದಂಥವನನ್ನೂ ಯಾಚನೆಗೆ ಬಂದಂಥವನನ್ನೂ ಶರಣಾಗತನಾದವನನ್ನೂ ವಧಿಸುವುದು ಅತಿನಿಂದಿತವೆಂತಲೂ ಅದನ್ನು ಒಂದು ವೇಳೆಯಾದರೂ ಮಾಡಬಾರದೆಂತಲೂ ಪ್ರಾಜ್ಞರು ಪೇಳುವರು. ನಮ್ಮಲ್ಲಿ ಒಬ್ಬರು ಬಿಟ್ಟುಹೋದರೆ ದುಃಖವುಂಟಾಗುತ್ತದೆ ಎಂದು ಅಷ್ಟು ಮಂದಿಯೂ ಹೋಗಬೇಕೆಂದು ಎಣಿಸಿ ಇದ್ದೇನೆ. ನಿನ್ನ ಕುಮಾರನನ್ನು ಕಳುಹಿಸುವುದಕ್ಕೆ ನಾನು ಒಂಡಂಬಡೆನು ಎನಲು ;

ಆ ಕುಂತೀದೇವಿಯು—ಎಲೈ, ದ್ವಿಜನೇ! ಬ್ರಾಹ್ಮಣನನ್ನು ಸಂರಕ್ಷಣೆ ಮಾಡಬೇಕೆಂತಲೂ ಬ್ರಾಹ್ಮಣವಧೆಯು ನಿಂದಿತವೆಂತಲೂ ನಾನು ಬಲ್ಲೆನು. ತಾಯಿಗೆ ನೂರು ಮಂದಿ ಕುಮಾರಕರಿದ್ದರೂ ಅವರಲ್ಲೊಬ್ಬನೂ ಅಪ್ರಿಯನಾಗಿ ಹೋಗುವುದಿಲ್ಲ. ಆದುದರಿಂದ ನನಗೆ ಈ ಕುಮಾರಕನು ಅಪ್ರಿಯನೆಂದು ಕಳುಹಿಸುವುದಿಲ್ಲ. ಆದರೆ ಈತನು ಬಲಪರಾಕ್ರಮಶಾಲಿಯೂ ಮಂತ್ರಸಿದ್ಧಿಯುಳ್ಳವನೂ ಅಧಿಕ ತಪೋಬಲಯುಕ್ತನೂ ಆಗಿ ಇರುವುದರಿಂದ ಈತನು ನೀವು ಕೊಟ್ಟ ಅನ್ನಪಾನಗಳನ್ನು ಆ ರಾಕ್ಷಸನಿಗೆ ಕೊಟ್ಟು ತನ್ನನ್ನು ರಕ್ಷಿಸಿಕೊಂಡು ತಿರಿಗಿ ಬರುವನೇ ಹೊರತು ಅವನಿಂದ ಪೆಟ್ಟುತಿಂದು ಬರುವಂಥವನಲ್ಲ. ಮೊದಲು ಈ ಬಾಲಕನಿಂದ ಮಹಾ ಬಲಶಾಲಿಗಳಾಗಿಯೂ ಮಹಾ ಶರೀರವುಳ್ಳವರಾಗಿಯೂ ಇದ್ದ ರಾಕ್ಷಸರು ಅನೇಕ ಮಂದಿ ಹತರಾದರು. ಈ ರಹಸ್ಯವನ್ನು ಯಾರಿಗೂ ಹೇಳಬೇಡ. ಈತನಲ್ಲಿರುವ ವಿದ್ಯೆಯನ್ನು ಬಹು ಮಂದಿ ವಿದ್ಯಾರ್ಥಿಗಳು

ಕಲಿಯಲಪೇಕ್ಷಿಸಿ ಈತನನ್ನು ನಿರ್ಬಂಧಪಡಿಸಿರುವರು. ಆದರೆ ಈ ಬಾಲಕನಿಗೆ ವಿದ್ಯೆಯನ್ನು ಹೇಳಿಕೊತನು ತನ್ನ ಅಪ್ಪಣೆ ಇಲ್ಲದೆ ಇನ್ಯಾರಿಗಾದರೂ ಈ ವಿದ್ಯೆಯನ್ನು ಹೇಳಿದರೆ ನಿನಗೆ ಫಲಿಸಲಾರದು ಎಂದು ಕಟ್ಟುಮಾಡಿ ಇದ್ದಾನೆ ಎಂದು ಹೇಳಲು; ಆ ಬ್ರಾಹ್ಮಣೋತ್ತಮನೂ ಆತನ ಹೆಂಡತಿಯೂ ಅಮೃತರಸದ ಜಂದದಿಂದ ಒಪ್ಪುತ್ತಿರುವ ಆ ಕುಂತಿಯ ವಾಕ್ಯವನ್ನು ಕೇಳಿ ಬಹು ಸಂತೋಷಪಟ್ಟು ಅವಳನ್ನು ಬಹು ಪ್ರಕಾರವಾಗಿ ಪೂಜಿಸಿದರು. ಅನಂತರದಲ್ಲಿ ಕುಂತೀದೇವಿಯು ಭೀಮನಿಗೆ ಈ ವೃತ್ತಾಂತವನ್ನು ತಿಳಿಸಲು; ಆತನು—ಹಾಗೆಯೇ ಮಾಡುತ್ತೇನೆ ಎಂದು ಒಡಂಬಟ್ಟನು.

ಇತ್ತಲಾ ಧರ್ಮರಾಜನೇ ಮೊದಲಾದ ನಾಲ್ಕು ಮಂದಿಯೂ ಭಿಕ್ಷಾನ್ನವನ್ನು ತೆಗೆದುಕೊಂಡು ಮನೆಗೆ ಬಂದ ಸಮಯದಲ್ಲಿ ಉತ್ಸಾಹದೊಡನೆ ಕೂಡಿರುವ ಭೀಮಸೇನನನ್ನು ನೋಡಿ ಅವರಲ್ಲಿ ಧರ್ಮರಾಜನು ಆತನ ಇಂಗಿತದಿಂದ ಸಂತೋಷಯುಕ್ತನಾಗಿ ಇದ್ದಾನೆಂದು ತಿಳಿದು ಇದಕ್ಕೆ ಏನೋ ನಿಮಿತ್ತವಿದೆ ಎಂದು ಚಿಂತಿಸುತ್ತಾ ಏಕಾಂತದಲ್ಲಿ ತನ್ನ ತಾಯಿಯನ್ನು ನೋಡಿ ವಾಯುಪುತ್ರನು ನಿನ್ನ ಅಪ್ಪಣೆಯಿಂದ ಒಂದು ಮಹಾಕಾರ್ಯವನ್ನು ನಿರ್ವಹಿಸುವುದಕ್ಕೆ ಎಣಿಸಿದ್ದಾನೆಂದು ಆತನ ಮುಖೋಲ್ಲಾಸದಿಂದ ತಿಳಿದೆನು. ಅದನ್ನು ವಿವರವಾಗಿ ತಿಳಿಯ ಹೇಳೆನಲು; ಕುಂತೀದೇವಿಯು—ಎಲೈ, ಕುಮಾರಕನೇ! ವಾಯುಪುತ್ರನು ನನ್ನ ಅಪ್ಪಣೆಯಿಂದ ಒಬ್ಬ ಬ್ರಾಹ್ಮಣನನ್ನು ರಕ್ಷಿಸುವದಕ್ಕೋಸ್ಕರವೂ ಈ ಪಟ್ಟಣದ ಆಪತ್ತನ್ನು ಪರಿಹರಿಸುವುದಕ್ಕೋಸ್ಕರವೂ ಒಬ್ಬ ರಾಕ್ಷಸನ ಬಲಿರೂಪವಾದಂಥ ಮಹಾ ಕಾರ್ಯಗಳನ್ನು ನಡಿಸಿಲಿಚ್ಛಿಸಿದ್ದಾನೆ ಎನಲು; ಧರ್ಮಜನು ತಾಯಿಯನ್ನು ನೋಡಿ—ಎಲೌ ತಾಯಿಯೇ! ಇಂಥಾ ಸಾಹಸ ಕಾರ್ಯವನ್ನು ಮಾಡಬಹುದೇ? ಸತ್ಪುರುಷರಾದವರು ಪುತ್ರತ್ಯಾಗವು ಮಹಾ ಅನರ್ಥಕ್ಕೆ ಕಾರಣವೆಂದು ಹೇಳುವರು ಮತ್ತೊಬ್ಬರ ಮಗನನ್ನು ರಕ್ಷಿಸುವದಕ್ಕೋಸ್ಕರ ತನ್ನ ಮಗನನ್ನು ಬಿಡಬಹುದೇ? ಇಂಥಾ ಲೋಕವಿರುದ್ಧವಾದ ಪುತ್ರತ್ಯಾಗರೂಪಕಾರ್ಯವನ್ನು ನೀನು ಮಾಡಬಹುದೇ? ನಾವೆಲ್ಲರೂ ಭೀಮಸೇನನ ಭುಜಬಲವನ್ನು ನಂಬಿ ದಾಯಾದಿಗಳು ಅಪಹರಿಸಿಕೊಂಡಿರುವಂಥ ರಾಜ್ಯವನ್ನು ತಿರಿಗಿ ಸಾಧಿಸಬೇಕೆಂದು ಬಯಸಿ ಇದ್ದೇವೆ, ದುರ್ಯೋಧನ ದುಶ್ಶಾಸನ ಕರ್ಣ ಶಕುನಿ ಮೊದಲಾದವರು ಮಹಾ ಬಲಪರಾಕ್ರಮಶಾಲಿಯಾದ ಈ ಭೀಮಸೇನನ ಪರಾಕ್ರಮವನ್ನು ಸ್ಮರಿಸಿ ಈಗಲೂ ಬೆಚ್ಚಿ ಬೆಚ್ಚಿ ಬೀಳುತ್ತಿದ್ದಾರೆ ಇದಲ್ಲದೆ ಭೀಮಸೇನನ ಭುಜಬಲದಿಂದಲ್ಲವೇ ಪಾಪಾತ್ಮರಾದ ಪುರೋಚನಾದಿಗಳನ್ನು ಕೊಂದು ಅರಗಿನ ಮನೆಯ ಅಗ್ನಿಬಾಧೆಯನ್ನು ತಪ್ಪಿಸಿಕೊಂಡು ನಾವೆಲ್ಲರೂ ಪ್ರಾಣಸಹಿತವಾಗಿ ನಿಂತುದು? ಇದನ್ನು ಅರಿಯೆಯಾ? ಬುದ್ಧಿಶಾಲಿಯಾಗಿ ಮಹಾಬಲಪರಾಕ್ರಮಶಾಲಿಯಾದ ಇಂಥಾ ಮಗನನ್ನು ಕೊಡುವುದಕ್ಕೆ ಯೋಚಿಸಿದ ನಿನ್ನ ಬುದ್ಧಿಗೆ ಏನೆನ್ನಬೇಕೆನಲು; ಕುಂತಿಯು ಇಂತೆಂದಳು.—ಕೇಳು ಧರ್ಮರಾಜನೇ? ಭೀಮನ ವಿಷಯದಲ್ಲಿ ಹೀಗೆ ಎಣಿಸಬೇಡ. ನಾನು ಬುದ್ಧಿಮೋಸದಿಂದ ಈ ಕಾರ್ಯವನ್ನು ಮಾಡಿದವಳಲ್ಲ. ಕ್ಲೇಶದಿಂದ ನನ್ನ ಬುದ್ಧಿ ಮಂದವಾಗಲಿಲ್ಲ, ನಾವು ಈ ಬ್ರಾಹ್ಮಣನ

ಮನೆಯಲ್ಲಿ ಸುಖವಾಗಿ ಇದ್ದೇವಾದಕಾರಣ ಈತನಿಗೆ ಒಂದು ಉಪಕಾರವನ್ನು ಮಾಡ ಬೇಕೆಂದು ಎಣಿಸಿದೆನು. ಲೋಕದಲ್ಲಿ ಉಪಕಾರವನ್ನು ಮಾಡಿದವರು ಕೆಟ್ಟುಹೋಗು ವದಿಲ್ಲ. ಇದಲ್ಲದೆ ಬ್ರಾಹ್ಮಣನಿಗೆ ಉಪಕಾರವನ್ನು ಮಾಡಿದರೆ ಮಹತ್ತಾದ ಧರ್ಮವು ಬರುವುದೆಂದು ಯೋಚಿಸಿದೆನು. ಮತ್ತು ಭೀಮನು ಅರಗಿನ ಮನೆಯಲ್ಲಿ ಮಾಡಿದ ಸಾಹಸವನ್ನೂ ಹಿಡಿಂಬವಧೆಯನ್ನೂ ನೋಡಿ ಇವನು ಆ ರಾಕ್ಷಸನಿಗೆ ಸ್ವಲ್ಪವೂ ದಕ್ಕುವುದಿಲ್ಲ ಎಂಬ ವಿಶ್ವಾಸದಿಂದ ಈ ಕಾರ್ಯಕ್ಕೆ ಒಡಂಬಟ್ಟೆನು. ಇಷ್ಟುಮಾ ತ್ರವೇ ಅಲ್ಲ. ಭೀಮನ ಭುಜಬಲವು ಹತ್ತುಸಾವಿರ ಆನೆಗಳ ಬಲಕ್ಕೆ ಸಮನಾಗಿರು ವುದು. ಈ ಭೀಮನಿಗೆ ಸಮಾನನಾದ ಪರಾಕ್ರಮಶಾಲಿಯು ಈ ವರೆಗೂ ಲೋಕ ದಲ್ಲಿ ಹುಟ್ಟಿದವರೊಳಗೆ ಒಬ್ಬನೂ ಇಲ್ಲ. ಮತ್ತು ಒಂದು ವೇಳೆ ಇಂದ್ರನು ಯುದ್ಧ ದಲ್ಲಿ ಎದುರಿಸಿದರೂ ಅವನನ್ನು ಈ ಭೀಮಸೇನನು ಜಯಿಸುವನು ಇದಲ್ಲದೆ ನಾನು ಈತನನ್ನು ಬಾಲ್ಯದಲ್ಲಿ ಶತಶೃಂಗಪರ್ವತದ ಮೇಲೆ ಎತ್ತಿಕೊಂಡು ಹೋಗುತ್ತಿರುವಾಗ ನನ್ನ ಕಂಕುಳಿಂದ ಜಾರಿ ಕೆಳಗೆ ಬಿದ್ದ ಈತನ ಶರೀರಕಾಠಿಣ್ಯದಿಂದ ಆ ಪರ್ವತದ ಮಹಾ ಶಿಲೆಗಳು ಪುಡಿಪುಡಿಯಾದವು. ಇದೆಲ್ಲವನ್ನೂ ನನ್ನ ಮನಸ್ಸಿನಲ್ಲಿ ಮರೆಯದೆ ಇದ್ದುದರಿಂದ ಆ ಬ್ರಾಹ್ಮಣನಿಗೆ ಹಿತವನ್ನು ಎಣಿಸಿ ಭೀಮನಿಗೆ ಈ ಕಾರ್ಯವನ್ನು ಕಟ್ಟು ಮಾಡಿದೆನೇ ಹೊರತು ಅಜ್ಞಾನದಿಂದಲೂ ಅರ್ಥಲೋಭದಿಂದಲೂ ಬುದ್ಧಿಭ್ರಮೆ ಯಿಂದಲೂ ಈ ಕೆಲಸಕ್ಕೆ ಪ್ರವರ್ತಿಸಿದವಳಲ್ಲ. ಆದರಿಂದ ಇದು ಬುದ್ಧಿಪೂರ್ವಕವಾಗಿ ಮಾಡಿದಂಥ ಕಾರ್ಯವೆಂದು ನೀನು ತಿಳಿ. ನಾವು ಈ ಕಾರ್ಯವನ್ನು ನಿರ್ವಹಿಸಿದರೆ ಧರ್ಮವೂ ಕೃತಜ್ಞತೆಯೂ ಬರುತ್ತವೆ. ಬ್ರಾಹ್ಮಣನಿಗೆ ಸಹಾಯವನ್ನು ಮಾಡಿದಂಥ ಕ್ಷತ್ರಿಯನು ಶಾಶ್ವತವಾದ ಪುಣ್ಯಲೋಕವನ್ನು ಪಡೆಯುವನೆಂದು ಕೇಳಿ ಉಂಟು. ಕ್ಷತ್ರಿಯನಿಗೆ ಪ್ರಾಣದಾನವನ್ನು ಮಾಡಿದವನು ಇಹಪರಗಳಲ್ಲಿ ಕೀರ್ತಿಸುಕೃತಗಳನ್ನು ಪಡೆಯುವನು. ವೈಶ್ಯನಿಗೆ ಸಹಾಯವನ್ನು ಮಾಡಿದವನು ಲೋಕರಂಜಕನಾಗುವನು. ಶರಣಾಗತನಾದ ಶೂದ್ರನ ಭಯವನ್ನು ಪರಿಹರಿಸಿದವನು ಆ ಸುಕೃತ ವಿಶೇಷದಿಂದ ಈ ಲೋಕದಲ್ಲಿ ಸಕಲ ರಾಜಪೂಜಿತವಾದ ಕುಲದಲ್ಲಿ ಹುಟ್ಟುವನು ಎಂದು ಕೃಷ್ಣ ದ್ವೈಪಾಯನನು ಹೇಳಿರುವುದರಿಂದ ಈ ಕಾರ್ಯವನ್ನು ಭೀಮಸೇನನಿಗೆ ಕಟ್ಟುಮಾಡಿ ದೆನು ಎನಲು ; ಆ ಅಜಾತಶತ್ರುವು——ಎಲೈ, ತಾಯೇ ! ನೀನು ಈಗ ಬುದ್ಧಿಪೂರ್ವಕ ವಾಗಿ ಆಚರಿಸಿದಂಥ ಕಾರ್ಯವು ಉಚಿತವೇ ಸರಿ ; ಆಪ್ತನಾದ ಬ್ರಾಹ್ಮಣನಲ್ಲಿ ಕೃಪಾ ವಿಶೇಷದಿಂದ ನೀನು ಭೀಮನನ್ನು ಕುಳುಹಿಸಿದುದರಿಂದ ಆತನು ಮನುಷ್ಯಭಕ್ಷಕನಾದ ಆ ರಾಕ್ಷಸನನ್ನು ಈ ಕ್ಷಣದಲ್ಲಿಯೇ ಜಯಿಸಿ ಪಟ್ಟಣದಲ್ಲಿರುವವರಿಗೆಲ್ಲಾ ಅಭಯದಾನ ವನ್ನು ಮಾಡುವುದು ಯಥಾರ್ಥವು. ಹೇಗಾದರೂ ಇಲ್ಲಿರುವಂಥ ನಮ್ಮನ್ನು ಯಾರೂ ಅರಿಯದೆ ಇರುವ ಹಾಗೆ ಈ ಬ್ರಾಹ್ಮಣಸೊಡನೆ ಪ್ರಯತ್ನದಿಂದ ಹೇಳು ಎನಲು ; ಕುಂತೀದೇವಿಯು ತಿರಿಗಿ ಬ್ರಾಹ್ಮಣನ ಮನೆಗೆ ಹೋಗಿ ಅವರೆಲ್ಲರಿಗೂ ಉಚಿತಪ್ರಕಾರ ದಿಂದ ಸಮಾಧಾನವನ್ನು ಹೇಳಿದಳು.

ಆ ಮಾರನೆಯ ದಿವಸ ಪ್ರಾತಃಕಾಲದಲ್ಲಿ ಮಹಾ ಬಲಶಾಲಿಯಾದ ಭೀಮಸೇ ನನು ಆ ಬ್ರಾಹ್ಮಣನ ಸಮೀಪಕ್ಕೆ ಹೋಗಿ——ಎಲೈ ಬ್ರಾಹ್ಮಣೋತ್ತಮನೇ ! ನಿನ್ನನ್ನು

ಸಕುಟಂಬವಾಗಿ ಈ ಆಪತ್ತಿನ ದೆಸೆಯಿಂದ ರಕ್ಷಿಸುತ್ತೇನೆ. ಭಯಪಡಬೇಡ. ರಾಕ್ಷಸನ ಸಮೀಪಕ್ಕೆ ನಾನೇ ಹೋಗುತ್ತೇನೆ. ನಿನ್ನ ಮನೆಯಲ್ಲಿ ನನಗೆ ಬೇಕಾದ ಅನ್ನವನ್ನು ಮೊದಲೇ ಇಕ್ಕಿದರೆ ನಾನು ಊಟವನ್ನು ಮಾಡಿದಮೇಲೆ ರಾಕ್ಷಸನಿಗೆ ಬಲಿಯಾಗುತ್ತೇನೆ ಎನಲು ; ಆ ಬ್ರಾಹ್ಮಣನು ಈ ವೃತ್ತಾಂತವನ್ನು ತನ್ನ ಬಂಧುಗಳಿಗೆಲ್ಲಾ ಹೇಳಿ ಭೀಮಸೇನನಿಗೆ ಮೃಷ್ಟಾನ್ನವನ್ನಿಕ್ಕಲು ; ಮತ್ತು ಪೌರಜನರು ಮಾಂಸ ತುಪ್ಪ ಇವುಗಳಿಂದ ಕೂಡಿರುವ ನಾನಾ ಪ್ರಕಾರವಾದ ಸೂಪಗಳಿಂದಲೂ ಅಪೂಪಗಳಿಂದಲೂ ಉಪ್ಪಿನಕಾಯಿ ಮೊದಲಾದ ವಸ್ತುಗಳಿಂದಲೂ ಕೂಡಿರುವ ಅನ್ನವನ್ನೂ ಚಿಗಳಿ ತಂಬಿಟ್ಟುಗಳನ್ನೂ ಕಡುಬುಗಳನ್ನೂ ಕಲಸೋಗರಗಳನ್ನೂ ತಂದು ಕೊಡಲು ; ಭೀಮನು ಅವೆಲ್ಲವನ್ನೂ ಭಕ್ಷಿಸಿ ಗುಡಾಣಗಳಲ್ಲಿ ತುಂಬಿದ್ದ ತುಪ್ಪ ಹಾಲು ಮೊಸರುಗಳನ್ನು ಯಥೇಚ್ಛವಾಗಿ ಕುಡಿದು ತೃಪ್ತಿಯನ್ನು ಹೊಂದಿದನು ಆ ಒಳಿಕ ಪುರಜನರು ಯಥಾಪ್ರಕಾರವಾಗಿ ಆ ಮಹಾ ರಾಕ್ಷಸನಿಗೆ ಅಪರಿಮಿತಗಳಾದ ಭಕ್ಷ್ಯಭೋಜ್ಯಗಳನ್ನು ಜೊತೆಗೊಳಿಸಿ ಅದೆಲ್ಲವನ್ನೂ ಒಂದು ಬಂಡಿಯಲ್ಲಿರಿಸಿ ಅದಕ್ಕೆ ಎರಡೆತ್ತುಗಳನ್ನು ಕಟ್ಟಿ ನಾನಾ ಪ್ರಕಾರವಾದ ವಾದ್ಯಧ್ವನಿಗಳಿಂದ ಆ ಬಂಡಿಯನ್ನು ಸುತ್ತಿಕೊಂಡು ಹೋಗುತ್ತಿದ್ದರು. ಆಗ ಬಂಡಿಯನ್ನು ಏರಿ ಭೋಜನ ಪ್ರಿಯನಾಗಿಯೂ ರೂಪಸಂಪನ್ನನಾಗಿಯೂ ಯೌವನಸ್ಥನಾಗಿಯೂ ಇರುವ ಈತನು ನಿರ್ಮಿತ್ತವಾಗಿ ಆ ರಾಕ್ಷಸನಿಗೆ ಏತಕ್ಕೆ ಪ್ರಾಣಗಳನ್ನು ಕೊಡುವುದಕ್ಕಿದ್ದಾನೆಯೋ ಎಂದು ಹೇಳಿಕೊಳ್ಳುವಂಥ ಪುರಜನರ ಮಾತುಗಳನ್ನು ಕೇಳುತ್ತಾ ಭೀಮನು ಕಪ್ಪಾಗಿರುವ ವೃಷಭಗಳನ್ನು ಹೊಡೆಯುತ್ತಾ ದಕ್ಷಿಣಾಭಿಮುಖವಾಗಿ ಬಂಡಿಯನ್ನು ನಡಿಸಲು ; ಆ ಪೌರಜನರು ಕಟ್ಟಳೆಯ ಪ್ರಕಾರ ಸಂಕೇತಸ್ಥಾನಪರ್ಯಂತವೂ ಹೋಗಿ ಅಲ್ಲಿಯೇ ನಿಂತು ನೋಡುತ್ತಿದ್ದರು ಆ ವಾಯುಪುತ್ರನು ಅಲ್ಲಿರುವ ಒಂದು ದೊಡ್ಡ ಮರದ ಸಮೀಪಕ್ಕೆ ಹೋಗಿ ಎಲುಬುಗಳೂ ಕೂದಲುಗಳೂ ಮೆದಳುಗಳೂ ಕೊಬ್ಬುಗಳೂ ಕಾಲುಗಳೂ ಕೈಗಳೂ ಭುಜಗಳೂ ತೊಡೆಗಳೂ ತುಮುರುತುಮುರುಗಳಾಗಿ ಬಿದ್ದು ಕೆಲವು ಬಣಗಿಯೂ ಕೆಲವು ಹಸಿಯಾಗಿಯೂ ಕಾಣಿಸುತ್ತಿರಲು ; ಎಲ್ಲಿ ನೋಡಿದರೂ ಹದ್ದು ರಣಹದ್ದು ಕಾಗೆ ನರಿ ನಾಯಿ ಇವುಗಳು ವಿಕಾರಧ್ವನಿಗಳಿಂದ ಕೂಗುತ್ತಾ ಓಡಾಡುತ್ತಿರಲು ; ದುರ್ಗಂಧಯುಕ್ತವಾಗಿಯೂ ನೋಡುವುದಕ್ಕೆ ಅಸಹ್ಯವಾಗಿಯೂ ಶ್ಮಶಾನಕ್ಕಿಂತಲೂ ಭಯಂಕರವಾಗಿಯೂ ಇರುವ ಆ ಮಹಾ ವೃಕ್ಷದ ಬುಡವನ್ನು ಸೇರಿ ತನ್ನ ಮನಸ್ಸಿನಲ್ಲಿ—ಅಪರಿಮಿತಗಳಾದ ಭಕ್ಷ್ಯಭೋಜ್ಯ ರಾಶಿಗಳಿಂದಲೂ ಅನ್ನರಾಶಿಗಳಿಂದಲೂ ತುಂಬಿದ ಈ ಬಂಡಿಯನ್ನು ರಾಕ್ಷಸನು ಬಂದು ನೋಡುವುದಕ್ಕೆ ಮೊದಲೇ ಇದೆಲ್ಲವನ್ನೂ ನಾನೇ ಭಕ್ಷಿಸಬೇಕು ; ಬಲ ಗರ್ವಿತನಾದ ಮತ್ತು ದುರಾತ್ಮನಾದ ಆ ರಾಕ್ಷಸನು ವಿಜೃಂಭಿಸಿ ಯುದ್ಧವನ್ನು ಮಾಡುವಾಗ ಅವನು ನನ್ನನ್ನು ತಳ್ಳಿದರೆ ಬಲದಿಂದ ಕದಲದೆ ನಿಂತಿರಬೇಕು ; ಗಟ್ಟಿಯಾಗಿ ನಿಂತರೆ ಅವನನ್ನು ಕೊಲ್ಲಬಹುದು ; ಈ ಅನ್ನವನ್ನು ಈಗಲೇ ನಾನು ಭಕ್ಷಿಸದೆ ಹೋದರೆ ಇನ್ನು ಮೇಲೆ ನನಗೆ ಇದು ದಕ್ಕುವುದಿಲ್ಲ ಎಂದು ನಿಶ್ಚಯಿಸಿ ನಾಲ್ಕು ದಿಕ್ಕುಗಳನ್ನೂ ನೋಡಿ ಬಂಡಿಯಲ್ಲಿ

ಚಂದವಾಗಿ ಕೂತುಕೊಂಡು ಶಾಕಸೂಪಗಳಿಂದ ಕೂಡಿರುವ ಅನ್ನವನ್ನು ಕ್ರಮವಾಗಿ ಭಕ್ಷಿಸುತ್ತಿರಲು ; ಸಂಕೇತಸ್ಥಾನದಲ್ಲಿ ನಿಂತಿದ್ದ ಪೌರಜನಗಳು ಭೀಷಣಾಕಾರದಿಂದ ಅನ್ನವನ್ನು ಭಕ್ಷಿಸುತ್ತಿರುವ ಭೀಮನನ್ನು ಉದ್ದವಾದ ದೊಡ್ಡ ಮರಗಳನ್ನು ಏರಿ ನೋಡಿ—ಬಕನು ರಾಕ್ಷಸಾಕಾರದಿಂದ ಬಂದು ಅನ್ನವನ್ನು ಭಕ್ಷಿಸದೆ ಬ್ರಾಹ್ಮಣ ರೂಪದಿಂದ ಬಂದು ಭಕ್ಷಿಸುತ್ತಿದ್ದಾನೆ ಎಂದು ನುಡಿಯುತ್ತಿದ್ದರು. ಅಮಿತಪರಾಕ್ರಮಶಾಲಿಯಾಗಿಯೂ ಮಹಾ ಬಲಧುರೀಣನಾಗಿಯೂ ಇರುವ ಭೀಮನು ಬಂಡಿಯನ್ನು ಮುಂದಗಮನದಿಂದ ನಡೆಸುತ್ತಾ ಅನ್ನವನ್ನು ಭಕ್ಷಿಸುತ್ತಾ ಬಕನಿದ್ದ ಠಾವಿಗೆ ಹೋಗಿ ಅವನನ್ನು ಒಂದು ತೃಣಕ್ಕೆ ಸರಿಯಾಗಿ ಎಣಿಸಿ—ಎಲೈ, ದುರಾತ್ಮನಾದ ರಾಕ್ಷಸನೇ ! ಶೀಘ್ರವಾಗಿ ಬಾ ಎಂದು ಗಟ್ಟಿಯಾಗಿ ಕೂಗಿ ಕರೆಯಲು ; ಆ ರಾಕ್ಷಸನು ಆಗ್ರಹವ್ಯಗ್ರನಾಗಿ ಭೀಮನ ಸಮೀಪಕ್ಕೆ ಬಂದು ತನ್ನ ಪಾದ ಘಟ್ಟನದಿಂದ ಭೂಮಿಯು ಎರಡು ಹೋಳಾಗುವ ಹಾಗೆ ತುಳಿಯುತ್ತಾ ಅವನಿಗೆ ಎದುರಾಗಿ ನಿಂತು ತನಗೋಸ್ಕರ ತಂದ ಅನ್ನವನ್ನು ನಿರ್ಭಯವಾಗಿ ಭಕ್ಷಿಸುತ್ತಿರುವ ಈ ಮನುಷ್ಯಾಧಮನನ್ನು ಮೊದಲು ಯಮನ ಮನೆಗೆ ಕಳುಹಿಸಿ ಆ ಮೇಲೆ ಈ ಅನ್ನವನ್ನು ಭಕ್ಷಿಸುತ್ತೇನೆ ಎಂದು ಹುಬ್ಬುಗಳನ್ನು ಗಂಟುಹಾಕಿಕೊಂಡು ಹಲ್ಲುಮುಡಿ ಕಚ್ಚುತ್ತಾ ಕರಿಯ ಆಲಿಗಳನ್ನು ಗರಗರನೆ ತಿರುಗಿಸುತ್ತಾ ನಿಂತಿದ್ದನು. ಭೀಮನು ಅವನ ವಾಕ್ಯವನ್ನು ಕಿವಿಗೆ ಹಾಕಿಕೊಳ್ಳದೆ ಯಾವ ದಿಕ್ಕನ್ನೂ ನೋಡದೆ ಅನ್ನವನ್ನು ಭಕ್ಷಿಸುತ್ತಿದ್ದನು. ಪುರುಷಭಕ್ಷಕನಾದ ಆ ಬಕನು ಭೀಮನನ್ನು ಕೊಲ್ಲಬೇಕೆಂದೆಣಿಸಿ ಹಸ್ತಗಳನ್ನು ಉನ್ನತವಾಗಿ ಎತ್ತಿಕೊಂಡು ಅಟ್ಟಹಾಸವನ್ನು ಮಾಡುತ್ತಾ ಅವನ ಮೇಲೆ ಕಾಣಿಸಿಕೊಳ್ಳಲು ; ಶತ್ರುಜನ ಭೀಕರನಾದ ಭೀಮಸೇನನು ಯಥಾಪ್ರಕಾರ ಭುಂಜಿಸುತ್ತಿದ್ದನು. ಅದನ್ನು ನೋಡಿ ಆ ಬಕನು ಕೋಪಾಟೋಪದಿಂದ ಬಂದು ಭೀಮಸೇನನ ಬೆನ್ನಿನ ಮೇಲೆ ಎರಡು ಕೈಗಳಿಂದ ಅಪ್ಪಳಿಸಲು ; ಆ ರಾಕ್ಷಸನ ಅಂಗೈ ಪೆಟ್ಟುಗಳು ಭೀಮಸೇನನ ಹೊಟ್ಟೆಯಲ್ಲಿ ಅಲ್ಲಲ್ಲಿರುವ ಕವಳಗಳನ್ನು ಒಂದೇ ರಾವಿನಲ್ಲಿ ಒತ್ತಾಗಿ ಸೇರಿಸಿ ಮತ್ತೂ ಭೋಜನ ಮಾಡುವುದಕ್ಕೆ ಸೌಕರ್ಯವನ್ನುಂಟುಮಾಡಿದುವು. ಆಗಲಾದರೂ ಭೀಮನು ಆತನನ್ನು ಸಡ್ಡೆ ಮಾಡದೆ ಯಥಾಪ್ರಕಾರವಾಗಿ ಅನ್ನವನ್ನೇ ಭಕ್ಷಿಸುತ್ತಿದ್ದನು. ಆ ರಾಕ್ಷಸನು ಸಮೀಪದಲ್ಲಿರುವ ಒಂದು ದೊಡ್ಡ ಮರವನ್ನು ಕಿತ್ತು ಹಿಡಿದುಕೊಂಡು ಭೀಮನನ್ನು ಕೊಲ್ಲಬೇಕೆಂದು ಯತ್ನನನ್ನು ಮಾಡಲು ; ಆ ವಾಯುಪುತ್ರನು ತನ್ನ ಎಡದ ಕೈಯ್ಯಿಂದ ಅವನನ್ನು ಮರ ಸಹಿತವಾಗಿ ಹಿಡಿದುಕೊಂಡು ಎಲ್ಲಿಗೂ ಬಿಡದೆ ಯಥಾಪ್ರಕಾರ ಮೆಲ್ಲಮೆಲ್ಲಗೆ ಅನ್ನವನ್ನು ಭಕ್ಷಿಸಿ ಮುಗುಳುನಗೆಯಿಂದ ಆ ರಾಕ್ಷಸನನ್ನು ಆಜೆಗೆ ಬಿಸಾಟು ನೂರು ಗುಡಾಣಗಳಲ್ಲಿ ಇರುವ ತುಪ್ಪವನ್ನೂ ನೂರು ಗುಡಾಣಗಳಲ್ಲಿರುವ ಮೊಸರನ್ನೂ ಕುಡಿದು ಕೈಗಳನ್ನು ತೊಳಕೊಂಡು ಆಚಮನವನ್ನು ಮಾಡಿ ಪರ್ವತದೋಪಾದಿಯಲ್ಲಿ ಸ್ಥಿರವಾದ ಧೈರ್ಯವನ್ನು ಬಿಡದೆ ಮುಹೂರ್ತ ಮಾತ್ರ ವೀರಾಸನದಲ್ಲಿ ಕುಳಿತುಕೊಂಡಿದ್ದನು. ಆ ಮೇಲೆ ಕೈಯ್ಯಲ್ಲಿ ಹಿಡಿದಿದ್ದ ಮಹಾ ವೃಕ್ಷವನ್ನು ಗರಗರನೆ ತಿರುಗಿಸುತ್ತಾ ಶೀಘ್ರವಾಗಿ ಮೇಲೆ

ಬೀಳುವುದಕ್ಕೆ ಬರುವ ಆ ರಾಕ್ಷಸನನ್ನು ನೋಡಿ ಬೇಗ ಎದ್ದು ಸಿಂಹನಾದವನ್ನು ಮಾಡಿ ಭುಜಗಳನ್ನು ತಟ್ಟಿಕೊಂಡು ಅವನನ್ನು ಕುರಿತು—ಎಲೈ, ದುರಾತ್ಮನೇ! ಬಹುಕಾಲದಿಂದ ಮನುಷ್ಯಮಾಂಸಗಳನ್ನು ತಿಂದು ಖಂಡಗಳನ್ನು ಬೆಳೆಸಿಕೊಂಡು ಮದಿಸಿ ಇದ್ದೀ. ಇನ್ನು ಮೇಲೆ ನನ್ನ ಭುಜಬಲದಿಂದ ಪ್ರಾಣಗಳೊಡನೆ ನೀನು ಹಿಂದಿರುಗಿ ಹೋಗಲಾರೆ. ಏಕಚಕ್ರನಗರದಲ್ಲಿರುವ ಸಮಸ್ತ ಜನಗಳೂ ತಮಗೆ ಕಂಟಕನಾದ ನಿನ್ನನ್ನು ನಾನು ಕೊಂದುಹಾಕುವುದರಿಂದ ಈ ದಿವಸ ಮೊದಲ್ಗೊಂಡು ಭಯವನ್ನು ಬಿಟ್ಟು ಸುಖವಾಗಿ ನಿದ್ದೆ ಮಾಡಲಿ. ನನ್ನಿಂದ ಹತವಾದ ನಿನ್ನ ಶರೀರವನ್ನು ಹದ್ದು ರಣಹದ್ದು ನರಿ ನಾಯಿ ಕಾಗೆ ಮೊದಲಾದ ಮೃಗಪಕ್ಷಿಗಳು ಎಳದೆಳದು ಭಕ್ಷಿಸಲಿ ಎಂದು ನುಡಿದು ಕೋಪಾಟೋಪದಿಂದ ಬಂದು ಬಕನ ಮೇಲೆ ಬಿದ್ದನು. ಆ ರಾಕ್ಷಸನು ಮಹಾ ಬಲಪರಾಕ್ರಮ ಧುರೀಣನಾಗಿ ತನ್ನ ಪಾದಘಟ್ಟನದಿಂದ ಭೂಮಿಯನ್ನು ನಡುಗಿಸುತ್ತಾ ವಿಕಾರವಾದ ಶರೀರದಿಂದ ವಿಜೃಂಭಿಸಿ ವಾಯುಪುತ್ರನನ್ನು ಪಚಾರಿಸಿ ಹುಬ್ಬುಗಳನ್ನು ಗಂಟು ಹಾಕಿಕೊಂಡು ಔಡುಗಳನ್ನು ಕಚ್ಚುತ್ತಾ ಅವನ ಮೇಲೆ ಆ ದೊಡ್ಡ ಮರವನ್ನು ಹಾಕಲು; ಆ ಭೀಮನು ನಸುನಗುತ್ತಾ ಎಡದ ಕೈಯಿಂದ ಆ ವೃಕ್ಷವನ್ನು ಹಿಡಿದುಕೊಂಡು ಅದನ್ನು ಮುರಿದುಹಾಕಲು; ಆ ರಾಕ್ಷಸನು ಇನ್ನೂ ಅನೇಕ ವೃಕ್ಷಗಳನ್ನು ಪ್ರಯೋಗಿಸಲು; ಹಾಗೆಯೇ ಅವರಿಬ್ಬರಿಗೂ ಮರಗಳ ಯುದ್ಧವೇ ಪ್ರವರ್ತಿಸುತ್ತಿತ್ತು.

ಆ ಬಳಿಕ ಬಕನು ತನ್ನ ಬಿರುದನ್ನು ಒಕ್ಕಣಿಸಿ ಮಹಾ ಬಲಶಾಲಿಯಾದ ಮಾರುತಪುತ್ರನನ್ನು ಎರಡು ಭುಜಗಳಿಂದ ಬಿಗಿಯಲು; ಮಹಾಭುಜನಾದ ಆ ಕುಂತೀನಂದನನು ಆ ಪಟ್ಟನ್ನು ಬಿಡಿಸಿಕೊಂಡು ದಿಟ್ಟತನದಿಂದ ಮೆರೆದು ಈಚೆಗೆ ಆಚೆಗೆ ಅಲಲ್ಲಾಡದ ಹಾಗೆ ಅವನನ್ನು ಗಟ್ಟಿಯಾಗಿ ಹಿಡಿದು ಮಧ್ಯಮಧ್ಯದಲ್ಲಿ ಮಿಕ್ಕಿರುವ ಅನ್ನವನ್ನು ಭಕ್ಷಿಸುತ್ತಾ ಬಾರಿಬಾರಿಗೂ ತಿವಿಯುತ್ತಾ ಎಳೆಯುತ್ತಾ ಇರಲು; ಆ ರಾಕ್ಷಸನು ಭೀಮನ ಬಾಹುಗಳ ಹಿಡಿತಕ್ಕೆ ಸಿಕ್ಕಿ ಎಳೆಯಲ್ಪಟ್ಟವನಾಗಿ ಶ್ರಮದಿಂದ ಕಂಗೆಟ್ಟಿದ್ದರೂ ಬಾರಿಬಾರಿಗೂ ಎಳೆದು ಭೀಮನನ್ನೂ ಕಂಗೆಡಿಸಿದನು. ಅವರಿಬ್ಬರ ಪಾದಘಟ್ಟನದಿಂದ ಭೂಮಿಯು ಗಡಗಡನೆ ನಡುಗಿತು. ಈ ಪ್ರಕಾರ ಇಬ್ಬರೂ ವಿಚಿತ್ರಗಮನಗಳಿಂದ ಬಾಹುಯುದ್ಧವನ್ನು ಮಾಡುತ್ತಿರಲು; ಅವರ ಸಮೀಪದಲ್ಲಿದ್ದು ಪೆಟ್ಟಿಗೆ ಸಿಕ್ಕಿದ ಮಹೊನ್ನತಗಳಾದ ವೃಕ್ಷಗಳು ತುಮುರುತುಮುರಾಗಿ ಭೂಮಿಯಲ್ಲಿ ಬಿದ್ದುವು. ಆ ಸಮಯದಲ್ಲಿ ಪಾಂಡುಕುಮಾರಕನು ಆ ರಾಕ್ಷಸನನ್ನು ತನ್ನ ಬಾಹುಬಲದಿಂದ ಭೂಮಿಯಲ್ಲಿ ಕೆಡಹಿ—ಎಲೈ, ರಾಕ್ಷಸನೇ! ಸ್ವಲ್ಪ ವಿಶ್ರಮಿಸಿಕೊಂಡು ಮೆಲ್ಲಗೆ ಏಳು ಎಂದು ಬೆನ್ನನ್ನು ತಟ್ಟಿ ಬಿಟ್ಟುಬಿಡಲು; ಅವನು ಪುಟಜಂಡಿನೋಪಾದಿಯಲ್ಲಿ ನೆಗೆದು ನಿಂತುಕೊಂಡು ಭೀಮಾಕಾರದಿಂದ ಬೆದರಿಸಿದನು. ಭೀಮಸೇನನು ಅಟ್ಟಹಾಸವನ್ನು ಮಾಡಿ ಅವನನ್ನು ಗಟ್ಟಿಯಾಗಿ ಹಿಡಿದು ಅಪ್ಪಿಕೊಂಡು ಅವನ ರಸನಾಳೆಯನ್ನು ಅಮುಕಿದುದರಿಂದ ಆ ರಾಕ್ಷಸನು ಮೈಮರೆತು ಸ್ವಲ್ಪ ಹೊತ್ತು ಸುಮ್ಮನಿದ್ದು ಆ ಮೇಲೆ ಕೋಪೋದ್ದೀಪಿತನಾಗಿ ಭೀಷಣಾಕಾರವನ್ನು ಧರಿಸಿ ಭೀಮನನ್ನು

ಬೆದರಿಸಲು ; ಆ ಭೀಮನು ನಸುನಗೆಯಿಂದ ಅವನ ಕಂಠವನ್ನು ತನ್ನ ಭುಜದಿಂದ ಬಿಗಿಯಾಗಿ ಹಿಡಿದು ಮೊಗಮಡಿಯಾಗಿ ತಳ್ಳಿ ಮೊಣಕಾಲಿನಿಂದ ಬೆನ್ನನ್ನು ತಿವಿದು ನೋಯಿಸಿ ಆ ಮೇಲೆ ಅವನ ಭುಜಗಳೆರಡನ್ನೂ ಹಿಡಿದುಕೊಂಡು ಮೇಲಕ್ಕೆ ಎತ್ತಿ ಭೂಮಿಯಲ್ಲಿ ಹಾಕಿ ತನ್ನ ಎಡಗಾಲಿನಿಂದ ಅವನ ಎದೆಯನ್ನು ಒದೆದನು. ಆ ರಾಕ್ಷಸನು ಅತಿ ಕೋಪಿಷ್ಠನಾಗಿ ಬಾಯಿಯನ್ನು ತೆರೆದು ಉರಿಯುತ್ತಿರುವ ನಾಲಿಗೆಯುಳ್ಳವನಾಗಿ ತನ್ನ ಬಲಗೈಯ್ಯಿಂದ ಭೀಮನ ನೆತ್ತಿಯನ್ನು ಗುದ್ದಿ ಆತನ ಎಡದ ಪಾರ್ಶ್ವವನ್ನು ಮತ್ತೊಂದು ಮುಷ್ಟಿಯಿಂದ ತಿವಿದು ಮೊಣಕಾಲಿನಿಂದ ಎದೆಯನ್ನು ತಿವಿದು ನೋಯಿಸಲು ; ಆ ವಾಯುಪುತ್ರನು ಕೋಪಿಸಿಕೊಂಡು ಆ ರಾಕ್ಷಸನನ್ನು ಹಿಡಿದುಕೊಂಡನು. ಹೀಗೆ ಮಹಾ ಬಲಶಾಲಿಗಳಾದ ಭೀಮಬಕರು ಮದದಾನೆಗಳೋಪಾದಿಯಲ್ಲಿ ಒಬ್ಬರನೊಬ್ಬರು ಹಿಡಿಯುತ್ತಾ ತಿವಿಯುತ್ತಾ ತೊಡರಿಕೊಳ್ಳುತ್ತಾ ಭುಜಗಳನ್ನು ತಟ್ಟಿಕೊಂಡು ಸಿಂಹನಾದವನ್ನು ಮಾಡುತ್ತಿದ್ದರು. ಆ ಸಮಯದಲ್ಲಿ ಅವರ ಬಾಹುಯುದ್ಧ ಸಂರಂಭದಿಂದ ಆ ಪಟ್ಟಣದಲ್ಲಿರುವ ಜನರೆಲ್ಲರೂ ಭಯಪಡುತ್ತಿದ್ದರು. ಹಾಗೆಯೇ ಅವರಿಬ್ಬರೂ ಪಾದಘಾತಗಳಿಂದ ಭೂಮಿಯನ್ನು ನಡುಗಿಸುತ್ತಾ ಮರಗಳನ್ನೂ ಬಳ್ಳಿಗಳನ್ನೂ ಹೊದೆಗಳನ್ನೂ ಚೂರ್ಣವಾಗುವ ಹಾಗೆ ಮಾಡುತ್ತಾ ಪರಸ್ಪರ ಜಯಾಭಿಲಾಷೆಯಿಂದ ಹೋರುತ್ತಿರಲು ; ಮೂರು ಗಾವುದ ವಿಸ್ತಾರವುಳ್ಳ ಆ ವನಪ್ರದೇಶವು ವೃಕ್ಷ ಗುಲ್ಮ ಲತಾಪಾಷಾಣರಹಿತವಾಗಿ ಉಮೆಯ ಬೆನ್ನಿನೋಪಾದಿಯಲ್ಲಿ ಕಾಣಿಸಿತು. ಆ ಬಳಿಕ ಭೀಮನು ಅವನ ಒಳಹೊಕ್ಕು ತನ್ನ ಭುಜಗಳಿಂದ ಅವನನ್ನು ಬಿಗಿದು ಹಿಡಿದು ನಡುವನ್ನೂ ತೊಡೆಗಳ ಸಂದನ್ನೂ ಬಿಗಿಯಾಗಿ ತಿವಿದು ನೋಯಿಸಲು, ಆ ರಾಕ್ಷಸನು ಬಹಳವಾಗಿ ಕಂಗೆಟ್ಟನು. ಅದನ್ನು ತಿಳಿದು ಬೀಮಸೇನನು ಅವನನ್ನು ಭೂಮಿಯ ಮೇಲೆ ಎತ್ತಿಹಾಕಿ ತನ್ನ ಕಾಲುಗಳಿಂದ ಒದೆದು ತಿಕ್ಕಿ ನೋಯಿಸಿ ಅವನ ಬೆನ್ನುಮೂಳೆ ಮುರಿಯುವ ಹಾಗೆ ಮೊಣಕಾಲುಗಳಿಂದ ತಿವಿದು ಬಲಗೈಯಿಂದ ಕತ್ತನ್ನು ಎತ್ತಿ ಹಿಡಿದು ಎಡಗೈಯಿಂದ ನಡುಕಟ್ಟನ್ನು ಹಿಡಿದು ವಿಕಾರ ಧ್ವನಿಯನ್ನು ಮಾಡುತ್ತಿರುವಂಥ ಆ ರಾಕ್ಷಸನನ್ನು ನೆಲಕ್ಕೆ ಹಾಕಿ ಕುಕ್ಕಿ ಮೊಣಕಾಲಿನಿಂದ ತಿವಿಯಲು ; ಆ ಬಕಾಸುರನು ತನ್ನ ಬಾಯಿಂದ ರಕ್ತವನ್ನು ಕಾರುತ್ತಾ ಪ್ರಾಣವನ್ನು ಬಿಟ್ಟನು. ಅವನು ಸಾಯುವಾಗ ಉಂಟಾದ ವಿಕಾರಧ್ವನಿಯನ್ನು ಕೇಳಿ ಸಕಲ ಜನರೂ ಭಯಪಟ್ಟರು.

ಬಕನು ಸತ್ತನೆಂದು ನೋಡಿ ವನಗಳಲ್ಲಿಯೂ ಉದ್ಯಾನವನಗಳಲ್ಲಿಯೂ ಜಗತಿಗಳಲ್ಲಿಯೂ ಕ್ಷುದ್ರ ದೇವಾಲಯಗಳಲ್ಲಿಯೂ ತಿರುಗುತ್ತಿದ್ದ ಅವನ ಪರಿಚಾರಕರು ಬಂದು ಪರಾಕ್ರಮಶಾಲಿಯಾದ ಭೀಮನಿಗೆ ಶರಣಾಗತರಾಗಲು ; ಆ ಭೀಮಸೇನನು ಅವರನ್ನು ನೋಡಿ ಅಭಯವನ್ನು ಕೊಟ್ಟು—ಈ ಹೊತ್ತು ಮೊದಲುಗೊಂಡು ನೀವು ಮನುಷ್ಯರನ್ನು ಬಾಧಿಸಿದರೆ ಬಕನು ಹೊಂದಿದ ದುರ್ಗತಿಯನ್ನು ನೀವೂ ಹೊಂದಬೇಕಾಗುವುದು. ಆದಕಾರಣ ಎಚ್ಚರಿಕೆಯಿಂದಿರಬೇಕು ಎನ್ನಲು ; ಅವರು ಮಹಾ ಪ್ರಸಾದವೆಂದು ಒಡಂಬಟ್ಟು ಮೊದಲಿದ್ದ ಠಾವುಗಳನ್ನು ಬಿಟ್ಟು ಹೋಗಿ

ತಾಳೆಯ ಮರಗಳಲ್ಲಿಯೂ ಬಸರಿಯ ಮರಗಳಲ್ಲಿಯೂ ಬೂರುಗದ ಮರಗಳಲ್ಲಿಯೂ ಎಕ್ಕದ ಗಿಡಗಳಲ್ಲಿಯೂ ಸಕುಟುಂಬರಾಗಿ ಇರುತ್ತಿದ್ದರು. ಮತ್ತು ಬಕನ ತಮ್ಮನು ಭೀಮಸೇನನಿಗೆ ಶರಣಾಗತನಾಗಿ ಆತನ ಅಪ್ಪಣೆಯಿಂದ ಯಮುನಾ ತೀರವನ್ನು ಬಿಟ್ಟು ಶ್ಮಶಾನಗಳಲ್ಲಿ ಇರುತ್ತಿದ್ದನು. ಆ ಬಳಿಕ ಕುಂತೀ ಕುಮಾರನು ಪ್ರಾಣಗಳನ್ನು ಬಿಟ್ಟಿರುವಂಥಾ ಕಿವಿ ಕಣ್ಣು ನಾಲಿಗೆ ಇಲ್ಲದೆ ಇರುವಂಥಾ ಆ ಮಹಾ ರಾಕ್ಷಸನ ಶರೀರವನ್ನು ತಂದು ಪಟ್ಟಣದ ಬಾಗಿಲಲ್ಲಿ ಕೆಡಹಲು ; ಆ ಮಾರನೆಯ ದಿವಸ ಪ್ರಾತಃಕಾಲದಲ್ಲಿ ಆ ಪಟ್ಟಣದ ಜನರು ನೆತ್ತರಿಂದ ನೆನೆದು ಪರ್ವತದಂತೆ ಅತಿಭಯಂಕರವಾಗಿ ಬಿದ್ದಿರುವ ಬಕನ ಶವವನ್ನು ಕಂಡು ಆಶ್ಚರ್ಯಪಡುತ್ತಾ ಮೂಗಿನ ಮೇಲೆ ಬೆರಳಿಕ್ಕಿ—ಈ ಹೊತ್ತು ದೈವದ ಕೃಪೆಯು ನಮ್ಮ ಪಾಲಿಗೆ ಬಂದಿತು ಎಂದು ಆನಂದ ಪಟ್ಟು ತಮ್ಮ ತಮ್ಮ ಮನೆಗಳಿಗೆ ಹೋಗಿ ಸುಖವಾಗಿದ್ದರು.

---

8 THE MARRIAGE OF DROUPADI TO THE FIVE PANDU PRINCES.

೮. ದ್ರೌಪದಿಯ ಸ್ವಯಂವರ.

ಪಾಂಡವರು ಎಂದಿನಂತೆ ಏಕಚಕ್ರನಗರದಲ್ಲಿರುವ ಬ್ರಾಹ್ಮಣನ ಮನೆಯಲ್ಲಿ ವಾಸವನ್ನು ಮಾಡುತ್ತಿರುವಾಗ ಒಬ್ಬ ಬ್ರಾಹ್ಮಣನು ಬಂದು ಅವರ ತಾಯಿಯಾದ ಕುಂತಿಯೊಡನೆ ಪಾಂಚಾಲ ದೇಶದ ಅರಸನಾದ ದ್ರುಪದರಾಜನು ತನ್ನ ಮಗಳಾದ ದ್ರೌಪದಿಯನ್ನು ಅರ್ಜುನನಿಗೆ ಕೊಡಬೇಕೆಂದು ನಿಶ್ಚಯಿಸಿಕೊಂಡಿರುವಲ್ಲಿ ಪಾಂಡವರೆಲ್ಲರೂ ಅರಗಿನ ಮನೆಯಲ್ಲಿ ಸುಟ್ಟುಹೋದರು ಎಂಬ ಸುದ್ದಿಯನ್ನು ಕೇಳಿ ಬಹಳ ಚಿಂತೆಪಡುತ್ತಿರುವಾಗ ಆತನ ಪುರೋಹಿತನು—ಎಲೈ, ಅರಸೇ ? ದೊಡ್ಡವರ ಮಾತಿನ ಪ್ರಕಾರ ಧರ್ಮದಿಂದ ನಡೆಯುವಂಥ ಆ ಪಾಂಡವರಿಗೆ ಹಾನಿಯು ಒರಲಾರದು. ನೀನು ವ್ಯಸನಪಡದೆ ನಿನ್ನ ಮಗಳಿಗೆ ಸ್ವಯಂವರವನ್ನು ಮಾಡುವುದಕ್ಕೆ ಪ್ರಯತ್ನಿಸಿದರೆ ಆ ಪಾಂಡವರು ಎಲ್ಲಿದ್ದರೂ ಇಲ್ಲಿಗೆ ಬರುತ್ತಾರೆಂದು ಹೇಳಿದುದರಿಂದ ದ್ರುಪದರಾಜನು ಆ ಪುರೋಹಿತನ ಮಾತನ್ನು ಕೇಳಿ ಪುಷ್ಯಮಾಸದ ಶುಕ್ಲಪಕ್ಷದ ರೋಹಿಣೀ ನಕ್ಷತ್ರಯುಕ್ತವಾದ ಶುಭದಿವಸದಲ್ಲಿ ತನ್ನ ಮಗಳಿಗೆ ಸ್ವಯಂವರವೆಂದು ಪಟ್ಟಣದಲ್ಲಿ ಪ್ರಸಿದ್ಧಪಡಿಸಿದನು. ಈ ದಿವಸಕ್ಕೆ ಇಪ್ಪತ್ತೈದನೆಯ ದಿವಸದಲ್ಲಿ ಸ್ವಯಂವರ ಮಹೋತ್ಸವವು ನಡೆಯುತ್ತದೆ. ಆ ಮಹೋತ್ಸವವನ್ನು ನೋಡುವುದಕ್ಕೆ ದೇವಗಂಧರ್ವ ಯಕ್ಷರೂ ಬ್ರಹ್ಮರ್ಷಿಗಳೂ ಹೋಗುತ್ತಿದ್ದಾರೆ. ಮಹಾನುಭಾವರಾದ ನಿನ್ನ ಕುಮಾರಕರು ರೂಪವಂತರು. ಇವರನ್ನು ನೋಡಿ ದ್ರೌಪದಿಯು ಇವರೊಳಗೆ ಒಬ್ಬನನ್ನು ವರಿಸಿದರೂ ವರಿಸಬಹುದು. ಯಾರಭಾಗ್ಯವು ಹೇಗಿದೆಯೋ ಕಂಡವರಾರು ? ಆದರಿಂದ ನೀನು ಮಕ್ಕಳನ್ನು ಕರಕೊಂಡು ಆ ಪಾಂಚಾಲ ದೇಶಕ್ಕೆ ಬಾ ಎಂದು ಹೇಳಲು ; ಕುಂತಿದೇವಿಯು ತನ್ನ ಮಕ್ಕಳನ್ನು ಕರೆದುಕೊಂಡು ಪಾಂಚಾಲನಗರಕ್ಕೆ ಹೊರಟಳು

ಹೀಗೆ ಹೋಗುತ್ತಿರುವಾಗ ದಾರಿಯಲ್ಲಿ ಗುಂಪಾಗಿ ಹೋಗುವ ಬ್ರಾಹ್ಮಣರು ಬ್ರಹ್ಮಚರ್ಯಾವ್ರತಸಂಪನ್ನರಾದ ಈ ಐದು ಮಂದಿಯನ್ನೂ ನೋಡಿ—ನೀವು ಯಾರು?

ಎಲ್ಲಿಂದ ಎಲ್ಲಿಗೆ ಹೋಗುತ್ತೀರಿ? ಎಂದು ಕೇಳಿದುದಕ್ಕೆ ಯುಧಿಷ್ಠಿರನು—ಎಲೈ, ಮಹಾತ್ಮರುಗಳಿರಾ! ನಾವು ಏಕಚಕ್ರಪುರದ ದೆಸೆಯಿಂದ ಹೋಗುತ್ತಿದ್ದೇವೆ. ಇವರು ನನ್ನ ತಮ್ಮಂದಿರು. ಈ ಮುದುಕಿಯು ನಮ್ಮ ತಾಯಿಯು ಎನಲು; ಬ್ರಾಹ್ಮಣರು–ಹಾಗಾದರೆ ಬನ್ನಿರಿ! ಈ ಹೊತ್ತು ಪಾಂಚಾಲನಗರಕ್ಕೆ ಹೋಗಬೇಕು. ಅಲ್ಲಿ ದ್ರೌಪದೀದೇವಿಗೆ ಸ್ವಯಂವರ ಮಹೋತ್ಸವವು ನಡೆಯತ್ತದೆ. ಈ ಅದ್ಭುತವನ್ನು ನೋಡುವದಕ್ಕಲ್ಲವೇ ನಾವು ಗುಂಪುಕೂಡಿ ಹೋಗುತ್ತಿರುವುದು? ನೀವೂ ನಮ್ಮ ಸಂಗಡಲೇ ಬಂದು ಅಲ್ಲಿ ನಾನಾ ದೇಶಗಳಿಂದ ಬಂದು ಕೂಡಿರುವ ಅರಸುಗಳ ದೆಸೆಯಿಂದ ಅನೇಕ ಧನಕನಕ ವಸ್ತುವಾಹನಾದಿಗಳ ದಾನಗಳನ್ನೂ ನಾನಾ ವಿಧವಾದ ಭಕ್ಷ್ಯಭೋಜ್ಯಮೊದಲಾದ ಆಹಾರಗಳನ್ನೂ ಪರಿಗ್ರಹಿಸಿ ಆ ಉತ್ಸವವನ್ನು ನೋಡಿ ತಿರಿಗಿ ಬರಬಹುದು. ನೀವು ಬಹು ಮನೋಹರಾಕಾರರಾದುದರಿಂದ ಆ ದ್ರುಪದರಾಜನ ಮಗಳು ನಿಮ್ಮವರೊಳಗೆ ಒಬ್ಬನನ್ನು ವರಿಸಬಹುದು ಎನಲು; ಅವರು—ಹಾಗೇ ಆಗಲಿ. ನಿಮ್ಮ ಸಂಗಡಲೇ ಆ ಉತ್ಸವವನ್ನು ನೋಡುವುದಕ್ಕೆ ನಾವೂ ದ್ರುಪದನ ನಗರಕ್ಕೆ ಬರುತ್ತೇವೆಂದು ಹೇಳಿ ಬ್ರಾಹ್ಮಣರೊಡನೆ ಪಾಂಚಾಲ ದೇಶವನ್ನು ಕುರಿತು ಹೋಗುತ್ತಾ ಮಧ್ಯಮಾರ್ಗದಲ್ಲಿ ವ್ಯಾಸ ಋಷಿಯನ್ನು ನೋಡಿ ಪೂಜಿಸಿ ಆತನ ಅಪ್ಪಣೆಯನ್ನು ತೆಗೆದುಕೊಂಡು ಆ ಮೇಲೆ ಪಾಂಚಾಲನಗರ ಪ್ರಾಂತಕ್ಕೆ ಹೋಗಿ ಅದರ ಸಮೀಪದಲ್ಲಿ ನಾನಾ ದೇಶಗಳ ದೆಸೆಯಿಂದ ಬಂದಿರುವ ಅರಸುಗಳ ಪಾಳಯಗಳನ್ನು ನೋಡುತ್ತಾ ಪಾಂಡವರು ಪುರಪ್ರವೇಶವನ್ನು ಮಾಡಿ ಅಲ್ಲಿರುವ ಒಬ್ಬ ಕುಂಬಾರನ ಮನೆಯಲ್ಲಿ ಇಳಿದುಕೊಂಡು ಯಥಾಪ್ರಕಾರವಾಗಿ ಭಿಕ್ಷಾಚರಣವನ್ನು ಮಾಡುತ್ತಿರಲು; ಅವರನ್ನು ಪಾಂಡವರು ಎಂದು ಯಾರೂ ತಿಳಿಯಲಾರದೆ ಹೋದರು. ಪಾಂಚಾಲರಾಜನಾದ ಯಜ್ಞಸೇನನು—ಅಳಿಯನ ಬಲದಿಂದ ತಾನು ಕೃತಕೃತ್ಯನಾದೇನು ಎಂದು ತನ್ನ ಮನಸ್ಸಿನಲ್ಲಿ ವಾಂಛಿಸುವ ಮಾರನಾದ ಧನಂಜಯನಿಗೆ ತನ್ನ ಮಗಳನ್ನು ಕೊಡಬೇಕೆಂಬ ಅಪೇಕ್ಷೆಯುಳ್ಳವನಾದುದರಿಂದ ಪಾಂಡವರು ವೇಷಾಂತರದಿಂದ ಲೋಕದಲ್ಲಿ ಜೀವಿಸಿರಬಹುದೆಂದಾಲೋಚಿಸಿ ಅರ್ಜುನನಿಗಿಂತಲೂ ಇತರರಿಗೆ ಸಾಧ್ಯವಾಗದ ಹಾಗೆ ಲಕ್ಷ್ಯ ಭೇದನವನ್ನು ಮಾಡಬೇಕೆಂದು ನಿಶ್ಚಯಿಸಿ ಹೆದೆಯನ್ನು ಏರಿಸುವುದಕ್ಕೆ ಅವಶ್ಯಕವಾದ ಧನುಶ್ಶ್ರೇಷ್ಠವನ್ನು ಹುಡುಕಿ ವ್ಯಾಘ್ರಪಾದನ ಮಗನಾದ ಸೃಂಜಯ ರಾಜನಿಗೆ ದೇವತೆಗಳಿಂದ ಕೊಡಲ್ಪಟ್ಟುದಾಗಿಯೂ ಕಬ್ಬಿಣದ ಹೆದೆಯಿಂದ ಅಲಂಕೃತವಾಗಿಯೂ ಅತಿದೃಢವಾದುದಾಗಿಯೂ ಇರುವ ಕಿಂಧುರವೆಂಬ ಹೆಸರುಳ್ಳ ಧನುಸ್ಸನ್ನು ತರಿಸಿ ಆಕಾಶಮಾರ್ಗದಲ್ಲಿ ಸುವರ್ಣಮಯವಾದ ಒಂದು ಮತ್ಸ್ಯಯಂತ್ರವನ್ನು ಮಾಡಿಸಿ ಈ ಧನುಸ್ಸಿಗೆ ಹೆದೆಯನ್ನು ಏರಿಸಿ ಈ ಯಂತ್ರದ ಕಣ್ಣಿನಿಂದ ಗುರಿಯನ್ನು ಭೇದಿಸಿದವನೇ ತನ್ನ ಮಗಳನ್ನು ಮದುವೆ ಮಾಡಿಕೊಳ್ಳತಕ್ಕವನು ಎಂದು ಸಾರಿಸಲು; ಆ ವೃಂತ್ತಾಂತವನ್ನು ಕೇಳಿ ನಾನಾ ದೇಶಾಧಿಪತಿಗಳಾದ ಅರಸುಗಳೂ ಮಹಾತ್ಮರಾದ ಋಷಿಗಳೂ ದುರ್ಯೋಧನ ಕರ್ಣಸಹಿತರಾದ ಕೌರವರೂ ವಾಸುದೇವ ಸಹಿತರಾದ ಯಾದವರೂ ಮತ್ತು ಬ್ರಾಹ್ಮಣರೂ ಪಟ್ಟಣಕ್ಕೆ ಬಂದು ದ್ರುಪದರಾಜನಿಂದ ಪೂಜಾಸನ್ಮಾನಾದಿಗಳನ್ನು

ಹೊಂದಿ ಆ ಪಟ್ಟಣದ ಸಮೀಪದಲ್ಲಿರುವ ಶಿಂಶುಮಾರ ಪರ್ವತದ ಹತ್ತಿರದಲ್ಲಿ ಪಾಳ್ಯಗ ಳನ್ನು ಬಿಡಿಸಿದರು.

ಆ ಬಳಿಕ ಆ ಪಟ್ಟಣದ ಈಶಾನ್ಯಭಾಗದ ಸಮಪ್ರದೇಶದಲ್ಲಿ ಅನೇಕವಾದ ಆರ ಮನೆಗಳೊಡನೆ ಕೂಡಿ ಕೋಟೆ ಕೊತ್ತಲುಗಳಿಂದ ಆವರಿಸಲ್ಪಟ್ಟುದಾಗಿಯೂ ಬಾಗಿಲುಗ ಳಲ್ಲಿ ತೋರಣಗಳಿಂದ ಒಪ್ಪಿ ವಿಚಿತ್ರವಾದ ಮೇಲುಕಟ್ಟುಗಳಿಂದ ಶೋಭಿತವಾಗಿಯೂ ಬಹಳವಾದ ವಾದ್ಯಧ್ವನಿಗಳಿಂದ ಕೂಡಿ ಚಂದನ ಅಗುರು ಧೂಪಗಳಿಂದ ಪರಿಮಳಿಸಿ ಗಂಧೋದಕಗಳಿಂದ ನನಸಲ್ಪಟ್ಟ ಪುಷ್ಪಮಾಲಿಕೆಗಳಿಂದ ಅಲಂಕೃತವಾಗಿಯೂ ಕೈಲಾಸ ಶಿಖರದೋಪಾದಿಯಲ್ಲಿ ಪ್ರಕಾಶವಾಗಿಯೂ ಸುವರ್ಣಮಯವಾದ ಜಾಲಂದರಗಳಿಂದಲೂ ಮಣಿಗಳಿಂದ ಕೆತ್ತಲ್ಪಟ್ಟ ಭೂಮಿಗಳಿಂದಲೂ ಏರುವುದಕ್ಕೆ ಯೋಗ್ಯಗಳಾದ ಸೋಪಾ ನಗಳಿಂದಲೂ ಅನೇಕ ಪ್ರಕಾರವಾದ ಸಿಂಹಾಸನಗಳಿಂದಲೂ ದಿವ್ಯವಾದ ಮೇಲುಜಪ್ಪ ರಗಳಿಂದಲೂ ಕೂಡಿ ಹಂಸದೋಪಾದಿಯಲ್ಲಿ ವರ್ಣವುಳ್ಳುದಾಗಿಯೂ ಒಂದು ಗಾವುದ ಪರಿಯಂತರವೂ ವ್ಯಾಪಿಸುತ್ತಿರುವ ಪರಿಮಳಗಳಿಂದಲೂ ವಿಸ್ತಾರವಾದ ರಾಜಮಾರ್ಗ ಗಳಿಂದಲೂ ವಿಚಿತ್ರವಾದ ಬಾಗಿಲುಗಳಿಂದಲೂ ಒಪ್ಪಿ ನಾನಾ ಪ್ರಕಾರವಾದ ಧಾತುಗ ಳಿಂದಲೂ ಶೋಭಿತಗಳಾದ ಹಿಮವತ್ಪರ್ವತದ ಶಿಖರಗಳನ್ನು ಅನುಕರಿಸಿ ಇರುವ ಉಪ್ಪ ರಿಗೆಗಳಿಂದ ಒಪ್ಪುತ್ತಿರುವ ಸ್ವಯಂವರ ಮಂಟಪದ ಸುತ್ತಲಿರುವ ದಿವ್ಯಭವನಗಳಲ್ಲಿ ಸಕಲಭೂಷಣಭೂಷಿತರಾಗಿಯೂ ಮಹಾ ಬಲಶಾಲಿಗಳಾಗಿಯೂ ದಿವ್ಯಮಾಲ್ಯಾಂಬ ರಗಳನ್ನು ಧರಿಸಿದವರಾಗಿಯೂ ರಾಜನೀತಿಕುಶಲರಾಗಿಯೂ ಸ್ವದೇಶರಕ್ಷಕರಾಗಿಯೂ ಸಕಲಶುಭಕರ್ಮಧುರೀಣರಾಗಿಯೂ ಇರುವ ರಾಜಶ್ರೇಷ್ಠರೂ ಪರಸ್ಪರ ಸ್ಪರ್ಧೆಗಳಿಂದ ಸಿಂಹಾಸನಗಳಲ್ಲಿ ಕುಳಿತಿರುವುದನ್ನು ಗ್ರಾಮಗಳ ದೆಸೆಯಿಂದ ಬಂದಂಥಾ ಜನಗಳು ಆಶ್ಚರ್ಯದಿಂದ ನೋಡುತ್ತಿದ್ದರು. ಪಾಂಡವರೈದು ಮಂದಿಯೂ ನಾನಾ ದೇಶಗಳ ದೆಸೆಯಿಂದ ಬಂದ ಬ್ರಾಹ್ಮಣರೊಡನೆಕೂಡಿ ಒಂದು ಕಡೆಯಲ್ಲಿ ಇದ್ದುಕೊಂಡು ದ್ರುಪ ದರಾಜನ ಐಶ್ವರ್ಯಕ್ಕೆ ಆಶ್ಚರ್ಯಪಟ್ಟು ನೋಡುತ್ತಿದ್ದರು.

ಆ ಬಳಿಕ ರಂಗಮಂಟಪವು ನಿರ್ಮಾಣವಾದ ದಿವಸಕ್ಕೆ ಹದಿನಾರನೆಯ ದಿವಸ ದಲ್ಲಿ ದ್ರುಪದರಾಜನ ಮಗಳು ಪರಿಮಳೋದಕಗಳಿಂದ ಸ್ನಾನವನ್ನು ಮಾಡಿ ಶುಭ್ರವಸ್ತ್ರ ಗಳನ್ನುಟ್ಟು ಸರ್ವಾಭರಣಭೂಷಿತೆಯಾಗಿ ಸುವರ್ಣಮಯವಾದ ವರಣಮಾಲಿಕೆಯನ್ನು ಕೈಯಲ್ಲಿ ಹಿಡಿದು ಮಂದಗಮನದಿಂದ ರಂಗಮಂಟಪದ ಮಧ್ಯಕ್ಕೆ ಬರಲು ; ಪಾಂ ಚಾಲ ಪುರೋಹಿತನಾದ ಬ್ರಾಹ್ಮಣನು ಸ್ನಾನವನ್ನು ಮಾಡಿ ಅಲಂಕೃತನಾಗಿ ಅಗ್ನಿಮು ಖದಲ್ಲಿ ಮಾಡಿದ ಆಜ್ಯಾಹುತಿಗಳಿಂದ ದೇವತೆಗಳನ್ನು ತೃಪ್ತಿಪಡಿಸಿ ಪುಣ್ಯಾಹವಾಚನಾ ನಂತರದಲ್ಲಿ ಸಕಲ ಭೇರೀಮೃದಂಗಾದಿ ವಾದ್ಯಧ್ವನಿಗಳನ್ನು ನಿಲ್ಲಿಸಲು ; ದ್ರುಪದರಾ ಜನ ಮಗನಾದ ಧೃಷ್ಟದ್ಯುಮ್ನನು ಸಭಾಮಧ್ಯದಲ್ಲಿ ನಿಂತು ಗಂಭೀರಧ್ವನಿಯಿಂದ—ಎಲೈ, ಅರಸುಗಳಿರಾ ! ಕೇಳಿರಿ. ನಿಮ್ಮಲ್ಲಿ ಭುಜಬಲಶಾಲಿಯಾದವನು ಈ ಧನುಸ್ಸಿನಲ್ಲಿ ಹೆದೆಯನ್ನು ಏರಿಸಿ ಈ ಯಂತ್ರರಂಧ್ರದ ದೆಸೆಯಿಂದ ಐದು ಬಾಣಗಳನ್ನು ಪ್ರಯೋ ಗಿಸಿ ಆಚೆಯಲ್ಲಿರುವ ಲಕ್ಷ್ಯವನ್ನು ಭೇದಿಸಿದವನಾದರೆ ಅವನು ನನ್ನ ತಂಗಿಯಾದ

ದ್ರೌಪದಿಗೆ ಗಂಡನಾಗುವನು. ಈ ನನ್ನ ಮಾತು ಸತ್ಯವಲ್ಲದೆ ಎಂದಿಗೂ ಸಟೆಯಾಗ ಲಾರದು ಎಂದು ಹೇಳಿ ತನ್ನ ತಂಗಿಯನ್ನು ನೋಡಿ—ಎಲೌ, ದ್ರೌಪದಿಯೇ! ಇಲ್ಲಿ ಸ್ವಯಂವರಕ್ಕೆ ಬಂದಿರುವ ಅರಸುಗಳನ್ನು ನೋಡು! ಇವರ ಹೆಸರುಗಳನ್ನು ಕೇಳು! ವಿವರಿಸುತ್ತೇನೆ ಮಣಿಮಂತನು ಸಮುದ್ರಸೇನನ ಮಗನಾದ ಚಂದ್ರಸೇನನು ಕುಮಾ ರಸಮಾನನಾದ ಜರಾಸಂಧನು ಸುದಂಡನು ದಂಡನು ಪೌಂಡ್ರಕವಾಸುದೇವನು ಭಗ ದತ್ತನು ಕಳಿಂಗನು ತಾಮ್ರಲಿಪ್ತನು ಮದ್ರದೇಶಾಧಿಪತಿಯಾದ ಶಲ್ಯನು ಆತನ ಕುಮಾ ರಕರಾದ ರುಕ್ಮಾಂಗದ ರುಕ್ಮರಥರು ಕೌರವವಂಶವರ್ಧನನಾದ ಸೋಮದತ್ತನು ಆತನ ಮಕ್ಕಳಾದ ಭೂರಿಯೂ ಭೂರಿಶ್ರವನೂ ಶಲನೂ ಎಂಬ ಮೂರು ಮಂದಿಯು ಕಾಂಭೋಜಾಧ್ಯಕ್ಷನಾದ ಸುದಕ್ಷಿಣನು ಕುರುವಲ್ಲಭನಾದ ದೃಢಧನ್ವನು ಬೃಹದ್ಬ ಲನು ಸುಷೇಣನು ಊಶೀರನ ಕುಮಾರನಾದ ಶಿಬಿಯು ಅಗ್ನಿತ್ರಯಗಳೋಪಾದಿಯಲ್ಲಿ ಪ್ರಕಾಶಿಸುತ್ತಿರುವ ಪಾಂಡ್ಯಕೇರಳಚೋಳದೇಶಾಧಿಪತಿಗಳು ದಕ್ಷಿಣ ದಿಗ್ಭಾಗದಲ್ಲಿ ನಿನ್ನನ್ನು ನೋಡುವುದಕ್ಕೋಸ್ಕರ ಸಿಂಹಾಸನಗಳಲ್ಲಿ ಕುಳಿತುಕೊಂಡು ಇದ್ದಾರೆ. ರೋಹಿ ಣಿಯ ಮಗನಾದ ಬಲಭದ್ರನು ವಾಸುದೇವನು ಪ್ರದ್ಯುಮ್ನನು ಸಾಂಬನು ಚಾರು ದೇಷ್ಣನು ಸಾರಣನು ಗದನು ಅಕ್ರೂರನು ಸತ್ಯಕನು ಸಾತ್ಯಕಿಯು ಕೃತವರ್ಮನು ಯುಯುಧಾನನು ಹಾರ್ದಿಕನು ಪೃಥುವು ವಿಪೃಥುವು ಕಹನು ಸಮಾಕನು ಅರಿಮೇಜ ಯನು ದಾನಪತಿಯು ಝಿಲ್ಲಿಯು ಪಿಂಡಾರಕನು ಎಂಬ ಯಾದವವಂಶದವರು. ಮತ್ತು ಭಗೀರಥನು ಬೃಹತ್ ಕ್ಷತ್ರನು ಸಿಂಧುದೇಶಾಧಿಪತಿಯಾದ ಜಯದ್ರಥನು ಬಾಹ್ಲಿಕ ದೇಶಾಧೀಶ್ವರನಾದ ಬೃಹದ್ರಥನು ಶಕುನಿ ಪುತ್ರನಾದ ಉಲೂಕನು ಚಿತ್ರಾಂ ಗದನು ಶುಭಾಂಗದನು ಪರಾಕ್ರಮ ಧುರೀಣನಾದ ವತ್ಸರಾಜನು ಕೋಸಲದೇಶಾಧಿ ಪತಿಯು ಕರ್ಣನು ಕರ್ಣಪುತ್ರನಾದ ವೃಷಸೇನನು ಬಲಶಾಲಿಯಾದ ಬೃಹತ್ಸೇನನು ದುರ್ಜಯನು ದಮಘೋಷನ ಮಗನಾದ ಮತ್ತು ಚೇದಿದೇಶಾಧಿಪತಿಯಾದ ಯುದ್ಧ ದಲ್ಲಿ ಯಮನಿಗೆ ಸಮಾನನಾದ ಶಿಶುಪಾಲನು; ಮತ್ತು ಇಲ್ಲಿರುವ ನಾನಾ ದೇಶಾಧೀ ಶ್ವರರೂ ನಿನ್ನನ್ನು ಮದುವೆ ಮಾಡಿಕೊಳ್ಳಬೇಕೆಂದು ಬಂದು ಇದ್ದಾರೆ ಆಕಾಶಮಾ ರ್ಗದಲ್ಲಿ ತೋರುವ ಮತ್ಸ್ಯಯಂತ್ರವನ್ನು ಇವರಲ್ಲಿ ಯಾವನು ವಿದ್ಯಾ ಕೌಶಲದಿಂದ ಭೇದಿಸುವನೋ ಆತನನ್ನು ವರಿಸು ಎಂದು ಹೇಳಿದನು.

ಆ ಬಳಿಕ ರಾಜಕುಮಾರಕರು ಕಡಗ ಕಿರೀಟ ತೋಳಬಂದಿ ಚೌಕಳಿ ಮೊದ ಲಾದ ದಿವ್ಯಾಭರಣಗಳಿಂದ ಅಲಂಕೃತರಾಗಿ ರೂಪ ಬಲ ಕುಲ ಶೀಲ ಯೌವನಧರ್ಮ ಈ ಮೊದಲಾದುವುಗಳಿಂದ ವಿಜೃಂಭಮಾಣರಾಗಿ ಸಕಲ ಶಾಸ್ತ್ರ ಬಲವೂ ತಮ್ಮಲ್ಲಿಯೇ ಉಂಟು ಎಂದು ಗರ್ವಿತರಾಗಿಯೂ ಮನ್ಮಥ ಬಾಣ ಪೀಡಿತರಾಗಿಯೂ ಹಿಮವತ್ಪರ್ವ ತದಲ್ಲಿ ಹುಟ್ಟಿದ ಮದದಾನೆಗಳೋಪಾದಿಯಲ್ಲಿ ಮದಿಸಿ ದ್ರೌಪದೀದೇವಿಯು ನಮಗಾ ಗಬೇಕು ತಮಗಾಗಬೇಕು? ಎಂದು ತವಕಪಡುತ್ತಾ ಧನುಸ್ಸನ್ನು ಎತ್ತಿ ಲಕ್ಷ್ಯಭೇದ ವನ್ನು ಮಾಡುವುದಕ್ಕೆ ಹೊರಟರು. ಆ ಸ್ವಯಂವರವನ್ನು ನೋಡುವುದಕ್ಕೆ ಏಕಾದಶ ಸಹಸ್ರ ಬ್ರಾಹ್ಮಣಶ್ರೇಷ್ಠರೂ ಅಷ್ಟ ಸಹಸ್ರಗಳಲ್ಲಿ ಅತಿಶಯೋನ್ನತಕೆಳಗಳೂ ಕಾಷ್ಠರೂ ಮತ್ತು

ದ್ಗಣಗಳೂ ಇಂದ್ರ ಯಮ ಕುಬೇರ ಮೊದಲಾದ ಅಷ್ಟದಿಕ್ಪಾಲಕರೂ ದಿವ್ಯವಿಮಾನ ಗಳನ್ನು ಏರಿ ಬಂದು ಆಕಾಶದಲ್ಲಿ ನೆರೆದರು. ಮತ್ತು ದೈತ್ಯರು ಗರುಡರು ಗಂಧರ್ವರು ದೇವರ್ಷಿಗಳು ಪನ್ನಗರು ಯಕ್ಷರು ಚಾರಣರು ವಿಶ್ವಾವಸುವು ನಾರದನು ಪರ್ವತನು ಮೊದಲಾದ ದೇವಮುನಿಗಳೂ ಅಪ್ಸರೋಜನಗಳೂ ಬಂದರು. ಆ ಸಮಯದಲ್ಲಿ ಬಲ ರಾಮ ವೃಷ್ಣಿ ಅಂಧಕರು ಮೊದಲಾದ ಯಾದವರು ಮಾತ್ರ ಕೃಷ್ಣನ ಅಪ್ಪಣೆಯಿಂದ ಆ ಯಂತ್ರಲಕ್ಷ್ಯವನ್ನು ಭೇದಿಸುವುದಕ್ಕೆ ಹೋಗದೇ ನೋಡುತ್ತಿದ್ದರು. ಆಗ ವಾಸು ದೇವನು ಮದವಿಜೃಂಭಣದಿಂದ ಸಮರಸನ್ನದ್ಧರಾಗಿ ಮದದಾನೆಗಳೋಪಾದಿಯಲ್ಲಿ ಕಾಣಿಸುತ್ತಾ ಬೂದಿ ಮುಚ್ಚಿದ ಕೆಂಡಗಳಂತಿರುವ ಪಾಂಡವರೈದು ಮಂದಿಯನ್ನೂ ನೋಡಿ ಸಂತೋಷಿಸಿ ಕ್ಷಣಮಾತ್ರ ತನ್ನ ಮನಸ್ಸಿನಲ್ಲಿ ಆಲೋಜನೆಯನ್ನು ಮಾಡಿ ನಿಶ್ಚಯಿಸಿ ಅಣ್ಣನಾದ ಬಲಭದ್ರನನ್ನು ಕುರಿತು—ಎಲೈ, ಮಹಾನುಭಾವನೇ ಬ್ರಾಹ್ಮ ಣರ ಸಭೆಯಲ್ಲಿ ಬ್ರಾಹ್ಮಣವೇಷದಿಂದಿರುವ ಈ ಪಾಂಡವರನ್ನು ನೋಡು. ಈತನು ಧರ್ಮರಾಜನು ; ಈತನು ಭೀಮಸೇನನು ; ಈತನೇ ಅರ್ಜುನನು : ಇವರಿಬ್ಬರೂ ನಕುಲ ಸಹದೇವರು ಎಂದು ತಿಳಿಸಲು ; ಆ ಬಲರಾಮನು ಮೆಲ್ಲಮೆಲ್ಲನೆ ಇವರ ರೂಪರೇಖಾ ಲಕ್ಷಣಗಳನ್ನು ನೋಡಿ—ಇವರು ಪಾಂಡುಕುಮಾರರು ಹೌದು ಎಂದು ನಿಶ್ಚಯಿಸಿ ಸಂತೋಷಪಟ್ಟನು.

ಆಗ ಲಕ್ಷ್ಯಭೇದನಕ್ಕೆ ಹೊರಟಿದ್ದ ರಾಜಕುಮಾರಕರೆಲ್ಲರೂ ದ್ರೌಪದಿಯಲ್ಲಿ ನೆಟ್ಟಕಣ್ಣುಳ್ಳವರಾಗಿ ದ್ರೌಪದಿಯು ತಮ್ಮನ್ನು ವರಿಸಬೇಕೆಂಬ ಅಭಿಲಾಷೆಯಿಂದ ಒಬ್ಬರೊಬ್ಬರಾಗಿ ತಮ್ಮ ವಿಕ್ರಮಗಳನ್ನು ತೋರಿಸಿ ಧನುಸ್ಸಿನಲ್ಲಿ ಹೆದೆಯನ್ನು ಏರಿಸು ವುದಕ್ಕೆ ಕೈಲಾಗದೆ ಗರ್ವವನ್ನು ಬಿಟ್ಟು ಹಿಂದು ಮುಂದು ತೋರದೆ ಸಿಕ್ಕಿಕೊಂಡು ಧನುರ್ವೇಗದಿಂದ ಪೆಟ್ಟುತಿಂದು ಭೂಮಿಯಲ್ಲಿ ಹೊರಳುತ್ತಾ ತೊಟ್ಟ ಭೂಷಣಗಳು ತುಮುರಾಗಲು ; ಉಟ್ಟ ವಸ್ತ್ರಗಳು ಜಾರಿ ಬೀಳಲು ; ಸುತ್ತಿದ ಹೂಮಾಲೆಗಳೆಲ್ಲಾ ಕೆದರಿ ಸುರಿಯಲು ; ದ್ರೌಪದಿಯಲ್ಲಿರುವ ಆಶೆಯನ್ನು ಬಿಟ್ಟು ನಾಚಿಕೆಯಿಂದ ದುಃಖಪಡುತ್ತಿದ್ದರು. ಆ ಸಮಯದಲ್ಲಿ ಶಿಶುಪಾಲನು ಮಹಾ ಧನುಸ್ಸಿನ ಸಮೀಪಕ್ಕೆ ಬಂದು ಆ ಧನುಸ್ಸನ್ನು ತೆಗೆದುಕೊಂಡು ಹೆದೆಯನ್ನು ಏರಿಸುವಾಗ ಉದ್ದಿನ ಕಾಳಿ ನಷ್ಟು ಪ್ರಮಾಣವು ಸಾಲದೇಹೋಗಲು ; ಸಿಡಿದ ಆ ಧನುಸ್ಸಿನ ವೇಗದಿಂದ ಪೆಟ್ಟು ಬಿದ್ದು ಭೂಮಿಯಲ್ಲಿ ಮೊಣಕಾಲುಗಳಿಂದ ನಿಂತು ಸಾಧನೆಯ ಬಲುಮೆಯಿಂದ ಬೀಳದೆ ಆಚೆಗೆ ತೊಲಗಿದನು. ಆ ಬಳಿಕ ಮಹಾ ಪರಾಕ್ರಮಶಾಲಿಯೂ ಮದದಾನೆ ಯಂತೆ ನಡೆಯುಳ್ಳವನೂ ಕಂಬುಗ್ರೀವನೂ ಕೆಂಪಾದ ಕಣ್ಣುಗಳುಳ್ಳವನೂ ಮಹಾ ವೇಗವಂತನೂ ಆದ ಜರಾಸಂಧನು ಧನುಸ್ಸಿನ ಸಮೀಪಕ್ಕೆ ಬಂದು ಹೆಸರುಕಾಳಷ್ಟು ಮಾತ್ರ ಗುರಿ ತಪ್ಪುವಹಾಗೆ ಹೆದೆಯನ್ನು ಏರಿಸಲು ; ಆ ಧನುಸ್ಸು ಅವನನ್ನು ಬೀಸಿ ಹೊಡೆದುದರಿಂದ ಅತನು ಭೂಮಿಯಲ್ಲಿ ಬೀಳುವಾಗ ಕೈಗಳನ್ನು ಆನಿಸಿಕೊಂಡು ನಿಂತು ನಾಚಿಕೆಪಟ್ಟು ರಂಗಸ್ಥಳದ ದೆಸೆಯಿಂದ ಆಚೆಗೆ ಹೋದನು. ಆ ಮೇಲೆ ಮದ್ರದೇಶಾ ಧಿಪತಿಯಾದ ಶಲ್ಯನು ಧನುಸ್ಸಿನ ಸಮೀಪಕ್ಕೆ ಬಂದು ಸಾಸುವೇಕಾಳು ಪ್ರಮಾಣವು

ಕಡಮೆಯಾಗುವಹಾಗೆ ಹೆದೆಯನ್ನು ಏರಿಸಿ ಆ ಧನುಸ್ಸಿನಿಂದ ಪೆಟ್ಟು ತಿಂದು ಪರಾಭವವನ್ನು ಹೊಂದಿದನು. ಅನಂತರದಲ್ಲಿ ಸೂರ್ಯನ ಮಗನಾದ ಕರ್ಣನು ಧನುಸ್ಸಿನ ಸಮೀಪಕ್ಕೆ ಬಂದು ಕೂದಲಿನ ಪ್ರಮಾಣವು ತಗ್ಗಾಗುವ ಹಾಗೆ ಹೆದೆಯನ್ನು ಏರಿಸಿ ಆ ಧನುಸ್ಸಿನ ಪೆಟ್ಟಿನಿಂದ ಪರಾಜಯವನ್ನು ಹೊಂದಿ ಹೊರಟುಹೋದನು. ಈ ಪ್ರಕಾರವಾಗಿ ಸಕಲರಾದ ಅರಸುಗಳೂ ಆ ಧನುಸ್ಸಿನ ದೆಸೆಯಿಂದ ಪರಾಭವವನ್ನು ಹೊಂದಿದರು.

ತರುವಾಯ ಬ್ರಾಹ್ಮಣರ ಮಧ್ಯದಲ್ಲಿ ಅರ್ಜುನನು ಎದ್ದು ಧೈರ್ಯದಿಂದ ಶೀಘ್ರವಾಗಿ ಬರುತ್ತಿರಲು; ಇಂದ್ರಧ್ವಜದೋಪಾದಿಯಲ್ಲಿ ಬರುವ ಇಂದ್ರನ ಮಗನನ್ನು ನೋಡಿ ಅಲ್ಲಿರುವ ಬ್ರಾಹ್ಮಣರೂ ಬ್ರಹ್ಮಚಾರಿಗಳೂ ಕೃಷ್ಣಾಜಿನೋತ್ತರೀಯಗಳನ್ನು ಹಾರಿಸುತ್ತಾ ಸಂತೋಷದಿಂದ ಕೋಲಾಹಲವನ್ನು ಮಾಡಿದರು. ಕರ್ಣ ಶಲ್ಯರು ಮೊದಲಾದವರಿಗೂ ಚಾಪವಿದ್ಯಾವಿಶಾರದರಾಗಿಯೂ ಮಹಾ ಬಲಪರಾಕ್ರಮಶಾಲಿಗಳಾಗಿಯೂ ಇರುವ ಮಹಾ ವೀರರಿಗೂ ಹೆದೆಯನ್ನು ಏರಿಸುವದಕ್ಕೆ ಅಶಕ್ಯವಾದ ಈ ಧನುಸ್ಸಿಗೆ ಅಸ್ತ್ರವಿದ್ಯಾಹೀನನಾಗಿ ಸ್ವಭಾವದಿಂದ ದುರ್ಬಲನಾಗಿರುವ ಈ ಬ್ರಹ್ಮಚಾರಿಯಿಂದ ಹೇಗೆ ಹೆದೆಯನ್ನು ಏರಿಸುವದಕ್ಕೆ ಶಕ್ಯವಾಗುವುದು? ಒಂದು ವೇಳೆ ಇವನು ಸಾಹಸದಿಂದ ಏರಿಸಿದರೆ ಈ ಸಭೆಯಲ್ಲಿರುವ ಅರಸುಗಳಿಗೆ ನಾವಿಷ್ಟು ಮಂದಿಯೂ ವಿರೋಧಿಗಳಾಗುತ್ತೇವೆ. ಈತನು ಗರ್ವಾತಿಶಯದಿಂದಲೂ ಸಂತೋಷದಿಂದಲೂ ಬ್ರಾಹ್ಮಣಚಾಪಲ್ಯದಿಂದಲೂ ಮುಂದೆ ಬರುವ ಹಾನಿಯನ್ನು ನೋಡದೆ ಈ ಧನುಸ್ಸನ್ನು ಎತ್ತುವುದಕ್ಕೆ ತೊಡಗಿ ಇದ್ದಾನೆ. ಇದನ್ನು ನಾವು ವಿಚಾರಿಸಿ ನಿಲ್ಲಿಸದೇ ಹೋದರೆ ನಾವು ಪರಿಹಾಸಯೋಗ್ಯರಾಗಿಯೂ ಅಪ್ರಯೋಜಕರಾಗಿಯೂ ಹೋಗುತ್ತೇವೆ ಎಂದು ಗುಜುಗುಜನೆ ಮಾತಾಡುತ್ತಿದ್ದರು. ಮತ್ತು ಕೆಲವರು ಬ್ರಾಹ್ಮಣರು ತೇಜೋವಿರಾಜಮಾನನಾಗಿಯೂ ಯೌವ್ವನವಿಜೃಂಭಿತನಾಗಿಯೂ ಆನೆಯ ಸೊಂಡಿಲುಗಳೋಪಾದಿಯಲ್ಲಿರುವ ಭುಜಗಳುಳ್ಳವನಾಗಿಯೂ ಬಲಿತಿರುವ ಮುಡುಹುಗಳುಳ್ಳವನಾಗಿಯೂ ಧೈರ್ಯದಲ್ಲಿ ಹಿಮವತ್ಪರ್ವತಕ್ಕೆ ಸಮಾನನಾಗಿಯೂ ಇರುವ ಈತನ ಉತ್ಸಾಹಶಕ್ತಿಯನ್ನು ನೋಡುವುದರಲ್ಲಿ ಈತನು ಕಾರ್ಯವನ್ನು ಸಾಧಿಸಬಹುದು ಎಂದು ತೋರುತ್ತದೆ. ಅಶಕ್ತನಾದರೆ ಇಂಥಾ ಕಾರ್ಯಕ್ಕೆ ಹೋಗುವನೇ? ಸ್ಥಾವರ ಜಂಗಮಾತ್ಮಕವಾದ ಈ ಲೋಕದಲ್ಲಿ ಬ್ರಾಹ್ಮಣರಿಗೆ ಅಸಾಧ್ಯವಾದುದೇನಾದರೂ ಉಂಟೇ? ಬ್ರಾಹ್ಮಣರು ಉದಕಾಹಾರಿಗಳಾಗಿಯೂ ವಾಯುಭಕ್ಷಕರಾಗಿಯೂ ಫಲಾಹಾರಿಗಳಾಗಿಯೂ ಇದ್ದುಕೊಂಡು ವೃತಶೀಲರಾದುದರಿಂದ ಶರೀರದಲ್ಲಿ ಬಲಹೀನರಾದರೂ ಬ್ರಹ್ಮ ತೇಜಸ್ಸಿನಲ್ಲಿ ಬಲವಂತರಾಗಿರುವರೆಂದು ಪ್ರಸಿದ್ಧಿಯಾಗಿರುವುದು. ಈತನ ದೆಸೆಯಿಂದ ಅವಮಾನವೂ ಜನಾಪಹಾಸವೂ ಬಹುಜನದ್ವೇಷವೂ ಯಾಕೆ ಬಂದೀತು? ಬ್ರಾಹ್ಮಣನು ಯಾವ ಕಾರ್ಯವನ್ನು ಮಾಡಿದರೂ ತಡೆಯುವವರುಂಟೇ? ಎಂದು ಹೇಳುತ್ತಿದ್ದರು.

ಆ ಕಾಲದಲ್ಲಿ ಇವನ ಬೆಡಗನ್ನು ನೋಡಿ ಮನಸ್ಸಿನಲ್ಲಿ ಚಿಂತಿಸುತ್ತಾ ರಾಜಕುಮಾರರೆಲ್ಲಾ ಒಬ್ಬರ ಮುಖವನ್ನು ಒಬ್ಬರು ನೋಡುತ್ತಿದ್ದರು. ಆಗ ಅರ್ಜುನನು

ಧೃಷ್ಟದ್ಯುಮ್ನನನ್ನು ನೋಡಿ—ಬ್ರಾಹ್ಮಣನು ಈ ಧನುಸ್ಸಿನಲ್ಲಿ ಹೆದೆಯನ್ನು ಏರಿಸ ಬಹುದೇ? ಎಂದು ಕೇಳಲು; ಧೃಷ್ಟದ್ಯುಮ್ನನು ಬ್ರಾಹ್ಮಣ ಕ್ಷತ್ರಿಯರೊಳಗೆ ಯಾರಾದರೂ ಈ ಧನುಸ್ಸಿನ ಹೆದೆಯನ್ನು ಏರಿಸಿದರೆ ಆತನಿಗೆ ತನ್ನ ತಂಗಿಯನ್ನು ಕೊಡುತ್ತೇನೆ ಅಂದನು. ಆಮೇಲೆ ಅರ್ಜುನನು ಧನುಸ್ಸಿನ ಸಮೀಪಕ್ಕೆ ಬಂದು ಪರ್ವತದೋಪಾದಿಯಲ್ಲಿ ಸ್ಥಿರವಾಗಿ ನಿಂತು ಆ ಧನುಸ್ಸಿಗೆ ಪ್ರದಕ್ಷಿಣ ನಮಸ್ಕಾರಗಳನ್ನು ಮಾಡಿ ಹಸ್ತದಿಂದ ಎತ್ತಿ ನಿಮಿಷಮಾತ್ರದಲ್ಲಿ ಹೆದೆಯನ್ನು ಏರಿಸಿ ಐದು ಬಾಣಗಳನ್ನು ಪ್ರಯೋಗಿಸಲು; ಆ ಬಾಣಗಳು ಯಂತ್ರದ ರಂಧ್ರಮಾರ್ಗದಿಂದ ಹೋಗಿ ಆ ಲಕ್ಷ್ಯಗಳನ್ನು ಭೂಮಿಗೆ ಕೆಡಹಿದುವು. ಆಗ ಅಂತರಿಕ್ಷದಲ್ಲಿ ಜಯ ಜಯಧ್ವನಿಯು ಕೇಳಿಸಿತು. ರಂಗಮಧ್ಯದಲ್ಲಿ ಸಮಸ್ತ ಜನಗಳೂ ಸಂತೋಷದಿಂದ ಕೋಲಾಹಲಧ್ವನಿಗಳನ್ನು ಮಾಡಿದರು. ದೇವತೆಗಳು ಪುಷ್ಪವೃಷ್ಟಿಯನ್ನು ಕರೆದರು ಬ್ರಾಹ್ಮಣರು ಉತ್ತರೀಯಗಳನ್ನು ಮೇಲಕ್ಕೆ ಹಾರಿಸಿ ಕುಣಿದಾಡಿದರು. ಸಕಲ ವಾದ್ಯಗಳೂ ಏಕಕಾಲದಲ್ಲಿ ಮೊಳಗಿದುವು. ಸೂತ ಮಾಗಧ ವಂದಿ ವೈತಾಳಿಕರು ಅರ್ಜುನನನ್ನು ಅನೇಕ ಪ್ರಕಾರವಾಗಿ ಸ್ತುತಿಸಿದರು. ಈ ರೀತಿಯಾಗಿ ಸಮಸ್ತ ಜನರ ಕೋಲಾಹಲಧ್ವನಿಯು ವಿಜೃಂಭಿಸಲು; ಧರ್ಮರಾಜನು ನಕುಲಸಹದೇವರೊಡನೆ ಕೂಡಿ ತಾನಿದ್ದ ಸ್ಥಳಕ್ಕೆ ಹೊರಟು ಹೋದನು. ಪಾಂಚಾಲರಾಜನ ಮಗಳು ಲಕ್ಷ್ಯವನ್ನು ಕೆಡಹಿದ ಇಂದ್ರಸಮಾನನಾದ ಇಂದ್ರಪುತ್ರನನ್ನು ನೋಡಿ ಯಾವಾಗಲೂ ಎಡೆಬಿಡದೆ ಸಾಹಜರ್ಯವನ್ನು ಮಾಡುವಂಥಾವಳ ಹಾಗೆ ತನ್ನ ಪ್ರೀತಿಯಿಂದ ನಗುತ್ತಾ ನಗದೆ ಇರುವವಳ ಹಾಗೆ ಅಭಿನಯಿಸುತ್ತಾ ಕಡೆಗಣ್ಣಿನ ನೋಟದಿಂದಲೇ ನೋಡುತ್ತಾ ಬಿಳುಪಾದ ಪುಷ್ಪ ಮಾಲಿಕೆಯನ್ನು ಕೈಕೊಂಡು ನಸುನಗೆಯೊಡನೆ ಕೂಡಿ ಆತನ ಸಮೀಪಕ್ಕೆ ಹೋಗಿ ವಿಸ್ತಾರವಾದ ವಕ್ಷದಲ್ಲಿ ಅಮೂಲ್ಯವಾದ ಪುಷ್ಪಮಾಲಿಕೆಯನ್ನು ಹಾಕಿ ಶಚೀದೇವಿಯು ದೇವೇಂದ್ರನನ್ನೂ ಸ್ವಾಹಾದೇವಿಯು ಅಗ್ನಿಯನ್ನೂ ಲಕ್ಷ್ಮೀದೇವಿಯು ಮಹಾವಿಷ್ಣುವನ್ನೂ ಸುವರ್ಚಲೆಯು ಸೂರ್ಯನನ್ನೂ ರತಿದೇವಿಯು ಮನ್ಮಥನನ್ನೂ ಪಾರ್ವತಿಯು ಪರಮೇಶ್ವರನನ್ನೂ ವರಿಸಿದ ಹಾಗೆ ವರಿಸಿದಳು. ದ್ರುಪದರಾಜನು ಆ ಅತಿಶಯವನ್ನು ನೋಡಿ ಸಂತೋಷಪಡುತ್ತಾ ತನ್ನ ಸೇನೆಯೊಡನೆ ಕೂಡಿ ಆತನಿಗೆ ಸಹಾಯವನ್ನು ಮಾಡಬೇಕೆಂದೆಣಿಸಿ ರಂಗಮಧ್ಯದಲ್ಲಿ ದ್ರೌಪದಿಯನ್ನು ಕೈಕೊಂಡು ಬ್ರಾಹ್ಮಣರಿಂದ ಪೂಜ್ಯನಾಗಿ ಇರುವ ಅರ್ಜುನನ ಸಂಗಡಲೇ ಹೊರಟು ಹೋದನು.

ತರುವಾಯ ಈ ಪ್ರಕಾರದಲ್ಲಿ ದ್ರುಪದರಾಜನು ಆ ಮಹಾನುಭಾವನಾದ ಬ್ರಾಹ್ಮಣನಿಗೆ ಕನ್ಯೆಯಂ ಕೊಟ್ಟುದನ್ನು ತಿಳಿದು ಸಕಲರಾದ ಅರಸುಗಳೂ ಒಬ್ಬರೊಬ್ಬರು ಮುಖಗಳನ್ನು ನೋಡಿಕೊಳ್ಳುತ್ತಾ—ಅಕಟಕಟಾ! ಈ ನೃಪಾಧಮನು ನಮ್ಮೆಲ್ಲರನ್ನೂ ಕರತರಿಸಿ ಪ್ರತಿಣವನ್ನು ಮಾಡಿಸಿ ನಮ್ಮನ್ನು ತೃಣೀಕರಿಸಿ ಈ ಕನ್ಯಾರತ್ನವನ್ನು ಬ್ರಾಹ್ಮಣನ ಪಾಲು ಮಾಡಬೇಕೆಂಬ ಎಣಿಕೆಯಲ್ಲಿ ಇದ್ದನು ಎಂದು ಈಗ ಗೊತ್ತಾಯಿತು. ಈತನು ವೃದ್ಧನೂ ಗುಣವಂತನೂ ಪೂಜ್ಯನೂ ಆಗಿದ್ದಾನೆಂದು ನಾವು ನಂಬಬಾರದು. ಸಕಲ ರಾಜವಿರೋಧಿಯಾದ ಮತ್ತು ದುರಾತ್ಮನಾದ ಈತನನ್ನು

ಮಗನೊಡನೆ ಕೊಂದರೂ ದೋಷವಿಲ್ಲ. ದೇವಕುಮಾರಕರ ಹಾಗಿರುವ ಅನೇಕ ರಾಜಕುಮಾರಕರು ಬಂದು ನೆರೆದಿರುವಲ್ಲಿ ಈತನ ಮಗಳಿಗೆ ಯೋಗ್ಯನಾದ ಒಬ್ಬ ವರನೂ ಇಲ್ಲದೆ ಹೋದನೇ? ಸ್ವಯಂವರವು ಕ್ಷತ್ರಿಯರಿಗಲ್ಲದೆ ಬ್ರಾಹ್ಮಣರಿಗೆ ಸಲ್ಲದು. ನಮಗೆ ಬ್ರಾಹ್ಮಣರ ಗೊಡವೆ ಏತಕ್ಕೆ! ಅವರು ಅಜ್ಞಾನದಿಂದ ಇಂಥಾ ರಾಜಎರೋಧವನ್ನು ಮಾಡಿದರೂ ಅವರನ್ನು ನಿಗ್ರಹಿಸುವುದು ನಮಗೆ ಧರ್ಮವಲ್ಲ. ನಮಗಿರುವ ಪುತ್ರ ಮಿತ್ರ ಧನಗಳೂ ರಾಜ್ಯವೂ ಪ್ರಾಣಗಳೂ ಬ್ರಾಹ್ಮಣರ ಪೂಜಾ ನಿಮಿತ್ತವಾದುದರಿಂದ ಅವರಿಗೆ ಹಿಂಸೆಯನ್ನು ಮಾಡಬಾರದು. ನಮಗೆ ಅವಮಾನಕ್ಕೆ ಕಾರಣವಾದ ಈ ಕನ್ಯಕೆಯ ತಂದೆಯನ್ನು ಎಳ್ಳುಜಳ್ಳಷ್ಟಾಗಿ ಛೇದಿಸಿ ಈ ಹೊತ್ತು ಮೊದಲುಗೊಂಡು ಯಾರಾದರೂ ಅರಸುಗಳಿಗೆ ಅವಮಾನಕರಗಳಾದ ಕಾರ್ಯಗಳನ್ನು ಅಜ್ಞಾನದಿಂದಲಾದರೂ ಮಾಡದೆ ಇರುವ ಹಾಗೆ ಮಾಡಬೇಕು ಎಂದು ತಮ್ಮ ತಮ್ಮೊಳಗೆ ನಿಶ್ಚಯಿಸಿ ದ್ರುಪದರಾಜನನ್ನು ಸಂಹರಿಸಬೇಕೆಂದು ಹಿಡಿಯುವುದಕ್ಕೆ ಹೋಗಲು; ದ್ರುಪದನು ಭಯದಿಂದ—ಕಾರ್ಪಣ್ಯದಿಂದಾದರೂ ಪ್ರಾಣರಕ್ಷಣೆಯನ್ನು ಮಾಡಿಕೊಂಡು ಕಲಹವಿಲ್ಲದೆ ಇರಬೇಕೆಂದು ಯೋಚಿಸಿ ಸುಮ್ಮನಿರಲು; ಇದನ್ನು ನೋಡಿ ಭೀಮಾರ್ಜುನರಿಬ್ಬರೂ ಮದದಾನೆಗಳೋಪಾದಿಯಲ್ಲಿ ನಿಂತು ನಾನಾ ಪ್ರಕಾರವಾದ ಆಯುಧಗಳನ್ನೂ ಕೈತೊಡವುಗಳನ್ನೂ ಕವಚಗಳನ್ನೂ ಧರಿಸಿ ತಮ್ಮ ಮೇಲೆ ಬೀಳುವಂಧ ರಾಜಕುಮಾರಕರ ಮೇಲೆ ಕಾಣಿಸಿಕೊಂಡರು ಭೀಮಸೇನನು ವಿಚಿತ್ರವಾದ ಸಾಹಸದಿಂದ ತನ್ನ ಭುಜಬಲವನ್ನು ತೋರಿಸುತ್ತಾ ಅತಿವೇಗದಿಂದ ಓಂದು ಮಹಾ ವೃಕ್ಷವನ್ನು ಕಿತ್ತುಕೊಂಡು ಮದದಾನೆಯಂತೆಯೂ ಯಮನಂತೆಯೂ ಬಂದು ಅರ್ಜುನನ ಸಮೀಪದಲ್ಲಿ ನಿಂತನು.

ಆ ಸಮಯದಲ್ಲಿ ಅಲ್ಲಿರುವ ಬ್ರಾಹ್ಮಣೋತ್ತಮರು ಕೃಷ್ಣಾಜಿನಗಳನ್ನು ಹಾರಿಸುತ್ತ ಕೈಯ್ಯಲ್ಲಿರುವ ಜಲಪಾತ್ರೆಗಳನ್ನು ಎತ್ತಿ ಎತ್ತಿ ಹಾಕುತ್ತಾ ಅರ್ಜುನನಿಗೆ—ಎಲೈ, ಬ್ರಾಹ್ಮಣಕುಮಾರನೇ! ನೀನು ಮನಸ್ಸಿನಲ್ಲಿರುವ ಭಯವನ್ನು ಬಿಡು. ಸಮಯ ಬಂದಾಗ ನಾವು ನಿನಗೆ ಸಹಾಯವಾಗಿ ಒಂದು ಶತ್ರುಗಳನ್ನು ಜಯಿಸುತ್ತೇವೆ ಎನಲು; ಅರ್ಜುನನು ನಸುನಗುತಾ—ನೀವು ಯುದ್ಧಕ್ಕೆ ಬರಬೇಡಿರಿ ಪಾರ್ಶ್ವಗಳಲ್ಲಿ ಇದ್ದು ಕೊಂಡು ನೋಡುತ್ತಿರಿ! ನನ್ನ ಶರಪರಂಪರೆಗಳಿಂದ ಈ ಶತ್ರುಗಳ ಸಮೂಹವನ್ನು ಗರುಡ ಮಂತ್ರಗಳಿಂದ ಸರ್ಪಗಳನ್ನು ತಡೆಯುವ ಮೇರೆಗೆ ನಾನೊಬ್ಬನೇ ತಡೆಯುತ್ತೇನೆ ಎಂದು ಹೇಳಿ ಆ ಲಕ್ಷ್ಯವನ್ನು ಕೆಡಹುವುದಕ್ಕೆ ತಂದಿದ್ದ ಮಹಾ ಧನುಸ್ಸನ್ನೇ ಕೈಗೆ ತೆಗೆದುಕೊಂಡು ಅದಕ್ಕೆ ಹೆದೆಯನ್ನು ಏರಿಸಿ ಭೀಮಸೊಡನೆ ಕೂಡಿ ಧೈರ್ಯಗೊಂಡು ಪರ್ವತದ ಹಾಗೆ ಚಲಿಸದೆ ನಿಂತು ಕೋಪಾವೇಶದಿಂದ ಯುದ್ಧಕ್ಕೆ ಬಂದಿರುವ ಕರ್ಣನೇ ಮೊದಲಾದ ಮಹಾ ಯೋಧಿಗಳ ಎದುರಿನಲ್ಲಿ ಬಂದು ನಿಂತನು. ಆ ರಾಜಕುಮಾರಕರು ಯುದ್ಧ ಮುಖದಲ್ಲಿ ಜಯಿಸಬೇಕೆಂದು ಕಾಣಿಸಿಕೊಂಡವನು ಬ್ರಾಹ್ಮಣನಾದರೂ ಕೊಲ್ಲುವುದು ಯುಕ್ತವೆಂದು ನಿಶ್ಚಯಿಸಿ ಯುದ್ಧಸನ್ನದ್ಧರಾಗಿ ಬಂದು ನಿಂತರು. ಆಗ ಸೂರ್ಯನ ಮಗನಾದ ಕರ್ಣನು ಹೆಣ್ಣಾನೆಯ ನಿಮಿತ್ತವಾಗಿ

ಮತ್ತೊಂದಾನೆಯೊಡನೆ ಹೋರುವ ಮದದಾನೆಯ ಜಂದದಿಂದ ಅರ್ಜುನನೊಡನೆ ಹೋರಿದನು. ಮದ್ರ ದೇಶಾಧಿಪತಿಯಾದ ಮತ್ತು ಮಹಾ ಬಲಶಾಲಿಯಾದ ಶಲ್ಯನು ಭೀಮನೊಡನೆ ಯುದ್ಧವನ್ನು ಮಾಡುತ್ತಿದ್ದನು ದುರ್ಯೋಧನನೇ ಮೊದಲಾದ ಅರ ಸುಗಳು ಮಿಕ್ಕಾದ ಬ್ರಾಹ್ಮಣರೊಡನೆ ಕೂಡಿ ಮೆಲ್ಲಮೆಲ್ಲನೆ ವಿರೋಧದಿಂದ ಮೃದು ವಾದ ಬಾಣಗಳನ್ನು ಪ್ರಯೋಗಿಸುತ್ತಿದ್ದರು. ಅರ್ಜುನನು ತನ್ನ ಮೇಲೆ ಕಾಣಿಸಿಕೊಂಡ ಕರ್ಣನ ಮೇಲೆ ಮೂರು ಬಾಣಗಳನ್ನು ಪ್ರಯೋಗಿಸಲು ಅತಿತೀಕ್ಷ್ಣವಾದ ಆತನ ಬಾಣಗಳ ಪೆಟ್ಟುಗಳಿಂದ ಕರ್ಣನು ಮೂರ್ಛೆಯನ್ನು ಹೊಂದಿ ಅತಿ ಪ್ರಯತ್ನದಿಂದ ಎಚ್ಚತ್ತು ತಿರಿಗಿ ಆತನ ಮೇಲೆ ಕಾಣಿಸಿಕೊಂಡನು.

ಹೀಗೆ ಮಹಾ ವೀರರಿಬ್ಬರೂ ಪರಸ್ಪರಜಯಾಭಿಲಾಷಿಗಳಾಗಿ ಅಪರಿಮಿತ ಪರಾ ಕ್ರಮವಿಜೃಂಭಣದಿಂದ—ನೀನು ತೋರಿಸುವಂಥಾ ಪರಾಕ್ರಮಕ್ಕೂ ನಾನು ತೋರಿ ಸುವಂಥಾ ಪರಾಕ್ರಮಕ್ಕೂ ವ್ಯತ್ಯಾಸವನ್ನು ನೋಡು ಎಂದು ಶೂರರಾಡುವ ಮಾತನ್ನು ಆಡುತ್ತಾ ಹೋರುತ್ತಿರುವ ಸಮಯದಲ್ಲಿ ಕರ್ಣನು ಅರ್ಜುನನ ಅಸದೃಶ ಭುಜಬಲವ ನ್ನು ನೋಡಿ ಕೋಪಾಟೋಪವಿಜೃಂಭಿತನಾಗಿ ವೇಗವುಳ್ಳಂಥ ಆತನ ಬಾಣಗಳಿಗೆ ಸ್ವಲ್ಪ ವಾದರೂ ಭಯಪಡದೆ ಸೈನ್ಯವು ಸಂತೋಷಪಡುವಂತೆ ಸಿಂಹನಾದವನ್ನು ಮಾಡಿ— ಎಲೈ, ಬ್ರಾಹ್ಮಣೋತ್ತಮನೇ ! ನಿನ್ನ ಭುಜಬಲಕ್ಕೂ ಧೈರ್ಯಕ್ಕೂ ನಿನ್ನ ಶಸ್ತ್ರಾಸ್ತ್ರ ಕೌಶಲಕ್ಕೂ ಮೆಚ್ಚಿದೆನು. ನೀನು ಮೂರ್ತಿಮತ್ತಾಗಿ ಪ್ರತ್ಯಕ್ಷವಾದ ಧನುರ್ವೇದವೋ ಪರಶುರಾಮನೋ ? ಇಂದ್ರನೋ ? ಉಪೇಂದ್ರನೋ ? ತಿಳಿಯಲಿಲ್ಲ. ಇವರೊಳಗೆ ಯಾರೋ ಒಬ್ಬನು ತನ್ನ ದಿವ್ಯರೂಪವನ್ನು ಮರೆಮಾಡಿಕೊಂಡು ಬ್ರಾಹ್ಮಣರೂಪದಿಂದ ಬಂದಿರುವನಾಗಿ ನಿಶ್ಚಯಿಸಿದ್ದೇನೆ. ನಾನು ಕೋಪಿಸಿಕೊಂಡು ಯುದ್ಧದಲ್ಲಿ ನಿಂತರೆ ದೇವೇಂದ್ರನೂ ಆತನ ಮಗನಾದ ಅರ್ಜುನನೂ ಹೊರತಾಗಿ ಮತ್ತೊಬ್ಬರೂ ನನ್ನ ಎದುರಿಗೆ ನಿಲ್ಲಲಾರರು. ಪಾಂಡವರು ಆ ಹೊತ್ತೇ ಅರಗಿನ ಮನೆಯಲ್ಲಿ ಬೆಂದುಹೋ ದರು. ನೀನು ಪಿನಾಕಪಾಣಿಯಾದ ಪರಮೇಶ್ವರನೋ ಯಾರೋ ತಿಳಿಸು. ನಾನು ಸಕಲ ಧನುರ್ಧರರೊಳಗೆ ಶ್ರೇಷ್ಠನಾದ ಕರ್ಣನು. ಧನುರ್ವೇದದಲ್ಲಿಯೂ ಬ್ರಹ್ಮಾಸ್ತ್ರ ಪ್ರಯೋಗದಲ್ಲಿಯೂ ಸಹ ಗುರುವಿನ ಉಪದೇಶ ಪ್ರಭಾವದಿಂದ ಶಿಕ್ಷಿತನಾಗಿದ್ದರೂ ಬಾಹುಬಲವಿಜೃಂಭಿತನಾದ ನಿನ್ನಲ್ಲಿ ನನ್ನ ಬಾಹುಬಲವನ್ನು ಕಾಣಿಸುವುದಿಲ್ಲ ಎಂದು ಅರ್ಜುನನನ್ನು ಕೆಣಕಲಾರದೆ ನುಡಿಯಲು ಅರ್ಜುನನು ಕರ್ಣನನ್ನು ನೋಡಿ— ಎಲೈ, ಸೂತನಂದನನೇ ! ನಾನು ರೂಪನ್ನು ಹೊಂದಿ ಬಂದಿರುವ ಧನುರ್ವೇದವೂ ಪ್ರತಾ ಪಶಾಲಿಯಾದ ಪರಶುರಾಮನೂ ಮಹೇಶ್ವರನೂ ಇಂದ್ರನೂ ಅಲ್ಲ. ಗುರುವಿನ ಉಪ ದೇಶದಿಂದ ಬಹ್ಮಾಸ್ತ್ರದಲ್ಲಿ ಸಮರ್ಥನಾದ ದ್ವಿಜನು. ಈ ಮಹಾ ಯುದ್ಧದಲ್ಲಿ ನಿನ್ನನ್ನು ಜಯಿಸುವುದಕ್ಕೆ ಎಣಿಸಿ ಇದ್ದೇನೆ. ನೀನು ಪ್ರಾಣಗಳನ್ನು ತಪ್ಪಿಸಿಕೊಂಡು ಎಲ್ಲಿಗಾದರೂ ಹೊರಟುಹೋಗು. ನಾನು ನಿನ್ನನ್ನು ಜೀವಸಹಿತವಾಗಿ ಬಿಡುವುದಿಲ್ಲ. ಇಲ್ಲದಿದ್ದರೆ ನಾನು ಪರಾಜಿತನಾದೆನು ಎಂದು ಹೇಳಿ ಸುಖವಾಗಿ ಹೋಗು ಎಂದು ನುಡಿದು ಕರ್ಣನ ಧನುಸ್ಸನ್ನು ಖಂಡಿಸಿದನು. ಆ ಬಳಿಕ ಕರ್ಣನು ಮತ್ತೊಂದು ಧನುಸ್ಸನ್ನು ತೆಗೆದು

ಕೊಂಡು ಯುದ್ಧಕ್ಕೆ ಬರಲು ಬಾಣಸಹಿತವಾದ ಆ ಧನುಸ್ಸನ್ನು ಪುನಃ ಖಂಡಿಸಿ ಬಹು ಬಾಣಗಳನ್ನು ಆತನ ಮೇಲೆ ಪ್ರಯೋಗಿಸಲು ಕರ್ಣನು ಆ ಬಾಣಗಳಿಂದ ಪೆಟ್ಟುತಿಂದು ಓಡಿಹೋಗಿ ಮುಹೂರ್ತ ಮಾತ್ರ ವಿಶ್ರಮಿಸಿಕೊಂಡಿದ್ದು ತಿರಿಗಿ ಧನುಸ್ಸನ್ನೂ ಬಾಣಗಳನ್ನೂ ತೆಗೆದುಕೊಂಡು ಅರ್ಜುನನ ಸಮೀಪಕ್ಕೆ ಬಂದು ಅನೇಕವಾದ ಬಾಣವೃಷ್ಟಿಯನ್ನು ಸುರಿಸಲು ಪುನಃ ಅರ್ಜುನನು ಮತ್ತೊಂದು ಬಾಣದಿಂದ ಆತನ ಧನುಸ್ಸನ್ನು ಖಂಡಿಸಿದನು. ಆಗ ಆತನು—ಬ್ರಹ್ಮತೇಜಸ್ಸನ್ನು ಗೆಲ್ಲುವುದಕ್ಕೆ ಎಂಥವನಿಗೂ ಶಕ್ಯವಲ್ಲ ಎಂದು ಯುದ್ಧವನ್ನು ಬಿಟ್ಟು ಓಡಿಹೋದನು.

ಇತ್ತಲಾ ಶಲ್ಯನೂ ಭೀಮಸೇನನೂ ಒಬ್ಬರಿಗೊಬ್ಬರು ಕಾಣಿಸಿಕೊಂಡು ಮದಿಸಿದ ಆನೆಗಳ ಹಾಗೆ ಒಬ್ಬನ ಮೇಲೆ ಒಬ್ಬನು ಬಿದ್ದು ಮುಷ್ಟಿಪ್ರಹಾರಗಳಿಂದಲೂ ಮೊಣಕಾಲುಗಳ ಪೆಟ್ಟುಗಳಿಂದಲೂ ನೋಯಿಸುತ್ತಾ ಹೋಗುತ್ತಿರುವ ಸಮಯದಲ್ಲಿ ಭೀಮಸೇನನು ತನ್ನ ಎರಡು ಭುಜಗಳಿಂದಲೂ ಶಲ್ಯನನ್ನು ಬಿಗಿದು ಎತ್ತಿ ಮೇಲಕ್ಕೆ ಹಾರಿಸಿ ಭೂಮಿಯಲ್ಲಿ ಕೆಡಹಿದನು. ಆಗ ಅಲ್ಲಿ ಇರುವ ಬ್ರಾಹ್ಮಣರೆಲ್ಲರೂ ಅಟ್ಟಹಾಸಗಳನ್ನು ಮಾಡಿದರು. ಅರ್ಜುನನಿಂದ ಕರ್ಣನೂ ಭೀಮನಿಂದ ಶಲ್ಯನೂ ಪರಾಜಿತರಾಗಿ ಪಲಾಯಮಾನರಾಗಲು ಸಕಲರಾದ ಅರಸುಗಳೂ ಅದನ್ನು ನೋಡಿ—ಈ ಬ್ರಾಹ್ಮಣ ಕುಮಾರಕರು ಇಬ್ಬರೂ ಯಾರೋ? ಎಲ್ಲಿ ಹುಟ್ಟಿದರೋ? ತಿಳಿಯಬೇಕು. ಲೋಕದಲ್ಲಿ ಪರಶುರಾಮನು ದ್ರೋಣಾಚಾರ್ಯನು ಕೃಪಾಚಾರ್ಯನು ದೇವಕಿಯ ಮಗನಾದ ಕೃಷ್ಣನು ಕುಂತಿಯ ಮಗನಾದ ಅರ್ಜುನನು ಇವರೇ ಹೊರತಾಗಿ ಕರ್ಣನ ಮುಂದೆ ನಿಲ್ಲುವಂಥಾವರು ಯಾರಾದರೂ ಉಂಟೇ? ಮದ್ರದೇಶಾಧಿಪತಿಯಾದ ಶಲ್ಯನನ್ನು ಬಲರಾಮ ಭೀಮಸೇನರು ಹೊರತಾಗಿ ಮತ್ತೊಬ್ಬನು ಜಯಿಸುವುದಕ್ಕೆ ಸಮರ್ಥನೇ? ಅದಂದ ಇವರ ಸ್ವರೂಪವನ್ನು ತಿಳಿದ ಮೇಲೆ ಯುದ್ಧವನ್ನು ಮಾಡುವಣ ಎಂದು ಒಬ್ಬರೊಬ್ಬರು ಮಾತಾಡಿಕೊಳ್ಳುತ್ತಿರುವ ಸಮಯದಲ್ಲಿ ವಾಸುದೇವನು—ಧರ್ಮಮಾರ್ಗವನ್ನು ತಪ್ಪದೆ ಕನ್ಯಾಪರಿಗ್ರಹವನ್ನು ಮಾಡಿದ ಇವರೊಡನೆ ನಿಮಗೆ ಕಲಹವು ಯಾಕೆಂದು ನಿಲ್ಲಿಸಿಬಿಡಲು ಅವರು ತಮ್ಮ ತಮ್ಮ ಸ್ಥಾನಗಳಿಗೆ ಹೊರಟುಹೋದರು.

ನೋಡುವುದಕ್ಕೆ ಬಂದಿದ್ದ ಜನರು—ಸ್ವಯಂವರದ ರಂಗಸ್ಥಳದಲ್ಲಿ ಎಲ್ಲಿ ನೋಡಿದರೂ ಬ್ರಾಹ್ಮಣರೇ ಹೆಚ್ಚಿದರು ಎಂತಲೂ ಪಾಂಚಾಲರಾಜನ ಮಗಳು ಬ್ರಾಹ್ಮಣ ಕುಮಾರಕನನ್ನೇ ವರಿಸಿದಳು ಎಂತಲೂ ನಾನಾ ಪ್ರಕಾರವಾಗಿ ನುಡಿಯುತ್ತಾ ತಮ್ಮ ತಮ್ಮ ಮನೆಗಳಿಗೆ ಹೋದರು. ಆ ಬಳಿಕ ಭೀಮಾರ್ಜುನರು ಕೃಷ್ಣಾಜಿನೋತ್ತರೀಯಗಳೊಡನೆ ಬ್ರಾಹ್ಮಣಶ್ರೇಷ್ಠರು ತಮ್ಮನ್ನು ಸುತ್ತಿಕೊಂಡು ಬರಲು ಜನಸಮೂಹದ ಮಧ್ಯದಿಂದ ಹೊರಟು ಗಾಯವಡೆದ ಶರೀರವುಳ್ಳವರಾಗಿ ಆ ದ್ರುಪದರಾಜನ ಮಗಳನ್ನು ಕರೆದುಕೊಂಡು ಕುಂಬಾರನ ಮನೆಗೆ ಬರುತ್ತಿದ್ದರು. ಅಲ್ಲಿ ಕುಂತೀದೇವಿಯು ಭಿಕ್ಷಾಸಮಯಕ್ಕೆ ತನ್ನ ಮಕ್ಕಳು ಬಾರದೆ ಇರುವುದರಿಂದ ಮನಸ್ಸಿನಲ್ಲಿ ವೈರಾನುಬಂಧದಿಂದ ಕೂಡಿರುವ ಧೃತರಾಷ್ಟ್ರನ ಮಕ್ಕಳಿಂದ ಪ್ರೇರಿತರಾದ ಮಾಯಾಬಲಸಮೇತರಾದ ರಾಕ್ಷಸರ ದೆಸೆಯಿಂದ ನನ್ನ ಮಕ್ಕಳು ಯಾವ ವಿಪತ್ತನ್ನು ಹೊಂದಿದರೋ?

ಎಂದು ಪುತ್ರವಾತ್ಸಲ್ಯದಿಂದ ಚಿಂತಿಸಿರುವ ಸಮಯದಲ್ಲಿ ಮೂರನೆಯ ಜಾವದಲ್ಲಿ ನೀಘಮಂಡಲದಿಂದ ಸುತ್ತಲ್ಪಟ್ಟ ಸೂರ್ಯನೋಪಾದಿಯಲ್ಲಿ ಬ್ರಾಹ್ಮಣರಿಂದ ಬಳಸಲ್ಪಟ್ಟ ಅರ್ಜುನನು ಭೀಮನೊಡನೆ ಕೂಡಿ ಭಾರ್ಗವನೆಂಬ ಕುಂಬಾರನ ಮನೆಗೆ ಬಂದು —ನಮ್ಮ ಸಾಮರ್ಥ್ಯದಿಂದ ಇದೊಂದು ಭಿಕ್ಷವನ್ನು ತಂದೆವು ಎಂದು ತಿಳಿಸಲು ಆ ಕುಂತಿಯು ದ್ರೌಪದೀ ಸಹಿತರಾದ ಆ ಕುಮಾರಕರನ್ನು ನೋಡುವುದಕ್ಕಿಂತ ಮುಂಚೆ —ಎಲೈ, ಮಕ್ಕಳಿರಾ! ಅದನ್ನು ನೀವೆಲ್ಲರೂ ಅನುಭವಿಸಿರೆಂದು ಪ್ರಮಾದವಶದಿಂದ ನುಡಿದು ಆ ಬಳಿಕ ಕನ್ಯಾರತ್ನವನ್ನೂ ಕುಮಾರಕರನ್ನೂ ನೋಡಿ—ಅಕಟಕಟಾ? ಅನುಚಿತವಾಗಿ ನುಡಿದೆನು! ಎಂದು ಧರ್ಮ ಭಂಗಕ್ಕೆ ಭಯಪಡುತ್ತಾ ನಾಚಿಕೆಯಿಂದ ತಲೆಯನ್ನು ಬಗ್ಗಿಸಿಕೊಂಡಿರುವ ದ್ರೌಪದಿಯ ಹಸ್ತವನ್ನು ಹಿಡಿದು ಯುಧಿಷ್ಠಿರನ ಸಮೀಪಕ್ಕೆ ಕರಕೊಂಡು ಹೋಗಿ ಈ ದ್ರುಪದರಾಜನ ಮಗಳನ್ನು ಕರತಂದು ನಿನ್ನ ಒಡಹುಟ್ಟಿದ ಭೀಮಾರ್ಜುನರು—ಭಿಕ್ಷೆಯನ್ನು ತಂದೆವು ಎಂದು ನಸ್ಸೊಡನೆ ಹೇಳಿದರು. ನಾನು ನೀವೆಲ್ಲರೂ ಅನುಭವಿಸಿರಿ ಎಂದು ಅವಿಚಾರವಶದಿಂದ ನುಡಿದೆನು. ಈ ರಾಯನ ಮಗಳಿಗೆ ಅಧರ್ಮ ಬಾರದೆ ಇರುವ ಹಾಗೂ ನನ್ನ ವಾಕ್ಯವು ಸಟೆಯಾಗದೆ ಇರುವ ಹಾಗೂ ಉಪಾಯವನ್ನು ತಿಳಿಸೆನಲು ಆಗ ಧರ್ಮರಾಜನು ಮುಹೂರ್ತ ಮಾತ್ರ ಯೋಚಿಸಿ ಕುಂತೀದೇವಿಗೆ ಸಮಾಧಾನವನ್ನು ಮಾಡಿ ಅರ್ಜುನನನ್ನು ನೋಡಿ—ನೀನು ಭುಜಬಲದಿಂದ ಈ ರಾಜಕನ್ಯಕೆಯನ್ನು ಗೆದ್ದು ತಂದೆ. ಆದುದರಿಂದ ಯಜ್ಞೇಶ್ವರನ ಸಮೀಪದಲ್ಲಿ ಶಾಸ್ತ್ರೋಕ್ತಪ್ರಕಾರವಾಗಿ ಇವಳನ್ನು ಮದುವೆ ಮಾಡಿಕೋ ಎನಲು ಅರ್ಜುನನು ಎಲೈ, ಮಹಾನುಭಾವನೇ! ನನ್ನನ್ನು ಅಪ್ರಯೋಜಕನನ್ನು ಮಾಡಬೇಡ. ಈ ಕಾರ್ಯವು ಯಾರಿಗೂ ಸಮ್ಮತವಾಗಲಾರದು. ಮೊದಲು ನೀನು ಆ ಬಳಿಕ ಭೀಮನೂ ಆ ಮೇಲೆ ನಾನೂ ಅನಂತರದಲ್ಲಿ ನಕುಲಸಹದೇವರೂ ಮದುವೆಯಾಗುವುದು ಯುಕ್ತವು. ಭೀಮನೂ ನಾನೂ ನಕುಲಸಹದೇವರೂ ಪಾಂಚಾಲ ರಾಜನ ಮಗಳೂ ಈ ನಾವೆಲ್ಲರೂ ನಿನ್ನ ಅಧೀನರಾದುದರಿಂದ ಧರ್ಮಯುಕ್ತವಾಗಿಯೂ ಕೀರ್ತಿಕರವಾಗಿಯೂ ದ್ರುಪದರಾಜನಿಗೆ ಸಮ್ಮತವಾದ ಕಾರ್ಯವನ್ನು ಕಟ್ಟುಮಾಡಬೇಕು ಎಂದು ನುಡಿಯಲು ಯುಧಿಷ್ಠಿರನು ತನ್ನ ಮನಸ್ಸಿನಲ್ಲಿ—ನಾನು ಮೊದಲಾದ ಪಂಚಪಾಂಡವರಲ್ಲಿಯೂ ಪಾಂಚಾಲರಾಜನಿಗೆ ಅನುರಾಗವು ಹುಟ್ಟಿರುವುದರಿಂದಲೂ ಸಕಲ ಲೋಕಾಶ್ಚರ್ಯಕರವಾಗಿ ಬ್ರಹ್ಮದೇವನಿಂದ ನಿರ್ಮಿತವಾಗಿರುವ ಈ ಪಾಂಚಾಲ ರಾಜನಮಗಳ ರೂಪಾತಿಶಯಕ್ಕೆ ನಮ್ಮೆಲ್ಲರ ಮನಸ್ಸುಗಳು ಕರಗಿರುವುದರಿಂದಲೂ ವ್ಯಾಸನವಜನವನ್ನೂ ಸ್ಮರಿಸಿ ತಮ್ಮಂದಿರಿಗೆ ಪರಸ್ಪರ ದ್ವೇಷಗಳು ಹುಟ್ಟಬಾರದೆಂದು ಎಣಿಸಿ ಭೀಮಸೇನಾದಿಗಳನ್ನು ನೋಡಿ—ನಮ್ಮ ಐದು ಮಂದಿಗೂ ಈ ದ್ರೌಪದಿಯು ಪತ್ನಿಯಾಗತಕ್ಕವಳು ಅಂದನು.

ಆ ವಾಕ್ಯವನ್ನು ಕೇಳಿ ತಮ್ಮಂದಿರೆಲ್ಲರೂ ಆ ಅರ್ಥವನ್ನು ಕುರಿತು ತಮ್ಮ ಮನಸ್ಸಿನಲ್ಲಿ ಆಲೋಚಿಸುತ್ತಿರುವಾಗ ಯದುಶ್ರೇಷ್ಠನಾದ ವಾಸುದೇವನು ಬಲರಾಮಸಹಿತನಾಗಿ ಆ ಕುಂಬಾರನ ಮನೆಗೆ ಬಂದು ಏಜಾನುಭಾಹುವಾಗಿ ತಮ್ಮಂದಿರೊಡನೆ ಕೂಡಿ

ರುವ ಧರ್ಮರಾಜನ ಸಮೀಪಕ್ಕೆ ಹೋಗಿ—ನಾನು ವಾಸುದೇವನು ಎಂದು ಹೇಳಿ ಆತನ ಪಾದಗಳಿಗೆ ನಮಸ್ಕಾರವನ್ನು ಮಾಡಿದನು. ಆ ಬಳಿಕ ಬಲರಾಮನೂ ಹಾಗೆಯೇ ನಮಸ್ಕರಿಸಿದನು. ತರುವಾಯ ತನ್ನ ಸೋದರತ್ತೆಯಾದ ಕುಂತೀದೇವಿಯ ಪಾದಗಳಿಗೆ ರಾಮಕೃಷ್ಣರಿಬ್ಬರೂ ನಮಸ್ಕರಿಸಿದರು. ಧರ್ಮರಾಜನು ಕೃಷ್ಣಸ್ವಾಮಿಯನ್ನು ನೋಡಿ ಕುಶಲ ಪ್ರಶ್ನೆಯನ್ನು ಮಾಡಿ—ಎಲೈ, ಕೃಷ್ಣಸ್ವಾಮಿಯೇ! ನಾವು ಹೀಗೆ ಗೋಪ್ಯವಾಗಿರುವುದು ನಿನಗೆ ಹೇಗೆ ತಿಳಿಯಿತು? ಎನಲು ಕೃಷ್ಣಸ್ವಾಮಿಯು ನಸುನಗುತ್ತಾ—ಯಜ್ಞೇಶ್ವರನು ಎಷ್ಟು ಮರೆಯಾಗಿದ್ದರೂ ತೇಜೋವಿಶೇಷದಿಂದ ಹೇಗೆ ತಾನೇ ಕಾಣಲ್ಪಡದೆ ಹೋಗುವನು? ಆ ಲಕ್ಷ್ಯವನ್ನು ಭೇದಿಸುವುದಕ್ಕೆ ನಿಮಗೆ ಹೊರತಾಗಿ ಮಿಕ್ಕಾದ ಜನರಿಗೆ ಶಕ್ಯವೇ? ದೈವವಶದಿಂದ ಶತ್ರುಸಂಹಾರಕರಾದ ನೀವು ಅರಗಿನ ಮನೆಯ ದಹನದ ದೆಸೆಯಿಂದ ತಪ್ಪಿಸಿಕೊಂಡು ಬಂದಿರಿ. ಪುತ್ರಾಮಾತ್ಯಸಹಿತನಾಗಿ ಧೃತರಾಷ್ಟ್ರನು ತನ್ನ ಮನೋರಥವನ್ನು ಪಡೆಯಲಾರದೆ ಹೋದನು. ನಮ್ಮ ಮನಸ್ಸಿನಲ್ಲಿ ಎಣಿಸಿದ ಪ್ರಕಾರ ನಿಮಗೆ ಶುಭಗಳು ಆಗುತ್ತಿವೆ ಇಲ್ಲಿಂದ ಮುಂದೆ ಪ್ರವೃದ್ಧನಾದ ಯಜ್ಞೇಶ್ವರನೋಪಾದಿಯಲ್ಲಿ ವೃದ್ಧಿಯನ್ನು ಹೊಂದುತ್ತೀರಿ. ಇಲ್ಲಿ ಕೂಡಿರುವ ಅರಸುಗಳು ನಿಮ್ಮನ್ನು ಅರಿಯದ ರೀತಿಗೆ ನಮ್ಮ ಪಾಳಯಕ್ಕೆ ಹೋಗಿ ಬರುತ್ತೇವೆ ಎಂದು ಅವರ ಅಪ್ಪಣೆಯನ್ನು ತೆಗೆದುಕೊಂಡು ತಮ್ಮ ಪಾಳಯಕ್ಕೆ ಹೊರಟುಹೋದರು.

ಅನಂತರದಲ್ಲಿ ಪಾಂಚಾಲರಾಜನ ಮಗನಾದ ಧೃಷ್ಟದ್ಯುಮ್ನನು ಇವರ ನಿಶ್ಚಯವನ್ನು ತಿಳಿಯಬೇಕೆಂದು ಇವರಿಳಿದಿರುವ ಕುಂಬಾರನ ಮನೆಯ ಸುತ್ತಲೂ ಪಾಂಡವರಿಗೆ ತಿಳಿಯದೆ ಇರುವ ಹಾಗೆ ಬೇಹಿನವರನ್ನು ಇಟ್ಟು ತಾನೂ ಸಮೀಪದಲ್ಲಿ ಇದ್ದನು. ಆ ವೇಳೆಯಲ್ಲಿ ಭೀಮಸೇನ ಮೊದಲಾದ ನಾಲ್ವರೂ ಭಿಕ್ಷಾನ್ನವನ್ನು ಬೇಡಿ ತಂದು ಯುಧಿಷ್ಠಿರನ ಮುಂದೆ ಇರಿಸಿದರು. ಆಗ ಕುಂತೀದೇವಿಯು ದ್ರೌಪದಿಯನ್ನು ನೋಡಿ—ಅದರಲ್ಲಿ ಮೊದಲು ಭಾಗವನ್ನು ವೈಶ್ವದೇವ ಬಲಿಹರಣಕ್ಕೆ ಕೊಡು. ಆ ಮೇಲೆ ಒಂದು ಭಾಗವನ್ನು ಬ್ರಾಹ್ಮಣರಿಗೆ ಕೊಡು. ಮತ್ತೊಂದುಭಾಗವನ್ನು ಭಿಕ್ಷಾರ್ಥವಾಗಿ ಬಂದವರಿಗೆ ಕೊಡು ಮಿಕ್ಕ ಅನ್ನವನ್ನು ಎರಡು ಭಾಗವಂ ಮಾಡಿ ಅದರಲ್ಲಿ ಒಂದು ಭಾಗವನ್ನು ಆರು ಭಾಗಗಳಾಗಿ ಮಾಡಿ ನಮಗಿಬ್ಬರಿಗೂ ಎರಡು ಭಾಗಗಳನ್ನೂ ಇರಿಸು. ಉಳಿದ ನಾಲ್ಕುಭಾಗಗಳನ್ನು ನಾಲ್ಕು ಮಂದಿಗೂ ಕೊಡು. ಮಿಕ್ಕ ಅರ್ಧ ಭಾಗವನ್ನು ಭೀಮನಿಗೆ ಕೊಡು ಯಾಕಂದರೆ ಈತನು ವೃಷಭ ಸಿಂಹ ಗಂಭೀರ ಗಮನನೂ ನವಯೌವನ ವಿಜೃಂಭಿತನೂ ಮಹಾ ವೀರನೂ ಸ್ಥೂಲಶರೀರನೂ ಅಧಿಕಭೋಜನ ಪ್ರಿಯನೂ ಆಗಿದ್ದಾನೆ ಎಂದು ತಿಳಿಸಲು ಆ ರಾಜಪುತ್ರಿಯು ಸ್ವಲ್ಪವಾದರೂ ತನ್ನ ಮನಸ್ಸಿನಲ್ಲಿ ಭಯಪಡದೆ ತನ್ನ ಅತ್ತೆ ಹೇಳಿದ ಪ್ರಕಾರ ಅನ್ನವನ್ನು ಪಾಲುಮಾಡಿ ಕೊಡಲು ಅವರೆಲ್ಲರೂ ಸಮುಚಿತ ಪ್ರಕಾರದಿಂದ ಭೋಜನವನ್ನು ಮಾಡಿದರು. ಆ ಬಳಿಕ ಸಹದೇವನು ಅವರಿಗೆ ಹುಲ್ಲಿನಿಂದ ಹಾಸಿಕೆಯನ್ನು ಮಾಡಿ ಹಾಸಲು ಅವರು ಅದರ ಮೇಲೆ ಕೃಷ್ಣಾಜಿನಗಳನ್ನು ಹಾಸಿಕೊಂಡು ದಕ್ಷಿಣಶಿರಸಾಗಿ ಮಲಗಿದರು. ಕುಂತೀದೇವಿಯು ಅವರಿಗೆ ಮೂಡಣ ಭಾಗದಲ್ಲಿ ಮಲಗಿಕೊಂಡಳು. ದ್ರೌಪದಿಯು

ಅವರ ಕಾಲ ದೆಸೆಯಲ್ಲಿ ದರ್ಪಿಯನ್ನು ಹಾಕಿಕೊಂಡು—ಇವರು ಭಿಕ್ಷುವನ್ನು ಬೇಡು ವಂಥಾ ಬ್ರಾಹ್ಮಣರು ಎಂದು ಸ್ವಲ್ಪವಾದರೂ ತನ್ನ ಮನಸ್ಸಿನಲ್ಲಿ ವಿಕಲ್ಪವಿಲ್ಲದೆ ಮಲಗಿದಳು. ಮಹಾ ಶೂರರಾದ ಇವರು ದಿವ್ಯಾಸ್ತ್ರಗಳ ತೆರವನ್ನೂ ಅನೆಗಳ ಪ್ರಕಾರವನ್ನೂ ರಥಗಳ ಚಂದವನ್ನೂ ಖಡ್ಗಗಳ ಸೊಬಗನ್ನೂ ಗದಾವಿಶೇಷಗಳ ಸೊಗಸನ್ನೂ ಕೊಡಲಿಗಳ ಸ್ಥಿತಿಯನ್ನೂ ನಾನಾ ಪ್ರಕಾರವಾಗಿ ಒಬ್ಬರಿಗೊಬ್ಬರು ಹೇಳಿಕೊಳ್ಳುತ್ತಾ ಹೊತ್ತು ಕಳೆಯುತ್ತಿರುವ ಸಮಯದಲ್ಲಿ ಹೊಂಚಿ ಕೇಳುತ್ತಿದ್ದ ಧೃಷ್ಟದ್ಯುಮ್ನನು ಬೇಹಿನವರೊಡನೆ ನೋಡಿ ಕೇಳಿ ಅದನ್ನೆಲ್ಲಾ ತಿಳಿಸುವುದಕ್ಕೆ ತಂದೆಯ ಸಮೀಪಕ್ಕೆ ಬಂದು ಸೇರಿದನು.

ಪಾಂಚಾಲರಾಜನು ಮುಖದಲ್ಲಿ ದೈನ್ಯವನ್ನು ತೋರಿಸುತ್ತಾ ಪಾಂಡವರು ಎಂದು ತಿಳಿಯದೆ ಇರುವುದರಿಂದ ತನ್ನ ಮಗನನ್ನು ನೋಡಿ—ಏನೈಯ್ಯಾ, ಮಗನೇ! ನಮ್ಮ ದ್ರೌಪದೀದೇವಿಯು ಶ್ಮಶಾನದಲ್ಲಿ ಪುಷ್ಪಮಾಲಿಕೆ ಬಿದ್ದ ಹಾಗೆ ಹೀನಜಾತಿಯಲ್ಲಿ ಒಬ್ಬರನ್ನಾದರೂ ವರಿಸದೆ ಇರುವಂಥಾವಳು ಈಗ ಎಲ್ಲಿ ಇದ್ದಾಳೆ? ಆ ಕನ್ಯಾರತ್ನವನ್ನು ಅರ್ಜುನನ ವಶಕ್ಕೆ ಒಪ್ಪಿಸಿ ನಾನು ಸುಖವಾಗಿ ನಿದ್ದೆಗೈದೇನೇ? ನಾನು ಮಾಡಿದ ಯಂತ್ರಲಕ್ಷ್ಯವನ್ನು ಭೇದಿಸಿ ಆ ದ್ರೌಪದಿಯನ್ನು ಕರೆದುಕೊಂಡು ಹೋದಂಥಾವನನ್ನು ಯಾರೆಂದು ತಿಳಿದೆ? ವಿಚಿತ್ರವೀರ್ಯನ ಮೊಮ್ಮಕ್ಕಳಾದ ಪಾಂಡವರು ದೈವಸಂಕಲ್ಪದಿಂದ ಬದುಕಿ ಇದ್ದಾರೆಯೇ? ನಾನು ಮಾಡಿದ ಯಜ್ಞದ ಮಹಿಮೆಯಿಂದಲೂ ದ್ರೌಪದಿಯ ಭಾಗ್ಯವಿಶೇಷದಿಂದಲೂ ಈ ಲಕ್ಷ್ಯವನ್ನು ಭೇದಿಸಿದಂಥಾವನು ಅರ್ಜುನನು ಎಂದು ತಿಳಿಯಬಹುದೇ? ಎಂದು ಕೇಳಿದಂಥಾ ದ್ರುಪದರಾಜನನ್ನು ನೋಡಿ ಧೃಷ್ಟದ್ಯುಮ್ನನು ಸಂತೋಷಪಟ್ಟು ತಾನು ಕಂಡು ಕೇಳಿದುದನ್ನೆಲ್ಲಾ ತಂದೆಗೆ ತಿಳಿಸಿ ಅವರು ಪಾಂಡವರೇ ಸರಿ ಎಂದು ನಿಶ್ಚಯಿಸಿದ್ದೇನೆ ಅಂದನು.

ದ್ರುಪರಾಜನು ಈ ಮಾತನ್ನು ಕೇಳಿ ಸಂತೋಷಪಟ್ಟು ತನ್ನ ಪುರೋಹಿತನನ್ನು ಕರೆದು—ನೀನು ಅವರ ಸಮೀಪಕ್ಕೆ ಹೋಗಿ—ನೀವು ಯಾರು? ಪಾಂಡುಕುಮಾರರೇ? ಎಂದು ಕೇಳಿ ಬಾ ಎನಲು ಅತನು ಅವರ ಬಳಿಗೆ ಹೋಗಿ ಅವರನ್ನು ನೋಡಿ—ಪಾಂಚಾಲರಾಜನಾದ ದ್ರುಪದನು ನಿಮ್ಮ ಸ್ವರೂಪವನ್ನು ತಿಳಿಯಬೇಕೆಂದು ಇದ್ದಾನೆ. ಈ ಲಕ್ಷ್ಯವನ್ನು ಕೆಡಹಿದಂಥಾವನನ್ನು ನೋಡಿ ಅತನ ಸಂತೋಷವು ಅಭಿವೃದ್ಧಿಯಾಗುತ್ತಿದೆ? ನೀವು ಯಾವ ಕಾರ್ಯಕ್ಕೂ ಭಯಪಡಬೇಡಿರಿ. ನಿಮ್ಮ ಜಾತಿಕುಲಾಚಾರಗಳನ್ನು ವಿಶದವಾಗಿ ಹೇಳಬೇಕು. ನಿಮಗೆ ವಿರೋಧಿಗಳಾದವರ ಶಿರಸ್ಸಿನಲ್ಲಿ ಪಾದವನ್ನು ಇರಿಸಿ ಪುತ್ರಸಹಿತನಾದ ನಮ್ಮರಸಿಗೆ ಸಂತೋಷವನ್ನು ಕಲ್ಪಿಸಿದಿರಿ. ಪಾಂಡುರಾಜನು ಪರಮಮಿತ್ರನಾದುದರಿಂದ ತನ್ನ ಮಗಳಾದ ದ್ರೌಪದಿಯು ಆತನಿಗೆ ಸೊಸೆಯಾಗಬೇಕು. ಆಜಾನುಬಾಹುವಾದ ಅರ್ಜುನನು ತನಗೆ ಅಳಿಯನಾಗಬೇಕು ಎಂದು ಅಭಿಲಾಷೆಯು ನಮ್ಮ ರಾಜನಿಗೆ ಬಹಳವಾಗಿ ಇದೆ ಎನಲು ಯುಧಿಷ್ಠಿರನು ಆ ವಾಕ್ಯವನ್ನು ಕೇಳಿ ಸಮೀಪದಲ್ಲಿರುವ ಭೀಮನನ್ನು ನೋಡಿ ಈ ದ್ರುಪದರಾಜಪುರೋಹಿತನನ್ನು ಉಚಿತಪ್ರಕಾರವಾಗಿ ಅರ್ಘ್ಯಪಾದ್ಯಾದಿಗಳಿಂದ ಪೂಜಿಸು ಎನಲು ಆತನು

ಹಾಗೆ ಮಾಡಿದನು. ಸುಖಾಸನದಲ್ಲಿ ಕುಳಿತಿರುವ ಆ ಬ್ರಾಹ್ಮಣನನ್ನು ನೋಡಿ ಯುಧಿಷ್ಠಿರನು—ಪಾಂಚಾಲರಾಜನು ತನ್ನ ಮಗಳಾದ ದ್ರೌಪದಿಗೆ ಸ್ವಧರ್ಮೋಚಿತವಾದ ಮಾರ್ಗದಿಂದ ಪರಾಕ್ರಮವೇ ಶುಲ್ಕವಾಗುವ ಹಾಗೆ ಕಲ್ಪಿಸಲು ಆತನು ಮಾಡಿದ ಪ್ರತಿಜ್ಞೆಯನ್ನು ನೆರವೇರಿಸಿ ಈ ಕುಮಾರಕನು ಕನ್ಯಾರತ್ನವನ್ನು ಕೈಕೊಂಡನು. ನೀವು ಸಂಕೇತವನ್ನು ಮಾಡುವಾಗ ವರ್ಣವೂ ಜೀವನೋಪಾಯವೂ ವಿದ್ಯಾವಿಶೇಷವೂ ಕುಲವೂ ಗೋತ್ರವೂ ಇಂಥಾದುದಾಗಿರಬೇಕೆಂದು ನಿಶ್ಚಯಿಸಿರಲಿಲ್ಲವಲ್ಲ! ಈ ಧನುಸ್ಸಿನಲ್ಲಿ ಹೆದೆಯನ್ನು ಏರಿಸಿ ಲಕ್ಷ್ಯವನ್ನು ಕೆಡಹಿದಂಥಾವನೇ ಈ ಕನ್ಯೆಗೆ ವರನಾಗತಕ್ಕವನು ಎಂದು ಮೊದಲೇ ಹೇಳಿದವರಾದುದರಿಂದ ಈತನು ಹಾಗೆ ಮಾಡಿ ರಾಜಪುತ್ರಿಯನ್ನು ಕೈಕೊಂಡನು. ಇನ್ನು ಆದ ಕಾರ್ಯಕ್ಕೆ ನಿಮ್ಮ ರಾಜನು ಪಶ್ಚಾತ್ತಾಪ ಪಟ್ಟು ಪ್ರಯೋಜನವೇನು? ಆದರೂ ಆತನ ಮನೋರಥವು ಸಫಲನಾಗಿರಲಿ. ಈ ರಾಜಪುತ್ರಿಯು ಉಚಿತವಾದ ವರನನ್ನು ಹೊಂದಿದ್ದಾಳೆ ಈ ಧನುಸ್ಸಿನಲ್ಲಿ ಹೆದೆಯನ್ನು ಏರಿಸಿ ಲಕ್ಷ್ಯವನ್ನು ಭೇದಿಸುವುದಕ್ಕೆ ಸಾಧಾರಣ ಮನುಷ್ಯರಿಗೆ ಶಕ್ಯವಲ್ಲದೆ ಇದ್ದುದರಿಂದ ನಿಮ್ಮ ರಾಜನು ಈ ಕನ್ಯಾ ವಿಷಯವಾಗಿ ಚಿಂತಿಸುವುದಕ್ಕೆ ಕಾರಣವಿಲ್ಲವೆಂದು ಹೇಳಿ ಕಳುಹಿಸಲು ಪುರೋಹಿತನು ದ್ರುಪದರಾಜನ ಬಳಿಗೆ ಬಂದು ಧರ್ಮರಾಜನು ಹೇಳಿದ ಮಾತನ್ನು ಹೇಳಲಾಗಿ, ಆ ಮಾತಿನ ಭಾವದಿಂದ—ಇವರು ಪಾಂಡವರೇ ಸರಿ ಎಂದು ನಿಶ್ಚಯಿಸಿಕೊಂಡು ಅನಂತರದಲ್ಲಿ ಇವರನ್ನು ಪ್ರಸ್ತುತ ಭೋಜನಕ್ಕೆ ಕರಿಸಿ ಭೋಜನಾದಿಗಳಿಂದ ಸತ್ಕರಿಸಿ ವಿವಾಹಮಂಟಪವನ್ನು ಮಾಡಿಸಿ ಧರ್ಮರಾಜನನ್ನು ನೋಡಿ—ಈ ಹೊತ್ತು ಶುಭದಿವಸವಾದುದರಿಂದ ಮಹಾನುಭಾವನಾದ ಧನಂಜಯನು ಈ ಕನ್ಯೆಯ ಪಾಣಿಗ್ರಹಣವನ್ನು ಮಾಡುವುದಕ್ಕೆ ಅಪ್ಪಣೆ ಮಾಡೆನಲು ಧರ್ಮರಾಜನು ನಮ್ಮ ತಾಯಿಯ ಅಪ್ಪಣೆಯ ಪ್ರಕಾರ ಈ ಕನ್ಯಾರತ್ನವನ್ನು ನಾವು ಐದು ಜನವೂ ಅಗ್ನಿಸಾಕ್ಷಿಕವಾಗಿ ಪರಿಗ್ರಹಿಸಬೇಕು ಎಂದನು.

ಆಗ ದ್ರುಪದರಾಜನು—ಒಬ್ಬ ಕನ್ಯೆಯನ್ನು ಐದು ಜನವೂ ಮದುವೆಯಾಗುವುದು ಹೇಗೆ? ಎಂದು ಯೋಚಿಸುತ್ತಿರುವಲ್ಲಿ ವ್ಯಾಸಮುನೀಶ್ವರನು ದ್ರುಪದರಾಜನಲ್ಲಿಗೆ ಬಂದು ಆತನಿಂದ ಪೂಜಿತನಾಗಿ ಅವನನ್ನು ಕುರಿತು—ಎಲೈ, ಅರಸೇ! ನಿನ್ನ ಮನಸ್ಸಿನಲ್ಲಿರುವ ಸಂಶಯವನ್ನು ಬಿಡು! ಪೂರ್ವದಲ್ಲಿ ಗೌತಮವಂಶದಲ್ಲಿ ಹುಟ್ಟಿದ ಜಟಿಲನೆಂಬ ಮಹಾತ್ಮನ ಮಗಳು ತಪೋಧನರಾಗಿ ಆತ್ಮತತ್ವಜ್ಞರಾದ ಏಳು ಮಂದಿ ಮುನಿಕುಮಾರಕರನ್ನು ವರಿಸಿದಳು. ಅದಲ್ಲದೆ ಪ್ರಜೇತಸರೆಂಬ ಹನ್ನೆರಡು ಮಂದಿ ಅಣ್ಣತಮ್ಮಂದಿರು ಒಬ್ಬ ಕನ್ಯೆಯನ್ನು ವರಿಸಿದರು. ಮತ್ತು ಇವಳ ತಾಯಿಯಾದ ನಿನ್ನ ಪಟ್ಟ ಮಹಿಷಿಯು ತನ್ನ ಮಗಳಿಗೆ ಐದು ಮಂದಿ ಗಂಡಂದಿರಾಗಬೇಕೆಂದು ಪೂರ್ವಜನ್ಮದಲ್ಲಿ ಬಯಸಿದ ಪ್ರಕಾರ ಯಾಜೋಪಯಾಜರೆಂಬವರು ಆದೇ ರೀತಿಯಲ್ಲಿ ಅನುಗ್ರಹಿಸಿರುವ ಕಾರಣ ಈ ಐದು ಮಂದಿಯೂ ಈಕೆಗೆ ಗಂಡಂದಿರಾಗುವುದು ಧರ್ಮವು ಎಂದು ನೀಲಾಯನಿಯ ಕಥೆಯನ್ನು ಹೇಳಲು ದ್ರುಪದರಾಜನು ಕೃಷ್ಣದ್ವೈಪಾಯನನನ್ನು ನೋಡಿ—ನಿಮ್ಮ ಮಾತುಗಳನ್ನು ಕೇಳಿದ ಬಳಿಕ ನನ್ನ ಮನಸ್ಸಿನಲ್ಲಿ

ರುವ ಸಂಶಯಗಳೆಲ್ಲವೂ ಹೋದುವು. ದೈವಸಂಕಲ್ಪವನ್ನು ತಪ್ಪಿಸುವುದಕ್ಕೆ ಯಾರಿಂದಲೂ ಶಕ್ಯವಲ್ಲ. ಈ ಅರ್ಥಕ್ಕೆ ಸಮ್ಮತಿಸಿದೆನು ಅಂದನು.

ಆ ಬಳಿಕ ವ್ಯಾಸನು ಯುಧಿಷ್ಠಿರನನ್ನು ನೋಡಿ ಜಂದ್ರನು ರೋಹಿಣೀ ಸಹಿತನಾಗಿ ಇರುವುದರಿಂದ ಈ ಶುಭದಿವಸದಲ್ಲಿ ವಿಹಿತ ಪ್ರಕಾರದಿಂದ ನೀವು ಐದು ಮಂದಿಯೂ ಕ್ರಮವಾಗಿ ಪಾಣಿಗ್ರಹಣವನ್ನು ಮಾಡಿರಿ ಎಂದು ಕಟ್ಟುಮಾಡಿದನು ಆ ಒಳಿಕ ಯಜ್ಞಸೇನನ ಮಗನಾದ ಧೃಷ್ಟದ್ಯುಮ್ನನೊಡನೆ ಕೂಡಿ ಮದುವೆಗೆ ತಕ್ಕ ಸಾಧನಗಳನ್ನು ಜೊತೆಗೊಳಿಸಿ ದ್ರೌಪದೀದೇವಿಗೆ ಮಂಗಳಮಜ್ಜನಾನಂತರದಲ್ಲಿ ಬಹು ವಿಧರತ್ನಾಭರಣಗಳಿಂದ ಅಲಂಕಾರ ಮಾಡಿಸಿದನು. ಆತನ ನೆಂಟರಿಷ್ಟರೂ ಮಿತ್ರಾಮಾತ್ಯರುಗಳೂ ಆ ಪಟ್ಟಣದಲ್ಲಿರುವ ಪ್ರಜೆಗಳೂ ವೇದವೇದಾಂಗಪಾರಂಗತರಾದ ಬ್ರಾಹ್ಮಣರುಗಳೂ ನಾನಾದೇಶಗಳಿಂದ ಒಂದ ಯಾಜಕರುಗಳೂ ಆ ವಿವಾಹಮಂಟಪದಲ್ಲಿ ನೆರೆದು ಕುಳಿತಿದ್ದರು. ಆ ಬಳಿಕ ಕುಂತೀದೇವಿಯ ಮಕ್ಕಳು ಮಂಗಳಸ್ನಾನವನ್ನು ಮಾಡಿ ಕಂಕಣಗಳನ್ನು ಕಟ್ಟಿಕೊಂಡು ದಿವ್ಯಚಂದನಗಳನ್ನೂ ದಿವ್ಯಮಾಲ್ಯಗಳನ್ನೂ ದಿವ್ಯಾಂಬರಗಳನ್ನೂ ನವರತ್ನಖಚಿತಗಳಾದ ಕುಂಡಲಗಳನ್ನೂ ಧರಿಸಿ ಯಜ್ಞೇಶ್ವರನಿಗೆ ಸಮಾನವಾದ ತೇಜಸ್ಸುಳ್ಳ ತಮ್ಮ ಪುರೋಹಿತನಾದ ಧೌಮ್ಯನನ್ನು ಮುಂದಿಟ್ಟುಕೊಂಡು ಜ್ಯೇಷ್ಠಾನುಕ್ರಮವಾಗಿ ಸರ್ವಾಲಂಕಾರಶೋಭಿತಮಾದ ವಿವಾಹಮಂಟಪವನ್ನು ಹೊಕ್ಕರು. ಆಗ ಪುರೋಹಿತನು ಯಜ್ಞೇಶ್ವರನಲ್ಲಿ ಹೋಮವನ್ನು ಮಾಡಿ ಮೊದಲು ಧರ್ಮರಾಜನನ್ನು ದ್ರೌಪದೀಸಮೇತನಾಗಿ ಹಸೆಯ ಮಣೆಯಲ್ಲಿ ಕುಳ್ಳಿರಿಸಿ ಯಥಾಶಾಸ್ತ್ರವಾಗಿ ಹೋಮಕ್ರಿಯೆಗಳನ್ನು ಮಾಡಿಸಿ ಅಗ್ನಿಪ್ರದಕ್ಷಿಣವನ್ನು ಮಾಡಿಸಿದನು. ಆಗ ಧರ್ಮರಾಜನು ಅನೇಕ ಧನಕನಕಗೋವಸ್ತ್ರವಾಹನಾದಿಗಳಿಂದ ಜನರನ್ನು ತಣಿಸಿ ದ್ರುಪದರಾಜನ ಅಪ್ಪಣೆಯಿಂದ ಧೌಮ್ಯಸಹಿತನಾಗಿ ಅವನ ಮನೆಯಿಂದ ಹೊರಟು ಹೋದನು. ಆ ಬಳಿಕ ಭೀಮಾರ್ಜುನ ನಕುಲಸಹದೇವರುಗಳೂ ಕ್ರಮವಾಗಿ ಒಂದೊಂದು ದಿವಸದಲ್ಲಿ ಒಬ್ಬೊಬ್ಬರು ಆ ದ್ರೌಪದೀದೇವಿಯ ಪಾಣಿಗ್ರಹಣವನ್ನು ಮಾಡಿದರು. ಆ ಬಳಿಕ ಪಾಂಜಲರಾಜನು ಮಹಾರಥರಾದ ಪಾಂಡವರಿಗೆ ಸುವರ್ಣಭೂಷಿತಗಳಾಗಿಯೂ ನಾಲ್ಕು ಕುದುರೆಗಳನ್ನು ಕಟ್ಟಿರುವಂಥಾವುಗಳಾಗಿಯೂ ಕನಕಮಾಲಿಕೆಗಳಿಂದ ಅಲಂಕೃತಗಳಾಗಿಯೂ ಇರುವ ನೂರು ರಥಗಳನ್ನೂ ಪದ್ಮಕುಲದಲ್ಲಿ ಹುಟ್ಟಿ ಚಿನ್ನದ ಕಟ್ಟುಗಳಿಂದ ಕೂಡಿರುವ ಕೊಂಬುಗಳುಳ್ಳವುಗಳಾಗಿ ಪರ್ವತಗಳೋಪಾದಿಯಲ್ಲಿ ಇರುವ ನೂರು ಆನೆಗಳನ್ನೂ ಚಿನ್ನದ ಹಲ್ಲಣಗಳೊಡನೆ ಕೂಡಿ ನವರತ್ನಮಾಲಿಕಾಲಂಕೃತಗಳಾಗಿ ಮನೋವೇಗವುಳ್ಳ ಹನ್ನೆರಡು ವರುಷ ಪ್ರಾಯದ ಸಾವಿರ ಉತ್ತಮಾಶ್ವಗಳನ್ನೂ ದಿವ್ಯಾಂಬರಾಭರಣಕುಸುಮಮಾಲಿಕಾಲಂಕೃತೆಯರಾಗಿ ಯೌವನದಿಂದ ಕೂಡಿರುವ ನೂರು ಮಂದಿ ದಾಸಿಯರನ್ನೂ ಮತ್ತು ಚಿನ್ನದ ಪಾತ್ರೆಗಳನ್ನೂ ಚಿನ್ನದ ಮಂಚಗಳನ್ನೂ ಚಿನ್ನದ ಮಣಿಗಳನ್ನೂ ಕಣ್ಣಿಗೆ ಪ್ರಿಯವಾದ ಅನೇಕ ವಸ್ತುವಿಶೇಷಗಳನ್ನೂ ಅನೇಕ ಗೋಧನಗಳನ್ನೂ ದಿವ್ಯಾಂಬರಗಳನ್ನೂ ದಿವ್ಯ ಭೂಷಣಗಳನ್ನೂ ಒಂದೊಂದು ಲಕ್ಷ ಮೋಹರಗಳನ್ನೂ ಪ್ರತ್ಯೇಕಪ್ರತ್ಯೇಕವಾಗಿಯೂ ಪ್ರೀತಿ

ಪೂರ್ವಕವಾಗಿಯೂ ಕೊಟ್ಟನು. ಆ ಪಾಂಡವರು ಅಂಥಾ ಐಶ್ವರ್ಯವನ್ನು ಹೊಂದಿ ಇಂದ್ರನಿಗೆ ಸರಿಯಾದ ಸಂಪತ್ತುಳ್ಳವರಾಗಿ ದ್ರುಪದನ ಪಟ್ಟಣದಲ್ಲಿಯೇ ಇಷ್ಟವಾದ ಭೋಗಗಳನ್ನು ಅನುಭವಿಸುತ್ತಾ ದ್ರೌಪದಿಯ ಕುಲಶೀಲವಿನಯಾಚಾರನಡತೆಗಳಿಗೆ ಸಂತೋಷಪಡುತ್ತಾ ಸುಖದಿಂದಿದ್ದರು.

ಆಗ ದ್ರುಪರಾಜನ ಪಟ್ಟದ ಹೆಂಡತಿಯರು ಬಂದು ತಮ್ಮ ತಮ್ಮ ಹೆಸರುಗಳನ್ನು ಹೇಳಿಕೊಂಡು ಕುಂತೀದೇವಿಗೆ ನಮಸ್ಕಾರಗಳನ್ನು ಮಾಡಿದರು. ದ್ರೌಪದೀದೇವಿಯು ಕೈಯ್ಯಲ್ಲಿ ಕಟ್ಟಿದ ಕಂಕಣವುಳ್ಳವಳಾಗಿ ಕುಂತಿಗೆ ನಮಸ್ಕರಿಸಿ ಕೈ ಕಟ್ಟಿಕೊಂಡು ನಿಂತಿರಲು ಕುಂತೀದೇವಿಯು ಬಹಳ ಸಂತೋಷದಿಂದ—ವಾಸುದೇವನಿಗೆ ಲಕ್ಷ್ಮೀದೇವಿಯೋಪಾದಿಯಲ್ಲಿ ನೀನು ಪಾಂಡುಕುಮಾರಕರಿಗೆ ಪ್ರಿಯವನ್ನು ಮಾಡುತ್ತಾ ಆಯುಷ್ಮಂತರಾಗಿ ಬಹು ಪರಾಕ್ರಮಿಗಳಾದ ಮಕ್ಕಳನ್ನು ಪಡೆದು ಕುರುಜಾಂಗಲ ಮೊದಲಾದ ದೇಶಗಳ ಪಟ್ಟಣಗಳಲ್ಲಿ ಪತಿಗಳೊಡನೆ ಪಟ್ಟಾಭಿಷಿಕ್ತೆಯಾಗಿಯೂ ಅಶ್ವಮೇಧಾದಿ ಯಾಗಗಳನ್ನು ಮಾಡುವ ನಿನ್ನ ಪತಿಯಾದ ಯುಧಿಷ್ಠಿರನಿಗೆ ಯಜ್ಞಪತ್ನಿಯಾಗಿಯೂ ಸಕಲ ಸುಖ ಸಾಮ್ರಾಜ್ಯವನ್ನು ಅನುಭವಿಸು ಎಂದು ಹರಿಸಿದಳು. ಆ ಬಳಿಕ ವಾಸುದೇವನು ಪಾಂಡವರಿಗೆ ಮುತ್ತುಗಳೂ ವಜ್ರಗಳೂ ಮೊದಲಾದ ನವರತ್ನ ಖಚಿತವಾದ ಚಿನ್ನದ ಒಡವೆಗಳನ್ನೂ ನಾನಾ ದೇಶಗಳಲ್ಲಿ ಹುಟ್ಟಿದ ಅಮೂಲ್ಯವೂ ಮೃದುವೂ ಆದ ವಿಚಿತ್ರವಾಗಿರುವ ವಸ್ತ್ರಗಳನ್ನೂ ಕಂಬಳಿಗಳನ್ನೂ ಮಣಿಗಳನ್ನೂ ಪಾತ್ರೆಗಳನ್ನೂ ರೂಪಯೌವನದಾಕ್ಷಿಣ್ಯಗಳಿಂದ ಕೂಡಿ ನಾನಾ ದೇಶಗಳಲ್ಲಿ ಹುಟ್ಟಿದ ದಾಸಿಯ ಜನಗಳನ್ನೂ ಮಾವುತರು ತಿದ್ದಿದ ಭದ್ರಗಜಗಳನ್ನೂ ಅನೇಕ ಭೂಷಣಾಲಂಕೃತಗಳಾದ ಉತ್ತಮಾಶ್ವಗಳನ್ನೂ ದಂತಗಳಿಂದಲೂ ಚಿನ್ನಗಳಿಂದಲೂ ಮಾಡಿದ ಒಳ್ಳೆಯ ಕುದುರೆಗಳಿಂದ ಕೂಡಿರುವ ತೇರುಗಳನ್ನೂ ಮೊಹರಗಳನ್ನೂ ಚಿನ್ನದ ರಾಶಿಗಳನ್ನೂ ಪ್ರೀತಿಯಿಂದ ಕಳುಹಿಸಲು ಪಾಂಡವರು ಗೌರವದಿಂದ ಅದೆಲ್ಲವನ್ನೂ ಅಂಗೀಕರಿಸಿ ವಾಸುದೇವನ ಮನಸ್ಸಿಗೆ ಸಂತೊಷವನ್ನು ಉಂಟುಮಾಡಿ ದ್ರುಪದರಾಜನ ಪಟ್ಟಣದಲ್ಲಿದ್ದರು.

---

9. DHARMARAJA'S KAJASUYA SACRIFICE.

೯. ಧರ್ಮರಾಜನು ಮಾಡಿದ ರಾಜಸೂಯಯಾಗವು

ವೈಶಂಪಾಯನ ಮುನೀಂದ್ರನು ಜನಮೇಜಯರಾಜನನ್ನು ನೋಡಿ—ಕೇಳಯ್ಯಾ, ರಾಜೇಂದ್ರನೇ! ಲೋಕೈಕವೀರನಾದ ಅರ್ಜುನನು ಕೃಷ್ಣನ ಅಪ್ಪಣೆಯಿಂದ ಖಾಂಡವ ವನದಹನದಲ್ಲಿ ಕಾಪಾಡಿದ ರಕ್ಕಸರ ಬಡಗಿಯಾದ ಮಯನು ಪ್ರತ್ಯುಪಕಾರವಾಗಿ ಇಂದ್ರ ಯಮ ವರುಣ ಕುಬೇರರ ಓಲಗದ ಚಾವಡಿಗಳಿಗಿಂತ ನಾಲ್ಕು ಮಡಿ ಚಂದವಾದ ಒಂದು ಓಲಗದ ಚಾವಡಿಯನ್ನೂ ಜಗಳದಲ್ಲಿ ಯಾವ ಹಗೆಗಳಿಂದಲೂ ಮುರಿಯಲಾಗದೆ ಇರುವ ಒಂದು ತೋರವಾದ ಗದೆಯನ್ನೂ ಧ್ವನಿಯನ್ನು

ಕೇಳಿದ ಮಾತ್ರದಲ್ಲಿಯೇ ಹಗೆಗಳ ಎದೆಯು ಸೀಳುವ ದೇವದತ್ತವೆಂಬ ಶಂಖವನ್ನೂ ಧರ್ಮರಾಜನಿಗೂ ಭೀಮನಿಗೂ ಅರ್ಜುನನಿಗೂ ಕ್ರಮವಾಗಿ ಕೊಟ್ಟು ಅವರು ಕೊಟ್ಟ ಉಡುಗೆರೆಗಳನ್ನು ತೆಗೆದುಕೊಂಡು ಹೊರಟುಹೋದನು.

ಆ ಬಳಿಕ ಧರ್ಮರಾಜನು ಒಳ್ಳೆಯ ಲಗ್ನದಲ್ಲಿ ಕೃಷ್ಣನನ್ನು ಮುಂದಿಟ್ಟುಕೊಂಡು ತಮ್ಮಂದಿರನ್ನು ಒಡಗೊಂಡು ಬ್ರಾಹ್ಮಣರೊಡನೆ ಓಲಗದ ಚಾವಡಿಯನ್ನು ಹೊಕ್ಕು. ಎರಡನೆಯ ದೇವೇಂದ್ರನೋಪಾದಿಯಲ್ಲಿ ಒಡ್ಡೋಲಗವನ್ನು ಕೊಡುತ್ತಾ ಧರ್ಮದಿಂದ ರಾಜ್ಯಪರಿಪಾಲನೆಯನ್ನು ಮಾಡುತ್ತಾ ಇದ್ದನು. ಹೀಗಿರುವಲ್ಲಿ ಕೃಷ್ಣನು ಒಂದು ದಿವಸ ಧರ್ಮರಾಜನ ಅಪ್ಪಣೆಯನ್ನು ತೆಗೆದುಕೊಂಡು ದ್ವಾರಕಾ ಪಟ್ಟಣಕ್ಕೆ ತೆರಳಿದನು. ಆಮೇಲೆ ಒಂದಾನೊಂದು ದಿವಸದಲ್ಲಿ ಸೂರ್ಯನೇ ಭೂಲೋಕಕ್ಕೆ ನಡೆದು ಬರುತ್ತಾನೋ ಎಂಬಂತೆ ಬರುತ್ತಿರುವ ನಾರದಮಹರ್ಷಿಯನ್ನು ಧರ್ಮರಾಜನು ಕಂಡು ಜಗ್ಗನೆ ಎದ್ದು ತಮ್ಮಂದಿರೊಡನೆ ಎದುರುಗೊಂಡು ಅಡ್ಡಬಿದ್ದು ಕೈಯನ್ನು ಹಿಡಿದು ಚಾವಡಿಗೆ ಕರಕೊಂಡು ಬಂದು ಚಿನ್ನದ ಕಾಲುಮಣೆಯ ಮೇಲೆ ಕುಳ್ಳಿರಿಸಿ ಕಾಲುಗಳನ್ನು ತೊಳೆದು ಪೂಜಿಸಿ ಕೈದಾವರೆಗಳನ್ನು ಜೋಡಿಸಿ ನಿಂತುಕೊಂಡಿದ್ದನು. ಆಗ ನಾರದ ಮಹಾ ಮುನಿಯು ಮೊದಲು ಧರ್ಮರಾಜನ ಕ್ಷೇಮವನ್ನು ಕೇಳಿ ಕುಳಿತುಕೊಳ್ಳುವಂತೆ ಅಪ್ಪಣೆಯನ್ನು ಕೊಟ್ಟನು. ಆ ಪ್ರಕಾರವೇ ಕುಳಿತುಕೊಂಡ ಧರ್ಮರಾಜನನ್ನು ನಾರದನು ನೋಡಿ—ಎಲೈ, ರಾಜೇಂದ್ರನೆ! ನಿನ್ನ ಕುಲದ ಅರಸುಗಳು ಧರ್ಮಮಾರ್ಗವನ್ನು ಬಿಡದೆ ಪ್ರಜೆಗಳನ್ನು ಕಾಪಾಡಿದ ಹಾಗೆ ನೀನೂ ಕಾಪಾಡುತ್ತಿರುವೆಯಾ? ಜನರ ಬುದ್ಧಿಯನ್ನೂ ಸಾಹಸವನ್ನೂ ಶಕ್ತಿಯನ್ನೂ ಜಾಣತನವನ್ನೂ ಪರೀಕ್ಷಿಸಿ ನೋಡಿ ಅವರವರಿಗೆ ತಕ್ಕ ಉದ್ಯೋಗಗಳನ್ನು ಕೊಟ್ಟು ಅವರವರಿಗೆ ಯೋಗ್ಯವಾದ ಮರ್ಯಾದೆಗಳನ್ನು ಮಾಡುತ್ತಾ ಅವರು ಮಾಡುವ ಕೆಲಸಗಳನ್ನು ಅಪ್ರಜನನಿಂದ ತಿಳಿದು ಯುಕ್ತಾಯುಕ್ತಗಳನ್ನು ವಿಚಾರಿಸಿಕೊಳ್ಳುತ್ತಾ ಇದ್ದೀಯಾ? ಮತ್ತು ನಿನಗೂ ದೇಶದ ಜನಗಳಿಗೂ ಪರಿವಾರದವರಿಗೂ ಹಿತನಾಗಿಯೂ ಪಕ್ಷಪಾತಗಳಿಲ್ಲದೆ ನ್ಯಾಯಾನ್ಯಾಯಗಳನ್ನು ವಿಚಾರಿಸಿ ತಪ್ಪು ಮಾಡಿದವನು ತನ್ನ ಮಗನಾದಾಗ್ಗೂ ಅವನನ್ನು ಶಿಕ್ಷಿಸುವವನಾಗಿಯೂ ಸಕಲ ವೇದಶಾಸ್ತ್ರಗಳನ್ನೂ ರಾಜನೀತಿಗಳನ್ನೂ ಓದಿ ಐವತ್ತಾರು ದೇಶದ ಮಾತುಗಳನ್ನೂ ಬರಹಗಳನ್ನೂ ಕಲಿತು ನಿರಾಲಸ್ಯವಾಗಿ ಕೋಪವಿಲ್ಲದೆ ಸಾಮದಾನ ಭೇದದಂಡಗಳೆಂಬ ಚತುರುಪಾಯಗಳನ್ನು ಬಲ್ಲವನಾಗಿರುವ ನಿಮ್ಮ ವಂಶಾನುಕ್ರಮವಾಗಿ ಬಂದಂಥ ಮಂತ್ರಿಕುಲದಲ್ಲಿ ಹುಟ್ಟಿದಂಥ ಬ್ರಾಹ್ಮಣನನ್ನು ಮಂತ್ರಿಯನ್ನಾಗಿ ನೀನು ಮಾಡಿಕೊಂಡು ಆತನೊಡನೆ ಏಕಾಂತದಲ್ಲಿ ಆರು ಕಿವಿಗಳಿಗೆ ಕೇಳಿಸದಂತೆ ಮಂತ್ರಾಲೋಚನೆಯನ್ನು ಮಾಡಿ ಮೊದಲು ನಿರ್ಣಯಿಸಿ ಆ ಹಿಂದೆ ಯಾವ ರಾಜಕಾರ್ಯವನ್ನಾದರೂ ಮಾಡುತ್ತೀಯಾ? ಮತ್ತು ನಾನಾವಿಧ ಶಸ್ತ್ರವಿದ್ಯೆಗಳಲ್ಲಿ ಜಾಣರಾಗಿಯೂ ಅಸಮಾನವಾದ ಬಲವುಳ್ಳವರಾಗಿಯೂ ಒಡೆಯನ ಕೆಲಸಕ್ಕಾಗಿ ತಮ್ಮ ಪ್ರಾಣವನ್ನು ಸಮಯದಲ್ಲಿ ಹುಲ್ಲಿಗಿಂತಲೂ ಕಡೆ ಎಂದು ಭಾವಿಸುವ ಭಟರಿಂದ ಕೂಡಿದ ಸೇನೆಯನ್ನು ನಡೆಸುವ

ಇಳಿಸುವ ಒಡ್ಡುವ ಮತ್ತು ಜಗಳವಾಡಿಸುವ ಕೆಲಸಗಳನ್ನು ತಿಳಿದವರಾಗಿ ಇರುವ ದಳ ವಾಯಿಗಳನ್ನು ಇಟ್ಟುಕೊಂಡು ಶೂರರಿಗೆ ಅಪಮಾನವನ್ನು ಮಾಡದೆ ಹೇಡಿಗಳಿಗೆ ಬಹು ಮಾನವನ್ನು ಮಾಡದೆ ಇದ್ದೀಯಾ ? ಮತ್ತು ವೈದ್ಯಶಾಸ್ತ್ರದಲ್ಲಿ ಗಟ್ಟಿಗರಾಗಿ ವಂಚ ಕರಲ್ಲದೆ ಹಣದ ಆಶೆ ಇಲ್ಲದೆ ಎಲ್ಲರಲ್ಲಿಯೂ ಒಂದೇ ಪ್ರಕಾರವಾಗಿ ಪಶ್ಚಾತ್ತಾಪವೂ ದಯೆಯೂ ಉಳ್ಳ ವೈದ್ಯರನ್ನು ಇಟ್ಟುಕೊಂಡು ಇದ್ದೀಯಾ ? ನಿನ್ನ ಸೇನಾ ಜನರಿಗೆ ನಿಬಂಧನೆ ಮಾಡಿರುವ ಸಂಬಳಗಳನ್ನು ತಿಂಗಳುಗಟ್ಟಲೆಯಲ್ಲಿಯೂ ತಡೆಯದೆ ಸಲ್ಲಿಸುತ್ತಾ ಜಗಳದಲ್ಲಿ ನಿನಗಾಗಿ ಸತ್ತುಹೋದ ಭಟರ ಕುಟುಂಬಕ್ಕೆ ಅವರವರ ಯೋಗ್ಯತಾನು ಸಾರವಾಗಿ ಕೊಡಗಿಗಳನ್ನೂ ಮಾಸಾಶನಗಳನ್ನೂ ಕೊಟ್ಟು ಕಾಪಾಡುತ್ತೀಯಾ ? ಮತ್ತು ನಿನ್ನ ಆಜ್ಞೆಗಳು ಪಟ್ಟಣದಲ್ಲಿ ತಡೆಯಿಲ್ಲದೆ ನಡೆಯುತ್ತಾ ಇವೆಯೇ ? ಎಂದು ಇವು ಮೊದಲಾದ ರಾಜನೀತಿಗಳನ್ನು ಕುರಿತು ಪ್ರಶ್ನೆಯನ್ನು ಮಾಡಿದನು.

ಅದಕ್ಕೆ ಧರ್ಮರಾಜನು—ಜೀಯಾ ಮುನೀಂದ್ರನೆ ! ತಮ್ಮಿಂದ ಕೇಳಿದ ರಾಜ ಕಾರ್ಯಗಳಲ್ಲಿ ನಿಮ್ಮಂಥಾ ದೊಡ್ಡವರ ಅನುಗ್ರಹದಿಂದ ನನ್ನ ಯಥಾಶಕ್ತಿಯಾಗಿ ನಡೆಯುತ್ತೇನೆ. ನೀವು ಸಕಲ ಲೋಕಗಳಲ್ಲಿಯೂ ನೋಡದೇ ಇರುವುದು ಒಂದೂ ಇಲ್ಲ. ಆದರೆ ಎಲ್ಲಿಯಾದರೂ ಇಂಥಾ ಓಲಗದ ಚಾವಡಿಯನ್ನು ನೋಡಿ ಇದ್ದರೆ ಅಪ್ಪಣೆ ಕೊಡಿಸಬೇಕೆಂದು ಕೇಳಿದನು. ನಾರದನು ಅದರ ವಿಚಿತ್ರವಾದ ನಿರ್ಮಾಣ ಕೌಶಲವನ್ನು ನೋಡಿ ಆಶ್ಚರ್ಯಪಟ್ಟು—ನಾನು ಇಂಥಾ ಸಭೆಯನ್ನು ಮನುಷ್ಯ ಲೋಕದಲ್ಲಿ ಎಲ್ಲಿಯೂ ನೋಡಲಿಲ್ಲ. ಆದರೆ ಇಂದ್ರ ಯಮ ವರುಣ ಕುಬೇರರ ಒಡ್ಡೋಲಗಗಳಿಗೆ ನಾನು ಹೋಗಿರುವುದುಂಟು. ಆ ಸಭಾಸ್ಥಾನಗಳೂ ಇಷ್ಟು ಚೆಲುವಾಗಿಲ್ಲ, ಇದು ಭೂಲೋಕದಲ್ಲಿ ಇರುವ ಬ್ರಹ್ಮನ ಸಭಾಮಂದಿರದಂತೆ ಹೊಳೆ ಯುತ್ತದೆ. ಇಂಥಾ ಸಭೆಯಲ್ಲಿ ನೀನು ದಿವ್ಯ ಸಿಂಹಾಸನದ ಮೇಲೆ ಕುಳಿತು ಧರ್ಮ ದಿಂದ ರಾಜ್ಯಗಳನ್ನು ಪರಿಪಾಲಿಸುತ್ತಾ ಸಕಲ ದೇಶದ ಅರಸುಗಳಲ್ಲಿಯೂ ಕಪ್ಪ ಕಾಣಿಕೆಗಳನ್ನು ತೆಗೆದುಕೊಳ್ಳುತ್ತಾ ಇರುವುದನ್ನೂ ನಿನ್ನ ತಮ್ಮಂದಿರು ಲೋಕೈಕವೀ ರರಾಗಿ ನಿನ್ನಲ್ಲಿ ಭೇದವಿಲ್ಲದೆ ಒಂದೇ ಮನಸ್ಸಿನಿಂದ ನಡೆಯುವುದನ್ನೂ ಯಮಲೋಕ ದಲ್ಲಿ ಇರುವ ನಿಮ್ಮ ತಂದೆಯಾದ ಪಾಂಡುಮಹಾರಾಜನು ಕೇಳಿ ಕೆಲವು ದಿವಸ ಗಳಲ್ಲಿ ಅಲ್ಲಿಗೆ ಹೋಗಿದ್ದ ನನ್ನನ್ನು ಕಂಡು ಕಣ್ಣೀರನ್ನು ಬಿಡುತ್ತಾ ದೈನ್ಯಪಟ್ಟು ಕೊಂಡು—ಹರಿಶ್ಚಂದ್ರರಾಜನು ರಾಜಸೂಯವೆಂಬ ಮಹಾಯಜ್ಞವನ್ನು ಮಾಡಿ ದುದರಿಂದ ಇಂದ್ರನ ಸಭೆಯಲ್ಲಿ ಆತನ ಅರ್ಧಾಸನದಲ್ಲಿ ಕುಳಿತು ಸಕಲಭೋಗಗ ಳನ್ನೂ ಅನುಭವಿಸುತ್ತಾನೆ. ನಾನು ಅಂಥಾ ಭಾಗ್ಯಕ್ಕೆ ಪಾತ್ರನಾಗಲಿಲ್ಲ. ನನ್ನ ಐದು ಮಂದಿ ಮಕ್ಕಳೂ ದೇವತೆಗಳ ಅಂಶದಿಂದ ಹುಟ್ಟಿದವರಾದುದರಿಂದ ಲೋಕೈಕ ವೀರರಾಗಿ ಪ್ರಸಿದ್ಧಿಯನ್ನು ಪಡೆದಿದ್ದಾರೆ. ಅದೂ ಅಲ್ಲದೆ ಭೂಮಿಯ ಭಾರವನ್ನು ಇಳಿಸುವುದಕ್ಕೆ ಬ್ರಹ್ಮ ಮೊದಲಾದ ದೇವತೆಗಳ ಪ್ರಾರ್ಥನೆಯಿಂದ ಯದುಕುಲದಲ್ಲಿ ಕೃಷ್ಣನೆಂಬ ಹೆಸರಿನಿಂದ ಹುಟ್ಟಿರುವ ಮಹಾವಿಷ್ಣುವು ನನ್ನ ಮಕ್ಕಳಿಗೆ ನೆಂಟನಾ ಗಿಯೂ ಸ್ನೇಹಿತನಾಗಿಯೂ ಪಾಲಕನಾಗಿಯೂ ಮಂತ್ರಿಯಾಗಿಯೂ ದೂತನಾಗಿ

ಯೂ ಇದ್ದಾನೆ. ಆದಕಾರಣ ಲೋಕದಲ್ಲಿ ಅವರಿಗೆ ಯಾವ ಕಾರ್ಯವೂ ಅಸಾಧ್ಯವಲ್ಲ. ಆದುದರಿಂದ ನೀವು ನನ್ನ ಮೇಲೆ ಕರುಣವಿಟ್ಟು ನನ್ನ ಮಗನಾದ ಧರ್ಮರಾಜನಿಗೆ ರಾಜಸೂಯಯಾಗವನ್ನು ಮಾಡುವಂತೆ ತಿಳಿಸಿರಿ. ಅತನು ಮಾಡಿದುದೇ ಆದರೆ ನಾನು ತಂದೆ ಅಜ್ಜ ಮುತ್ತಜ್ಜರ ಗುಂಪುಗಳೊಡನೆ ಸೇರಿ ಸ್ವರ್ಗಲೋಕದಲ್ಲಿ ನಿತ್ಯ ಸುಖದಿಂದ ಇರುವೆನೆಂದು ಬೇಡಿಕೊಂಡನು. ನಾನು ಅತನ ಮಾತುಗಳನ್ನು ನಿನಗೆ ಹೇಳುವುದಕ್ಕಾಗಿ ಬಂದೆನು. ನಿನ್ನ ತಂದೆ ತಾತ ಮುತ್ತಾತಂದಿರು ದಿಗ್ವಿಜಯದಿಂದ ಸಂಪಾದಿಸಿದ ದ್ರವ್ಯಗಳಿಂದ ನಾಲ್ಕು ವರ್ಣದವರನ್ನೂ ಕಾಪಾಡಿ ಬಹಳ ಯಾಗಗಳನ್ನು ಮಾಡಿ ಇಂದ್ರನ ಸಭೆಯಲ್ಲಿ ಇರುವರು. ಅವರ ಹಾಗೆಯೇ ನೀನೂ ಈ ರಾಜಸೂಯಯಾಗವನ್ನು ಮಾಡು. ಈ ಯಜ್ಞವನ್ನು ಮಾಡುವುದು ಬಹಳ ಕಷ್ಟವು. ಇದರಿಂದ ನಿನಗೆ ಬಹು ಮಂದಿ ಅರಸುಗಳೊಡನೆ ಜಗಳ ಉಂಟಾಗಿ ಅವರನ್ನು ಜಯಿಸಿದರೆ ಲೋಕದಲ್ಲಿ ನಿನಗೆ ಬಹು ಕೀರ್ತಿಯು ಬರುವುದೆಂದು ಹೇಳಿ ದೇವಲೋಕಕ್ಕೆ ಹೋದನು.

ತರುವಾಯ ಯುಧಿಷ್ಠಿರನು ಕೃಷ್ಣದ್ವೈಪಾಯನಮುನಿ ಧೌಮ್ಯನು ನೆಂಟರಿಷ್ಟರು ಮಂತ್ರಿಜನಗಳು ಇವರ ಮುಂದೆ ತನ್ನ ತಮ್ಮಂದಿರೊಡನೆ ಹೀಗೆಂದನು——ಪ್ರಪಂಚದಲ್ಲಿ ಜನರು ಮಕ್ಕಳನ್ನು ಪಡೆದು ಅವರಿಂದ ತಮಗೆ ಸಂತೋಷ ಉಂಟಾಗುವುದು ಎಂದು ನಿಜವಾಗಿ ತಿಳಿದಿರುವರು. ಆದಕಾರಣ ಒಳ್ಳೆಯ ಮಗನು ತನ್ನ ತಂದೆಯ ಸಂಕಲ್ಪವನ್ನು ಈಡೇರಿಸುವುದು ಅಗತ್ಯವಾದ ಕೆಲಸವಾಗಿಯೂ ನೀತಿಯಾಗಿಯೂ ಇರುವುದು. ಪರಲೋಕದಲ್ಲಿ ಇರುವ ನಮ್ಮ ತಂದೆಗೆ ಈ ಯಾಗವು ಹಿತವಾಗಿರುವುದು. ತಂದೆಯ ಹಿತಕ್ಕಾಗಿ ಈ ಯಾಗವನ್ನು ಮಾಡಬೇಕೆಂಬ ಬುದ್ಧಿಯೂ ಉಂಟು. ಇದರಿಂದ ಎಲ್ಲ ಅರಸುಗಳೂಡನೆ ಜಗಳ ಉಂಟಾಗುವುದು ಎಂಬ ಭಯವೂ ಉಂಟು. ಇದಕ್ಕೆ ಹೇಗೆ ಮಾಡಬೇಕೆಂದು ಕೇಳಿದನು. ಆ ಮಾತನ್ನು ಕೇಳಿ ಧೌಮ್ಯ ಮೊದಲಾದವರು——ಎಲೈ ಧರ್ಮರಾಜನೆ! ಈ ಯಾಗದಿಂದ ಸರ್ವಪಾಪಗಳೂ ಹರಿದು ಹೋಗುವುವು ಎಲ್ಲಾ ಅರಸುಗಳ ಐಶ್ವರ್ಯವೂ ನಿನ್ನನ್ನು ಹೊಂದುವುದು. ಮೂರು ಲೋಕದಲ್ಲಿಯೂ ನಿನ್ನ ಕೀರ್ತಿಯು ಪ್ರಸರಿಸುವುದು. ನಿನಗೆ ದೈವ ಸಹಾಯವು ಇರುವ ಕಾರಣ ನೀನು ಸಂದೇಹ ಪಡದೆ ರಾಜಸೂಯಯಾಗವನ್ನು ಮಾಡೆಂದು ಹೇಳಿದರು. ಧರ್ಮರಾಜನು ಅವರ ಮಾತುಗಳನ್ನು ಕೇಳಿ ಒಪ್ಪಿಕೊಂಡು——ಈ ಯಜ್ಞವನ್ನು ತಡೆಯಿಲ್ಲದೆ ನಡೆಸುವುದಕ್ಕೆ ಕೃಷ್ಣನೊಬ್ಬನೇ ಯೋಗ್ಯನೇ ಹೊರತು ಮತ್ತೊಬ್ಬರಿಗೆ ಸಾಮರ್ಥ್ಯವಿಲ್ಲವೆಂದು ಎಣಿಸಿ ಮಂತ್ರಿಗಳನ್ನು ಕರೆದು——ನಿಮ್ಮಲ್ಲಿ ಯಾರಾದರೂ ಒಬ್ಬನು ಜರುಕಾಗಿ ನಡೆಯುವ ಕುದುರೆಗಳನ್ನು ಹೂಡಿರುವ ತೇರನ್ನು ಏರಿ ಬೇಗ ಹೋಗಿ ಕೃಷ್ಣನನ್ನು ಕರೆದುಕೊಂಡು ಬರಲಿ ಎಂದು ಅಪ್ಪಣೆಯನ್ನು ಕೊಟ್ಟು ಕಳುಹಿಸಿ ಕೃಷ್ಣನ ಬರುವಿಕೆಯನ್ನೇ ಕಾದುಕೊಂಡಿದ್ದನು.

ಇತ್ತ ಕಳುಹಿಸಿದ ಮಂತ್ರಿಯು ದ್ವಾರಕಾವತಿಗೆ ಹೋಗಿ ಕೃಷ್ಣನಿಗೆ ಧರ್ಮರಾಜನ ಮಾತುಗಳನ್ನು ಅರಿಕೆ ಮಾಡಿದುದರಿಂದ ಅತನು ಸಂತೋಷಪಟ್ಟು ದ್ವಾರಕಾ

ಪಟ್ಟಣದಿಂದ ಹೊರಟು ದಾರಿಯಲ್ಲಿ ಒಂದು ದಿನವಾದರೂ ನಿಲ್ಲದೆ ಪ್ರಯಾಣದ ಮೇಲೆ ಪ್ರಯಾಣದಿಂದ ಬಂದು ಇಂದ್ರಪ್ರಸ್ಥ ಪಟ್ಟಣವನ್ನು ಹೊಕ್ಕು ಸೋದರತ್ತೆಯಾದ ಕುಂತೀದೇವಿಗೂ ಭಾವನಾದ ಧರ್ಮರಾಜನಿಗೂ ವಂದನೆಯನ್ನು ಮಾಡಿ ತನ್ನ ಸರಿವರೆಯದವನಾದ ಭೀಮನನ್ನು ತಬ್ಬಿಕೊಂಡು ತನಗೆ ಕಿರಿಯವರಾದ ಅರ್ಜುನ ನಕುಲಸಹದೇವರು ಬಂದು ನಮಸ್ಕರಿಸಲು ಅವರಿಗೆ ಆಶೀರ್ವಾದವನ್ನು ಮಾಡಿ ಆ ತರುವಾಯ ಧರ್ಮರಾಜನು ತೋರಿಸಿದ ದಿವ್ಯಸಿಂಹಾಸನದಲ್ಲಿ ಕುಳಿತುಕೊಂಡನು. ಆಗ ಯುಧಿಷ್ಠಿರನು ಅಶೇಷ ಲೋಕಗಳಿಗೆ ಗುರುವಾದ ಕೃಷ್ಣನನ್ನು ದೇವೋಪಚಾರಗಳಿಂದ ಪೂಜಿಸಿ ಎಲ್ಲ ಲೋಕಗಳ ಯೋಗಕ್ಷೇಮವನ್ನು ಯಾವಾಗಲೂ ಪರಾಂಬರಿಸುತ್ತಿರುವಂಥಾ ಕೃಷ್ಣದೇವರ ಯೋಗಕ್ಷೇಮವನ್ನು ತಾನು ಕೇಳಿದ ಮೇಲೆ ಸಂತೋಷದಿಂದ ತುಂಬಿದ ಕೃಷ್ಣನನ್ನು ಕುರಿತು—ಎಲೈ, ಮಹಾನುಭಾವನೇ! ನೀನು ಸಕಲ ಪ್ರಾಣಿಗಳ ಹೃದಯಗಳಲ್ಲಿ ನಿತ್ಯವೂ ಇರುವುದರಿಂದ ಅವರ ಅಂತಸ್ಥವಾದವಿಚಾರಗಳಲ್ಲಿ ನಿಮಗೆ ತಿಳಿಯದೆ ಇರುವುದು ಒಂದೂ ಇಲ್ಲ ಆದಾಗ್ಯೂ ಬಿನ್ನವಿಸುತ್ತೇನೆ; ಲಾಲಿಸು. ಯಮಲೋಕದಲ್ಲಿರುವ ನನ್ನ ತಂದೆಯಾದ ಪಾಂಡುರಾಜನು ಕಳುಹಿಸಿದ ನಾರದ ಮುನೀಂದ್ರನು ನನ್ನ ಒಳಿಗೆ ಬಂದು ಈ ಒಲಗದ ಚಾವಡಿಯಲ್ಲಿ ಎಲ್ಲರ ಮುಂದೆಯೂ—ರಾಜ ಸೂಯಯಾಗವನ್ನು ಮಾಡಿ ನಿಮ್ಮ ತಂದೆಗೆ ಸಂತೋಷವನ್ನುಂಟು ಮಾಡೆಂದು ಹೇಳಿದನು. ನನಗೆ ಅಂಥಾ ಶಕ್ತಿಯು ಇರುವುದೆಂದು ತಿಳಿದು ಹೇಳಿದನೋ ತಿಳಿಯದೆ ಹೇಳಿದನೋ ನಾನು ಅರಿಯೆನು. ಸತ್ಯಸಂಕಲ್ಪನಾದ ನೀನು ನನ್ನ ಹೃದಯದಲ್ಲಿ ಇದ್ದು ಪ್ರೇರಿಸಿದುದರಿಂದ ನಾನು ಆ ಕ್ರತುವನ್ನು ಮಾಡುತ್ತೇನೆಂದು ಒಪ್ಪಿಕೊಂಡೆನು. ಅದಕ್ಕೋಸ್ಕರ ನಿನ್ನನ್ನು ಬೇಗ ಕರೆಯಿಸಿದೆನು. ಈಗ ನೀನು ಆ ವಿಷಯದಲ್ಲಿ ನನಗೆ ಏನು ಅಪ್ಪಣೆಯನ್ನು ಕೊಡುತ್ತೀ? ಎಂದು ಕೇಳಿದನು.

ಆಗ ಕೃಷ್ಣನು ಧರ್ಮರಾಜನನ್ನು ಕುರಿತು—ಹಗೆಗಳನ್ನು ಮರ್ದಿಸುವ ನಿನ್ನ ತಮ್ಮಂದಿರ ಸಹಾಯದಿಂದಲೂ ನಿನ್ನ ಸತ್ಯದಿಂದಲೂ ಘನವಾದ ರಾಜಸೂಯಯಾಗವನ್ನು ಮಾಡುವುದಕ್ಕೆ ನೀನೇ ತಕ್ಕವನಲ್ಲದೆ ಮತ್ತೊಬ್ಬನೂ ಇಲ್ಲ. ಆದರೆ ಮೊದಲು ಪರಶುರಾಮನಿಂದ ಈ ಭೂಮಿಯ ಕ್ಷತ್ರಿಯರೆಲ್ಲರೂ ನಾಶವಾದ ಕಾಲದಲ್ಲಿ ಯದುವಂಶವೂ ಇಕ್ಷ್ವಾಕುವಂಶವೂ ಈ ಎರಡೇ ಉಳಿದುವು. ಇವುಗಳಲ್ಲಿ ನೂರೊಂದು ಕುಲಗಳು ಹೆಚ್ಚಾದುವು. ಮತ್ತು ಯಯಾತಿಯ ಮಕ್ಕಳಾದ ಯದುಭೋಜರ ವಂಶಗಳಲ್ಲಿ ಹನ್ನೊಂದು ಕುಲಗಳು ಆದುವು. ಈ ಕ್ಷತ್ರಿಯ ಕುಲದವರನ್ನೆಲ್ಲ ಜಯಿಸಿ ವಂಧ ಜರಾಸಂಧನೆಂಬ ಒಬ್ಬ ಅರಸು ಇದ್ದಾನೆ ಆತನ ಸಾಮರ್ಥ್ಯವನ್ನು ಹೇಳುತ್ತೇನೆ; ಕೇಳು. ಆತನಿಗೆ ಬಹಳ ಗರ್ವಿಷ್ಠನೂ ಬಹಳ ಬಲಿಷ್ಠನೂ ಆದ ಜೇದಿ ದೇಶಾಧಿಪತಿಯಾದ ಶಿಶುಪಾಲನೆಂಬ ಮಹಾವೀರನು ದಳಪತಿಯಾಗಿ ಎಡೆಬಿಡದೆ ಆತನನ್ನು ಒಲಗಿಸುತ್ತಿರುವನು. ಮತ್ತು ಆಯುಧಗಳಿಂದ ಹತರಾಗದವರೂ ಭಯಂಕರವಾದ ರಾಕ್ಷಸಮಾಯೆಯುಳ್ಳವರೂ ಆದ ಹಂಸನು ಡಿಬಿಕನು ಎಂಬೀರ್ವರೂ ಪರಮ ಸ್ನೇಹಿತರಾಗಿಯೂ ಮಂತ್ರಿಗಳಾಗಿಯೂ ಅವನನ್ನು ನಿರಂತರವೂ ಸೇವಿಸುವರು. ಮತ್ತು

ಕೌಶಿಕ ಚಿತ್ರಸೇನ ಎಂಬ ಇಬ್ಬರು ಅರಸುಗಳು ಅಗಣಿತ ಸೇನೆಗಳಿಂದ ಕೂಡಿಕೊಂಡು ಆತನಿಗೆ ಎಡಬಲದ ತೋಳುಗಳ ಹಾಗೆ ಸಹಾಯರಾಗಿ ಇರುವರು. ಮತ್ತು ಮಹಾ ಬಲಪರಾಕ್ರಮಿಯಾದ ಪ್ರಾಗ್ಜ್ಯೋತಿಷನಗರದ ಒಡೆಯನೂ ನಿನ್ನ ತಂದೆಗೆ ಸ್ನೇಹಿತನೂ ನಿನಗೆ ಬೇಕಾದವನೂ ಆಗಿರುವ ಭಗದತ್ತನೂ ಕೂಡ ಭಯದಿಂದ ಆತನನ್ನು ಓಲೈಸುತ್ತಿರುವನು ಅಂಗವಂಗ ಮಹೇಂದ್ರಕಿರಾತ ಹತಿಗಳು ಪೌಂಡ್ರಕ ವಾಸುದೇವನು ದಕ್ಷಿಣ ದೇಶಾಧಿಪತಿಗಳಾದ ಪುರಜಿತ್ತನು ಕರೂಶನು ಕಲಿಂಗನು ನಕುಲನು ಕರುಷಣನು ಸೂಪಹಿತನು ಮಣಿದತ್ತನು ಜಕ್ರನು ಶಾಲೆಯನು ಸರ್ವವಾಂಚಾಲರೂ ಶೂರಸೇನ ವುಷ್ಕರ ವುಳಿಂದ ಕಳಿಂದ ಕುಂತಳ ಮತ್ಸ್ಯ ಅಂಧ್ರ ಈ ದೇಶಗಳ ಅರಸುಗಳೆಲ್ಲರೂ ಭಯದಿಂದ ತಮ್ಮ ತಮ್ಮ ದೇಶಗಳನ್ನು ಬಿಟ್ಟು ಬಂದು ಆತನನ್ನು ಓಲಗಿಸುತ್ತಿರುವರು.

ಇನ್ನೊಂದು ವಿಶೇಷವನ್ನು ಕೇಳು ದುಷ್ಟನಾಗಿಯೂ ನಿನ್ನ ಸೋದರ ಮಾವನಾಗಿಯೂ ಇದ್ದ ಕಂಸನು ತನ್ನ ತಂದೆಯಾದ ಉಗ್ರಸೇನನನ್ನೂ ತಂಗಿಯಾದ ದೇವಕಿಯನ್ನೂ ನನ್ನ ತಂದೆಯಾದ ವಸುದೇವನನ್ನೂ ನಿರ್ಬಂಧದಲ್ಲಿ ಇಟ್ಟು ಬಹಳ ತೊಂದರೆ ಪಡಿಸುತ್ತಾ ಲೋಕಕ್ಕೆ ಕಂಟಕನಾಗಿದ್ದುದರಿಂದ ಅವನನ್ನು ನಾನು ಕೊಂದು ಹಾಕಿದೆನು. ಅವನು ಆ ಜರಾಸಂಧನಿಗೆ ಅಳಿಯನಾದುದರಿಂದ ತನ್ನ ಹೆಣ್ಣು ಮಕ್ಕಳ ದುಃಖವನ್ನು ಕೇಳಿ ರೌದ್ರಾಕಾರನಾಗಿ ನನಗೆ ಬಹಳ ಉಪದ್ರವಗಳನ್ನು ಮಾಡಲಾರಂಭಿಸಿ ಹಂಸಡಿಬೀಕರೇ ಮೊದಲಾದ ಶೂರರೊಡನೆ ಕೂಡಿ ಲೆಕ್ಕವಿಲ್ಲದ ಸೇನೆಯನ್ನು ಕರಕೊಂಡು ನನ್ನ ಪಟ್ಟಣವಾದ ಮಧುರೆಗೆ ಬಂದು ಮುತ್ತಿಗೆಯನ್ನು ಹಾಕಿದನು. ನಾವು ಕೂಡ ಮಹಾ ವೀರರಾದ ಯದು ವೃಷ್ಣಿ ಭೋಜ ಅಂಧಕ ಸೈನ್ಯಗಳೊಡನೆ ಹೊರಟು ಜಗಳವನ್ನು ಮಾಡುತ್ತಾ ಆ ಜರಾಸಂಧನು ನನ್ನಿಂದ ಸಾಯುವವನಲ್ಲವೆಂದು ತಿಳಿದು ಸಹಾಯಹೀನನಾಗುವಂತೆ ಮಾಡಬೇಕೆಂದು ನೆನೆದು ಉಪಾಯದಿಂದ ಹೊಯ್ಲಲ್ಲಿ ಹಂಸನು ಹತನಾದನೆಂದು ಡಿಬಿಕನಿಗೆ ತಿಳಿಯಪಡಿಸಿದೆನು. ಆ ಮಾತನ್ನು ಕೇಳಿ ಅವನು ದುಃಖಪಟ್ಟು ಹಂಸನಿಲ್ಲದೆ ನಾನು ಇರಬಾರದೆಂದು ದುಃಖದಿಂದ ಕಡಲಲ್ಲಿ ಬಿದ್ದು ಕಾಲ ನರಮನೆಗೆ ಹೋದನು. ಆ ಸುದ್ದಿಯನ್ನು ಹಂಸನು ಕೇಳಿ ತಮ್ಮನ ಮೇಲಣ ಹೆಚ್ಚಾದ ಸ್ನೇಹದಿಂದ ವಿಷವನ್ನು ಕುಡಿದು ತಾನೂ ಸತ್ತನು. ಆ ಮೇಲೆ ಜರಾಸಂಧನು ಸಹಾಯಹೀನನನಾಗಿ ವ್ಯಸನದಿಂದ ಮುತ್ತಿಗೆಯನ್ನು ತೆಗೆದು ತನ್ನ ಪಟ್ಟಣಕ್ಕೆ ಹೋದನು. ನಾವು ಅವನ ಭಯದಿಂದ ಮಧುರಾ ಪಟ್ಟಣವನ್ನು ಬಿಟ್ಟು ಕಡಲ ನಡುವೆ ದ್ವಾರಕೆ ಎಂಬ ದುರ್ಗವನ್ನು ಮಾಡಿಕೊಂಡು ಅಲ್ಲಿ ಇರುತ್ತೇವೆ.

ಮತ್ತು ಆ ಜರಾಸಂಧನ ಕೆಟ್ಟ ನಡತೆಗಳಾವುವಂದರೆ—ಆತನು ಮಹಾ ಪಾಪಾತ್ಮನಾಗಿ ಅನೇಕರಾದ ಅರಸುಮಕ್ಕಳನ್ನು ಹಿಡಿದುಕೊಂಡು ಬಂದು ಗಿರಿವ್ರಜವೆಂಬ ವುರದಲ್ಲಿ ಸೆರೆಹಾಕಿ ಆ ದೇವರಿಗೆ ತಾನು ಭೈರವ ವೂಜೆಯನ್ನು ಮಾಡುತ್ತಾ ಪಾಪಕೆ ಹೆದರದೆ ಪ್ರತಿದಿನವೂ ಒಂದೊಂದು ನರಬಲಿಯನ್ನು ಕೊಡುತ್ತಾ ಇದ್ದಾನೆ, ಅಂಥಾ ಕ್ರೂರ ಕಾರ್ಯವನ್ನು ಮಾಡುವ ಆ ಕೆಟ್ಟ ಜರಾಸಂಧನೊಬ್ಬನನ್ನು ಮಾತ್ರ ನೀನು ಯುದ್ಧದಲ್ಲಿ ಕೊಂಡು ಹಾಕಿದರೆ ಸಮಸ್ತ ಸಾಮ್ರಾಜ್ಯವೂ ನಿನ್ನನ್ನು ಸೇರುವುದು.

ರಾಜಸೂಯ ಯಾಗವನ್ನು ನೀನು ಕಡೆಯಿಲ್ಲದ ಹಾಗೆ ಮಾಡಬಹುದು. ಆದರೆ ಆ ಮಗಧದೇಶದ್ಧರಸನಾದ ಜರಾಸಂಧನು ಯುದ್ಧದಲ್ಲಿ ಆಯುಧಗಳಿಂದ ಜಯಿಸದ ಹಾಗೆ ಆತನಿಗೆ ಈಶ್ವರನ ವರವುಂಟು. ಆದಾಗ್ಯೂ ಬಲಿಷ್ಠನೂ ನಿನ್ನ ತಮ್ಮನೂ ಆದ ಈ ಭೀಮಸೇನನು ಮಲ್ಲಯುದ್ಧವನ್ನು ಮಾಡಿ ಆಯಾಸವಿಲ್ಲದೆ ಅವನನ್ನು ಕೊಂದುಹಾಕುವನು. ರಕ್ಷಣೆಯಿಂದ ಭಗೀರಥನೂ ಸಹಾಯಸಂಪತ್ತಿನಿಂದ ಯೌವನಾಶ್ವನೂ ಬಲದಿಂದ ಭರತನೂ ತಪಸ್ಸಿನಿಂದ ಕಾರ್ತವೀರ್ಯನೂ ಬುದ್ಧಿಯಿಂದ ಮರುತ್ತನೂ ಮೊದಲು ಸಕಲ ಸಾಮ್ರಾಜ್ಯವನ್ನೂ ಪಡೆದರು. ಈಗ ಅನೆಲ್ಲವೂ ನಿನಗಿರುವುದರಿಂದ ಆ ದುರಾತ್ಮನು ಎಷ್ಟು ಬಲಿಷ್ಠನಾದರೂ ಎಂಥಾ ಶ್ರೇಷ್ಠನಾದರೂ ಅವನ ಪಾಪ ಕರ್ಮಗಳಿಂದ ಅವನ ಐಶ್ವರ್ಯವೆಲ್ಲಾ ಮಿಂಚಿನ ಹಾಗೆ ಕ್ಷಣಿಕವಾಗಿ ಹಾರಿಹೋಗುವುದು. ಅವನನ್ನು ಜಯಿಸುವುದು ನಿನಗೆ ಸುಲಭವಾಗಿರುವುದೆಂದು ಹೇಳಿದನು.

ಆ ಸಮಯದಲ್ಲಿ ಆ ಮಾತನ್ನು ಕೇಳಿ ಭೀಮಸೇನನು ಧರ್ಮರಾಜನೊಡನೆ ಹೀಗೆಂದನು—ಪ್ರಪಂಚದಲ್ಲಿ ಎಷ್ಟು ಅಧಿಕನಾದರೂ ಒಂದು ಕೆಲಸಕ್ಕೆ ಉದ್ಯೋಗಿಸಿ ಅದನ್ನು ಮಾಡದೆ ಬಿಟ್ಟರೆ ಅವನು ಐಶ್ವರ್ಯ ಕೀರ್ತಿಗಳನ್ನು ಪಡೆಯಲಾರನು. ಹೀನನಾದರೂ ತಾನು ಪ್ರಾರಂಭಿಸಿದ ಕೆಲಸಕ್ಕೆ ಎಷ್ಟು ಕಡೆ ಬಂದಾಗ್ಯೂ ಜಪಲಬುದ್ಧಿಯಿಂದ ಅದನ್ನು ಬಿಡದೆ ಪೂರಯಿಸಿದರೆ ಅವನು ಎಂಥಾ ಬಲಿಷ್ಠರನ್ನೂ ಜಯಿಸುವನು. ಅಧಿಕ ಪರಾಪ್ರಮಿಯ ಸಂಗಡ ಜಗಳವನ್ನು ಮಾಡಿ ಸೋತರೂ ಅವನಿಗೆ ಲೋಕದಲ್ಲಿ ಹೊಗಳುಂಟು. ಕೀಳನನ್ನು ಕೊಂದು ಗೆದ್ದಾಗ್ಯೂ ಹೂಗಳಿಲ್ಲ. ಅದುದರಿಂದ ಈ ಕೃಷ್ಣನ ಕರುಣೆಯಿಂದಲೂ ಅರ್ಜುನನ ಸಹಾಯದಿಂದಲೂ ನಿನ್ನ ಆಶೀರ್ವಾದದಿಂದಲೂ ಜಗದ್ರೋಹಿಯಾದ ಜರಾಸಂಧನನ್ನು ಜಗಳದಲ್ಲಿ ಜಯಿಸಲಾಪೆನು ಮತ್ತು ಆಹವನೀಯ ಗಾರ್ಹಪತ್ಯ ದಕ್ಷಿಣಗಳೆಂಬ ಅಗ್ನಿತ್ರಯಗಳೋಪಾದಿಯಲ್ಲಿ ನಾವು ಮೂರು ಜನವೂ ನಿನ್ನ ಮಹಾ ಯಜ್ಞದ ಕೆಲಸವನ್ನು ವಿಘ್ನವಿಲ್ಲದ ಹಾಗೆ ನಡೆಸುವೆವು. ಈ ಜರಾಸಂಧನೆಂಬ ಪಶುವನ್ನು ನನ್ನ ಭುಜಬಲವೆಂಬ ಬೆಂಕಿಗೆ ಆಹುತಿಯನ್ನು ಮಾಡುವೆನು ಎಂದು ಹೇಳಿದನು

ಆ ಬಳಿಕ ಅರ್ಜುನನು—ರಾಜೇಂದ್ರನೇ! ನೀನು ಎಲ್ಲಾ ಅರಸುಗಳನ್ನೂ ಜಯಿಸು. ಲೋಕದಲ್ಲಿ ನಿನ್ನ ಹೆಸರು ಪ್ರಸಿದ್ಧವಾಗುವ ಹಾಗೆ ರಾಜಸೂಯವನ್ನು ಮಾಡು. ನನ್ನ ಭುಜವೀರ್ಯಕ್ಕೆ ತಕ್ಕಹಾಗೆ ಇರುವ ಈ ಗಾಂಡೀವವೆಂಬ ಬಿಲ್ಲೂ ಅಕ್ಷಯಬಾಣವುಳ್ಳ ಬತ್ತಳಿಕೆಯೂ ದಿವ್ಯ ಬಾಣಗಳೂ ದುರ್ಜಯಗಳಾದ ರಥಾಶ್ವಗಳೂ ಈ ಓಲಗದ ಚಾವಡಿಯೂ ಸಾರ್ಥಕವಾಗಲಿ. ಮತ್ತು ಪರಾಕ್ರಮಿಯಾದವನಿಗೆ ಒಳ್ಳೆಯ ಕುಲವೂ ರೂಪೂ ಗುಣವೂ ದ್ರವ್ಯವೂ ಉಂಟಾದರೆ ಸುವರ್ಣಕ್ಕೆ ಸುಗಂಧಮುಂಟಾದಂತೆ ಅವನಿಗೆ ಮತ್ತೂ ಪ್ರಕಾಶಮುಂಟಾಗುವುದು. ಹೇಡಿಗೆ ಏನು ದೊರಕಿದರೂ ವ್ಯರ್ಥವಾಗುವುದು. ಈ ರಾಜಸೂಯ ನಿಮಿತ್ತವಾಗಿ ಪರಾಕ್ರಮದಿಂದ ಮಗಧನನ್ನು ಮರ್ದಿಸಿ ಸೆರೆಯಲ್ಲಿರುವ ಅರಸುಮಕ್ಕಳನ್ನು ಕಾಪಾಡಿದರೆ ಜಗತ್ತಿನಲ್ಲಿ ಅದಕ್ಕಿಂತ ಹೆಚ್ಚಾದ ಹೊಗಳೂ ಧರ್ಮವೂ ಏನಿರುವುದು ಎಂದು ಹೇಳಿದನು.

ಹೀಗೆ ಶೌರ್ಯವಚನಗಳನ್ನು ನುಡಿದ ನರವೃಕೋದರರ ನುಡಿಗೆ ನಾರಾಯಣನು ಸಂತೋಷಪಟ್ಟು—ಅಯ್ಯಾ! ಪ್ರಪಂಚದಲ್ಲಿ ಮನುಷ್ಯನಿಗೆ ಬುದ್ಧಿಯೂ ಧೈರ್ಯವೂ ಇದ್ದರೆ ಪರೋಪಕಾರದಲ್ಲಿ ಮನವನ್ನಿಟ್ಟು ಪರಾಕ್ರಮವನ್ನು ತೋರಿಸಿದರೆ ಅದಕ್ಕೆ ದೈವವೂ ಸಹಾಯವಾಗುವುದು. ಆದುದರಿಂದ ನಾವು ಮೂರು ಮಂದಿಯೂ ವಿನಯದಿಂದಲೂ ಪರಾಕ್ರಮದಿಂದಲೂ ಸಾಹಸದಿಂದಲೂ ಜರಾಸಂಧನನ್ನು ತಗಲಿ ಹೊಳೆಯು ತನ್ನ ವೇಗದಿಂದ ಮರವನ್ನು ಬೇರು ಸಹಿತವಾಗಿ ಕೀಳುವ ಹಾಗೆ ಅವನನ್ನು ನಿರ್ಮೂಲ ಮಾಡುವೆವು ಅಂದನು. ಆಗ ಧರ್ಮರಾಜನು—ಎಲೈ, ದನುಜಮರ್ದನನೇ! ಪ್ರಪಂಚದಲ್ಲಿ ನಿನಗೆ ಹಗೆಯಾದವರು ನಿನ್ನೊಡನೆ ಜಗಳವನ್ನು ಮಾಡಿ ಬೆಂಕಿಯಲ್ಲಿ ಬಿದ್ದ ಮಿಡತೆಯ ಹಾಗೆ ನಾಶವಾಗದೆ ಬದುಕಿ ಸುಖದಿಂದ ಇರುವುದುಂಟೇ? ಅಂಧಾ ಭುಜವಿಕ್ರಮವನ್ನು ಜರಾಸಂಧನು ಹೇಗೆ ಪಡೆದನು? ಅವನ ಹುಟ್ಟು ವಿಕೆಯ ಸ್ಥಿತಿಯು ಹೇಗೆ? ನನಗೆ ಹೇಳಬೇಕೆಂದು ಕೇಳಲು ಮುರಾರಿಯು—ಕೇಳೈಯ್ಯಾ, ಯುಧಿಷ್ಠಿರನೆ! ಬೃಹದ್ರಥನೆಂಬ ಅವನ ತಂದೆಯು ಮಗಧದೇಶಕ್ಕೆ ಒಡೆಯನಾಗಿಯೂ ಬಹು ಗಟ್ಟಿಗನಾಗಿಯೂ ಮೂರಕ್ಷೋಹಿಣೀ ಸೈನ್ಯವು ಳ್ಳವನಾಗಿಯೂ ಸೀಮೆಯನ್ನು ಕಾಪಾಡುತ್ತಿದ್ದು ಕಾಶೀರಾಜನ ಇಬ್ಬರು ಕುವರಿಯರನ್ನು ಮದುವೆಯಾಗಿ ಅತ್ಯಂತ ಸೌಖ್ಯವನ್ನು ಅನುಭವಿಸುತ್ತಾ ಮಕ್ಕಳಿಲ್ಲದೆ ಹೋದುದರಿಂದ ಪುತ್ರಕಾಮೇಷ್ಟಿಯನ್ನು ಮಾಡಿದನು. ಆ ಮೇಲೂ ಸಂತಾನವಾಗದಿರಲು ಸಂತತಿ ಇಲ್ಲದ ಸಂಪತ್ತು ಹೆಣಕ್ಕೆ ತೊಡಸಿದ ಚಿನ್ನದ ಒಡವೆಯಂತೆ ವ್ಯರ್ಥವೆಂದು ಎಣಿಸಿ ಸಕಲ ಸಂಪತ್ತುಗಳನ್ನೂ ಬಿಟ್ಟು ಬಿಟ್ಟು ಇಬ್ಬರು ಹೆಂಡಿರೊಡನೆ ಕೂಡಿ ಕಾಡಿಗೆ ಹೋಗಿ ಅಲ್ಲಿ ಮೋಕ್ಷಾಪೇಕ್ಷೆಯಿಂದ ಒಂದು ಮರದ ಕೆಳಗೆ ಉರಿಯುವ ಬೆಂಕಿಯಂತೆ ತೇಜೋವಂತನಾಗಿ ತಪಸ್ಸು ಮಾಡುತ್ತಿರುವ ಗೌತಮಕುಲಸಂಭವನಾದ ಜಂಡಕೌಶಿಕನೆಂಬ ಮುನಿಯನ್ನು ನೋಡಿ ಸಂತೋಷಪಟ್ಟು ಪ್ರದಕ್ಷಿಣನಮಸ್ಕಾರಾದಿಗಳನ್ನು ಮಾಡಿ ಬಹಳ ಭಯಭಕ್ತಿಗಳಿಂದ ಕೂಡಿದವರಾಗಿ ಅನೇಕ ದಿವಸಗಳ ವರೆಗೂ ಆತನನ್ನೇ ಆಶ್ರಯಿಸಿ ಸೇವೆಯನ್ನು ಮಾಡುತ್ತಾ ಬಂದನು. ಆ ಮುನೀಂದ್ರನು ರಾಯನ ಭಕ್ತಿಗೆ ಮೆಚ್ಚಿ ನಿನಗೆ ಬೇಕಾದುದನ್ನು ಬೇಡಿಕೋ; ಕೊಡುವೆನೆಂದು ಹೇಳಲು ಆಗ ಬೃಹದ್ರಥರಾಜನು ಆತನಿಗೆ ಸಾಷ್ಟಾಂಗ ವಂದನೆಯನ್ನು ಮಾಡಿ—ಜೀಯಾ, ಮುನೀಂದ್ರನೆ! ನನಗೆ ಸಮಸ್ತ ಸಂಪತ್ತುಗಳೂ ಉಂಟಾಗಿ ಸಂತಾನದ ಸಮೃದ್ಧಿಯು ಮಾತ್ರ ಇಲ್ಲದುದರಿಂದ ಉಳಿದುದೆಲ್ಲವೂ ವ್ಯರ್ಥವೆಂದು ತಿಳಿದು ತಪಸ್ಸು ಮಾಡಬೇಕೆಂದು ಇಲ್ಲಿಗೆ ಬಂದೆನು. ನೀವು ಕರುಣವಿಟ್ಟು ನನಗೆ ಮಕ್ಕಳಾಗುವಂತೆ ಅನುಗ್ರಹಿಸಿದರೆ ಕೃತಾರ್ಥನಾಗುವೆನೆಂದು ಬೇಡಿಕೊಂಡನು.

ಆಗ ಹಾಗೆಯೇ ಆಗಲೆಂದು ಅನುಗ್ರಹಿಸಿದ ಮುನೀಂದ್ರನ ವರದಿಂದ ಅವನಿಗೆ ಕಾಲಕ್ರಮವಾಗಿ ಒಬ್ಬ ಮಗನು ಹುಟ್ಟಲು ಆ ಶಿಶುವಿಗೆ ಜರಾಸಂಧನೆಂಬ ಹೆಸರಿಕ್ಕಿ ಅವನನ್ನು ಬಹು ಪ್ರೀತಿಯಿಂದ ಕಾಪಾಡುತ್ತಾ ಬಂದನು. ಅವನು ಬಿದಿಗೆಯ ಚಂದ್ರನಂತೆ ದಿನದಿನಕ್ಕೆ ಹೆಚ್ಚಾಗಿ ಬೆಳೆಯುತ್ತಾ ಬೇಸಿಗೆಯ ನಡುವಗಲ ಸೂರ್ಯನಂತೆ

ತೇಜಃಪುಂಜಯುಕ್ತನಾಗಿರಲು ಚಂಡಕೌಶಿಕ ಮುನಿಯು ಒಂದು ದಿವಸ ಆ ಪಟ್ಟಣಕ್ಕೆ ಬಂದು ರಾಜನಿಂದ ಪೂಜಿತನಾಗಿ—ಕೇಳಯ್ಯಾ, ಬೃಹದ್ರಥನೇ! ಪೂರ್ವದಲ್ಲಿ ರಾಕ್ಷಸಿಯು ನಿನಗೆ ಮಾಡಿದ ಉಪಕಾರವನ್ನು ಜ್ಞಾನದೃಷ್ಟಿಯಿಂದ ತಿಳಿದೆನು. ಮುಂದೆ ಈ ಕುಮಾರನು ಶಿವನನ್ನು ಪ್ರತ್ಯಕ್ಷನನ್ನಾಗಿ ಮಾಡಿಕೊಂಡು ಆತನಿಂದ ಲೋಕದಲ್ಲಿ ತಾನು ಅಸ್ತ್ರಶಸ್ತ್ರಗಳಿಂದ ಹತನಾಗದಂತೆ ವರವನ್ನು ಹೊಂದುವನು. ಇವನೊಡನೆ ಜಗಳಕ್ಕೆ ಬಂದ ಹಗೆಗಳು ಬೆಂಕಿಯಲ್ಲಿ ಬಿದ್ದ ಮಿಡತೆಗಳ ಹಾಗೆ ನಾಶವಾಗುವರು. ಗರುಡನ ಗತಿಯನ್ನು ಮಿಕ್ಕ ಹಕ್ಕಿಗಳು ಜಯಿಸಲಾರದ ಹಾಗೆ ದೇಶದ ಅರಸುಗಳೆಲ್ಲಾ ಇವನ ಶೌರ್ಯವನ್ನು ಗೆಲ್ಲಲಾರರು. ತೇಜೋವಂತರಲ್ಲಿ ಸೂರ್ಯನು ಹೇಗೆ ಹೆಚ್ಚಾಗಿರುವನೋ ಹಾಗೇ ಅರಸುಗಳಲ್ಲಿ ಇವನು ಹೆಚ್ಚಾಗಿರುವನು ಕೇಳು ಹೊಳೆಗಳು ಬೆಟ್ಟಗಳನ್ನು ಹೇಗೆ ಭೇದಿಸಲಾರವೋ ಹಾಗೇ ಸಕಲ ದಿವ್ಯಾಯುಧಗಳೂ ಇವನ ಒಡಲನ್ನು ಭೇದಿಸಲಾರವು. ಎಲ್ಲಾ ಹೊಳೆಗಳೂ ಕಡಲಿನಲ್ಲಿ ಸೇರುವ ಹಾಗೆ ಪರರಾಜರ ಸಂಪತ್ತುಗಳೆಲ್ಲಾ ಬಂದು ಇವನಲ್ಲಿ ಸೇರುವುವು ಎಂಬುದಾಗಿ ಮುಂದೆ ಬರುವ ಜರಾಸಂಧನ ಅಭಿವೃದ್ಧಿಯ ವಿಷಯವನ್ನು ಹೇಳಿ ಹೊರಟುಹೋದನು. ತರುವಾಯ ಬೃಹದ್ರಥರಾಜನು ಕೆಲವು ಕಾಲ ರಾಜ್ಯಭಾರವನ್ನು ಮಾಡಿ ಸರ್ವವಿದ್ಯಾನಿಪುಣನೂ ಪ್ರಾಯದವನೂ ಆಗಿರುವ ಮಗನಿಗೆ ಪಟ್ಟಾಭಿಷೇಕವನ್ನು ಮಾಡಿ ತಾನು ಮುಮುಕ್ಷುವಾಗಿ ರಾಣಿಯೊಡನೆ ಕೂಡಿ ತಪೋವನಕ್ಕೆ ಹೋದನು.

ಅನಂತರದಲ್ಲಿ ಜರಾಸಂಧನು ಮುನಿಯು ಕೊಡಿಸಿದ ಅಪ್ಪಣೆಯಂತೆ ಶಿವನನ್ನು ಪೂಜಿಸಿ ಮೆಚ್ಚಿಸಿ ವರಗಳನ್ನು ಪಡೆದು ಪರಜಕ್ರವರ್ತಿಗಳನ್ನೆಲ್ಲಾ ಜಯಿಸಿ ಮಹಾದುಷ್ಟನಾಗಿದ್ದಾನೆ ಇವನಿಗೆ ಸಹಾಯಕರಾಗಿದ್ದ ಹಂಸ ಡಿಬಿಕರನ್ನು ನಾನು ಭೇದೋಪಾಯದಿಂದ ಕೊಂದು ಹಾಕಿದ ಕಾರಣ ಈಗ ಆ ದುಷ್ಟನು ರೆಕ್ಕೆಗಳಿಲ್ಲದ ಹಕ್ಕಿಯ ಹಾಗಿದ್ದಾನೆ. ಅವನು ಮಹಾ ಪಾಪಾತ್ಮನಾಗಿರುವುದರಿಂದ ಸತ್ಯವಂತನಾದ ನಿನಗೆ ಅವನನ್ನು ಜಯಿಸುವುದು ಅಗಾಧವಲ್ಲ. ಈ ಅರ್ಜುನನ ಅಸ್ತ್ರಬಲವೂ ಭೀಮನ ಭುಜಬಲವೂ ನನ್ನ ನೀತಿಬಲವೂ ನಿನಗಿರುವಲ್ಲಿ ಯಾವ ಕಾರ್ಯ ತಾನೇ ಅಸಾಧ್ಯವಾಗುವುದು? ನಿನಗೆ ನನ್ನ ಮಾತಿನಲ್ಲಿ ನಂಬಿಕೆಯೂ ನನ್ನಲ್ಲಿ ಭರವಸವೂ ಇದ್ದರೆ ನನ್ನೊಡನೆ ಭೀಮಾರ್ಜುನರನ್ನು ಕಳುಹಿಸು ಎಂದು ಹೇಳಿದನು. ಆಗ ಧರ್ಮರಾಜನು—ಎಲೈ, ಕೃಷ್ಣನೇ! ನನಗೆ ಭೀಮಾರ್ಜುನರಿಬ್ಬರೂ ಎರಡು ಕಣ್ಣುಗಳು. ನೀನು ನನ್ನ ಹೃದಯವು. ಈ ಮೂರು ನುಂದಿಯನ್ನೂ ಬಿಟ್ಟು ಹೇಗಿರಲಿ? ಎಂಬ ಇದೊಂದು ಆಲೋಚನೆಯೇ ಹೊರತು ಇನ್ನೊಂದು ಯೋಚನೆಯೂ ಇಲ್ಲ. ನೀನು ಸಹಾಯಕನಾಗಿರುವಲ್ಲಿ ಭೀಮಸೇನನು ಆ ಜರಾಸಂಧನನ್ನು ಜಯಿಸುವುದು ಅತಿಶಯವೇನು! ಎಂದು ಹೇಳಿ ಭೀಮಾರ್ಜುರನ್ನು ಕರೆದು ಕೃಷ್ಣನ ಸ್ವಾಧೀನಕ್ಕೆ ಕೊಟ್ಟನು ಆಗ ಕೃಷ್ಣನು ಭೀಮಾರ್ಜುನರೊಡನೆ ಯುಧಿಷ್ಠಿರನಿಗೆ ಅಡ್ಡಬಿದ್ದು ಆತನ ಹರಕೆಯನ್ನು ಕೈಕೊಂಡು ಅಲ್ಲಿಂದ ಹೊರಟು ಬಹಳವಾದ ಬೆಟ್ಟಗುಡ್ಡಗಳನ್ನೂ ಎಡೆಬಿಡದೆ ದಟ್ಟವಾಗಿ ಬೆಳೆದಿರುವ ಕಾಡುಗಳನ್ನೂ ಹರಿಯುವ ಹೊಳೆಹಳ್ಳಗಳನ್ನೂ ದಾಟಿ ಸರಯೂ ನದಿಯನ್ನು ಹಾಯ್ದು ಪೂರ್ವ

ಕೋಸಲ ಮಿಥಿಲಾದೇಶಗಳನ್ನು ಕಳೆದು ಗಂಗಾನದಿಯನ್ನು ಅತಿಕ್ರಮಿಸಿ ನಿತ್ಯ ಪ್ರಯಾಣಗಳಿಂದ ಮಗಧದೇಶವನ್ನು ಹೊಕ್ಕು ಅಲ್ಲಿ ಪ್ರಸಿದ್ಧವಾಗಿರುವ ಗೋರಥ ವೆಂಬ ಬೆಟ್ಟವನ್ನು ಏರಿ ಗಿರಿವ್ರಜ ಪರ್ವತವನ್ನು ನೋಡಿ ಅಪೂರ್ವವಾದ ಅದರ ಚಂದಕ್ಕೂ ಸಮೃದ್ಧಿಗೂ ಆಶ್ಚರ್ಯಪಟ್ಟು ಭೀಮಾರ್ಜುನರೊಡನೆ—ಗೋರಥ ಋಷಭ ನೈಹಾರ ಋಷಗಿರಿ ಜೈತ್ರಕಾರಿ ಎಂಬ ಐದು ಪರ್ವತಗಳು ಭಟರ ಹಾಗೆ ಈ ಪರ್ವತದ ಸುತ್ತಲೂ ಇರುವುದರಿಂದ ಈ ಪಟ್ಟಣಕ್ಕೆ ಗಿರಿವ್ರಜವೆಂಬ ಹೆಸರಾಯಿತು. ಮೊದಲು ಈ ಸ್ಥಳದಲ್ಲಿ ಗೌತಮ ಮಹಾಮುನಿಯು ತನ್ನ ತಪೋಮಹಿಮೆಯಿಂದ ಹದಿನಾರು ಮಂದಿ ಋಷಿಗಳನ್ನು ಸೃಷ್ಟಿಸಿದನು. ಅವರ ಅನುಗ್ರಹದಿಂದಲೂ ಈ ದುರ್ಗದ ಬಲದಿಂದಲೂ ಇಲ್ಲಿನ ಅರಸುಗಳನ್ನು ಯಾರೂ ಗೆಲ್ಲಲಾರರು ಎಂದು ಹೇಳುತ್ತಾ ಬಾಗಿಲುಗಳಲ್ಲಿ ಹೋಗದೆ ಜೈತ್ರಗಿರಿಯ ಶಿಖರವನ್ನು ಏರಿ ಅಲ್ಲಿ ಇದ್ದ ಮೂರು ಭೇರಿಗಳನ್ನು ಕಂಡು ಮೊದಲು ಮಾಗಧರು ಮಾನುಷಾದವೆಂಬ ಎತ್ತನ್ನು ಕೊಂದು ಅದರ ಚರ್ಮದಿಂದ ಇವುಗಳನ್ನು ಮಾಡಿ ಇದ್ದಾರೆ. ಈ ಪಟ್ಟಣಕ್ಕೆ ಹಗೆಗಳಾದವರು ಹೊಕ್ಕರೆ ಇವು ಋಷಿಗಳ ಮಹಿಮೆಯಿಂದ ತಮ್ಮಿಂದ ತಾನೇ ಶಬ್ದಗಳನ್ನು ಮಾಡುವುವು ಎಂದು ತಿಳಿಸಿದನು. ತರುವಾಯ ಮೂರು ಮಂದಿಯೂ ತಮ್ಮ ಗಟ್ಟಿಯಾದ ಮುಷ್ಟಿಗಳಿಂದ ಅವುಗಳನ್ನು ಒಡೆದು ಅಲ್ಲಿನ ಬಾಗಿಲಿಂದ ಹೋಗಿ ಗ್ರಾಮಪ್ರವೇಶವನ್ನು ಮಾಡಿ ಹೂವಾಡಿಗನ ಮನೆಗೂ ಗಂದಿಗನ ಮನೆಗೂ ನುಗ್ಗಿ ಬಲಾತ್ಕಾರದಿಂದ ಹೂವಿನ ಮಾಲಿಕೆಗಳನ್ನೂ ಪರಿಮಳದ್ರವ್ಯಗಳನ್ನೂ ತೆಗೆದು ಅಲಂಕರಿಸಿಕೊಂಡು ರಾಜವೀಧಿಯಲ್ಲಿ ಬಂದು ಯಾವಾಗಲೂ ಬ್ರಾಹ್ಮಣರು ಹೋಗುವುದಕ್ಕೆ ಪ್ರತಿಬಂಧಕವಿಲ್ಲದ ಜರಾಸಂಧನ ಮಂದಿರದ ಗೋವಾಸವನ್ನು ಸಿಂಹಗಳು ಹಿಮವತ್ಪರ್ವತದ ಗುಹೆಯನ್ನು ಹೊಗುವ ಹಾಗೆ ಬ್ರಾಹ್ಮಣ ವೇಷಗಳಿಂದ ಹೊಕ್ಕರು.

ಆಗ ಅರ್ಧರಾತ್ರಿಯಲ್ಲಿಯಾದರೂ ಅಭ್ಯಾಗತರಾಗಿ ಬ್ರಾಹ್ಮಣರು ಒಂದರೆ ಕ್ಷಣದಲ್ಲಿಯೇ ಎದುರ್ಗೊಂಡು ಹೋಗಿ ಅವರನ್ನು ಕರೆದುಕೊಂಡು ಬಂದು ಪೂಜೆಯನ್ನು ಮಾಡುವಂಥ ಪದ್ಧತಿಯನ್ನು ಅನುಸರಿಸಿರುವ ಜರಾಸಂಧನು ಈ ಮೂರು ಮಂದಿಯನ್ನೂ ಬ್ರಾಹ್ಮಣರೆಂದೇ ತಿಳಿದು ಎದುರಾಗಿ ಬಂದು ಕರತಂದು ಪೀಠಗಳ ಮೇಲೆ ಕುಳ್ಳಿರಿಸಿ ಸಂತೋಷದಿಂದ ಪೂಜೆಗಳನ್ನು ಮಾಡಲು ಇವರು ಅವುಗಳನ್ನು ಕೈಕೊಳ್ಳದೆ ಗರ್ವದಿಂದ ನಿಂತಿರುವುದನ್ನು ನೋಡಿ ಕಪಟಿಗಳೆಂದು ತಿಳಿದು ಇವರನ್ನು ಕುರಿತು—ಅಯ್ಯಾ! ನೀವು ಸ್ನಾತಕರಾಗಿದ್ದರೆ ಬಲ್ಮೆಯಿಂದ ಪುಷ್ಪಗಂಧಗಳನ್ನು ತೆಗೆದುಕೊಂಡು ಹೋಗುವುದಕ್ಕೆ ಅಡ್ಡಿಯಾಗಿರುವಬಾಗಿಲಲ್ಲಿ ಒಂದು ನನಗೆ ಅಪಕಾರವನ್ನು ಮಾಡಿದುದಲ್ಲದೆ ನಾನು ಮಾಡುವ ಪೂಜೆಯನ್ನೂ ಕೈಕೊಳ್ಳದೆ ಇರುವುದೇನು? ನೀವು ವೇಷಧಾರಿಗಳಂತಿರುವಿರಿ. ನಿಮ್ಮಲ್ಲಿ ವೇಷದಿಂದ ಬ್ರಾಹ್ಮಣತ್ವವೂ ಉದ್ದವಾಗಿಯೂ ದಪ್ಪವಾಗಿಯೂ ಇರುವ ತೋಳುಗಳೂ ಅಗಲವಾದ ಎದೆಗಳೂ ಉಳ್ಳ ರಾಜಲಕ್ಷಣಗಳಿಂದ ಕ್ಷತ್ರಿಯತ್ವವೂ ತೋರುತ್ತದೆ ಎಂದು ಹೇಳಿದನು. ಅದಕ್ಕೆ ಕೃಷ್ಣನು—ಎಲ್ಲೈ, ಅರಸೇ! ನಾವು ಕ್ಷತ್ರಿಯ ಜಾತಿಯ ಸ್ನಾತಕರಾಗಿರುವೆವು. ಮತ್ತು ಆಟಂಕ

ವುಳ್ಳ ಬಾಗಿಲಲ್ಲಿ ಹೋಗುವುದು ಹಗೆಗಳ ಮನೆಗೆ ಬರುವ ಬಾಹುವೀರ್ಯಸಂಪನ್ನರಾ
ಕ್ಷತ್ರಿಯರಿಗೆ ಧರ್ಮವು. ಪುಷ್ಪಗಂಧಗಳಲ್ಲಿ ಲಕ್ಷ್ಮಿ ಇರುವ ಕಾರಣ ಅವುಗಳನ್ನ
ಬಲ್ಮೆಯಿಂದ ತೆಗೆದು ಧರಿಸಿಕೊಂಡೆವು ನಿನ್ನಲ್ಲಿ ನಮಗೆ ಬೇರೆ ಕೆಲಸವಿರುವುದರಿಂ
ಈಗ ನೀನು ಮಾಡುವ ಪೂಜೆಗಳನ್ನು ಕೈಕೊಳ್ಳದೆ ಬಿಟ್ಟೆವು ಎಂದು ಹೇಳಿದನು.

ಅದನ್ನು ಕೇಳಿ ಜರಾಸಂಧನು—ನೀವು ನನಗೂ ನಾನು ನಿಮಗೂ ಎಂದಿಗ
ದ್ರೋಹವನ್ನು ಮಾಡಿದುದಿಲ್ಲ. ನಿಷ್ಕಾರಣವಾಗಿ ನಿಮಗೂ ನನಗೂ ಹಗೆತನವು ಹೇ
ಉಂಟಾಯಿತು? ಮತ್ತು ನಾನು ದೇವತೆಗಳಿಗೂ ಮುನಿಗಳಿಗೂ ಬ್ರಾಹ್ಮಣರಿಗ
ಭಕ್ತನಾಗಿಯೂ ಉತ್ತಮವಾದ ಕ್ಷತ್ರಿಯ ಕುಲಾಚಾರವುಳ್ಳವನಾಗಿಯೂ ಇದ್ದೆ
ಎಂದು ಹೇಳಿದನು. ಅದಕ್ಕೆ ಕೃಷ್ಣನು—ಅಯ್ಯಾ! ಈಗ ನಾವು ಯಾವನು ಹೆಚ್ಚಾ
ತನ್ನ ಅಭಿವೃದ್ಧಿಗಾಗಿ ಎಲ್ಲಾ ನೃಪಕುಲದವರನ್ನೂ ಪಾಪಭೀತಿಯಿಲ್ಲದೆ ದಿನಂಪ್ರತಿಂ
ಲ್ಲಿಯೂ ಕೊಲ್ಲುವನೋ ಅಂಥಾ ದುಷ್ಟನನ್ನು ಕೊಲ್ಲುವುದಕ್ಕೆ ಬಂದೆವು. ನೀ
ಬಹಳ ಉತ್ತಮ ಕ್ಷತ್ರಿಯನೆಂದು ಹೇಳಿಕೊಂಡೆಯಲ್ಲ! ನಿನ್ನ ಪ್ರಯೋಜನಕ್ಕೋಸ್ಕ
ಉತ್ತಮರೂ ನಿರಪರಾಧಿಗಳೂ ಆದ ಅರಸುಮಕ್ಕಳನ್ನು ಹಿಡಿದು ಸೆರೆಯಲ್ಲಿ ಹಾ
ದಿನವಹಿ ಭೈರವನಿಗೆ ನರಬಲಿಯನ್ನು ಕೊಡುವ ನಿನ್ನಂಥಾ ಅರಸುಗಳು ಪೂರ್ವದ
ಯಾರಾದರೂ ಇದ್ದರೇ? ಲೋಕದಲ್ಲಿ ಇದಕ್ಕಿಂತಲೂ ಹೆಚ್ಚಾದ ಪಾಪ ಉಂಟೇ
ನೀನು ಈ ಪ್ರಕಾರವಾದ ಪಾಪಾಚರಣೆಯಿಂದ ಭೈರವ ಪೂಜೆಯನ್ನು ಮಾಡಿದರೆ ಸ
ತಿಯನ್ನು ಹೊಂದಲಾರೆ ಆದಕಾರಣ ನಿನಗೆ ಬುದ್ಧಿ ಇದ್ದರೆ ನೀನು ಸೆರೆಯಲ್ಲಿ ಇಟ್ಟಿರು
ಅರಸುಮಕ್ಕಳನ್ನು ನನ್ನ ಮಾತಿನ ಪ್ರಕಾರ ಬೇಗನೆ ಬಿಟ್ಟು ಕಳುಹಿಸು. ನಾನ
ಕೃಷ್ಣನು ಇವನು ಭೀಮನು. ಈತನು ಅರ್ಜುನನು. ಇದರ ಮೇಲೂ ನೀನ
ಮೂರ್ಖನಾಗಿ ಅರಸುಗಳನ್ನು ಬಿಡದೆ ಇದ್ದರೆ ಈ ಕ್ಷಣದಲ್ಲಿಯೇ ಈ ಪಾಂಡವರ
ನಿನ್ನನ್ನು ಕೊಂದು ಅವರನ್ನು ಬಿಡಿಸುವರು ಎಂದು ಹೇಳಿದನು.

ಆ ಮಾತನ್ನು ಕೇಳಿದೊಡನೆ ಜರಾಸಂಧನು ಹಸಿದ ಹೆಬ್ಬುಲಿಯಂತೆ ರೌದ್ರಾ
ಕಾರನಾಗಿ—ಎಲೋ, ಕೃಷ್ಣನೆ! ನನ್ನನ್ನು ನೀನು ಮೊದಲು ನೋಡಿಲ್ಲವೇ? ಲೋ
ದಲ್ಲಿ ಕ್ಷತ್ರಿಯನಾಗಿ ಹುಟ್ಟಿದವನು ಸಕಲ ಅರಸುಗಳನ್ನೂ ಗೆದ್ದು ಪ್ರಸಿದ್ಧನಾಗಿ
ವುದು ಧರ್ಮವಾಗಿಲ್ಲವೋ? ದೇವತಾ ನಿಮಿತ್ತವಾಗಿ ನಾನು ಹಿಡಿದುತಂದಿರುವ ಅ
ಸುಗಳನ್ನೂ ಎಂದಿಗೂ ಬಿಡುವುದಿಲ್ಲ. ನನ್ನದ್ದವಾಗಿ ನಿಂತು ನಿಮ್ಮ ಸೇನೆಯ
ನಮ್ಮ ಸೇನೆಯೂ ಕೂಡಿ ಜಗಳವನ್ನು ಮಾಡಬೇಕೋ? ಇಲ್ಲವೆ ನಿಮ್ಮ ಮೂವ
ಸಂಗಡವಾಗಲಿ ಒಬ್ಬನ ಸಂಗಡವಾಗಲಿ ಯುದ್ಧವನ್ನು ಮಾಡಬೇಕೋ? ನಿಮ
ಇಷ್ಟವಾಗಿರುವ ಮೇರೆಗೆ ಯುದ್ಧಕ್ಕೆ ಬರುವೆನು. ಅದನ್ನು ತಿಳಿಸಿರಿ ಎಂದು ಹೇಳಲ
ಕೃಷ್ಣನು ನಕ್ಕು—ಒಬ್ಬನೊಡನೆ ಮೂರು ಮಂದಿಯೂ ಕಾದುವುದು ನ್ಯಾಯವಲ್ಲ
ನಮ್ಮ ಮೂವರಲ್ಲಿ ನೀನು ಒಬ್ಬನನ್ನು ಅಪೇಕ್ಷಿಸಿದರೆ ಅವನು ಮಲ್ಲಯುದ್ಧವನ
ಮಾಡಿ ನಿನ್ನನ್ನು ಗೆಲ್ಲುವನೆಂದು ಹೇಳಿದನು. ಜರಾಸಂಧನು ಗರ್ವದಿಂದ—ಭೀಮ
ಸೇನನೊಡನೆ ಮಲ್ಲ ಯುದ್ಧವನ್ನು ಮಾಡುವೆನು ಎಂದು ಹೇಳಿ ಕೂಡಲೆ ತನ್ನ ಮ

ನಾದ ಸಹದೇವನೆಂಬುವನಿಗೆ ತನ್ನ ರಾಜ್ಯದ ಪಟ್ಟಾಭಿಷೇಕವನ್ನು ಮಾಡಿ ಯುದ್ಧ ರಂಗಸ್ಥಳದಲ್ಲಿ ಬಂದು ನಿಂತನು. ಆಗ ಭೀಮಸೇನನೂ ಬಂದು ಎದುರಾಗಿ ನಿಂತನು. ಬಳಿಕ ಇಬ್ಬರೂ ತೋಳುಗಳನ್ನು ತಟ್ಟಿಕೊಂಡು ಒಬ್ಬರನ್ನೊಬ್ಬರು ತಗಲಿ ನಾನಾ ಪ್ರಕಾರಗಳಿಂದ ಹದಿನೈದು ದಿವಸಗಳ ವರೆಗೂ ಜಗಳವನ್ನು ಮಾಡುತ್ತಿದ್ದರು. ಹೀಗಿರುವಲ್ಲಿ ಭೀಮಸೇನನು ತನ್ನ ತಂದೆಯಾದ ವಾಯುವನ್ನು ನೆನೆದು ಕೃಷ್ಣನ ಅನುಗ್ರಹದಿಂದ ಬಹುಸಾಹಸವನ್ನು ಮಾಡಿ ಜರಾಸಂಧನನ್ನು ಹಿಡಿದುಕೊಂಡು ಮೇಲಕ್ಕೆ ಎತ್ತಿ ಚಕ್ರಾಕಾರವಾಗಿ ತಿರುಗಿಸಿ ಮೂಗಿನಲ್ಲಿಯೂ ಬಾಯಿಯಲ್ಲಿಯೂ ಕಿವಿಗಳ ಕನ್ನಗಳಲ್ಲಿಯೂ ರಕ್ತಧಾರೆಗಳು ಸುರಿಯುವ ಹಾಗೆ ಭೂಮಿಯಲ್ಲಿ ಬಡಿದು ಅಂಗಾಂಗಗಳನ್ನೆಲ್ಲ ಮುರಿದು ಕಾಲುಗಳಿಂದ ಜನ್ನಾಗಿ ಹೊಸಕಿ ಕೊಂದು ಹಾಕಿದನು.

ಆಗ ಕೃಷ್ಣನು ಅತನ ಮಗನಾದ ಸಹದೇವನಿಗೆ ಅಭಯದಾನವನ್ನು ಮಾಡಿ ಜರಾಸಂಧನು ಸೆರೆಯಲ್ಲಿ ಹಾಕಿದ್ದ ದೊರೆಗಳನ್ನೆಲ್ಲಾ ಬಿಡಿಸಿ ಅವರನ್ನು ಕುರಿತು—ನೀವು ಚಕ್ರವರ್ತಿಯಾದ ಧರ್ಮರಾಜನು ಮಾಡುವ ರಾಜಸೂಯಯಾಗಕ್ಕೆ ನಿಮ್ಮಲ್ಲಿರುವ ಅಮೂಲ್ಯ ವಸ್ತುಗಳನ್ನು ತೆಗೆದುಕೊಂಡು ಬರಬೇಕು ಈಗ ನಿಮ್ಮನಿಮ್ಮ ಪಟ್ಟಣಕ್ಕೆ ಹೋಗಿರಿ ಎಂದು ಅಪ್ಪಣೆಯನ್ನು ಕೊಟ್ಟು ಅವರನ್ನು ಕಳುಹಿಸಿದನು. ಆ ಮೇಲೆ ಜರಾಸಂಧನ ಮಗನಾದ ಸಹದೇವನು ಕೊಟ್ಟ ಕೈಗಾಣಿಕೆಯನ್ನು ತೆಗೆದುಕೊಂಡು ಅತನಿಗೂ ಧರ್ಮರಾಜನ ಯಜ್ಞಕ್ಕೆ ಒರುವಂತೆ ಅಪ್ಪಣೆಕೊಟ್ಟು ಆ ಜರಾಸಂಧನ ರಥವನ್ನು ತೆಗೆದುಕೊಂಡು ಗರುಡನನ್ನು ನೆನಸಿ ಒರಮಾಡಿ ಅವನನ್ನು ಸಾರಥ್ಯದಲ್ಲಿ ನಿಯೋಗಿಸಿ ಭೀಮಾರ್ಜುನರು ಸಹಿತವಾಗಿ ಕೃಷ್ಣನು ಇಂದ್ರಪ್ರಸ್ಥಕ್ಕೆ ಬಂದು ಧರ್ಮರಾಜನನ್ನು ಕಂಡು ಮೂರು ದಿವಸ ಅಲ್ಲಿ ಇದ್ದು ಆ ಮೇಲೆ ಧರ್ಮರಾಜನ ಅಪ್ಪಣೆಯನ್ನು ತೆಗೆದುಕೊಂಡು ಅಲ್ಲಿಂದ ಹೊರಟು ದ್ವಾರಕಾ ಪಟ್ಟಣಕ್ಕೆ ಬಂದು ಜರಾಸಂಧನನ್ನು ಕೊಂದುಹಾಕಿದ ಸುದ್ದಿಯನ್ನು ತನ್ನವರಿಗೆಲ್ಲ ಹೇಳಲು ಅವರೆಲ್ಲರೂ ಸಂತೋಷಪಟ್ಟರು.

ಇತ್ತಲಾ ಧರ್ಮರಾಜನು ದಿಗ್ವಿಜಯಾರ್ಥವಾಗಿ ಮೂಡಣದಿಕ್ಕಿಗೆ ಭೀಮಸೇನನನ್ನೂ ಬಡಗಣ ದಿಕ್ಕಿಗೆ ಅರ್ಜುನನನ್ನೂ ಪಡುವಣ ದಿಕ್ಕಿಗೆ ನಕುಲನನ್ನೂ ತೆಂಕಣ ದಿಕ್ಕಿಗೆ ಸಹದೇವನನ್ನೂ ಕಳುಹಿಸಲು ಆ ನಾಲ್ಕು ಮಂದಿಯೂ ಸಕಲಸೇನಾಸಮೇತರಾಗಿ ತಮತಮಗೆ ಕಟ್ಟುಮಾಡಿದ ದಿಕ್ಕುಗಳಿಗೆ ಹೋಗಿ ಆಯಾ ದಿಕ್ಕಿನ ಅರಸುಗಳನ್ನು ಗೆದ್ದು ಅವರುಗಳಿಂದ ಅನೇಕ ದ್ರವ್ಯ ವಸ್ತು ವಾಹನ ಮೊದಲಾದುವುಗಳನ್ನು ಕಪ್ಪವಾಗಿ ತೆಗೆದುಕೊಂಡು ತಿರಿಗಿ ಇಂದ್ರಪ್ರಸ್ಥಕ್ಕೆ ಬಂದು ತಾವು ತಾವು ತಂದ ಮಿತಿಯಿಲ್ಲದ ಧನಕನಕಾದಿ ಸಮಸ್ತ ಪದಾರ್ಥಗಳನ್ನು ಯುಧಿಷ್ಠಿರನಿಗೆ ಒಪ್ಪಿಸಲು ಆ ಬಳಿಕ ಕಪ್ಪದ ಪದಾರ್ಥಗಳಿಂದ ಇಂದ್ರಪ್ರಸ್ಥ ಪಟ್ಟಣವೆಲ್ಲಾ ತುಂಬಿ ಶೋಭಿಸುತ್ತಿದ್ದಿತು.

ಆಗ ಶ್ರೀ ಕೃಷ್ಣನು ದ್ವಾರಕಾ ಪಟ್ಟಣದಿಂದ ವಸುದೇವ ಬಲರಾಮ ಅಕ್ರೂರ ಸಾತ್ಯಕಿ ಮೊದಲಾದ ಬಂಧುಗಳೊಡನೆಯೂ ದೇವಕಿ ರೋಹಿಣಿ ರುಕ್ಮಿಣಿ ಸತ್ಯಭಾಮೆ

ಮೊದಲಾದ ರಾಣಿವಾಸಗಳೊಡನೆಯೂ ಬಂದು ಬಹಳವಾದ ಧನ ಕನಕ ರತ್ನ ವಸ್ತು ವಾಹನಾದಿಗಳನ್ನು ಧರ್ಮರಾಜನಿಗೆ ಒಪ್ಪಿಸಿ ಆತನಿಂದ ಪೂಜಿತನಾದನು. ಹಾಗೆಯೇ ಸಕಲದೇಶದ ಅರಸುಗಳೂ ಬಂದು ಅಪರಿಮಿತವಾದ ಕಪ್ಪಕಾಣಿಕೆಗಳನ್ನು ಧರ್ಮರಾಜನಿಗೆ ಒಪ್ಪಿಸಿ ಆತನಿಂದ ಪೂಜಿತರಾಗಿ ಆತನು ಮಾಡಿಸಿ ಕೊಟ್ಟ ಬಿಡಾರಗಳಲ್ಲಿ ಇಳಿದುಕೊಂಡರು ಆ ಮೇಲೆ ಧರ್ಮರಾಜನು ಕೃಷ್ಣನ ಸಮೀಪಕ್ಕೆ ಬಂದು —ನಿನ್ನ ಕಟಾಕ್ಷದಿಂದ ನನ್ನ ತಮ್ಮಂದಿರು ಸಕಲದೇಶಗಳನ್ನೂ ಜಯಿಸಿ ಕಪ್ಪ ಗಳನ್ನು ತೆಗೆದುಕೊಂಡು ಬಂದರು. ಇನ್ನು ಮೇಲೆ ನನಗೆ ರಾಜಸೂಯಯಾಗ ವನ್ನು ಮಾಡುವುದಕ್ಕೆ ಅಪ್ಪಣೆಯನ್ನು ಕೊಡು ಎಂದು ಬಿನ್ನವಿಸಿ ಆತನ ಅಪ್ಪಣೆಯ ಪ್ರಕಾರ ಯಜ್ಞವನ್ನು ಮಾಡಲಾರಂಭಿಸಿ ಸಹದೇವನನ್ನು ಕರೆದು—ನೀನು ನಮ್ಮ ಪುರೋಹಿತನಾದ ಧೌಮ್ಯರು ಹೇಳಿದ ಪ್ರಕಾರ ಯಜ್ಞ ಸಾಧನಗಳಾದ ಸಾಮಗ್ರಿ ಗಳನ್ನು ಒದಗಿಸುವಂತೆ ಶಿಲ್ಪಿಗಳನ್ನೂ ಅವರು ಹೇಳಿದ ಕೆಲಸಗಳನ್ನೆಲ್ಲಾ ಸಿದ್ಧಪಡಿಸಿ ಕೊಡುವಹಾಗೆ ಇಂದ್ರಸೇನ ಮೊದಲಾದವರನ್ನೂ ಅರ್ಜುನನ ಸಾರಥಿಯಾದ ರುಕ್ಮ ನನ್ನೂ ನಿಯೋಗಿಸು. ಯಜ್ಞಶಾಲೆಯ ಸುತ್ತಲೂ ನಾನಾ ದೇಶಗಳಿಂದ ಬಂದಿರುವ ಅರಸುಗಳಿಗೆ ಮನೆಗಳನ್ನೂ ಸಿದ್ಧಪಡಿಸು. ಸಕಲಭೂಮಂಡಲಗಳಲ್ಲಿರುವ ಬ್ರಾಹ್ಮಣ ಕ್ಷತ್ರಿಯ ವೈಶ್ಯ ಶೂದ್ರಾದಿ ಸಕಲಜಾತಿಯವರನ್ನೂ ಕರೆಸೆಂದು ಅಪ್ಪಣೆಯನ್ನು ಕೊಡಿಸಿದನು. ಅನಂತರದಲ್ಲಿ ಸಹದೇವನು ಆ ಪ್ರಕಾರವೇ ಇಂದ್ರಸೇನಾದಿಗಳನ್ನೂ ಅನೇಕ ಶಿಲ್ಪಿಗಳನ್ನೂ ನಿಯೋಗಿಸಿದನು. ಅವರು ಶಾಸ್ತ್ರದಲ್ಲಿ ಹೇಳಿರುವ ಪ್ರಕಾರ ಎಲ್ಲರ ಕಣ್ಣಿಗೂ ಜೇಲುವಾಗಿರುವಂತೆ ಯಜ್ಞಶಾಲೆಯನ್ನು ನಿರ್ಮಿಸಿ ಅದರೊಳಗೆ ಎಲ್ಲ ಯಜ್ಞಸಾಮಗ್ರಿಗಳನ್ನೂ ತಂದು ಒಟ್ಟಿ ಆ ಶಾಲೆಯ ಸುತ್ತಲೂ ಬಹಳ ಗೃಹಗಳನ್ನು ಸುಂದರವಾಗಿ ನಿರ್ಮಿಸಿ ಅವುಗಳಲ್ಲಿ ಎಲ್ಲ ಸಂಭಾರಗಳನ್ನೂ ತುಂಬಿ ಮತ್ತು ಇಂದ್ರಪ್ರಸ್ಥ ಪುರದ ಸುತ್ತಮುತ್ತಲು ಬಹು ವಿಧವಾದ ನೋಟದ ಮನೆಗ ಳನ್ನೂ ಹೂದೋಟಗಳನ್ನೂ ಅಂದವಾದ ಭಾವಿಗಳನ್ನೂ ಕೊಳಗಳನ್ನೂ ನಿರ್ಮಿಸಿ ದರು. ಮತ್ತು ಹೆಂಡತಿ ಮಕ್ಕಳು ಅಣ್ಣತಮ್ಮಂದಿರು ನೆಂಟರಿಷ್ಟರು ಮೊದಲಾದ ಪರಿ ವಾರ ಜನರೊಡನೆ ಕೂಡಿ ಬಂದಿರುವ ನಾನಾ ದೇಶದ ಅರಸುಗಳೂ ದ್ವೀಪಾಂತರಗ ಳಲ್ಲಿ ವಾಸಿಸುವ ಅರಸುಗಳೂ ಹಿಮವತ್ಪರ್ವತದಲ್ಲಿರುವ ಹದಿನಾರು ಮಂದಿ ಅರಸು ಗಳೂ ಇವರೇ ಮೊದಲಾಗಿ ಚತುಸ್ಸಮುದ್ರಗಳಿಂದ ಕೂಡಿರುವ ಭೂಮಂಡಲದ ಭೂಪತಿಗಳೆಲ್ಲರೂ ವೇದ ವೇದಾಂಗಾದಿ ವಿದ್ಯಾಪಾರಂಗತರಾದ ಬ್ರಾಹ್ಮಣರಿಗೂ ಕೋಮಟಿಗರಿಗೂ ಶೂದ್ರರಿಗೂ ಮನೆಗಳನ್ನು ಕಲ್ಪಿಸಿ ಆಯಾ ಮನೆಗಳಲ್ಲಿ ಸಕಲ ಸಾಮಗ್ರಿಗಳನ್ನೂ ತುಂಬಿಸಿ ಹೇಳಿದ ಕೆಲಸವನ್ನು ಮಾಡುವುದಕ್ಕೆ ದಾಸದಾಸಿಯ ಜನಗಳನ್ನು ನೇಮಿಸಿ ಅವರವರ ಯೋಗ್ಯತಾನುಸಾರವಾಗಿ ಆಯಾ ಮನೆಗಳಲ್ಲಿ ಇಳಿಸಿ ಪರಾಂಬರಿಕೆ ತೆಗೆದುಕೊಳ್ಳುತ್ತಾ ಬಂದನು.

ಆ ಬಳಿಕ ಧರ್ಮರಾಜನು ಭೀಮಾದಿ ಬಂಧುಜನಗಳನ್ನು ಕರೆದುಕೊಂಡು ಬರುವುದಕ್ಕೆ ನಕುಲನನ್ನು ಕಳುಹಿಸಿದನು. ಆಗ ರಾಜಸೂಯಯಾಗವನ್ನು ನೋಡ

ಬೇಕೆಂಬ ಆಶೆಯಿಂದ ಬಹು ಧನಗಳನ್ನು ತೆಗೆದುಕೊಂಡು ಹಸ್ತಿನಾವತಿಯಿಂದ ಇಂದ್ರಪ್ರಸ್ಥ ಪಟ್ಟಣಕ್ಕೆ ಬಂದ ಭೀಷ್ಮ ಧೃತರಾಷ್ಟ್ರ ವಿದುರ ದ್ರೋಣ ಕೃಪ ಅಶ್ವತ್ಥಾಮ ಬಾಹ್ಲಿಕ ಸೋಮದತ್ತ ಭೂರಿಶ್ರವ ಶಕುನಿ ಸೈಂಧವ ದುರ್ಯೋಧನ ದುಶ್ಶಾಸನ ಮೊದಲಾದವರನ್ನು ಧರ್ಮರಾಜನು ಬಹಳ ಪ್ರೀತಿ ಗೌರವಗಳಿಂದ ಪೂಜಿಸಿ ಅವರೆದುರಿಗೆ ವಿನೀತನಾಗಿ ನಿಂತು ನಿಮ್ಮ ಸಹಾಯದಿಂದ ಈ ಮಹಾ ಯಜ್ಞವನ್ನು ಮಾಡಲಾರಂಭಿಸಿದ್ದೇನೆ. ನಿವೆಲ್ಲರೂ ಈ ಭಾರವನ್ನು ಹೊತ್ತು ಕೊಂಚವಾದರೂ ನ್ಯೂನತೆ ಇಲ್ಲದ ಹಾಗೆ ಈ ಕೆಲಸವನ್ನು ನೆರವೇರಿಸಬೇಕೆಂದು ಬೇಡಿಕೊಂಡು ಅವರಿಂದ ಅನುಮತಿಯನ್ನು ಹೊಂದಿದನು. ಆ ಮೇಲೆ ಕೃಷ್ಣನ ಅನುಮತಿಯಿಂದ ಚಿನ್ನ ಬೆಳ್ಳಿ ರತ್ನಗಳನ್ನು ಕೊಡುವ ಕೆಲಸದಲ್ಲಿ ಕೃಪಾಚಾರ್ಯ ಕೃತವರ್ಮರನ್ನೂ ಇದು ಆಯಿತು ಇದು ಆಗಲಿಲ್ಲವೆಂದು ವಿಚಾರಿಸಿಕೊಳ್ಳುವ ಕೆಲಸದಲ್ಲಿ ಭೀಷ್ಮ ದ್ರೋಣರನ್ನೂ ನವಧಾನ್ಯಗಳನ್ನು ಒದಗಿಸುವುದೂ ಅವುಗಳನ್ನು ಉಚಿತವಾಗಿ ವೆಚ್ಚ ಮಾಡುವುದೂ ಈ ಕೆಲಸದಲ್ಲಿ ವಿದುರನನ್ನೂ ನಾನಾ ದೇಶಗಳಿಂದ ಅರಸುಗಳು ತಂದ ಧನಕನಕ ವಸ್ತು ವಾಹನಗಳನ್ನು ಉಚಿತವಾದ ಸ್ಥಳಗಳಲ್ಲಿ ಸೇರಿಸಿ ಪ್ರಕೃತವಿದ್ದ ಹಾಗೆ ಅವುಗಳನ್ನು ಉಪಯೋಗಿಸುವ ಕಾರ್ಯದಲ್ಲಿ ಕೌರವನನ್ನೂ ಭಕ್ಷ್ಯಭೋಜ್ಯ ಏನಿಯೋಗ ಮಾಡಿಸುವಲ್ಲಿ ದುಶ್ಶಾಸನನನ್ನೂ ನಿಯೋಗಿಸಿ ತಾನು ಯಜ್ಞಕ್ಕೆ ದೀಕ್ಷಿತನಾಗಿ ಬ್ರಾಹ್ಮಣರ ಗುಂಪಿನೊಡನೆ ಮಹದೈಶ್ವರ್ಯದಿಂದ ಯಜ್ಞಶಾಲೆಯನ್ನು ಹೊಕ್ಕನು.

ಆ ಯಜ್ಞಶಾಲೆಯಲ್ಲಿ ವೇದ ಘೋಷಗಳಿಂದಲೂ ಬ್ರಾಹ್ಮಣರ ಆಶೀರ್ವಾದಧ್ವನಿಗಳಿಂದಲೂ ಅನೇಕವಾದ ವಾದ್ಯನಾದಗಳಿಂದಲೂ ಒಬ್ಬರ ಮಾತು ಮತ್ತೊಬ್ಬರಿಗೆ ತಿಳಿಯದ ಹಾಗೆ ಇದ್ದಿತು. ಆ ಸಮಯದಲ್ಲಿ ವೇದಮೂರ್ತಿಗಳಾದ ಸೈಲ ಧೌಮ್ಯರು ಹೊರತಾಗಿ ಯಾಜ್ಞವಲ್ಕ್ಯ ಋಷಿಯು ಅಧ್ವರ್ಯುವಾಗಿಯೂ ದ್ವೈಪಾಯನನು ಬ್ರಹ್ಮಸ್ಥಾನಾಪನ್ನನಾಗಿಯೂ ಸುನಾಮನು ಉದ್ಗಾತೃವಾಗಿಯೂ ಮಿಕ್ಕ ಮಹಾ ಮುನಿಗಳೆಲ್ಲರೂ ಬ್ರಾಹ್ಮಣ್ಯರಾಗಿಯೂ ನಾರದಾದಿ ಮಹಾ ಮುನೀಂದ್ರರು ಸದಸ್ಯರಾಗಿಯೂ ಭೀಷ್ಮಾದಿ ರಾಜರ್ಷಿಗಳು ಸಭಾಸದರಾಗಿಯೂ ಕುಳಿತುಕೊಂಡಿರಲು ಆ ಮಹಾ ಯಜ್ಞವು ಸ್ವಲ್ಪವಾದರೂ ಮಂತ್ರಲೋಪ ಕ್ರಿಯಾಲೋಪ ಮೊದಲಾದುವುಗಳುಂಟಾಗದಂತೆ ಸಕಲ ಜನ ಸಮ್ಮತಿಯಿಂದ ನಿರ್ವಿಘ್ನವಾಗಿ ಬೆಳೆಯಿತು.

ಆ ಯಜ್ಞದಲ್ಲಿ—ಅಗ್ನಿಮುಖದಲ್ಲಿ ವಿಸ್ತಾರವಾದ ಮಂತ್ರಾಹುತಿಗಳಿಂದ ಸಕಲ ದೇವತೆಗಳೂ ಸಂಪೂರ್ಣವಾದ ದಕ್ಷಿಣೆಗಳಿಂದ ಸರ್ವ ಬ್ರಾಹ್ಮಣರೂ ಯೋಗ್ಯವಾದ ಮನ್ನಣೆಗಳಿಂದ ಎಲ್ಲಾ ಅರಸುಗಳೂ ಇಷ್ಟವಾದ ಭೋಜನ ವಸ್ತ್ರಾಭರಣ ಮೊದಲಾದುವುಗಳಿಂದ ಭೂಮಿಯ ಪ್ರಜೆಗಳೂ ಬೇಡಿದ ವಸ್ತುಗಳ ಲಾಭದಿಂದ ಸಕಲ ಯಾಚಕರೂ ತಣಿದರು. ಮತ್ತು ಧರ್ಮರಾಜನು ಯಜ್ಞವನ್ನು ಮಾಡಿಸುವುದಕ್ಕೆ ನೇಮಿಸಲ್ಪಟ್ಟಿದ್ದ ಅಧ್ವರಿ ಬ್ರಹ್ಮ ಉದ್ಗಾತೃ ಹೋತೃಸದಸ್ಯರು ಈ ಮೊದಲಾದ ಬ್ರಾಹ್ಮಣ ಸಮೂಹಕ್ಕೆ ಬಹಳವಾಗಿ ಧನಕನಕಾದಿ ವಸ್ತುಗಳನ್ನು ಕೊಡಲು ಅವರು ಅವುಗಳನ್ನು ಹೊರೆಗಳಾಗಿ ಕಟ್ಟಿಕೊಂಡು ಅವುಗಳನ್ನು ಕೆಲವರು ಹೆಗಲುಗಳಲ್ಲಿ

ಹೊತ್ತುಕೊಂಡು ಇನ್ನು ಕೆಲವರು ಶಿಷ್ಯರ ನೆತ್ತಿಗಳಲ್ಲಿ ಹೊರಿಸಿಕೊಂಡು ಸಂತೋಷದಿಂದ ಧರ್ಮರಾಜನಿಗೆ ಆಶೀರ್ವಾದವನ್ನು ಮಾಡಿ ಹೊರಟುಹೋದರು. ಆ ಬಳಿಕ ಧರ್ಮರಾಜನು ಸಕಲವನ್ನೂ ತಿಳಿದವನಾಗಿಯೂ ಕೌರವ ಪಾಂಡವರೆರಡು ಕುಲಕ್ಕೂ ಅಜ್ಜನಾಗಿಯೂ ಇರುವ ಭೀಷ್ಮಾಚಾರ್ಯರ ಒಳಿಗೆ ಬಂದು ನಮಸ್ಕರಿಸಿ ಅತನನ್ನು ಕುರಿತು—ಎಲೈ, ಪ್ರಾಜ್ಞನೇ! ಈ ರಾಜಸಭೆಯಲ್ಲಿ ಶಿವನಿಗೆ ಸಮಾನರಾಗಿರುವ ಅನೇಕ ಭೂಪಾಲರು ನೆರೆದಿರುವರು. ಇವರಲ್ಲಿ ಮೊದಲು ಯಾರಿಗೆ ಪೂಜೆಯನ್ನು ಮಾಡಬೇಕು? ಎಂದು ಕೇಳಲು ಭೀಷ್ಮನು ಧರ್ಮರಾಜನನ್ನು ಕುರಿತು—ಕೇಳಯ್ಯಾ, ಯುಧಿಷ್ಠಿರನೇ! ನಕ್ಷತ್ರಗಳಲ್ಲ ಚಂದ್ರನಂತೆಯೂ ದೇವತೆಗಳಲ್ಲಿ ಶಿವನಂತೆಯೂ ದಿಕ್ಪಾಲರಲ್ಲಿ ದೇವೇಂದ್ರನಂತೆಯೂ ಪರ್ವತಗಳಲ್ಲಿ ಮೇರುವಿನಂತೆಯೂ ಸಮುದ್ರಗಳಲ್ಲಿ ಕ್ಷೀರಸಮುದ್ರದಂತೆಯೂ ಈ ಸರ್ವರಲ್ಲಿಯೂ ಕೃಷ್ಣನೇ ದೊಡ್ಡವನಾದುದರಿಂದ ಅತನನ್ನು ಬಿಟ್ಟರೆ ಈ ಸಭೆಯಲ್ಲಿ ಅಗ್ರಪೂಜೆಗೆ ಯೋಗ್ಯರು ಬೇರೆ ಯಾರಿದ್ದಾರೆ? ವ್ಯಾಸರೂ ನಾರದರೂ ರೋಮಶರೂ ಇವರೇ ಮೊದಲಾದ ಸಕಲ ಮುನೀಂದ್ರರೂ ಇದ್ದಾರೆ ನೀನು ಅವರ ಬಳಿಗೆ ಹೋಗಿ ಕೃಷ್ಣನು ಅಗ್ರಪೂಜೆಗೆ ಯೋಗ್ಯನೋ ಅಲ್ಲವೋ ಎಂದು ಅವರನ್ನು ಕೇಳು ಎನ್ನಲು ಆ ಮೇಲೆ ಅವರೆಲ್ಲರೂ ಭೀಷ್ಮನು ಹೇಳಿದ ಮಾತಿಗೆ ಒಡಂಬಡಲು ಆಗ ಸಹದೇವನು ಕೃಷ್ಣನಿಗೆ ಕೈಗೊಟ್ಟು ಭಕ್ತಿಯಿಂದ ಕರೆದುಕೊಂಡು ಬಂದು ದಿವ್ಯ ಸಿಂಹಾಸನದಲ್ಲಿ ಕುಳ್ಳಿರಿಸಿ ಹರಿವಾಣದಲ್ಲಿ ಗಂಗಾಜಲದಿಂದ ಕೃಷ್ಣನ ಪಾದಗಳನ್ನು ತೊಳೆದು ಹದಿನಾರು ವಿಧವಾದ ಉಪಚಾರಗಳಿಂದ ಪೂಜಿಸಿದನು. ಆಗ ದೇವಮುನಿಗಳೂ ಬ್ರಹ್ಮರ್ಷಿಗಳೂ—ಜಯ ಜಯ! ಎಂದು ಹೊಗಳಿದರು. ಆಕಾಶದಲ್ಲಿ ದೇವದುಂದುಭಿಗಳು ಮೊಳಗಿದುವು.

ಆಗ ಅದನ್ನು ನೋಡಿ ಅರಸುಗಳೆಲ್ಲರೂ ಒಬ್ಬರ ಮುಖವನ್ನು ಒಬ್ಬರು ನೋಡಿಕೊಳ್ಳುತ್ತಾ ಕೆಲವರು ಪಾಂಡವರ ಸ್ನೇಹಕ್ಕೂ ಕೆಲವರು ಕೃಷ್ಣನ ಒಲ್ಮೆಗೂ ಭಯಪಟ್ಟು ಈ ವರ್ತಮಾನವು ನನುಗೇಕೆ? ಹೇಗಾದರೂ ಆಗಲಿ ಎಂದು ಉದಾಸೀನದಿಂದ ಸುಮ್ಮನಿದ್ದರು. ಅವರೊಳಗೆ ಖಳಶಿರೋಮಣಿಯಾದ ಶಿಶುಪಾಲನು ಮಹಾ ಕೋಪಿಷ್ಠನಾಗಿ ಸಹದೇವನನ್ನು ಕುರಿತು—ಏನೆಲಾ ಸಹದೇವ! ವಸುಧೆಯ ಮಾನನಿಧಿಗಳ ಮುಂದೆ ಗೊಲ್ಲರ ಹುಡುಗನನ್ನು ಸಿಂಹಾಸನದ ಮೇಲೆ ಕೂರಿಸಿ ಅವನಿಗೆ ಮೊದಲು ಪೂಜೆಯೇ? ನೀನು ಅರಿಯದವನು ಈ ಕೃತ್ಯವು ನಿಮ್ಮ ಯಾಗಕ್ಕೆ ಹಾಸಿಯಲ್ಲವೇ? ನಿಮ್ಮ ಹಿರಿಯರು ಇದೇಕೆ ಹೀಗೆ ಹೇಳಿದರು? ಪಾಂಡುವಿನ ಮಕ್ಕಳು ಬುದ್ಧಿ ಇಲ್ಲದವರೆಂದು ಈಗ ಚನ್ನಾಗಿ ತಿಳಿಯಿತು. ಒಂದು ವೇಳೆ ಈ ಕೃಷ್ಣನು ಯದುವಂಶದಲ್ಲಿಯೇ ಹುಟ್ಟಿದವನಾದಾಗ್ಗೂ ಯದುಕುಲದವರು ಸಿಂಹಾಸನಕ್ಕೆ ಹೊರಗು ಎಂಬುವುದನ್ನು ಜಗತ್ತೆಲ್ಲವೂ ತಿಳಿದಿರುವುದಲ್ಲವೋ? ಹೀಗೆಂದು ಪಾಂಡವರನ್ನು ನಿಂದಿಸಿ ಭೀಷ್ಮನನ್ನು ಕುರಿತು—ನೀನು ಮುದುಕನೂ ಜ್ಞಾನವೃದ್ಧನೂ ಆಗಿ ದನಕರುಗಳನ್ನು ಕಾಯ್ದ ಈ ಗೊಲ್ಲನಿಗೆ ಮೊದಲು ಪೂಜೆಯನ್ನು ಹೇಗೆ ಮಾಡಿಸಿದೆ? ನೀನು ಸಕಲ ವೇದಪುರಾಣೇತಿಹಾಸಗಳನ್ನು ಓದಿದ್ದು ಬೂದಿಯಲ್ಲಿ ಹೋಮ

ವನ್ನು ಮಾಡಿದಹಾಗಾಯಿತು. ಆದುದರಿಂದ ನಿನ್ನನ್ನು ಶುದ್ಧಮೂಢನೆಂದು ತಿಳಿಯ ಬೇಕು. ಒಂದು ವೇಳೆ ಹಿರಿಯವನೆಂದು ಪೂಜಿಸಬೇಕಾಗಿದ್ದರೆ ಇವನಪ್ಪನಾದ ವಸು ದೇವನಿರುವನಲ್ಲವೇ? ಲೋಕದಲ್ಲಿ ಹೆತ್ತವನೂ ಹೆಣ್ಣು ಕೊಟ್ಟವನೂ ಇಬ್ಬರೂ ತಂದೆ ಗಳಾಗಿರುವುದರಿಂದ ಪಾಂಡವರಿಗೆ ಹೆಣ್ಣು ಕೊಟ್ಟ ಮಾವನಾದ ದ್ರುಪದರಾಜನಿಗಾ ದರೂ ಪೂಜೆಯನ್ನು ಮಾಡಿದಿರಾ? ಆಚಾರ್ಯನೆಂದು ಪೂಜಿಸಬೇಕಾದರೆ ಇವರಿಗೆ ಧನುರ್ವಿದ್ಯೆಯನ್ನು ಹೇಳಿದ ದ್ರೋಣಾಚಾರ್ಯನನ್ನಾದರೂ ಪೂಜಿಸಿದಿರಾ? ವೇದ ವ್ಯಾಸ ಮುನಿಶ್ರೇಷ್ಠನೂ ಅಶ್ವತ್ಥಾಮನೂ ಕೃಪಾಚಾರ್ಯನೂ ನಿಮಗೆ ಸೋದರ ಮಾವನಾದ ಶಲ್ಯನೂ ಇನ್ನೂ ಸಕಲ ದೇಶಾಧೀಶ್ವರರೂ ಇರುವಲ್ಲಿ ಇವರೆಲ್ಲರಿಗೂ ಅವಮಾನವನ್ನು ಮಾಡಿ ಜಾರ ಜೋರರಿಗೆಲ್ಲಾ ಗುರುವಾದ ಈ ಕೃಷ್ಣನಿಗೆ ಅಗ್ರಪೂ ಜೆಯನ್ನು ಮಾಡಿದುದು ಒಲು ಜೆನ್ನಾಯಿತು! ಹೀಗೆ ಅಯೋಗ್ಯವಾದ ಕೆಲಸವನ್ನು ಮಾಡಿದುದರಿಂದ ಎಲ್ಲಾ ಅರಸುಗಳೂ ಕೂಡಿ ನಿಮ್ಮ ಐವರನ್ನೂ ನಿಮಗೆ ಬುದ್ಧಿಯನ್ನು ಹೇಳಿದ ಭೀಷ್ಮನನ್ನೂ ಪೂಜೆ ಮಾಡಿಸಿಕೊಂಡ ಈ ಖೂಳನಾದ ಗೊಲ್ಲನನ್ನೂ ಕಡಿದು ಭೂತಗಣಗಳಿಗೆ ತಿನ್ನಬಡಿಸದೆ ಬಿಡುತ್ತಾರೆಯೇ? ಎಂದು ನಾನಾ ಪ್ರಕಾರವಾಗಿ ಸುಭರ್ಾಷೆಗಳನ್ನು ಆಡುತ್ತಾ ಇರಲು ಅದನ್ನು ಕೇಳಿ ಶಿಶುಪಾಲನಿಗೆ ಸಹಾಯವಾಗಿ ದುಷ್ಟರಾದ ಅರಸುಗಳೆಲ್ಲರೂ ಯುದ್ಧಕ್ಕೆ ಸನ್ನದ್ಧರಾದರು.

ಇತ್ತ ಸಾತ್ಯಕಿ ಅರ್ಜುನ ಭೀಮ ನಕುಲ ಧೃಷ್ಟದ್ಯುಮ್ನ ಮೊದಲಾದವರು ಯುದ್ಧಸನ್ನದ್ಧರಾದರು. ಅದನ್ನು ಕಂಡು ಧರ್ಮರಾಜನು ಮೂಗಿನಲ್ಲಿ ಬೆರಳಿಟ್ಟು ತಲೆ ಯನ್ನು ಅಲ್ಲಾಡಿಸುತ್ತಾ ಭೀಷ್ಮನ ಬಳಿಗೆ ಬಂದು—ಸಮುದ್ರದಿಂದ ಸುತ್ತಲ್ಪಟ್ಟ ಭೂಮಿಯ ಅರಸುಗಳೆಲ್ಲರೂ ಯುದ್ಧಕ್ಕೆ ಒರುತ್ತಾರಲ್ಲಾ! ಇನ್ನೇನು ಗತಿ? ಈ ವರೆಗೂ ಯಜ್ಞವು ತಡೆಯಿಲ್ಲದೆ ನಡೆಯಿತು. ಅವಭೃತಸ್ನಾನವಾಗುವಷ್ಟರಲ್ಲಿಯೇ ಇಂಥಾ ವಿಪತ್ತು ಬಂದೊದಗಿತಲ್ಲಾ! ಎಂದು ಬಹಳವಾಗಿ ಚಿಂತೆಪಡುವುದನ್ನು ಸಹ ದೇವನು ಕೇಳಿ—ಈ ಬಣಗುಗಳಾದ ಅರುಸುಗಳ ಗುಂಗಿಗೆ ಬೆದರಿ ಯಾಕೆ ಕಳವಳ ಪಡುತ್ತೀರಿ? ಒಂದು ನಿಮಿಷ ಮಾತ್ರ ಸುಮ್ಮನೆ ಇರಿ ಎಂದು ಧರ್ಮರಾಜನಿಗೆ ಹೇಳಲು ಸಹದೇವನು ಹೇಳಿದಂತೆ ಭೀಷ್ಮನು ಧರ್ಮರಾಜನಿಗೆ ಸಮಾಧಾನವನ್ನು ಮಾಡುತ್ತಿರು ವಷ್ಟರಲ್ಲಿಯೇ ಕೃಷ್ಣನ ಚಕ್ರವು ಬಂದು ಶಿಶುಪಾಲನ ತಲೆಯನ್ನು ಕಡಿದುಹಾಕಲು ಕೂಡಿದ್ದ ಅರಸುಗಳೆಲ್ಲರೂ ಸುಮ್ಮನಾಗಿ ಬಂದು ಧರ್ಮರಾಜನಿಗೆ ವಿಧೇಯರಾದರು. ಆ ಮೇಲೆ ಧರ್ಮರಾಜನು ದೇಶದ ಅರಸುಗಳಿಗೆಲ್ಲಾ ಸತ್ಕಾರವನ್ನು ಮಾಡಿ ಅವರೆಲ್ಲ ರನ್ನೂ ಅವರ ಸ್ಥಳಗಳಿಗೆ ಕಳುಹಿಸಿ ಅನಂತರದಲ್ಲಿ ಕೃಷ್ಣನೇ ಮೊದಲಾದ ಯಾದವರೊ ಡನೆಯೂ ಭೀಷ್ಮನೇ ಮೊದಲಾದ ಕೌರವರೊಡನೆಯೂ ಬಹಳ ಸಂತೋಷದಿಂದ ಅವ ಭೃತಸ್ನಾನವನ್ನು ಮಾಡಿ ಬಹು ಸಂಭ್ರಮದಿಂದ ಪಟ್ಟಣವನ್ನು ಸೇರಿದನು.

---

10. THE ROMANCE OF NALA AND DAMAYANTI.

೧೦. ನಳನೂ ದಮಯಂತಿಯೂ.

ಮಹಾಮೇರು ಪರ್ವತದ ತೆಂಕಣ ದಿಕ್ಕಿನಲ್ಲಿರುವ ಜಂಬೂ ದ್ವೀಪದಲ್ಲಿ ಐವ ತ್ತಾರು ದೇಶಗಳುಂಟು. ಅವುಗಳೊಳಗೆ ನಿಷಧವೆಂಬ ದೇಶವು ನಿರ್ಮಲವಾದ ಜಲಭ ರಿತಗಳಾಗಿರುವ ಹೊಳೆ ತೊರೆ ಕಟ್ಟೆ ಕಾಲುವೆ ಮೊದಲಾದುವುಗಳಿಂದಲೂ ಬತ್ತ ಗೋಧಿ ಮೊದಲಾದ ಎಲ್ಲ ಪೈರುಗಳಿಂದ ಕೂಡಿ ಶೋಭಿಸುವ ಗದ್ದೆ ಹೊಲಗಳಿಂದಲೂ ಪುಷ್ಪಿಸಿ ಸುಗಂಧವನ್ನು ಬೀರುತ್ತಿರುವ ಮಲ್ಲಿಕಾಮಾಲತ್ಯಾದಿ ಲತೆಗಳಿಂದಲೂ ಕೋಮಲವಾಗಿ ಬೆಳೆದು ಫಲಗಳಿಂದ ಕೂಡಿ ಒಪ್ಪುತ್ತಿರುವ ಅಡಿಕೆ ತೆಂಗು ಬಾಳೆ ಕಿತ್ತಲೆ ಮೊದಲಾದ ಮರಗಳುಳ್ಳ ಉದ್ಯಾನಗಳಿಂದಲೂ ಒಂದು ಬಳೆಯಲ್ಲಿಯಾದರೂ ಪಾಳೆಲ್ಲದೆ ಒಕ್ಕಲುಗಳಿಂದ ತುಂಬಿರುವ ಹಳ್ಳಿ ಊರು ಪಟ್ಟಣಗಳಿಂದಲೂ ಕೂಡಿ ಎಲ್ಲೆಲ್ಲಿಯೂ ರಮಣೀಯವಾಗಿರುವುದು ಆ ದೇಶದಲ್ಲಿ ವೀರಸೇನನೆಂಬ ಒಬ್ಬ ಅರಸು ಧರ್ಮದಿಂದ ದೊರೆತನವನ್ನು ಮಾಡಿಕೊಂಡು ತನ್ನ ದೇಶದ ಜನರನ್ನೂ ತನ್ನ ಪರಿವಾರಗ ಳನ್ನೂ ಮಕ್ಕಳಿಗಿಂತ ಹೆಚ್ಚಾಗಿ ಕಾಪಾಡುತ್ತಿದ್ದನು. ಹೀಗಿರುವಲ್ಲಿ ಆತನ ಪಟ್ಟದ ಹೆಂಡತಿಯಲ್ಲಿ ಒಹಳ ಸುಂದರನಾದ ಒಬ್ಬ ಗಂಡು ಮಗನು ಹುಟ್ಟಿ ಬಿದಿಗೆಯ ಚಂದ್ರ ನಂತೆ ದಿನದಿನಕ್ಕೆ ಬೆಳೆಯುತ್ತಾ ಇದ್ದನು. ಆತನಿಗೆ ತಂದೆಯು ಜಾತಕರ್ಮವನ್ನು ಮಾಡಿಸಿ ನಳನೆಂದು ಹೆಸರಿಟ್ಟು ಚೌಲೋಪನಯನಾದಿಗಳನ್ನು ಮಾಡಿಸಿ ಸರ್ವವಿದ್ಯೆಗ ಳನ್ನೂ ತಿಳಿದು ಒಲು ಜಾಣನಾಗಿರುವ ಉಪಾಧ್ಯಾಯನ ಬಳೆಯಲ್ಲಿ ವಿದ್ಯಾಭ್ಯಾಸ ವನ್ನು ಮಾಡುವುದಕ್ಕೆ ನೇಮಿಸಿದನು. ಆಗ ನಳನು ಅರವತ್ತುನಾಲ್ಕು ವಿದ್ಯೆಗಳನ್ನೂ ಸಾಂಗವಾಗಿ ಕಲಿತು ಧನುರ್ವೇದವನ್ನು ಓದಿ ಅಶ್ವಪರೀಕ್ಷಾಲಕ್ಷಣಗಳನ್ನು ತಿಳಿದು ಒಲವಂತನೂ ಗಟ್ಟಿಗನೂ ಸತ್ಯವಂತನೂ ಅಡಿಗೆ ಮಾಡುವ ವಿದ್ಯೆಯನ್ನು ಜೆನ್ನಾಗಿ ಕಲಿತವನೂ ಆಗಿ ತಾನು ಕಲಿತ ವಿದ್ಯೆಗಳನ್ನು ತಂದೆಯು ಮುಂದೆ ಪರೀಕ್ಷೆ ಕೊಟ್ಟು ಆತನ ಅಪ್ಪಣೆಯನ್ನು ತೆಗೆದುಕೊಂಡು ಒಂದು ಅಕ್ಷೌಹಿಣೀ ಬಲದೊಡನೆ ಕೂಡಿ ದಿಗ್ವಿಜಯಕ್ಕೊಸ್ಕರವಾಗಿ ಹೊರಟು ತನ್ನ ಸಮೀಪಕ್ಕೆ ಬಂದು ಭಯಭಕ್ತಿಯಿಂದ ಕಾಣಿಸಿಕೊಂಡು ಕಪ್ಪವನ್ನು ಕೊಟ್ಟ ದೊರೆಗಳನ್ನು ಮನ್ನಿಸಿ ತನಗೆ ಎದುರು ಬಿದ್ದ ದೊರೆ ಗಳನ್ನು ಜಯಿಸಿ ಅವರಿಂದ ಕಾಣಿಕೆ ಕಪ್ಪಗಳನ್ನು ತೆಗೆದುಕೊಂಡು ತಿರಿಗಿ ತನ್ನ ಪಟ್ಟ ಣಕ್ಕೆ ಬಂದು ತಂದೆಗೆ ನಮಸ್ಕರಿಸಿ ದೇಶದ ಅರಸುಗಳು ಕೊಟ್ಟ ಕಪ್ಪ ಕಾಣಿಕೆಗಳನ್ನು ಒಪ್ಪಿಸಿದನು. ಆಗ ವೀರಸೇನ ರಾಜನು ಮಗನ ಪರಾಕ್ರಮಕ್ಕೂ ವಿನಯಕ್ಕೂ ಬುದ್ಧಿ ಗೂ ಸತ್ಯಕ್ಕೂ ಮೆಚ್ಚಿ ಸಂತೋಷದಿಂದ ಆತನಿಗೆ ಯುವರಾಜ ಪಟ್ಟವನ್ನು ಕಟ್ಟಿ ದನು. ಆ ಮೇಲೆ ಈ ಯುವರಾಜನಾದ ನಳಚಕ್ರವರ್ತಿಯು ಧರ್ಮದಿಂದ ರಾಜ್ಯ ವನ್ನು ಪರಿಪಾಲಿಸುತ್ತಾ ಇದ್ದನು.

ಹೀಗಿರುವಲ್ಲಿ ವಿದರ್ಭದೇಶದ ಕುಂಡಿನವೆಂಬ ಹೆಸರುಳ್ಳ ಪಟ್ಟಣವನ್ನು ಆಳು ತ್ತಿರುವ ಭೀಮರಾಜನು ತನಗೆ ಮಕ್ಕಳಿಲ್ಲವಲ್ಲಾ ! ಎಂದು ಬಹಳವಾಗಿ ಚಿಂತೆಪಡು ತ್ತಿರುವ ವೇಳೆಯಲ್ಲಿ ಬ್ರಹ್ಮರ್ಷಿಶ್ರೇಷ್ಠನಾದ ದಮನೆಂಬ ಒಬ್ಬ ಮುನಿಯು ಬರಲು

ಆತನು ಹೆಂಡತಿಯೊಡನೆ ಕೂಡಿಬಂದು ಆ ಮುನೀಶ್ವರನನ್ನು ಬಹಳವಾಗಿ ಉಪಚರಿಸಿ ಪೂಜಿಸಿದನು. ಆ ಮುನಿಯು ಆತನ ಪೂಜೆಗೆ ಪ್ರೀತಿಪಟ್ಟು ಮಕ್ಕಳ ಬಯಕೆಯಿಂದಿರುವ ಅವನಿಗೆ ದಮಯಂತಿ ಎಂಬ ಒಬ್ಬ ಮಗಳೂ ದಮನು ದಾಂತನು ದಮನನು ಎಂಬ ಮೂರು ಮಂದಿ ಗಂಡುಮಕ್ಕಳೂ ಆಗುವರು ಎಂದು ಹೇಳಿ ಆಶೀರ್ವದಿಸಿ ತನ್ನ ಆಶ್ರಮವನ್ನು ಕುರಿತು ಹೋದನು. ಆ ಬಳಿಕ ಆತನ ವಚನದಂತೆ ಆ ಭೀಮರಾಜನ ಪಟ್ಟದ ರಾಣಿಯೂ ಗರ್ಭಿಣಿಯಾಗಿ ಮೊದಲು ದಮಯಂತಿ ಎಂಬ ಹೆಣ್ಣು ಮಗಳನ್ನು ಆ ಹಿಂದೆ ಕ್ರಮವಾಗಿ ಮೂರು ಮಂದಿ ಗಂಡು ಮಕ್ಕಳನ್ನೂ ಹೆತ್ತಳು. ಆ ದಮಯಂತಿಯು ದಿನದಿನಕ್ಕೆ ಬೆಳೆದು ಪ್ರಾಯದವಳಾಗಿದ್ದು ಆಕಾರಲಕ್ಷಣಗಳಿಂದಲೂ ಲಾವಣ್ಯದಿಂದಲೂ ರತೀದೇವಿಗೆ ಸಮಾನಳಾಗಿ ಮುತ್ತು ಹವಳ ವಜ್ರ ವೈಡೂರ್ಯ ಮೊದಲಾದುವುಗಳಿಂದ ಕೆತ್ತಲ್ಪಟ್ಟಿರುವ ಒಡವೆಗಳನ್ನು ಇಟ್ಟುಕೊಂಡು ಒಳ್ಳೆಯ ಹೊಂಬಣ್ಣವಾದ ಸೀರೆಯನ್ನು ಉಟ್ಟುಕೊಂಡು ನಿರಾಜೆಯ ರವಕೆಯನ್ನು ತೊಟ್ಟು ಲಕ್ಷ್ಮೀ ದೇವಿಯ ಹಾಗೆ ಒಪ್ಪುತ್ತಿದ್ದಳು. ದೇವತೆಗಳು ಗಂಧರ್ವರು ಯಕ್ಷರು ನಾಗರು ಮನುಷ್ಯರು ಇವರೊಳಗೆ ಅವಳಂತೆ ಚಂದವುಳ್ಳ ಹೆಂಗಸರು ಯಾರೂ ಇಲ್ಲದುದರಿಂದ ಇವಳನ್ನು ನೋಡಿದ ಜನರುಗಳು ಬಹಳವಾಗಿ ಆಶ್ಚರ್ಯಪಡುತ್ತಾ ಇದ್ದರು. ಈ ದಮಯಂತಿಯ ಸಂಗಾತಿಗಳು ಆಕೆಯೊಡನೆ—ನೀನು ಮದುವೆಯಾಗುವುದಕ್ಕೆ ನಿನ್ನ ಚಲುವಿಗೆ ಸರಿಯಾದ ಪುರುಷನು ಜಗತ್ತಿನಲ್ಲಿ ಯಾರೂ ಇಲ್ಲ. ನಿಷಧ ದೇಶದ ವೀರಸೇನ ರಾಜನ ಮಗನಾದ ನಳನು ಮಾತ್ರ ಚಲುವಿನಿಂದ ಮನ್ಮಥನಿಗೆ ಎಂಟು ಮಡಿ ಹೆಚ್ಚಾಗಿ ಇರುವನು ಎಂದು ನಾವು ಕೇಳಿರುವುದರಿಂದ ಅವನನ್ನೇ ನೀನು ಮದುವೆಮಾಡಿಕೊಳ್ಳಬೇಕು ಎಂದು ಅವನ ರೂಪ ರೇಖೆ ಜಾಣತನ ಶಕ್ತಿ ಪರಾಕ್ರಮ ಮೊದಲಾದುವುಗಳನ್ನು ವಿವರಿಸುತ್ತಾ ಬಂದುದರಿಂದ ಆ ದಮಯಂತಿಗೆ ನಳನ ಮೇಲೆ ಮನಸ್ಸಾಗಿದ್ದಿತು.

ಇತ್ತ ನಳಚಕ್ರವರ್ತಿಗೆ ಬೇಹಿನವರು ಬಂದು ಈ ದಮಯಂತಿಯ ರೂಪಲಾವಣ್ಯಾದಿಗಳನ್ನು ತಿಳಿಸಿದುದರಿಂದ ಈತನೂ ಆಕೆಯನ್ನೇ ಮದುವೆಮಾಡಿಕೊಳ್ಳಬೇಕೆಂದು ಎಣಿಸಿಕೊಂಡು ಇದ್ದನು. ಹೀಗೆ ಶ್ರವಣಮಾತ್ರದಿಂದಲೇ ಒಬ್ಬರಲ್ಲೊಬ್ಬರಿಗೆ ಅನುರಾಗವು ಹುಟ್ಟಿ ದಿನದಿನಕ್ಕೆ ನಳನಿಗೆ ದಮಯಂತಿಯಲ್ಲಿ ಮನಸ್ಸಿನ ಪ್ರೀತಿಯು ಹೆಚ್ಚುತ್ತಿರಲು ನಳನು ಆಕೆಯ ವಿರಹವನ್ನು ತಡೆಯಲಾರದೆ ಕಾಲವನ್ನು ಕಳೆಯುವ ಉಪಾಯಕ್ಕಾಗಿ ಹೂವಿನ ತೋಟಕ್ಕೆ ಹೋಗಿ ವಿನೋದವಾಗಿ ತಿರುಗುತ್ತಿರುವಾಗ ಅಲ್ಲಿ ಚಿನ್ನದ ರೆಕ್ಕೆಗಳಿಂದ ಒಪ್ಪುತ್ತಿರುವ ಕೆಲವು ಹಂಸಪಕ್ಷಿಗಳನ್ನು ನೋಡಿ ಮೆಲ್ಲಮೆಲ್ಲನೆ ಆ ಪಕ್ಷಿಗಳ ಬಳಿಗೆ ಹೋಗಿ ಅವುಗಳೊಳಗೆ ಒಂದು ರಾಜಹಂಸನನ್ನು ಹಿಡಿದುಕೊಳ್ಳಲು ಅದು ಮನುಷ್ಯರ ಹಾಗೆ ಆತನನ್ನು ಕುರಿತು—ಎಲೈ, ಅರಸೇ! ನನ್ನನ್ನು ಏಕೆ ಹಿಂಸಿಸುತ್ತೀಯೆ? ನಾನು ದಮಯಂತಿಯ ಬಳಿಗೆ ಹೋಗಿ ನಿನ್ನ ಅಂದಚಂದಗಳನ್ನೂ ನಿನ್ನ ಒಳ್ಳೆಯ ಗುಣಗಳನ್ನೂ ಆಕೆಗೆ ತಿಳಿಸಿ ಲೋಕದಲ್ಲಿರುವ ಅಷ್ಟು ಮಂದಿ ಅರಸುಮಕ್ಕಳನ್ನೂ ಬಿಟ್ಟು ಆಕೆಯು ನಿನ್ನನ್ನೇ ಮದುವೆಯಾಗುವ

ಹಾಗೆ ಮಾಡಿ ನಿನಗೆ ಬಹಳ ಹಿತವನ್ನು ಮಾಡುತ್ತೇನೆಂದು ಹೇಳಿತು. ನಳನು ಅದರ ಮಾತುಗಳಿಗೆ ಆಶ್ಚರ್ಯಪಟ್ಟು—ಹಾಗೆಯೇ ಮಾಡು ಎಂದು ಹೇಳಿ ಅದನ್ನು ಬಿಟ್ಟು ಬಿಟ್ಟನು.

ಅನಂತರದಲ್ಲಿ ಆ ರಾಜಹಂಸವು ತನ್ನ ಕುಲದ ಪಕ್ಷಿಗಳೊಡನೆ ಕೂಡಿ ಆಕಾಶಮಾರ್ಗಕ್ಕೆ ಹಾರಿ ಬಹಳ ರಾಷ್ಟ್ರಗಳನ್ನು ದಾಟಿ ವಿದರ್ಭದೇಶದ ರಾಜಧಾನಿಯಾದ ಕುಂಡಿನ ಪಟ್ಟಣಕ್ಕೆ ಹೋಗಿ ತಾನು ಆಕಾಶದಲ್ಲಿಯೇ ನಿಂತು ರಾಣಿವಾಸದ ಹೂವಿನ ತೋಟದಲ್ಲಿ ಸಂಗಾತಿಗಳ ಜೊತೆಯಲ್ಲಿ ಆಡುತ್ತಿರುವ ದಮಯಂತಿಯನ್ನು ಕಂಡು ಆ ತೋಟದ ಒಳಯಿಂಕೆ ತನ್ನ ಹಕ್ಕಿಗಳ ಗುಂಪಿನೊಡನೆ ಕೂಡ ಇಳಿಯಿತು. ದಮಯಂತಿಯೂ ಆಕೆಯ ಸಖಿಯರೂ ಚಿನ್ನದ ಗರಿಗಳಿಂದ ಕೂಡಿರುವ ಈ ಹಂಸಪಕ್ಷಿಗಳ ಜೆಲುವನ್ನು ನೋಡಿ ಇವುಗಳನ್ನು ಹಿಡಿದುಕೊಳ್ಳಬೇಕೆಂದು ಎಣಿಸಿ ಸಖಿಯರೆಲ್ಲಾ ಹಕ್ಕಿಗಳ ಗುಂಪುಗಳನ್ನು ಅನುಸರಿಸಿಕೊಂಡೇ ಹೋದರು. ದಮಯಂತಿಯೂ ಮುಖ್ಯವಾದ ರಾಜಹಂಸೆಯ ಬೆಂಬಳಿಯನ್ನು ಹಿಡಿದುಹೋಗಲು ಅದು ತನ್ನನ್ನು ಹಿಂಬಾಲಿಸಿ ಬರುವ ಅರಸಿನ ಮಗಳನ್ನು ನೋಡಿ ತಾನು ಹತ್ತಿರಕ್ಕೆ ಬರುತ್ತಾ ಹಿಡಿಯುವುದಕ್ಕೆ ಬಂದರೆ ಬಳ್ಳಿಗಳ ಪೊದೆಗಳನ್ನು ಹೋಗುತ್ತಾ ತಿರಿಗಿ ಇನ್ನೇನು ? ಸಿಕ್ಕಿತು ! ಎಂಬುವಂತೆ ಅವಳ ಮನಸ್ಸಿಗೆ ತೋರಪಡಿಸಬೇಕೆಂದು ಸಮೀಪಕ್ಕೆ ಬರುತ್ತಾ ಹಿಡಿಯುವುದಕ್ಕೆ ಬಂದರೆ ಸ್ವಲ್ಪ ದೂರಕ್ಕೆ ಹಾರುತ್ತಾ ಹೀಗೆ ಆಕೆಯನ್ನು ಬಹಳ ದೂರಪ್ರದೇಶಕ್ಕೆ ಎಳಕೊಂಡು ಹೋಗಿ ಅಲ್ಲಿ ಆಕೆಯನ್ನು ನೋಡಿ ಮನುಷ್ಯರಂತೆ—ಎಲೈ, ಅರಸುಮಗಳೇ ! ನೀನು ಚಿಕ್ಕತನದಿಂದಲೂ ಬುದ್ಧಿ ಇಲ್ಲದವಳ ಹಾಗೆ ಕಾಣಿಸುತ್ತೀ ; ಯಾಕಂದರೆ ನಾನು ಆಕಾಶದಲ್ಲಿಯೂ ಭೂಮಿಯಲ್ಲಿಯೂ ತಿರುಗುವ ಹಕ್ಕಿಯು. ನೀನು ಭೂಮಿಯಲ್ಲಿ ಮಾತ್ರ ತಿರುಗುವಂಥವಳು. ನಿನಗೆ ನನ್ನನ್ನು ಹಿಡಿಯಬೇಕೆಂಬ ಆಶೆ ಹುಟ್ಟುವುದು ಹುಚ್ಚತನವಲ್ಲವೊ ? ನಾನು ಸಾಧಾರಣವಾದ ಹಂಸಪಕ್ಷಿಯಲ್ಲ. ಎಲ್ಲ ಲೋಕಗಳನ್ನೂ ಉಂಟುಮಾಡಿದ ಬ್ರಹ್ಮದೇವನ ವಾಹನವಾದ ಹಂಸಕುಲದ ಹಕ್ಕಿಯು. ನಾನು ಭೂಲೋಕವನ್ನು ತಿರುಗುವುದಕ್ಕೆ ಬ್ರಹ್ಮದೇವನ ಅಪ್ಪಣೆಯನ್ನು ತೆಗೆದುಕೊಂಡು ಎಲ್ಲ ಲೋಕಗಳನ್ನೂ ಸುತ್ತಿ ನೋಡಿ ಇಲ್ಲಿಗೆ ಬಂದೆನು. ಇಂದಾ ನಾನು ನಿನ್ನ ಕೈಗೆ ಸಿಕ್ಕುವೆನೇ ? ಆದರೆ ನೀನು ನನಗಾಗಿ ಬಹಳ ಆಯಾಸಪಟ್ಟೆ. ಅದುದರಿಂದ ನಿನಗೊಂದು ಹಿತವಾದ ಮಾತನ್ನು ಹೇಳುತ್ತೇನೆ ; ಕೇಳು. ನಾನು ಸಂಚರಿಸದಿರುವ ಲೋಕವು ಒಂದಾದರೂ ಇಲ್ಲ. ಯಾವಲೋಕದಲ್ಲಿಯೂ ನಿನ್ನ ರೂಪ ರೇಖೆ ಸೌಂದರ್ಯ ಮುಂತಾದುದಕ್ಕೆ ಸರಿಯಾದ ಒಬ್ಬ ಹೆಂಗಸನ್ನಾದರೂ ನೋಡಲಿಲ್ಲ. ಹೀಗೆಯೇ ಪುರುಷರಲ್ಲಿ ನಿಷಧ ದೇಶದ ಯುವರಾಜನಾದ ನಳಚಕ್ರವರ್ತಿಗೆ ಸರಿಯಾದ ಸೊಬಗುಳ್ಳ ಪುರುಷನನ್ನು ಎಲ್ಲಿಯೂ ನೋಡಲಿಲ್ಲ. ಅದುದರಿಂದ ನಮ್ಮೊಡೆಯನೂ ಸೃಷ್ಟಿಕರ್ತನೂ ಆದ ಬ್ರಹ್ಮನು—ನಿನಗೆ ಆ ನಳನೇ ಗಂಡನಾಗಿಯೂ ಅತನಿಗೆ ನೀನೇ ಹೆಂಡತಿಯಾಗಿಯೂ ಇರಬೇಕೆಂದು ಸಂಕಲ್ಪಿಸಿ ನಿಮ್ಮಿಬ್ಬರನ್ನೂ ಸೃಷ್ಟಿಸಿ ಇದ್ದಾನೆಂದು ನನ್ನ ಮನಸ್ಸಿನಲ್ಲಿ ಎಣಿಸಿ

ಇದ್ದೇನೆ. ನೀನು ಆ ಮಹಾರಾಜನನ್ನು ಮದುವೆ ಮಾಡಿಕೊಂಡರೆ ನಿನ್ನ ಸೌಂದರ್ಯವೂ ಜನ್ಮವೂ ಸಫಲವಾಗುವುವು. ಅವನು ಗಂಡಸರಲ್ಲಿ ಸೊಬಗುಳ್ಳವನಾಗಿಯೂ ನೀನು ಹೆಂಗಸರಲ್ಲಿ ಸೊಗಸುಳ್ಳವಳಾಗಿಯೂ ಇರುವುದರಿಂದ ನೀವಿಬ್ಬರೂ ಗಂಡಹೆಂಡಿರಾಗಿ ಕೂಡಿದರೆ ನಿಮ್ಮಿಬ್ಬರಿಗೂ ಇದಕ್ಕಿಂತಲೂ ಹೆಚ್ಚಾದ ಸಂತೋಷವು ಎಲ್ಲಿಯೂ ಇಲ್ಲ. ಇದಕ್ಕೆ ನೀನು ಒಪ್ಪಿದರೆ ನಾನು ಆ ಅರಸುಮಗನ ಬಳಿಗೆ ಹೋಗಿ ನನ್ನ ಬುದ್ಧಿ ಚಮತ್ಕಾರದಿಂದ ಅತನು ನಿನ್ನನ್ನೇ ಮದುವೆಯಾಗುವ ಹಾಗೆ ಮಾಡುವೆನು ಎಂದು ಹೇಳಿತು. ಆಗ ದಮಯಂತಿಯು—ಎಲೈ, ಪಕ್ಷಿಕುಲೋತ್ತಮನೇ! ನಿನ್ನ ಮಾತನ್ನು ಕೇಳಿ ನನಗೆ ಒಹು ಹೆಚ್ಚಳವಾಯಿತು. ನೀನು ಬಲು ಜಾಣನಾಗಿ ಕಾಣಿಸುತ್ತೀಯೇ. ನನ್ನನ್ನು ನಿನ್ನ ಮಗಳು ಎಂದು ಎಣಿಸಿ ನನ್ನ ಮೇಲಣ ದಯೆಯಿಂದ ಅತನ ಬಳಿಯಲ್ಲಿ ಹೇಗೆ ಹೇಳಬೇಕೋ ಹಾಗೆ ಹೇಳಿ ಆ ರಾಯನಿಗೆ ನನ್ನಲ್ಲಿ ಮನಸ್ಸು ಉಂಟಾಗುವಂತೆ ಮಾಡಬೇಕು ಎಂದು ಕೈಮುಗಿದು ಬಹುತರವಾಗಿ ಬೇಡಿಕೊಂಡಳು. ಆಗ ಹಂಸಪಕ್ಷಿಯು ದಮಯಂತಿಗೆ ಸಮಾಧಾನವನ್ನು ಹೇಳಿ ಹಾಗೇ ಮಾಡುವೆನೆಂದು ನಂಬುಗೆಯನ್ನು ಕೊಟ್ಟು ಆಕಾಶಕ್ಕೆ ಹಾರಿ ತಿರಿಗಿ ನಿಷಧ ಪಟ್ಟಣಕ್ಕೆ ಬಂದು ತಾನು ಮಾಡಿದ ಕಾರ್ಯವೆಲ್ಲವನ್ನೂ ದಮಯಂತಿಯ ಮನೋಭಾವವನ್ನೂ ನಳನೊಡನೆ ತಿಳಿಸಿತು.

ಇಲ್ಲಿ ದಮಯಂತಿಯು ಹಂಸದ ಮಾತನ್ನು ಕೇಳಿದ್ದು ಮೊದಲುಗೊಂಡು ನಳನಲ್ಲಿಯೇ ಸಿಕ್ಕಿರುವ ಮನಸ್ಸುಳ್ಳವಳಾಗಿ ಯಾವಾಗಲೂ ನಳನನ್ನೇ ಸ್ಮರಿಸಿ ಹಂಬಲಿಸುತ್ತಾ ಭೋಜನೋಪಚಾರಗಳನ್ನು ತೊರೆದು ನಿಟ್ಟುಸುರುಗಳನ್ನು ಬಿಡುತ್ತಾ ಕಂದಿದ ಮೊಗವುಳ್ಳವಳಾಗಿಯೂ ಒಡವಾದ ಮೈಯ್ಯುಳ್ಳವಳಾಗಿಯೂ ರಾತ್ರಿಯೂ ಹಗಲೂ ಚಿಂತೆಪಡುತ್ತಾ ಬಾರಿಬಾರಿಗೂ ಹಾ! ಎಂದು ಬಾಯಿಬಿಟ್ಟು ನಿದ್ರೆ ಇಲ್ಲದೆ ಒಂದು ವೇಳೆ ಏನಾದರೂ ಸ್ವಲ್ಪ ನಿದ್ರೆಯು ಬಂದರೆ ಕನಸಿನಲ್ಲಿ ಆ ನಳನನ್ನು ಕಂಡು ಛಕ್ಕನೆ ಎದ್ದು ತಾನು ಕನಸಿನಲ್ಲಿ ಕಂಡ ನಳನ ಭಾವಚಿತ್ರವನ್ನು ಪಟದಲ್ಲಿ ಬರೆದು ಅದನ್ನೇ ಯಾವಾಗಲೂ ನೋಡುತ್ತಾ ಮುದ್ದಿಡುತ್ತಾ ಹೀಗೆ ನಳನ ವಿರಹವೇದನೆಯನ್ನು ತಾಳಲಾರದೆ ಇರಲು ಇದೆಲ್ಲವನ್ನೂ ನೋಡಿದ ಈಕೆಯ ಸಂಗಾತಿಗಳು ಭೀಮರಾಜನಲ್ಲಿಗೆ ಹೋಗಿ ಈ ವಿವರವನ್ನು ಅರಿಕೆಮಾಡಿದರು. ಅತನು ತನ್ನ ಮನಸ್ಸಿನಲ್ಲಿ ಒಹು ಪ್ರಕಾರವಾಗಿ ವಿಚಾರಿಸಿ ವ್ಯಾಯದವಳಾದ ನನ್ನ ಮಗಳಿಗೆ ಬೇಗ ಸ್ವಯಂವರವನ್ನು ಮಾಡಿಸಬೇಕೆಂದು ಎಣಿಸಿ—ದಮಯಂತಿಯ ಸ್ವಯಂವರವು ನಡೆಯುವುದು. ಇದಕ್ಕಾಗಿ ಸರ್ವರೂ ಬರಬೇಕೆಂದು ಎಲ್ಲಾ ಅರಸುಗಳಿಗೂ ಹೇಳಿಕಳುಹಿಸಲು ಅವರೆಲ್ಲರೂ ಅನೆ ಕುದುರೆ ತೇರು ಕಾಲಾಳುಗಳು ಮೊದಲಾದ ಸೇನೆಯೊಡನೆ ಕೂಡಿದವರಾಗಿ ಕುಂಡಿನ ನಗರಕ್ಕೆ ಬಂದು ಭೀಮರಾಜನಿಂದ ಸನ್ಮಾನಿತರಾಗಿ ಅತನು ಮಾಡಿಸಿಕೊಟ್ಟ ಬೀಡಾರಗಳಲ್ಲಿ ಇಳಿದುಕೊಂಡರು.

ಹೀಗಿರುವಲ್ಲಿ ಮೂರು ಲೋಕಗಳಲ್ಲಿಯೂ ಸ್ವೇಚ್ಛೆಯಿಂದ ತಿರುಗುವ ನಾರದನು ಒಂದು ಸಮಯದಲ್ಲಿ ಸ್ವರ್ಗಕ್ಕೆ ಹೋಗಿ ದೇವೇಂದ್ರನನ್ನು ಕಾಣಿಸಿಕೊಳ್ಳಲು

ಆತನು ಈತನಿಗೆ ಪೂಜೆಯನ್ನು ಮಾಡಿ ಕುಳ್ಳಿರಿಸಿಕೊಂಡು—ಎಲೈ, ಯತಿವರ್ಯನೇ ! ಭೂಮಿಯಲ್ಲಿರುವ ಅರಸುಗಳು ಜಗಳದಲ್ಲಿ ಬೆನ್ನು ಕೊಡದೆ ಪ್ರಾಣಗಳಲ್ಲಿ ಆಶೆಯನ್ನು ಬಿಟ್ಟು ಹಗೆಗಳೊಡನೆ ಹೋರಿ ಶಸ್ತ್ರಾಸ್ತ್ರಗಳಿಂದ ಕೊಲ್ಲಲ್ಪಟ್ಟವರಾಗಿ ಇಲ್ಲಿಗೆ ಬಂದರೆ ನನ್ನ ಈ ಅಮರಾವತೀ ಪಟ್ಟಣವು ತುಂಬಿ ನನಗೆ ಸಂತೋಷವಾಗುವುದು. ಈಗ ಅಂಥಾ ಅರಸರು ಒಬ್ಬರೂ ನನ್ನ ಪಟ್ಟಣಕ್ಕೆ ಬರುವುದಿಲ್ಲ. ಇದಕ್ಕೆ ಕಾರಣವೇನೆಂದು ಕೇಳಿದನು ಅದಕ್ಕೆ ನಾರದನು—ಎಲೈ, ಇಂದ್ರನೇ ! ಕೇಳು, ಭೂಲೋಕದಲ್ಲಿ ವಿದರ್ಭದೇಶಕ್ಕೆ ಅರಸಾದ ಭೀಮಭೂಪಾಲಕನಿಗೆ ಮಗಳಾಗಿರುವ ದಮಯಂತಿ ಎಂಬ ಒಂದು ಕನ್ಯಾರತ್ನವುಂಟು. ಅವಳು ತನ್ನ ಸೊಬಗಿನ ಅತಿಶಯದಿಂದ ಎಲ್ಲ ಹೆಂಗಸರುಗಳಲ್ಲಿಯೂ ಪ್ರಸಿದ್ಧಿಯನ್ನು ಪಡೆದಿದ್ದಾಳೆ. ಅವಳಿಗೆ ಸಮಾನಳಾದ ರೂಪವತಿಯು ಹದಿನಾಲ್ಕು ಲೋಕಗಳಲ್ಲಿಯೂ ಇಲ್ಲ ಈಗ ಅಕೆಗೆ ಸ್ವಯಂವರವು ನಡೆವುದಕ್ಕಾರಂಭವಾಗಿರುವುದರಿಂದ ಎಲ್ಲಾ ದೇಶದ ಅರಸ ಮಕ್ಕಳುಗಳು ಅವಳನ್ನು ಮದುವೆಮಾಡಿಕೊಳ್ಳಬೇಕೆಂಬ ಆಶೆಯಿಂದ ಜಗಳಗಳನ್ನು ಬಿಟ್ಟು ಆ ಭೀಮರಾಜನ ಪಟ್ಟಣಕ್ಕೆ ಹೋಗುತ್ತಾ ಇದ್ದಾರೆ ಎಂದು ಹೇಳಿದನು.

ಆ ಮಾತನ್ನು ಇಂದ್ರ ಯಮ ವರುಣ ಯಜ್ಞೇಶ್ವರರು ಕೇಳಿ ನಾವೆಲ್ಲರೂ ಸ್ವಯಂವರಕ್ಕೆ ಹೋಗುವಣ ಎಂದು ನಿಶ್ಚಯಿಸಿಕೊಂಡು ತಮ್ಮತಮ್ಮ ವಾಹನಗಳನ್ನು ಏರಿ ಬರುವ ದಾರಿಯಲ್ಲಿ ಅದೇ ಸ್ವಯಂವರಕ್ಕೆ ಬರುತ್ತಿರುವ ನಳನನ್ನು ನೋಡಿ ಈ ನಾಲ್ಕು ಮಂದಿ ದಿಕ್ಪಾಲಕರು—ಪ್ರಾಯದವನಾದ ಇವನಾರು ? ಮೈಯಿಂದ ಕೂಡಿರುವ ಮನ್ಮಥನ ಹಾಗೂ ಹಣೆಯಲ್ಲಿ ಕಣ್ಣಿಲ್ಲದ ಶಿವನ ಹಾಗೂ ನಾಲ್ಕು ತೋಳುಗಳಿಲ್ಲದ ನಾರಾಯಣನ ಹಾಗೂ ಔಷ್ಣ್ಯವಿಲ್ಲದ ಸೂರ್ಯನ ಹಾಗೂ ಇರುವನು. ಇವನು ಸ್ವಯಂವರಕ್ಕೆ ಹೋದರೆ ಇವನ ರೂಪರೇಖಾಲಾವಣ್ಯಾದಿಗಳನ್ನು ನೋಡಿ ಆ ಕನ್ಯೆಯು ಇವನನ್ನೇ ವರಿಸುವಳು. ಅನಂತರದಲ್ಲಿ ನಮ್ಮ ಮನೋರಥವು ವ್ಯರ್ಥವಾಗುವುದು ಎಂದು ಕೆಲವು ಹೊತ್ತು ಚಿಂತಿಸಿ ಎಲ್ಲರೂ ಕೂಡಿ ತಮಗನುಕೂಲವಾದ ಒಂದು ಆಲೋಚನೆಯನ್ನು ಮಾಡಿಕೊಂಡು ಆಕಾಶದಿಂದ ಭೂಲೋಕಕ್ಕೆ ಇಳಿದು ಬಂದು ನಳಚಕ್ರವರ್ತಿಯನ್ನು ಕುರಿತು—ಎಲೈ, ನರೇಂದ್ರನೇ ! ನೀನು ಕನಸಿನೊಳಗಾದರೂ ಸುಳ್ಳಾಡದೆ ಇರುವಂಥ ಸತ್ಯವಂತನು. ಆದಕಾರಣ ನೀನು ನಮಗೆ ದೌತ್ಯವನ್ನು ಮಾಡಿ ಸ್ವಯಂವರದಲ್ಲಿ ದಮಯಂತಿಯು ಈ ನಮ್ಮಲ್ಲಿ ಯಾರನ್ನಾದರೂ ವರಿಸುವ ಹಾಗೆ ಪ್ರಯತ್ನವನ್ನು ಮಾಡಬೇಕು ಅಂದರು. ಅದಕ್ಕೆ ನಳಚಕ್ರೇಶ್ವರನು—ಎಲೈ, ಮಹಾತ್ಮರುಗಳಿರಾ ! ಈ ಕೆಲಸವನ್ನು ನಾನು ಅವಶ್ಯವಾಗಿ ಮಾಡುತ್ತೇನೆ. ನೀವು ಯಾರು ? ನನಗೆ ತಿಳಿಸಬೇಕೆಂದು ಕೇಳಲು ಆಗ ದೇವೇಂದ್ರನು ಆತನನ್ನು ಕುರಿತು—ನಮ್ಮನ್ನು ದಮಯಂತಿಯ ನಿಮಿತ್ತವಾಗಿ ಬಂದ ದಿಕ್ಪಾಲಕರು ಎಂದು ತಿಳಿ. ನಾನು ಇಂದ್ರನು ; ಈತನು ಸರ್ವಪ್ರಾಣಿಗಳಿಗೂ ಸಾವನ್ನುಂಟುಮಾಡುವ ಯಮನು ; ಇವನು ವರುಣನು ; ಇವನು ಅಗ್ನಿಯು ಎಂದು ತಿಳಿಸಲು ಆಗ ನಳಚಕ್ರವರ್ತಿಯು ಕೈಮುಗಿದು—ಎಲೈ,

ಮಹನೀಯರೇ ! ನಿಮ್ಮ ಹಾಗೆಯೇ ನಾನೂ ದಮಯಂತಿಯ ಸ್ವಯಂವರಕ್ಕೆ ಬಂದು ಇದ್ದೇನೆ ಆದುದರಿಂದ ನೀವು ನನ್ನನ್ನು ದೌತ್ಯಕಾರ್ಯಕ್ಕೆ ಕಳುಹಿಸುವುದು ಯುಕ್ತ ವಲ್ಲ. ನನ್ನಲ್ಲಿಯೇ ಪ್ರೀತಿಯುಳ್ಳ ಅರಸಿನ ಮಗಳನ್ನು ಕುರಿತು ನೀನು ಮತ್ತೊಬ್ಬ ನನ್ನು ವರಿಸೆಂದು ನಾನೇ ನುಡಿಯುವುದು ಹೇಗೆ? ಎನಲು ದೇವೇಂದ್ರನು ನಳನನ್ನು ಕುರಿತು—ನೀನು ಮೊದಲು ನೀವು ಬಯಸಿದ ಕಾರ್ಯವನ್ನು ಅಗತ್ಯವಾಗಿ ನೆರವೇರಿ ಸುವೆನು ಎಂದು ಹೇಳಿ ಈಗ ಹೀಗೆ ಹೇಳುವುದು ತಕ್ಕುದಲ್ಲ. ಸಾವಕಾಶವನ್ನು ಮಾಡದೆ ಹೋಗಿ ನಾವು ಬಂದಿರುವುದನ್ನು ದಮಯಂತಿಗೆ ಅರಿಕೆ ಮಾಡು. ದೇವತೆಗಳ ಕೆಲಸವನ್ನು ಮಾಡಿದರೆ ನಿನಗೆ ಸರ್ವಾಭೀಷ್ಟವೂ ಉಂಟಾಗುತ್ತದೆ ಅಂದನು. ಆಗ ನಳನು—ಬಹಳ ಜನರು ಕಾವಲಾಗಿರುವ ಅರಸಿನ ಮಗಳ ರಾಣಿವಾಸಕ್ಕೆ ನಾನು ಹೋಗುವುದು ಹೇಗೆ? ಎನಲು ದೇವೇಂದ್ರನು—ನಮ್ಮ ವರದಿಂದ ಅಲ್ಲಿಗೆ ಹೋಗು ವುದಕ್ಕೆ ನಿನಗೆ ಸಾಮರ್ಥ್ಯವು ಉಂಟಾಗುತ್ತದೆ. ಶೀಘ್ರದಲ್ಲಿ ಹೋಗು ಎಂದನು.

ಆಗ ಸತ್ಯಸಂಧನಾದ ನಳನು ಒದಲು ಮಾತಾಡದೆ ವಿದರ್ಭ ಪಟ್ಟಣವನ್ನು ತಲಪಿ ಅರಮನೆಯನ್ನು ಪ್ರವೇಶಿಸಿ ಬಹಳವಾದ ತೊಟ್ಟಿಗಳನ್ನೂ ಹಜಾರಗಳನ್ನೂ ಕಳೆದು ಬಂದು ಕನ್ಯಾಂತಃಪುರಕ್ಕೆ ಹೋಗಿ ಕೋಮಲಾಂಗಿಯಾಗಿಯೂ ಪ್ರಾಯ ದವಳಾಗಿಯೂ ಕನ್ನೈದಿಲೆಯಂತಿರುವ ಕಣ್ಣುಗಳುಳ್ಳವಳಾಗಿಯೂ ಬಡನಡುವಿನಿಂದ ಬಳಕುತ್ತಿರುವವಳಾಗಿಯೂ ಮುಗುಳು ನಗೆಯುಳ್ಳವಳಾಗಿಯೂ ಹೊಳೆಯುವ ಮೊಗದಾವರೆಯುಳ್ಳವಳಾಗಿಯೂ ಸಂಗಾತಿಗಳಿಂದ ಕೂಡಿದವಳಾಗಿಯೂ ಇರುವ ಕಾಂತಾಶಿರೋಮಣಿಯಾದ ದಮಯಂತಿಯನ್ನು ನೋಡಿ ಮನೋಭ್ರನೆಯುಂಟಾಗಿ ಮದನಬಾಣಗಳಿಂದ ಪೀಡಿತನಾದರೂ ಧೀರೋದಾತ್ತನಾಯಕನಾದುದರಿಂದಲೂ ಸತ್ಯಸಂಧನಾದುದರಿಂದಲೂ ತಿರಿಗಿ ಧೈರ್ಯವನ್ನು ಧರಿಸಿ ನಿಂತಿರಲು ದಮಯಂ ತಿಯ ಸಂಗಾತಿಗಳು ಈತನನ್ನು ಕಂಡು ಶೀಘ್ರದಲ್ಲಿ ಎದ್ದು ಆತನ ತೇಜಸ್ಸನ್ನು ನೋಡಿ ಈ ದಿವ್ಯ ಪುರುಷನು ದೇವತೆಗಳು ಯಕ್ಷರು ಗಂಧರ್ವರು ಉರಗರು ಮೊದ ಲಾದವರೊಳಗೆ ಯಾರೋ ತಿಳಿಯಕೂಡದು ಎಂದು ತಮ್ಮತಮ್ಮ ಮನಸ್ಸುಗಳಲ್ಲಿ ಎಣಿಸುತ್ತಾ ಮಾತನಾಡಿಸುವುದಕ್ಕೂ ಶಕ್ತಿ ಸಾಲದೆ ನಾಚಿಕೆಯಿಂದ ತಲೆಯನ್ನು ಬಗ್ಗಿಸಿಕೊಂಡವರಾಗಿ ಸುಮ್ಮನಿದ್ದರು. ದಮಯಂತಿಯು ತನ್ನ ಅಂದಚಂದಗಳನ್ನು ನೋಡಿ ಬೆರಗಾಗಿ ನಿಂತಿರುವ ಆತನ ರೂಪಲಾವಣ್ಯಕ್ಕೆ ಆಶ್ಚರ್ಯಪಡುತ್ತಾ ಮುಖ ದಲ್ಲಿ ಮುಗುಳು ನಗೆಯನ್ನು ತೋರಿಸುತ್ತಾ ಕಡೆಗಣ್ಣು ನೋಟಗಳಿಂದ ಎವೆ ಹಾಕ ದೆ ನೋಡಿ—ಎಲೈ, ಮಹಾಪುರುಷನೇ! ಮೈಯ್ಯುಳ್ಳ ಮನ್ಮಥನೋಪಾದಿಯಲ್ಲಿ ಮೆರೆ ಯುವ ನಿನ್ನನ್ನು ನೋಡಿದ ಮಾತ್ರದಿಂದಲೇ ನನ್ನ ಮನಸ್ಸು ಕಲಕಿಹೋಗಿ ಇದೆ. ಅನೇಕ ಮಂದಿ ಕಾವಲುಗಾರರು ಕಾದಿರುವಲ್ಲಿ ಈ ಅರಸುಗಳ ಹೆಂಡಿರಿರುವ ಅರಮ ನೆಗೆ ನೀನು ಹೇಗೆ ಪ್ರವೇಶಿಸಿದೆ? ಇಷ್ಟು ಮಂದಿಗಳಲ್ಲಿ ನಿನ್ನನ್ನು ಯಾರೂ ಕಾಣದೆ ಇರುವುದಕ್ಕೆ ಕಾರಣವೇನು? ನಮ್ಮ ತಂದೆಯಾದ ಭೀಮರಾಜನು ಉಗ್ರವಾದ ಆಜ್ಞೆ ಯುಳ್ಳವನು. ನೀನು ಬಂದ ಕೆಲಸವೇನು? ಅದನ್ನು ಬೇಗ ತಿಳಿಸಿ ಬಂದ ಹಾಗೆ ಹೋಗು ಅಂದಳು.

ಆಗ ಅತನು—ಎಲೈ, ಅರಸಿನ ಮಗಳೇ ! ನಾನು ನಳನು. ದೇವತೆಗಳ ಕೆಲ ಸಕ್ಕಾಗಿ ನಿನ್ನ ಬಳಿಗೆ ದೂತನಾಗಿ ಒಂದು ಇದ್ದೇನೆ ಇಂದ್ರ ಯಮ ವರುಣ ಅಗ್ನಿ ಈ ನಾಲ್ವರೂ ನಿನ್ನನ್ನು ವರಿಸಬೇಕೆಂದು ಬಯಸಿ ಬಂದಿದ್ದಾರೆ. ನೀನು ಇವರೊಳಗೆ ಯಾರನ್ನಾದರೂ ಒಬ್ಬನನ್ನು ವರಿಸು. ನಾನು ಅವರ ವರದಿಂದಲೇ ನಿನ್ನ ಅಂತಃಪುರವನ್ನು ಹೊಗುವಾಗ ನೀನು ಯಾರೆಂದೂ ಎಲ್ಲಿ ಹೋಗುತ್ತೀ ಎಂದೂ ಒಬ್ಬನಾದರೂ ಕೇಳಿದವನಿಲ್ಲ. ಇದೋ ನಾನು ಬಂದ ಕೆಲಸವು ಇದು. ಇನ್ನು ನಿನ್ನ ಮನಸ್ಸಿಗೆ ತೋರಿದ ಹಾಗೆ ನಡೆದುಕೋ ಎಂದು ಹೇಳಿದನು. ದಮ ಯಂತಿಯು ಆ ಮಾತನ್ನು ಕೇಳಿ ಆ ದೇವತೆಗಳನ್ನು ಮನಸ್ಸಿನಲ್ಲಿ ನೆನೆದು ನಮಸ್ಕ ರಿಸಿ ಅತನನ್ನು ನೋಡಿ ನಸುನಗೆಯನ್ನು ಬೀರುತ್ತಾ—ಎಲೈ ಪ್ರಾಣವಲ್ಲಭನೇ ! ನೀನೇ ಹೀಗೆ ಹೇಳಿದರೆ ನಾನು ಮಾಡತಕ್ಕುದೇನು ? ನೀನು ನನ್ನ ಮನೋರಥಕ್ಕೆ ಸರಿ ಯಾಗಿ ನಡೆಯಬೇಕಲ್ಲವೇ ? ಮೊದಲು ಹಂಸೆಯು ಬಂದು ನಿನ್ನ ಮಹತ್ವವನ್ನು ಹೇಳಿದಂದಿನಿಂದ ನನ್ನ ಒಡವೆವಸ್ತುಗಳನ್ನೂ ನನ್ನ ಒಡಲನ್ನೂ ನನ್ನ ಪ್ರಾಣಗಳನ್ನೂ ನಿನ್ನ ವಶಪಡಿಸಿ ನೀನೇ ಪ್ರಾಣೇಶ್ವರನೆಂದು ನೆರೆನಂಬಿ ನಿನ್ನ ವಿರಹದಿಂದಲೇ ಉಂಟಾದ ಚಿಂತಾರೂಪಜಾಧೆಯನ್ನು ತಾಳಲಾರದೆ ಹೊರಳುತ್ತಿದ್ದೇನೆ ನಿನ್ನನ್ನು ಕರತರಿಸುವುದಕ್ಕಲ್ಲವೇ ಸ್ವಯಂವರವೆಂಬ ನೆವದಿಂದ ಎಲ್ಲಾ ಅರಸುಗಳನ್ನೂ ಕರತರಿ ಸಿರುವುದು ಹೀಗಿರುವಲ್ಲಿ ನನ್ನನ್ನು ನೀಸು ಉಪೇಕ್ಷಿಸಿದರೆ ವಿಷದಿಂದಾಗಲಿ ಬೆಂಕಿ ಯಿಂದಾಗಲಿ ನೀರಿನಿಂದಾಗಲೀ ನೇಣಿನಿಂದಾಗಲಿ ನಿನಗಾಗಿ ಈ ಒಡಲನ್ನು ಬಿಡುತ್ತೇನೆ ಎಂದು ನುಡಿಯಲು ನಳನು—ಎಲೈ, ಕಾಂತಾಮಣಿಯೇ ! ದಿಕ್ಪಾಲಕರೇ ನಿನ್ನನ್ನು ಬಯಸುವಾಗ ನೀನು ಅಲ್ಪ ಮನುಷ್ಯನಾದ ನನ್ನನ್ನು ಬಯಸುವುದು ಉಚಿತವೇ ? ಲೋಕಪಾಲಕರಾಗಿಯೂ ಮಹಾತ್ಮರಾಗಿಯೂ ಇರುವ ಇಂದ್ರನೇ ಮೊದಲಾದ ದೇವತೆಗಳ ಪಾದಧೂಳಿಗಾದರೂ ಸರಿ ಹೋಲಲಾರದೆ ಇರುವ ನನ್ನನ್ನು ಏಕೆ ಬಯ ಸುತ್ತಿದ್ದೀಯೆ ? ನೀನು ದೇವತೆಗಳನ್ನೇ ವರಿಸುವುದು ಬಲು ಜನ್ನಾಗಿ ತೋರುತ್ತದೆ. ಇದಲ್ಲದೆ ದೇವತೆಗಳ ಕೆಲಸಕ್ಕೆ ಯಾವನು ಅಡ್ಡಿ ಮಾಡುವನೋ ಅತನು ಸರ್ವಸುಖ ಗಳನ್ನೂ ಕಳೆದುಕೊಂಡು ಸತ್ತು ಹೋಗುವನು. ಆದುದರಿಂದ ಆ ನಾಲ್ವರೊಳಗೆ ಒಬ್ಬನನ್ನು ಒಪ್ಪಿ ವರಿಸಿ ನನ್ನನ್ನು ಕಾಪಾಡು. ದೇವತೆಗಳನ್ನು ವರಿಸಿದರೆ ಬಹಳ ರಮ್ಯ ವಾಗಿಯೂ ನುಣುಪಾಗಿಯೂ ಇರುವ ವಸ್ತ್ರಗಳೂ ನವರತ್ನಗಳನ್ನು ಕೆತ್ತಿದ ಒಡವೆ ಗಳೂ ದಿವ್ಯಗಂಧ ಮಾಲಿಕೆಗಳೂ ಇವೇ ಮೊದಲಾದವುಗಳನ್ನು ಧರಿಸಿ ಸ್ವೇಚ್ಛಾನು ಸಾರವಾದ ಭೋಗಗಳನ್ನು ಅನುಭವಿಸಬಹುದು .ಇಂಥಾ ದೇವತೆಗಳನ್ನು ಒಲ್ಲೆನೆಂದು ನುಡಿಯುವ ನಿನ್ನಂಥಾ ಅವಿವೇಕಿಯು ಯಾರಾದರೂ ಉಂಟೇ ? ಯಾವನ ದಂಡನೆಗೆ ಹೆದರಿ ಸರ್ವ ಪ್ರಾಣಿಗಳೂ ನ್ಯಾಯದಿಂದ ನಡೆಯುತ್ತಾರೋ ಅಂಥಾ ಯಮನನ್ನು ವರಿಸದೆ ಇರುವ ಹೆಂಗಸು ಉಂಟೇ ? ಮೂರು ಲೋಕಗಳಿಗೂ ಒಡೆಯನಾಗಿರುವ ದೇವೇಂದ್ರನನ್ನು ವರಿಸುವುದಕ್ಕಿಂತ ಇನ್ನೊಂದು ಭಾಗ್ಯವು ಬೇಕೇ ? ರತ್ನಾಕರಗಳಿಗೆ ಅರಸಾಗಿ ಸಕಲ ರತ್ನಗಳನ್ನೂ ಮನೆಯಲ್ಲಿ ತುಂಬಿಕೊಂಡಿರುವ ವರುಣನನ್ನಾದರೂ

ಮದುವೆಮಾಡಿಕೋ. ಆತನನ್ನು ಒಲ್ಲದಿದ್ದರೆ ತೇಜೋವಂತನಾದ ಅಗ್ನಿಯನ್ನಾದರೂ ಗಂಡನನ್ನಾಗಿ ಮಾಡಿಕೋ. ನನ್ನ ನುಡಿಯನ್ನು ನಿರಾಕರಿಸಬೇಡ. ನಾನು ಸತ್ಯವಾಗಿ ಹೇಳುತ್ತೇನೆ ಅಂದನು.

ದಮಯಂತಿಯು ಆತನ ಮಾತುಗಳನ್ನು ಕೇಳಿ ಎದೆಯಲ್ಲಿ ಅಲಗು ನೆಟ್ಟಂತೆ ಬಹಳವಾಗಿ ಸಂಕಟ ಪಡುತ್ತಾ ನಿಟ್ಟುಸುರುಗಳನ್ನು ಬಿಡುತ್ತಾ ನಳನನ್ನು ಕುರಿತು—ಸರ್ವ ದೇವತೆಗಳಿಗೂ ನಮಸ್ಕಾರವು. ನೀನು ಎಷ್ಟು ಹೇಳಿದರೂ ನಿನ್ನ ಮಾತುಗಳು ನನ್ನ ಕಿವಿಗೆ ಬೀಳುವುದಿಲ್ಲ. ನಿಜವಾಗಿಯೂ ನನ್ನ ಮನಸ್ಸು ಒಡಂಬಡುವುದಿಲ್ಲ. ನೀನೇ ನನ್ನ ಗಂಡನು ಮತ್ತು ನನ್ನ ಪ್ರಾಣಕ್ಕೆ ಒಡೆಯನು. ನಿನ್ನನ್ನೇ ವರಿಸಿ ಇದ್ದೇನೆ. ಈ ಮಾತು ಸುಳ್ಳಲ್ಲ. ನಿನ್ನಲ್ಲಿ ನೆಟ್ಟಿರುವ ನನ್ನ ಮನಸ್ಸು ಎಂದಿಗೂ ಅಲುಗಲಾರದು ಎಂದು ನುಡಿದು ಕೈಮುಗಿದು ನಮಸ್ಕರಿಸಿ ಕಣ್ಣೀರುಗಳ ಕೋಡಿಯನ್ನು ಹರಿಸುತ್ತಾ ಗಡಗಡನೆ ನಡುಗುತ್ತಾ ಇರುವ ಆ ಕನ್ಯೆಯನ್ನು ನೋಡಿ—ನಾನು ದೂತನಾಗಿ ಬಂದು ಸ್ವಕಾರ್ಯದಲ್ಲಿ ಪ್ರವರ್ತಿಸುವುದು ಯುಕ್ತವಲ್ಲವಷ್ಟೆ? ಅವಶ್ಯವಾಗಿ ನಿಮ್ಮ ಕಾರ್ಯವನ್ನು ಮಾಡುತ್ತೇನೆಂದು ದೇವತೆಗಳೊಡನೆ ಪ್ರತಿಜ್ಞೆಯನ್ನು ಮಾಡಿ ನಿನ್ನ ಬಳಿಗೆ ಬಂದು ಅದನ್ನು ಅನ್ಯಥಾ ಮಾಡುವುದು ನನಗೆ ತಕ್ಕುದಲ್ಲವು. ಅದುದರಿಂದ ನನ್ನಲ್ಲಿ ದಯೆಮಾಡಿ ಅವರಲ್ಲಿ ಯಾರನ್ನಾದರೂ ಒಬ್ಬನನ್ನು ಅಗತ್ಯವಾಗಿ ವರಿಸಬೇಕು ಎಂದು ಕೈಮುಗಿದು ಬೇಡಿಕೊಂಡನು. ಆಗ ದಮಯಂತಿಯು ಕಣ್ಣೀರನ್ನು ಸೆರಗಿನಿಂದ ಒರಸಿಕೊಳ್ಳುತ್ತಾ ಕಣ್ಣೀರು ತುಂಬಿದ ಕಣ್ಣುಗಳಿಂದ ನೋಡುತ್ತಾ—ಎಲೈ, ನರೇಂದ್ರನೇ! ನಿನಗಿಷ್ಟು ಭಯವೇಕೆ? ನಿನ್ನಲ್ಲಿ ತಪ್ಪು ಉಂಟಾಗದಂತೆ ನಾನು ಒಂದು ಉಪಾಯವನ್ನು ಹೇಳುತ್ತೇನೆ; ಕೇಳು. ಇಂದ್ರನೇ ಮೊದಲಾದ ಲೋಕಪಾಲಕರು ಸ್ವಯಂವರಮಂಟಪಕ್ಕೆ ಬಂದ ಸಮಯದಲ್ಲಿ ಸರ್ವ ದೇವತೆಗಳೂ ನೋಡುತ್ತಿರಲು ಅವರ ಅನುಗ್ರಹದಿಂದ ನಿನ್ನನ್ನೇ ವರಿಸುತ್ತೇನೆ. ಹೊರಟು ಹೋಗು ಅಂದಳು.

ಆಗ ನಳನು ತಿರಿಗಿ ಇಂದ್ರನೇ ಮೊದಲಾದ ದಿಗೀಶರ ಬಳಿಗೆ ಬಂದು ಬಾಡಿರುವ ಮುಖದಿಂದ ಕೈಮುಗಿದು ನಿಂತಿರಲು ದೇವೇಂದ್ರನು—ಎಲೈ, ಅರಸುಮಗನೇ! ದಮಯಂತಿಯ ಬಳಿಗೆ ಹೋಗಿದ್ದೆಯಾ? ಅವಳಲ್ಲಿ ನಮ್ಮ ಬಯಕೆಯನ್ನು ತಿಳಿಸಿದೆಯಾ? ಅದಕ್ಕೆ ಅವಳು ಏನುತ್ತರವನ್ನು ಹೇಳಿದಳು? ಎಂದು ಕೇಳಲು ನಳನು—ಎಲೈ, ಮಹಾತ್ಮನೇ! ನಾನು ನಿಮ್ಮ ಅನುಗ್ರಹದಿಂದ ಆ ಕನ್ಯಕೆಯೂ ಅಕೆಯ ಸಂಗಾತಿಗಳೂ ಹೊರತು ಮಿಕ್ಕ ಕಾವಲುಗಾರರೊಬ್ಬರೂ ನನ್ನನ್ನು ಅರಿಯದೆ ಹೋದುದರಿಂದ ಅಕೆಯ ಬಳಿಗೆ ಹೋಗಿ ನಿಜವಾಗಿ ನಿಮ್ಮ ನಾಲ್ವರಲ್ಲಿ ಒಬ್ಬರನ್ನು ವರಿಸು ಎಂದು ಅಕೆಯನ್ನು ಕುರಿತು ಎಷ್ಟು ಬಗೆಯಲ್ಲಿ ಕೈಮುಗಿದು ಬೇಡಿಕೊಂಡಾಗ್ಗೂ ಒಪ್ಪದೆ ಅವಳು—ನಿನ್ನನ್ನು ಹೊರತು ಮತ್ತೊಬ್ಬರನ್ನು ಎಂದಿಗೂ ವರಿಸುವುದಿಲ್ಲ. ಸ್ವಯಂವರದಲ್ಲಿ ಆ ದೇವತೆಗಳ ಕಟಾಕ್ಷದಿಂದ ಅವರ ಮುಂದೆಯೇ ನಿನ್ನನ್ನೇ ವರಿಸುತ್ತೇನೆ. ಹಾಗೆ ಮಾಡಿದರೆ ನಿನ್ನ ಮೇಲೆ ತಪ್ಪಿರುವುದಿಲ್ಲ. ಹೋಗು ಎಂದು ಖಂಡಿತವಾಗಿ ಹೇಳಿ ಕಳುಹಿಸಿದಳು. ನಡೆದ ವಿವರವನ್ನು ನಾನು ನಿಮಗೆ ನಿಜವಾಗಿ ತಿಳಿಸಿದ್ದೇನೆ.

ನೀವು ಮಹಾತ್ಮರಾದುದರಿಂದಲೂ ಸರ್ವಜನರ ಮನೋಭಾವಗಳನ್ನು ತಿಳಿಯುವಂಥ ವರಾದುದರಿಂದಲೂ ನಾನು ದಿಟಗಾರನೋ ಸುಳ್ಳುಗಾರನೋ ಎಂಬುವುದನ್ನು ನಿಮ್ಮ ಮನಸಿನಲ್ಲಿ ಯೋಚಿಸಿ ನೀವೇ ತಿಳಿದುಕೊಂಡು ನಿಮ್ಮ ಬುದ್ಧಿಗೆ ತೋರಿದ ಹಾಗೆ ನಡೆಯಬಹುದು ಎಂದು ಹೇಳಿದನು. ಆಗ ಲೋಕಪಾಲಕರು ತಮ್ಮ ಮನಸ್ಸಿನೊಳಗೆ ಇವನಲ್ಲಿ ವಂಚನೆಯು ಇಲ್ಲವೆಂದು ಎಣಿಸಿ ಆತನಿಗೆ ಅಪ್ಪಣೆಯನ್ನು ಕೊಟ್ಟು ಕಳುಹಿಸಿದರು.

ಆ ಬಳಿಕ ಒಂದು ಶುಭದಿವಸದಲ್ಲಿ ಭೀಮ ಭೂಪಾಲಕನು ದಮಯಂತಿಯ ಸ್ವಯಂವರ ಮಂಟಪವನ್ನು ವಿಚಿತ್ರವಾಗಿ ಶೃಂಗರಿಸಿ ಎಲ್ಲಾ ಅರಸುಮಕ್ಕಳನ್ನೂ ಸ್ವಯಂವರ ಮಂಟಪಕ್ಕೆ ಬರಹೇಳಿ ಕಳುಹಿಸಲು ಅವರೆಲ್ಲರೂ ದಮಯಂತಿಯಲ್ಲಿ ತಗುಲಿರುವ ಮನಸ್ಸುಳ್ಳವರಾಗಿ ಉಡೆಗೆತೊಡಿಗೆಗಳನ್ನು ಉಟ್ಟು ತೊಟ್ಟು ತಮ್ಮ ತಮ್ಮ ಪರಿವಾರ ಜನಗಳೊಡನೆ ಕೂಡಿ ಸುವರ್ಣಸ್ತಂಭ ಮಕರ ತೋರಣಾದಿಗಳಿಂದ ಬಹು ವಿಧವಾಗಿ ಅಲಂಕರಿಸಲ್ಪಟ್ಟಿರುವ ಸ್ವಯಂವರ ಮಂಟಪವನ್ನು ಸಿಂಹಗಳು ಪರ್ವತದ ಗುಹೆಗಳನ್ನು ಹೊಗುವ ಹಾಗೆ ಹೊಕ್ಕು ಚಿನ್ನದ ಸಿಂಹಾಸನಗಳಲ್ಲಿ ಕುಳಿತುಕೊಂಡು ಇರಲು ಆ ರಂಗಮಂಟಪವು ನಾಗಶ್ರೇಷ್ಠರಿಂದ ಹೊಳೆಯುತ್ತಿರುವ ಭೋಗವತೀ ಪುರದ ಹಾಗೂ ಹುಲಿಗಳಿಂದ ನಿಬಡವಾಗಿರುವ ಗಿರಿ ಗುಹೆಗಳ ಹಾಗೂ ಶೋಭಿಸುತ್ತಿತ್ತು. ಆ ಸ್ವಯಂವರ ಮಂಟಪದಲ್ಲಿ ದೇವೇಂದ್ರನೇ ಮೊದಲಾದ ಲೋಕಪಾಲಕರು ಬಂದು ಬಂದು ಸ್ಥಳದಲ್ಲಿ ಕುಳಿತಿದ್ದರು ಆಗ ಪೂರ್ಣ ಚಂದ್ರಮುಖಿಯಾದ ದಮಯಂತಿಯು ತನ್ನ ಅಂದಚಂದಗಳಿಂದ ಎಲ್ಲಾ ಅರಸುಮಕ್ಕಳ ಹೃದಯಗಳಿಗೂ ಸಂತೋಷವನ್ನು ಬೀರುತ್ತಾ ಸಖೀ ಜನಗಳೊಡನೆ ಕೂಡಿ ಸ್ವಯಂವರ ಮಂಟಪವನ್ನು ಹೊಕ್ಕು ಬರುತ್ತಿರಲು ಆ ರಾಜಕುಮಾರಕರ ನೋಟಗಳು ಜೆಲುವೆಯಾದ ದಮಯಂತಿಯ ಅಂಗೋಪಾಂಗಗಳಲ್ಲಿ ಮೊದಲು ನೋಡಿದ ತಾವನ್ನು ಬಿಟ್ಟು ಇನ್ನೊಂದು ಕಡೆಗೆ ಕದಲದೆ ನಿಂತುವು.

ಆ ಸಮಯದಲ್ಲಿ ಕಂಚುಕಿಗಳೇ ಮೊದಲಾದವರು ದಮಯಂತಿಯ ಸಮೀಪಕ್ಕೆ ಬಂದು ಎಲ್ಲಾ ಅರಸುಮಕ್ಕಳ ಕುಲಗಳನ್ನೂ ಶೀಲಗಳನ್ನೂ ಹೆಸರುಗಳನ್ನೂ ಕೀರ್ತಿಗಳನ್ನೂ ಪ್ರತಾಪಗಳನ್ನೂ ಎಂಗಡಿಸಿ ಎಂಗಡಿಸಿ ಹೇಳಿ ತೋರಿಸುತ್ತಿರಲು ಆ ದಮಯಂತಿಯು ಅವರೆಲ್ಲರನ್ನೂ ಕಡೆಗಣ್ಣಿನಿಂದಾದರೂ ನೋಡದೆ ಅರಸುಮಕ್ಕಳ ನಡುವೆ ನಳಾಕೃತಿಯನ್ನು ಧರಿಸಿ ಕೂತುಕೊಂಡಿರುವ ಇಂದ್ರಾದಿ ಲೋಕಪಾಲಕರ ಕೂಡ ನಳನು ಕುಳಿತಿರುವಲ್ಲಿಗೆ ಬಂದು ಈ ಐವರೂ ವಯೋರೂಪಗಳಿಂದ ಅಭೇದವಾಗಿ ಇರುವುದರಿಂದಲೂ ದೊಡ್ಡವರು ಹೇಳುವಂಥ ದೇವತೆಗಳ ಗುರುತುಗಳೊಳಗೆ ಒಂದು ಗುರುತಾದರೂ ಕಾಣಿಸದೆ ಇರುವುದರಿಂದಲೂ ಈ ಐದುಮಂದಿಯೊಳಗೆ ನಳನು ಯಾರೆಂದು ತಿಳಿಯಲಿ? ಇದಕ್ಕೇನು ಮಾಡಲಿ? ಎಂದು ಬಹಳ ಚಿಂತೆಯಿಂದ ತನ್ನ ಮನಸ್ಸಿನಲ್ಲಿ—ನಾನು ಈ ದೇವತೆಗಳನ್ನೇ ಶರಣನ್ನು ಹೊಂದಿ ಬೇಡಿಕೊಳ್ಳುವುದೇ ಉಚಿತವೆಂದು ಎಣಿಸಿ ಅವರಿಗೆ ನಮಸ್ಕಾರವನ್ನು ಮಾಡಿ ಕೈಮುಗಿದು ಭಯದಿಂದ ನಡನಡುಗುತ್ತಾ—ಎಲೈ, ಮಹಾತ್ಮರುಗಳಿರಾ! ನಿಮ್ಮಿಂದಲೇ ಲೋಕದ ಜನರೆಲ್ಲರೂ ಧರ್ಮಿಷ್ಠರಾಗಿಯೂ

ನತ್ಯವಂತರಾಗಿಯೂ ನಡೆಯುವರು. ಪಾಪಿಷ್ಠರಾಗಿಯೂ ಅಸತ್ಯವಂತರಾಗಿಯೂ ನಡೆಯುವಂಥಾ ಜನಗಳು ನಿಮ್ಮಿಂದಲೇ ಶಿಕ್ಷೆಯನ್ನು ಹೊಂದುವರು. ನೀವು ಇಂಥಾ ಧರ್ಮದೇವತೆಗಳಾದುದರಿಂದ ನಿಮ್ಮ ಪಾದವನ್ನು ಶರಣನ್ನಾಗಿ ಹೊಂದಿದ್ದೇನೆ. ನಿಮ್ಮ ದಾಸಿಯಾದ ನನ್ನನ್ನು ದಯೆಯಿಂದ ಕಾಪಾಡಬೇಕು. ಪೂರ್ವದಲ್ಲಿ ರಾಜಹಂಸವು ನನ್ನ ಸಮೀಪಕ್ಕೆ ಬಂದು ನಳನ ರೂಪರೇಖೆಗಳನ್ನೂ ಸದ್ಗುಣಗಳನ್ನೂ ಹೇಳಿ ಹೋದುದು ಮೊದಲುಗೊಂಡು ಅತನೇ ನನಗೆ ಪ್ರಾಣಕಾಂತನೆಂದು ನನ್ನ ತ್ರಿಕರಣದಲ್ಲಿಯೂ ನಿಶ್ಚಯಿಸಿದ್ದೇನೆ ಅತನನ್ನು ಬಿಟ್ಟು ಮತ್ತೊಬ್ಬನನ್ನು ಮದುವೆಮಾಡಿಕೊಳ್ಳುವುದಕ್ಕೆ ನನ್ನ ಮನಸ್ಸು ಒಡಂಬಡುವುದಿಲ್ಲ. ಸತ್ಯವಾಗಿ ನುಡಿಯುತ್ತೇನೆ ನನಗೆ ನಳನೇ ಪ್ರಾಣನಾಯಕನೆಂದು ಮೊದಲೇ ನೀವು ನಿಯಮಿಸಿ ಇದ್ದುದರಿಂದ ನನಗೂ ಹಾಗೆ ಆಪೇಕ್ಷೆ ಹುಟ್ಟಿತು ನನ್ನ ಪಾತಿವ್ರತ್ಯವು ಕೆಡದ ಹಾಗೂ ನನ್ನ ಆಭೀಷ್ಟವು ನೆರವೇರುವ ಹಾಗೂ ನಿಮ್ಮ ಸಂಕಲ್ಪವು ಸತ್ಯವಾಗುವ ಹಾಗೂ ನನ್ನ ಮೇಲಣ ದಯೆಯಿಂದ ನಿಜವಾದ ನಳನ ರೂಪೇ ನನಗೆ ತೋರುವ ಹಾಗೆ ಅನುಗ್ರಹಿಸಬೇಕು ಎಂದು ಬಹು ದೈನ್ಯದಿಂದ ಬೇಡಿಕೊಂಡಳು

ಇಂದ್ರಾದಿ ಲೋಕಪಾಲಕರು ಆ ಮಾತನ್ನು ಕೇಳಿ ಇದೆಲ್ಲವೂ ನಿಜವೆಂದು ತಿಳಿದು ಆಕೆಗೆ ನಳನ ಆಕಾರವು ತಿಳಿಯುವ ಹಾಗೆ ಅನುಗ್ರಹಿಸಿದರು. ಆಗ ದಮಯಂತಿಯು ಬೆವರಿಲ್ಲದ ನೈಯ್ಯುಳ್ಳವರಾಗಿಯೂ ಎವೆಯನ್ನು ಹಾಕದಿರುವ ಕಣ್ಣುಳ್ಳವರಾಗಿಯೂ ಬಾಡದೆ ಇರುವ ಹೂವಿನ ಮಾಲಿಕೆಗಳನ್ನು ಧರಿಸಿರುವವರಾಗಿಯೂ ಭೂಮಿಯಲ್ಲಿ ಇದ್ದರೂ ಭೂಮಿಯನ್ನು ಮುಟ್ಟದೆ ಇರುವವರಾಗಿಯೂ ಇರುವ ಈ ಮೊದಲಾದ ಗುರುತುಗಳನ್ನು ನೋಡಿ ಇವರೇ ಲೋಕಪಾಲಕರೆಂದು ತಿಳಿದು ತಲೆಬಾಗಿ ಕೈಮುಗಿದು ಆ ಒಳಿಕ ಬಾಡಿರುವ ಹೂಸರವನ್ನು ಮುಡಿದು ಎವೆ ಹಾಕುವ ಕಣ್ಣುಗಳುಳ್ಳವನಾಗಿ ಭೂಮಿಯನ್ನೊತ್ತಿ ಕುಳಿತಿರುವ ನಳನನ್ನು ನೋಡಿ ಇವನೇ ನನ್ನ ಗಂಡನೆಂದು ವರಿಸಿ ತನ್ನ ಕೈಯ್ಯಲ್ಲಿದ್ದ ಹೂವಿನ ಸರವನ್ನು ದೇವತೆಗಳ ಮುಂದೆಯೇ ಅತನ ಕುತ್ತಿಗೆಯಲ್ಲಿ ಹಾಕಿದಳು ಆಗ ಇಂದ್ರನೇ ಮೊದಲಾದ ದೇವತೆಗಳು ಸಂತೋಷಪಟ್ಟು ಆ ನಳನ ಯಜ್ಞಸಮಯದಲ್ಲಿ ತಾವು ಪ್ರತ್ಯಕ್ಷವಾಗಿ ಬಂದು ಹವಿರ್ಭಾಗಗಳನ್ನು ತೆಗೆದುಕೊಳ್ಳುವ ಹಾಗೂ ಅತನಿಗೆ ಪುಣ್ಯಲೋಕವು ದೊರೆಯುವಹಾಗೂ ಈ ಎರಡು ವರಗಳನ್ನು ಇಂದ್ರನು ಕೊಟ್ಟನು. ಯಜ್ಞೇಶ್ವರನು ನಳನು ನೆನೆದಾಗಲೇ ತಾನು ಪ್ರತ್ಯಕ್ಷನಾಗುವ ಹಾಗೂ ಅತನಿಗೆ ತನ್ನ ಲೋಕಸುಖಗಳು ಉಂಟಾಗುವ ಹಾಗೂ ಈ ಎರಡು ವರಗಳನ್ನು ಕೊಟ್ಟನು. ಯಮನು ನಳನು ಒಟ್ಟ ಅನ್ನಾದಿಪದಾರ್ಥಗಳಿಗೆ ವಿಶೇಷ ರುಚಿಯುಂಟಾಗುವ ಹಾಗೂ ಅತನ ಹೃದಯವು ಧರ್ಮದಲ್ಲಿಯೇ ಆಸಕ್ತವಾಗಿರುವ ಹಾಗೂ ಈ ಎರಡು ವರಗಳನ್ನು ಕೊಟ್ಟನು. ವರುಣನು ಅತನು ನೆನಸಿದ ತಾವಿನಲ್ಲಿ ನೀರುಗಳುಂಟಾಗುವಹಾಗೂ ಅತನು ಧರಿಸಿಕೊಂಡಿರುವ ಹೂವಿನ ಹಾರಗಳು ಬಾಡದೆ ನಿರಂತರವೂ ಪರಿಮಳಿಸುತ್ತಾ ಇರುವ ಹಾಗೂ ಈ ಎರಡು ವರಗಳನ್ನು ಕೊಟ್ಟನು. ಈ ಪ್ರಕಾರ ನಾಲ್ವರು ಲೋಕಪಾಲಕರೂ ನಳನಿಗೆ ಎಂಟು ವರಗಳನ್ನು ಕೊಟ್ಟು ತಮ್ಮ

ತಮ್ಮ ಸ್ಥಾನಗಳಿಗೆ ಹೋದರು. ಆ ಸಮಯದಲ್ಲಿ ಅಲ್ಲಿ ನಡೆದ ವೃತ್ತಾಂತವೆಲ್ಲವೂ ನಳನಿಗೂ ದಮಯಂತಿಗೂ ಎಲ್ಲಾ ಅರುಸುಗಳಿಗೂ ಕನಸಿನ-ತೆ ತೋರಿತು. ಆ ಬಳಿಕ ಭೀಮಭೂಪಾಲಕನು ಮಹಾವೈಭವದಿಂದ ನಳಜಕ್ಕೇಶ್ವರನಿಗೂ ದಮಯಂತಿಗೂ ನೆರೆದ ಅರುಸುಗಳ ಮುಂದೆ ವಿಜೃಂಭಣೆಯಿಂದ ಮದುವೆಯನ್ನು ಮಾಡಿಸಿದನು. ಆ ಸಂತೋಷವನ್ನು ನೋಡಿ ಅನಂತರದಲ್ಲಿ ಉಚಿತಸತ್ಕಾರಗಳನ್ನು ಹೊಂದಿ ಎಲ್ಲರೂ ತಮ್ಮ ತಮ್ಮ ದೇಶಗಳಿಗೆ ಹೊರಟುಹೋದರು. ಆ ಮೇಲೆ ನಳನು ನಾರೀರತ್ನವಾದ ದಮಯಂತಿಯೊಡನೆ ಕೂಡಿ ಶಚೀದೇವಿಯೊಡನೆ ಕೂಡಿದ ಇಂದ್ರನೋಪಾದಿಯಲ್ಲಿ ಭೀಮರಾಜನ ಅಪ್ಪಣೆಯನ್ನು ತೆಗೆದುಕೊಂಡು ತನ್ನ ಪಟ್ಟಣಕ್ಕೆ ಹೋಗಿ ಸಕಲ ಭೂಮಂಡಲವನ್ನೂ ಪಾಲಿಸುತ್ತಾ ಸೂರ್ಯನಹಾಗೆ ತೇಜಸ್ಸುಳ್ಳವನಾಗಿ ನಹುಷನ ಮಗನಾದ ಯಯಾತಿರಾಜನ ಹಾಗೆ ಅಶ್ವಮೇಧ ಮೊದಲಾದ ಅನೇಕ ಯಜ್ಞಗಳನ್ನು ಮಾಡುತ್ತಾ ಉದ್ಯಾನವನನೇ ಮೊದಲಾದ ರಮ್ಯ ಪ್ರದೇಶಗಳಲ್ಲಿ ದಮಯಂತಿಯೊಡನೆ ಲೀಲಾವಿಲಾಸಗಳಿಂದ ಹೊತ್ತನ್ನು ಕಳೆಯುತ್ತಾ ಸಮಸ್ತ ವಸ್ತುಗಳಿಂದ ತುಂಬಿರುವ ಭೂಮಂಡಲದಲ್ಲಿ ಎರಡನೆಯ ದೇವೇಂದ್ರನಂತೆ ಸುಖದಿಂದಿದ್ದನು.

ಇತ್ತಲಾದೇವೇಂದ್ರನೇ ಮೊದಲಾದ ಲೋಕಪಾಲಕರು ತಮ್ಮ ತಮ್ಮ ಸ್ಥಾನಗಳನ್ನು ಕುರಿತು ಹೋಗುವ ದಾರಿಯಲ್ಲಿ ದ್ವಾಪರನೊಡನೆ ಕೂಡಿ ಹೋಗುತ್ತಿರುವ ಕಲಿಯನ್ನು ನೋಡಿ ದೇವೇಂದ್ರನು—ನೀವಿಬ್ಬರೂ ಎಲ್ಲಿಗೆ ಹೋಗುತ್ತೀರಿ? ಎಂದು ಕೇಳಲು ಕಲಿಪುರುಷನು—ದಮಯಂತಿಯನ್ನು ವರಿಸಬೇಕೆಂದು ಆಕೆಯ ಸ್ವಯಂವರಕ್ಕೆ ಹೋಗುತ್ತೇನೆ ಅಂದನು ಇಂದ್ರನು ನಸುನಕ್ಕು ಕಲಿಪುರುಷನನ್ನು ಕುರಿತು—ವೀರಸೇನನ ಮಗನಾದ ನಳಜಕ್ಕೇಶ್ವರನು ಅವಳನ್ನು ಮದುವೆ ಮಾಡಿಕೊಂಡನು. ಇನ್ನು ಯಾಕೆ ಹೋಗುತ್ತೀಯೇ? ಅಂದನು ಕಲಿಯು ಕೋಪಿಸಿಕೊಂಡು—ನಿಮ್ಮಂಥ ಲೋಕಪಾಲಕರನ್ನೆಲ್ಲಾ ನಿರಾಕರಿಸಿ, ಮನುಷ್ಯಮಾತ್ರನೂ ಅಲ್ಪನೂ ಆದ ನಳನನ್ನು ವರಿಸಿದ ಆ ದಮಯಂತಿಯನ್ನು ಶಿಕ್ಷಿಸಬೇಕು ಎನಲು ದೇವೇಂದ್ರನು—ನೀನು ಏಕೆ ಇಷ್ಟು ಕೋಪವನ್ನು ಮಾಡುತ್ತೀ? ದಮಯಂತಿಯು ದೇವತೆಗಳ ಅಪ್ಪಣೆಯನ್ನು ಪಡೆದು ನಳನನ್ನು ಮದುವೆ ಮಾಡಿಕೊಂಡಿದ್ದಾಳೆ. ಸಕಲ ಧರ್ಮಶಾಸ್ತ್ರಗಳನ್ನೂ ವೇದಗಳನ್ನೂ ಇತಿಹಾಸ ಪುರಾಣಗಳನ್ನೂ ತಿಳಿದು ಸಕಲಗುಣಗಳೊಡನೆ ಕೂಡಿ ಅನೇಕ ಯಜ್ಞಯಾಗಗಳನ್ನು ಮಾಡಿ ದಯಾಶಾಲಿಯೂ ದಾನಶೀಲನೂ ಧೀರನೂ ಸತ್ಯವ್ರತನೂ ತಪೋನಿಷ್ಠನೂ ಕ್ಷಮಾವಂತನೂ ಲೋಕಪಾಲಕರಿಗೆ ಸಮಾನನೂ ಆಗಿರುವ ಆ ನಳಭೂಪಾಲಕನಲ್ಲಿ ಯಾವನು ದ್ರೋಹವನ್ನು ಮಾಡಲು ಎಣಿಸುವನೋ ಅವನು ನರಕದಲ್ಲಿ ಮುಳುಗುವನು ಎಂದು ನುಡಿದನು. ಆ ಬಳಿಕ ದಿಕ್ಪಾಲಕರು ತಮ್ಮ ತಮ್ಮ ಸ್ಥಾನಗಳನ್ನು ಕುರಿತು ತೆರಳಿದರು.

ಅನಂತರದಲ್ಲಿ ಕಲಿಪುರುಷನು ದ್ವಾಪರನನ್ನು ನೋಡಿ—ನನಗೆ ನಳನಲ್ಲಿ ಅತಿಕೋಪವುಂಟಾಗಿರುವುದರಿಂದ ಯಾವ ರೀತಿಯಿಂದಾದರೂ ಅತನಿಗೆ ರಾಜ್ಯವನ್ನು ತಪ್ಪಿಸಿ ಅತನು ದಮಯಂತಿಯನ್ನು ಅಗಲಿ ಹೋಗುವ ಹಾಗೆ ಮಾಡುತ್ತೇನೆ. ನೀನು ಪಗಡೆ

ಯದಾಳಗಳಲ್ಲಿ ಹೊಕ್ಕು ನಳನು ಆಟದಲ್ಲಿ ಸೋಲುವಂತೆ ಮಾಡಿ ನನಗೆ ಸಹಾಯವನ್ನು ಮಾಡಬೇಕೆಂದು ಹೇಳಿ ಅವನನ್ನು ಒಡಗೊಂಡು ನಿಷಧಪಟ್ಟಣಕ್ಕೆ ಹೋಗಿ ತಾನು ನಳನನ್ನು ಸೇರುವುದಕ್ಕೆ ಹನ್ನೆರಡು ವರುಷಗಳ ಪರಿಯಂತರವೂ ಅವಕಾಶವಿಲ್ಲದೆ ಹೊಂಚಿಕೊಂಡಿರಲು ಒಂದುದಿವಸ ನಳನು ಅಶುಚಿಯುಳ್ಳವನಾಗಿ ಸಂಧ್ಯಾವಂದನೆಯನ್ನು ಮಾಡಿದುದರಿಂದ ಇದೇ ಸಮಯವೆಂದು ಅವನಲ್ಲಿ ಹೊಕ್ಕು ಅತನ ಒಡಹುಟ್ಟಾದ ಪುಷ್ಕರನ ಬಳಿಗೆ ಹೋಗಿ—ನೀನು ನನ್ನ ಸಹಾಯದಿಂದ ನಳನನ್ನು ಜಯಿಸಿ ಅತನ ಎಲ್ಲಾ ರಾಜ್ಯವನ್ನೂ ಕೆತ್ತುಕೋ ಎಂದು ನುಡಿದು ತಾನು ಒಂದು ಎತ್ತಿನ ರೂಪವನ್ನು ಧರಿಸಿ ಅತನ ಸಂಗಡವೇ ಬಂದನು. ಪುಷ್ಕರನು ಮಹಾನುಭಾವನಾದ ನಳನ ಬಳಿಗೆ ಬಂದು—ನಾನು ಒಂದು ಎತ್ತನ್ನು ತಂದಿದ್ದೇನೆ. ಇದಕ್ಕೆ ಪಂತವನ್ನು ಹಾಕಿ ಜೂಜಾಡುವಣ ಬಾ ಎಂದು ನಳನನ್ನು ಕರೆಯಲು ಅತನು ಅದಕ್ಕೆ ಒಪ್ಪಿ ಪಗಡೆಯಾಟಕ್ಕಾರಂಭಿಸಿ ದಮಯಂತಿಯು ನೋಡುತ್ತಿರುವ ಹಾಗೆ ದೈವಗತಿಯಿಂದ ಚಿನ್ನ ಬೆಳ್ಳಿ ಆನೆ ಕುದುರೆ ಮೊದಲಾದುವುಗಳನ್ನೂ ವಾಹನಗಳನ್ನೂ ನವರತ್ನಗಳನ್ನೂ ಒಡವೆಗಳನ್ನೂ ಪಂತಕ್ಕೆ ಒಡ್ಡಿ ನಳನು ತನ್ನ ತಮ್ಮನಾದ ಪುಷ್ಕರನೊಡನೆ ಜೂಜಾಡಿ ಕಡೆಗೆ ಎಲ್ಲವನ್ನೂ ಸೋತನು. ಆ ಬಳಿಕ ಮಂತ್ರಿಗಳೂ ಪಟ್ಟಣದಲ್ಲಿರುವ ಜನಗಳೂ ಆ ಜೂಜನ್ನು ನಿಲ್ಲಿಸಬೇಕೆಂದು ಎಣಿಸಿ ಅರಮನೆಯ ಬಾಗಿಲಿಗೆ ಬಂದು ಕಾವಲುಗಾರರನ್ನು ಕುರಿತು ನಾವು ಬಂದಿರುವುದನ್ನು ದಮಯಂತಿಗೆ ತಿಳಿಸಿರಿ ಎಂದು ಹೇಳಿ ಕಳುಹಿಸಿದರು. ಆಗ ನಳನ ಸಾರಥಿಯು ಆಕೆಯ ಬಳಿಗೆ ಹೋಗಿ ಅವರು ಬಂದಿರುವುದನ್ನು ತಿಳಿಸಲು ದಮಯಂತಿಯು ಕಣ್ಣೀರನ್ನು ತುಂಬಿ ನಳನ ಸನ್ನಿಧಾನಕ್ಕೆ ಹೋಗಿ—ಎಲೈ, ಭೂಪಾಲಕನೇ! ಮಂತ್ರಿಗಳೂ ಬ್ರಾಹ್ಮಣರೂ ಕ್ಷತ್ರಿಯರೂ ವೈಶ್ಯರೂ ಶೂದ್ರರೂ ಮೊದಲಾದ ಸರ್ವ ಜನಗಳೂ ನಿನ್ನನ್ನು ನೋಡಬೇಕೆಂದು ಬಂದು ನಿನ್ನ ಸಮಯವನ್ನು ನೋಡುತ್ತಾ ಹಜಾರದಲ್ಲಿ ಕಾದುಕೊಂಡಿದ್ದಾರೆ. ಅವರಿಗೆ ಏನು ಅಪ್ಪಣೆ? ಎಂದು ಕೇಳಲು ನಳನು ಕಲಿಪುರುಷನ ಮಹಿಮೆಯಿಂದ ಉದಾಸೀನವನ್ನು ಮಾಡಿ ದಮಯಂತಿಯ ಮಾತನ್ನು ಕಿವಿಗೆ ಹಾಕಿಕೊಳ್ಳದೆ ಪ್ರತ್ಯುತ್ತರವನ್ನು ಕೊಡದೆ ಇರಲು ಅದೆಲ್ಲವನ್ನೂ ತಿಳಿದು ಅವರೆಲ್ಲರೂ ನಳನಲ್ಲಿ ಆಶೆಯನ್ನು ಬಿಟ್ಟು ತಃಮ್ಮ ತಮ್ಮ ಮನೆಗಳಿಗೆ ಹೋದರು.

ಆ ಮೇಲೆ ದಮಯಂತಿಯು ಅಕ್ಷವಿದ್ಯಾ ಸಮರ್ಥನಾದ ಈ ಪುಷ್ಕರನು ತನ್ನ ಗಂಡನ ರಾಜ್ಯವನ್ನೆಲ್ಲಾ ಕಸುಕೊಂಡು ದೇಶಾಂತರಕ್ಕೆ ಓಟ್ಟುವನು ಎಂದು ನಿಶ್ಚಯಿಸಿ ನಳನ ಸಾರಥಿಯಾದ ವಾರ್ಷ್ಣೇಯನೆಂಬುವನನ್ನು ಕರಿಸಿ ಏಕಾಂತದಲ್ಲಿ ಅವನನ್ನು ಕುರಿತು—ನಳನ ಬುದ್ಧಿಯು ವಿಪರೀತವಾಗಿದೆ. ನಮಗೆ ಆಪತ್ತು ಬರುವುದು ಸಿದ್ಧವು. ಇಂಥಾ ಸಮಯದಲ್ಲಿ ನೀವು ನಮಗೆ ಒಂದು ಉಪಕಾರವನ್ನು ಮಾಡಬೇಕು ಅದೇನೆಂದರೆ—ನಳನ ಇಂದ್ರಸೇನನನಂಬ ಮಗನನ್ನೂ ಇಂದ್ರಸೇನೆ ಎಂಬ ಮಗಳನ್ನೂ ನಳನಿಗೆ ಅತ್ಯಂತ ಪ್ರಿಯಗಳಾದ ಕುದುರೆಗಳೊಡನೆ ಕೂಡಿರುವ ಅತನ ರಥದಮೇಲೆ ಕೂರಿಸಿಕೊಂಡು ಕುಂಡಿನ ಪಟ್ಟಣಕ್ಕೆ ಹೋಗಿ ನನ್ನ ತಂದೆಯಾದ ಭೀಮಭೂಪಾಲನಿಗೆ

ಒಪ್ಪಿಸಿ ಆ ಮೇಲೆ ನಿನ್ನ ಮನಸ್ಸು ಬಂದ ಕಡೆಗೆ ಹೋಗು ಎಂದು ಹೇಳಲು ಆ ವಾರ್ಷ್ಣೇಯನು ಆ ಮಾತನ್ನು ಮಂತ್ರಿಗಳಿಗೆ ತಿಳಿಸಿದನು. ಅವರೆಲ್ಲರೂ ಏಕಾ ಲೋಚನೆಯನ್ನು ಮಾಡಿ ನಿಶ್ಚಯಿಸಿ—ಹಾಗೇ ಮಾಡು ಎಂದು ನುಡಿದರು ತರು ವಾಯ ವಾರ್ಷ್ಣೇಯನು ಆ ಶಿಶುಗಳನ್ನು ರಥದ ಮೇಲೆ ಕೂರಿಸಿಕೊಂಡು ಕುಂಡಿನ ಪಟ್ಟಣಕ್ಕೆ ಹೋಗಿ ಭೀಮಭೂಪಾಲಕನಿಗೆ ಒಪ್ಪಿಸಿ ಆತನ ಆಪ್ಪಣೆಯನ್ನು ತೆಗೆದು ಕೊಂಡು ನಳನಿಗೆ ಬಂದ ಅನರ್ಥವನ್ನು ಯೋಚಿಸಿ ಸಂಕಟಪಡುತ್ತಾ ನಳನಲ್ಲಿ ಆಶೆ ಯನ್ನು ತೊರೆದು ನಾನು ಇನ್ನು ಎಲ್ಲಿಗೆ ಹೋಗಬೇಕೆಂದು ಯೋಚಿಸಿ ಕಡೆಗೆ ಅಯೋಧ್ಯಾಪಟ್ಟಣಕ್ಕೆ ಹೋಗಲು ಅಲ್ಲಿಗೆ ಅರಸಾದ ಋತುಪರ್ಣ ರಾಜನು ಆತನ ಸಾರಥಿತನದ ಜಾಣತನವನ್ನು ನೋಡಿ ಮೆಚ್ಚಿ ಬೇಕಾದ ವಸ್ತುಗಳನ್ನು ಕೊಟ್ಟು ಬಹುಮಾನದಿಂದ ಆತನನ್ನು ತನ್ನ ಸಾರಥ್ಯದ ಕೆಲಸದಲ್ಲಿ ಇಟ್ಟುಕೊಂಡನು

ಇತ್ತಲಾ ಪುಷ್ಕರನು ನಳನನ್ನು ನೋಡಿ—ನಿನ್ನ ಬೊಕ್ಕಸ ಮೊದಲಾದುವುಗ ಳನ್ನೂ ರಾಜ್ಯವನ್ನೂ ಜೂಜಿನಲ್ಲಿ ಗೆದ್ದೆನು. ಪಂತವನ್ನು ಒಡ್ಡುವುದಕ್ಕೆ ಮತ್ತೇನೂ ಸಿನ ಗಲ್ಲ ನಿನ್ನ ಹೆಂಡತಿಯಾದ ದಮಯಂತಿ ಒಬ್ಬಳು ಇದ್ದಾಳೆ. ಅವಳನ್ನು ಪಂತಕ್ಕೆ ಒಡ್ಡು ವುದಕ್ಕೆ ನಿನಗೆ ಮನಸ್ಸಿದ್ದರೆ ಒಡ್ಡು ಆಡುವಣ ಅಂದನು ಆ ಮಾತುಗಳಿಂದ ನಳನ ಎದೆಯು ಸೀಳಿದಂತಾಗಲು ಕೆಲವು ಹೊತ್ತು ಸುಮ್ಮನೆ ಇದ್ದು ಆ ಮೇಲೆ ಆತನನ್ನು ಕೋಪದಿಂದ ದುರದುರನೆ ನೋಡಿ—ಎಲೈ, ನರಾಧಮನೇ! ನನಗೆ ಇನ್ನೂ ಬೇಕಾ ದಷ್ಟು ಧನಗಳಿವೆ ಎಂದು ನುಡಿದು ಒಂದಾದ ಮಾಂಗಲ್ಯ ಸೂತ್ರ ಹೊರತಾಗಿ ದಮ ಯಂತಿಯು ಧರಿಸಿ ಇದ್ದ ಮಿಕ್ಕ ಒಡವೆಗಳನ್ನೂ ತಾನು ಹೊದೆದಿದ್ದ ವಸ್ತ್ರಗಳನ್ನೂ ಪಂತಕ್ಕೆ ಒಡ್ಡಿ ಎಲ್ಲವನ್ನೂ ಸೋತು ಉಟ್ಟ ಬಟ್ಟೆಯಲ್ಲಿಯೇ ಪಟ್ಟಣವನ್ನು ಬಿಟ್ಟು ಹೋಗುವಲ್ಲಿ ದಮಯಂತಿಯೂ ಸಂಗಡಲೇ ಒಂದಳು ಅವರಿಬ್ಬರೂ ಹೋಗಿ ಆ ರಾತ್ರಿಯಲ್ಲಿ ಪಟ್ಟಣದ ಸಮೀಪದಲ್ಲಿರಲು ದುಷ್ಟನಾದ ಪುಷ್ಕರನು—ಯಾರಾದರೂ ನಳನಿಗೆ ಅನ್ನೋದಕಗಳಿಂದ ಉಪಚಾರವನ್ನು ಮಾಡಿದರೆ ಅವರನ್ನು ಕೊಲ್ಲಿಸುತ್ತೇನೆ ಎಂದು ಪಟ್ಟಣದಲ್ಲಿ ಸಾರಿಸಿದುದರಿಂದ ನಳದಮಯಂತಿಯರಿಗೆ ಒಬ್ಬರಾದರೂ ಭೋಜ ನಾದ್ಯುಪಚಾರಗಳನ್ನು ಮಾಡಿಸದೆ ಹೋದರು.

ಆಗ ದಮಯಂತಿಯೂ ನಳನೂ ಸಾಯಂಸಂಧ್ಯಾಕರ್ಮವನ್ನು ನೆರವೇರಿಸಿ ಕೊಂಡು ಜಲಪಾನವನ್ನು ಮಾಡಿ ಹಸಿವಿನಿಂದ ಪೀಡಿತರಾಗಿ ಪ್ರಾತಃಕಾಲವಾದ ಮೇಲೆ ಮುಂದೆ ಬರುತ್ತಿರುವಲ್ಲಿ ಚಿನ್ನದ ರೆಕ್ಕೆಗಳಿಂದ ಕೂಡಿರುವ ಕೆಲವು ಹಕ್ಕಿಗಳು ನಳನ ಸಮೀಪಕ್ಕೆ ಹಾರಿಬರಲು ಅವುಗಳನ್ನು ನೋಡಿ ಈ ಹಕ್ಕಗಳನ್ನು ಹಿಡಿದು ಕೊಂಡರೆ ಹೊಟ್ಟೆತುಂಬಾ ಅನ್ನವೂ ವ್ಯಯಕ್ಕೆ ಚಿನ್ನವೂ ದೊರೆಯುತ್ತದೆ ಎಂದು ಎಣಿಸಿ ತಾನು ಉಟ್ಟಿರುವ ಬಟ್ಟೆಯನ್ನು ಕಳೆದು ಹೊಂಚುಹಾಕಿ ಅವುಗಳ ಮೇಲೆ ಕೌಚಲು ಆ ಹಕ್ಕಿಗಳು ಆ ಬಟ್ಟೆಯನ್ನು ಎತ್ತಿಕೊಂಡು ಆಕಾಶಕ್ಕೆ ಹಾರಿಹೋದವು. ಆಗ ನಳನು ಬೆತ್ತಲೆ ನಿಂತು ನಾಚಿಕೆಯಿಂದ ಮೊಗವನ್ನು ಬೊಗ್ಗಿಸಿಕೊಂಡಿರುವುದನ್ನು ನೋಡಿ ಆ ಹಕ್ಕಿಗಳು—ಎಲೈ, ನರೇಂದ್ರನೆ! ನಮ್ಮನ್ನು ದಾಳಗಳು ಎಂದು ತಿಳಿದುಕೋ

ಎಂಬುದಾಗಿ ಹೇಳಿ ಮಾಯವಾದುವು ಆ ಮೇಲೆ ನಳನು ದಮಯಂತಿಯನ್ನು ನೋಡಿ—ನಾನು ಬೆತ್ತಲೆ ಬರುವುದಕ್ಕೆ ನಾಚಿಕೊಳ್ಳುತ್ತೇನೆ. ಇದೋ! ನಿಮ್ಮ ತಂದೆಯದಾದ ಕುಂಡಿನ ನಗರವು ಕಾಣುತ್ತದೆ ನೀನು ಅಲ್ಲಿಗೆ ಹೋಗು ಎಂದು ಹೇಳಲು ದಮಯಂತಿಯು ಆ ವಾಕ್ಯವನ್ನು ಕೇಳಿ ಶೋಕಾರ್ತೆಯಾಗಿ ಕಣ್ಣೀರುಗಳನ್ನು ಸುರಿಸುತ್ತಾ ಗದ್ಗದ ಕಂಠಿಯಾಗಿ ತನ್ನ ವಲ್ಲಭನನ್ನು ಕುರಿತು—ನೀನು ಮನಸ್ಸಿನಲ್ಲಿ ನೆನಸಿರುವುದನ್ನು ನಾನು ನೋಡಿದರೆ ನನ್ನ ಅಂಗೋಪಾಂಗಗಳಿಲ್ಲಾ ಛಿನ್ನಭಿನ್ನಗಳಾಗುತ್ತವೆ. ಹೃದಯವು ತಲ್ಲಣಿಸುತ್ತದೆ. ರಾಜ್ಯವನ್ನು ಬಿಟ್ಟು ಉಡುವುದಕ್ಕೆ ಬಟ್ಟೆ ಇಲ್ಲದೆ ದುಃಖಿತನಾಗಿರುವ ನಿನ್ನನ್ನು ಜನರಹಿತವಾದ ಈ ಕಾಡಿನಲ್ಲಿ ಬಿಟ್ಟು ಹೋಗುವೆನೇ? ಹಸಿವಿನಿಂದ ದುಃಖಿಸುತ್ತಿರುವ ನಿನ್ನ ಸಮೀಪದಲ್ಲಿಯೇ ಇದ್ದುಕೊಂಡು ನಿನ್ನ ಮನಸ್ಸಿನ ಕ್ಲೇಶವನ್ನು ಹೋಗಲಾಡಿಸುವೆನು ಲೋಕದಲ್ಲಿ ಗಂಡಂದಿರ ಕಷ್ಟವನ್ನು ಪರಿಹರಿಸುವುದಕ್ಕೆ ಹೆಂಡತಿಗಿಂತಲೂ ಮತ್ತೊಬ್ಬರು ಹಿತರಿಲ್ಲ ಎಂದು ನೀನೇ ಹೇಳಿರುವೆಯಲ್ಲವೇ? ಎಂದು ನುಡಿಯಲು ನಳನು ಆಕೆಯ ಮಾತನ್ನು ಕೇಳಿ—ನೀನು ನಿಜವಾಗಿ ಹೇಳಿದೆ. ನಾನು ನಿನ್ನನ್ನು ಪರಿಹರಿಸಬೇಕೆಂದು ಎಣಿಸಿದವನಲ್ಲ. ನನ್ನಲ್ಲಿ ಆ ಸಂಶಯವನ್ನು ಎಂದಿಗೂ ಮಾಡಬೇಡ ನನ್ನ ಪ್ರಾಣಗಳನ್ನಾದರೂ ಬಿಟ್ಟೇನಲ್ಲದೆ ನಿನ್ನನ್ನು ಅಗಲಿ ಇರಲಾರೆನು ಎಂದನು.

ಆ ಮಾತಿಗೆ ದಮಯಂತಿಯು—ನಾನು ಅದನ್ನು ಬಲ್ಲೆನು. ವಿದರ್ಭದೇಶದ ಮಾರ್ಗವನ್ನು ತೋರಿಸಿದುದರಿಂದ ನನ್ನ ಹೃದಯವು ತಲ್ಲಣಿಸುತ್ತಿದೆ ಆದರೆ ನಾವಿಬ್ಬರೂ ವಿದರ್ಭದೇಶಕ್ಕೆ ಹೋದರೆ ನನ್ನ ತಂದೆಯಾದ ಭೀಮಭೂಪಾಲಕನು ನಮ್ಮನ್ನು ಪ್ರೀತಿಸಿ ಸಕಲ ವಸ್ತುಗಳನ್ನೂ ಕೊಡುತ್ತಾನೆ ಆದುದರಿಂದ ಸುಖವಾಗಿ ಇರಬಹುದು. ಇದು ನಿನ್ನ ಚಿತ್ತಕ್ಕೆ ಸಮ್ಮತವಾದರೆ ಆ ಪ್ರಕಾರವೇ ಮಾಡಬಹುದು ಎನಲು ನಳನು—ಅದು ಯುಕ್ತವೇ ಸರಿ! ಆದರೆ ನಾನು ಮೊದಲು ಸ್ವಯಂವರಕ್ಕೆ ಸಕಲ ವೈಭವದಿಂದ ಹೋಗಿ ಇದ್ದೆನು ಈಗ ಇಂಥಾ ಬಡತನದಿಂದ ಕೂಡಿ ನಿನಗೆ ಒಹಳ ದುಃಖವಾಗುವ ಹಾಗೆ ಅಲ್ಲಿಗೆ ಹೋಗುವುದು ತಕ್ಕುದಲ್ಲವು ಎಂದು ದಮಯಂತಿಯನ್ನು ಸಮಾಧಾನಪಡಿಸಿದನು ಅನಂತರದಲ್ಲಿ ಇಬ್ಬರೂ ಕೂಡಿ ಹಸಿವು ನೀರಡಿಕೆಗಳಿಂದ ಸಂಕಟಪಡುತ್ತಾ ಒಂದು ಸ್ಥಳಕ್ಕೆ ಹೋದರು ನಳನು ವಸ್ತ್ರಹೀನನಾದಕಾರಣ ಧೂಳಿಗಳಿಂದ ವ್ಯಾಪ್ತವಾದ ಶರೀರವುಳ್ಳವನಾಗಿ ನೆಲದಲ್ಲಿಯೇ ಬಿದ್ದುಕೊಳ್ಳಲು ದಮಯಂತಿಯು ಆತನನ್ನು ತಬ್ಬಿಕೊಂಡು ಅವನ ಬಳಿಯಲ್ಲಿಯೇ ಮಲಗಿದಳು ಆಗ ನಳನು—ಈ ಕೋಮಲೆಯು ಹೀಗೆ ಕಷ್ಟಪಡುವುದನ್ನು ನೋಡುವ ನನ್ನ ಎರಡು ಕಣ್ಣುಗಳೂ ಒಡೆದು ಹೋಗುವುದಿಲ್ಲವಲ್ಲಾ! ಈಕೆಯ ಕಷ್ಟವನ್ನು ನೋಡುತ್ತಾ ಬದುಕುವುದಕ್ಕಿಂತಲೂ ಪ್ರಾಣವನ್ನು ಬಿಡುವುದು ಲೇಸು. ಇವಳು ನನ್ನ ಜೊತೆಯಲ್ಲಿ ಇರುವವರೆಗೂ ಇವಳಿಗೆ ಈ ಸಂಕಟವು ತಪ್ಪುವುದಿಲ್ಲ. ನಾನು ಇವಳನ್ನು ಅಗಲಿ ಹೋದರೆ ಇವಳು ತನ್ನ ತಂದೆಯ ಸಮೀಪಕ್ಕೆ ಹೋಗಿ ಸುಖದಿಂದ ಇರುವಳು ಎಂದು ನಿಶ್ಚಯಿಸಿ ಅವಳು ಉಟ್ಟಿದ್ದ ಬಟ್ಟೆಯಲ್ಲಿ ಅರ್ಧವನ್ನು ತಾನು ಹರಿದುಕೊಂಡು ಅವಳಿಗೆ ಎಚ್ಚರ

ವಾಗದಂತೆ ಮೆಲ್ಲನೆದ್ದು ದುಃಖದಿಂದ ಬಾಷ್ಪೋದಕಗಳನ್ನು ಸುರಿಸುತ್ತಾ—ಅಯ್ಯೋ ವಿಧಿಯೇ! ಇಂಥಾ ಕಷ್ಟವನ್ನು ಕೊಟ್ಟೆಯಾ? ನೀನೇ ಗತಿ ಎಂದು ಸಹಜವಾಗಿ ನಂಬಿರುವ ಪತ್ನಿಯನ್ನು ಮಲಗಿರುವ ಕಾಲದಲ್ಲಿ ವಂಚಿಸಿ ಕಾಡಿನಲ್ಲಿ ಬಿಟ್ಟು ಹೋಗುವ ನನ್ನಂಥಾ ಪಾಪಿಯು ಲೋಕದಲ್ಲಿ ಉಂಟೇ? ಎಂದು ಹೇಳಿಕೊಳ್ಳುತ್ತಾ ಮಹಾ ದುಃಖದಿಂದಲೂ ವ್ಯಥೆಯಿಂದಲೂ ಕೂಡಿ ಸ್ವಲ್ಪ ದೂರವನ್ನು ಹೋಗಿ ಪುನಃ ಹಿಂದಿರುಗಿ ಬಂದು ಮುಂದೆ ಹೋಗುವುದಕ್ಕೆ ಕೆಲವು ಹೊತ್ತು ಯೋಚಿಸುತ್ತಾ ನಿಂತಿದ್ದು ಕಲಿ ಪ್ರೇರಣೆಯಿಂದ ತಿರಿಗಿ ಹೋಗಲೆಣಿಸಿ ಈ ಪುಣ್ಯಶೀಲೆಯಾದ ಪತಿವ್ರತೆಯನ್ನು ಭೂಮಿ ದೇವಿಯೂ ವನದೇವತೆಗಳೂ ಸೂರ್ಯ ಚಂದ್ರರೂ ಧರ್ಮದೇವತೆಯೂ ಅಷ್ಟದಿಕ್ಪಾಲಕರೂ ಕಾಪಾಡಲಿ ಎಂದು ನುಡಿದು ಯಾವ ಯೋಚನೆಯೂ ತೋರದೆ ಕಲಿಯಿಂದ ಪೀಡಿಸಲ್ಪಟ್ಟವನಾಗಿ ಹುಚ್ಚನಂತೆ ಮುಂದಕ್ಕೆ ಹೊರಟು ಹೋದನು.

ಆಗ ಕೆಲವು ಹೊತ್ತಿನ ಮೇಲೆ ದಮಯಂತಿಯು ಎಚ್ಚತ್ತವಳಾಗಿ ನಳನನ್ನು ಕಾಣದೆ ಕಲ್ಮರಗಳು ಕರಗುವಂತೆ ದುಃಖಪಡುತ್ತಾ—ಎಲೈ, ಪತಿಯೇ! ನಿರಪರಾಧಿಯಾದ ನನ್ನನ್ನು ಬಿಟ್ಟು ಹೋಗುವುದು ನಿನಗೆ ಧರ್ಮವೇ? ಎಂದು ಕೂಗಿ ಅಳುತ್ತಾ ದಿಕ್ಕುದಿಕ್ಕಿಗೆ ಬಾಯಿಬಿಡುತ್ತಾ ಬಾಯಾರಿ ಗಂಟಲೊಣಗಿ ಹಸಿವಿನಿಂದ ಕಂಗೆಟ್ಟು ಕಾಡಿನಲ್ಲಿ ಬರುತ್ತಿರಲು ದಾರಿಯಲ್ಲಿ ಬಿದ್ದಿರುವ ಒಂದು ಹೆಬ್ಬಾವು ಅವಳನ್ನು ನುಂಗಿತು. ಆಗ ಹೆಬ್ಬಾವಿನಿಂದ ನುಂಗಲ್ಪಟ್ಟರೂ ನಳನನ್ನು ನೆನೆದು—ಎಲೈ, ಎಮ್ರಾಣನಾಥನೇ! ಅನಾಥಳಾದ ನಿನ್ನ ಹೆಂಡತಿಯನ್ನು ಈ ಹಾವು ನುಂಗುತ್ತಿರುವಲ್ಲಿ ನೀನು ಬೇಗ ಬಂದು ನನ್ನನ್ನು ಯಾಕೆ ಬಿಡಿಸುವುದಿಲ್ಲ? ನಾನು ಸತ್ತುಹೋದ ಮೆಲೆ ನಿನಗೆ ಬಂದಿರುವ ಈ ಕಷ್ಟವು ಪರಿಹಾರವಾಗಿ ಸಕಲೈಶ್ವರ್ಯಗಳನ್ನು ಪಡೆದು ನನ್ನನ್ನು ನೆನಸಿಕೊಳ್ಳುವುದರಿಂದುಂಟಾಗುವ ಆ ದುಃಖವನ್ನು ಹೇಗೆ ಸಹಿಸುವಿ? ಎಂದು ಮೊರೆಯಿಡುತ್ತಿರಲು ಆ ಕಾಡಿನಲ್ಲಿ ತಿರುಗುವ ಒಬ್ಬ ಬೇಡನು ಆ ಮಾತುಗಳನ್ನು ಕೇಳಿ ಬೇಗ ಅಲ್ಲಿಗೆ ಬಂದು ತನ್ನ ಕೈಯ್ಯಲ್ಲಿ ಇದ್ದ ಕತ್ತಿಯಿಂದ ಆ ಹಾವಿನ ಬಾಯನ್ನು ಸೀಳಿ ದಮಯಂತಿಯನ್ನು ಬಿಡಿಸಿ ನೀರಿನಿಂದ ಶರೀರವನ್ನು ತೊಳೆಯಿಸಿ ಗಡ್ಡೆ ಗೆಣಸುಗಳನ್ನೂ ಹಣ್ಣುಗಳನ್ನೂ ಆಹಾರಕ್ಕೆ ತಂದುಕೊಟ್ಟು—ನೀನು ಯಾರು? ಒಬ್ಬಳೇ ಈ ಕಾಡಿಗೆ ಏಕೆ ಬಂದೆ? ಇಂಥಾ ಕಷ್ಟವು ನಿನಗೆ ಬರುವುದಕ್ಕೆ ಕಾರಣವೇನು? ಎನಲು ದಮಯಂತಿಯು ತನ್ನ ಎಲ್ಲಾ ಸುದ್ದಿಯನ್ನೂ ನಿಜವಾಗಿ ಆ ಬೇಡನಿಗೆ ಹೇಳಿದಳು. ಆ ಬಳಿಕ ಬೇಡನು ಇವಳ ಜೆಲುವನ್ನು ನೋಡಿ ಮನ್ಮಥ ವಿಕಾರವುಳ್ಳವನಾಗಿ ಬಲಾತ್ಕಾರದಿಂದ ಹಿಡಿಯಬೇಕೆಂದು ಹತ್ತಿರಕ್ಕೆ ಬರಲು ದಮಯಂತಿಯು ಮಹಾಕೋಪದಿಂದ—ನಾನು ನಳನೊಬ್ಬನನ್ನೇ ಹೊರತು ಮತ್ತೊಬ್ಬ ಗಂಡಸನ್ನು ಕನಸಿನಲ್ಲಾದರೂ ಎಣಿಸದೆ ಇದ್ದವಳಾದರೆ ಈ ದುರಾತ್ಮನು ಈಗಲೇ ನಾಶವಾಗಲಿ ಎಂದು ಶಪಿಸಿದ ಕ್ಷಣದಲ್ಲಿಯೇ ಅವನು ಕಾಡುಗಿಚ್ಚಿನಿಂದ ದಹಿಸಲ್ಪಟ್ಟ ಮರದಂತೆ ಇವಳ ಶಾಪಾಗ್ನಿಯಿಂದ ಸುಟ್ಟು ಬೂದಿಯಾದನು. ಆ ಬಳಿಕ ದಮಯಂತಿಯು ಅಲ್ಲಿಂದ ಹೊರಟು ಹುಲಿ ಕರಡಿ ಸಿಂಹ ಶರಭ ಮುಂತಾದ ದುಷ್ಟ ಮೃಗಗಳಿಂದಲೂ ಕಳ್ಳರು ಬೇಡರು ಮೊದಲಾದ

ದುಷ್ಟ ಜನಗಳಿಂದಲೂ ಕೂಡಿರುವ ನಾನಾ ವಿಧವಾದ ಧಾತುಗಳಿಂದ ಪ್ರಕಾಶಮಾನವಾಗಿ ಬಹಳ ಉದ್ದವಾದ ಶಿಖರಗಳೊಡನೆ ಕೂಡಿರುವ ದೊಡ್ಡ ದೊಡ್ಡ ಬೆಟ್ಟಗಳುಳ್ಳ ಮಹಾ ವನದಲ್ಲಿ ತನ್ನ ಗಂಡನನ್ನು ಹುಡುಕುತ್ತಾ ಹಂಬಲಿಸುತ್ತಾ ತುಸವಾದರೂ ಹೆದರದೆ ಬಂದು ಎತ್ತರವಾದ ಒಂದು ಕಲ್ಲಿನ ಮೇಲೆ ಕುಳಿತು—ಎಲೈ, ಪ್ರಾಣಪ್ರಿಯನೆ! ನಳಚಕ್ರವರ್ತಿಯೇ! ಇಂಥಾ ನಿರ್ಜನವಾದ ಅತಿಘೋರಾರಣ್ಯದಲ್ಲಿ ನಿನ್ನನ್ನೇ ಹಂಬಲಿಸುತ್ತಿರುವ ನನ್ನನ್ನು ಏಕೆ ಹೀಗೆ ಉಪೇಕ್ಷೆಮಾಡುತ್ತೀ? ಅತಿಕ್ರೂರವಾದ ಹುಲಿಯು ನನ್ನ ಬಳಿಗೆ ಬಂದು ಕೋರದಾಡೆಗಳಿಂದ ಕೂಡಿರುವ ಭಯಂಕರವಾದ ಬಾಯಿಯನ್ನು ಬಿಟ್ಟು ನನ್ನನ್ನು ಹೆದರಿಸುತ್ತಿದೆ. ಈ ಸಮಯದಲ್ಲಿಯಾದರೂ ಬಂದು ನನ್ನನ್ನು ಕಾಪಾಡಬೇಡವೇ? ನಿನಗಿಂತಲೂ ಪ್ರಿಯಳು ನನಗಿಲ್ಲವೆಂದು ನೀನು ಮೊದಲು ನನ್ನೊಡನೆ ಹೇಳುತ್ತಿದ್ದೆಯಲ್ಲಾ! ಆ ಮಾತುಗಳೆಲ್ಲಾ ಈಗ ಸಟೆಯಾಗಬಹುದೇ? ಎಂದು ಅರ್ಧ ವಸ್ತ್ರವನ್ನು ಉಟ್ಟುಕೊಂಡು ನಳನನ್ನೇ ಕುರಿತು ಹಂಬಲಿಸುತ್ತಾ ಗುಂಪನ್ನು ಅಗಲಿರುವ ಜಿಂಕೆಯ ಹಾಗೆ ಮೊರೆಯಿಡುತ್ತಾ ಶೋಕದಿಂದ ಕೊರಗುತ್ತಾ ಈ ಪ್ರಕಾರ ಮೂರುದಿವಸಗಳನ್ನು ಕಳೆದು ಆ ಮೇಲೆ ಒಂದು ಪುಣ್ಯಾಶ್ರಮವನ್ನು ನೋಡಿ ಅಲ್ಲಿಗೆ ಹೋಗಿ ಭೃಗು ವಸಿಷ್ಠ ಅತ್ರಿ ಮುನಿಗಳಿಗೆ ಸಮಾನರಾಗಿಯೂ ಅನ್ನಾಹಾರವನ್ನು ಬಿಟ್ಟವರಾಗಿಯೂ ನೀರನ್ನೂ ಗಾಳಿಯನ್ನೂ ತರಗೆಲೆಗಳನ್ನೂ ತಿಂದುಕೊಂಡು ನಾರುಸೀರೆಗಳನ್ನುಟ್ಟು ಕೃಷ್ಣಾಜಿನವನ್ನು ಧರಿಸಿರುವ ಮುನೀಂದ್ರರ ಬಳಿಗೆ ಹೋಗಿ ನಮಸ್ಕಾರವನ್ನು ಮಾಡಿ ಕೈಮುಗಿದು ನಿಂತುಕೊಂಡಿರಲು ಆ ಮುನಿಗಳು ಇವಳನ್ನು ನೋಡಿ ಇವಳ ಸೌಂದರ್ಯಕ್ಕೂ ಸುಗುಣಕ್ಕೂ ಸುಲಕ್ಷಣಗಳಿಗೂ ಬಹಳವಾಗಿ ಆಶ್ಚರ್ಯಪಟ್ಟು—ನೀನು ಯಾರಮ್ಮಾ? ಇಲ್ಲಿಗೆ ಏನು ನಿಮಿತ್ತವಾಗಿ ಬಂದೆ? ನಮ್ಮಿಂದ ನಿನಗೆ ಆಗತಕ್ಕ ಕೆಲಸವೇನು? ಎಂದು ಕೇಳಲು ತಾನು ಹುಟ್ಟಿದುದು ಮೊದಲುಗೊಂಡು ಆ ವರೆಗೂ ನಡೆದ ತನ್ನ ವೃತ್ತಾಂತಗಳನ್ನೆಲ್ಲಾ ಬಿನ್ನವಿಸಿದಳು. ಆ ಮಹಾತ್ಮರು ಈಕೆಯನ್ನು ನೋಡಿ—ಎಲೈ, ತಾಯೇ! ನೀನು ಸ್ವಲ್ಪದಿವಸದೊಳಗೆ ನಿನ್ನ ಗಂಡನನ್ನು ಕಾಣುತ್ತೀಯೆ. ನಿನಗೆ ಇನ್ನು ಮೇಲೆ ಸಕಲ ಶ್ರೇಯಸ್ಸುಗಳೂ ಉಂಟಾಗುತ್ತವೆ ನಿನ್ನ ಗಂಡನು ಹಗೆಗಳನ್ನು ಜಯಿಸಿ ತಿರಿಗಿ ರಾಜ್ಯವನ್ನು ತೆಗೆದುಕೊಂಡು ನಿನ್ನೊಡನೆ ಸುಖವಾಗಿರುವನು ಎಂದು ಹೇಳಿ ಅಂತರ್ಧಾನರಾದರು

ಆಮೇಲೆ ಅಲ್ಲಿಂದ ಹೊರಟು ಬರುತ್ತಾ ಆನೆ ಕುದುರೆಗಳಿಂದ ಕೂಡಿದವರಾಗಿ ಹಲಿನೀ ಎಂಬ ಒಂದು ನದಿಯನ್ನು ದಾಟುತ್ತಿರುವ ಜನಗಳನ್ನು ನೋಡಿ ಆ ಗುಂಪನ್ನು ಸೇರಲು ಅವರಲ್ಲಿ ಧರ್ಮನಿಷ್ಠರಾದ ಕೆಲವರು—ಎಲೈ, ತಾಯಿಯೇ! ನೀನು ಯಾರು? ನಿನ್ನ ವಿಚಾರವನ್ನು ನಿಜವಾಗಿ ಹೇಳು ಎನಲು ದಮಯಂತಿಯು—ನಾನು ವಿದರ್ಭದೇಶದ ಭೀಮರಾಜನ ಮಗಳು. ನನ್ನ ಹೆಸರು ದಮಯಂತಿಯು. ನನ್ನ ಗಂಡನಾದ ನಳನೆಂಬ ರಾಜಕಂಠೀರವನು ದೈವಸಂಕಲ್ಪದಿಂದ ನನ್ನನ್ನು ಅಗಲಿದ್ದಾನೆ. ನಾನು ಅವನನ್ನು ಹುಡುಕುತ್ತಿದ್ದೇನೆ ಎಂದು ಹೇಳಿ ನೀವೇನಾದರೂ ಆ ಮಹಾ ಪುರುಷನನ್ನು ಎಲ್ಲಿಯಾದರೂ ಕಂಡಿದ್ದೀರಾ? ಎಂದು ಕೇಳಲು ತಾಯಿಯೇ! ನಾವು

ಎಲ್ಲಿಯೂ ಕಾಣಲಿಲ್ಲ ಅಂದರು. ಆಗ ದಮಯಂತಿಯು ನೀವೆಲ್ಲರೂ ಎಲ್ಲಿಗೆ ಹೋಗುತ್ತಿದ್ದೀರಿ? ನನಗೆ ತಿಳಿಸಿರಿ ಎಂದು ಕೇಳಿದುದಕ್ಕೆ ನಾವು ಸುಬಾಹು ರಾಜನಿಂದ ಆಳಲ್ಪಡುವ ಚೇದಿರಾಜ್ಯಕ್ಕೆ ಲಾಭಾರ್ಥವಾಗಿ ವ್ಯಾಪಾರಕ್ಕೆ ಹೋಗುತ್ತಿದ್ದೇವೆ ಎಂದು ಹೇಳಲು ದಮಯಂತಿಯು ಅವರ ಕೂಡಲೇ ಹೋಗುತ್ತಿರುವಾಗ ಆ ವರ್ತಕರು ಒಂದು ಕಾಡಿನಲ್ಲಿರುವ ಒಂದು ಕೊಳದ ಸಮೀಪದಲ್ಲಿ ತಮ್ಮ ಬೀಡಿಕೆಯನ್ನು ಬಿಡಿಸಿ ಶ್ರಮದಿಂದ ಸಕಲರೂ ಮಲಗಿರುವಾಗ ಸಮೀಪದಲ್ಲಿರುವ ಬೆಟ್ಟದ ಕಿಬ್ಬರಿಯಿಂದ ಕಾಡಾನೆಗಳು ಗುಂಪು ಕೂಡಿ ಆ ಕೊಳದಲ್ಲಿ ನೀರು ಕುಡಿಯುವುದಕ್ಕೆ ಒರುತ್ತಾ ದಾರಿಯಲ್ಲಿ ಅಡ್ಡವಾಗಿ ಬಿದ್ದಿರುವ ವರ್ತಕರೆಲ್ಲರನ್ನೂ ಕಾಲುಗಳಿಂದ ತುಳಿದುಕೊಂಡು ಬರಲು ಆ ವರ್ತಕರೆಲ್ಲರೂ ನಿದ್ದೆಯಿಂದ ಎದ್ದು ಕಾಡಾನೆಗಳ ಗುಂಪನ್ನು ನೋಡಿ ಕೆಲವರು ಬೆದರಿ ಬೆಚ್ಚಿ ಬೆಂಡಾಗಿ ಹೊದರುಗಳನ್ನು ಹೊಕ್ಕರು. ಇನ್ನು ಕೆಲವರು ಕೊಂಬಿನ ಗಾಯಗಳಿಂದಲೂ ಸೊಂಡಲಿನ ಪೆಟ್ಟುಗಳಿಂದಲೂ ಹತರಾದರು. ಮತ್ತು ಆ ವರ್ತಕರು ತಂದಿದ್ದ ಎತ್ತು ಕುದುರೆ ಕತ್ತೆ ಒಂಟೆಗಳೆಲ್ಲವೂ ಸಾಲುದಾವಣಿಗಳನ್ನು ಕಿತ್ತುಕೊಂಡು ಬೆದರಿ ನಾನಾ ದಿಕ್ಕುಗಳಿಗೆ ಓಡಿಹೋದವು. ಈ ಪ್ರಕಾರದಿಂದ ಆನೆಗಳು ವರ್ತಕರನ್ನು ಹತಮಾಡಲು ಮಾರನೆಯ ದಿವಸ ಹತಶೇಷರಾದ ವರ್ತಕರು ದುಃಖಪಡುತ್ತಾ ಅಲ್ಲಿಂದ ಹೊರಟರು.

ಅವರೊಡನೆಯೇ ದಮಯಂತಿಯೂ ಹೊರಟು ಕೆಲವು ಪ್ರಯಾಣಗಳು ಕಳೆದು ಹೋದ ಮೇಲೆ ಚೇದಿದೇಶಾಧಿಪತಿಯಾಗಿರುವ ಸುಬಾಹುರಾಜನ ಪಟ್ಟಣವನ್ನು ಸೇರಿ ಒಂದು ದಿನದ ಸಾಯಂಕಾಲದಲ್ಲಿ ಆ ಪಟ್ಟಣದ ಬಾಗಿಲನ್ನು ಹೊಕ್ಕು ರಾಜಬೀದಿಯಲ್ಲಿ ಹೋಗುವಾಗ ಅರೆವಾಸಿ ಬಟ್ಟೆಯನ್ನು ಉಟ್ಟು ಕಂದಿ ಕುಂದಿ ಬಳಲಿ ಬಾಯಾರಿ ಬಡವಾಗಿಯೂ ದೀನೆಯಾಗಿಯೂ ಕೆದರಿದ ಕೂದಲುಗಳುಳ್ಳವಳಾಗಿಯೂ ಒರುವ ದಮಯಂತಿಯನ್ನು ಸೆಜ್ಜೆಯ ಮೇಲೆ ಇರುವ ಸುಬಾಹುರಾಜನ ತಾಯಿಯು ನೋಡಿ—ಅವಳನ್ನು ಕರಕೊಂಡು ಬನ್ನಿ ಎಂದು ಗೌಡಿಯರನ್ನು ಕಳುಹಿಸಲು ಅವರು ದಮಯಂತಿಯನ್ನು ಕರಕೊಂಡು ಹೋಗಿ ಅರಸಿನ ತಾಯಿಯ ಬಳಿಯಲ್ಲಿ ನಿಲ್ಲಿಸಲು ಆಕೆಯು—ನೀನು ಯಾರಮ್ಮ? ಎಂದು ಕೇಳಿದುದಕ್ಕೆ—ನಾನು ಮನುಷ್ಯಸ್ತ್ರೀಯು. ಸೈಳೇಂದ್ರಿಯ ಜಾತಿಯಲ್ಲಿ ಹುಟ್ಟಿದವಳು. ನನ್ನ ಗಂಡನು ಅಗಲಿದುದರಿಂದ ನಾನು ಅರಣ್ಯಗಳಲ್ಲಿ ಹಣ್ಣು ಗಡ್ಡೆ ಮೊದಲಾದುವುಗಳನ್ನು ತಿನ್ನುತ್ತಾ ಎಲ್ಲಿ ಸಾಯಂಕಾಲವಾದರೆ ಅಲ್ಲಿಯೇ ಮಲಗುತ್ತಾ ಗಂಡನನ್ನು ಹುಡುಕುತ್ತಾ ಹೀಗೆ ಬಂದೆನು. ಎಲ್ಲಿಯೂ ಗೊತ್ತು ಹತ್ತಲಿಲ್ಲ. ಆತನ ನೆಳಲಿನಂತೆ ಒಂದು ಕ್ಷಣವಾದರೂ ಆತನನ್ನು ಎಡಬಿಡದೆ ಇದ್ದ ನಾನು ಈಗ ಆತನನ್ನು ಕಾಣದೆ ಇಂಥಾ ದುಃಖಕ್ಕೆ ಒಳಗಾದೆನು ಎಂದು ಪಳಪಳನೆ ಕಣ್ಣುಗಳಲ್ಲಿ ನೀರನ್ನು ಸುರಿಸುತ್ತಾ ಅಳಲು ಆ ಅರಸಿನ ತಾಯಿಯೂ ಬಹಳ ದುಃಖಪಟ್ಟು—ಎಲೇ, ತಾಯಿಯೇ! ಏನು ನಿಮಿತ್ತವೋ ಕಾಣೆ. ನಿನ್ನಲ್ಲಿ ನನಗೆ ಬಹಳ ಪ್ರೀತಿಯುಂಟಾಗಿದೆ. ನೀನು ನನ್ನ ಬಳಿಯಲ್ಲಿಯೇ ಇರು. ಬೇಹಿನವರನ್ನು ಕಳುಹಿಸಿ ನಿನ್ನ ಪತಿಯನ್ನು ನಾಲ್ಕು ದಿಕ್ಕುಗಳಲ್ಲಿಯೂ ಹುಡುಕಿಸು

ತ್ತೇನೆ. ಒಂದು ವೇಳೆ ನಿನ್ನ ಗಂಡನು ಎಲ್ಲಾ ದೇಶಗಳಲ್ಲಿಯೂ ತಿರುಗಿ ತನಗೆ ತಾನೇ ಇಲ್ಲಿಗೆ ಬಂದರೆ ಮತ್ತೂ ಲೇಸು ಎಂದು ಹೇಳಲು ಅದಕ್ಕೆ ದಮಯಂತಿಯೂ—ಎಲೈ, ದೇವೀ! ನನ್ನ ಸಮಾಪದಲ್ಲಿ ಇರು ಎಂದು ನುಡಿದೆಯಲ್ಲಾ! ನನ್ನ ಅಭಿಪ್ರಾಯವನ್ನು ಕೇಳು. ತಿಂದು ಮಿಕ್ಕುದನ್ನು ತಿನ್ನುವುದೂ ಒಬ್ಬನ ಕಾಲು ತೊಳೆಯುವುದೂ ಇವು ಮೊದಲಾದ ಕೀಳು ಕೆಲಸಗಳನ್ನು ನಾನು ಎಂದಿಗೂ ಮಾಡುವವಳಲ್ಲ. ನನ್ನ ಗಂಡನನ್ನು ಹುಡುಕುವುದಕ್ಕೆ ಹೋಗುವ ಜನರೊಡನೆ ಮಾತ್ರ ನಾನು ಮಾತಾಡುವುದೇ ಹೊರತು ಮತ್ತೊಬ್ಬರ ಸಂಗಡ ಮಾತಾಡುವುದಿಲ್ಲ. ಯಾರಾದರೂ ನನ್ನ ಮೇಲೆ ಕಣ್ಣಿಟ್ಟರೆ ನೀನು ಅವರನ್ನು ದಂಡಿಸಬೇಕು. ಹೀಗಾದರೆ ನಿನ್ನ ಬಳಿಯಲ್ಲಿಯೇ ಇರುವೆನು. ಇಲ್ಲದಿದ್ದರೆ ಇರಲಾರೆನು ಎನಲು ಅದನ್ನು ಆ ಅರಸಿನ ತಾಯಿಯು ಕೇಳಿ ಬಹಳ ಸಂತೋಷಪಟ್ಟು—ಎಲೇ, ಭಾಮಾಮಣಿಯೇ! ನೀನು ಪತಿವ್ರತೆಯರ ಶಿಖಾಮಣಿಯಾಗಿದ್ದೀ. ನಿನ್ನ ಮನಸ್ಸಿನಲ್ಲಿ ಇದ್ದ ರೀತಿಯಲ್ಲಿಯೇ ನಾನು ನಡಿಸುತ್ತೇನೆ ನೀನು ಸ್ವಲ್ಪವೂ ಯೋಚನೆಯನ್ನು ಮಾಡಬೇಡ ಎಂದು ಹೇಳಿ ಸಮಾಧಾನ ಪಡಿಸಿ ತನ್ನ ಮಗಳಾದ ಸುನಂದೆಯನ್ನು ಕರೆದು—ಲೋಕಸುಂದರಿಯಾದ ಈ ಸೈಳೇಂದ್ರಿಯೂ ನೀನೂ ಒಂದೇ ವಯ್ಯದವರಾದುದರಿಂದ ಸ್ವಲ್ಪವಾದರೂ ಭೇದವಿಲ್ಲದೆ ಸಂಗಾತಿಗಳಾಗಿರಿ ಎಂದು ಕಟ್ಟುಮಾಡಿ ಕಳುಹಿಸಲು ದಮಯಂತಿಯು ಆ ರಾಜಪುತ್ರಿಯಾದ ಸುನಂದೆಯೊಡನೆ ಕೂಡಿ ಯಾವಾಗಲೂ ತನ್ನ ಗಂಡನ ಚರಿತ್ರೆಗಳನ್ನು ಕಥೆಗಳಾಗಿ ಅವಳೊಡನೆ ಹೇಳಿಕೊಳ್ಳುತ್ತಾ ಇದ್ದಳು.

ಇತ್ತಲಾ ನಳನು ದಮಯಂತಿಯನ್ನು ಬಿಟ್ಟು ಆಜೆಗೆ ನಡೆಯುವ ಸಮಯದಲ್ಲಿ ನಿಬಿಡವಾದ ಅರಣ್ಯಮಾರ್ಗದಲ್ಲಿ ಭಯಂಕರವಾದ ಕಾಡುಗಿಚ್ಚು ಸುತ್ತಿಕೊಂಡು ಕಾಡನ್ನು ಸುಡುತ್ತಿರುವಲ್ಲಿ ಅದರ ನಟ್ಟನಡುವೆ—ಪುಣ್ಯಶ್ಲೋಕನಾದ ನಳಮಹಾರಾಜನೇ! ನಳಮಹಾರಾಜನೇ! ಬೇಗನೆ ಇಲ್ಲಿಗೆ ಬಾ ಎಂದು ತನ್ನ ಹೆಸರನ್ನು ಹಿಡಿದು ಕೂಗಿ ಕರೆಯುವ ಧ್ವನಿಯನ್ನು ಕೇಳಿ ಈತನು ದಯಾರ್ದ್ರಹೃದಯನಾಗಿ—ಹೆದರಬೇಡ! ಹೆದರಬೇಡ! ಇದೋ ಇದೋ! ಬಂದೆನು ಎಂದು ನುಡಿಯುತ್ತಾ ಆ ಕಾಡುಗಿಚ್ಚಿನ ನಡುವೆ ಹೊಕ್ಕು ಅಲ್ಲಲ್ಲಿ ನೋಡುತ್ತಿರಲು ಒಂದು ತಾವರೆಯಲ್ಲಿ ಸುತ್ತಿಕೊಂಡು ಬಿದ್ದಿರುವ ಒಂದು ಘಟಸರ್ಪವು ಅತಿಭಯದಿಂದ ಮೈಯನ್ನು ನಡುಗಿಸುತ್ತಾ—ಎಲೈ, ರಾಜೇಂದ್ರನೇ! ನಾನು ಕರ್ಕೋಟಕನೆಂಬ ಮಹಾನಾಗೇಂದ್ರನು. ಮೊದಲು ನಾನು ತಪೋನಿಧಿಯಾಗಿ ನಿರಪರಾಧಿಯಾಗಿರುವ ಒಬ್ಬ ಬ್ರಾಹ್ಮಣನಿಗೆ ಅಪಕಾರವನ್ನು ಮಾಡಿದುದರಿಂದ ಆತನು ಕೋಪಿಸಿಕೊಂಡು—ನಳನು ನಿನ್ನನ್ನು ನೋಡುವ ಪರಿಯಂತರವೂ ಆಜೆಗೆ ಹೋಗುವುದಕ್ಕೆ ಸಾಮರ್ಥ್ಯವಿಲ್ಲದೆ ಕಲ್ಲಿನ ಹಾಗೆ ಇಲ್ಲಿಯೇ ಬಿದ್ದಿರು ಎಂದು ಶಪಿಸಿದನು. ಅದಕಾರಣ ನಾನು ಇಲ್ಲಿಂದ ಮೇಲಕ್ಕೆ ಏಳಲಾರನು. ನೀನು ನನ್ನನ್ನು ಈ ಕಾಡುಗಿಚ್ಚಿನಿಂದ ಆಜೆಗೆ ತೆಗೆದು ಕಾಪಾಡಿದರೆ ನಿನಗೆ ಹಿತವನ್ನು ಮಾಡುವೆನು. ನಾನು ಹಾವುಗಳೊಳಗೆ ಬಲ್ಲಿದನು. ಬೆಟ್ಟದಂತಿರುವ ನನ್ನ ಮೈಯನ್ನು ಸ್ವಲ್ಪವಾಗಿ ಮಾಡಿಕೊಂಡು ನಿನಗೆ ತೋರಿಸಿದ್ದೇನೆ. ನನ್ನನ್ನು ಬೆಂಕಿಯಿಂದ ಆಜೆಗೆ

ಎತ್ತಿ ಹಾಕು ಎಂದು ಒಂದು ಹೆಬ್ಬೆಟ್ಟಿನ ಗಾತ್ರ ಶರೀರಿಯಾಗಿ ಇರಲು ಆಗ ನಳನು ಆ ಕರ್ಕೋಟಕನನ್ನು ಕೈಯ್ಯಲ್ಲಿ ಇಟ್ಟುಕೊಂಡು ಕಾಡುಗಿಚ್ಚನ್ನು ದಾಟಿ ನಿರ್ಬಾಧಕವಾದ ಒಂದು ಪ್ರದೇಶದಲ್ಲಿ ಇರಿಸುವುದಕ್ಕೆ ಹೋದನು.

ಆಗ ಕರ್ಕೋಟಕನು ನಳನನ್ನು ನೋಡಿ—ಎಲೈ, ಮಹಾತ್ಮನೇ! ಇನ್ನೂ ಕೆಲವು ದೂರ ಎತ್ತಿಕೊಂಡು ಹತ್ತು ಹೆಜ್ಜೆಗಳನ್ನು ಎಣಿಸಿ ಅಲ್ಲಿ ನನ್ನನ್ನು ನಿಲ್ಲಿಸಿದರೆ ನಿನಗೆ ಶ್ರೇಯಸ್ಸುಂಟಾಗುತ್ತದೆ ಎನಲು ನಳನು ಅದೇ ಪ್ರಕಾರವಾಗಿ ಇರಿಸಿದ ಕಾಲದಲ್ಲಿ ಕರ್ಕೋಟಕನು ನಳನನ್ನು ಕಚ್ಚಲು ಆಗ ನಳನ ಸೌಂದರ್ಯವೆಲ್ಲಾ ಕೆಟ್ಟು ಹೋಗಿ ವಿಕಾರವಾದ ಮೈಯ್ಯುಳ್ಳವನಾಗಲು ಆಶ್ಚರ್ಯಪಟ್ಟು ನಿಜರೂಪದಿಂದ ಹೊಳೆಯುತ್ತಿರುವ ಕರ್ಕೋಟಕನನ್ನು ನೋಡಿ ಮಾಡತಕ್ಕ ಕಾರ್ಯವು ತೋರದೆ ಸುಮ್ಮನೆ ನಿಂತು ಇದ್ದನು. ಆಗ ಕರ್ಕೋಟಕನು ನಳನಿಗೆ ಸಮಾಧಾನವನ್ನು ಮಾಡಿ—ಎಲೈ, ರಾಜಶ್ರೇಷ್ಠನೇ! ಹೆಚ್ಚಾದ ನಿನ್ನ ಜೆಲುವನ್ನು ಲೋಕದ ಜನರು ಕಾಣದೆ ಇರುವುದಕ್ಕಾಗಿ ಹೀಗೆ ಮಾಡಿದೆನು. ನನ್ನ ನಂಜು ನಿನ್ನ ಮೈಯ್ಯೊಳಗೆ ಎಷ್ಟು ದಿನಗಳವರೆಗೂ ಇರುವುದೋ ಅಷ್ಟು ದಿನ ಪರಿಯಂತರವೂ ಕಷ್ಟವನ್ನು ಅನುಭವಿಸಿ ಅದು ಹೋದ ಬಳಿಕ ಸುಖದಲ್ಲಿ ಇರುತ್ತೀ ಮತ್ತು ಹಾವು ಜೇಳು ಮೊದಲಾದ ನಿಷ ಜಂತುಗಳ ನಂಜಿನ ದೆಸೆಯಿಂದ ನಿನಗೆ ತೊಂದರೆಯು ಇಲ್ಲದೆ ಇರುವ ಹಾಗೆ ನನ್ನ ನಂಜನ್ನು ನಿನ್ನ ಶರೀರದಲ್ಲಿ ಇರಿಸಿ. ನಿನ್ನನ್ನು ಕಾಪಾಡಿದ್ದೇನೆ. ನಿನಗೆ ಹಗೆಗಳ ದೆಸೆಯಿಂದ ಭಯವಿಲ್ಲ. ನನ್ನ ಮಹತ್ವದಿಂದ ನಿನಗೆ ಬ್ರಹ್ಮಜ್ಞಾನವು ಬರುತ್ತಿದೆ. ನೀನು ಯುದ್ಧದಲ್ಲಿ ಎಲ್ಲಾ ಹಗೆಗಳನ್ನೂ ಕೊಂದು ಜಯಿಸುತ್ತೀ. ಈ ಹೊತ್ತು ಮೊದಲುಗೊಂಡು ನೀನು ಸೂತವಂಶದಲ್ಲಿ ಹುಟ್ಟಿದವನಾದ ಬಾಹುಕನು ಎಂಬ ಹೆಸರುಳ್ಳವನು ಎಂದು ಹೇಳಿಕೊಳ್ಳುತ್ತಾ ಅಯೋಧ್ಯಾಧಿಪತಿಯಾಗಿಯೂ ಮಹಾನುಭಾವನಾಗಿಯೂ ಅಕ್ಷಹೃದಯವನ್ನು ತಿಳಿದಿರುವವನಾಗಿಯೂ ಇರುವ ಋತುಪರ್ಣರಾಜನ ಬಳಿಗೆ ಹೋಗು. ನೀನು ಆತನಿಗೆ ಅಶ್ವಹೃದಯವಿದ್ಯೆಯನ್ನು ಹೇಳಿ ಆತನಿಂದ ಅಕ್ಷಹೃದಯವನ್ನು ತಿಳಿದುಕೋ. ಆ ರಾಯನು ನಿನ್ನಲ್ಲಿ ಪ್ರೀತಿಯನ್ನು ಮಾಡಿ ನಿನಗೆ ಸಂಗಡಿಗನಾಗಿರುವನು. ನೀನು ಅಕ್ಷಹೃದಯವನ್ನು ಯಾವಾಗ ತಿಳಿಯುತ್ತೀಯೋ ಆಗಲೇ ನಿನ್ನ ಕ್ಲೇಶಗಳೆಲ್ಲವೂ ಹೋಗಿ ಶ್ರೇಯಸ್ಸನ್ನು ಪಡೆದು ರಾಜ್ಯಾಭಿಷಿಕ್ತನಾಗಿ ಹೆಂಡತಿ ಮಕ್ಕಳೊಡನೆ ಕೂಡಿ ಸುಖವಾಗಿರುವಿ. ಇದೆಲ್ಲವೂ ನಿಜವೆಂದು ನಂಬು. ಇದೋ! ಈಗ ನಿನಗೆ ಎರಡು ಒಟ್ಟೆಗಳನ್ನು ಕೊಡುತ್ತೇನೆ. ಇವುಗಳನ್ನು ತೆಗೆದುಕೋ. ನಿನ್ನ ನಿಜಾಕಾರವು ಯಾವಾಗ ಬರಬೇಕೆಂದು ನೀನು ಎಣಿಸುತ್ತೀಯೋ ಆಗ ನನ್ನನ್ನು ನೆನೆದು ಇವುಗಳನ್ನು ಹೊದಿದುಕೊಂಡರೆ ಮೊದಲಿನಂತೆ ಬಲು ಜೆಲುವನಾಗುತ್ತೀ ಎಂದು ನುಡಿದು ಆ ದಿವ್ಯವಸ್ತ್ರವನ್ನು ಕೊಟ್ಟು ಅಂತರ್ಧಾನವಾಯಿತು.

ಆ ಬಳಿಕ ನಳನು ಅಲ್ಲಿಂದ ಹೊರಟು ಹತ್ತನೆಯ ದಿವಸಕ್ಕೆ ಅಯೋಧ್ಯಾಪತಿಯಾದ ಋತುಪರ್ಣರಾಜನ ಸಮೀಪಕ್ಕೆ ಬಂದು—ಎಲೈ, ಅರಸೇ! ನಾನು ಬಾಹುಕನೆಂಬ ಹೆಸರುಳ್ಳವನು ಕುದುರೆಗಳನ್ನು ತಿದ್ದುವುದರಲ್ಲಿ ನನಗೆ ಸಮಾನನಾದವನು

ಮೂರು ಲೋಕಗಳಲ್ಲಿಯೂ ಇಲ್ಲ. ಇದಲ್ಲನೆ ಒಂದೊಂದು ಕೆಲಸದಲ್ಲಿ ನನ್ನ ಆಲೋಚನೆಯನ್ನು ಕೇಳಿದರೆ ಗೊತ್ತಾಗಿ ಹೇಳುವೆನು ಇದಲ್ಲದೆ ಅನ್ನದಲ್ಲಿ ಹೆಚ್ಚಾಗಿ ರುಚಿ ಹುಟ್ಟುವ ಹಾಗೆ ಅಡಿಗೆ ಮಾಡುವುದನ್ನೂ ಬಲ್ಲೆನು ಮತ್ತು ಲೋಕದಲ್ಲಿ ಜನರಿಂದ ಮಾಡಕೂಡದ ಕೆಲಸಗಳನ್ನೆಲ್ಲಾ ಸುಲಭವಾಗಿ ಮಾಡುವುದಕ್ಕೆ ನನಗೆ ಸಾಮರ್ಥ್ಯವುಂಟು ಎಂದು ಹೇಳಿದನು ಋತುಪರ್ಣರಾಜನು ಆತನ ಮಾತುಗಳನ್ನು ಕೇಳಿ ಸಂತೋಷಪಟ್ಟು—ಎಲೈ, ಬಾಹುಕನೇ! ನಿನಗೆ ಬೇಕಾದುದನ್ನು ಕೊಡುತ್ತೇನೆ. ನನ್ನ ಸಮುಖದಲ್ಲಿಯೇ ಇದ್ದುಕೊಂಡು ಇಷ್ಟು ಕೆಲಸಗಳನ್ನು ಮಾಡು ಕುದುರೆಗಳು ಯಾವಾಗಲೂ ಬಹು ವೇಗಗಮನದೊಡನೆ ಕೂಡಿರಬೇಕೆಂಬ ಬುದ್ಧಿಯು ನನಗೆ ಹೆಚ್ಚಾಗಿರುವುದರಿಂದ ನೀನು ಅಶ್ವಪರೀಕ್ಷೆಯನ್ನು ಒಲ್ಲವನಾದಕಾರಣ ನನ್ನ ಕುದುರೆಗಳಿಗೆಲ್ಲಾ ಒಡೆಯನಾಗಿ ಇರು. ನಿನಗೆ ತಿಂಗಳೊಂದಕ್ಕೆ ಹತ್ತುಸಾವಿರ ಮೊಹರಗಳನ್ನು ಸಂಬಳವಾಗಿ ಕೊಡುತ್ತೇನೆ ಈ ವಾರ್ಷ್ಣೇಯನೂ ಈ ಜೀವಲನೂ ನನ್ನ ಅಶ್ವಾಧ್ಯಕ್ಷರು ಇವರು ನೀನು ಹೇಳಿದ ಮೇರೆಗೆ ನಡೆದುಕೊಳ್ಳುವ ಹಾಗೆ ಕಟ್ಟುಮಾಡುತ್ತೇನೆ. ಇವರಿಬ್ಬರನ್ನೂ ನಿನ್ನಧೀನಮಾಡಿಕೊಂಡು ಸುಖದಿಂದಿರು ಅಂದನು.

ಅನಂತರದಲ್ಲಿ ನಳನು ಋತುಪರ್ಣನ ಮಾತುಗಳನ್ನು ಕೈಕೊಂಡು ಅಯೋಧ್ಯಾಪಟ್ಟಣದಲ್ಲಿ ವಾರ್ಷ್ಣೇಯನೂ ಜೀವಲನೂ ತನ್ನನ್ನು ಅನುವರ್ತಿಸಿಕೊಂಡಿರಲು ಕುದುರೆಗಳನ್ನು ತಿದ್ದುತ್ತಾ ಪ್ರತಿ ದಿವಸದ ರಾತ್ರಿಯಲ್ಲಿಯೂ ಜೆಲುವೆಯಾಗಿಯೂ ಪತಿವ್ರತಾ ಶಿರೋಮಣಿಯಾಗಿಯೂ ಇರುವ ದಮಯಂತಿಯನ್ನು ನೆನೆನೆನೆದು ಮಹಾ ವ್ಯಥೆಯಿಂದ ಕಂಗೆಟ್ಟು—ಆ ವನಿತಾಶಿರೋಮಣಿಯು ಮಂದಭಾಗ್ಯನಾದ ನನ್ನನ್ನು ನೆನೆಸುತ್ತಾ ಎಲ್ಲಿ ಮಲಗಿರುವಳೋ? ಎಂಬ ಈ ಅರ್ಧವುಳ್ಳ ಸಂಸ್ಕೃತ ಶ್ಲೋಕವನ್ನು ಪ್ರತಿದಿವಸವೂ ಹೇಳುತ್ತಿರಲು ಒಂದು ದಿವಸ ಜೀವಲನು ಅದನ್ನು ಕೇಳಿ—ಎಲೈ, ಬಾಹುಕನೇ! ನೀನು ದಿನದಿನವೂ ಈ ಶ್ಲೋಕವನ್ನೇ ಹೇಳುತ್ತಾ ಯಾರನ್ನು ನೆನೆಸಿಕೊಂಡು ದುಃಖಪಡುತ್ತೀ? ಎಂದು ಕೇಳಲು—ಎಲೈ, ಜೀವಲನೇ! ಹೆಡ್ಡನಾದ ಒಬ್ಬ ಮನುಷ್ಯನಿಗುವನು ಆತನಿಗೆ ಸಂಪೂರ್ಣಾನುರಾಗವುಳ್ಳ ಒಬ್ಬಳು ಹೆಂಡತಿ ಇರುವಳು ಅವನಿಗೂ ಅವಳಲ್ಲಿ ಬಹು ಪ್ರೀತಿಯುಂಟು ಆ ಪುರುಷನು ಒಂದು ಕಾರಣದಿಂದ ಮಂದಬುದ್ಧಿಯಾಗಿ ಅವಳನ್ನು ಬಿಟ್ಟು ರಾತ್ರಿಯೂ ಹಗಲೂ ಶೋಕಾಗ್ನಿಯಿಂದ ತಪ್ತನಾಗಿ ನಿರಂತರವೂ ಹೆಚ್ಚಾದ ದುಃಖವನ್ನು ಅನುಭವಿಸುತ್ತಾನೆ. ಆ ಪಾಪಾತ್ಮನನ್ನು ನೆನೆದು ನಾನು ವ್ಯಸನಪಡುತ್ತೇನೆ ಅವನು ನನಗೆ ಸಂಗಡಿಗನು ಎಂದು ಈ ಪ್ರಕಾರ ನಿಜ ಸ್ಥಿತಿಯನ್ನು ಮರೆಮಾಡಿ ಹೇಳಿ ತನ್ನನ್ನು ಒಬ್ಬರೂ ಅರಿಯದ ಹಾಗೆ ಗುಟ್ಟಾಗಿ ದಮಯಂತಿಯನ್ನು ನೆನೆದು ದುಃಖಪಡುತ್ತಾ ಅಯೋಧ್ಯಾಪಟ್ಟಣದಲ್ಲಿಯೇ ಇದ್ದನು.

ಇತ್ತಲಾ ನಳನು ಜೂಜಿನಿಂದ ತನ್ನ ರಾಜ್ಯವನ್ನೂ ಸಕಲ ವಸ್ತುಗಳನ್ನೂ ಕಳಕೊಂಡು ಹೆಂಡತಿಯೊಡನೆ ಕೂಡಿ ವನಕ್ಕೆ ಹೋಗಿ ಇಂಥಾ ತಾವಿನಲ್ಲಿ ಇದ್ದಾನೆ ಎಂಬ ಸಮಾಚಾರವನ್ನು ಕೇಳದೆ ಇರುವುದರಿಂದ ಭೀಮಭೂಪಾಲನು ವ್ಯಸನಾಕ್ರಾಂತನಾಗಿ ತನ ಮಗಳಾದ ದಮಯಂತಿಯನೂ ಅಳಿಯನಾದ ನಳನನೂ ಹುಡುಕಿಸಬೇಕೆಂದು

ಆಲೋಚಿಸಿ ಬ್ರಾಹ್ಮಣರನ್ನು ಕರತರಿಸಿ ಅವರಿಗೆ ಅನೇಕ ದ್ರವ್ಯಗಳನ್ನು ಕೊಟ್ಟು—ನೀವು ಸರ್ವ ದೇಶಗಳಿಗೂ ಹೋಗಿ ನಳನನ್ನೂ ದಮಯಂತಿಯನ್ನೂ ಹುಡುಕಿ ಇಲ್ಲಿಗೆ ಕರಕೊಂಡು ಬನ್ನಿರಿ. ಕರಕೊಂಡು ಬಂದಂಥಾವರಿಗೆ ಪಟ್ಟಣಗಳಿಗೆ ಸಮಾನವಾದ ಗ್ರಾಮಗಳ ಸರ್ವಮಾನ್ಯವನ್ನೂ ಸಾವಿರ ಆಕಳುಗಳನ್ನೂ ಬಹಳ ದ್ರವ್ಯಗಳನ್ನೂ ಕೊಡುವೆನು. ಹಾಗೆ ಹುಡುಕುವಾಗ ನಳನನ್ನಾದರೂ ದಮಯಂತಿಯನ್ನಾದರೂ ನೋಡಿ ಕರತಂದವರಿಗೆ ಅಧವಾ ಕರೆದಾಗ್ಗೂ ಅವರು ಇಲ್ಲಿಗೆ ಬಾರದೆ ಹೋದರೆ ಅವರ ಯೋಗಕ್ಷೇಮವನ್ನು ತಿಳಿದು ಹೇಳಿದಂಥಾವರಿಗೆ ಸಾವಿರ ಹಸುಗಳನ್ನೂ ಕೆಲವು ನೊಹರಗಳನ್ನೂ ಕೊಡುತ್ತೇನೆ ಎಂದು ಹೇಳಲು ಬ್ರಾಹ್ಮಣರು ಅದಕ್ಕೆ ಸಂತೋಷ ಪಟ್ಟು ಹೊರಟು ದಿಕ್ಕುದಿಕ್ಕಿಗೆ ಹೋಗಿ ಹುಡುಕುತ್ತಾ ಇದ್ದರು ಅವರಲ್ಲಿ ವಸುದೇವನೆಂಬ ಬ್ರಾಹ್ಮಣನು ಅಲ್ಲಲ್ಲಿ ಹುಡುಕುತ್ತಾ ಪ್ರತಿದಿನವೂ ಪ್ರಯಾಣಗಳನ್ನು ಮಾಡುತ್ತಾ ಬಂದು ಸುಬಾಹುರಾಜನ ಪಟ್ಟಣವನ್ನು ಹೊಕ್ಕು ಅರಮನೆಯಲ್ಲಿ ಪುಣ್ಯಾಹವಾಚನೆಯನ್ನು ಮಾಡುವುದಕ್ಕೆ ಹೋಗುವ ಪುರೋಹಿತರ ಸಂಗಡ ತಾನೂ ಅತಃಪುರಕ್ಕೆ ಹೋಗಿ ಒಡವಾಗಿ ಗಂಡನ ಚಿಂತೆಯಿಂದಲೇ ಕರಗುತ್ತಾ ಸುನಂದೆಯೊಡನೆ ಕೂಡಿರುವ ದಮಯಂತಿಯನ್ನು ನೋಡಿ ಹೊಗೆಯ ತಂಡದಿಂದ ಮುಚ್ಚಲ್ಪಟ್ಟ ಬೆಂಕಿಯ ಉರಿಯ ಹಾಗೆ ಇರುವ ಮಲಿನವಾದ ಮೈಯ್ಯುಳ್ಳ ಆ ಹೆಂಗಸನ್ನು ಗುರುತುಗಳಿಂದಲೇ ದಮಯಂತಿಯೆಂದು ನಿಶ್ಚಯಿಸಿ ಸರ್ವಾಂಗಸುಂದರಿಯಾಗಿಯೂ ಜಗನ್ಮೋಹನಾಕಾರಿಣಿಯಾಗಿಯೂ ತಾವರೆಯ ಎಸಳಿನ ಹಾಗಿರುವ ಕಣ್ಣುಗಳುಳ್ಳವಳಾಗಿಯೂ ಮನ್ಮಥನ ಹೆಂಡತಿಯಾದ ರತಿಯ ಹಾಗೆ ಜಲುವೆಯಾಗಿಯೂ ಚಂದ್ರಕಳೆಯೋಪಾದಿಯಲ್ಲಿ ಹೊಳೆಯುವವಳಾಗಿಯೂ ಇದ್ದ ಈಕೆಯು ಈಗ ಗಂಡನ ವಿಯೋಗದಿಂದ ಕಂದಿ ಕುಂದಿದವಳಾಗಿ ರಾಹುವಿನಿಂದ ಹಿಡಿಯಲ್ಪಟ್ಟ ಚಂದ್ರಮಂಡಲವುಳ್ಳ ಹುಣ್ಣಿಮೆಯ ರಾತ್ರಿಯನ್ನು ಹೋಲುತ್ತಾಳೆ ಮತ್ತು ಭೀಮಭೂಪಾಲನೆಂಬ ಕೊಳದಲ್ಲಿ ಹುಟ್ಟಿ ದೈವವು ತನ್ನನ್ನು ಕಿತ್ತು ಹಾಕಲು ಕೆಸರಿನಿಂದ ಕೂಡಿ ಬಾಡಿರುವ ಕಮಲಲತೆಗೆ ಸರಿಯಾಗಿದ್ದಾಳೆ ಮತ್ತು ಅಲ್ಪವಾದ ಸೆಳವು ಉಳ್ಳ ಹೊಳೆಗೂ ಜಳಿಗಾಲದಲ್ಲಿ ದಳಗಳು ಉದುರಿ ಹೋಗಿರುವ ಕಮಲಗಳಿಗೂ ಆನೆಗಳಿಂದ ಕಲಕಲ್ಪಟ್ಟ ಕೊಳಗಳಿಗೂ ಸಮಾನವಾದ ವಿಕಾರಸ್ಥಿತಿಯುಳ್ಳವಳಾಗಿದ್ದಾಳೆ ಮೊದಲು ಸಕಲಾಭರಣಗಳನ್ನು ತೊಟ್ಟಿದಂಥಾವಳು ಈಗ ಆಭರಣಹೀನಳಾಗಿದ್ದಾಳೆ ಪಟ್ಟ ಪೀತಾಂಬರಗಳನ್ನು ಉಟ್ಟಿದಂಥಾವಳು ಈಗ ಮಾಸಿದ ಬಟ್ಟೆಯನ್ನು ಉಟ್ಟಿದ್ದಾಳೆ ಗಂಡನನ್ನು ತಿರಿಗಿ ನೋಡೇನು ಎಂಬ ಅಭಿಲಾಷೆಯಿಂದ ಶರೀರವನ್ನು ಧರಿಸಿದ್ದಾಳೆ. ಇಂಥಾ ದಮಯಂತಿಯನ್ನು ಬಿಟ್ಟು ನಳನು ದುಃಖದಿಂದ ಒದುಕಿ ಇದ್ದಾನೋ ಇಲ್ಲವೋ ತಿಳಿಯದು. ಇವಳನ್ನು ನೋಡಿದರೆ ನನ್ನಂಥಾವನಿಗೂ ಹೃದಯವು ತಪಿಸುತ್ತದೆ. ಈಕೆಯು ಇಂಥಾ ದುಃಖದ ಕಡಲನ್ನು ದಾಟಿ ರೋಹಿಣಿಯು ಚಂದ್ರನೊಡನೆ ಕೂಡಿದ ತೆರದಿಂದ ನಳನೊಡನೆ ಯಾವಾಗ ಕೂಡುವಳೋ ತಿಳಿಯದು ನಳನು ಈಕೆಯೊಡನೆ ಕೂಡಿದರೆ ಹಗೆಗಳಿಂದ ಅಪಹೃತವಾದ ರಾಜ್ಯವು ತಿರಿಗಿ ಲಭಿಸಿದಂತೆ

ಸಂತೋಷಪಡುವನು ಎಂದು ಈ ಪ್ರಕಾರ ಆಲೋಚಿಸಿ ದಮಯಂತಿಯ ಬಳಿಗೆ ಹೋಗಿ—ತಾಯಿಾ! ನಾನು ವಸುದೇವನೆಂಬ ಬ್ರಾಹ್ಮಣನು. ನಿನ್ನ ತಂದೆಯಾದ ಭೀಮಭೂಪಾಲನಿಗೆ ಮಿತ್ರನು ಆತನು ನಿನ್ನನ್ನು ಹುಡುವುದಕ್ಕೆ ನನ್ನನ್ನು ಕಳುಹಿಸಲು ನಾನು ಇಲ್ಲಿಗೆ ಬಂದೆನು ನಿನ್ನ ತಾಯಿತಂದೆಗಳೂ ಒಡಹುಟ್ಟುಗಳೂ ನಿನ್ನ ಮಗನೂ ನಿನ್ನ ಮಗಳೂ ಸುಖವಾಗಿ ಇದ್ದಾರೆ. ನಿನ್ನ ನೆಂಟರಿಷ್ಟರೆಲ್ಲಾ ನಿನ್ನನ್ನು ನೋಡದೆ ಇರುವುದರಿಂದ ಪ್ರಾಣವಿಲ್ಲದವರ ಹಾಗೆ ಇದ್ದಾರೆ ನಿನ್ನನ್ನು ಹುಡುಕುವುದಕ್ಕೆ ಸಾವಿರಾರು ಸಂಖ್ಯೆಯುಳ್ಳ ಬ್ರಾಹ್ಮಣರನ್ನು ಕಳುಹಿಸಿ ಇದ್ದಾರೆ. ಎಂದು ಹೇಳಿದನು

ಆಗ ದಮಯಂತಿಯು—ಆತನು ವಸುದೇವನು ಹೌದು ಎಂದು ತಿಳಿದು ತನ್ನ ಬಂಧುಜನಗಳ ಕ್ಷೇಮಗಳನ್ನು ಬೇರೆಬೇರೆಯಾಗಿ ಕೇಳಿ ತಿಳುಕೊಂಡು ಆ ಮೇಲೆ ಇಷ್ಟು ಅಷ್ಟು ಎಂದು ಹೇಳಕೂಡದ ದುಃಖದಿಂದ ಕೂಗಿ ಅಳಲು ಸುನಂದಾದೇವಿಯು ಈ ಸಂಗತಿಯನ್ನು ತಿಳಿದು ತನ್ನ ತಾಯಿಗೆ ತಿಳಿಸಿದಳು ಆ ಅರಸಿನ ತಾಯಿಯು ಒಲು ಬೇಗನೆ ಅಲ್ಲಿಗೆ ಬಂದು ಆ ವಸುದೇವನೆಂಬ ಬ್ರಾಹ್ಮಣನನ್ನು ನೋಡಿ—ನೀನು ಇಲ್ಲಿಗೆ ಯಾಕೆ ಬಂದೆ? ಇವಳ್ಯಾರು? ಇದನ್ನೆಲ್ಲಾ ಕ್ರಮವಾಗಿ ನನಗೆ ತಿಳಿಸು ಎಂದು ಕೇಳಿದಳು ಆಗ ವಸುದೇವನು—ಎಲೈ, ರಾಜ ಮಾತೃವೇ! ಇವಳ ಹೆಸರು ದಮಯಂತಿಯು. ಮಹಾನುಭಾವನಾದ ನಳಚಕ್ರವರ್ತಿಯು ಈಕೆಯ ಗಂಡನು ಆತನು ದಾಯಾದಿಗಳೊಡನೆ ಜೂಜಾಡಿ ರಾಜ್ಯ ಕೋಶ ಮೊದಲಾದ ಸಕಲೈಶ್ವರ್ಯವನ್ನೂ ಕಳಕೊಂಡು ಈ ಹೆಂಡತಿಯೊಡನೆ ಪಟ್ಟಣವನ್ನು ಬಿಟ್ಟು ಅರಣ್ಯವನ್ನು ಹೊಕ್ಕನು. ಆತನು ಈಗ ಇಂಥಾ ಸ್ಥಳದಲ್ಲಿ ಇದ್ದಾನೆಂದು ಗೊತ್ತು ತಿಳಿಯದು. ಇವರನ್ನು ಹುಡುಕುವುದಕ್ಕೆ ಭೀಮರಾಜನು ಸಕಲ ದೇಶಗಳಿಗೂ ಬ್ರಾಹ್ಮಣರನ್ನು ಕಳುಹಿಸಿದುದರಿಂದ ಅವರು ದೇಶದೇಶಗಳಲ್ಲಿ ಹುಡುಕುತ್ತಿದಾರೆ ನಾನು ಒಬ್ಬನೇ ಈ ಪಟ್ಟಣಕ್ಕೆ ಒಂದು ಈಕೆಯನ್ನು ಕಂಡೆನು. ಸಕಲೈಶ್ವರ್ಯವೂ ಈಕೆಗೆ ಉಂಟು ಎಂಬುವುದಕ್ಕೆ ಸೂಚನೆಯಾಗಿ ಬ್ರಹ್ಮನಿಂದ ಈ ದಮಯಂತಿಯ ಭ್ರೂಮಧ್ಯದಲ್ಲಿ ಪದ್ಮಾಕಾರವಾದ ಒಂದು ಮತ್ತಿಯು ನಿರ್ಮಿತವಾಗಿರುವುದು ಅದು ಮೇಘದಿಂದ ಮುಚ್ಚಲ್ಪಟ್ಟ ಚಂದ್ರರೇಖೆಯ ಹಾಗೆ ಧೂಳಿಯಿಂದ ಮಾಸಿ ಈಗ ಚೆನ್ನಾಗಿ ಕಾಣಿಸುವುದಿಲ್ಲ. ಈಗ ನಾನು ಆ ಗುರುತಿನಿಂದ ಈಕೆಯನ್ನು ಗೊತ್ತುಮಾಡಿದೆನು ಅಂದನು. ಅದನ್ನು ಕೇಳಿ ಸುನಂದಾದೇವಿಯು ದಮಯಂತಿಯ ಹಣೆಯಲ್ಲಿ ಇರುವ ಧೂಳಿಯನ್ನು ತನ್ನ ಸೀರೆಯ ಸೆರಗಿನಿಂದ ಒರಸಲು ಮೇಘಮಂಡಲದಿಂದ ಹೊರಟು ಬರುವ ಸೂರ್ಯಬಿಂಬದಂತೆ ತೋರುವ ಮತ್ತಿಯನ್ನು ನೋಡಿ ಸುಬಾಹುರಾಜನ ಮಾತೆಯು ದಮಯಂತಿಯನ್ನು ತಬ್ಬಿಕೊಂಡು ಕಣ್ಣೀರನ್ನು ಸುರಿಸುತ್ತಾ ಆಕೆಯನ್ನು ನೋಡಿ—ತಾಯಿಾ! ನಿನ್ನ ಹುಬ್ಬುಗಳ ನಡುವೆ ಇರುವ ಮತ್ತಿಯನ್ನು ನೋಡಿದುದರಿಂದ ನನ್ನ ಒಡಹುಟ್ಟಿದವಳ ಮಗಳೆಂದು ತಿಳಿದೆನು. ನಾನೂ ನಿನ್ನ ತಾಯಿಯೂ ದಶಾರ್ಣ ದೇಶಾಧ್ಯಕ್ಷನಾದ

ಸುದಾಮನ ಮಕ್ಕಳು. ಅತನು ನಿನ್ನ ತಾಯಿಯನ್ನು ಭೀಮಭೂಪಾಲಕನಿಗೂ ನನ್ನನ್ನು ಚೇದಿದೇಶಾಧೀಶನಾದ ವೀರಬಾಹುಕನಿಗೂ ಕೊಟ್ಟು ವಿವಾಹವನ್ನು ಮಾಡಿದನು. ನಿನ್ನ ತಾಯಿಯು ತವರುಮನೆಗೆ ಬಂದಾಗ ಚಿಕ್ಕತನದಲ್ಲಿ ನಿನ್ನನ್ನು ನೋಡಿದ್ದೆನು. ಆದು ದರಿಂದ ನೀನು ಈ ಮನೆಗೂ ನಿನ್ನ ತಂದೆಯ ಮನೆಗೂ ಭೇದವೆಣಿಸಬೇಡ. ಈ ಐಶ್ವರ್ಯವನ್ನೆಲ್ಲವನ್ನೂ ನಿನ್ನದನ್ನಾಗಿ ಎಣಿಸು ಅಂದಳು.

ಆಗ ದಮಯಂತಿಯು ತನ್ನ ಚಿಕ್ಕಮ್ಮನಿಗೆ ನಮಸ್ಕಾರವನ್ನು ಮಾಡಿ—ಎಲೆ, ತಾಯೆ! ನನ್ನ ಸ್ವರೂಪವನ್ನು ತಿಳಿಯದಿದ್ದರೂ ಮಗಳೋಪಾದಿಯಲ್ಲಿ ನೀನು ಕಾಪಾಡಿದುದರಿಂದಲೇ ಇಷ್ಟು ದಿವಸಗಳ ವರೆಗೂ ನಿನ್ನ ಮನೆಯಲ್ಲಿ ಸುಖವಾಗಿ ಇದ್ದೆನು. ನನ್ನ ಮಗಳಾದ ಇಂದ್ರಸೇನೆಯು ತಾಯಿತಂದೆಗಳನ್ನು ಅಗಲಿ ಬಹುಕಾಲವಾಯಿತು. ಹೇಗಿರುವಳೋ ತಿಳಿಯಲಿಲ್ಲ. ನಿನ್ನ ಮನಸ್ಸಿನಲ್ಲಿ ನನಗೆ ಪ್ರಿಯವನ್ನು ಮಾಡಬೇಕೆಂದು ಎಣಿಸಿದರೆ ನನ್ನನ್ನು ಶೀಘ್ರದಲ್ಲಿ ವಿದರ್ಭ ನಗರಕ್ಕೆ ಕಳುಹಿಸಬೇಕೆನಲು ಆ ದೇವಿಯು—ಹಾಗೇ ಆಗಲಿ ಎಂದು ತನ್ನ ಮಗನಾದ ಸುಬಾಹುಕನನ್ನು ಕರತರಿಸಿ ಈ ಸಂಗತಿಯನ್ನು ಅತನಿಗೆ ತಿಳಿಸಿ ಕನ್ಯಾಮಣಿಯನ್ನು ಪಲ್ಲಕ್ಕಿಯಲ್ಲಿ ಕೂರಿಸಿ ಅನೇಕ ದಾಸದಾಸೀ ಜನಗಳನ್ನೂ ಬೇಕಾದ ವಸ್ತುಗಳನ್ನೂ ಕೊಟ್ಟು ಅಂಗರಕ್ಷೆಗೆ ಚತುರ್ಬಲವನ್ನು ಜೊತೆಗೊಳಿಸಿ ಕಳುಹಿಸಲು ದಮಯಂತಿಯು ಶೀಘ್ರವಾಗಿ ತನ್ನ ತವರು ಮನೆಗೆ ಹೋಗಿ ತನ್ನ ಮಕ್ಕಳನ್ನೂ ತಾಯಿತಂದೆಗಳನ್ನೂ ನೆಂಟರಿಷ್ಟರನ್ನೂ ತನ್ನ ಸಂಗಾತಿಗಳನ್ನೂ ನೋಡಿ ಸಂತೋಷಪಟ್ಟಳು ಆ ಬಳಿಕ ಭೀಮಭೂಪಾಲಕನು ವಸುದೇವನಿಗೆ ಸಾವಿರ ಹಸುಗಳನ್ನೂ ಅನೇಕ ಧನಕನಕ ರತ್ನಗಳನ್ನೂ ಊರುಂಬಳಿಗಳನ್ನೂ ಕೊಟ್ಟನು.

ಮಾರನೆಯ ದಿವಸ ದಮಯಂತಿಯು ತನ್ನ ತಾಯಿಯನ್ನು ಕುರಿತು—ಎಲೌ, ತಾಯೇ! ನಾನು ಪ್ರಾಣದೊಡನೆ ಇರಬೇಕೆಂದು ನೀನು ಎಣಿಸಿದರೆ ಬ್ರಾಹ್ಮಣರನ್ನು ಕಳುಹಿಸಿ ನಳನು ಇರುವ ಎಡೆಯನ್ನು ಹುಡುಕುವುದಕ್ಕೆ ಯತ್ನವನ್ನು ಮಾಡಿಸೆಂದು ನುಡಿಯಲು ಆಕೆಯು ಈ ಮಾತನ್ನು ಕೇಳಿ ಗದ್ಗದ ಕಂಠದೊಡನೆ ಕೂಡಿ ಬದಲು ಮಾತನ್ನು ಆಡಲಾರದೆ ಕಣ್ಣೀರುಗಳನ್ನು ಧಾರೆಯಾಗಿ ಸುರಿಸುತ್ತಾ ಭೀಮಭೂಪಾಲಕನ ಎಡೆಗೆ ಬಂದು—ಎಲೈ ರಾಜೇಂದ್ರನೇ! ನಿನ್ನ ಮಗಳು ತನ್ನ ಗಂಡನಾದ ನಳನನ್ನು ಅಗಲಿ ಇರುವುದರಿಂದ ಬಹಳ ದುಃಖಾಕ್ರಾಂತೆಯಾಗಿ ಚಿಂತಿಸುತ್ತಾ ಅತನನ್ನು ಹುಡುಕುವುದಕ್ಕೆ ಜನರನ್ನು ಕಳುಹಿಸಬೇಕೆಂದು ಖಂಡಿತವಾಗಿ ಹೇಳುತ್ತಾಳೆ ಎನ್ನಲು ಭೀಮನರೇಂದ್ರನು ತನ್ನ ಬಳಿಯಲ್ಲಿ ಇರುವ ಬ್ರಾಹ್ಮಣರನ್ನು ಕರೆದು ನೀವೆಲ್ಲರೂ ಇಳೆಯ ಮೇಲೆ ತಿರುಗಿ ನಳನನ್ನು ಅವನಿರುವ ಎಡೆಯನ್ನು ಗೊತ್ತು ಮಾಡಿಕೊಂಡು ಬನ್ನಿರಿ ಎಂದು ಆಪ್ಪಣೆಯನ್ನು ಕೊಡಲು ಅವರು ದಮಯಂತಿಯ ಬಳಿಗೆ ಬಂದು ನಿನ್ನ ಪತಿಯನ್ನು ಹುಡುಕುವುದಕ್ಕೆ ಹೋಗುತ್ತೇವೆ ಎಂದು ಹೇಳಿದರು. ದಮಯಂತಿಯು ಆ ಬ್ರಾಹ್ಮಣರನ್ನು ನೋಡಿ—ನೀವು ದಿಕ್ಕುದಿಕ್ಕುಗಳಿಗೆ ಹೋಗಿ ಹತ್ತು ಮಂದಿ ಕೂಡಿರುವ ಚಾವಡಿಗಳನ್ನು ಹೊಕ್ಕು—ನೀನು ಧರ್ಮವನ್ನು ತಿಳಿದವರಲ್ಲಿ ಪ್ರಸಿದ್ಧನಾ

ಗಿಯೂ ವಿವೇಕಿಯಾಗಿ ಮಹಾ ಕುಲದಲ್ಲಿ ಹುಟ್ಟಿ ದಯಾಸಮೇತನಾಗಿಯೂ ಸದಾಚಾ
ರಸಂಪನ್ನನಾಗಿಯೂ ಇದ್ದರೂ ಧೂರ್ತನೂ ಕೃಪಾರಹಿತನೂ ಆಗಿ ನಿನ್ನಲ್ಲಿಯೇ ತುಂಬಾ
ಪ್ರೀತಿಯುಳ್ಳ ಧರ್ಮಪತ್ನಿಯನ್ನು ನಟ್ಟಿರುಳಲ್ಲಿ ನಿದ್ರೆ ಹೋಗುವಾಗ ವಂಚಿಸಿ ಉಟ್ಟ
ಬಟ್ಟೆಯಲ್ಲಿ ಆರವಾಸಿ ಬಟ್ಟೆಯನ್ನು ಹರಿದುಕೊಂಡು ಆಕೆಯನ್ನು ಕಾಡಿನ ನಡುವೆ ಬಿಟ್ಟು
ನೀನು ಎಲ್ಲಿಗೆ ಹೋದೆ? ನಿನ್ನನ್ನು ಅಗಲಿದುದರಿಂದ ಕ್ಲೇಶಪಡುತ್ತಾ ಆಕೆಯು ನೀನೆಲ್ಲಿ
ಬಿಟ್ಟು ಬಂದೆಯೋ? ಅಲ್ಲಿಯೇ ಇದ್ದುಕೊಂಡು ನೀನು ಎಂದಿಗೆ ಬರುವೆಯೋ? ಎಂದು
ದಾರಿಯನ್ನು ನೋಡುತ್ತಾ ಅರ್ಧ ವಸ್ತ್ರವನ್ನು ಉಟ್ಟುಕೊಂಡು ದುಃಖದ ಕಿಚ್ಚಿನಿಂದ
ಉರಿಯುವ ಮನಸ್ಸುಳ್ಳವಳಾಗಿ ಇದ್ದಾಳೆ ಹೆಂಡರಿಗೆ ಅನ್ನ ವಸ್ತ್ರಗಳನ್ನು ಕೊಟ್ಟು
ಕಾಪಾಡುವುದೂ ಮತ್ತೊಬ್ಬರಿಂದ ತೊಂದರೆ ಬಾರದಹಾಗೆ ರಕ್ಷಿಸುವುದೂ ಗಂಡಂದಿ
ರಿಗೆ ಧರ್ಮವು ಎಂಬ ಈ ಎರಡು ಗುಣಗಳನ್ನು ಬಿಟ್ಟು ನೀನು ಆಕೆಯನ್ನು ವಂಚಿಸಿ
ಹೋದುದು ಅವಳ ನಿರ್ಭಾಗ್ಯತ್ವದ ದೋಷವೇ ಹೊರತಾಗಿ ನಿನ್ನ ತಪ್ಪಲ್ಲ ಇನ್ನಾದ
ರೂ ಅವಳಲ್ಲಿ ದಯೆಮಾಡಿ ಬದಲು ಮಾತನ್ನು ಆಡೆಂದು ಹೇಳಿರಿ ಆಗ ಅದನ್ನು ಕೇಳಿ
ಯಾವನು ಬದಲು ಹೇಳುತ್ತಾನೋ ಅತನು ಐಶ್ವರ್ಯಸಂಪನ್ನನಾಗಿರುವುದನ್ನೂ ಬಡ
ವನಾಗಿರುವುದನ್ನೂ ಅರ್ಧ ಕಾಮ ವಶನಾಗಿರುವುದನ್ನೂ ಜೆನ್ನಾಗಿ ತಿಳಿದುಕೊಂಡು
ಬನ್ನಿರಿ. ಮತ್ತು ಬೆಂಕಿಯು ಬೆಣ್ಣೆಯನ್ನು ಕರಗಿಸುವ ಹಾಗೆ ನಿಮ್ಮ ಮಾತುಗಳು
ಆತನ ಹೃದಯವನ್ನು ಕರಗಿಸಿ ನನ್ನಲ್ಲಿ ಪ್ರೀತಿಯನ್ನು ಹುಟ್ಟಿಸುವಂತೆ ಮಾಡಬೇಕು
ಎಂದು ನುಡಿದಳು. ಅವರು—ಹಾಗೇ ಆಗಲಿ ಎಂದು ನಾನಾ ದೇಶಗಳಿಗೆ ಹೋಗಿ
ಪಟ್ಟಣ ಗ್ರಾಮ ಹಳ್ಳಿ ಕೊಪ್ಪಲು ಗಿರಿ ಬೆಟ್ಟ ಘಟ್ಟಗಳು ಪುಣ್ಯಾಶ್ರಮಗಳು ಮಂಟಪ
ಸತ್ರ ದೇವಸ್ಥಾನ ರಾಜಸಭೆ ಬ್ರಾಹ್ಮಣರ ಗೋಷ್ಠಿ ಇವೇ ಮೊದಲಾದ ಎಡೆಗಳಲ್ಲಿ
ನೆರೆದ ಜನರ ಸಮೂಹದಲ್ಲಿ ದಮಯಂತಿಯು ಹೇಳಿದ ವಾಕ್ಯಗಳನ್ನು ಹೇಳುತ್ತಾ ಆ
ಮಾತಿಗೆ ಪ್ರತ್ಯುತ್ತರವನ್ನು ಪಡೆಯದೆ ತಿರಿಗಿ ವಿದರ್ಭ ಪಟ್ಟಣಕ್ಕೆ ಬಂದು ದಮಯಂ
ತಿಗೆ ತಿಳಿಸಿ ತಮ್ಮ ತಮ್ಮ ಮನೆಗಳಿಗೆ ಹೋದರು.

ಮತ್ತು ಕೆಲವು ದಿವಸದ ಮೇಲೆ ಪರ್ಣಾದನೆಂಬ ಒಬ್ಬ ಬ್ರಾಹ್ಮಣನು ದಮ
ಯಂತಿಯ ಹತ್ತರಕ್ಕೆ ಬಂದು—ಎಲೌ, ತಾಯೇ! ನಾನು ಎಲ್ಲಾ ದೇಶಗಳನ್ನು
ರಾತ್ರಿಯೂ ಹಗಲೂ ತಿರುಗಿ ನಳನನ್ನು ಹುಡುಕುತ್ತಾ ಕಡೆಗೆ ಅಯೋಧ್ಯಾ ಪಟ್ಟಣಕ್ಕೆ
ಹೋಗಿ ಅಲ್ಲಿಗೆ ಅರಸನಾದ ಋತುಪರ್ಣನ ಓಲಗದ ಚಾವಡಿಗೆ ಹೋಗಿ ನೀನು
ಮೊದಲು ನನಗೆ ಹೇಳಿದ ವಾಕ್ಯಗಳೆಲ್ಲವನ್ನೂ ನುಡಿಯಲು ಎಲ್ಲರೂ ಅದನ್ನು ಕೇಳಿ
ಬದಲುತ್ತರವನ್ನು ಕೊಡದೆ ಸುಮ್ಮನೆ ಇದ್ದರು. ಆ ಚಾವಡಿಯಲ್ಲಿ ಇದ್ದ ಋತುಪರ್ಣ
ರಾಜನ ಸಾರಥಿಯಾಗಿ ಅಡಿಗೆ ಮಾಡುವುದರಲ್ಲಿಯೂ ಕುದುರೆಗಳನ್ನು ಚುರುಕಾಗಿ
ನಡೆಸುವುದರಲ್ಲಿಯೂ ಬಹಳ ಗಟ್ಟಿಗನಾದ ಬಾಹುಕನೆಂಬ ಹೆಸರುಳ್ಳ ಒಬ್ಬ ಪುರುಷನು
ಎದ್ದು ಹೊರಗೆ ಬಂದು ನನ್ನನ್ನು ಕರೆದು ಏಕಾಂತದಲ್ಲಿ ಹೆಚ್ಚಿದ ಅಳಲಿನಿಂದ ನಿಟ್ಟುಸು
ರುಗಳನ್ನು ಬಿಡುತ್ತಾ ಕಣ್ಣೀರನ್ನು ಸುರಿಸುತ್ತಾ ಮೊದಲು ನನ್ನ ಕುಶಲವನ್ನು ಕೇಳಿ
ಆ ಮೇಲೆ—ಎಲೈ, ಬ್ರಾಹ್ಮಣನೆ! ಲೋಕದಲ್ಲಿ ಕಷ್ಟಕಾಲವು ಬಂದಾಗ್ಗೆ ಪಾತಿವ್ರತ್ಯ

ಧರ್ಮವುಳ್ಳ ಕುಲಸ್ತ್ರೀಯರು ತಮ್ಮನ್ನು ತಾವೇ ಕಾಪಾಡಿಕೊಂಡು ಸ್ವರ್ಗಕ್ಕೆ ಹೋಗುವರು ಮತ್ತು ಗಂಡನನ್ನು ಅಗಲಿದ ಪತಿವ್ರತೆಯರು ತಮ್ಮ ಒಳ್ಳೆಯ ನಡತೆ ಎಂಬ ಅಂಗಿಯಿಂದ ರಕ್ಷಿತರಾಗಿ ಪ್ರಾಣಗಳನ್ನು ತಾಳಿಕೊಂಡಿರುವರೇ ಹೊರತು ಗಂಡಂದಿರನ್ನು ಹೀಯಾಳಿಸುವುದಿಲ್ಲ. ಅವನು ಕಾಲಗತಿಯಿಂದ ರಾಜ್ಯಕೋಶಗಳೇ ಮೊದಲಾದ ಸಕಲ ಸಂಪತ್ತುಗಳನ್ನೂ ಕಳಕೊಂಡು ದುಃಖದಿಂದ ಬುದ್ಧಿಕೆಟ್ಟು ಮುಂದೋರದೆ ಮೂಢನಾಗಿ ಹುಚ್ಚನಂತೆ ಕಾಡಿನಲ್ಲಿ ಬಿಟ್ಟುಹೋದನು. ಆದರೂ ಅವನಲ್ಲಿ ಪತಿವ್ರತೆಯಾದ ನೀನು ಕೋಪವನ್ನು ಮಾಡುವುದು ಧರ್ಮವಲ್ಲವು. ಅವನು ಹೊದೆದಿದ್ದ ಬಟ್ಟೆಯನ್ನು ಹಕ್ಕಿಯು ಎತ್ತಿಕೊಂಡು ಹೋದುದರಿಂದ ತನ್ನ ಮಾನವನ್ನು ಕಾಪಾಡಿಕೊಳ್ಳುವುದಕ್ಕೋಸ್ಕರ ಅರ್ಧವಾಗಿ ಬಟ್ಟೆಯನ್ನು ಹರಿದುಕೊಂಡು ಹೋದಮಾತ್ರಕ್ಕೆ ತಪ್ಪನ್ನೆಣಿಸಿ ಹೀಗೆ ಅತನ ಮೇಲೆ ಕೋಪಿಸಬಹುದೇ? ಕುಲಸ್ತ್ರೀಯರಿಗೆ ಸಕಲ ಧರ್ಮವೂ ಗಂಡನಿಂದಲೇ ಎಂದು ನೀನು ತಿಳಿದು ಅತನು ನಿನ್ನನ್ನು ಕಾಪಾಡಿದರೂ ಕಾಪಾಡದೆ ಹೋದರೂ ರಾಜ್ಯಹೀನನಾಗಿ ಸಕಲೈಶ್ವರ್ಯಗಳನ್ನೂ ತೊರೆದು ಕ್ಲೇಶಗಳನ್ನು ಅನುಭವಿಸುತ್ತಾ ನಿನ್ನಲ್ಲಿ ತಾನು ಮಾಡಿದ ತಪ್ಪುಗಳನ್ನು ನೆನೆದು ನೆನೆದು ತನ್ನೊಳಗೆ ತಾನೇ ಕರಗುವಂಥಾವನ ಮೇಲೆ ತಪ್ಪೆಣಿಸಬಹುದೇ? ಎಂದು ನುಡಿದನು. ಆ ಮೇಲೆ ಇದೆಲ್ಲವನ್ನು ನಿನಗೆ ತಿಳಿಸಿದ್ದೇನೆ. ಇನ್ನು ನೀನು ಈ ವಿಷಯವನ್ನು ಅರಸಿಗೆ ಅರಿಕೆ ಮಾಡಿ ನಿನ್ನ ಮನಸ್ಸಿಗೆ ತೋರಿದ ರೀತಿಯಲ್ಲಿ ನಡಿಸು ಅಂದನು. ಆಗ ದಮಯಂತಿಯು ತನ್ನ ತಾಯಿಯ ಸಮೀಪಕ್ಕೆ ಹೋಗಿ ಈ ಸುದ್ದಿಯನ್ನೆಲ್ಲಾ ಹೇಳಿ ಪರ್ಣಾದನೆಂಬ ವಿಪ್ರನಿಗೆ ವಿವಿಧ ವಿತ್ತಾದಿಗಳನ್ನು ಕೊಡಿಸಿ—ನಳನು ಇಲ್ಲಿಗೆ ಒರುವಾಗ ನಿನಗೆ ಬೇಕಾದ ಬಹುಮಾನಗಳನ್ನು ಮಾಡಿಸುತ್ತೇನೆ. ಗಂಡನಗಲಿದ ನನಗೆ ಗಂಡನೊಡನೆ ಕೂಡುವಂತೆ ಉಪಕಾರವನ್ನು ಮಾಡಿದೆ. ಇಂಥಾ ಉಪಕಾರವನ್ನು ಮಾಡುವವರು ಯಾರು? ಎಂದು ಹಿತವಾದ ನುಡಿಗಳನ್ನು ನುಡಿದು ಕಳುಹಿಸಲು ಅತನು—ನಿನಗೆ ಶುಭವಾಗಲಿ! ಎಂದು ಆಶೀರ್ವಾದವನ್ನು ಮಾಡಿ ಕೃತಕೃತ್ಯನಾಗಿ ತನ್ನ ಮನೆಗೆ ಹೋದನು

ತರುವಾಯ ದಮಯಂತಿಯು ತನ್ನ ತಾಯಿಯನ್ನು ಕುರಿತು—ಎಲೌ, ತಾಯೇ! ಈಗ ನಾನು ಒಂದು ಆಲೋಚನೆಯನ್ನು ಹೇಳುತ್ತೇನೆ. ನಾನು ಚೆನ್ನಾಗಿ ಒದುಕಬೇಕೆಂಬ ಆಶೆಯು ನಿನಗೆ ಇದ್ದರೆ ನಾನು ಹೇಳುವ ಈ ಮಾತನ್ನು ನನ್ನ ತಂದೆಗೆ ಹೇಳದೆ ನಿನ್ನ ಮನಸ್ಸಿನಲ್ಲಿಯೇ ಇರಿಸಿಕೊಂಡಿರು. ಮೊದಲು ನನ್ನನ್ನು ನಿಮ್ಮೊಡನೆ ಕೂಡಿಸಿದ ವಸುದೇವನೆಂಬ ಬ್ರಾಹ್ಮಣನನ್ನು ಅಯೋಧ್ಯಾಪಟ್ಟಣದಲ್ಲಿ ಋತುಪರ್ಣರಾಜನ ಸನ್ನಿಧಾನದಲ್ಲಿರುವ ನನ್ನ ಗಂಡನನ್ನು ಕರತರಿಸುವುದಕ್ಕೆ ಕಳುಹಿಸಬೇಕು ಎಂದು ಅತನನ್ನು ಕರತರಿಸಿ ತನ್ನ ತಾಯಿ ಕೇಳುತ್ತಿರಲು ಅತನನ್ನು ಕುರಿತು—ಎಲೈ, ಬ್ರಾಹ್ಮಣೋತ್ತಮನೇ! ನೀನು ಅಯೋಧ್ಯಾಪತಿಯಾದ ಋತುಪರ್ಣರಾಜನ ಸನ್ನಿಧಾನಕ್ಕೆ ಹೋಗಿ—ನಳನು ಜೂಜಿನಲ್ಲಿ ಪರಾಜಿತನಾಗಿ ಎಲ್ಲೋ ಹೊರಟು ಹೋದನು. ಎಲ್ಲಿ ಹುಡುಕಿದರೂ ಕಾಣಿಸದೆ ಇರುವುದರಿಂದ ಆ ದಮಯಂತಿಗೆ ತಿರಿಗಿ ಸ್ವಯಂವರವನ್ನು ಮಾಡುತ್ತಲಿದ್ದಾರೆ. ಸಮಸ್ತರಾದ ಅರಸುಗಳೂ ಕುಂಡಿನ ನಗ

ರಕ್ಕೆ ಬಂದರು. ದಮಯಂತಿಯು ನಾಳೆ ಬೆಳಿಗ್ಗೆ ಸ್ವಯಂವರದಲ್ಲಿ ಎರಡನೆಯ ಗಂಡ ನನ್ನು ವರಿಸುವದಕ್ಕಿದ್ದಾಳೆ ನಿನಗೆ ಆವಳನ್ನು ಹೊಂದಬೇಕೆಂದು ಬಯಕೆ ಇದ್ದರೆ ಬೇಗನೆ ಅಲ್ಲಿಗೆ ಹೋಗಬಹುದು ಎಂದು ಹೇಳಿ ಬಂದು ಬಿಡು ಎಂದು ಹೇಳಿ ಕಳುಹಿ ಸಲು ಆತನು ಹಾಗೆಯೇ ಆಯೋಧ್ಯಾಪಟ್ಟಣಕ್ಕೆ ಹೋಗಿ ದಮಯಂತಿ ಹೇಳಿದ ಹಾಗೆ ಋತುಪರ್ಣನೊಡನೆ ತಿಳಿಸಿ ತಿರಿಗಿ ಕುಂಡಿನ ಪಟ್ಟಣಕ್ಕೆ ಹೊರಟು ಬಂದನು ಆ ಮಾತನ್ನು ಕೇಳಿದ ಋತುಪರ್ಣರಾಜನು ತನ್ನ ಮನಸ್ಸಿನಲ್ಲಿ—ಇದೇನೋ ಬಹಳ ಆಶ್ಚರ್ಯವಾಗಿದೆ. ಮಹಾ ಪತಿವ್ರತೆಯಾದ ದಮಯಂತಿಯು ನಳನನ್ನು ಬಿಟ್ಟು ಮತ್ತೊಬ್ಬನನ್ನು ವರಿಸುವುದು ಅಂದರೆ ಏನು? ಇದನ್ನು ನೋಡಿದರೆ ನಳನ ಗುರುತು ಹಿಡಿಯುವುದಕ್ಕೆ ಮಾಡಿದ ಕಪಟೋಪಾಯವಾಗಿ ತೋರುತ್ತದೆ. ಇದರ ಮೂಲ ವನ್ನು ಅಗತ್ಯವಾಗಿ ತಿಳಿಯಬೇಕೆಂದು ನಿಶ್ಚಯಿಸಿ ತನ್ನ ಸಾರಥಿಯಾದ ಬಾಹುಕ ನನ್ನು ಕರಿಸಿ—ಎಲೈ, ಬಾಹುಕನೇ! ವಿದರ್ಭರಾಜನ ಪಟ್ಟಣಕ್ಕೆ ಹೋಗಿ ದಮಯಂ ತಿಯ ಎರಡನೆಯ ಸ್ವಯಂವರವನ್ನು ನೋಡಬೇಕೆಂದು ಎಣಿಸಿ ಇದ್ದೇನೆ. ನೀನು ಕುದುರೆಗಳ ಮನಸ್ಸನ್ನು ತಿಳಿದವನಾದುದರಿಂದ ನಿನ್ನ ಕುಶಲತ್ವವನ್ನು ತೋರಿಸುವು ದಕ್ಕೆ ಇದೇ ಸಮಯವಾಗಿದೆ ನಿನಗೆ ಬೇಕಾದ ಕುದುರೆಗಳನ್ನು ರಥಕ್ಕೆ ಕಟ್ಟಿ ನನ್ನನ್ನು ಒಂದು ದಿವಸದೊಳಗೆ ಕುಂಡಿನ ಪಟ್ಟಣಕ್ಕೆ ಕರಕೊಂಡು ಹೋಗಬೇಕು ಎಂದು ಹೇಳಿದನು.

ನಳನು ಆ ಮಾತನ್ನು ಕೇಳಿ ಎದೆಯಲ್ಲಿ ಶೂಲ ನೆಟ್ಟಂತೆ ಕೊರಗುತ್ತಾ—ಕ್ಷುದ್ರನೂ ಪಾಪಬುದ್ಧಿಯುಳ್ಳವನೂ ವಂಚಕನೂ ಆಗಿರುವ ನಾನು ತನಗೆ ಬಹಳ ಅಪಕಾರವನ್ನು ಮಾಡಿದುದರಿಂದ ನನ್ನಲ್ಲಿ ನಿರಾಶೆಯಿಂದ ಸ್ನೇಹವನ್ನು ಬಿಟ್ಟು ಇಂಥಾ ಕ್ರೂರ ಕರ್ಮವನ್ನು ಆಚರಿಸಿದಳೋ ಏನೋ ತಿಳಿಯದು. ಹೆಂಗಸರ ಮನಸ್ಸು ಮಿಂಚಿ ನಂತೆ ಚಂಚಲವಾದುದು ಎಂದು ಸೊದಲು ತನ್ನ ಮನಸ್ಸಿನಲ್ಲಿ ಯೋಚಿಸಿ ತಿರಿಗಿ—ಅಕಟಕಟಾ! ಮಹಾ ಸತಿವ್ರತಾಶಿರೋಮಣಿಯಾದ ಆಕೆಯು ಪ್ರಾಣವನ್ನಾದರೂ ತೊರಕೊಳ್ಳುವಳೇ ಹೊರತಾಗಿ ಇಂಥಾ ಕೆಲಸವನ್ನು ಎಂದಿಗೂ ಯೋಚಿಸಳು. ನಾನು ವಸುದೇವನೊಡನೆ ಹೇಳಿ ಕಳುಹಿಸಿದ ಮಾತಿನಿಂದ ನಾನು ಇಲ್ಲಿ ಇರುವುದನ್ನು ತಿಳಿದು ನನ್ನನ್ನು ಕರತರಿಸಬೇಕೆಂದು ಹೀಗೆ ಮಾಡಿರುವಳು ಎಂದು ಎಣಿಸಿ ಋತುಪ ರ್ಣರಾಜನ ಕಾರ್ಯಕ್ಕಾಗಲಿ ನನ್ನ ಕಾರ್ಯಕ್ಕಾಗಲಿ ಕುಂಡಿನ ನಗರಕ್ಕೆ ಹೋಗಬೇ ಕಲ್ಲಾ! ಎಂದು ಅಂದುಕೊಂಡು ಕೈಮುಗಿದು ಋತುಪರ್ಣನನ್ನು ಕುರಿತು—ಎಲೈ, ಅರಸೇ! ನಾನು ನಿನ್ನನ್ನು ಒಂದೇ ದಿವಸದಲ್ಲಿ ಕುಂಡಿನ ಪಟ್ಟಣಕ್ಕೆ ಕರಕೊಂಡು ಹೋಗಿ ಬಿಡುವೆನು ಎಂದು ಪ್ರತಿಜ್ಞೆಯನ್ನು ಮಾಡಲು ಆ ಮಾತನ್ನು ಕೇಳಿ ಋತು ಪರ್ಣನು—ಎಲೈ, ಬಾಹುಕನೇ! ನಿನ್ನ ಮಾತಿನಿಂದಲೇ ಒಹಳ ಸಂತೋಷವಾಯಿತು. ನಿನಗೆ ಬೇಕಾದ ವಸ್ತುಗಳನ್ನು ಕೊಡುತ್ತೇನೆ. ಬೇಡೆನಲು ನಳನು—ನೀನು ಎಣಿಸಿ ರುವ ಕಾರ್ಯವನ್ನು ನೆರವೇರಿಸಿ ನಿನ್ನನ್ನು ಮೆಚ್ಚಿಸಿ ಆ ಒಳಿಕ ತೆಗೆದುಕೊಳ್ಳುತ್ತೇನೆ ಎಂದು ಆತನ ಅಪ್ಪಣೆಯನ್ನು ತೆಗೆದುಕೊಂಡು ಕುದುರೆಯ ಲಾಯಕ್ಕೆ ಹೋಗಿ

ಕೃಶಾಂಗಗಳಾಗಿಯೂ ದಾರಿಯನ್ನು ನಡೆಯುವುದಕ್ಕೆ ತಕ್ಕವುಗಳಾಗಿಯೂ ವೇಗದಿಂದ ವಾಯುವನ್ನು ಜಯಿಸುವಂಥವುಗಳಾಗಿಯೂ ತೇಜೋಬಲ ಸಮೇತಗಳಾಗಿಯೂ ಇರುವಂಥ ಮತ್ತು ಉತ್ತಮ ಲಕ್ಷಣಗಳು ಗಂಭೀರಧ್ವನಿ ವಿಶಾಲವಾದ ಎದೆ ಮಂಗಳಕರವಾಗಿರುವ ಹತ್ತು ಸುಳಿಗಳು ಇವುಗಳಿಂದ ಪ್ರಕಾಶಮಾನಗಳಾಗಿಯೂ ಇರುವ ಸಿಂಧುದೇಶದಲ್ಲಿ ಹುಟ್ಟಿದಂಥ ಚೆನ್ನಾಗಿ ತಿದ್ದಿದ ಕುದುರೆಗಳನ್ನು ತರಲು ಅವುಗಳನ್ನು ನೋಡಿ ಋತುಪರ್ಣನು ಸ್ವಲ್ಪವಾಗಿ ಕೋಪಿಸಿಕೊಂಡು—ಎಲೈ, ಸಾರಥಿಯೇ! ಬಡವಾಗಿ ಅಲ್ಪ ಬಲವುಳ್ಳ ಇಂಥಾ ಕುದುರೆಗಳನ್ನು ಏಕೆ ತಂದೆ? ನಾವು ಬಹು ಬೇಗ ಪೋಗಬೇಕಲ್ಲವೇ? ಎಳೆಯಲಾರದ ಇಂಥಾ ಬಡಕು ದುರೆಗಳನ್ನು ನಮ್ಮ ತೇರಿಗೆ ಕಟ್ಟಿದರೆ ಒಂದೇ ದಿನದಲ್ಲಿ ಬಹು ದೂರವನ್ನು ಹೇಗೆ ಹೋದೇವು? ಅಂದನು. ಬಾಹುಕನು ಅತನನ್ನು ಕುರಿತು—ನಿನ್ನಲ್ಲಿ ನಾನು ಮಾಡಿದ ಪ್ರತಿಜ್ಞೆಯನ್ನು ಇವುಗಳು ನೆರವೇರಿಸುವುವೆಂದು ನನ್ನ ಬುದ್ಧಿಗೆ ತಿಳಿದು ನಾನು ತಂದು ಇದ್ದೇನೆ. ನಿನ್ನ ಮನಸ್ಸಿಗೆ ಇವು ಬೇಡವಾದರೆ ನಿನಗೆ ಬೇಕಾದ ಕುದುರೆಗಳನ್ನು ತರಿಸಿ ತೇರಿಗೆ ಕಟ್ಟಿಸು ಎನಲು ಅತನು ಒಳ್ಳೆಯ ಕುಲದಲ್ಲಿ ಹುಟ್ಟಿ ಅತಿವೇಗಶಾಲಿಗಳಾದ ನಾಲ್ಕು ಕುದುರೆಗಳನ್ನು ತೇರಿಗೆ ಕಟ್ಟಿಸಿ ರಥದ ಮೇಲೆ ಏರಲು ಅವುಗಳು ಆ ರಥವನ್ನು ಎಳೆಯಲಾರದೆ ಮುಗ್ಗರಿಸಲು ಅವುಗಳನ್ನು ಬಿಚ್ಚಿಸಿ ಲಾಯಕ್ಕೆ ಕಳುಹಿಸಿ ನಳನು ತಂದಿದ್ದ ಕುದುರೆಗಳನ್ನು ತೇರಿಗೆ ಹೂಡಿಸಿದ ಮೇಲೆ ನಳನು ಕುದುರೆಗಳ ಕಡಿವಾಣಗಳನ್ನು ಬಿಗಿದು ಪಿಡಿದು ಕುತ್ತಿಗೆಗಳನ್ನು ತಟ್ಟಿ ಲಾಲಿಸಿ ತನ್ನ ಸಾರಥಿಯಾದ ವಾರ್ಷ್ಣೇಯನನ್ನು ಆ ತೇರಿನ ಮೇಲೆ ಕೂಡಿಸಿಕೊಂಡು ನಡಿಸಲು ತೇಜೋಬಲಗಳಿಂದ ಕೂಡಿದ ಆ ಕುದುರೆಗಳು ಆಕಾಶಮಾರ್ಗದಲ್ಲಿಯೇ ಅತಿವೇಗದಿಂದ ನಡೆಯಲು ಋತುಪರ್ಣನು ಆಶ್ಚರ್ಯಭರಿತನಾಗಿ ನೋಡುತ್ತಿದ್ದನು.

ಆಗ ವಾರ್ಷ್ಣೇಯನು ರಥವೇಗವನ್ನೂ ಬಾಹುಕನ ಅಶ್ವಹೃದಯ ಜ್ಞಾನವನ್ನೂ ಅತನು ಕುದುರೆಗಳನ್ನು ನಡಿಸುವ ರೀತಿಯನ್ನೂ ನೋಡಿ—ಈ ಬಾಹುಕನು ಇಂದ್ರ ಸಾರಥಿಯಾದ ಮಾತಲಿಯೋ? ಅಲ್ಲದಿದ್ದರೆ ಮನುಷ್ಯನ ಆಕಾರವನ್ನು ತಾಳಿ ಬಂದಿರುವ ಕುದುರೆಗಳ ತತ್ವಜ್ಞಾನವುಳ್ಳ ಶಾಲಿಹೋತ್ರನೋ? ಅಥವಾ ಈ ವೇಷದಿಂದ ಬಂದಿರುವ ಸಕಲ ಶತ್ರು ಸಂಹಾರಕನಾದ ನಳನೋ? ಅಲ್ಲದಿದ್ದರೆ ನಳನ ಬಳಿಯಲ್ಲಿ ಅಶ್ವಹೃದಯ ಜ್ಞಾನವಿದ್ಯೆಯನ್ನು ತಿಳಿದವನೋ? ಸುಮಾರು ನೋಡಿದರೆ ಬಹುತರ ಪುಣ್ಯಶ್ಲೋಕನಾದ ನಳನೇ ಎಂದು ತೋರುತ್ತದೆ ಇವನಿಗೂ ನಳನಿಗೂ ಒಂದೇ ಪ್ರಾಯವಾಗಿದೆ. ರೂಪದಲ್ಲಿ ಮಾತ್ರ ಭೇದವಾಗಿದೆ. ಆದರೂ ನನ್ನ ಮನಸ್ಸಿಗಂತೂ ನಳನೇ ಎಂದು ತೋರುತ್ತದೆ ಎಂದು ಯೋಚಿಸಿದನು. ಈ ಪ್ರಕಾರದಿಂದ ಹೋಗುವಂಥಾ ತೇರು ಹೊಳೆಗಳನ್ನೂ ಬೆಟ್ಟ ಗುಡ್ಡಗಳನ್ನೂ ಕಾಡುಗಳನ್ನೂ ಕೊಳಗಳನ್ನೂ ದಾಟಿ ಗಾಳಿಯ ಜಂದದಿಂದ ಬಹಳ ವೇಗವಾಗಿ ಹೋಗುತ್ತಿರಲು ಆ ಸಮಯದಲ್ಲಿ ಋತುಪರ್ಣನು ತನ್ನ ಉತ್ತರೀಯವು ಜಾರಿ ಭೂಮಿಯಲ್ಲಿ ಬಿದ್ದುದನ್ನು ನೋಡಿ—ಎಲೈ, ಸಾರಥಿಯೇ! ನಾನು ಹೊದೆದಿದ್ದ ಶಲ್ಯವು ಜಾರಿ ಬಿದ್ದಿತು. ವಾರ್ಷ್ಣೇಯನು

ಹೋಗಿ ಅದನ್ನು ತೆಗೆದುಕೊಂಡು ಬರುವ ಪರಿಯಂತರವೂ ಇಲ್ಲಿ ತೇರನ್ನು ಕ್ಷಣಮಾತ್ರ ನಿಲ್ಲಿಸೆನಲು ನಳನು ಆತನನ್ನು ನೋಡಿ—ಎಲೈ, ರಾಜೇಂದ್ರನೇ! ನೀನು ಹೊದೆದಿದ್ದ ಶಲ್ಯವು ಬಿದ್ದ ಎಡೆಗೂ ಇಲ್ಲಿಗೂ ಐದು ಹರದಾರಿಯ ದೂರ ಉಂಟು. ಅದನ್ನು ತೆಗೆದುಕೊಂಡು ಬರುವುದಕ್ಕೆ ಆಗುವುದಿಲ್ಲ ಅಂದನು. ಆಗ ಋತುಪರ್ಣನು ಸಂತೋಷಪಟ್ಟು ಬಹಳ ಹಣ್ಣುಗಳಿಂದ ಕೂಡಿರುವ ಒಂದು ತಾರೆಯ ಮರವನ್ನು ನೋಡಿ ನಳನನ್ನು ಕುರಿತು—ಎಲೈ, ಬಾಹುಕನೇ! ಎಣಿಸುವುದರಲ್ಲಿ ನನಗೆ ಒಹಳ ಸಾಮರ್ಥ್ಯ ಉಂಟು. ಲೋಕದಲ್ಲಿ ಸಕಲಜನರೂ ಸ್ವಲ್ಪವಾದ ಲೆಕ್ಕವನ್ನು ಆರಿತಿರುವರೇ ಹೊರತಾಗಿ ಸಂಪೂರ್ಣವಾಗಿ ತಿಳಿದವರಲ್ಲ. ಈ ಗಣಿತವಿದ್ಯೆಯು ನನ್ನಲ್ಲಿ ಉಂಟು. ಅದನ್ನು ನಿನಗೆ ಹೇಳುತ್ತೇನೆ; ಕೇಳು. ಈ ತಾರೆಯ ಮರದಲ್ಲಿ ಇರುವ ಎಲೆ ಕಾಯಿಗಳ ಲೆಕ್ಕವನ್ನು ಹೇಳುವೆನು ಈ ಮರದಲ್ಲಿ ಉದುರಿರುವ ಎಲೆ ಕಾಯಿಗಳ ಲೆಕ್ಕವನ್ನು ತಿಳಿಸುವೆನು; ಕೇಳು. ಆದರೆ ನೀನು ಅವೆಲ್ಲವನ್ನೂ ಲೆಕ್ಕಮಾಡಿ ಪರೀಕ್ಷಿಸುವುದಕ್ಕೆ ಸಾಮರ್ಥ್ಯವಿಲ್ಲದೆ ಇರುವುದರಿಂದ ಈ ಎರಡು ಕೊಂಬೆಗಳಲ್ಲಿ ಮಾತ್ರ ಎರಡು ಸಾವಿರದ ತೊಂಭತ್ತೈದು ಕಾಯಿಗಳಿವೆ ಎನಲು ಆ ನಳನು ರಥದಿಂದ ಇಳಿದು ಮರವನ್ನು ಏರಿ ಕೊಂಬೆಗಳೆರಡರ ಫಲಗಳನ್ನೂ ಲೆಕ್ಕ ಮಾಡಿ ಆಶ್ಚರ್ಯಪಟ್ಟು ಋತುಪರ್ಣನನ್ನು ನೋಡಿ—ನೀನು ಎಷ್ಟು ಹಣ್ಣುಗಳಿವೆ ಎಂದು ಹೇಳಿದೆಯೋ ಅಷ್ಟೇ ಹಣ್ಣುಗಳು ಅವೆ. ಯಾವ ವಿದ್ಯೆಯಿಂದ ನಿನಗೆ ಈ ಮಹಿಮೆಯು ಉಂಟಾಯಿತೋ ಆ ವಿದ್ಯೆಯನ್ನು ನನಗೆ ತಿಳಿಸು. ನನ್ನಲ್ಲಿರುವ ಅಶ್ವಹೃದಯ ಜ್ಞಾನವಿದ್ಯೆಯನ್ನು ನಿನಗೆ ತಿಳಿಸುತ್ತೇನೆ ಎನಲು ಋತುಪರ್ಣನು—ಹಾಗೇ ಆಗಲೆಂದು ಸಮ್ಮತಿಸಿ ಆತನನ್ನು ನೋಡಿ—ನಿನಗೆ ಅಕ್ಷಹೃದಯ ವಿದ್ಯೆಯನ್ನು ಈಗ ಹೇಳುತ್ತೇನೆ ನಿನ್ನ ಅಶ್ವಹೃದಯ ವಿದ್ಯೆಯು ನಿನ್ನಲ್ಲಿಯೇ ಇರಲಿ ನನಗೆ ಬೇಕಾದಾಗ ತೆಗೆದುಕೊಳ್ಳುತ್ತೇನೆ ಎಂದು ನುಡಿದು ನಳನಿಗೆ ಸಾಂಗವಾಗಿ ಅಕ್ಷಹೃದಯ ವಿದ್ಯೆಯನ್ನು ಉಪದೇಶಿಸಿದನು. ಆ ಬಳಿಕ ಅಕ್ಷವಿದ್ಯಾಸಮರ್ಥನಾದ ನಳನ ಶರೀರದ ದೆಸೆಯಿಂದ ಕಲಿಪುರುಷನು ಕರ್ಕೋಟಕನ ವಿಷದಿಂದಲೂ ದಮಯಂತಿಯ ಶಾಪದಿಂದಲೂ ತಪ್ತನಾಗಿ ಭೂಮಿಯಲ್ಲಿ ಬೀಳಲು ನಳನು ನೋಡಿ ಆತನಿಂದ ಒಹುಕಾಲ ತೊಂದರೆಯನ್ನು ಹೊಂದಿದವನಾದುದರಿಂದ ಅವನನ್ನು ಶಪಿಸುವುದಕ್ಕೆ ಎಣಿಸಿದನು ಅದಕ್ಕೆ ಅವನು ಬೆದರಿ ಗಡಗಡನೆ ನಡುಗುತ್ತಾ ಕೈಮುಗಿದು—ಎಲೈ, ಮಹಾತ್ಮನೇ! ನನ್ನನ್ನು ಶಪಿಸಬೇಡ. ನಿನಗೆ ಬಹು ಕೀರ್ತಿ ಉಂಟಾಗುವಂತೆ ಮಾಡುತ್ತೇನೆ. ಮೊದಲು ನಿನ್ನನ್ನು ಆಗಲಿದ ಸಮಯದಲ್ಲಿ ದಮಯಂತಿಯು ಶಪಿಸಿದುದರಿಂದಲೂ ಕರ್ಕೋಟಕನ ವಿಷದಿಂದಲೂ ಬಹಳ ಪೀಡಿತನಾಗಿ ಇದ್ದೇನೆ. ನಿನ್ನನ್ನು ಶರಣನನ್ನಾಗಿ ಹೊಂದಿದ್ದೇನೆ. ಲೋಕದಲ್ಲಿ ಯಾವ ಜನರಾಗಲಿ ನಿನ್ನ ಹೆಸರನ್ನು ನೆನೆದರೆ ಅವರಿಗೆ ನನ್ನ ಬಾಧೆಗಳು ಇಲ್ಲದೆ ಹೋಗಲಿ ಎಂದು ಬೇಡಿಕೊಳ್ಳಲು ನಳನು ದಯಾಶಾಲಿಯಾದುದರಿಂದ ಮನ್ನಿಸಿಬಿಟ್ಟನು. ಕಲಿಪುರುಷನು ಹತ್ತರದಲ್ಲಿರುವ ತಾರೆಯ ಮರವನ್ನು ಹತ್ತಿ ಮರಸಿಕೊಂಡನು. ಆದುದರಿಂದಲೇ ತಾರೆಯ ಮರವು ಅಯೋಗ್ಯವೆನಿಸಿಕೊಂಡಿತು.

ಆ ಬಳಿಕ ಕಲಿಯಿಂದ ಬಿಡಲ್ಪಟ್ಟ ನಳನು ರಥವನ್ನು ಏರಿ ಕುಂಡಿನ ನಗರಕ್ಕೆ ಹೋಗಲು ದಮಯಂತಿಯು ತನ್ನ ಗಂಡನಾದ ನಳನು ಋತುಪರ್ಣರಾಜನೊಡನೆ ಈಗ ಬರುವನು ಎಂದು ನಡುವಣ ತೊಟ್ಟಿಯ ಮಾಡದ ಮೇಲೆ ಹತ್ತಿ ನಿಂತು ದಾರಿಯನ್ನು ನೋಡುತ್ತಿರುವಲ್ಲಿ ಬಾಹುಕವಾರ್ಷ್ಣೇಯರೊಡನೆ ಕೂಡಿ ಬರುವ ಋತುಪರ್ಣನನ್ನು ಕಂಡಳು. ಆಗ ನಳನೂ ವಾರ್ಷ್ಣೇಯನೂ ತೇರನ್ನೂ ಕುದುರೆಗಳ ಕಡಿವಾಣಗಳನ್ನೂ ಹಿಡಿದು ನಿಲ್ಲಿಸಲು ಋತುಪರ್ಣನು ತೇರಿನಿಂದಿಳಿದು ಭೀಮಭೂಪಾಲಸಿಗೆ ಎದುರಾಗಿ ಹೋಗಲು ಅತನು ಈತನನ್ನು ಯಥೋಚಿತವಾಗಿ ಪೂಜಿಸಿ ಹೆಂಗಸರು ಅಂತರಾಲೋಚನೆಯಿಂದ ನಡಿಸಿದ ಕೆಲಸವನ್ನು ಸ್ವಲ್ಪವಾದರೂ ತಿಳಿಯದೆ ಇರುವನಾದುದರಿಂದ ಒಮ್ಮಿಂದೊಮ್ಮೆ ಬಂದ ಋತುಪರ್ಣನನ್ನು ನೋಡಿ ಕುಶಲಪ್ರಶ್ನೆಯನ್ನು ಮಾಡಿ—ನೀನು ಒಂದ ಕೆಲಸವೇನು? ಒಂದು ಕೇಳಿದನು ಆಗ ಋತುಪರ್ಣನು ಜಾಣನಾದುದರಿಂದ ಸ್ವಯಂವರಕ್ಕೆ ಒಬ್ಬ ಅರಸನಾದರೂ ಬಾರದೆ ಇರುವದನ್ನೂ ಸ್ವಯಂವರಪ್ರಯತ್ನವು ಕೊಂಚವಾದರೂ ಇಲ್ಲದೆ ಇರುವುದನ್ನೂ ಕಂಡು ಮತ್ತೊಂದು ಮಾತನ್ನೂ ಹೇಳದೆ—ನಿನ್ನನ್ನು ನೋಡಿ ನಮಸ್ಕಾರವನ್ನು ಮಾಡುವುದಕ್ಕೆ ಬಂದೆನು ಅಂದನು. ಭೀಮಭೂಪಾಲಕನು—ಇಷ್ಟು ಮಾತ್ರಕ್ಕೆ ಇಷ್ಟು ದೂರ ಪ್ರಯಾಣವನ್ನು ಮಾಡುವುದು ಯುಕ್ತವಾಗಿ ತೋರುವುದಿಲ್ಲ. ಇವನು ತನ್ನ ಮನೋಗತವನ್ನು ನಿಜವಾಗಿ ತಿಳಿಸಲಿಲ್ಲ ಎಂದು ತನ್ನ ಮನದಲ್ಲಿ ತಿಳಿದುಕೊಂಡು ಅತನಿಗೆ ಒಂದು ಬಿಡಾರವನ್ನು ಬಿಡಿಸಿ ಕೊಟ್ಟುದರಿಂದ ಅಲ್ಲಿ ವಾರ್ಷ್ಣೇಯಸಹಿತನಾಗಿ ಹೋಗಿ ಆ ಮನೆಯಲ್ಲಿ ಇಳಿದುಕೊಂಡನು. ನಳನು ರಥವನ್ನು ರಥಶಾಲೆಗೆ ತೆಗೆದುಕೊಂಡು ಹೋಗಿ ಇರಿಸಿ ತಾನೂ ಅದರ ಸಮೀಪದಲ್ಲಿಯೇ ಇದ್ದುಕೊಂಡಿದ್ದನು

ಆಗ ದಮಯಂತಿಯು ತನ್ನ ಬಳಿಯಲ್ಲಿ ಇರುವ ಒಬ್ಬ ದೂತಿಯನ್ನು ಕರೆದು—ಎಲೈ, ಕೇಶಿನಿಯೇ! ಋತುಪರ್ಣನ ತೇರಿನ ಬಳಿಯಲ್ಲಿ ಕುಗ್ಗಿದ ತೋಳುಳ್ಳವನಾಗಿ ವಿಕೃತಾಕಾರನಾಗಿರುವ ಈತನು ಯಾರೋ ತಿಳಿಯಲಿಲ್ಲ ಈತನನ್ನು ನೋಡಿದ ಮಾತ್ರದಿಂದಲೇ ನನ್ನ ಮನಸ್ಸಿನಲ್ಲಿ ಸಂತೋಷ ಹುಟ್ಟಿದುದರಿಂದ ಇವನು ನಳಸಿರಬಹುದೋ? ಎಂಬ ಸಂಶಯ ಉಂಟಾಗಿದೆ ನೀನು ಅತನ ಸನ್ನಿಧಾನಕ್ಕೆ ಹೋಗಿ ಸಕ್ಕರೆಯ ಹಾಗೆ ಸಿಹಿಯಾಗಿರುವ ಮಾತುಗಳಿಂದ ಕುಶಲ ಪ್ರಶ್ನೆಯನ್ನು ಮಾಡಿ ಅತನು ಕೊಡುವ ಉತ್ತರವನ್ನೂ ಮೊದಲು ಪರ್ಣಾದನು ಹೋಗಿ ನುಡಿದ ವಾಕ್ಯಗಳಿಗೆ ಅತನು ಪ್ರತ್ಯುತ್ತರ ಕೊಟ್ಟದ್ದನ್ನೂ ಏವರವಾಗಿ ತಿಳುಕೊಂಡು ಬಾ ಎಂದು ಕಳುಹಿಸಿ ತಾನು ಮಾಡವನ್ನೇರಿ ನೋಡುತ್ತಿದ್ದಳು. ಅವಳು ಬಾಹುಕನ ಹತ್ತಿರಕ್ಕೆ ಬಂದು ಅತನನ್ನು ಕುರಿತು—ಎಲೈ, ಮಹಾತ್ಮನೇ! ಕ್ಷೇಮದಲ್ಲಿ ಇದ್ದೀಯಾ? ಅಯೋಧ್ಯಾ ಪಟ್ಟಣದ ದೆಸೆಯಿಂದ ಹೊರಟು ಎಷ್ಟು ದಿವಸವಾಯಿತು? ಇಲ್ಲಿಗೆ ಯಾವ ಪ್ರಯೋಜನಕ್ಕೋಸ್ಕರ ಬಂದೆ? ಇದನ್ನು ತಿಳುಕೊಂಡು ಬಾ ಎಂದು ನಮ್ಮ ಅರಸಿನಮಗಳು ಕಳುಹಿಸಿದ್ದಾಳೆ. ನಿನ್ನ ಸ್ವರೂಪವನ್ನು ನಿಜವಾಗಿ ವಿವರಿಸು ಎನ್ನಲು ಬಾಹುಕನು—ದಮಯಂತಿಯು ನಾಳೆನ ಬೆಳಿಗ್ಗೆ ಎರಡನೆಯ ಸ್ವಯಂವರ

ವನ್ನು ಮಾಡುತ್ತಾಳೆಂದು ಜನರು ಹೇಳಿದ ಸುದ್ದಿಯನ್ನು ಋತುಪರ್ಣನು ಕೇಳಿ ವಾಯುವೇಗದಿಂದ ಕೂಡಿರುವ ಕುದುರೆಗಳನ್ನು ಕಟ್ಟಿದ ತೇರನ್ನು ಏರಿ ಈ ದಿವಸ ಬೆಳಿಗ್ಗೆ ಹೊರಟು ಈ ಸಾಯಂಕಾಲಕ್ಕೆ ಬಂದನು. ನಾನು ಅತನ ಸಾರಥಿಯು ಅಂದನು ಆಕೆಯು ಆ ಬಾಹುಕನನ್ನು ಕುರಿತು—ನಿನ್ನ ಸಂಗಡ ಇನ್ನೊಬ್ಬ ಒಂದನಲ್ಲ ಅವನು ಯಾರು ? ನೀನು ಯಾವ ಬಗೆಯವನು ? ನಿನಗೆ ಸಾರಥ್ಯವು ಹೇಗೆ ಒಂದಿತು ? ಎನಲು ಅದಕ್ಕೆ ನಳನು—ಅತನು ಪುಣ್ಯಶ್ಲೋಕನಾದ ನಳನ ಸಾರ ಥಿಯು. ಅತನ ಹೆಸರು ವಾರ್ಷ್ಣೇಯನು. ನಳನು ರಾಜ್ಯವನ್ನು ಬಿಟ್ಟು ಹೋದ ಬಳಿಕ ಋತುಪರ್ಣರಾಜನನ್ನು ಸೇರಿಕೊಂಡನು ನಾನು ಅಡಿಗೆ ಮಾಡುವುದರಲ್ಲಿಯೂ ಸಾರಥ್ಯ ಮಾಡುವುದರಲ್ಲಿಯೂ ಗಟ್ಟಿಗನಾದುದರಿಂದ ಈ ಋತುಪರ್ಣನಿಗೆ ಸಾರಥ್ಯ ವನೂ ಅಡಿಗೆಯನ್ನೂ ಮಾಡಿಕೊಂಡಿದ್ದೇನೆ ಅಂದನು. ಆ ಕೇಶಿನಿಯು—ನಳನ ಸಾರ ಥಿಯಾದ ವಾರ್ಷ್ಣೇಯನು ನಳನು ಇಂಥಾ ಸ್ಥಳದಲ್ಲಿ ಇದ್ದಾನೆಂದು ನಿನಗಾದರೂ ಒಂದು ದಿವಸ ತಿಳಿಸಿರುವನೋ ? ಎಂದು ಕೇಳಲು ವಾರ್ಷ್ಣೇಯನು ನಳನ ಮಗನನ್ನೂ ಮಗಳನ್ನೂ ಈ ವಿದರ್ಭ ಪಟ್ಟಣದಲ್ಲಿ ಇರಿಸಿ ತನ್ನ ಇಚ್ಛೆ ಒಂದ ಹಾಗೆ ಈ ಋತುಪರ್ಣ ನಲ್ಲಿ ಸೇರಿಕೊಂಡುದರಿಂದ ಅವನಿಗೆ ನಳನ ಸುದ್ದಿಯು ತಿಳಿಯದು. ಹೇಳುವುದೇನು ? ಮೊದಲಿದ್ದ ರೂಪವನ್ನು ಬಿಟ್ಟು ಬೇರೆ ರೂಪಿನಿಂದ ಗುಟ್ಟಾಗಿ ತಿರುಗುವಂಥ ಆ ನಳನನ್ನು ಯಾರಾದರೂ ಅರಿಯುವುದಕ್ಕೆ ಸಮರ್ಥರೇ ? ಅತನ ಆತ್ಮವೂ ಅತನಿಗೆ ಹೊರಗಣ ಪ್ರಾಣವಾಗಿರುವ ದಮಯಂತಿಯೂ ಇವರಿಬ್ಬರೇ ಹೊರತಾಗಿ ಮತ್ತೊಬ್ಬರೂ ಅರಿಯರು. ಅತನ ಗುರುತುಗಳನ್ನು ಅರಿಯುವುದಕ್ಕೆ ಯಾರಿಗೂ ಶಕ್ಯವಲ್ಲ ಅಂದನು ಕೇಶಿನಿಯು— ಮೊದಲು ಅಯೋಧ್ಯಾ ಪಟ್ಟಣಕ್ಕೆ ಪರ್ಣಾದನು ಬಂದು ಹೇಳಿದ ಮಾತಿಗೆ ನೀನು ಒದಲು ಮಾತು ಪಡಿದೆಯಷ್ಟೆ ! ಅದನ್ನು ತಿರಿಗಿ ಹೇಳಬೇಕೆಂದು ದಮಯಂತಿಯು ಬಯಸುತ್ತಾಳೆ. ಅದನ್ನು ಮತ್ತೊಮ್ಮೆ ಹೇಳು ಎನಲು ನಳನು ಮೊದಲು ಹೇಳಿದ ಹಾಗೆಯೇ ಹೇಳಿ ಕಣ್ಣೀರನ್ನು ಸುರಿಸಿದನು

ಕೇಶಿನಿಯು ತಿರಿಗಿ ಹೋಗಿ ಅದೆಲ್ಲವನ್ನೂ ದಮಯಂತಿಗೆ ಹೇಳಲು ದಮಯಂತಿಯು—ತಿರಿಗಿ ಅತನ ಬಳಿಗೆ ಹೋಗಿ ಸುಮ್ಮನಿದ್ದುಕೊಂಡು ಅತನು ಮಾಡುವ ಕೆಲಸಗಳನ್ನು ನೋಡುತ್ತಾ ಅತನು ಎಷ್ಟು ಬೇಡಿದರೂ ಬೆಂಕಿಯನ್ನೂ ನೀರನ್ನೂ ತಂಡು ಕೊಡಬೇಡ ಆಮೇಲೆ ನಡೆದ ಸಂಗತಿಯನ್ನೆಲ್ಲಾ ತಿಳಿದುಕೊಂಡು ಬಂದು ನನಗೆ ಹೇಳು ಎನಲು ಅವಳು ತಿರಿಗಿ ಅವನ ಬಳಿಗೆ ಹೋಗಿ ಅವನು ಮಾಡುವುದನ್ನೆಲ್ಲಾ ತಿಳುಕೊಂಡು ಬಂದು—ಎಲ್ಲೈ, ಅರಸಿನ ಮಗಳೇ ! ಇಂಥಾ ಚರಿತ್ರೆಯುಳ್ಳ ಮಹಾ ಪುರುಷನನ್ನು ಎಲ್ಲಿಯಾದರೂ ನೋಡಿಯೂ ಕೇಳಿಯೂ ಇಲ್ಲ. ಅತನು ಕೆಟಿಕೆಯ ಕನ್ನಗಳನ್ನು ಹೊಕ್ಕು ತಡೆಯಿಲ್ಲದೆ ಆಚೆಗೆ ಹೋಗುತ್ತಾನೆ ಅಡಿಗೆ ಮಾಡುವುದಕ್ಕೆ ನಮ್ಮ ಅರಸು ಋತುಪರ್ಣನಿಗೋಸ್ಕರ ಮಾಂಸವನ್ನು ಕಳುಹಿಸಲು ಅದನ್ನು ತೊಳೆಯುವುದಕ್ಕೆ ಬರಿಯ ಚೌರಿಗೆಯನ್ನು ತಂದು ಕೊಟ್ಟರೆ ಅದು ನೀರಿನಿಂದ ತುಂಬಿ ಇರುತ್ತದೆ. ಆ ನೀರುಗಳಿಂದ ಮಾಂಸವನ್ನು ತೊಳೆದು ಅಡುವುದಕ್ಕೆ ಕಟ್ಟಿಗೆಯನ್ನು

ಕೈಯಿಂದ ಹಿಡಿದ ಮಾತ್ರದಿಂದಲೇ ಅದರಲ್ಲಿ ಬೆಂಕಿಯು ಧಗ್ಗೆಂದು ಉರಿಯುತ್ತದೆ. ಆತನು ಬೆಂಕಿಯನ್ನು ಕೈಯಲ್ಲಿ ಹಿಡಿದರೂ ಸುಡುವುದಿಲ್ಲ. ಆತನು ಎಷ್ಟು ನೀರು ಬೇಕೆಂದರೂ ಅಷ್ಟು ನೀರು ಬರುತ್ತದೆ. ಇದಲ್ಲದೆ ಇನ್ನೊಂದು ಆಶ್ಚರ್ಯವನ್ನೂ ನೋಡಿದೆನು. ಆತನು ಬಾಡಿದ ಹೂವುಗಳನ್ನು ಕೈಯಿಂದ ಹಿಡಿದರೆ ಅವೆಲ್ಲವೂ ಬಾಡದೆ ಪರಿಮಳದಿಂದ ಘಮಘಮಿಸುತ್ತವೆ ಅಂದಳು.

ಅನಂತರದಲ್ಲಿ ದಮಯಂತಿಯು—ಎಷ್ಟು ವಿಧದಲ್ಲಿ ಪರೀಕ್ಷಿಸಿ ನೋಡಿದರೂ ನಳನೇ ಹೌದೆಂದು ನಿಶ್ಚಯವಾಗುತ್ತದೆ. ಆತನಿಗೆ ಇಂಥಾ ಕೀಳು ರೂಪು ಉಂಟಾಗುವುದಕ್ಕೆ ಏನು ನಿಮಿತ್ತವೋ ಎಂದು ಸಂಶಯಪಡುತ್ತಾ ತಿರಿಗಿ ಕೇಶಿನಿಯನ್ನು ಕರೆದು—ನೀನು ಹೋಗಿ ಬಾಹುಕನು ಬೇಯಿಸಿದ ಮಾಂಸವನ್ನು ಆತನು ತಿಳಿಯದ ಹಾಗೆ ಬೇಗ ತೆಗೆದುಕೊಂಡು ಬಾ ಎಂದು ಹೇಳಿಕಳುಹಿಸಲು ಅವರಂತೆ ಅವಳು ಹೋಗಿ ಅತ್ಯುಷ್ಣವಾದ ಮಾಂಸವನ್ನು ತೆಗೆದುಕೊಂಡು ಬಂದು ದಮಯಂತಿಗೆ ಕೊಡಲು ಆಕೆಯು ಆ ಬಾಡನ್ನು ತಿಂದು ಮೊದಲು ನಳನು ಬೇಯಿಸಿದ ಬಾಡಿನ ರುಚಿಯನ್ನು ತಿಳಿದಿದ್ದವಳಾದುದರಿಂದ ಈ ಬಾಹುಕನೇ ನಳನೆಂದು ನಿಶ್ಚಯಿಸಿ ತನ್ನ ಮಗನನ್ನೂ ಮಗಳನ್ನೂ ಕೇಶಿನಿಯ ಸಂಗಡ ಕೂಡಿಸಿ ಬಾಹುಕನ ಬಳಿಗೆ ಕಳುಹಿಸಲು ಆತನು ಇವರನ್ನು ನೋಡಿ ತನ್ನ ಕೂಸುಗಳೆಂದು ತಿಳಿದು ಬೇಗಬಂದು ತಬ್ಬಿಕೊಂಡು ಅವರನ್ನು ಮುದ್ದಾಡಿ ತನ್ನ ತೊಡೆಯಮೇಲೆ ಕೂರಿಸಿಕೊಂಡು ದೇವಕುಮಾರಕರೋಪಾದಿಯಲ್ಲಿ ಇರುವ ತನ್ನ ಮಕ್ಕಳನ್ನು ನೋಡಿ ಧೀರೋದಾತ್ತನಾಯಕನಾದರೂ ದುಃಖವನ್ನು ಸಹಿಸಲಾರದೆ ನಾಚಿಕೆಯನ್ನು ತೊರೆದು ಹೆಚ್ಚಾಗಿ ಪ್ರಳಾಪಿಸಿ ಆ ಮಕ್ಕಳನ್ನು ಕೇಶಿನಿಯ ವಶಕ್ಕೆ ಕೊಟ್ಟು ಅವಳನ್ನು ನೋಡಿ—ನನಗೂ ಇಂಥ ಇಬ್ಬರು ಮಕ್ಕಳುಂಟು. ಈ ಮಕ್ಕಳನ್ನು ನೋಡಿ ಅವರನ್ನು ನೆನಸಿಕೊಂಡು ದುಃಖದಿಂದ ಕ್ಲೇಶಪಟ್ಟೆನು. ದೇಶಾಂತರದಿಂದ ಬಂದ ನನ್ನ ಬಳಿಗೆ ಬಾರಿಬಾರಿಗೂ ನೀನು ಹೀಗೆ ಬರುತ್ತಾ ಇದ್ದರೆ ನೋಡಿದವರಿಗೆ ಸಂದೇಹ ಉಂಟಾಗುವುದು. ಇನ್ನು ನೀನು ಇಲ್ಲಿ ಇರದೆ ಬೇಗ ಮನೆಗೆ ಹೋಗು ಎನಲು ಅವಳು ಹೋಗಿ ಆ ಮಾತನ್ನೆಲ್ಲಾ ದಮಯಂತಿಗೆ ತಿಳಿಸಿದಳು. ಆಕೆಯು ಅವಳನ್ನುನೋಡಿ—ನೀನು ನನ್ನ ತಾಯಿಯ ಬಳಿಗೆ ಹೋಗಿ—ಈ ಬಾಹುಕನನ್ನು ಬಹು ಪ್ರಕಾರವಾಗಿ ಪರೀಕ್ಷಿಸಿದೆನು. ರೂಪದಲ್ಲಿ ವಿಕಾರವಾಗಿ ತೋರುವುದು ಒಂದೇ ಹೊರತಾಗಿ ಮಿಕ್ಕ ಎಲ್ಲಾ ನಡತೆಯಲ್ಲಿಯೂ ಈತನೇ ನಳನೆಂದು ನಿಶ್ಚಯವಾಗಿ ತಿಳಿಯಬಂದಿತು ನಾನು ಆತನ ಕೂಡೆ ಮಾತನಾಡಿದರೆ ಎಲ್ಲಾ ತಿಳಿಯುತ್ತದೆ ನೀನು ಈ ಸಂಗತಿಯನ್ನು ಅರಸನಿಗೆ ಅರಿಕೆಮಾಡಿಯಾದರೂ ಮಾಡದೆಯಾದರೂ ಆತನನ್ನು ಇಲ್ಲಿಗೆ ಕರತರಿಸಿದರೆ ನಾನು ಮಾತನಾಡೇನು. ಆಲ್ಲದಿದ್ದರೆ ಆತನ ಬಳಿಗೆ ನನ್ನನ್ನು ಕಳುಹಿಸಿದರೆ ಹೋಗಿ ಬಂದೇನು ಎಂದು ನಾನು ಹೇಳಿದುದಾಗಿ ಅರಿಕೆ ಮಾಡಿ ಬಾ; ಹೋಗು ಎಂದು ಕಳುಹಿಸಲು ಅವಳು ಹಾಗೆ ಹೋಗಿ ರಾಣಿಗೆ ಅರಿಕೆ ಮಾಡಲು ಆ ಸೇವಿಯು ಭೀಮಭೂಪಾಲಕನಿಗೆ ಬಿನ್ನನಿಸಿದುದಕ್ಕೆ ಆತನು— ದಮಯಂತಿಗೆ ಈ ವಿಷಯವು ಹೇಗೆ ಉಚಿತವಾಗಿ ತೋರುತ್ತದೋ ಹಾಗೆ

ಮಾಡಲಿ ಎಂದು ತನ್ನ ಹೆಂಡತಿಗೆ ಹೇಳಿ ಕಳುಹಿಸಲು ಆಗ ತಾಯಿತಂದೆಗಳ ಅಪ್ಪಣೆಯಿಂದ ದಮಯಂತಿಯು ದೂತಿಯನ್ನು ನೋಡಿ—ಎಲೆ, ಕೇಶಿನೀ! ನೀನು ಬಾರಿ ಬಾರಿಗೂ ತಿರುಗುತ್ತಿದ್ದೇನೆ ಎಂದು ಬೇಸರಪಡದೆ ನನ್ನ ತಾಯಿಯೋಪಾದಿಯಲ್ಲಿ ನನಗೆ ಪ್ರಿಯವನ್ನು ಮಾಡು ನೀನು ಪುನಃ ಒಳಹೊಕ್ಕನ ಸಮೀಪಕ್ಕೆ ಹೋಗಿ—ನಿನ್ನನ್ನು ಭೀಮನರೇಂದ್ರನು ಕರಕೊಂಡು ಬರಹೇಳಿದನು ಎಂದು ಹೇಳಿ ಆತನನ್ನು ಅಂತಃಪುರಕ್ಕೆ ಕರಕೊಂಡು ಬಾ ಎಂದು ಕಳುಹಿಸಿದಳು.

ಅವಳು ಹೋಗಿ ಹಾಗೆ ಆತನನ್ನು ಕರೆಯಲು ನಳನು ಮುಹೂರ್ತಮಾತ್ರವು ತನ್ನ ಮನಸ್ಸಿನಲ್ಲಿ ವಿಚಾರಿಸಿ ಇದನ್ನು ನೋಡಬೇಕು ಎಂದು ಎಣಿಸಿ ಆ ದೂತಿಯ ಸಂಗಡಲೇ ದಮಯಂತಿಯ ಮನೆಗೆ ಬರಲು ಆಗ ವಿಕೃತಾಕಾರನಾಗಿರುವ ನಳನನ್ನು ನೋಡಿ ಕಾವಿಯ ಬಟ್ಟೆಯನ್ನೂ ಜಡೆಗಳನ್ನೂ ಧರಿಸಿ ಮಲಿನ ಗಾತ್ರಳಾಗಿರುವ ದಮಯಂತಿಯು—ಎಲೈ, ಬಾಹುಕನೇ! ಲೋಕದಲ್ಲಿ ಧರ್ಮಜ್ಞನಾದ ಪುರುಷನು ಮಹಾರಣ್ಯದ ನಡುವೆ ಮಗ್ಗಲಲ್ಲಿ ನಿದ್ದೆಹೋಗುತ್ತಿರುವ ತನ್ನ ಪ್ರಿಯ ಭಾರ್ಯೆಯನ್ನು ಬಿಟ್ಟು ಹೋದುದನ್ನು ನೀನು ಎಲ್ಲಾದರೂ ಕಂಡು ಕೇಳಿ ಉಂಟೇ? ನಿರಪರಾಧಿಯಾಗಿಯೂ ಪ್ರಿಯಾಂಗನೆಯಾಗಿಯೂ ಹಸಿವು ಬಾಯಾರಿಕೆಗಳಿಂದ ಕುಂಗೆಟ್ಟಿರುವವಳೂ ಆಗಿರುವ ಧರ್ಮಪತ್ನಿಯನ್ನು ಅರಣ್ಯದಲ್ಲಿ ಬಿಟ್ಟು ಹೋಗುವುದು ಪುಣ್ಯಶ್ಲೋಕನಾದ ನಳಮಹಾರಾಜನಿಗೆ ಹೊರತಾಗಿ ಮತ್ತೊಬ್ಬನಿಗೆ ಸಲ್ಲುವುದೇ? ಮೊದಲು ತನ್ನ ಸ್ವಯಂವರಕ್ಕೆ ಇಂದ್ರಾದಿ ದಿಕ್ಪಾಲಕರು ಒರುವಲ್ಲಿ ಅವರೆಲ್ಲರನ್ನೂ ಬಿಟ್ಟು ಮೊದಲೇ ಹಂಸಗಳ ದೆಸೆಯಿಂದ ತನ್ನ ಗುಣಗಳ ಹೆಚ್ಚಿಗೆಯನ್ನು ಕೇಳಿದುದರಿಂದ ಅಗ್ನಿಸಾಕ್ಷಿಯಾಗಿ ವರಿಸಿದುದನ್ನು ಎಣಿಸದೆ ಮಕ್ಕಳುಳ್ಳವಳಾಗಿಯೂ ಪ್ರಿಯಪತ್ನಿಯಾಗಿಯೂ ಇರುವವಳನ್ನು ಕಾಡಿಗೆ ತನ್ನ ಸಂಗಡಲೇ ಬಂದಳಲ್ಲ ಎಂದು ಸ್ವಲ್ಪವಾದರೂ ಕರುಣಿಸದೆ ಕಷ್ಟಕ್ಕೆ ಗುರಿಯಾಗಿ ಮಲಗಿದ್ದವಳನ್ನು ಮೋಸದಿಂದ ಮರಸಿಬಿಟ್ಟು ಹೋಗುವುದು ತನ್ನಂಥಾವನಿಗೆ ತಕ್ಕುದೇ? ಎಂದು ಮರ್ಮೋದ್ಘಾಟನವಾಗಿ ಮಾತಾಡುವ ಮಡದಿಯ ಮಾತುಗಳನ್ನು ಕೇಳಿ ಕಣ್ಣೀರುಗಳು ಸಂತತಧಾರೆಯಾಗಿ ಸುರಿಯಲು ಸುಂದರಿಯಾದ ಆಕೆಯನ್ನು ಕುರಿತು—ಎಲೈ, ಕಲ್ಯಾಣಿಯೇ! ಮೊದಲು ಕಾಡಿನಲ್ಲಿ ನಿನ್ನೊಬ್ಬಳನ್ನೇ ಬಿಟ್ಟುಹೋದ ಪಾಪಿಷ್ಠನಾದ ನಳನು ನಾನೇ ಎಂದು ತಿಳುಕೋ ಸಕಲ ರಾಜ್ಯವನ್ನೂ ಕಳೆದುಕೊಂಡು ನಿನ್ನನ್ನು ಕಾಡಿನಲ್ಲಿ ಬಿಟ್ಟು ಹೋಗುವುದು ಕಲಿಪುರುಷನ ಪ್ರೇರಣೆಯಿಂದ ಬಂದಿತು ಎಂದು ತಿಳುಕೋ. ನಾನು ವಸ್ತ್ರಹೀನನಾಗಿ ಒಬ್ಬನೇ ಕಾಡಿಗೆ ಹೋದ ಮೇಲೆ ಕುಲವತಿಯಾದ ನೀನು ಕೋಪಿಸಿಕೊಂಡು ಕಲಿಪುರುಷನನ್ನು ಶಪಿಸಿದವಳಾದುದರಿಂದ ಆತನು ನಿನ್ನ ಶಾಪಾಗ್ನಿಯಿಂದ ಸುಡಲ್ಪಟ್ಟವನಾಗಿಯೂ ನನ್ನ ತಪೋಜ್ವಾಲೆಯಿಂದ ತಪ್ತನಾಗಿಯೂ ಅಪತ್ತುಗಳು ಬಿಟ್ಟುಹೋಗುವ ಕಾಲವಾದುದರಿಂದ ನನ್ನೊಡಲಲ್ಲಿ ಇರದೇ ಹೋದನು. ನಾನು ನಿನ್ನ ನಿಮಿತ್ತದಿಂದ ಇಲ್ಲಿಗೆ ಬಂದೆನೇ ಹೊರತಾಗಿ ನನಗೆ ಮತ್ತೊಂದು ಕಾರ್ಯವೇನಿದೆ? ಲೋಕದಲ್ಲಿ ತನ್ನಲ್ಲಿ ಎಷ್ಟೋ ಅನುರಕ್ತನಾಗಿ ಕಣ್ಣಿನ ಸಂಜ್ಞಾಮಾತ್ರದಿಂದ ಇಷ್ಟಾವೃತ್ತಿಯನ್ನು ಮಾಡುವ ಪ್ರಿಯಪತಿ

ಯನ್ನು ಬಿಟ್ಟು ನಿನ್ನಂತೆ ಪರಪುರುಷನನ್ನು ಪರಿಗ್ರಹಿಸುವ ಪತ್ನಿಯು ಲೋಕದಲ್ಲಿ ಉಂಟೆ? ಪುನಃ ಸ್ವಯಂವರದಲ್ಲಿ ಚೆಲುವುಳ್ಳ ಎರಡನೆಯ ಗಂಡನನ್ನು ದಮಯಂತಿಯು ತನ್ನಿಚ್ಛೆಯಿಂದ ವರಿಸುತ್ತಾಳೆ ಎಲ್ಲಾ ಅರಸುಗಳೂ ಬನ್ನಿರಿ ಎಂದು ನಿಮ್ಮ ಅಪ್ಪನು ಕಳುಹಿಸಿದ ಬೇಹಿನವರು ಎಲ್ಲಾ ದೇಶಗಳಲ್ಲಿಯೂ ತಿರುಗುತ್ತಿದ್ದಾರೆ. ಅದೆಲ್ಲವನ್ನೂ ಕೇಳಿ ಋತುಪರ್ಣರಾಜನು ಬೇಗ ಬಂದನು ಎಂದು ಹೇಳಿದನು

ದಮಯಂತಿಯು ನಳನ ಕರ್ಣಕಠೋರವಾದ ಕ್ರೂರೋಕ್ತಿಗಳನ್ನು ಕೇಳಿ ಬೆದರಿ ಬೆಂಡಾಗಿ ಬಸವಳಿದು ಗಡಗಡನೆ ನಡುಗುತ್ತಾ ಕೈಮುಗಿದುಕೊಂಡು—ಎಲೈ, ಮಹಾತ್ಮನೇ! ಇಂದ್ರಾದಿ ದೇವತೆಗಳನ್ನು ಬಿಟ್ಟು ನಿನ್ನನ್ನೇ ಬಯಸಿರುವಂಥ ನನ್ನಲ್ಲಿ ಇಂಥಾ ಪಾಪಶಂಕೆಯನ್ನು ಮಾಡುವದು ಉಚಿತವೇ? ನೀನು ಎಲ್ಲಿ ಇದ್ದೀಯೋ ತಿಳಿಯಬೇಕೆಂದು ನಾನು ಹೇಳಿದಂಥಾ ಮಾತುಗಳನ್ನು ಬ್ರಾಹ್ಮಣರು ಅಲ್ಲಲ್ಲಿ ನುಡಿಯುತ್ತಾ ಸರ್ವ ದಿಕ್ಕುಗಳಲ್ಲಿಯೂ ತಿರುಗಿ ಹುಡುಕುತ್ತಿರಲು ಪರ್ಣಾದನೆಂಬ ಬ್ರಾಹ್ಮಣನು ಋತುಪರ್ಣನ ಬಳಿಯಲ್ಲಿ ಆ ಮಾತುಗಳನ್ನು ಹೇಳಿದುದಕ್ಕೆ ನೀನು ಮಾತ್ರ ಪ್ರತ್ಯುತ್ತರವನ್ನು ಕೊಟ್ಟೆ ಎಂದು ನನ್ನ ಕೂಡೆ ಹೇಳಿದವನಾದುದರಿಂದ ನೀನೇ ನಳನೆಂದು ಎಣಿಸಿ ನಿನ್ನನ್ನು ಇಲ್ಲಿಗೆ ಕರಸುವುದಕ್ಕೋಸ್ಕರ ನೂರು ಯೋಜನ ದಾರಿಯನ್ನು ಒಂದು ದಿವಸದಲ್ಲಿ ತಲಪುವಂತೆ ತೇರು ನಡಿಸುವ ಸಾಮರ್ಥ್ಯವು ನಿನ್ನಲ್ಲಿ ಇರುವುದೆಂದು ನಾನು ತಿಳಿದವಳಾದುದರಿಂದ ಹಾಗೆ ಹೇಳಿ ಕಳುಹಿಸಿದೆನೇ ಹೊರತಾಗಿ ಮತ್ತೇನೂ ಇಲ್ಲ. ನಿನ್ನ ಮನಸ್ಸಿನಲ್ಲಿ ಏನಾದರೂ ಅಂಧಾ ಸಂಶಯವಿದ್ದರೆ ನಿನ್ನ ಡಿಗಳ ಮೇಲೆ ಆಣೆಯನ್ನು ಇಕ್ಕುತ್ತೇನೆ ನಿನ್ನ ಮನಸ್ಸಿಗೆ ಅಸಮ್ಮತವಾದ ಕಾರ್ಯವನ್ನು ನಾನು ಮನಸ್ಸಿನಲ್ಲಿ ಸ್ಮರಿಸಿದ್ದರೆ ಸಕಲ ಭೂತ ಸಾಕ್ಷಿಯಾದ ವಾಯುವೂ ಸಕಲ ಜನರ ಕರ್ಮ ಸಾಕ್ಷಿಗಳಾದ ಸೂರ್ಯಚಂದ್ರರೂ ಸರ್ವ ಜನಗಳ ಪಾಪ ಪುಣ್ಯಗಳನ್ನು ತಿಳಿದು ಶಿಕ್ಷೆ ರಕ್ಷೆಗಳನ್ನು ಮಾಡುವ ಯಮನೂ ಸಕಲ ಜನರನ್ನೂ ಹೊತ್ತು ಸಲಹುವ ಭೂಮಿಯೂ ಎಲ್ಲರಿಗೂ ಪರೋಪಕಾರಿಗಳಾದ ಜಲಾಗ್ನಿಗಳೂ ಈ ಮೊದಲಾದ ದೇವತೆಗಳೆಲ್ಲರೂ ಸತ್ಯವನ್ನೇ ನುಡಿಯಲಿ. ಹಾಗೆ ನುಡಿಯದೆ ಇದ್ದರೆ ಈ ಶರೀರವನ್ನು ಬಿಡುತ್ತೇನೆ ಎಂದು ಪ್ರತಿಜ್ಞೆಯನ್ನು ಮಾಡಲು ಆಗ ದೇವತೆಗಳೆಲ್ಲಾ ಅಂತರಿಕ್ಷದಲ್ಲಿ ಮರೆಯಾಗಿ ಇದ್ದುಕೊಂಡು ನಳನನ್ನು ಕುರಿತು—ಎಲೈ, ರಾಜೇಂದ್ರನೇ! ದಮಯಂತಿಯು ಪಾತಿವ್ರತ್ಯವೆಂಬ ನಿಕ್ಷೇಪವನ್ನು ಒಂದು ವರುಷದಿಂದ ಕಾಪಾಡಿದಳು ಇದಕ್ಕೆ ನಾವೆಲ್ಲರೂ ಸಾಕ್ಷಿಗಳಾಗಿದ್ದೇವೆ ಒಂದು ದಿವಸದಲ್ಲಿ ನೂರು ಯೋಜನ ದಾರಿಯನ್ನು ತಲಪುವ ಶಕ್ತಿ ನಿನಗಿರುವುದಲ್ಲದೆ ಮತ್ತೊಬ್ಬರಿಗೆ ಇಲ್ಲವೆಂದು ಎಣಿಸಿ ನಿನ್ನನ್ನು ಕರಸುವುದಕ್ಕೋಸ್ಕರ ಈ ಉಪಾಯವನ್ನು ಮಾಡಿದಳು. ಈ ವಿಷಯದಲ್ಲಿ ನೀನು ಶಂಕಿಸಬೇಡ. ಈಕೆಯನ್ನು ಕೈಕೊಂಡು ಸುಖವಾಗಿರು ಎಂದು ಹೇಳಿದರು. ಆಗ ಆಕಾಶದಿಂದ ಹೂವಿನ ಮಳೆಯು ಸುರಿಯಿತು. ದೇವದುಂದುಭಿಗಳು ಮೊಳಗಿದವು. ಪರಿಮಳದಿಂದ ಕೂಡಿದ ಮಂದಮಾರುತವು ಬೀಸಿತು.

ನಳನು ಇದೆಲ್ಲವನ್ನು ನೋಡಿ ಆಶ್ಚರ್ಯಭರಿತನಾಗಿ ದಮಯಂತಿಯಲ್ಲಿ ಸಂಶಯವನ್ನು ಬಿಟ್ಟು ಕಾರ್ಕೋಟಕನನ್ನು ನೆನೆದು ಅವನು ಕೊಟ್ಟ ಎರಡು ಬಟ್ಟೆಗಳನ್ನು ಉಟ್ಟು ಹೊದೆದುಕೊಂಡು ಆಕ್ಷಣವೇ ತನ್ನ ಮೊದಲಿನ ಚಲುವಾದ ಮೈಯ್ಯನ್ನು ಧರಿಸಿಕೊಂಡು ಹೊಳೆಯುತ್ತಿದ್ದನು. ಅದನ್ನು ದಮಯಂತಿಯು ನೋಡಿ ತನ್ನ ಗಂಡನನ್ನು ಬಿಮ್ಮನೆ ತಬ್ಬಿಕೊಂಡು ಕೂಗಿ ಅಳಲು ಅತನೂ ಹಾಗೆಯೇ ಅವಳನ್ನು ತಬ್ಬಿಕೊಂಡು ಅಳುತ್ತಾ ಸಮಾಧಾನವನ್ನು ಮಾಡಿ ಲಾಲಿಸಲು ಧೂಳಿಯಿಂದ ತುಂಬಿದ ಮೈಯುಳ್ಳ ದಮಯಂತಿಯು ನಳನ ಎದೆಯಲ್ಲಿ ತನ್ನ ಮೊಗವನ್ನು ಇಟ್ಟು ಕಣ್ಣೀರುಗಳನ್ನು ತುಂಬಿಕೊಂಡಿದ್ದಳು ಆಗ ಇದೆಲ್ಲವನ್ನೂ ದಮಯಂತಿಯ ತಾಯಿಯು ಕಂಡು ಭೀಮಭೂಪಾಲಕನಿಗೆ ತಿಳಿಸಿದಳು. ಅತನು ಈ ವರ್ತಮಾನವನ್ನು ಕೇಳಿ ಸಂತೋಷಪಟ್ಟು ತನ್ನ ಮಡದಿಯನ್ನು ಕುರಿತು—ಆ ಗಂಡ ಹೆಂಡರಿಗೆ ನಾಳೆನ ಬೆಳಿಗ್ಗೆ ಮಂಗಳಸ್ನಾನವನ್ನು ಮಾಡಿಸಿ ದಿವ್ಯ ವಸ್ತ್ರಾಭರಣಗಳಿಂದ ಅಲಂಕರಿಸು. ಆಮೇಲೆ ನಾನು ಬಂದು ನೋಡುವೆನು ಎಂದು ಹೇಳಿ ಕಳುಹಿಸಿದನು.

ಆ ರಾತ್ರಿಯಲ್ಲಿ ನಳನೂ ದಮಯಂತಿಯೂ ತಾವು ತಾವು ಪಟ್ಟ ಕಷ್ಟಗಳನ್ನು ಒಂದು ಕಥೆಯಾಗಿ ಒಬ್ಬರೊಬ್ಬರಿಗೆ ಹೇಳಿಕೊಳ್ಳುತ್ತಾ ಚಂದ್ರನಿಂದ ಮೆರೆಯುವ ರಾತ್ರಿಯಂತೆಯೂ ಕಮಲಿನಿಯಿಂದ ಕಳಕಳಿಸುವ ಬೊಳದಂತೆಯೂ ಸುಖವಾಗಿದ್ದರು. ಮಾರನೆಯ ದಿವಸದ ಬೆಳಿಗ್ಗೆ ನಳನು ದಮಯಂತಿಯೊಡನೆ ಕೂಡಿ ಮಂಗಳಸ್ನಾನವನ್ನು ಮಾಡಿ ಸಕಲಭೂಷಣ ಭೂಷಿತನೂ ದಿವ್ಯಮಾಲ್ಯಾಂಬರಾಲಂಕೃತನೂ ಆಗಿ ದಮಯಂತಿಯೊಡನೆ ಭೀಮಭೂಪಾಲನ ಒಳಿಗೆ ಹೋಗಿ ನಮಸ್ಕಾರವನ್ನು ಮಾಡಲು ಅತನು ನಳನಲ್ಲಿ ಪುತ್ರವಾತ್ಸಲ್ಯವನ್ನು ಮಾಡಿ ಹಿತವಾದ ನುಡಿಗಳಿಂದ ಅವರನ್ನು ಸಮಾಧಾನಿಸಿ ಈರ್ವರಿಗೂ ಅನೇಕ ವಸ್ತ್ರಭೂಷಣಾದಿಗಳನ್ನು ಕೊಟ್ಟು ಮನ್ನಿಸಲು ಆ ಗಂಡ ಹೆಂಡರು ಚಂದ್ರ ರೋಹಿಣೀ ದೇವಿಯರಂತೆಯೂ ಅಗ್ನಿಸ್ವಾಹಾ ದೇವಿಯರಂತೆಯೂ ನಾರಾಯಣ ಲಕ್ಷ್ಮೀದೇವಿಯರಂತೆಯೂ ಬ್ರಹ್ಮ ಸರಸ್ವತಿಯರಂತೆಯೂ ಶಿವಪಾರ್ವತಿಯರಂತೆಯೂ ಮೆರೆಯುತ್ತಿದ್ದರು. ಆಗ ಊರು ಜನರೆಲ್ಲರೂ ಅವರಿಬ್ಬರನ್ನೂ ಕಣ್ಣುಗಳಿಂದ ಚೆನ್ನಾಗಿ ನೋಡಿ ಚಂದ್ರನನ್ನು ಕಂಡ ಸಮುದ್ರದಂತೆ ಸಂತೋಷದಿಂದ ಉಬ್ಬಿದರು. ಆಗ ಭೀಮಭೂಪಾಲನು ಪಟ್ಟಣವನ್ನೆಲ್ಲಾ ಅಲಂಕಾರಮಾಡಿಸಿದನು. ಆ ಬಳಿಕ ನಳನು ಋತುಪರ್ಣರಾಜನನ್ನು ಕರತರಿಸಿ ಒಹುಮಾನಗಳನ್ನು ಮಾಡಿ ಒಳ್ಳೆಯ ಮಾತುಗಳಿಂದ ಸಂತೋಷಪಡಿಸಿದನು. ಬುದ್ಧಿಸಂಪನ್ನನಾದ ಅತನು ನಳನಿಂದ ಸತ್ಕೃತನಾಗಿಯೂ ನಸುನಗೆಯಿಂದ ಕೂಡಿದ ಮೊಗದಾವರೆಯುಳ್ಳವನಾಗಿಯೂ ಅತನನ್ನು ಕುರಿತು—ಎಲೈ, ಮಹಾನುಭಾವನೇ ! ದೇವರ ದಯೆಯಿಂದ ಹೆಂಡತಿಯೊಡನೆ ಕೂಡಿದ ನಿನ್ನನ್ನು ನೋಡಿ ನನ್ನ ಕಣ್ಣುಗಳು ಸಫಲಗಳಾದುವು. ನಾನು ಧನ್ಯನಾದೆನು. ಮೊದಲು ನನ್ನ ಪಟ್ಟಣಕ್ಕೆ ಬಂದು ನೀನು ಅಜ್ಞಾತವಾಸವಾಗಿರುವ ಸಮಯದಲ್ಲಿ ನಾನು ಅರಿತಾದರೂ ಅರಿಯದೆಯಾದರೂ ನಿನ್ನಲ್ಲಿ ಏನಾದರೂ ತಪ್ಪುಮಾಡಿರುವೆನು. ಅದೆಲ್ಲವನ್ನೂ ಸಹಿಸಬೇಕೆಂದನು. ನಳನು ಅತನನ್ನು ನೋಡಿ—

ನಾನು ಇಷ್ಟು ದಿವಸಗಳೂ ನಿನ್ನ ಪಟ್ಟಣದಲ್ಲಿ ಸ್ವರ್ಗಲೋಕದಲ್ಲಿ ಇದ್ದಂತೆ ಸೌಖ್ಯವಾಗಿ ಇದ್ದೆನು. ನನ್ನ ರಾಜ್ಯದಲ್ಲಿಯೂ ನಾನು ಇಷ್ಟು ಸೌಖ್ಯದಿಂದ ಇರಲಿಲ್ಲ. ಅಂಥಾ ತಪ್ಪನ್ನು ನೀನು ಮಾಡಿದ್ದರೂ ನಾನು ಮರೆಯಬೇಕು. ಇಂಥಾದುದರಲ್ಲಿ ನೀನು ಒಂದು ತಪ್ಪನ್ನಾದರೂ ಮಾಡಿದವನೇ ಅಲ್ಲ. ಅಶ್ವಹೃದಯವೆಂಬ ವಿದ್ಯೆಯನ್ನು ನನ್ನಲ್ಲಿಯೇ ನಿಲ್ಲಿಸಿದವನಾದುದರಿಂದ ಅದನ್ನು ಪರಿಗ್ರಹಿಸಬೇಕೆಂದನು. ಋತುಪರ್ಣನು ಆ ವಿದ್ಯೆಯನ್ನು ನಳನಿಂದ ಗುಟ್ಟಾಗಿ ಗ್ರಹಿಸಿಕೊಂಡು ಅಪ್ಪಣೆಯನ್ನು ತೆಗೆದುಕೊಂಡು ಮತ್ತೊಬ್ಬ ಸಾರಥಿಯಿಂದ ಕೂಡಿ ತನ್ನ ಪಟ್ಟಣಕ್ಕೆ ಹೋದನು.

ಆ ಬಳಿಕ ನಳನು ಕುಂಡಿನ ಪಟ್ಟಣದಲ್ಲಿ ಒಂದು ತಿಂಗಳು ಸುಖದಿಂದ ಇದ್ದು ಆಮೇಲೆ ಭೀಮಭೂಪಾಲಕನ ಅಪ್ಪಣೆಯನ್ನು ತೆಗೆದುಕೊಂಡು ಬಿಳಿಯ ಕುದುರೆಗಳನ್ನು ಕಟ್ಟಿದ ತೇರನ್ನು ಏರಿ ಹದಿನಾರು ಭದ್ರಗಜಗಳನ್ನೂ ಐವತ್ತು ಕುದುರೆಗಳನ್ನೂ ಆರುನೂರು ಕಾಲಾಳುಗಳನ್ನೂ ಕೂಡಿಕೊಂಡು ತನ್ನದಾದ ನಿಷಧದೇಶಕ್ಕೆ ಬಂದು ಪುಷ್ಕರನ ಸಮೀಪಕ್ಕೆ ಹೋಗಿ—ಇದೋ ! ದಮಯಂತಿ ಹೊರತಾಗಿ ಮಿಕ್ಕಾದ ನನ್ನ ದ್ರವ್ಯವನ್ನು ಪಂತಕ್ಕೆ ಒಡ್ಡುತ್ತೇನೆ. ನೀನು ರಾಜ್ಯವೆಲ್ಲವನ್ನೂ ಪಂತಕ್ಕೆ ಒಡ್ಡು. ತಿರುಗಿ ನಿನ್ನೊಡನೆ ಜೂಜಾಡಬೇಕೆಂದು ಎಣಿಸಿದ್ದೇನೆ ಇದು ಮುಗಿದ ಮೇಲೆ ನಮ್ಮಿಬ್ಬರ ಪ್ರಾಣಗಳನ್ನೂ ಒಡ್ಡುವಣ. ಜೂಜಿನಲ್ಲಿ ಒಬ್ಬನ ಧನ ರಾಜ್ಯಗಳನ್ನು ಗೆದ್ದುಕೊಂಡವನ ಬಳಿಗೆ ಆತನು ತಿರುಗಿ ಬಂದು ಜೂಜಿಗೆ ಕರೆದರೆ ಆಡಬೇಕು. ಅದಕ್ಕೆ ನೀನು ಒಪ್ಪದಿದ್ದರೆ ಯುದ್ಧಕ್ಕೆ ಬಾ. ದ್ವಂದ್ವಯುದ್ಧದಲ್ಲಿ ಯಾದರೂ ನಮ್ಮಿಬ್ಬರಲ್ಲಿ ಒಬ್ಬನಿಗೆ ಕೇಡಾಗಬೇಕು ಹಗೆಯು ತೆಗೆದುಕೊಂಡ ರಾಜ್ಯವನ್ನು ಹೇಗಾದರೂ ತಿರುಗಿ ತೆಗೆದುಕೊಳ್ಳಬೇಕು ಎಂದು ದೊಡ್ಡವರು ಹೇಳಿರುವುದರಿಂದ ನಾನು ಹೇಳಿದ ಎರಡು ಕೆಲಸಗಳಲ್ಲಿ ಯಾವುದಾದರೂ ಒಂದಕ್ಕೆ ಸಿದ್ಧ ಎಂದು ಕರೆಯಲು ಪುಷ್ಕರನು ರಾಜ್ಯಗರ್ವಿತನಾಗಿಯೂ ಜೂಜಾಡುವುದಕ್ಕೆ ಉದ್ಯುಕ್ತನಾಗಿಯೂ ಪಂತದಲ್ಲಿ ಧನಕನಕವಸ್ತುವಾಹನಗಳನ್ನೂ ರಾಜ್ಯಗಳನ್ನೂ ತನ್ನ ಪ್ರಾಣಗಳನ್ನೂ ಒಡ್ಡಿ ಆಡಲು ನಳನು ಜಯಿಸಿ ಆ ಪುಷ್ಕರನನ್ನು ನೋಡಿ—ನೀನು ಜೂಜಿನಲ್ಲಿ ನನಗೆ ಅಪಕಾರನ್ನು ಮಾಡಿದವನಲ್ಲ, ಕಲಿಪುರುಷನು ಮಾಡಿದನು. ನೀನು ಹೆಡ್ಡನಾದುದರಿಂದ ತಿಳಿಯಲಿಲ್ಲವು. ಆದಕಾರಣ ನಿನ್ನ ಪ್ರಾಣಗಳನ್ನು ಕೊಲ್ಲುವುದಿಲ್ಲ. ನೂರುವರುಷಗಳು ಸುಖವಾಗಿ ಜೀವಿಸು. ನೀನು ಎಷ್ಟು ಅಪಕಾರ ಮಾಡಿದರೂ ನನ್ನ ಒಡಹುಟ್ಟುಗಳಲ್ಲಿ ಒಬ್ಬನಾದುದರಿಂದ ನಿನ್ನಲ್ಲಿ ನನಗೆ ಬಹು ಪ್ರೀತಿ ಇದೆ ಎಂದು ಹೇಳಿ ಬಾರಿಬಾರಿಗೂ ತಬ್ಬಿಕೊಳ್ಳುತ್ತಿರಲು ಪುಷ್ಕರನು ನಳನಿಗೆ ನಮಸ್ಕಾರವನ್ನು ಮಾಡಿ ಕೈಮುಗಿದು—ಎಲೈ, ಮಹಾನುಭಾವನೇ ! ನಿನ್ನ ಕೈಗೆ ಸಿಕ್ಕಿದ ಪ್ರಾಣಗಳನ್ನು ತಿರುಗಿ ಕೊಟ್ಟು ನನ್ನನ್ನು ಕಾಪಾಡಿದೆ ಎಂದು ಕೊಂಡಾಡಿ ನಳನ ಅಪ್ಪಣೆ ತೆಗೆದುಕೊಂಡು ಸಂತೋಷದಿಂದ ತನ್ನ ಪಟ್ಟಣಕ್ಕೆ ಹೋದನು.

ಆಗ ಪೌರಜನ ಪರಿಜನಗಳು ತೇಜೋವಂತರಾಗಿ ನಡುವಗಲ ಸೂರ್ಯನ ಹಾಗೆ ಹೊಳೆಯುತ್ತಿರುವ ನಳನ ಬಳಿಗೆ ಬಂದು ಅಡ್ಡಬಿದ್ದು—ಸ್ವಾಮಿ, ಮಹಾ

ರಾಜನೇ! ತನ್ನ ತಾಯಿಯನ್ನು ಕಂಡ ಎಳಗರುವಿನಂತೆ ಈ ದಿವಸ ನಾವೆಲ್ಲರೂ ಧರ್ಮಸ್ವರೂಪನಾದ ನಿನ್ನನ್ನು ಕಂಡು ಸಂತುಷ್ಟರಾದೆವು ಅಂದರು. ಆಗ ನಳಚಕ್ರವರ್ತಿಯು ಅವರನ್ನೆಲ್ಲಾ ಯಥೋಚಿತವಾಗಿ ಮನ್ನಿಸಿ ಸಕಲ ಸೇನೆಗಳನ್ನೂ ಭೀಮ ಭೂಪಾಲಕನ ಪಟ್ಟಣಕ್ಕೆ ಕಳುಹಿಸಿ ದಮಯಂತಿಯನ್ನೂ ತನ್ನ ಮಕ್ಕಳನ್ನೂ ಕರೆಯಿಸಿಕೊಂಡು ಸಂತೋಷಯುಕ್ತನಾಗಿ ಬಹು ಯಜ್ಞಗಳನ್ನು ಮಾಡಿ ದೇವತೆಗಳನ್ನು ಸಂತೋಷಪಡಿಸುತ್ತಾ ಪ್ರಜೆಗಳನ್ನು ಮಕ್ಕಳ ಹಾಗೆ ಕಾಪಾಡುತ್ತಾ ಬಹು ಕೀರ್ತಿಯನ್ನು ಪಡೆದು ಸುಖವಾಗಿದ್ದನು.

ಪ್ರಥಮ ಗ್ರಂಥ ಸಮಾಪ್ತಿ

Printed at the Wesleyan Mission Press,
Mysore City